VEC, Library
006183

VEC, Library
006183
DECCAN HER[ALD]
LIBRARY.

[Editor]
Deccan Herald
English daily

For favour of Review.

1st Aug. 1965
Bangalore.

438

DONATED BY
The Printers (Mysore) Ltd.,
16, M. G. ROAD, BANGALORE-1.
The Proprietors of:—
DECCAN HERALD, PRAJAVANI,
SUDHA, MAYURA.

President.

6/310   31/7/6
DECCAN HERALD
LIBRARY.
50-ವ

ಶ್ರೀ

ಸಿದ್ಧರಾಮೇಶ್ವರ ಪುರಾಣ

THE PRINTERS (MYSORE) PRIVATE LTD.
LIBRARY
Accn. No. 199
Date 19.10.66
BANGALORE

ಆಚಾರ ಉಚ್ಚಾರ। ಎಚ್ಚರ ಎಂಬುವ।
ಅಚ್ಚ ನಿಚ್ಚಾದ ತ್ರಿದಳದ ಪತ್ತುರಿ
ಮುಚ್ಚಿ ತಂದೀದ ಮುಡಿಯಿರಿ॥

DECKAN 921
VIJAYA EVENING COLLEGE LIBRARY
BANGALORE-560 004.
Accn. No. 6183
Cost, Rs 15/-
Date 19.6.79
Librarian.

ಜಯದೇವಿ ತಾಯಿ ಲಿಗಾಡೆ

ಕನ್ನಡ ಕೋಟಿ ಪ್ರಕಾಶನ, ಸೊಲ್ಲಾಪುರ

DECCAN HERALD
TO BE RETURNED
WITH REVIEW

VIJAYA EVENING COLLEGE LIBRARY
BANGALORE-560 004.
Accn. No. 6183
Cost. Rs. 15/-
Date 19.6.77
Librarian.

6/310 31/7/65.
DECCAN HERALD LIBRARY.

ಶ್ರೀ

ಸಿದ್ಧರಾಮೇಶ್ವರ ಪುರಾಣ

THE PRINTERS (MYSORE) PRIVATE LTD. LIBRARY Accn. No. 199 Date 19.10.66 BANGALORE



VECKAN 921

ಜಯದೇವಿತಾಯಿ ಲಿಗಾಡೆ

ಕನ್ನಡ ಕೋಟಿ ಪ್ರಕಾಶನ, ಸೊಲ್ಲಾಪುರ

DECCAN HERALD TO BE RETURNED WITH REVIEW

ಪ್ರಕಾಶಕರು :
ಶಂಕರ ಡಿ. ಮೂಗಿ
ಅಡ್ವೊಕೇಟ್,
ಸುಪ್ರೀಮ್ ಕೋರ್ಟ್
೨೧. ಈಸ್ಟ್ ಪಾರ್ಕ್‌ರೋಡ್
೧೮ನೆ ಕ್ರಾಸ್ ಬೆಂಗಳೂರು-೩

ಪ್ರತಿ: ಒಂದು ಸಾವಿರ

Cl.NO. O33,1SID N65.
Acc.NO. 199.

ಬೆಲೆ: ಹದಿನೈದು ರೂಪಾಯಿ

ಜೂನ್ ೧೯೬೫.

ಮುದ್ರಣ:
ಓರಿಯಂಟ್ ಪವರ್‌ಪ್ರೆಸ್
ಬೆಂಗಳೂರು.

ಮುಖಪತ್ರ:
ಪ್ರಿಂಟಸಾರ್ಲ್
ಕಂಟೋನ್‌ಮೆಂಟ್
ಬೆಂಗಳೂರು.

THE PRINTERS (MYSORE) PRIVATE LTD
LIBRARY
Accn. No. 199
Date 19-10-66
BANGALORE

ಪ್ರಕಾಶಕರ ನುಡಿ

ಈ ಪುರಾಣದ ಪ್ರಕಟನೆಯಿಂದ ಇಪ್ಪತ್ತನೆಯ ಶತಮಾನದ ಕನ್ನಡ ಕಾವ್ಯ-ಜನಪದ ಕಾವ್ಯ ಮಹತ್ತಾದ ಸಾಧನೆಯ ಹಂತವನ್ನು ತಲುಪಿದೆಯೆಂದು ನಾವು ನಂಬುತ್ತೇವೆ.

ಈ ಪುರಾಣದ ರಚನೆ ನಡೆಯುತ್ತಿರುವಾಗ ಪೂಜ್ಯ ತಾಯಿಯವರ ಸಾಮೀಪ್ಯ, ಸಾನ್ನಿಧ್ಯವನ್ನು ಪಡೆದ ನಮಗೆ ಪ್ರತ್ಯಕ್ಷವಾಗಿ ನಡೆದ ಕೆಲವು ಘಟನೆಗಳು ನಮ್ಮ ಸಂಕಲ್ಪವನ್ನು ಅನೇಕ ಸಲ ಒರೆಗೆ ಹಚ್ಚಿ ನೋಡಿದುವು. ತಾಯಿಯವರು ತಿಂಗಳುಗಟ್ಟಲೆ ಹಾಸಿಗೆ ಹಿಡಿದು ನರಳುತ್ತಿರುವಾಗ ಅವರು ಪಟ್ಟ ವೇದನೆಯನ್ನು ನೋಡಿ ನಾವು ತತ್ತರಿಸಿ ಹೋಗಿದ್ದೆವು. ಏಕಾದರೂ ಈ ಪುರಾಣ ರಚನೆಯ ಕಾರ್ಯ ನಡೆಯಿತೋ ಎನಿಸಿತು. ಭಾರತದ ಸುಪ್ರಸಿದ್ಧ ಶಸ್ತ್ರಚಿಕಿತ್ಸಕರಾಗಿದ್ದ ದಿ. ಡಾ. ಎ. ವಿ. ಬಾಳಿಗ ಅವರು ಸಹಿತ ತಾಯಿಯವರ ಆರೋಗ್ಯದ ಬಗ್ಗೆ ನಿರಾಶಾದಾಯಕ ಅಭಿಪ್ರಾಯ ಕೊಟ್ಟಿದ್ದರು. ನಮಗಂತೂ ಆಗ ದಿಕ್ಕೇ ತೋಚದಂತಾಗಿತ್ತು. ಕಾತರ, ಉದ್ವಿಗ್ನತೆಗಳು ನಮ್ಮ ಚಿತ್ತಸ್ಥೈರ್ಯವನ್ನು ಅಲುಗಿಸಿದುವು. ತಾಯಿಯವರು ಬರೆದ ಎಷ್ಟೇ ಪದ್ಯಗಳಿರಲಿ, ಯಾವುದೇ ರೂಪದಲ್ಲಿರಲಿ ಹಸಿಹಸಿಯಾಗಿಯೇ ಒಯ್ದು ಅಚ್ಚಿಗೆ ಕೊಟ್ಟೆವು. ಮುಗಿದಷ್ಟಾದರೂ ಮುಗಿಯಲಿ ಎನ್ನುವ ಮನೋಭಾವ ನಮ್ಮದಾಗಿತ್ತು. ಹಮ್ಮಿಕೊಂಡ ಈ ಕಾರ್ಯ ಮುಗಿಯುವುದೋ ಇಲ್ಲವೋ ಎಂಬ ಕಳವಳ ಹೆಚ್ಚಾಗಿ ಕನ್ನಡ ಕೋಟೆಯ ಮಕ್ಕಳು ಬೆಂಗಳೂರಿನಲ್ಲಿ ಕೂಡಿದರು. ಎಲ್ಲರ

ಮನಸ್ಸಿನ ಈ ಬೇಗುದಿಯನ್ನು ಕಂಡ ತಾಯಿಯುವರು, "ಏನೂ ಆಗುವುದಿಲ್ಲ. ಸಿದ್ಧರಾಮ ಹೋಮಮಾಡಿ ಎಲ್ಲವನ್ನೂ ಶುದ್ಧಗೊಳಿಸುತ್ತಿದ್ದಾನೆ. ಇಲ್ಲಿ ಕಳವಳಕ್ಕೆ ಕಾರಣವಿಲ್ಲ"—ಎಂದು ಸಾಂತ್ವನ ನೀಡಿದರು. ಆದರೆ ನಮಗೆ ಮಾತ್ರ ತುಂಬ ಅಧೈರ್ಯ ಉಂಟಾಗಿತ್ತು.

ಅದಾವ ದಿವ್ಯ ಶಕ್ತಿಯ ಪ್ರಭಾವವೋ ದಿನಗಳೆದಂತೆ ತಾಯಿಯುವರು ಮತ್ತೆ ಚೇತರಿಸಿಕೊಂಡರು ; ಅವರ ಮನಭಾವಗಳಲ್ಲಿ ಅಪರಿಮಿತವಾದ ಉತ್ಸಾಹ ತುಂಬ ತುಳುಕತೊಡಗಿತು.

ಪುರಾಣ ರಚನೆಯ ಆರಂಭಕಾಲದಿಂದ ಇಲ್ಲಿಯವರೆಗೆ ಕೆಲವು ಅಲೌಕಿಕವಾದ ವಿಲಕ್ಷಣ ಘಟನೆಗಳು ಜರುಗಿದುವು. ಅವು ನಮ್ಮ ನಂಬುಗೆಯನ್ನು ಒರೆಗೆ ಹಚ್ಚಿದುವು. ತಾಯಿಯುವರು ಶ್ರೀಶೈಲಕ್ಕೆ ಹೋದಾಗ ಶ್ರೀ ಸಿದ್ಧರಾಮೇಶ್ವರ ಪುರಾಣವನ್ನು ಕೇಳಿ ಶ್ರೀ ಶ್ರೀ ಜಗದ್ಗುರು ವಾಗೀಶ ಪಂಡಿತಾರಾಧ್ಯರು ಆನಂದ ಚಿತ್ತರಾಗಿ ತ್ರಿಪದಿಯ ರಚನೆಯನ್ನು ಮೆಚ್ಚಿಕೊಂಡು ಮನತುಂಬ ಹರಸಿದರು. ಅವರ ಹರಕೆ ಪ್ರಕಾಶಕರಿಗೆ ಬೆಂಬಲವಾಗಿ ನಿಂತಿತು.

ತಾಯಿಯುವರೇ ಹೇಳುವಂತೆ—ಅನುಭಾವವು ತಾನೇತಾನಾಗಿ ಬಯ್ಚಿಟ್ಟ ಬಯ್ಕೆ ನುಡಿಯ ರೂಪದಲ್ಲಿ ಹೊಮ್ಮಿದ ಈ ಮಹಾ ಪುರಾಣದಲ್ಲಿ ಕನ್ನಡದ ಛಂದಸ್ಸು-ತ್ರಿಪದಿ ತನ್ನ ಸಂಪೂರ್ಣವಾದ ಸಾಮರ್ಥ್ಯವನ್ನು ಅರಳಿಸಿಕೊಂಡು ಸ್ವಸ್ವರೂಪವನ್ನು ಕಂಡು ಕೊಂಡಿದೆಯೆಂದು ಹೇಳಬಹುದು. ಅದರ ಜೊತೆಗೆ ಕನ್ನಡ ತಾಯಿಂದಿರು ಅನೇಕ ಮಂಗಲ ಕಾರ್ಯಗಳಲ್ಲಿ ಮತ್ತು ಕೌಟುಂಬಿಕ ಜೀವನದ ಇತರ ಸವಿ ಸಂದರ್ಭಗಳಲ್ಲಿ ಹಾಡಬಹುದಾದ ಕೆಲವು ಹೊಸ ಹಾಡುಗಳು—ನೈಯ್ಯೆಣ್ಣೆಯ ಪದ, ಭೂಮದ ಹಾಡು, ಕೂಸು ಒಪ್ಪಿಸುವ ಹಾಡು ಆರತಿಯ ಪದ ಮೊದಲಾದುವು ಈ ಮಹಾ ಪುರಾಣದಲ್ಲಿ ಸಮಾವೇಶಗೊಂಡಿರುವುದು ಒಂದು ವೈಶಿಷ್ಟ್ಯವಾಗಿದೆ.

ಈ ಕೃತಿಯಿಂದಾಗಿ ಕನ್ನಡದ ಹಾಡುಗಬ್ಬ ಈ ಕಾಲದಲ್ಲಿ ಇಂತಹ ಒಂದು ಆಳವನ್ನು, ವಿಸ್ತಾರವನ್ನು ಹೊಂದಿರುವುದು ನಮ್ಮ ಸಾಹಿತ್ಯ ಪರಂಪರೆಗೆ ಒಂದು ಅಪೂರ್ವವಾದ ಕಾಣಿಕೆಯೆನ್ನುವ ಸದಭಿಮಾನ ನಮ್ಮದಾಗಿದೆ. ನಮ್ಮ ಸಂಸ್ಕೃತಿಯ ಶ್ರೀಮಂತಿಕೆಯನ್ನು ಹೆಚ್ಚಿಸುವ ಈ ಕೃತಿಯನ್ನು ಬೆಳಕಿಗೆ ತರುವ ಭಾಗ್ಯವನ್ನು ಒದಗಿಸಿಕೊಟ್ಟ ಪೂಜ್ಯ ತಾಯಿಯುವರಿಗೆ ಕನ್ನಡ ಕೋಟಿ ಚಿರ ಋಣಿಯಾಗಿದೆ.

ಕನ್ನಡ ನಾಡನ್ನು ಕಟ್ಟುವ ಕನಸನ್ನು ತಮ್ಮ ಜೀವನದ ಮಹತ್ ಸಾಧನೆಯನ್ನಾಗಿ ಮಾಡಿಕೊಂಡು ಕಳೆದ ಮೂರು ದಶಕಗಳಿಂದ ಯಾವ ಪ್ರತಿಫಲವನ್ನೂ ಬಯಸದೆ ತಾಯಿಯುವರು ಈ ನಾಡಿಗೆ ಸಲ್ಲಿಸಿರುವ ಸೇವೆ ಅಪಾರವಾಗಿದೆ. ಕನ್ನಡ ಕವಿಗಳಿಂದ ಒಂದು ರೂಪುರೇಷೆಯನ್ನು ಪಡೆದು ಸತ್ವವನ್ನು ಕಾಯ್ದುಕೊಂಡು ಬಂದ ಈ ನಾಡಿನ ಗಡಿರಕ್ಷಣೆಗಳನ್ನು ಮಾಡುವುದಕ್ಕಾಗಿ ತಾಯಿಯುವರು ಹಗಲಿರುಳು ಕಂಕಣ ಕಟ್ಟಿ ನಿಂತರು. ಗಡಿನಾಡೇ ಆಗಲಿ, ನಡುನಾಡೇ ಆಗಲಿ ಎಲ್ಲೆಲ್ಲಿ ಕನ್ನಡದ

ಹಿತಕ್ಕೆ ಧಕ್ಕೆ ಒದಗಿತೋ ಅಲ್ಲಲ್ಲಿ ಅವರು ಕಾಳಿಯಾಗಿ ಗರ್ಜಿಸಿ, ಮಾತೆಯಾಗಿ ರಕ್ಷಿಸುವ ಪಣತೊಟ್ಟರು. ಅವರ ಈ ಪಣ ರಾಜಕೀಯಕ್ಕೆ ಸೀಮಿತವಾಗದೆ ಸಂಸ್ಕೃತಿಯ ಸ್ತರಗಳನ್ನು ಸೃಜಿಸುವಲ್ಲಿ ಸಫಲವಾಯಿತು. ಅವರ ಈ ಹೋರಾಟದ ಹರವು ನಾಡಿನ ಸಾಂಸ್ಕೃತಿಕ ಪರಂಪರೆಯ ಬಹಿರಂಗ ಮತ್ತು ಅಂತರಂಗಗಳ ಸಮನ್ವಯಾಭಿವ್ಯಕ್ತಿ ಸ್ವರೂಪವನ್ನು ಪಡೆದುದು ಒಂದು ಪುಣ್ಯ.

ಕನ್ನಡ ನಾಡಿನ ಸಮಗ್ರ ವಿಕಾಸಕ್ಕೆ ತ್ರಿಕರಣ ಶುದ್ಧಿಯಿಂದ, ನಿರ್ಮಲಾಂತಃಕರಣದಿಂದ ಕನ್ನಡ ಹಿತವನ್ನು ಬಯಸುತ್ತಿರುವ ಪೂಜ್ಯ ತಾಯಿಯವರ ಮಾರ್ಗದರ್ಶನ ಈಗ ಇನ್ನೂ ಅವಶ್ಯವಾಗಿ ಬೇಕಾಗಿದೆ.

ಪುರಾಣ ಪ್ರಕಟನೆಯ ಮಂಗಲ ಮುಹೂರ್ತದಲ್ಲಿ ಈ ಮಾತುಗಳನ್ನು ನೆನೆಯುವುದು ನಾಡಿನ ಶುಭೋದಯಕ್ಕೆ ನಾಂದಿಯೆಂದು ನಾವು ಭಾವಿಸಿದ್ದೇವೆ.

ಈ ಕೃತಿ ರಚನೆ ನಡೆಯುತ್ತಿರುವಂತೆ ಮರಾಠಿ ಭಾಷೆಯಲ್ಲಿ ತ್ರಿಪದಿ ಛಂದಸ್ಸಿನಲ್ಲಿಯೇ ಮಹಾದೇವಿಯಕ್ಕನ ಪುರಾಣವನ್ನು ತಾಯಿಯವರು ರಚಿಸಿದ್ದಾರೆ. ಇದರ ಜೊತೆಗೆ ಮತ್ತೆ ಸಾವಿರಾರು 'ತಾಯಿಯ ಪದಗಳು' ಮೂಡಿ ಬಂದಿವೆ. ಇದಲ್ಲದೆ ಮಹಾತ್ಮಾ ಗಾಂಧೀಜಿಯವರ ಜೀವನವನ್ನು ಕುರಿತಾದ ಒಂದು 'ಅಮರ ಕಾವ್ಯ' ರೂಪುಗೊಳ್ಳುತ್ತಲಿದೆ. ಈ ಎಲ್ಲ ಕೃತಿಗಳು ಬೆಳಕು ಕಂಡು ಸಾಹಿತ್ಯ ಸರಸ್ವತಿಯ ಸಿರಿಮುಡಿಯನ್ನಲಂಕರಿಸುವ ಆ ಮಂಗಲ ಮುಹೂರ್ತಕ್ಕಾಗಿ ಕನ್ನಡ ಕೋಟಿಯ ಬಳಗವು ನಿರೀಕ್ಷೆಯಲ್ಲಿದೆ.

ಈ ಮಹಾ ಕೃತಿಯ ಪ್ರಕಟನೆಯ ಕಾಯಕದಲ್ಲಿ ಕನ್ನಡ ಕೋಟಿಯ ಸೋದರರು ಅತ್ಯಂತ ಶ್ರದ್ಧೆ-ಪ್ರೇಮಗಳಿಂದ ಅನೇಕ ವಿಧವಾಗಿ ತಮ್ಮ ಪಾಲಿನ ಹೊಣೆಯನ್ನು ಪೂರಯಿಸಿದ್ದಾರೆ. ಅದಕ್ಕಾಗಿ ಅವರೆಲ್ಲರಿಗೆ ತಾಯಿಯವರ ಮೂಲಕ ಶಿವಸಿದ್ಧರಾಮನ ಕೃಪೆಯುಂಟಾಗಲಿ ಎಂದು ಹಾರಯಿಸುತ್ತೇವೆ.

ಈ ಕೃತಿಯನ್ನು ಅಚ್ಚುಕಟ್ಟಾಗಿ ಅಚ್ಚುಮಾಡಿಕೊಟ್ಟ ಓರಿಯಂಟ್ ಪ್ರಿಂಟಿಂಗ್ ಪ್ರೆಸ್ಸಿನವರಿಗೆ ಪ್ರಕಾಶಕರ ನೆನಕೆಗಳು.

ಕನ್ನಡ ತಾಯಂದಿರು, ಸಹೃದಯರು, ರಸಸರಸ್ವತಿಯ ಆರಾಧಕರು ಈ ಕೃತಿಯನ್ನು ತಿಳಿಯಾದ ಮನಸ್ಸಿನಿಂದ ಬರಮಾಡಿಕೊಳ್ಳುವರೆಂದು ನಂಬಿದ್ದೇವೆ.

ಪ್ರಕಾಶಕರು
ಕನ್ನಡ ಕೋಟಿ
ಸೊಲ್ಲಾಪುರ

೮-೬-೬೫
ಬೆಂಗಳೂರು

THE PRINTERS (MYSORE) PRIVATE LTD
LIBRARY
Accn. No. 199
Date 19.10.65
BANGALORE

ಮಾತು - ಕೃತಿ

ಹತ್ತು ವರ್ಷಗಳ ಹಿಂದೆ ಹಮ್ಮಿಕೊಂಡ ಮಾತು ಇಂದು ಕೃತಿಯಾಗಿ ಮೈದಳೆದಿದೆ. ಈ ಅವಧಿಯಲ್ಲಿ ಬದುಕು ಅನೇಕ ವಿಧದಲ್ಲಿ ಪುಟವಿಟ್ಟು ಕಡೆಯಾಣಿಯಾಗಿ ಅವನ ಸೊಮ್ಮು ಅವನಿಗೆ ಸಂದಿದೆ.

ಕಲಬುರ್ಗಿಯ ಶ್ರೀ ಶರಣಬಸವೇಶ್ವರನ ಸಾನ್ನಿಧ್ಯದಲ್ಲಿ ಜರುಗಿದ ಮೂವತ್ತೆರಡನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದ ದಿ. ಶ್ರೀ ಚೆನ್ನಪ್ಪ ಉತ್ತಂಗಿಯವರು ಸಿದ್ಧರಾಮ ಸಾಹಿತ್ಯ ಸಂಗ್ರಹವನ್ನು ಸಂಪಾದಿಸಿಕೊಡುವ ಹೊಣೆ ಹೊತ್ತು, ಅನೇಕ ಅಡೆತಡೆಗಳನ್ನು ಸಹಿಸಿಕೊಂಡು ೧೯೫೫ರಲ್ಲಿ ಆ ಮಣಿಹವನ್ನು ಪೂರಯಿಸಿದರು. ಅದೇ ವರುಷ 'ಶ್ರೀ ಸಿದ್ಧರಾಮ ಸಾಹಿತ್ಯ ಸಂಗ್ರಹ' ಹೊತ್ತಗೆಯನ್ನು ಬೆಳಕಿಗೆ ತರುವ ಭಾಗ್ಯ, ಶಿವಸಿದ್ಧರಾಮನ ಮನೆಯ ತೊತ್ತಿನ ಮಗಳಾದ ನನಗೆ ಬಂದುದು ಅದೇ ಒಂದು 'ದಿಬ್ಯ' ಎಂದುಕೊಂಡಿದ್ದೆ.

ಲಿಂ. ಶ್ರೀ ನಿ. ಪ್ರ. ಮೃತ್ಯುಂಜಯ ಮಹಾಸ್ವಾಮಿಗಳವರ ದಿವ್ಯ ಕೃಪಾಛತ್ರದಲ್ಲಿ 'ಸಿದ್ಧರಾಮ ಸಾಹಿತ್ಯ ಸಂಗ್ರಹ'ದ ಪ್ರಕಟನಾ ಸಮಾರಂಭ ನೆರವೇರಿತು. ಅನುಭಾವಿಗಳ ಮಾತು ಕೇಳುತ್ತ ಕೇಳುತ್ತ ಮನಸ್ಸು

ಅಂತರ್ಮುಖಿಯಾಯಿತು. ನೆತ್ತಿಯ ತುತ್ತ ತುದಿಯಲ್ಲಿ ಒಂದು ವಿಶಿಷ್ಟ ವಾದ ಭಾವ ಗಟ್ಟಿಗೊಂಡಂತಿತ್ತು. ಗುಬ್ಬಿಯೊಂದು ಬಂದು ನೆತ್ತಿಯ ಮೇಲೆ ಕುಳಿತು ಗಟ್ಟಿಗೊಂಡ ಭಾವಕ್ಕೆ ಕಾವು ಕೊಟ್ಟಿತು. ಮುಂದೆ ಏನಾಯಿತೆಂದು ಹೇಳಲು ಮಾತು ಸಾಲದು. ತಂದೆ-ತಾಯಿಯ ರೂಪ ದಲ್ಲಿ ಶಿವಯೋಗಿಸಿದ್ಧನು ಬಂದು ನೆತ್ತಿಯನ್ನು ತಟ್ಟಿಹೋದಂತಿತ್ತು. ಅಂದಿನಿಂದ ಸಿದ್ಧರಾಮನನ್ನು ಕುರಿತು ಚಿಂತನೆ ಬಲಗೊಂಡಿತು.

ಸಿದ್ಧರಾಮನ ತ್ರಿವಿಧಿಗಳನ್ನು ಮರಾಠಿ ಭಾಷೆಗೆ ಅನುವಾದ ಮಾಡಿದೆ. ಈ ಅನುವಾದ ಕಾಲದಲ್ಲಿ ಬಂದ ಒಂದು ಅನುಭವವೆಂದರೆ— ಸಿದ್ಧರಾಮನ ಕಾರ್ಯ ಮಾಡುವುದು ಅಷ್ಟು ಸುಲಭವಾದುದಲ್ಲ ಎನ್ನುವುದು. ಅಂತೂ ಆವನ ದಯೆಯಿಂದ ಆ ಕಾರ್ಯ ಮುಗಿಯಿತು. 'ಸಿದ್ಧರಾಮಾಂಚಿ ತ್ರಿವಿಧಿ' ಪ್ರಕಟವಾಯಿತು. ಇದರಿಂದ ನನ್ನಲ್ಲಿ ಒಂದು ಬಗೆಯ ಅತೃಪ್ತಿ ಮೂಡಿತು. ಅದಕ್ಕೆ ಸಿದ್ಧರಾಮನನ್ನು ಕುರಿತಾದ ಒಂದು ಬಗೆಯ ದಿವ್ಯ ಅತೃಪ್ತಿ ಎಂದು ಭಾವಿಸಿದೆ.

ಮಾತು ಬೇಡವಾಯಿತು. ಮೌನ ಬೇಕಾಯಿತು. ಮೌನ ! ಗಂಭೀರ ಮೌನ ! ತಂದೆ ಸಿದ್ಧರಾಮನು ಹುಟ್ಟು ಮೌನಿಯಾಗಿ ದ್ದನಲ್ಲವೇ? ಮುಗ್ಧ ಬಾಲಕನ ಮೌನದಲ್ಲಿ ಅದೆಂತಹ ಶಕ್ತಿ ಅಡಗಿತ್ತು ! ಶ್ರೀ ಗಿರಿಮಲ್ಲಯ್ಯನನ್ನೇ ಕರೆತಂದ ಮೌನವದು ! ಆತ ತಾನಾಗಿಯೇ ಬಂದು ಬಾಯ್ದೆರೆಯುವಂತೆ ಮಾಡಿದ ಮೌನವದು ! ಆ ಅವನ ಮೌನದಲ್ಲಿ ಮಲ್ಲಿಕಾರ್ಜುನನು ನಡೆದು ಬಂದ ! ಈ ನನ್ನ ಮೌನ ಒಣದಾಗಿಯೇ, ಬರಿದಾಗಿಯೇ ಉಳಿಯುವುದೇ ? ಈ ಮೌನವನ್ನೇ ತುಂಬಿಕೊಂಡು ಸಿದ್ಧರಾಮನೇಕೆ ನಡೆದು ಬರಬಾರದು ! ಬಂದಾನೆಯೇ ? ಬಾರನೆ ? ಮೌನ ಕಳವಳಗೊಂಡಿತು. ಆಗ ಶಿವಸಿದ್ಧನ ಬಾಲ್ಯವೆಲ್ಲ ಕಣ್ಮುಂದೆ ಕಟ್ಟಿತು.

ಕೆಲವು ಕಾಲ ಗತಿಸಿತು. ನನ್ನ ಬಗೆಯುಗಲದಲ್ಲಿ ಸಿದ್ಧನ ದಿವ್ಯ ಜೀವನದ ಅನೇಕ ಚಿತ್ರಗಳು ಮೂಡಹತ್ತಿದುವು. ಸಿದ್ಧನನ್ನರಸಿಕೊಂಡು ಪ್ರಭು ಅಲ್ಲಮ ಸೊನ್ನಲಿಗೆಗೆ ಬಂದನಲ್ಲವೇ? ಯಾರು ಯಾರನ್ನು ಎಲ್ಲಿಂದೆಲ್ಲಿಗೆ ಎಳೆದು ತಂದೀತು ಸಿದ್ಧನ ಯೋಗ! ಇಂತಹವೇ ಅನೇಕ ಚಿತ್ರಗಳು ನನ್ನ ಚಿತ್ತದ ಅತೃಪ್ತಿಗೆ ತುಪ್ಪವನ್ನೆರೆದುವು. ಸಿದ್ಧರಾಮ ನನ್ನು ಕುರಿತಾದ ಕಥೆ ಬೃಹತ್ತಾದ ಆಕಾರವನ್ನು ತಾಳಿ ನನ್ನ ಭಾವಗಳಲ್ಲಿ ತುಂಬಿ ನಿಂತಿತು. ಈ ತುಂಬಿದ ಭಾವದಲ್ಲಿ ಬಯಕೆಯೊಂದು ಮೂಡಿ ನಿಂತಿತು. ಆ ಬಯಕೆ ಕೇವಲ ಅಂದಿಗಂದಿಗೆ ಮೂಡಿದ ಬಯಕೆ ಯೆನಿಸಲಿಲ್ಲ. ಅದು ಜನುಮ ಜನುಮಾಂತರದ ಬಯಕೆಯೆನಿಸಿತು ; ಅದು ಮನಸ್ಸಿನ ಆಳದಲ್ಲಿ ಬೇರೂರಿತು. ಆಗ ಸಿದ್ಧನ ಜೀವನದ ವ್ಯಾಸಂಗ ಹಲವು ರೀತಿಯಿಂದ ನಡೆಯಿತು : ಮಹಾಕವಿ ರಾಘವಾಂಕನ 'ಸಿದ್ಧರಾಮ ಚಾರಿತ್ರ' ಓದಿ ಹೃದಯಕ್ಕಿಳಿಸಿಕೊಂಡೆ. ಇದಲ್ಲದೆ ಶರಣರ ಸತ್ಕಥಾ ಶ್ರವಣಗೋಷ್ಠಿ, ಮಹಾನುಭಾವರ ಅನುಭಾವದ ಸುಳುಹು- ಹೊಳವು—ಇವೆಲ್ಲ ನನ ಹಿರಿಬಯಕೆಗೆ ಪ್ರಚೋದಕ ಅಂಶಗಳಾಗಿ ನಿಂತುವು.

ಅದೆಂತಹ ಅಮೃತ ಮುಹೂರ್ತವೋ ನಾನರಿಯೆ : ಬಯಕೆ ಮೈದಾಳಲು ಮೊದಲಾಯಿತು. ಶಿವಸಿದ್ಧನ ಮಹಾಪುರಾಣವನ್ನೊರೆಯಲು ಪ್ರಾರಂಭಿಸಿದೆ. ಆದರೊಂದಚ್ಚರಿ. ಈ ಬಯಕೆ ಮೂಡಿದಂದಿನಿಂದ, ಸಿದ್ಧರಾಮನ ಕೃತಿರಚನೆಯನ್ನು ಕೈಗೊಂಡಂದಿನಿಂದ ಹತ್ತುನಿಟ್ಟಿನಿಂದಲೂ ವಿಪತ್ತುಗಳ ದಾಳಿ ನಡೆಯಿತು. ಕೌಟುಂಬಿಕ ಜಟಿಲತೆಗಳು, ವ್ಯಾವಹಾರಿಕ ಅಡ್ಡಿಆತಂಕಗಳು, ಇವುಗಳ ಮೂಲಕ ಹುಟ್ಟಿದ ಅನೇಕ ಬಗೆಯ ಸಮಸ್ಯೆಗಳು ನನ್ನ ಆಕಾಂಕ್ಷೆಯನ್ನು ಹಿಡಿದು ಅಲ್ಲಾಡಿಸಿದುವು. ಕೃತಿರಚನೆಗೆ ಸೀಮಿತವಾದ ನನ್ನ ಬಯಕೆ ಸಿದ್ಧರಾಮನ ಜೀವನದ ಆಂತರಿಕ ಹೋರಾಟಗಳನ್ನು ನಿರುಕಿಸುವ ಸಂಕಲ್ಪದಲ್ಲಿ ಪರಿವರ್ತನೆ ಹೊಂದಿತು.

ತಾಳುವೆನು ಯಾತನೆಯ। ಬಾಳುವೆನು ನಿನಗಾಗಿ
ಕಾಳ ಬಂದರು ನಾನು ಹೆದರೇನು-ಸಿದ್ಧರಾಮ
ದಾಳಿ ತಂದಿರುವೆ ಈ ದೇಹಕ

ಲೌಕಿಕವೆನ್ನಬಹುದಾದ ಯಾವ ಜಟಿಲತೆಯೂ ನನ್ನ ಈ ಸಂಕಲ್ಪಕ್ಕೆ ಧಕ್ಕೆ ತರಲು ಸಮರ್ಥವಾಗಲಿಲ್ಲ.

ಹೋಮ ಮಾಡುವ ನಿನ್ನ। ನೇಮವ ಬಿಡಲಿಲ್ಲ
ಹೋಮ ಮಾಡು ಈ ದೇಹದ-ಸಿದ್ಧರಾಮ
ನಾಮ ನೆನೆದು ಹೋಮ ಗೆಲಿಯುವೆ.

ಉರಿಯ ನಿಲ್ಲಿಸುದೇವ। ಸೆರೆಗೊಡ್ಡಿ ಬೇಡುವೆ
ಕರುಣಾಸಾಗರ ಸಿದ್ಧರಾಮನೆ-ಕಂದಳ
ಸಿರದಡವಿ ರಕ್ಷಿಸುವುದಯ್ಯ

ಬೇಡುವೆ ಸೆರಗೊಡ್ಡಿ। ನೀಡಯ್ಯ ನಿನ ಕೃಪೆ
ನೋಡದಿರಯ್ಯ ಪರಿಕಿಸಿ-ಸಿದ್ಧರಾಮ
ಬಡಕೂಸಿನ ಅಳುವಿಗೆ ಓಗೊಟ್ಟು.

ಉರಿಯಗಣ್ಣಿನ ದೇವ। ಕೊರೆಕೊರೆದು ನೋಡಲು
ಉರಿಗಣ್ಣು ಮತ್ತೆ ಬೀರಿದನು-ದೇಹ
ಉರಿಯಲು ತೊಡಗಿತು ಆಗೆನ್ನ.

ದಿನಗಳೆದಂತೆಲ್ಲ ಬಹಿರಂಗದ ಜಟಿಲತೆಗಳು ಆಂತರಿಕ ನಿಷ್ಠೆಯನ್ನು ಗಟ್ಟಿಗೊಳಿಸುವುದರಲ್ಲಿ ಮಾತ್ರ ಸಾರ್ಥಕ್ಯಹೊಂದಿದುವು. ಊಟ ಮಾಡುತ್ತಿರುವಂತೆ ರಸರುಚಿಗಳು ವರ್ಜ್ಯ ಎನ್ನಿಸಿತು. ಅದನ್ನು ತೊರೆದಾಯಿತು. ಒಳ್ಳೆಯದೇ ಎಂದೆ. ಆದರೇನಾಯಿತು. ! ಅನಿರೀಕ್ಷಿತವಾಗಿ ಅನಾರೋಗ್ಯ ದಾಳಿಯಿಟ್ಟಿತು. ತಿಂಗಳುಗಟ್ಟಲೆ ಹಾಸಿಗೆ ಹಿಡಿಯುವಂತಾಯಿತು. ಒಳಗೊಳಗೆ ಹಂಬಲು. ಒಳಗಿನ ಅನುಭವಕ್ಕೆ ನುಡಿಯ ರೂಪು ಕೊಡಬೇಕೆನ್ನುವ ಕಾತರತೆ. ಆದರೆ ಅದಕ್ಕೆ ದೈಹಿಕ ಸಾಮರ್ಥ್ಯವಿರಲಿಲ್ಲ. ಬರೆಯಬೇಕು ಎಂದು ಕೈಯಲ್ಲಿ ಲೆಕ್ಕಣಿಕೆ ಹಿಡಿದರೆ

ಕೈ ಗದಗದ ನಡುಗುವುದು. ಬರೆಯಬೇಕು ಎಂದು ನಾನು. 'ಅದು ಹೇಗೆ ಬರೆಯುತ್ತೀಯೋ' ಎಂದು 'ಅವನು' ಎನ್ನುವಷ್ಟರ ಮಟ್ಟಿಗೆ ಮಾನಸಿಕ ಹಟ. ಮಾನಸಿಕ ಹಟ ದೈಹಿಕ ದೌರ್ಬಲ್ಯದೊಡನೆ ಸೇರಿ ಹೆಚ್ಚಿನ ಶ್ರಮಕ್ಕೆ ಕಾರಣವಾಗುತ್ತ ನಡೆಯಿತು. 'ಅಯ್ಯೋ ನನ್ನ ಸಂಕಲ್ಪ' ! ನನ್ನ ಸಂಕಲ್ಪ ? ಛೇ ಇದು ತಪ್ಪು. ಇದು ನನ್ನ ಸಂಕಲ್ಪವಲ್ಲ. ಅವನದೆ ಸಂಕಲ್ಪ. ಅವನ ಸಂಕಲ್ಪವೇ ಇದಾದುದಾಗಿದ್ದರೆ ಇಷ್ಟೆಲ್ಲ ತೊಂದರೆಗಳು—ಈ ಅನಾರೋಗ್ಯ—ಇದಕ್ಕೆಲ್ಲ ಅರ್ಥವೇನು ? ಈ ತರ್ಕ-ಪ್ರಶ್ನೆಗಳ ಸುಳಿಯಲ್ಲಿ ಸಿಕ್ಕ ಮನಸ್ಸು ಕೊರಗುತ್ತ ನಡೆಯಿತು. ಕೊರಗು ಹೆಚ್ಚಾಯಿತು. ಹಮ್ಮಿದ ಕಾರ್ಯ ಮುಗಿಯುವುದೋ ಇಲ್ಲವೋ ಎಂದು ಚಿಂತೆ—ನರಳುವಿಕೆ.

ಯಾತನೆ, ನೋವು, ಕೊರಗು ಹೆಚ್ಚಿದಂತೆಲ್ಲ ಶಿವಯೋಗಿ ಸಿದ್ಧನ ಸ್ಮರಣೆ ಗಟ್ಟಿಗೊಂಡಿತು. ಚಿಂತೆ ಮಾಡುವುದಾದರೂ ಏಕೆ ? ಅವನ ಸಂಕಲ್ಪವನ್ನು ಅವನೇ ಈಡೇರಿಸಿಕೊಳ್ಳಲಿ ಎನ್ನುವ ಒಂದು ನಿರ್ಲಿಪ್ತ ಚಿಂತನೆ ಹೃದಯದಲ್ಲಿ ಬೆಳಕು ಚೆಲ್ಲಿತು. ಬರಲಿ, ಎಷ್ಟೆಲ್ಲ ನೋವು ಬರುವುದಿದೆ ಬರಲಿ ಎಂದುಕೊಂಡೆ.

ದಿನಗಳೆದುವು. ಹಗಲು-ರಾತ್ರಿ ಅವನದೇ ಹಂಬಲು. ಇನ್ನುಳಿದ ಎಲ್ಲ ಸ್ಮರಣೆಗಳೂ ನನ್ನಿಂದ ದೂರ ಸರಿಯ ತೊಡಗಿದುವು. ಲೌಕಿಕ ಜಟಿಲತೆಗಳ ಪರೆಗಳನ್ನು ಕಳಚಿಕೊಂಡು ನನ್ನ ಸುತ್ತು ನಡೆಯುವ ಎಲ್ಲ ಘಟನೆಗಳಿಗೆ ನಾನು ಕೇವಲ ಸಾಕ್ಷಿ ಎನ್ನುವ ವಿಲಕ್ಷಣವಾದ ಮನೋಭಾವ ಬೆಳೆಯುತ್ತ ನಡೆಯಿತು. ಈ ಭಾವನೆ ಬೆಳೆದಂತೆ ಸಿದ್ಧರಾಮನ ಜನನ, ಶಿಶುವಿನ ಮುಗ್ಧ ಮನೋಭಾವಗಳು ನನ್ನ ಹೃದಯದಲ್ಲಿ ಚಿರಮುದ್ರೆಯನ್ನೊತ್ತಿದುವು.

ಅದೂ ಒಂದು ಮುಹೂರ್ತ. ನನ್ನ ಸಂಕಲ್ಪ 'ಅವನ' ಸಂಕಲ್ಪವಾಗಿ ಕಂಡಿತು. ಬಯಕೆ ಹಂಬಲಾಗಿ, ಹಂಬಲು ಸಂಕಲ್ಪವಾಗಿ, ನನ್ನ ಸಂಕಲ್ಪ ದೈವೀ ಸಂಕಲ್ಪವಾಗುವವರೆಗಿನ ಈ ಅವಧಿಯಲ್ಲಿ,

> ನಚ್ಚಿದೆನೆಂದರೆ, ಮೆಚ್ಚಿದೆನೆಂದರೆ, ಸಲೆಮಾರುವೋದೆನೆಂದರೆ
> ತನುವನಲ್ಲಾಡಿಸಿ ನೋಡುವೆ ನೀನು,
> ಮನವನಲ್ಲಾಡಿಸಿ ನೋಡುವೆ ನೀನು,
> ಧನವನಲ್ಲಾಡಿಸಿ ನೋಡುವೆ ನೀನು

—ಎನ್ನುವ ಬಸವಣ್ಣನವರ ಮಾತು ಮತ್ತೆ ಮತ್ತೆ ಸ್ಮರಣೆಯಲ್ಲಿ ಮೂಡುತ್ತಿತ್ತು.

> ಚಂದನವ ಕಡಿದು ಕೊರೆದು ತೇದೊಡೆ ನೊಂದನೆಂದು ಕಂಪಬಿಟ್ಟಿತ್ತೆ……

ಅಕ್ಕನವರ ಈ ವಚನ ನನ್ನ ಭಾವನೆಗೆ ಬೆಂಬಲವಾಗಿ ನಿಂತಿತ್ತು.

ನೂರು ರೀತಿಯ ಪರೀಕ್ಷೆ. ಎಲ್ಲಕ್ಕೂ ಸಿದ್ಧಳಾಗಿ ನಿಂತೆ. ರೋಗ ದಿಂದ ದೇಹ ತತ್ತರಿಸಿತು. ದಿನವೂ ಆಸ್ಪತ್ರೆಯಲ್ಲಿ ಸೂಜಿಮದ್ದು ! ನನ್ನಯ್ಯ ! ನಿನಗಾಗಿ ಮೀಸಲಿರಿಸಿದ, ಕಾಯಕಕ್ಕಾಗಿ ಮೀಸಲಾಗಿರುವ

ಈ ಕೈಗೆ ಏಸೊಂದು ಸೂಜಿ !

ಮೀಸಲಿದ್ದ ಕೈಗೆ। ಏಸೊಂದು ಸೂಜಿಯು
ಸೋಸಿ ನೋಡುವಿ ತನುವನು-ಸಿದ್ಧರಾಮ
ನಸುನಗುತ ನಿನ್ನನೆ ನೆನೆಯುವೆ

ಚುಚ್ಚುವಾಗ ಬಾಧೆ। ಹೆಚ್ಚಿದರು ನಸುನಕ್ಕು
ಮೆಚ್ಚಿ ಹಾಡುವೆ ನಿನ್ನನೆ ಸಿದ್ಧರಾಮ
ಹುಚ್ಚು ಮಗಳೆಂದು ಸಲಹಯ್ಯ

ಮೌನವಿದ್ದ ದಿನವು। ತನುವೀಗೆ ಸೂಜಿಯು
ಮನವ ನೋಡಲು ಬಯಸಿದೆಯ-ಸಿದ್ಧರಾಮ
ನನ್ನದಲ್ಲಿದು ಎಲ್ಲ ನಿನ್ನದು.

ಕ್ರೈಸ್ತನಿಗೆ ಮಳೆ ಬಡಿದರೂ ಎಂತಹ ಅಪಾರ ಕರುಣೆ ಉಕ್ಕಿತು ಆತನ ಹೃದಯದಲ್ಲಿ ?

ಏಸುವಿಗೆ ಮೊಳೆಗಳು। ಏಸೊಂದು ಹೊಡೆದರು
ಸೋಸಿದನು ಘೋರಯಾತನೆ-ಲೋಕದಿ
ಈಶನ ಕರುಣೆಯ ಸಾರಿದನು.

ರೋಗದಿಂದ ನರಳುತ್ತಿದ್ದರೂ ಸಿದ್ಧನ ಕಾರ್ಯವನ್ನು ನಿಲ್ಲಿಸಲಿಲ್ಲ. ಆ ನರಳಿಕೆಯ ಬಸಿರಿನಿಂದಲೇ ಮೊಗೆದು ಬಂದುವು ಶಿವಸಿದ್ಧನನ್ನು ಕುರಿತಾದ ಪದ್ಯಗಳು ; ಆದರೆ ಕೈಗೆ ಅವುಗಳನ್ನು ಮೂಡಿಸಲು ಬಲ ಸಾಲದೆನಿಸಿತು.

ಒಮ್ಮೆ ಕೈಯನ್ನು ದಿಟ್ಟಿಸಿ ನೋಡಿದೆ. ಕೈಗಿದ್ದ ಚಿನ್ನದ ಬಳೆಗಳು ಕಣ್ಣು ಚುಚ್ಚಿದುವು. ಅವನಿಗಾಗಿ ಮೀಸಲಾದ ಕೈಗೆ ಚಿನ್ನದ ಹಂಗಾದರೂ ಏಕೆ ಎಂದೆನಿಸಿತು. ಅವುಗಳನ್ನು ತೆಗೆದು ಹಾಕಿದೆ. ಚಿನ್ನದ ಕಂಕಣ ಕಳಚಿ ರುದ್ರಾಕ್ಷಿ ಕಂಕಣ ಕೈಗೆ ಬಂದುವು. ಆಗ ಕೈಯು ಹೃದಯದ ಭಾವ-ಭಾಷೆಗಳನ್ನು ಒಂದುಗೂಡಿಸುವ ಬಚ್ಚಬರಿಯ ಅಚ್ಚ ಸಾಧನವಾಗಿ, ಸಾತ್ವಿಕ ಸಂಕೇತವಾಗಿ ಕಂಡಿತು.

ದಿನಗಳುರುಳಿದಂತೆಲ್ಲ ‘ ಸ್ವಾನುಭಾವದ ನೆಲೆಯ ನಾನೇನು ಬಲ್ಲೆನೈ’ ಎನ್ನುವ ಶರಣವಾಣಿ ಮನ ಪ್ರಾಣ ಭಾವಗಳಲ್ಲಿ ಅನುರಣಿತವಾಗ ಹತ್ತಿತು. ಅಶ್ರುಧಾರಾಕಾರವಾಗಿ ಹರಿದು ಶಿವಸಿದ್ಧರಾಮನ ಅಮೂರ್ತ ಪಾದಗಳನ್ನು ತೊಳೆಯಹತ್ತಿತು. ಆತನ ದಿವ್ಯ ಲೀಲೆ ಕಣ್ಮನಗಳಲ್ಲಿ ತುಂಬಿ ಕಟ್ಟಿತು. ವೇದನೆಯಿಂದ ಬಳಲಿದ ಜೀವಕ್ಕೆ ಅಪಾರ ಕರುಣೆಯ ತುತ್ತು ಉಣಿಸಿದ ತಂದೆ ಸಿದ್ಧರಾಮ ಮರುವುಟ್ಟು ಕೊಟ್ಟನು.

ಏನು ಹೇಳಲಿ ಸಿದ್ದ। ನಿನ್ನ ವೈಚಿತ್ರವ
ಮುನ್ನಿನ ಜನನವ ಹರಿಸೀದಿ-ಹೇ ತಂದೆ
ಜನುಮವ ಹೊಸದಾಗಿ ನೀಡಿರುವಿ

ಹೊಟ್ಟೀಲೆ ಹುಟ್ಟಿದ। ತೊಟ್ಟೀಲ ಕೂಸಿಗೆ
ಬಟ್ಟ ಬಯಲೊಳು ತೊಟ್ಟಿಲ-ಕಟ್ಟುತ
ನೆಟ್ಟನೆ ತೂಗಿ ಸಲಹಯ್ಯ

ತನು ಕೊರೆದು ನೋಡಿದಿ। ಮನ ಕೊರೆದು ನೋಡಿದಿ
ಧನ ಬರಿದು ಮಾಡಿ ನೋಡಿದಿ-ಸಿದ್ಧರಾಮು
ಕನಿಕರದಿ ಬಂದು ನೆಲಸಿದಿ.

ಬಂದೇನ ಸಿದ್ಧರಾಮು। ತಂದೇನ ಹೊಸಬೆಳಕ
ಚೆಂದಾದ ರೂಪ ತೋರ್‍ಯಾನ-ಈ ನನ್ನ
ಬೆಂದ ಮನಕ ತಂಪ ನೀಡ್ಯಾನ

ಹಗಲಿರುಳೂ ಸಿದ್ಧನ ಚಿಂತೆ, ಚಿಂತನೆ; ಅದೇ ಹಾಸು, ಅದೇ ಹೊದಿಕೆ; ಅದೇ ಅನ್ನ, ಅದೇ ನೀರು. ನೋಟದಲ್ಲಿ, ಮನದಲ್ಲಿ, ಭಾವದಲ್ಲಿ, ಬಗೆಯಲ್ಲಿ, ನಡೆಯಲ್ಲಿ, ನುಡಿಯಲ್ಲಿ ಅವನದೇ ಲೀಲೆ ತುಂಬಿತ್ತು. ಒಮ್ಮೆ ಆತನ ಬಾಲ್ಯದ ವೈಭವ ವರ್ಣವೈವಿಧ್ಯದಿಂದ ಮುಂದೆ ಕುಣಿಯುವುದು. ಮತ್ತೊಮ್ಮೆ ಆತನ ಮುಗ್ಧ ಮುದ್ದಮುಖ ಕಣ್ಮುಂದೆ ಸುಳಿಯುವುದು. ಮಗದೊಮ್ಮೆ ತಾಯಿ ಸುಗ್ಗಲಾ ದೇವಿಯ ಕಾತರ ಕಳವಳ ಎದೆ ನಡುಗಿಸುವುದು. ಒಮ್ಮೆ ನೆವಣೆಯ ಹೊಲದ ರಸದ ತೆನೆಗಳು, ಹೊಲದ ನಡುವೆ ನಡೆದಾಡುವ ಬಾಲಕ, ಮತ್ತೊಮ್ಮೆ ಬಾಲಕನನ್ನು ಕಾಣಲುಬಂದ ಕರಿಕಂಬಳಿಯ ಗೊರವ; ಇನ್ನೊಮ್ಮೆ ಜಾತ್ರೆಗೆ ಹೊರಟ ಜನರ ಜೊತೆ ಕಾತರಿಸಿ ಮುನ್ನಡೆವ ಕೊರಗುವ ಕೂಸು; ಮತ್ತೊಮ್ಮೆ ರುದ್ರಗಮ್ಮರಿಯ ತುದಿಯಲ್ಲಿ ನಿಂತು 'ಮಲ್ಲಯ್ಯಾ, ಮಲ್ಲಯ್ಯಾ' ಎಂದು ಕಳವಳದಿಂದ ಕೂಗಿ ಕೊಳ್ಳಕ್ಕೆ ಹಾರಿದ ಮಗುವನ್ನು ತನ್ನ ತೋಳಲ್ಲಿ ಎತ್ತಿಕೊಂಡ ಮಲ್ಲಿನಾಥ—ಹೀಗೆ ಒಂದೇ ಎರಡೇ ಸಿದ್ಧರಾಮನ ಸಮಗ್ರ ಜೀವನದ ಘಟನೆಗಳು ತಮ್ಮ ಚೆಲುವಿನ ಹಡಲಿಗೆ ಹೊತ್ತು ಎದುರು ಕುಣಿಯುವುವು.

ಒಮ್ಮೊಮ್ಮೆ ಸಿದ್ಧನ ಪಾದಸ್ಪರ್ಶದ ಮಿಂಚು ಮುಟ್ಟು ರೋಮ ರೋಮದಲ್ಲಿ ಹರ್ಷದ ಬೆಳಕು ಮಲ್ಲಿಗೆಗಳನ್ನು ಅರಳಿಸುವುದು.

ಒಮ್ಮೊಮ್ಮೆ ಸಿದ್ಧರಾಮನು ಸೃಷ್ಟಿ ಸಮಸ್ತವನ್ನು ಅಲೆದು ಮಲ್ಲಿಕಾರ್ಜುನನ ಪೂಜೆಗೆ ತಂದ ಅನೇಕ ಜಾತಿಯ ಹೂಗಳ ಪರಿಮಳವೆಲ್ಲ ಒಟ್ಟಾಗಿ ಬೀಸುತ್ತಿತ್ತು. ಹೀಗೆ ಆತನು ಅನುಭವಿಸಿದ ನೋವು-ನಲಿವುಗಳೆಲ್ಲ ಚಿತ್ರಸ್ಥವಾಗಿ ತಾವೇ ತಾವಾಗಿ ಕಂಗಳೆದುರು ರೂಪುದಾಳುತ್ತ ನಡೆದುವು. ಕೃತಿರಚನೆ ಸಾಗಿತು. ಆಗ ಶಿವಯೋಗಿ ಸಿದ್ಧರಾಮನು ಜೀವಂತ ಸಮಾಧಿಯಲ್ಲಿದ್ದಾನೆ. ರಚಿತವಾಗುತ್ತಿರುವ ಒಂದೊಂದು ಪದ್ಯವೂ ಆತನ ದಿವ್ಯ ಕಾರುಣ್ಯ ರಸದಲ್ಲಿ ಮಿಂದು ಮೈದಾಳಿ ಬಂದಂತೆ ವೇದ್ಯವಾಯಿತು.

ಶರಣರ ಕರುಣೆಯ। ಕಾಸಾರ ಕವಲೊಡೆದು
ಹರಿದು ಹಾಯಿತ್ತು ಎನಮೇಲೆ-ಸಿದ್ಧನ
ವರವು ಆಗಿತ್ತ ಬರಿವೂದಕ

ಬರೆದೆನೆನ್ನುವ ಭಾವ। ಬಯಲಾಯ್ತು ಎನಗವ್ವ
ಕೊರಗುವ ಮನ ಉಳಿಯಲಿಲ್ಲ-ತಾಯವ್ವ
ಬೆರಗಾದೆ ಸಿದ್ಧನ ಬೆಳಕಿಗೆ.

ಇದೇ ಅವಧಿಯಲ್ಲಿ ಶ್ರೀಶೈಲಕ್ಕೆ ಹೋಗುವ ಸುಯೋಗ ಪ್ರಾಪ್ತವಾಯಿತು. ತಂದೆ ಸಿದ್ಧರಾಮನು ಆ ತಾಣದಲ್ಲಿ ಅನುಭವಿಸಿದ ಆ ಯಾತನೆಗಳು ಅದೆಷ್ಟು ಉಗ್ರವಾಗಿದ್ದುವು ! ಅದನ್ನು ನೆನೆಯುತ್ತಿರುವಂತೆಯೇ ಮನಸ್ಸು ವ್ಯಗ್ರಗೊಂಡಿತು.

ಕಲ್ಲುದೇವನಿವ। ವ ಲ್ಲಯ್ಯ ನೀನಲ್ಲ
ಒಲ್ಲೆನೆಂದು ಹೊರಟ ಶಿವಸಿದ್ಧ-ರಾಮಯ್ಯ
ಮಲ್ಲಯ್ಯ ಮಲ್ಲಯ್ಯ ಕೂಗಿದ

ಕೂಸು ಸಿದ್ಧನು ಅಂದು। ಉಸುರಿದ ಮಾತಿಂದು
ಕಸವಿಸಿಗೊಂಡು ನುಡಿದಿದೆ-ಮಲ್ಲಯ್ಯ
ಕೂಸಿನದೊತ್ತಿಗೆ ಸಲುಹಯ್ಯ

ನೊಂದ ಸಿದ್ಧನ ಮೂರ್ತಿ। ನಿಂದಾಗ ಕಣ್ಮುಂದೆ
ಬೆಂದ ಮನದಿಂದ ಕಣ್ಣೀರು-ಸುರಿದಾವು
ತಂದೆ ಮಲ್ಲಯ್ಯನ ಗುಡಿಯಾಗ

ಹೀಗೆ ತಾನೇ ತಾನಾಗಿ ಬಂದು ನಿಂದು ನೆಲೆಗೊಂಡು ತನ್ನ ಈ ರೂಪದ ಅಭಿವ್ಯಕ್ತಿಗೆ ನನ್ನನ್ನು ನಿಮಿತ್ತಳನ್ನಾಗಿ ಮಾಡಿಕೊಂಡನಲ್ಲ ಎನ್ನುವ ಪುಣ್ಯ ಈ ಉಡಿಯಲ್ಲಿ ತುಂಬಿಕೊಂಡಿದ್ದೇನೆ. ಅಷ್ಟೇ ಹೊರತು ಉಳಿದ ಭಾವನೆಗೆ ಇಲ್ಲಿ ಅವಕಾಶವೆಲ್ಲಿ ?

ಕೃತಿ ರಚನೆ ನಡೆದಂತೆ ಸಿದ್ಧರಾಮನ ಜೀವನಕ್ಕೆ ಸಂಬಂಧಿಸಿದ ಕೆಲವು ಘಟನೆಗಳು ಮೊದಲಿದ್ದ ಘಟನೆಗಳಿಗಿಂತ ಕೊಂಚ ಬೇರೆಯಾಗಿ ಕಂಡುವು. ಅದರಂತೆ ಕೆಲವು ಮಾರ್ಪಾಟುಗಳನ್ನು ಈ ಕಥೆಯ ಮೈಕಟ್ಟಿನಲ್ಲಿ ಮಾಡಿಕೊಳ್ಳಲಾಗಿದೆ.

'ಜಯಗೀತೆ'ಗಳನ್ನು ಬರೆದ ಬಳಿಕ ಕನ್ನಡ ಭಾಷೆ, ಅದರ ಛಂದಸ್ಸು ನನ್ನ ಮನಸ್ಸನ್ನು ಆಕರ್ಷಿಸಿದುವು. ಭಾವನೆಗಳಿಗೆ ಭಾಷೆಯ ರೂಪು ಕೊಡುವಾಗಲೆಲ್ಲ ನಾನು ಬಾಲ್ಯದಿಂದ ಕೇಳಿತಿಳಿದ, ತ್ರಿಪದಿಯ ಗತಿಯು ತುಂಬ ಹಿಡಿಸಿತು. ಕನ್ನಡದ ಜಾಯಮಾನಕ್ಕೆ ಹೊಂದಿಕೊಂಡು ಬೆಳೆದು ಬಂದ ತ್ರಿಪದಿಯ ಆ ದಾಟಿ, ಆ ಗತ್ತು ಬಹು ರಮ್ಯವೆನಿಸಿದುವು. ಆಗಾಗ ನಾನು ರಚಿಸಿ ಹಾಡುತ್ತ ಬಂದ ಕೆಲವು ತ್ರಿಪದಿಗಳನ್ನು ಒಂದೆಡೆ ಕೂಡಿಸಿ ನೋಡಿದಾಗ ಇವು ಕನ್ನಡ ನಾಡ ತಾಯಂದಿರ ಹಾಡಿನ ಜಾಡನ್ನು ಅನುಸರಿಸಿ ಮುಂದುವರಿದುದು

ಮನಸ್ಸಿಗೆ ಆಪ್ಯಾಯಮಾನವಾಗಿ ಕಂಡಿತು. ಕನ್ನಡ ಕೋಟಿಯ ಬಳಗದ ಮಕ್ಕಳು ಇವುಗಳನ್ನು ಕೇಳಿ, ಆನಂದಿಸಿ 'ತಾಯಿಯಪದ' ಗಳನ್ನು ಪ್ರಕಟಿಸಿದರು. ಆ ಬಳಿಕ ಸಿದ್ಧರಾಮ ರಚಿತ ತ್ರಿವಿಧಿಗಳನ್ನು ಮರಾಠಿ ಭಾಷೆಗೂ ಅಷ್ಟೇ ಮೃದುವಾಗಿ, ಹಿತವಾಗಿ ಹೊಂದಿಕೊಂಡುದನ್ನು ನಾನು ಅನುಭವಿಸಿದೆ. ಮರಾಠಿ ಸಾಹಿತ್ಯದ ಕೆಲವು ಸಹೃದಯರಿಂದಲೂ ಇಂತಹುದೇ ಅಭಿಪ್ರಾಯಗಳು ಮೂಡಿಬಂದುವು. ಏಕೆಂದರೆ ತಾಯಪದಗಳನ್ನು ಹಾಡುವಾಗ ಯಾವ ಸರಳ, ಸಹಜ ಹಾಡಿನ ಮಾಧುರ್ಯ ನನಗೆ ದೊರಕೀತೋ ಅದೇ ಮಾಧುರ್ಯವು ಅನುವಾದಿತ ಮರಾಠಿ ತ್ರಿಪದಿಗಳನ್ನು ಹಾಡುವಾಗಲೂ ಉಂಟಾಯಿತು. ಇದರಿಂದ ನನಗೆ ಒಂದು ಪ್ರೇರಣೆ ದೊರಕಿತು.

ಶಿವಸಿದ್ಧರಾಮನ ಜೀವನದ ಬೃಹತ್ತಾದ ಕಥೆಯು ಕಲ್ಪನೆಗಳಲ್ಲಿ ಮೂಡಿ ನಿಂತಾಗ ನನ್ನ ಭಾವನೆಗಳಲ್ಲಿ ಪ್ರತಿಸ್ಪಂದಿಸಿದ ಹಾಡಿನ ಲಯ ತ್ರಿಪದಿಯದೇ ಆಗಿತ್ತು.

ಆಚಾರ ಉಚ್ಚಾರ। ಎಚ್ಚರ ಎಂಬುವ
ಸಚ್ಚಿದಾನಂದನ ತ್ರಿದಳದ-ಪದಗಳ
ಮುಚ್ಚಿ ತಂದೀದ ಮುಡಿಯಿರಿ.

ಯೋಗಿ ಬಂದಾರೇನ। ಬಾಗಿ ಶರಣಾದೇನ
ಯೋಗದ ಕೀಲ ತಿಳಿಸುವರೇನ-ಸಿದ್ಧರಾಮ
ರಾಗ ಭೋಗದಾಚೆ ಒಯ್ವರೇನ

ಆರಂಭದಲ್ಲಿ ಸಿದ್ಧರಾಮನ ಈ ಅಪರಿಮಿತವಾದ ಜೀವನದ ಕಥಾಚಿತ್ರಣದಲ್ಲಿ ತ್ರಿಪದಿಯು ಓಟ ಸಮರ್ಥವಾದೀತೇ ಎನ್ನುವ ಶಂಕೆ ಒಂದರೆನಿಮಿಷ ಮೂಡಿ ಮರೆಯಾಯಿತು. ಕೃತಿರಚನೆ ನಡೆಯಿತು. ರಚಿಸಿದ ತ್ರಿಪದಿಗಳನ್ನು ಸುಂದರವಾಗಿ, ಇಂಪಾಗಿ ಹಾಡಲು ಸಾಧ್ಯವಾಯಿತು ; ಹಾಡುತ್ತ ನಡೆದಂತೆ ಹಿಂದೊಮ್ಮೆ ಮೂಡಿದ ಸಂಕೋಚ ಮಾಯವಾಗಿ ತ್ರಿಪದಿಯ ಗತಿಯೇ ಈ ಕೃತಿ ರಚನೆಗೆ ಸರಿಯಾದುದು ಎನಿಸಿತು.

ನಿನ್ನಿನ ನಿರಾಸೆ। ಇಂದಳಿದು ಹೋಗಿತ್ತು
ತನ್ನಿಂದ ತಾನೆ ತುಂಬಿತ್ತು-ತುಳುಕಿತ್ತು
ಚೆನ್ನಿಗನ ಹಾಡ ಹರಿಸಿತ್ತು

ಬರೆಯುತ್ತ ಹೋದಂತೆಲ್ಲ ತ್ರಿಪದಿಯು ಸಿದ್ಧರಾಮನ ಜೀವನದ ಹರವಿಗೆ ತಕ್ಕಂತೆ ಹಿಗ್ಗುತ್ತ ನಡೆಯಿತು. ಈ ಲಯ ಮತ್ತು ಛಂದಸ್ಸಿನ ಹಿಗ್ಗುವಿಕೆ ಈ ಮಹಾ ಪುರಾಣದ ಅವಿಭಾಜ್ಯ ಅಂಗವಾಗಿ ಬೆಳೆದು ಹಾಡಿನ ಮಾಧುರ್ಯವನ್ನು ಹೆಚ್ಚಿಸಿತು.

ಇಂದು ತ್ರಿಪದಿಯ ಈ ಕಡಲ ಆಳ, ವಿಸ್ತಾರಗಳು ನನ್ನ ಮನಸ್ಸಿಗೆ ಅಪರಿಮಿತವಾದ ಆನಂದವನ್ನು ತುಂಬಿವೆ. ಕಾವ್ಯಕಲೆಯ ಗುರಿ ಆನಂದ. ಈ ಪುರಾಣವನ್ನು ಹಾಡಿ ಅಂತಹ ಆನಂದವನ್ನು ನಾನು

ಅನುಭವಿಸಿದ್ದೇನೆ. ಇದರ ರಚನೆಯ ಕಾಲದಲ್ಲಿಯೇ ಕನ್ನಡ ಕೋಟಿಯ ಮಕ್ಕಳು ಮತ್ತು ತಾಯಂದಿರು, ಅನೇಕ ಸಹೃದಯರು ನನ್ನಿಂದ ಇದನ್ನು ಹಾಡಿಸಿ, ತಾವೂ ಹಾಡಿ ಆನಂದವನ್ನು ಅನುಭವಿಸಿದ್ದಾರೆ; ಜೊತೆಗೆ ಅದನ್ನು ನನಗೂ ಹಂಚಿದ್ದಾರೆ. ಜನಪದ ಸಾಹಿತ್ಯದ ಜೀವಜೀವಾಳವಾದ ತ್ರಿಪದಿ ನಾಳೆ ಬರುವ ಕಾವ್ಯದ ಉಸಿರಾಗಿ ಪರಿಣಮಿಸಬೇಕು; ಕನ್ನಡ ತಾಯಂದಿರು ಪರಂಪರಾನುಗತವಾಗಿ ಬಂದ ಈ ತ್ರಿಪದಿಯ ಸಹಜವಾದ ಮಾಧುರ್ಯವನ್ನು ರಕ್ಷಿಸಕೊಂಡು ಬರಬೇಕು. ಈ ಹಾಡಿನ ಬಂಧ, ಛಂದ, ಸತ್ವ, ಬೆಡಗು, ಲಯ, ಗತಿ ಗತ್ತು, ದಾಟಿ—ಇವೆಲ್ಲವು ಕನ್ನಡಕಾವ್ಯದ ವಿಕಾಸದಲ್ಲಿ ಒಂದಲ್ಲೊಂದು ರೂಪದಲ್ಲಿ ಅಳವಟ್ಟು ಬರಬೇಕು; ಕನ್ನಡ ಸಂಸ್ಕೃತಿಯ ತೂಕವನ್ನು ಹೆಚ್ಚಿಸಬೇಕು—ಎನ್ನುವುದು ಸಿದ್ಧರಾಮನ ಮನೆಯ ಮಗಳ ಮಹದಾಸೆ.

ಹಮ್ಮಿಕೊಂಡ ಈ ಸಂಕಲ್ಪ ದೈವೀ ಸಂಕಲ್ಪವಾಗಿ ಪರಿವರ್ತನೆಗೊಂಡುದು ಒಂದು ಭಾಗ್ಯ. ಮಣಿಹ ಪೂರಯಿಸಿ ಕನ್ನಡ ತಾಯಂದಿರಿಗೆ, ಸರಸ್ವತಿಯ ಆರಾಧಕರಿಗೆ, ಸಹೃದಯರಿಗೆ ಇದನ್ನು ಒಪ್ಪಿಸುತ್ತಲಿದ್ದೇನೆ.

ಶ್ರೀ ಸಿದ್ಧರಾಮನ ದಿವ್ಯತೇಜಸ್ಸು ನಾಡನ್ನು ಕವಿದ ಕತ್ತಲೆಯನ್ನು ನುಂಗಿ ಬೆಳಕು ಚೆಲ್ಲಲಿ; ಆತನ ಕೃಪೆ ಜನತೆಯ ಹೃದಯದ ದಾರಿದ್ರ್ಯವನ್ನು ದೂರೀಕರಿಸಿ ಕರುಣೆಯನು ಉಣಿಸಲಿ—

ಮುಚ್ಚಿಟ್ಟು ಬರೆದಿಲ್ಲ। ಮೆಚ್ಚಿಸಲು ಕೊರಗಿಲ್ಲ
ಬಿಚ್ಚು ಹೃದಯದಿಂದ ಮೂಡಿಹವು-ಪದಗಳು
ಬಚ್ಚಿಟ್ಟ ಬಯ್ಕೆಯ ನುಡಿದಾವ

೧೯-೫-೧೯೬೫
'ಜಯನಿಕೇತನ'
ಸೊಲ್ಲಾಪುರ

ಜಯದೇವಿತಾಯಿ

ಅನುಕ್ರಮಣಿಕೆ

ಕಥೆ, ಸಂದರ್ಭಸೂಚಿ

ಮಂಗಳ

ಕವಯಿತ್ರಿಯ ಆತ್ಮನಿವೇದನೆ—ಸಿದ್ಧರಾಮೇಶ್ವರ ಪುರಾಣ ರಚನೆಯ ಹಿನ್ನೆಲೆ. ವ್ಯಾಸಂಗ ಮಾಡಿದ ಗ್ರಂಥಗಳು, ಮೂಡಿದ ಭಾವ–ಅನುಭಾವ. ಹಿಂದೆ ರಚಿಸಿದ ಮತ್ತು ಮುಂದೆ ರಚಿಸುವ ಕೃತಿಗಳ ವಿವರ. ಸಕಲ ಶರಣ ಶರಣೆಯರನ್ನು ಕುರಿತು ಪ್ರಾರ್ಥನೆ. ಸಾವಿಲ್ಲದ ಸಡಗರ ಭಾವದಲ್ಲಿ ಮೂಡಿದುದು. ದೇವನ ಕೈಹಿಡಿದುದು. ಭವದ ಮಾಲೆ ಬಯಲಾದುದು. ಬಲ್ಲವಳೆಂಬ ಭ್ರಮೆಯಿಲ್ಲದೆ ಬಲ್ಲವರ ಪಾದಕ್ಕೆ ಮಣಿಯುವುದು, ಬಲ್ಲವರು ಕಲಿಸುವುದು, ನುಡಿಸುವುದು.

ಸಂಧಿಗಳು

೧.—ಕೈಲಾಸದ ವರ್ಣನೆ—ಶಿವನ ಆಸ್ಥಾನ. ಭೃಂಗಿಯ ನಾಟ್ಯ. ಗಂಧರ್ವರ ನಗೆ—ಭೃಂಗಿಯ ಶಾಪ. ಗಂಧರ್ವರು ಭೂಲೋಕದ ಸೊನ್ನಲಿಗೆಯ ಮುದ್ದುಗೌಡ ಮತ್ತು ಸುಗ್ಗಲದೇವಿ ದಂಪತಿಗಳಾಗಿ ಹುಟ್ಟಿದುದು. ಸುಗ್ಗಲದೇವಿ ಗಂಡನ ಮನೆಗೆ ಹೋದುದು. ಅರುವತ್ತು ವರುಷ ದಾಟಿದರೂ ಸುಗ್ಗಲೆಗೆ ಮಕ್ಕಳಿರಲಿಲ್ಲ.

೨. ಅಂಧಕಾಸುರ ವಧೆ, ರಕ್ಕಸರ ಜನನ. ಮಾಸನೂರಲ್ಲಿ ಅವರ ನಿವಾಸ. ರಕ್ಕಸರ ವಧೆ. ಮೋಹದ ಗುಂಡು ಕತ್ತಿಗಳು ಕತ್ತಿಯ ವಶವಾದಲ್ಲಿ ಅಣಿಮಾದಿ ಸಿದ್ಧಿಗಳ ವದಂತಿ. ಬಿಜ್ಜಳ ಮೊದಲಾದವರು ಗೋರ

ಖನಾಥನ ಸೂಚನೆಯಂತೆ ಹನ್ನೆರಡು ಸಾವಿರ ಕನ್ಯೆಯರ ವಧೆಗೆ ಸಿದ್ಧತೆ ಕೊನೆಯ ಕನ್ಯೆಯನ್ನಾಗಿ ಶ್ರೀ ರೇವಣ ಸಿದ್ಧರ ಶಿಷ್ಯೆ ಜಾಕಲ ದೇವಿಯ ಮಗಳು ರೇವಾಯಿಯನ್ನು ಹಿಡಿತರುವುದು. ಜಾಕಲ ದೇವಿಯ ಯಾಚನೆ. ರೇವಣ ಸಿದ್ಧರ ಪವಾಡ. ಕನ್ಯೆಯರ ಮುಕ್ತಿ. ಮಾಸನೂರಿಂದ ಸೊನ್ನಲಾಪುರಕ್ಕೆ ರೇವಣ ಸಿದ್ಧರ ಆಗಮನ. ಸುಗ್ಗಲಾ ದೇವಿಗೆ ಶ್ರೀ ಸಿದ್ಧರಾಮರ ಜನನದ ಸೂಚನೆ.

೩. ಶ್ರೀ ಸಿದ್ಧರಾಮೇಶ್ವರ ಜನನ.—ಜೋಗುಳ, ಹುಟ್ಟುಮೌನಿ. ಧೂಳಿಮಾಕಾಳ. ದನಕಾಯುವ ಕಾರ್ಯ. ನೆವಣೆಹೊಲ. ಲಿಂಗಪೂಜೆ. ಮಲ್ಲಯ್ಯನ ಆಗಮನ. ಸಿದ್ಧರಾಮ ಎಂದು ಕೂಗುವುದು. ಧೂಳಿಮಾಕಾಳನ ಆತಿಥ್ಯ. ಮನೆಗೆ ಬಂದು ತಾಯಿಯಿಂದ ಬುತ್ತಿ ತೆಗೆದುಕೊಂಡು ಹೋಗುವುದು.

೪. ಧೂಳಿಮಾಕಾಳ ಹೊಲಕ್ಕೆ ಬರುವುದು ಮಲ್ಲಯ್ಯ ಕಾಣದಿರುವುದು. ಕಳವಳಗೊಂಡ ಸಿದ್ಧರಾಮ ಹೊಲ ನೆಲೆ ಬಿಟ್ಟು ಹೋಗುವುದು. ಕಾಸಿವಿಸಿಗೊಂಡ ತಾಯಿಯ ದುಃಖ. ಮುದ್ದುಗೌಡ ಹತ್ತು ಕಡೆಗೂ ಮಗನನ್ನು ಹುಡುಕುವುದು. ಸಿದ್ಧರಾಮನನ್ನು ಹುಡುಕುವುದರಲ್ಲಿ ವಿಫಲರಾಗುವುದು.

೫. ಸಿದ್ಧರಾಮನು ನಿಸರ್ಗದ ಎಲ್ಲ ಪಶುಪಕ್ಷಿಗಳನ್ನು ಕೇಳುವುದು. ಮಲ್ಲಯ್ಯನನ್ನು ಹುಡುಕುವುದು. ಗಿರಿಮಲ್ಲಯ್ಯನ ಜಾತ್ರೆಗೆ ಹೊರಟ ಜನರನ್ನು ಕೂಡಿಕೊಂಡು ಶ್ರೀಶೈಲಕ್ಕೆ ಹೋದುದು. ಎಲ್ಲ ಪುಣ್ಯ ಸ್ಥಲಗಳಲ್ಲಿ ಮಲ್ಲಯ್ಯನನ್ನು ಹುಡುಕುವುದು. ಕಮ್ಮರಿ ಕೊಳ್ಳದಲ್ಲಿ, ಸಿದ್ಧರಾಮನು ಹಾರುತ್ತಿರಲು ಮಲ್ಲಿಕಾರ್ಜುನನು ಪ್ರತ್ಯಕ್ಷವಾಗಿ ಕರುಣಿಸಿದುದು.

೬. ಭೈರವನ ಜೊತೆ ಸಿದ್ಧರಾಮನು ಶ್ರೀಶೈಲವನ್ನು ನೋಡಿದುದು. ಅನೇಕ ಚಿತ್ರವಿಚಿತ್ರ ಪಶುಪಕ್ಷಿ ನೋಡಿದುದು. ಸಂಗೀತ ಕೇಳಿದುದು. ಆತನ ಸಕಲ ಸಂಪತ್ತುಗಳಿಂದ ಬಂದು ಸೊನ್ನಲಿಗೆಯಲ್ಲಿ ನೆಲಸುವಂತೆ ಮಲ್ಲಿಕಾರ್ಜುನನಿಂದ ವಚನ ತೆಗೆದುಕೊಂಡು ಆತನ ಅಪ್ಪಣೆಯಂತೆ ಸೊನ್ನಲಿಗೆಗೆ ಮರಳಿದುದು.

೭. ಇತ್ತ ಕತ್ತಲೆ ಕವಿದ ಸೊನ್ನಲಿಗೆಯಲ್ಲಿ ಸುಗ್ಗಲೆಯ ದುಃಖ. ಸಾಕುಮಗ ಬೊಮ್ಮಣ್ಣ ತಮ್ಮನನ್ನು ಹುಡುಕ ಹೊರಟುದು. ಸಿದ್ಧರಾಮನಿಗೆ ಅವನ ಭೇಟಿ. ಸಿದ್ಧರಾಮನು ಸೊನ್ನಲಿಗೆಗೆ ಮರಳಿ ತಂದೆ ತಾಯಿಗಳಿಗೆ ಸಂತೋಷ. ಊರೂರಿಂದ ಜನ ಬಂದು ಸಿದ್ಧರಾಮನ ದರ್ಶನ ಪಡೆದುದು. ರಾಣಿ ಚಾಮಲಾದೇವಿಯೂ ಬಂದು ಶ್ರೀ ಸಿದ್ಧನ ದರ್ಶನ ಹೊಂದಿದುದು. ಸಿದ್ಧರಾಮನು ಬರುವೆನೆಂದ ಮಲ್ಲಯ್ಯನ ನಿರೀಕ್ಷೆಯಲ್ಲಿದ್ದುದು.

೮. ಮಲ್ಲಿಕಾರ್ಜುನ ಲಿಂಗದ ಉದ್ಭವ. ಜನರ ವಿರೋಧ. ಸಿದ್ಧರಾಮನಿಗಾಗಿ ರಾಣಿ ಚಾಮಲೆ ಬಂದು ಗುಡಿಯು ಸ್ಥಾಪನೆಗೆ ಒಂದು ತಾಣವನ್ನು ಅರ್ಪಣೆ ಮಾಡಿದುದು. ಗುಡಿ ಕಟ್ಟಲು ನೆಲ ಅಗೆದಾಗ ಕೊಪ್ಪರಿಗೆ ಹೊನ್ನು ಪ್ರಾಪ್ತಿ. ಜನರ ಸಂತೋಷ. ಗುಡಿ ಕಟ್ಟಿದುದು ಲಿಂಗ ಪ್ರತಿಷ್ಠಾಪನೆ. ಕಪಿಲಸಿದ್ಧ ಮಲ್ಲಯ್ಯನಲ್ಲಿ ಶಿವಸ್ವರೂಪವನ್ನು ಅನುಭವಿಸಿ ಪೂಜೆ ನೆರವೇರಿಸುವುದು. ಶಿವಗಣರು, ಭೈರವ ದೇವತೆಗಳು ಮೊದಲಾದವರು ಪ್ರತ್ಯಕ್ಷವಾಗುವುದು. ಶ್ರೀ ಸಿದ್ಧನು ಅವರನ್ನು ದಿಕ್ಕುದಿಕ್ಕುಗಳಿಗೆ ರಕ್ಷೆ ನೀಡುವಂತೆ ಕೇಳಿಕೊಂಡಿದುದು.

೯. ಕೆರೆ ಕಟ್ಟಿಸುವುದು. ಅರುವತ್ತೆಂಟು ಗಂಗೆಗಳು ಪ್ರತ್ಯಕ್ಷವಾಗಿ ಬಂದು ಕೆರೆಯೆಲ್ಲ ತುಂಬುವುದು. ಮೇಘಚೂಡ ಗಂಧರ್ವನು ಚಿಗರೆಯ ರೂಪದಲ್ಲಿ ಬಂದು ಸಿದ್ಧನ ಕೃಪೆಯಿಂದ ಶಾಪವಿಮೋಚನೆ ಹೊಂದಿ ಮತ್ತೆ ಗಂಧರ್ವನಾಗುವುದು. ಸುರಗಿಯನ್ನಿತ್ತುದು. ಹೂವಿನ ತೋಟದಲ್ಲಿ ಅತಿ ಕಾಮಿಯಾದ ಅತಿಹಂಸನೆಂಬ ಯತಿ ಶಾಪಕ್ಕೊಳಗಾಗಿ ಯೋಗಿಯಾಗಿ ಬಂದುದು. ಶಾಪವಿಮೋಚನೆ. ಮೂಲ ಸ್ವಾಮಿಯಾಗಿ ನಾಗಾರ್ಜುನರನ್ನು ಶಿಷ್ಯರನ್ನಾಗಿಸುವ ವಾರ್ತೆ ಮಲ್ಲಯ್ಯನಿಂದ ಅರಿದು ಸಾಂತ್ವನಗೊಂಡುದು. ಶವವನ್ನು ಕಾಪಾಡಿದುದು.

೧೦. ಇದರಂತೆ ಮಯೂರಕ, ಕುಮುದಶೇಖರ ಮೊದಲಾದ ಗಂಧರ್ವರ ಶಾಪವಿಮೋಚನೆ. ಬೊಮ್ಮಣ್ಣನ ಕಣ್ಣು ಮಲ್ಲಯ್ಯನ ಮಹಿಮೆಯಿಂದ ಮರಳಿದುದು. ಪರಮಾತ್ಮ ಮತ್ತು ನಾರದರ ಮಾತುಕತೆ. ಉತ್ತಾರಕ ಮುನಿಯ ಪ್ರೇರಣೆಯಿಂದ ಕಾಮನು ಸಿದ್ಧರಾಮನ ಪರೀಕ್ಷೆ ಮಾಡಿದುದು. ಕಾಮನ ಸೋಲು.

೧೧. ಮೊರಬಗ್ರಾಮದವರು ಕೆರೆಗೆ ಬಂದುದು. ಕಾಗಿಯ ಕಾಟ. ಸಿದ್ಧರಾಮನಿಗೆ ಶರಣಾದುದು. ಸೇಳಿಗೆಯ ಬೆನಕ ಸೊನ್ನಲಿಗೆಯ ಸಿದ್ಧನ ಸನ್ನಿಧಿಗೆ ಬಂದು ನೆಲಸಿದುದು. ಸೇಳಿಗೆಗೆ ಬೆನಕನನ್ನು ಒಯ್ಯುವ ಯತ್ನದಲ್ಲಿ ಜನತೆ ವಿಫಲರಾದುದು. ಹಾಲಾಹಲ ಅಮೃತವಾದ ಪವಾಡ. ಕಾಳ ರಕ್ಕಸಿಯ ಪವಾಡ. ಶಿವಕೃಪೆಯಿಂದ ಸಿದ್ಧರಾಮನಿಗೆ ಹದಿನಾಲ್ಕು ಲೋಕಗಳ ದರ್ಶನ. ಆದಿಲಿಂಗ ರೂಪದ ಆಗಮನ ಸೂಚನೆ.

೧೨. ರಥಕ್ಕೆ ಹೂಡಿದ ಸತ್ತ ಎತ್ತುಗಳ ಪುನರ್ಜನ್ಮ. ಆದಿಲಿಂಗದ ಪ್ರತಿಷ್ಠಾಪನೆ, ಪೂಜೆ, ಅರ್ಚನೆಗಳ ವರ್ಣನೆ. ಕೇದಾರ ಗುರುಗಳು ಹಾವಿನ ಹಾಳ ಕಲ್ಲಯ್ಯನವರು ಸೊನ್ನಲಿಗೆಗೆ ಬಂದುದು. ಮಲ್ಲಯ್ಯನ ಮಹಿಮೆ ತೋರಿಸುವ ಸಲಹೆ.

೧೩. ಮಲ್ಲಯ್ಯನ ಮಹಿಮೆ. ನೆರೆಯೂರ ಭಕ್ತಾದಿಗಳು ನೆರೆದುದು ಕಾಯ್ದು ಪಂಚಲೋಹದ ಗುಂಡಿನ ಪವಾಡ. ಕುಟಿಲ ವಿದ್ಯಾಸಾಗರ ಖರ್ಪರಜೋಗಿಯ ಕುಟಿಲಕಾರಸ್ಥಾನ. ಹದಿನೆಂಟು ಜೋಗಿಣಿಯರ ಜೊತೆ ಬಂದು ಭಯಾನಕವಾದ ಮಾಟ ಮಂತ್ರಗಳಿಂದ ಸಿದ್ಧರಾಮನ ಹೋಮದ ನಿಷ್ಠೆಗೆ ಬಾಧೆ ತರುವ ಯತ್ನ ಮಾಡಿದುದು.

೧೪. ಖರ್ಪರಜೋಗಿಯ ಕುಟಿಲಕಾರಸ್ಥಾನ ವಿಫಲವಾದುದು. ಸಿದ್ಧರಾಮನು ಉರಿಗಣ್ಣು ತೆರೆದುದು. ಅಗ್ನಿ ಉರಿನಾಲಿಗೆ ಚಾಚಿದುದು. ಕರುಣೆಯಿಂದ ಅವರೆಲ್ಲರಿಗೆ ಕಾಪಾಡಿದುದು. ಸುಟ್ಟ ಸೃಷ್ಟಿ ಮತ್ತೆ ಹೊಸರೂಪ ತಾಳಿತು. ಎಲ್ಲ ಜೋಗಿ ಜೋಗಿಣಿಯರು ಶ್ರೀ ಸಿದ್ಧನನ್ನು ಹಾಡುತ್ತ ಹರಸುತ್ತ ಮರಳಿ ಹೋದುದು. ಸಿಡಿಲ ಲೀಲೆ. ಕೈಲಿದ್ದ ಅಸ್ತ್ರವನ್ನು ತ್ಯಜಿಸಿದುದು. ಕರಿನಾಯಿ ಉಘೆಕಾಳನನ್ನು ಪೂಜೆಗೆ ತಂದುದು. ನಾಯಿ 'ಉಘೆ' ಎಂದು ಕೂಗಿದುದು. ಶಾಪವಿಮೋಚನೆ. 'ಉಘೆಕಾಳನ' ಪೂರ್ವಜನ್ಮ ವೃತ್ತಾಂತ.

೧೫. 'ಉಘೆಕಾಳ' ಭೋಗವಾಸ ಗಂಧರ್ವನಾಗಿದ್ದ ವಿವರ. ಬಿಲ್ಲೇಶ ಬೊಮ್ಮಯ್ಯನ ಕಥೆ. ಬಿಲ್ಲೇಶ ಬೊಮ್ಮಯ್ಯನ ಆತ್ಮಹತ್ಯೆ. ಸಿದ್ಧರಾಮನು ಬಿಲ್ಲೇಶ ಬೊಮ್ಮಯ್ಯನ ಸಾಲ ತೀರಿಸಿದ್ದು. ಬಡಜನರು ಸಿದ್ಧರಾಮನ ಔದಾರ್ಯವನ್ನು ಕೊಂಡಾಡುತ್ತ ಮರಳಿದುದು.

೧೬. ಗಂಧರ್ವನು ನರಕ ಲೋಕದಲ್ಲಿ ಮಲ್ಲಯ್ಯನ ಪ್ರಸಾದ ಕೊಂಡುಹೋಗಿ ತನ್ನ ಮಗನ ಮುಕ್ತಿಗೆ ಹೋದುದು. ಬಿಲ್ಲೇಶ ಬೊಮ್ಮಯ್ಯನ ಶಾಪ ವಿವರಣೆ. ಸಿದ್ಧನಿಗೆ ಗಂಧರ್ವನಿಂದ ಅದು ತಿಳಿದ ಕೂಡಲೇ ಮಲ್ಲಯ್ಯನ ಕರುಣಾಯಾಚನೆ. ಧರ್ಮಕಾರ್ಯ ನಿರೂಪ. ಲಾಕುಳ ಪ್ರಯೋಗ. ನರಕಿಗಳ ಸ್ವರೂಪ. ಶ್ರೀ ಸಿದ್ಧನಿಂದ ಪಂಚಾಕ್ಷರೀ ಮಂತ್ರೋಚ್ಚಾರಣೆ.

೧೭. ಮಂತ್ರ ಮಹಿಮೆ, ಪಾಪಿಗಳು ಪುನೀತರಾಗುವ ಸಂದರ್ಭ. ಸೊನ್ನಲಿಗೆಯ ಸಿದ್ಧನ ಸನ್ನಿಧಿಯಲ್ಲಿ ಬೋಧೆ ಪಡೆದುದು. ಸಾವಿರ ಲಗ್ನ, ಆದಿಲಿಂಗದ ಅಭಿಷೇಕ, ಅರ್ಚನೆ ಮುಂತಾದುದರ ವಿವರ ಪೂರ್ಣವಾದ ವರ್ಣನೆ. ಮದುವೆಯ ಸಮಾರಂಭ. ಸಡಗರ, ಬಿನ್ನಾಣಗಳ ನಿರೂಪಣೆ.

೧೮. ಆದಿಲಿಂಗಯ್ಯನ ಅಭಿಷೇಕಕ್ಕೆ ಅಮೃತ ತರಲು ಮಲ್ಲಯ್ಯನ ಆದೇಶದ ಪ್ರಕಾರ ಪಾತಾಳಲೋಕಕ್ಕೆ ಅಮೃತಕುಂಭ ತರಲು ಪ್ರಯಾಣ. ಪಿಶಾಚಿಗಳ ಬಾಧೆ. ಶಿವಭಕ್ತರು ಅಮೃತಕ್ಕಿಂತ ಶ್ರೇಷ್ಠ ಎಂದು ಮರಳಿ ಮತ್ತೆ ಮಲ್ಲಯ್ಯನ ಅಪ್ಪಣೆಯಂತೆಯೇ ಅಮೃತ ಕುಂಭ ತಂದುದು. ಷೋಡಶೋಪಚಾರಗಳಿಂದ ಆದಿಲಿಂಗಯ್ಯನ ಪೂಜೆ.

೧೯. ಪೂಜೆ, ಚಿಂತನೆ, ಅರ್ಚನೆಗಳ ವರ್ಣನೆ. ಉಗ್ಗಡಣೆ ಉದ್ಘೋಷಗಳು. ಮದುವೆಯ ಮಂಟಪಕ್ಕೆ ಮಂಗಲ ವಾದ್ಯಗಳ ಹಿನ್ನೆಲೆಯಲ್ಲಿ ಬಂದುದು. ಅನೇಕ ಹೆಂಗಳೆಯರ ಉಡಿಗೆ ತೊಡಿಗೆ ಆಭರಣ ವಿಶೇಷಗಳ ಬಗೆಬಗೆಯ ಬಣ್ಣನೆ ನಯ್ಯಣ್ಣೆ ಪದಗಳು.

೨೦. ಲಗ್ನ ಸಂಭ್ರಮ, ಭೂಮದ ಪದ, ಕೂಸು ಒಪ್ಪಿಸುವ ಪದ, ಸಾಮೂಹಿಕ ಲಗ್ನಗಳು ವೈಭವದಿಂದ ಜರುಗಿ ಸಿದ್ಧರಾಮನ ಕೃಪೆ ಹೊತ್ತು ಹಾಡಿ ಹರಸಿ ಮರಳಿದುದು. ಸಿದ್ಧರಾಮನ ಪ್ರಾಣಿದಯೆ.

ಸುಟ್ಟ ಬೆಕ್ಕಿಗೆ ಪ್ರಾಣದಾನ. ಬೊಮ್ಮ ಸೆಟ್ಟಿಯ ಸತಿ ಕಾಳವ್ವೆಗೆ ಹಾವು ಕಚ್ಚಿ ಸತ್ತಾಗ ಸಿದ್ಧರಾಮನು ಪಾದೋದಕ ಮಹಿಮೆಯಿಂದ ಪುನಃ ಬದುಕಿಸಿದುದು.

೨೧. ಶಿವಶರಣ ಅಮುಗಿದೇವಯ್ಯ ದಂಪತಿಗಳ ಮಹಿಮೆ. ಶ್ರೀ ಸಿದ್ಧನ ಧಾನ್ಯ ಹಸನುಮಾಡಲು ಅವರ ನಿರಾಕರಣೆ. ಸಿದ್ಧನ ಕೋಪ ಅಮುಗಿದೇವ ದಂಪತಿಗಳು. ಸಿದ್ಧನ ಉರಿಗಣ್ಣು ಅಸಮರ್ಥವಾದುದು. ಅಮುಗಿದೇವರು ಸೊನ್ನಲಿಗೆ ಬಿಟ್ಟು ಹೊರಟುದು. ಸಿದ್ಧನು ಅವರಿಗೆ ಶರಣಾಗತನಾಗಿ ಶರಣರ ಕರುಣೆಗೆ ಪಾತ್ರನಾದುದು. ಜಂಗಮ ದಂಪತಿಗಳು, ಭಜನೆ, ಜಂಗಮ ದಂಪತಿಗಳ ಮಗನ ಸಾವು. ತಾಯಿಯ ಕಳವಳ, ಶೋಕ ತಪ್ತಳಾದ ತಾಯಿಯ ವಿಹ್ವಲತೆ. ಸಿದ್ಧರಾಮನ ಕರುಣೆಯಿಂದ ಸತ್ತವನು ತಾಯಿಯ ಬಯಕೆಯಂತೆ ಮಜ್ಜಿಗೆ ಕುಡಿದು ಮತ್ತೆ ಶಿವನಲ್ಲಿ ಐಕ್ಯನಾದುದು.

೨೨. ಸಿದ್ಧನ ಮಹಿಮೆ ಹಬ್ಬಿದುದು. ಆತನ ಕೃಪೆಯನ್ನು ಯಾಚಿಸಿ ಭವರೋಗಿಗಳು ಬಂದುದು. ಶ್ರೀ ಸಿದ್ಧನ ಯೋಗದ ಘನತೆ ಮಹಿಮೆಗಳು ಜ್ಞಾನತೇಜದ ವಾರ್ತೆ ದಿಕ್ಕುದಿಕ್ಕಿಗೆ ಹಬ್ಬಿದುದು. ಅಲ್ಲಮಪ್ರಭು ಕೆರೆಯ ಹತ್ತಿರ ಒಡ್ಡರಲ್ಲಿಗೆ ಬಂದು ಸಿದ್ಧರಾಮನನ್ನು ಜರಿದುದು. ವಡ್ಡರ ಪ್ರತೀಕಾರ. ಗುಡ್ಡರ ಸಲಾಕೆಗಳು ಮರಳಿ ಅವರಿಗೇ ಬಡಿದು ವಿಫಲ ರಾದುದು. ಸಿದ್ಧರಾಮನ ಹತ್ತಿರ ಬಂದು ಗುಡ್ಡರು ಹೇಳುವುದು. ಕೆರಳಿದ ಸಿದ್ಧರಾಮನು ಹಣೆಗಣ್ಣು ತೆರೆದುದು. ಹಣೆಗಣ್ಣ ಕಿಚ್ಚು. ಅಲ್ಲಮಪ್ರಭುವು ನಗುನಗುತ್ತ ನಿಂತುದು.

೨೩. ಪ್ರಭುವು ಅಂಗಾಲಗಣ್ಣು ಬಿಟ್ಟುದು. ಅಂಗಾಲಗಣ್ಣಿನ ಕಾಂತಿ ಕ್ಷಣಕ್ಷಣಕ್ಕೆ ಹೆಚ್ಚಿ ಅಖಿಲ ಬ್ರಹ್ಮಾಂಡವನ್ನು ಆವರಿಸಿದುದು. ಸಿದ್ಧ ರಾಮನ ಹಣೆಗಣ್ಣ ಕಾಂತಿ ಕುಗ್ಗಿದುದು. ಸಿದ್ಧರಾಮನ ಪಶ್ಚಾತ್ತಾಪ, ಹೃದಯ ಪರಿವರ್ತನೆ. ಪ್ರಭು ಪ್ರತ್ಯಕ್ಷ. ಸಿದ್ಧರಾಮನ ದೈನ್ಯ. ಪ್ರಭು ವನ್ನೂ ಆತನ ಮಹಿಮೆಯನ್ನೂ ಸ್ತುತಿಸುವುದು. ಪ್ರಭು–ಸಿದ್ಧರಾಮರ ನಡುವೆ ನಡೆದ ದೈನ್ಯ ಯಾಚನೆಯ ಮಾತುಕತೆಗಳು.

೨೪. ಪ್ರಭುವಿಗೆ ಸಿದ್ಧರಾಮನ ಬಿನ್ನಹ ತನ್ನ ಅಜ್ಞಾನ ಅಹಂಕಾರ ಗಳನ್ನು ಕುರಿತು ಬಗೆಬಗೆಯಾಗಿ ಪಶ್ಚಾತ್ತಾಪ ಪಡುವುದು. ಕಾಪಾಡ ಬೇಕೆಂದು ತಪ್ತಹೃದಯನಾದ ಸಿದ್ಧರಾಮನು ಪ್ರಭುವನ್ನು ಅಂಗಲಾಚಿ ಬೇಡಿದುದು. ಕರುಣೆಯಿಂದ ಪ್ರಭುವು ಸಿದ್ಧನನ್ನು ಹಿಡಿದೆತ್ತಿ ಅವನನ್ನೂ ಅವನ ಮೆರೆದ ಘನತೆ ಮಹಿಮೆಗಳನ್ನೂ ವಿಧವಿಧವಾಗಿ ಮೆಚ್ಚಿ ಹೊಗಳುವುದು. ಸಿದ್ಧರಾಮನಿಗೆ ಮಹಾಲಿಂಗದ ಸ್ವರೂಪ ವರ್ಣನೆ.

೨೫. ಕರ್ಮ—ಇಷ್ಟಲಿಂಗ ಪೂಜೆಯನ್ನೂ ಇಷ್ಟಲಿಂಗವನ್ನು ಕುರಿತು ಪ್ರಶ್ನೆ–ಉತ್ತರ. ಸಂಶಯ ನಿರಸನ. ತೆರಹಿಲ್ಲದ ಘನದ ಸ್ವರೂಪ ವಿವರಣೆ ಉರಿಯುಂಡ ಕರ್ಪೂರದಂತಿರುವ ಶಿವಯೋಗಿಯ ಸ್ವರೂಪ. ಪ್ರಭುವಿನ ಕಾರುಣ್ಯದ ಘನತೆಯ ಅರಿವು ಸಿದ್ಧರಾಮನಿಗೆ ಉಂಟಾದುದು.

೨೬. ಪ್ರಭುದೇವರು ಘನಯೋಗಿ ಸಿದ್ಧರಾಮನನ್ನೂ ಆತನ ಯೋಗ ಸಿದ್ಧಿಯನ್ನೂ ಮನವಾರೆ ಮೆಚ್ಚಿ ಕೊಂಡಾಡಿದ್ದು. ಪ್ರಭುದೇವರು ಗಣ ನಾಥ ಪರಂಪರೆಯ ವಿವರಣೆ ನೀಡಿದುದು. ಕರಸ್ಥಲ ಲಿಂಗಯ್ಯನ ಪರಂಪರೆಯೇ ಇದು ಎಂದು ತಿಳಿಸುವುದು. ಸಿದ್ಧರಾಮನು ಅರುಹಿನ ಕುರುಹನ್ನು ಇಷ್ಟಲಿಂಗವನ್ನೂ ದಯಪಾಲಿಸುವಂತೆ ಕೇಳುವುದು. ಕರ ಸ್ಥಲದ ಹಿರಿಮೆಯನ್ನು ಕೇಳಿದುದು. ಪ್ರಭುದೇವರು ಸಿದ್ಧರಾಮನಿಗೆ ಬಸವ, ಚೆನ್ನಬಸವಾದಿ ಪ್ರಮಥರ ಹಿರಿಮೆಯನ್ನು ತಿಳಿಸಿ ಕಲ್ಯಾಣದತ್ತ ಹೊರಟುದು.

ಕಲ್ಯಾಣ ನಗರದಲ್ಲಿ ಬಸವ, ಚೆನ್ನಬಸವ ಮೊದಲಾದ ಮಹಾನು ಭಾವಿಗಳು, ನಿಜವನರಿದ ನಿಶ್ಚಿಂತರಾಗಿದ್ದುದು. ಷಟ್‌ಸ್ಥಲ ಚಕ್ರವರ್ತಿ ಯಾದ ಚೆನ್ನಬಸವಣ್ಣನು ಬಸವಣ್ಣನಿಗೆ ಗುರುವಾಗಿರುವುದು. ಅಸಂಖ್ಯಾತ ಶರಣಗಣ ಕಲ್ಯಾಣದಲ್ಲಿದ್ದು ಶಿವಸಂಕಥಾ ವಿನೋದದಲ್ಲಿರುವುದು.

೨೭—೨೮. ಬಸವಣ್ಣನವರು ಚೆನ್ನಬಸವಣ್ಣನವರ ಘನಮಹಿಮೆ ಯನ್ನು ಕೊಂಡಾಡುವುದು. ಶ್ರೀಗುರು ಚೆನ್ನಬಸವಣ್ಣನ ಕರುಣೆಯನ್ನು ಸ್ತುತಿಸುವುದು. ಲಿಂಗಾಂಗ ಸಂಬಂಧಗಳ ಸೂಕ್ಷ್ಮ ವಿವೇಚನೆ, ಚಿಂತನೆ. ಪ್ರಭುದೇವರು ಕಲ್ಯಾಣಕ್ಕೆ ಸಿದ್ಧರಾಮನ ಜೊತೆ ಬರುವ ಸುದ್ಧಿಯನ್ನು ತ್ರಿಕಾಲಜ್ಞಾನಿ ಚೆನ್ನಬಸವಣ್ಣನವರು ಬಸವಣ್ಣನವರಿಗೆ ತಿಳಿಸುವುದು. ಚೆನ್ನಬಸವಣ್ಣನವರು ಪ್ರಭುವಿನ ಬರವನ್ನು ಅರಿತು ಸಂತೋಷ ಚಿತ್ತರಾಗಿರುವುದು.

ಇತ್ತ ಸಿದ್ಧರಾಮನ ಜೊತೆಗೂಡಿ ಕಲ್ಯಾಣ ನಗರಕ್ಕೆ ಅಲ್ಲಮಪ್ರಭುಗಳು ಬರುವುದು. ಕಲ್ಯಾಣನಗರದ ವರ್ಣನೆ. ಕಲ್ಯಾಣ ನಗರದ ವಿಸ್ತಾರ, ವೈಭವ, ಮಹಾಮನೆಯ ವರ್ಣನೆ. ಕೇರಿಗಳು, ದೇಗುಲ, ಸರೋವರ, ದಾಸೋಹ ಮಠಗಳು, ಅಲ್ಲಿರುವ ಪ್ರಮಥರು, ಶಿವಶರಣರು, ಅನು ಭಾವಿಗಳು, ಮಹಂತರು, ಮಹಿಮರು—ಇವೆಲ್ಲದರ ವಿವರ. ಕಲ್ಯಾಣ ಪಟ್ಟಣದ ದ್ವಾರದಲ್ಲಿದ್ದ ಶಾಸನದ ಉಲ್ಲೇಖ. ಶಾಸನವನ್ನು ಪ್ರಭು ದೇವರು ಓದಿದುದು. ನಿನ್ನ ಮಹಿಮೆಯಿಂದ ಕಲ್ಯಾಣದ ಮಹಾದರ್ಶನ. ಶರಣರ ಸಾನ್ನಿಧ್ಯ ಪಡೆದೆನೆಂದು ಸಿದ್ಧರಾಮನು ಪ್ರಭುವನ್ನು ಕೊಂಡಾಡಿ ದುದು.

ಹಡಪದ ಅಪ್ಪಣ್ಣ ಬಂದು ಪ್ರಭುದೇವ ಮತ್ತು ಸಿದ್ಧರಾಮರನ್ನು ಬಸವಣ್ಣನವರ ಮಹಮನೆಗೆ ಬರಬೇಕೆಂದು ಬಿನ್ನವಿಸಿಕೊಳ್ಳುವುದು. ಪ್ರಭುದೇವರು ಮಹಮನೆಗೆ ಹೋಗಲು ನಿರಾಕರಿಸಿದ್ದು. ಅಪ್ಪಣ್ಣ ಬಂದು ಬಸವಣ್ಣನವರಿಗೆ ವಿಷಯ ತಿಳಿಸುವುದು.

೨೯—೩೦. ಬಸವಣ್ಣನವರು ಚೆನ್ನಬಸವಣ್ಣ, ಅಪ್ಪಣ್ಣ, ಸೊಡ್ಡಳ ಬಾಚರಸ ಮುಂತಾದ ಅಸಂಖ್ಯಾತರನ್ನು ಕೂಡಿಕೊಂಡು ವಿಭೂತಿ ವೀಳ್ಯ ಕಾಣಿಕೆಯಿಂದ ಪ್ರಭುದೇವ ಸಿದ್ಧರಾಮರನ್ನು ಕರೆಯಲು ಹೊರಟದ್ದು.

ಬಂದು, ಪ್ರಭುದೇವರನ್ನು ಕಂಡು ಬಸವಣ್ಣನವರು ಹರ್ಷಚಿತ್ತರಾಗಿ ಅವರ ಪಾದಕ್ಕೆ ವಂದಿಸಿ, ಅವರ ನಿರಾಕಾರ ಸ್ವರೂಪವನ್ನೂ ಮಾಯೆ ಹೊದ್ದದ ಮಹಿಮೆಯನೂ ವಿಧವಿಧವಾಗಿ ಕೊಂಡಾಡುವುದು. ಅಹಂಕಾರ ನಿರಸನಮಾಡಿ ಕಾಪಾಡು ಎಂದು ಕೇಳುವುದು. ಪ್ರಭುದೇವರ ಮಾರುತ್ತರ. ಭೃತ್ಯಾಚಾರ ಸತ್ಯಸದಾಚಾರಗಳ ರೀತಿ ನೀತಿಗಳನ್ನು ಕುರಿತಾದ ಬೋಧೆ.

ಬಸವಣ್ಣನವರು ದೈನ್ಯ ಮನೋಭಾವದಿಂದ ಪ್ರಭುಗಳ ಕೃಪೆಯನ್ನು ಯಾಚಿಸುವುದು. ಅದನ್ನು ಕಂಡು ಸಿದ್ಧರಾಮನು ಪ್ರಭುವಿನ ಕರುಣೆ ಯನ್ನು ಕೋರುವುದು. ಚೆನ್ನಬಸವಣ್ಣನವರು ಕೂಡ ಪ್ರಭುವಿಗೆ ನಮಿಸಿ ದಯೆದೋರುವಂತೆ ಕೇಳುವುದು.

೩೧. ಮಡಿವಾಳ ಮಾಚಿದೇವರು ಬಸವಣ್ಣನವರ ಪರವಾಗಿ ಪ್ರಭು ವಿನ ಕರುಣೆಯನ್ನು ಕೋರುತ್ತಾರೆ. ಎಲ್ಲರ ಕೋರಿಕೆ, ಬಸವಣ್ಣನವರ ಸದ್‌ಭಕ್ತಿ ವಿನಯಸಂಪನ್ನತೆಗಳನ್ನು ಕಂಡು ಹರ್ಷಚಿತ್ತರಾದ ಪ್ರಭು ದೇವರು ಸಂಗರಹಿತ ಬಸವನ ನಿಜರೂಪವನ್ನು ಸ್ತುತಿಸುವುದು. ಬಸವಣ್ಣ ನವರ ಅರಮನೆಗೆ ಮಹಾಗಣಂಗಳು ಮತ್ತು ಸಿದ್ಧರಾಮರೊಡಗೂಡಿ ಪ್ರಭುದೇವರು ಬಿಜಯಗೈಯ್ಯುವುದು. ಅದೇ ಸಮಯಕ್ಕೆ ಹನ್ನೆರಡು ವರ್ಷಗಳಿಂದ ಪ್ರಸಾದದ ಕುಳಿಯಲ್ಲಿದ್ದಮರುಳುಶಂಕರ ದೇವರು ಪ್ರಕಟ ವಾಗುವುದು. ಶರಣಗಣದ ಅಚ್ಚರಿ. ಬಸವಣ್ಣನವರ ಪಶ್ಚಾತ್ತಾಪ. ಆತ್ಮನಿರೀಕ್ಷಣೆ.

೩೨. ಬಸವಣ್ಣನವರು ತಮ್ಮ ಅಜ್ಞಾನವನ್ನು ಕುರಿತು ದೈನ್ಯದಿಂದ ನಿರೂಪಿಸಿದಾಗ ಮರುಳುಶಂಕರದೇವರು ಬಸವಣ್ಣ, ಚೆನ್ನಬಸವಣ್ಣನವರ ಘನತೆಯನ್ನು ಸ್ತುತಿಸುವುದು, ನೆರೆದ ಶರಣರೆಲ್ಲರು ಘನತೇಜದ ಹೊಳಹಿ ನಲ್ಲಿ ಪರಸ್ಪರ ದಿವ್ಯ ಸ್ವರೂಪವನ್ನು ಅರಿತುಕೊಳ್ಳುವುದು, ಭವದ ವಿವೇಚನೆ. ಸಂಸಾರ, ಅಂಬಿಗ ಮುಂತಾದ ಸಾಂಕೇತಿಕ ವಿಷಯಗಳ ಕುರಿತು ನಿರೂಪಣೆ. ಮರುಳಶಂಕರದೇವರು ಕಾಯಸಹಿತ ಬಯಲಾಗುವುದು. ಎಲ್ಲರೂ ಮರುಳು ಶಂಕರರ ಘನಮಹಿಮೆಯನ್ನು ಕೊಂಡಾಡುವುದು.

೩೩. ಮರುಳುಶಂಕರದೇವರ ಬಯಲ ಸ್ವರೂಪವನ್ನು ಚೆನ್ನ ಬಸವ ನಿರೂಪಿಸುವುದು. ಸಿದ್ಧರಾಮನು ಇದೆಲ್ಲವನ್ನು ಕಂಡು ಬೆರಗಾಗಿ ನಿಮ್ಮ ಘನಮಹಿಮೆಯಿಂದ ಇದನ್ನು ಕಾಣುವ ಭಾಗ್ಯಪಡೆದೆ ಎಂದು ಪ್ರಭುದೇವರನ್ನು ಕೊಂಡಾಡುವುದು. ಬಸವಣ್ಣ, ಚೆನ್ನಬಸವಣ್ಣ, ಸಿದ್ಧ ರಾಮ ಮೊದಲಾದವರಲ್ಲಿ ಅನುಭಾವ. ವಿವೇಚನೆ. ಸಿದ್ಧರಾಮನಿಗೆ ಇಷ್ಟಲಿಂಗದ ಅವಶ್ಯಕತೆಯನ್ನು ಕುರಿತಾದ ಸಮಸ್ಯೆ, ಬಸವಣ್ಣ, ಮೊಳಿಗೆ ಮಾರಯ್ಯ, ಸೊಡ್ಡಳಬಾಚರಸ, ಅಮುಗಿದೇವಯ್ಯ, ಶಿವನಾಗಮಯ್ಯ, ತೆಲುಗುಬೊಮ್ಮಣ್ಣ, ಡಕ್ಕೆಯಬೊಮ್ಮಣ್ಣ ಮೊದಲಾದವರು ಇಷ್ಟ ಲಿಂಗದ ಹಿರಿಮೆಯನ್ನು ಕುರಿತು ತಮ್ಮ ತಮ್ಮ ಅನುಭಾವವನ್ನು ನಿರೂಪಿಸುವುದು.

ಇವರೆಲ್ಲರ ಮಾತು ಕೇಳಿ ಚೆನ್ನಬಸವಣ್ಣನವರು, ಸಿದ್ಧರಾಮನನ್ನು ಇಲ್ಲಿಗೆ ಈ ರೂಪದಲ್ಲಿ ಕರೆತರುವುದೇ ಎಂದು ಪ್ರಶ್ನಿಸುತ್ತಾರೆ.

೩೪. ಗುರುವಿನ ಚಿತ್ಕಳೆಯ ರೂಪವಾದ ಇಷ್ಟಲಿಂಗ ಅವಶ್ಯವಾಗಿ ಬೇಕು ಎಂದು ಬಸವರಾಜದೇವರು ನುಡಿಯುವರು, ಹಮ್ಮಳಿದ ಸಿದ್ಧ ರಾಮ ಪ್ರಭುದೇವರೆದುರು, ನೆರೆದ ಶರಣರೆದುರು ಪಶ್ಚಾತ್ತಾಪ ಮನೋ ಭಾವದಿಂದ ತನ್ನ ಮನಸ್ಸನ್ನು ಬಿಚ್ಚಿಡುವುದು. ಇಷ್ಟಲಿಂಗದ ಪ್ರಾಪ್ತಿ ಗಾಗಿ ಅದರ ಧಾರಣೆಗಾಗಿ ಸಿದ್ಧರಾಮನ ಕಳವಳ. ಪ್ರಭುದೇವರು ಚೆನ್ನಬಸವಣ್ಣನವರಿಂದ ಸಿದ್ಧರಾಮನಿಗೆ ದೀಕ್ಷೆ ಕೊಡಿಸಿದುದು. ಸಿದ್ಧ ರಾಮನು ಶ್ರೀಗುರು ಚೆನ್ನಬಸವಣ್ಣನನ್ನು ಸ್ತುತಿಸಿ ಅವರ ಪಾದಕ್ಕೆ ನಮೋ ನಮೋ ಎಂದು ಬಾಗಿದುದು.

೩೫. ಶ್ರೀ ಗುರುವಿನ ಪಾದಕ್ಕೆ ಸಿದ್ಧರಾಮನು ಬಗೆಬಗೆಯಿಂದ ನಮಿಸುವುದು ಕೊಂಡಾಡುವುದು ಪ್ರಭುದೇವರು ಚೆನ್ನಬಸವಣ್ಣನವರಿಂದ ಸಿದ್ಧರಾಮೇಶ್ವರನ ವರ್ಣನೆ ಕೇಳಿ ಹರ್ಷಿತರಾಗಿ ಹರಸುವುದು. ಕರ, ಉರ, ಶಿರ, ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ ಭಕ್ತ, ಮಹೇಶ, ಪ್ರಸಾದ, ಪ್ರಾಣಲಿಂಗ, ಶರಣ-ಐಕ್ಯ ಸ್ಥಲಗಳ ಅನುವಾಭ ಪ್ರಭುದೇವ ಮತ್ತು ಚೆನ್ನಬಸವಣ್ಣನವರಿಂದ ಮಂತ್ರಗೋಪ್ಯ, ಬೋಧೆ. ಸಿದ್ಧ ರಾಮನು ಶರಣಗಣಕ್ಕೆ ಸ್ತುತಿಸುವುದು.

೩೬—೩೭. ಬಸವಣ್ಣನವರ ಅಗಾಧವಾದ ನಿಲವನ್ನು ಶಿವಸಿದ್ಧ ರಾಮನು ಕೊಂಡಾಡುವುದು. ಗುರುವಿನ ಘನತೆ, ಮಹತಿ, ಅನುಭಾವದ ನೆಲೆಕಲೆ, ಸೂಕ್ಷ್ಮ ಸಂವೇದನೆ, ಸುಳುಹು-ಹೊಳಹುಗಳ ವಿವರಪೂರ್ಣ ವಾದ ನಿರೂಪಣೆ. ಮಂತ್ರಗೋಪ್ಯದ ಬೆಡಗಿನ ವಿವರ. ಸರ್ವಾಂಗ ಲಿಂಗಿ ಶರಣನ ಸ್ಥಿತಿಗತಿಗಳು.

೩೮. ಪ್ರಣವ ಘೋಷದ ಹಿರಿಮೆ-ಮಹಿಮೆ, ಶಿವಯೋಗಿ ಗಳಿಸುವ ಮಿಂಚು. ಮಾತು ಮಥನವ ನುಂಗಿದ ನಿಜ, ಮಾತಳಿದ ಲಿಂಗೈಕ್ಯನ ಲೀಲೆ. ಪರಮಾನಂದ ಗುರುವಿನ ಘನಮಹಿಮೆ. ಶಿವಯೋಗಿ ಎಂದು ಸಿದ್ಧರಾಮನನ್ನು ಶರಣರು ಸ್ತುತಿಸುವುದು. ಶಿವಯೋಗಿ ಸಿದ್ಧರಾಮನ ಕಿಂಕರಭಾವದಲ್ಲಿ ಬೆರೆದು, ಶಿವಯೋಗದ ನಿಲವಿನಲ್ಲಿ ನಿಂದು ಬಸವಾದಿ ಪ್ರಮಥರನ್ನು ಸ್ತುತಿಸುವುದು.

೩೯. ಬಸವಣ್ಣ, ನೀಲಮ್ಮ, ಪ್ರಭುರಾಯ, ಚೆನ್ನಬಸವ ಮೊದಲಾದ ವರಿಗೆ ಸಿದ್ಧರಾಮನು ಭಯಭರಿತನಾಗಿ ನಮಿಸುವುದು. ಮಡಿವಾಳ ಮಾಚಯ್ಯ, ಹಡಪದ ಅಪ್ಪಣ್ಣ, ಘಟ್ಟಿವಾಳಯ್ಯ, ಕಕ್ಕಯ್ಯ, ಸೊಡ್ಡಳ ಬಾಚರಸ, ಮರುಳಶಂಕರದೇವ, ಮುಗುದಸಂಗಯ್ಯ ಮೊದಲಾದ ಅಸಂಖ್ಯಾತ ಶರಣ-ಶರಣೆಯರ ನಿಲವಿಗೆ ಕೊಂಡಾಡಿ ತನ್ನ ಭಕ್ತಿ ಸಲ್ಲಿಸುತ್ತಾನೆ.

೪೦. ತಾಯಿ ನೀಲಾಂಬೆ, ಗಂಗಾಂಬಿಕೆ, ಅಕ್ಕಮಹಾದೇವಿ, ಸುಗ್ಗಲವ್ವೆ ಗುಡ್ಡವ್ವೆ ಮೊದಲಾದ ಅಸಂಖ್ಯಾತ ಶರಣೆಯರು ಸಿದ್ಧರಾಮನನ್ನು ಸ್ತುತಿಸುವುದು. ಸಿದ್ಧರಾಮನ ಪಾದಪೂಜೆ, ಆರತಿ ಅನುಭಾವ ಮಂಟಪ

ದಲ್ಲಿ ಸಂಭ್ರಮ-ಸಡಗರ, ಕಲ್ಯಾಣ, ಸೊನ್ನಲಿಗೆ ಶ್ರೀಗಿರಿಯಲ್ಲಿ ಭೇದ ಭಾವ ವಿಲ್ಲದ ಅನುಭವ ನಿರೂಪಣೆ. ಸಕಲ ಶರಣ ಅನುಮತಿ ಪಡೆದು ಸಿದ್ಧರಾಮ, ಸೊನ್ನಲಿಗೆಗೆ ಮರಳುವುದು.

ಇತ್ತ ಕಲ್ಯಾಣದ ಶರಣಗಣ ಅನಿರೀಕ್ಷಿತ ಕ್ರಾಂತಿಯಿಂದ ಹರಿದು ಹಂಚಿಹೋಗುವುದು. ಹರಳಯ್ಯನ ಮಗ—ಮಧುವರಸರ ಮಗಳ ಸಂಭ್ರಮದ ಮದುವೆ. ಕಲ್ಯಾಣಕ್ರಾಂತಿ. ಶರಣರ ಮೇಲಾದ ಅನ್ಯಾಯ. ಬಸವಣ್ಣನವರು ಕಲ್ಯಾಣ ಬಿಟ್ಟು ಬಯಲಾದುದು. ಕಲ್ಯಾಣ ಪಟ್ಟಣದ ಭೀಕರ ಚಿತ್ರಣ. ವೀರಗಣಾಚಾರ. ರಣಕಹಳೆ. ಶಿವಶರಣರ ಮೇಲಾದ ದೌರ್ಜನ್ಯ.

ಶಿವಯೋಗಿ ಸಿದ್ಧರಾಮರಿಗೆ ವಾರ್ತೆ ತಿಳಿದು ಮನನೊಂದುದು. ಅಂದೊಮ್ಮೆ ಉರಿಗಣ್ಣು ಮೊಗದಿರುವಿನಿಂದುದನ್ನೂ ಹಣೆಗಣ್ಣಿನ ಜ್ವಾಲೆ ಮಣಿದುದನ್ನೂ ನೆನಸುವುದು.

ಚೆನ್ನಬಸವಣ್ಣ ಮೊದಲಾದ ಶರಣರು ಸೊನ್ನಲಿಗೆಗೆ ಬಂದು ಎಲ್ಲ ವೃತ್ತಾಂತವನ್ನು ಸಿದ್ಧರಾಮನಿಗೆ ಅರುಹಿದುದು. ಶೂನ್ಯ ಸಿಂಹಾಸನ ಪೀಠವನ್ನು ಶಿವಯೋಗಿ ಸಿದ್ಧರಾಮನಿಗೆ ಕಟ್ಟಿ ಉಳಿವಿಗೆ ಮುನ್ನಡೆದುದು.

ಕೆಲಕಾಲದ ಬಳಿಕ ಲಿಂಗಮಯವಾದ ಶಿವಯೋಗಿ ಸಿದ್ಧರಾಮರು ಕೇದಾರ ಗುರುಗಳು ಮತ್ತು ಇತರ ಭಕ್ತರ ಸಮೂಹದೆದುರು ಬಯಲಾಗುವ ಸೂಚನೆ ಕೊಟ್ಟರು.

ಸೊನ್ನಲಿಗೆ ಅಂದಿನಿಂದ ಇಂದಿಗೂ ಪುಣ್ಯದ ನೆಲೆವೀಡಾಗಿ ಬೆಳಗುತ್ತಿದೆ. ಶಿವಯೋಗಿಯ ಸಿದ್ಧೇಶನ ಕಂದಳಿಗೆ ಈ ಪುರಾಣ ಪ್ರತ್ಯಕ್ಷವಾಯಿತು. ಜಯ ಸಿದ್ಧರಾಮರ ಪುಣ್ಯಪಾದಕ್ಕೆ ಇದನ್ನು ಅರ್ಪಿಸಲಾಗಿದೆ. ಈ ಮಹಾಪುರಾಣ ಆ ಮಹಾನುಭಾವನ ಅವತಾರವೆಂದೇ ನಂಬುಗೆ.

ಜಯಮಂಗಳ

ಈ ಪುರಾಣ ಶಿವಯೋಗಿ ಸಿದ್ಧನ ಕರುಣೆ. ಸಿದ್ಧೇಶನ ಒಲವು, ಆತನ ಕರುಣೆ ಹೊದ್ದ ಈ ಶಿಶುವಿನ ಬುದ್ಧಿಮನ ಚಿತ್ತಗಳನ್ನು ಶುದ್ಧೈಸಿದ್ದಾನೆ. ಕನ್ನಡದ ಮುಖಾಂತರ ತನ್ನ ಕರುಣೆಯ ಹೊನಲು ಹರಿಸಿದ್ದಾನೆ. ಲೌಕಿಕವನ್ನು ಅಲೌಕಿಕದಲ್ಲಿ ಪರಿವರ್ತನೆಗೊಳಿಸಿದನು. ರುದ್ರಾಕ್ಷಿ ಕಂಕಣ ಕಟ್ಟಿಸಿ ಪುರಾಣ ಪೂರ್ತಿಗೊಳಿಸಿದನು. ಕಾವ್ಯಯೋಗವನ್ನು ಕಲಿಸಿದನು.

ಎಲ್ಲ ಶರಣ ಶರಣೆಯರಿಗೆ ಶರಣಾರ್ಥಿಗಳು. ಈ ಲೋಕದ ಬಾಳು ಹಸನಾಗಲಿ. ಸಿದ್ಧೇಶನ ಕರುಣೆಯ ಅಮೃತದಲ್ಲಿ ಬದುಕು ಶುದ್ಧಗೊಳ್ಳಲಿ. ಭಾವ ಶುದ್ಧಿಯಾದಲ್ಲಿ ನೆಲೆ ನಿಲುಕಿದಲ್ಲಿ 'ಅವನ' ಪರಮ ಕೃಪೆ ದಿಟವಾಗಿ ಲೋಕವನ್ನು ರಕ್ಷಿಸುವುದು.

"ಓಂ ಸಿದ್ಧರಾಮಾಯನಮಃ"

THE PRINTERS (MYSORE) PRIVATE LTD.
BANGALORE
LIBRARY
Accn. No..............
Date...................

ಶ್ರೀ

ಸಿದ್ಧರಾಮೇಶ್ವರ ಪುರಾಣ

Cl. No. Q23 33N65
Acc. No. 199.

THE PRINTERS (MYSORE) PRIVATE LTD. BANGALORE
LIBRARY
Accn. No.............
Date.............

ಮಂಗಳ

ಮಂಗಳ ಶುಭಸಮಯ । ಹಿಂಗದ ಸಂಭ್ರಮ ।
ಕಂಗೊಳಿಸಿತು ಲಿಂಗವು-ಸಿದ್ಧರಾಮ
ಬಂಗಾರ ಬಂಣ ಬೀರೂತ ॥ ೧

ಶುಭವನು ಕೋರುತ । ಅಭಯವ ಬೇಡುತ ।
ನಭದ ನೀಲಿಯಲಿ ಸಿದ್ಧನ-ಕಾಣುತ
ಅಭವನ ಪಾಡುವೆ ಮನತುಂಬಿ ॥ ೨

ಮಂಗಳ ಗಳಿಗೆಯಲಿ । ಸಿಂಗಾರ ಶಿವಸಿರಿ ।
ಕಂಗೊಳಿಸಿದವು ಪದಗಳು-ಸಿದ್ಧರಾಮ
ಅಂಗಾಂಗ ರೋಮರೋಮಾಂಚ ॥ ೩

ಕಂಗಳ ತುಂಬೆನ್ನ । ಮಂಗಳಮೂರುತಿ ।
ಪಿಂಗದಲೆ ನಾನುಕಾಣುತ-ಪಾಡುವೆ
ಸಂಗರಹಿತ 'ಸಿದ್ಧ ಪುರಾಣ' ॥ ೪

ಘನವಾದ ನೆನವೆನ್ನ । ಮನ ತುಂಬಿನೀಡಿದಿ ।
ಮೌನದಲಿ ಮಹಾಕಾವ್ಯವ-ಬರೆಸಿದಿ
ಅನುದಿನದಲಿ ರೂಪ ತೋರಿದಿ ॥ ೫

ತುಂಬಿತ್ತು ತುಳುಕಿತ್ತು । ಸಾಂಬನ ನೆನೆವಲ್ಲಿ ।
ಇಂಬಿಲ್ಲ ಯಾವ ಯಾವುದಕೆ-ಒಳಹೊರಗು
ಬಿಂಬಿಸಿ ನೀನಾಗಿ ನುಡಿಸಿರುವಿ ॥ ೬

ನಿನ್ನ ಹುಟ್ಟಿನ ಊರು । ಸೊನ್ನಲಾಪುರದೊಳು ।
ಎನ್ನನು ಪುಟ್ಟಿಸಿ ಬರೆಸಿದಿ-ಸಿದ್ಧರಾಮ
ಕನ್ಯೆಯ ಮೇಲಿನ ಮಮತೆಯಲಿ ॥ ೭

ಗಡಿಭಾಗವೆಂದರು । ಕಡಿವಿಲ್ಲ ಕನ್ನಡಕೆ ।
ಉಡಿಯ ತುಂಬುವೆ ಕನ್ನಡ-ತಾಯಿಗೆ
ಒಡವೆಯ ಇಡಿಸುವೆ ಪದಗಳ ॥ ೮

ಪಂಡಿತರ ಪಂಡಿತ । ಚಂಡಕೀರುತಿ ಕವಿ ।
ಪಂಡಿತ ರಾಘವಾಂಕನ-'ಕೃತಿಯ'
ಕಾಂಡಕರ್ಮವ ವಿವರಿಸುವೆ ॥ ೯

ಸಿದ್ಧವೀರಣ್ಣೊಡೆಯರ । ಸಿದ್ಧ'ಶೂನ್ಯಸಂಪಾದನೆ' ।
ಶುದ್ಧ 'ಪ್ರಭುಲಿಂಗಲೀಲೆ'ಯು-ಆಧಾರ
'ಸಿದ್ಧರಾಮನ ಮಹಾಪುರಾಣ'ಕೆ ॥ ೧೦

'ಗುರುರೇವಣ ಸಿದ್ಧರ । ಚರಿತೆ'ಯಲ್ಲಿಯಭಾಗ ।
ಹರಸೂತ ಪುರಾಣದಿ ಪವಣಿಸಿದೆ-ಸಿದ್ಧೇಶ-
ನರುಹಿದ 'ತ್ರಿವಿಧಿ' ಸ್ಮರಿಸಿದೆ ॥ ೧೧

'ಲಿಂಗಲೀಲಾ ವಿಲಾಸ' । ಸಂಗವು ಈ ಕೃತಿಗೆ।
ಮಂಗಲಮಯ ಸಿದ್ಧರಾಮನು-ಶ್ರೀಗುರು
ಲಿಂಗ ಜಂಗಮರ ನುತಿಸಿದ್ದು ॥ ೧೨

'ಕಾಲಜ್ಞಾನ'ದೊಳು । ಬಲ್ಲಮುನ್ನೋಟವ ।
ಚಲ್ಲಿದರು ಶರಣರು ಬಯಲಿಗೆ-ಅಲ್ಲಲ್ಲಿ
ಇಲ್ಲಿ ಅರುಹುವೆ ನಂಬುಗೆಯ ॥ ೧೩

'ತಾಯಿಪದ'ದ ಥಾಟ । ಹಾಯಾಗಿ ನುಡಿಸುವೆ ।
ಬಾಯಿಂದ ಬಾಯಿಗೆ ಸಾಗಲಿ-ತ್ರಿಪದಿ
ತಾಯಿ ಸಾವಿರ ಸಾವಿರಾರು ॥ ೧೪

ಸುಲಭ ಕನ್ನಡದಲ್ಲಿ । ಸಲ್ಲಲಿತ ವಚನದಿ ।
ಸಲಿಸಿದರು ಅನುಭಾವದಾಸೋಹ-ನಮ್ಮವರು
ಕಲಿಸಿದರು ಸರಳ ಶೈಲಿಯನು ॥ ೧೫

ನನ್ನಿಯಿದು ಕಂಡದ್ದು । ತಾನಾಗಿ ಬಂದದ್ದು ।
ಜೇನು ಸವಿದಂತೆ ತುಂಬಿದ-ಪದಗಳ
ದನಿದನಿಗೂಡಿಸಿ ಹಾಡುವೆನು ॥ ೧೬

'ಸಿದ್ಧನ ಬಸವನ । ಗೆದ್ದ ಮಹದೇವಿಯರ ।
ಸಿದ್ಧ ವಚನ'ಗಳ ಅನುವಾದ-ಈವೊದಲು
ಶುದ್ಧ ಮರಾಠಿಯಲಿ ಮಾಡಿದೆ ॥ ೧೭

ಸಿದ್ಧ ನಿನ್ನ 'ತ್ರಿವಿಧಿ' । ಶುದ್ಧ ಆರೇದಾಗ ।
ತಿದ್ದದಲೆ ಬರೆದು ಮುಗಿಸಿದೆ-ದಿಕ್ಕೆಲ್ಲ
ಆದ್ಯರ ಆಣತಿ ಹರಡಲಿ ॥ ೧೮

'ಜಯಗೀತೆ' ಪಾಡಿದೆ । ಭಯಭಕ್ತಿಯಿಂದಾ ನು ।
ಜಯವೆಂದು ಸಿದ್ಧರಾಮನಿಗೆ-ಅರ್ಪಿತ
ಸ್ವಾಯತ ಸನ್ನಿಹಿತವೆನ್ನುತ ॥ ೧೯

ಸಾಸಿರ ಪದಗಳ । ಉಸುರಿದೆ ನಿನ್ನ ಹಾಡಿ ।
ಹೆಸರಿಟ್ಟೆ 'ತಾಯಿಯ ಪದ'ವೆಂದು-ಮುಂದಿನ್ನು
ಏಸೊಂದು ಮೂಡುವವು ನಾನರಿಯೆ ॥ ೨೦

ಕರುಣಾಳು ಬೇಡುವೆ । ಸೆರಗೊಡ್ಡಿ ನಿನ್ನಡಿಗೆ ।
ಆರೆಮಾತಿನಲಿ 'ದಾನಮ್ಮ-ಅಕ್ಕನ
ಪುರಾಣ' ಬರೆಯಲು ವರವಾಗು ॥ ೨೧

ಶರಣರ ಬಳಿವಿಡಿದು । ಧರೆಗಿಳಿದ 'ಗಾಂಧೀಜಿ'
ಬರೆವೆನವನ ಅಮರ ಕಾವ್ಯವ-ಶರಣರೆ
'ಪುರಾಣ ಸಿದ್ಧ'ನ ಮುಗಿದಿರೆ ॥ ೨೨

ಸಾವಿಲ್ಲದ ಸಡಗರ । ಭಾವದಲಿ ಕಾಣುವೆನು ।
ದೇವನ ಕೈಯ ಹಿಡಿದಾಗ-ಈ ಭವ
ಭವದ ಮಾಲೆ ಬಯಲಾಯಿತು ॥ ೨೩

ಶಿವಯೋಗಿ ಸಿದ್ಧೇಶ । ದೇವ ಚನ್ನಬಸವ ।
ರೇವಣಸಿದ್ಧ ಪ್ರಭುದೇವ-ಬಸವಂಣ
ಶಿವಶರಣರಿಗೆ ಶರಣೆಂಬೆ ॥ ೨೪

ಸುಗಲವ್ವೆ ರುದ್ರವ್ವೆ । ಮಿಗಿಲಾದ ಶರಣೆಯರೆ ।
ಸುಗಮದಿ ಹಾಡ ನಡಿಸರಿ-ದಾನಮ್ಮ
ಸಾಗಿಸಿರಿ 'ಸಾವಿರದ ಪದ'ಗಳ ॥ ೨೫

ಅಕ್ಕನಾಗಲ ತಾಯಿ । ಅಕ್ಕಮಹಾದೇವಿಯೆ ।
ಮಿಕ್ಕೀದ ನೀಲಮ್ಮ ಗಂಗಮ್ಮ-ಸಂಗವ್ವೆ
ಚಿಕ್ಕಮಗಳಾನು ಸಲುಹಿರಿ ॥ ೨೬

ಎಲ್ಲ ಬಲ್ಲವಳೆಂಬ । ಇಲ್ಲವದು ಭ್ರಮೆ ಎನಗೆ ।
ಬಲ್ಲವರ ಪಾದ ಹಿಡಿಯುವೆ-ಬಲ್ಲಿದರು
ಕಲಿಸರಿ ಮತ್ತೆ ನುಡಿಸರಿ ॥ ೨೭

ಪುರಾಣ ಪೀಠಿಕೆ

ಸಂಧಿ ೧

ಎತ್ತ ನೋಡಿದರತ್ತ । ಸುತ್ತೀತು ಸಾಗರವು ।
ಮತ್ತೆ ಭೂಮಿಯ ಮಧ್ಯದಿ–ಮೇರುತಲೆ
ಎತ್ತಿ ನಿಂತಿತ್ತು ಧರೆಯೊಳು ॥ ೧

ಮೇರು ಪರ್ವತದಿಂದಾ । ದಾರಿಉತ್ತರದಿಕ್ಕಿನ ।
ಸಾರಿ ಕೈಲಾಸಕ್ಹೋಗುವ–ಅಲ್ಲಿ ನಮ್ಮ
ಮಾರಹರ ಮಾದೇವನ ವಾಸವು ॥ ೨

ಭೂಮಿ ಸುವರ್ಣವು । ಸೋಮಬೆಳಗಿನ ಗೋಡೆ ।
ಧಾಮ ಶತಕೋಟಿ ಸೂರ್ಯನ–ತೇಜದಿ
ಅಮಮ ! ಬೆಳಗು ಬೆಳಗಿದೆ ॥ ೩

ಕಂಭಕ್ಕೆ ಒಪ್ಪಿಹವು । ಒಂಭತ್ತು ಬಣ್ಣಗಳು ।
ಶಂಭು ಸಿಂಹಾಸನದ ರತ್ನಗಳು–ಬೀರಿದವು
ಹೊಂಬೆಳಗು ಸುತ್ತಮುತ್ತಲು ॥ ೪

ಮಿಂಚಿನ ಮಾಲೆಗಳು | ಹಂಚಿಕಿಲ್ಲದೆ ತಾನೆ |
ಪಂಚ ಸೂತ್ರದಿಂದ ಕೂಡಿಹವು–ಈ ನಮ್ಮ
ಪಂಚ ಮುಖದವನ ಮಂಟಪಕೆ || ೫

ಯತ್ನದ ಆಚೆಯ | ರತ್ನ ಖಚಿತ ಪೀಠ |
ಜತನಾಗಿ ತಂತಾನೆ ನಿಂತಿತ್ತು–ಮಾದೇವ
ಅತಿಹರುಷದಿ ಕೂತಿಹನು || ೬

ಜಡೆಯೊಳು ಶ್ರೀಗಂಗಾ | ತೊಡೆಮೇಲೆ ಶ್ರೀಗೌರಿ |
ಹೆಡೆ ತಗೆದು ಆಡುವ ಸರ್ಪವೆ–ಆಭರಣ
ಮಡಿಮಾಡಿ ಉಟ್ಟಿಹನು ಗಜಚರ್ಮ || ೭

ಹೊಳೆವ ಕೆಂಜಡೆಮೇಲೆ | ಎಳೆಯ ಚಂದಿರಬೆಳಕು |
ಸುಳಿಪಲ್ಲ ಹೊಳೆಯುತ ಥಳಥಳ–ಮೈಯೆಲ್ಲ
ಬಳಿದಿದನು ಶಿವನು ಬಿಳಿ ಭಸಿತ || ೮

ವಿಷವನೆ ಸೇವಿಸಿ | ತೃಷೆಯನೆ ನೀಗಿದನು |
ಪಶುಪತಿಯಾಗಿ ಸಕಲಕ್ಕೆ-ಸಲವೂತ
ದೆಸೆದಿಕ್ಕು ಮುಖವಾಗಿಹನು || ೯

ಕೊರಳಿಗೊಪ್ಪುವದು | ಗರಳ ನೀಲಿಯಬಣ್ಣ |
ದುರುಳ ಅಸುರರ ರುಂಡಗಳ–ಮಾಲೆಯು
ಹರನಿಗೆ ಕೊರಳ ಸರವಹುದು || ೧೦

ರುದ್ರಾಕ್ಷಿ ಮಾಲೆಗಳ | ಚಿದ್ರೂಪ ಧರಿಸಿಹನು |
ಭದ್ರ ಕಪಾಲವ ಕೈಯಲ್ಲಿ–ಪಿಡಿದಿಹ
ರುದ್ರ ಲೋಕಾದಿ ಒಡೆಯನು || ೧೧

ಸುರ ಮುನಿ ಯತಿಗಳು | ಸುರವನ ಪುಷ್ಪಗಳು |
ವರ ಬಕುತಿಯಲಿ ಧರಿಸಿಹರು–ಹರಪಾದ
ಆರ್ಚಿಸಿ ನಿಂತಿಹರು ಸಾಲಾಗಿ || ೧೨

ದೇವಗಣರು ಭಕ್ತಿ | ಭಾವದಿಂ ಬರುತಿಹರು |
ಧಾವಿಸಿ ಕೈಲಾಸ ಬಾಗಿಲಿಗೆ–ದೇವರ
ದೇವನಡಿಗೆ ಶರಣೆನ್ನಲು || ೧೩

ಯತಿಮುನಿ ಋಷಿಗಳು । ಅತಿ ಬಕುತಿಯಿಂದಲಿ ।
ನುತಿಸುತ್ತ ನಿಂತಿಹರು ಹರನನ್ನು-ನೀವೆಮ್ಮ
ಗತಿ ಮತಿ ನೀಡಿ ಸಲುಹೆಂದು ॥ ೧೪

ಹರನನ್ನು ಅರ್ಚಿಸಿ । ಹರಿಯು ವಿಷ್ಣುಪದವ ।
ದೊರಕಿಸಿ ಚರಾಚರವೆಲ್ಲ-ಸಾಕೂತ
ಪೊರೆವನು ಸ್ಥಿತಿಗೆ ಒಡೆಯು ॥ ೧೫

ಶಿವನನ್ನು ಪೂಜಿಸಿ । ಜೀವರಾಶಿಗಳಿಗೆ ।
ಭುವಿಯೊಳು ಹುಟ್ಟಿಸುವಾತ-ಬ್ರಹ್ಮನು
ಶಿವ ಸಭೆಯೊಳು ಕೂತಿಹನು ॥ ೧೬

ಇಂದ್ರನಿಗೈಸಿರಿ । ಚಂದ್ರಂಗೆ ಕಲೆಗಳ ।
ಸಾಂದ್ರಫಲ ಪದವ ನೀಡುವಾತ-ಮಾದಾನಿ
ಆದಿತ್ಯಗೆ ತೇಜ ಕೊಟ್ಟಿಹನು ॥ ೧೭

ಮನು ಮುನಿಗಳಿಗೆಲ್ಲ । ಅನುರಾಗದಿಂದಲಿ ।
ಘನ ಪದವಿ ನೀಡಿ ಸಲುವಿದನು-ದೇವನು
ಅನುಮತದಿ ಶಕ್ತಿಗಳಿಗೆಲ್ಲ ॥ ೧೮

ಹರನ ಉರಿಗಣ್ಣಿಂದ । ವೀರಭದ್ರನು ಜನಿಸಿ ।
ಧರಿಸಿಹನು ಉಗ್ರರೂಪವ-ದ್ರೋಹಿಗಳ
ಗರುವಿನ ಗರಳವ ಕೊಯ್ಯಲು ॥ ೧೯

ಬಾಲ ಗಣಪತಿಯು । ಲೀಲೆಯಲಿ ಲೋಕದ ॥
ಕುಲ ಕೋಟಿಗಳ ಸಂಕಟ-ಹರಿಸಲು
ಬಲಗಡೆ ಕೂತಿಹನು ತಂದೆಯ ॥ ೨೦

ಷಣ್ಮುಖನೆಂದ । ಮುಕ್ಕಣ್ಣನಧಿಕನೆಂದು ।
ಮಣಿಸಿಲ್ಲ ತಾಯಿಗೆ ತನ್ನ ತಲೆ-ತಂದೆಗೆ
ಮಣಿ ಮಣಿದು ಶರಣು ಮಾಡುವ ॥ ೨೧

ಹಸನಾದ ಮನಸೀನ । ಬಸವಣ್ಣ ಕುಳಿತಿಹನು ।
ವಸುಧಿಯ ಜನಕ್ಕೆ ಅಶನವ-ನೀಡುತ
ಕಸುವಿನಿಂದ ಕಸವ ತಗೆಯುತ ॥ ೨೨

ಪರಮನ ದರುಶನಕೆ । ಸುರಮುನಿ ಶಿವಗಣ ।
ಭರದಿಂದ ಬಕುತಿಲಿ ಸರಗೊಂಡು-ಬರುವಾಗ
ಹರಸುತ ಭೃಂಗಿಯು ಆಗಮನ ॥ ೧೩

ಚಲುವಿಕೆ ಚಿಮ್ಮಿತು । ಒಲಿದಿಹಳು ಸಿರಿದೇವಿ ।
ಸಲೆ ಯೌವನವು ಮೂಡಿತು-ಗೆಳೆಯರು
ಬಲು ಬಕುತಿಯಿಂದಿರುತಿಹರು ॥ ೧೪

ವಾರಿಗಿ ಗೆಳೆಯರು । ಹರನ ಸಭೆಯೊಳಗೆ ।
ಬರುವಾಗ ಸುರಾಸುರರೆಲ್ಲ-ನುಡಿವರು
ಕೊರತಿಲ್ಲ ಅಧೊ ಊರ್ಧ್ವರಿಗೆ ॥ ೧೫

ಸದ್‌ಗುಣ ಶೀಲರು । ಮದನನ ಚೆಲುವಿಕೆ ।
ವಿದ್ಯೆಯಲಿ ಬಲು ನಿಪುಣರು-ಗಂಧರ್ವರು
ಅದ್ರಿಶಿರ ಊರ್ಧ್ವಶಿರರು ॥ ೧೬

ಗಂಧರ್ವರಿಬ್ಬರು । ಒಂದೆಮನಸಿನವರು ।
ಇಂದುಧರನ ದರುಶನ-ತಕ್ಕೊಂಡು
ಮಂದಹಾಸ ಬೀರುತ ನಿಂತಿಹರು ॥ ೧೭

ಭೃಂಗಿ ನೋಡಿದನಾಗ । ಶೃಂಗಾರ ಮದವೇರಿ ।
ಮಂಗನಂತೆ ನೋಡಿ ನಗುವಿರಿ-ಮರುಳರೆ
ಭಂಗವಾಗಲಿ ಸಿಂಗರದಿರುವಿಕೆ ॥ ೧೮

ಭುವಿಯೊಳು ಜನಿಸಿರಿ । ಭವಿತನದಿ ಇಬ್ಬರು ।
ನವ ದಂಪತಿಗಳಿಬ್ಬರು ಬಾಳಿರಿ-ಮರುಳರೆ
ಶಿವನಿಂದಗಲಿ ಅಲ್ಲಿ ಹೋಗಿರಿ ॥ ೧೯

ನುಡಿಕೇಳಿ ಗದ ಗದ । ನಡುಗಿದರಿಬ್ಬರು ।
ಗುಡ್ಡ ತಲೆಮೇಲೆ ಬಿದ್ದಂತೆ-ನಿಂತಲ್ಲಿ
ಜಡರಾಗಿ ಕಂಣು ಮುಚ್ಚಿದರು ॥ ೨೦

ರೂಪವೈಸಿರಿ ಗರುವ । ಈ ಪರಿ ತಲೆಗೇರಿ ।
ಶಾಪಕ್ಕೆ ಗುರಿಯಾಯಿತು-ಮೂಢರೆ
ಪಾಪ ಹರಿಯಲು ಮರ್ತ್ಯಕ್ಹೋಗಿರಿ ॥ ೨೧

ನಿಮ್ಮನೋಡಿ ನಗಲಿಲ್ಲ। ಹೆಮ್ಮೆಮಗೆ ಇನಿತಿಲ್ಲ।
ದಮ್ಮಯ್ಯ ನಿಮಗೆ ಶರಣೆಂದು–ಕೋರುವೆವು
ಎಮಗೇಕೆ ಘೋರ ಶಾಪವು ॥ ೩೨

ಮೂರು ಪಾದವ ನೋಡಿ। ಗರವಿಲಿ ನಗುವಿರಿ।
ಬರೆ ಕಾಯದ ತುತ್ತಾಗಿ ನೀವು–ಬಾಳಿದಿರಿ
ಹರಗಣರ ಮಹಿಮೆ ಅರಿಯದೆ ॥ ೩೩

ನಿತ್ಯದಿ ಕಾಣುವೆವು। ಸತ್ಯ ಮೂರುತಿ ನಿಮ್ಮ।
ಕತ್ತುಬಾಗಿಸಿ ಶರಣೆಂಬೆವು–ಶಿವಸುತ
ಇತ್ತು ಉಶಾಪ ಸಲುವಯ್ಯ ॥ ೩೪

ಕೊರಗೀನ ನುಡಿಕೇಳಿ। ಕರುಣಿಸಿ ಭೃಂಗಿಯು।
ಪರ ನಿಮ್ಮುದರದಿ ಹುಟ್ಟುವನು–ನೀವು-ಅ–
ಮರರಾಗುವಿರಿ ಇಳೆಯೊಳು ॥ ೩೫

ಭಗ್ನ ಹೃದಯದಿಂದ। ವಿಘ್ನಕ್ಕೆ ಒಳಗಾಗಿ।
ದಿಗ್ ಮೂಢರಾಗಿ ಶಿವಪಾದ–ಹಿಡಿದಾಗ
ಮೊಗ ಎತ್ತದೆ ಧಾರೆ ಹರಿದವು ॥ ೩೬

ನೃಡನ ಅಡಿಮೇಲೆ। ಗಡಗಡ ಉರುಳಿದರು।
ಸಿಡಿಲು ಮಿಂಚಿನ ಸೆಳೆಯೊಂದು–ಹೊಳೆದಾಗ
ದೃಢಮನದಿ ಪಾದ ಪಿಡಿದಿಹರು ॥ ೩೭

ಹರ ಹರ ಮಹಾದೇವ। ಸುರವರ ವಂದಿತ।
ಮಾರಹರ ನಿನಗೆ ಶರಣೆಂದು–ನಲಿವಾಗ
ವರ ಗಣ ಭೃಂಗಿ ಶಪಿಸುವದೆ ॥ ೩೮

ಪಾಪ ತೊಳೆಯಲು ಹೋಗಿ। ಕೂಪದೊಳು ಬಿದ್ದಂತೆ।
ವಿಪರೀತ ಇಂದು ಘಟಿಸಿತ್ತು–ಓ ತಂದೆ
ಶಾಪ ನಿಮ್ಮದರು ಉಚಿತವೆ ॥ ೩೯

ನನ್ನಾಧೀನ ಏನಿಲ್ಲ। ನನ್ನಧಿಕ ನಮ್ಮವರು।
ಅನುಗಾಲ ಅವರ ಸೇವಕನು–ಆಗಿರವೆ
ಏನು ಮಾಡಲು ಎನಗೆ ಬಾರದು ॥ ೪೦

ನೆರಳೀನ ನೆರವೀಗೆ । ಹೊರಳಿ ಬಂದಿತು ಬಿಸಿಲು ।
ಗರಳ ಕಂಠನ ನುಡಿ ಕೇಳಿ–ಗಂಧರ್ವರ
ಮರಳಿ ಉಮ್ಮಳಿಸೀತು ದುಃಖವು ॥ ೪೧

ಶಿವ ನಿನ್ನ ಪಾದಕ್ಕೆ । ತವೆ ಬಕುತಿಲಿ ಬಂದರೆ ।
ಭವ ಮಾಲೆಗೊಳಗಾಗಿ ಹೋಗುವದೆ–ದೇವದೇವ
ಸಾವು ಹುಟ್ಟಿನ ತವರೂರಿಗೆ ॥ ೪೨

ಭುವಿಯೊಳ್ ನಿಮ್ಮುದರದಿ । ಶಿವಯೋಗಿ ನಾನಾಗಿ ।
ಭವ ಪರಿಹರಿಸಲು ಜನಿಸುವೆ–ಸೊನ್ನಲಿಗೆ
ಅವಿಮುಕ್ತ ಕ್ಷೇತ್ರವೆನಿಸುವೆ ॥ ೪೩

ಸೊನ್ನಲಿಗೆ ಗ್ರಾಮದಿ । ಸನ್ನುತ ಸತಿಪತಿ ।
ಮನ್ನಣೆ ಪಡೆದ ಗೌಡರ–ಮನೆತನದಿ
ಚೆನ್ನಿಗರೆ ಹುಟ್ಟಿ ಬಾಳುವಿರಿ ॥ ೪೪

ಶಂಭುವಿನ ಮುಖದ । ಅಭಯ ವಚನವ ಕೇಳಿ ।
ಸಭಿಕರು ಅಚ್ಚರಿಗೊಳ್ಳುತ–ಹರ ಹರ
ಶುಭವೆನ್ನಿ ಜಯ ಜಯವೆನ್ನಿ ॥ ೪೫

ತಲ್ಲಣಗೊಳ್ಳುತ । ಮೆಲ್ಲನೆ ನುಡಿದರು ।
ಬಲ್ಲ ಪ್ರಮಥರ ಕೋಪಕ್ಕೆ–ಗುರಿಯಾಗಿ
ಎಲ್ಲಿ ಹೋಗೋಣ ನಿಮ್ಮಗಲಿ ॥ ೪೬

ನಿಮಗಾಗಿ ಬರುವೆನು । ಶಮನವಾಗಲಿ ಶೋಕ ।
ಸುಮನದಿ ನೀವು ನಡೆಯಿರಿ–ಜನಕೆಲ್ಲ
ನೇಮ ನಿತ್ಯದ ಸತ್ಯ ಅರುಹಲು ॥ ೪೭

ಕೂಡ ಒಕ್ಕಲಿಗರ । ಗೌಡರ ಮನೆತನದಿ ।
ಜಡ ರಹಿತ ಬಾಲಕ ಜನಿಸಿಹನು–ಸೀಮೆಯ
ಅಡಿವಿ ಹೊಲ ಹಸಿರು ಹಸಿರಾಗಿ ॥ ೪೮

ಹಾಳ ಬಿದ್ದ ಹೊಲಗಳು । ಬೀಳಬಿದ್ದ ಅಡವಿಯು ।
ಮೊಳೆತು ಬೆಳೆದಾವ ಬೆಳೆಗಳು–ಒಕ್ಕಲಿಗ
ಉಳಿಗಾಲ ಬಂತೆಂದು ಸಂತೈಸಿ ॥ ೪೯

ನೊರಡಿ ಮೈದಾಳಿದವು । ಬರಡು ಹಯನಾಗಿಹವು ।
ಕೊರಡು ಕೊನರುವ ದಿನಗಳು–ಉದಯಿಸಿ
ಮೊರಡಿ ಮುದ್ದು ಗೌಡನ ಜನನದಿ ॥ ೫೦

ಧನ್ಯ ಧನ್ಯ ನಿಮ್ಮಯ । ಪುಣ್ಯ ತನುಜನಿಂದಲೆ ।
ಅನ್ನ ಉಣ್ಣುವೆವು ಹೊಟ್ಟೆತುಂಬ–ಸುಖ ಸಂ-
ಪನ್ನ ದಿನಗಳ ಕಂಡಿಹೆವು ॥ ೫೧

ಮುದ್ದಾದ ಅಂಗಾಂಗ । ತಿದ್ದಿ ಮಾಡಿದಹಂಗ ।
ಎದ್ದು ಕಂಡಿತ್ತು ಸ್ವರೂಪ–ಕೂಸಿಗೆ
ಮುದ್ದುಗೌಡನೆಂದು ಕರೆದಾರ ॥ ೫೨

ಸಂಣಊರ ಗೌಡನು । ಹುಂಣಿಮೆಯ ಚಂದಿರನು
ಕಂಣು ಕೊರೆಯುವ ರೂಪದ–ಪುತ್ಥಳಿ
ಗುಣನಿಧಿಯಾಗಿ ಬೆಳೆದಿಹನು ॥ ೫೩

ಸೊನ್ನಲಗಿ ಊರಲ್ಲಿ । ಇನ್ನೊಂದು ಮನೆಯಲ್ಲಿ ।
ಚಿನ್ನದಂಥ ಹೆಣ್ಣು ಹುಟ್ಟಿತು–ಜನುಮಕ್ಕೆ
ಹೊನ್ನಮಳೆಗರೆದಂತಾಯಿತು ॥ ೫೪

ಸುಗ್ಗಿಯ ದಿನಗಳು । ಹಿಗ್ಗಿದರು ಒಕ್ಕಲಿಗರು ।
ವೆಗ್ಗಳ ಹಾಲುತುಂಬಿದ–ತೆನೆಹೊತ್ತು
ಬಾಗಿನಿಂತಿಹವು ಪೈರುಗಳು. ॥ ೫೫

ಹೊಲದ ರಾಶಿಯತಂದು । ಕುಲವೆಲ್ಲ ಹಿಗ್ಗಿತು ।
ಬಾಲಿಗೆ ಸುಗ್ಗವ್ವೆ ಎಂದು ಹೆಸರಿಟ್ಟು–ಕರೆದಾರ
ಬಲ ನಮ್ಮ ಭೂಮಿಗೆ ಬಂತೆಂದು ॥ ೫೬

ದೇವಲೋಕದ ರೂಪ । ಭುವಿಯೊಳು ಮೂಡಿತ್ತು ।
ಸವಿನಯ ಶಾಂತಿಗೆ ತವರಾಗಿ–ತೋರುತ
ಶಿವಸುತೆ ಬೆಳೆಯುತಿಹಳು ॥ ೫೭

ನಿಂಬಿಹಂಣಿನ ಬಂಣ । ತುಂಬಿದ ಮೈಕಟ್ಟು ।
ರಂಭೆ ರತಿಯರಂತೆ ಚಲುವಿಕೆ–ಸುಗ್ಗವ್ವೆ
ಇಂಬಿಲ್ಲ ಯಾವ ಕುಂದಿಗೆ ॥ ೫೮

ಮಮತೆಯ ಮಗಳು । ಸಮತೆಯ ಪುತ್ಥಳಿ ।
ನೇಮದಿ ಹರನ ಸೇವೆಯ–ಮಾಡೂತ
ಸೋಮನ ಕಳೆಯಂತೆ ಬೆಳೆಯುತಿರೆ ॥ ೫೯

ಬಂದಿಹಳು ಮದುವಿಗೆ । ಚಂದಾದ ವರನನ್ನು ।
ಕಂದಮ್ಮಗಿನ್ನು ನೋಡೋಣ–ಎಂದರು
ತಂದೆತಾಯಿಗಳು ಮನವಾರೆ ॥ ೬೦

ಗೊತ್ತಿಲ್ಲ ಅವರಿಗೆ । ಸತ್‌ಚಿತ್ತಾನಂದನ ।
ಹೆತ್ತವ್ವಳಾಗಿ ಜನಿಸಿದ್ದು–ಭವದಲ್ಲಿ
ಕತ್ತಲೆ ಕಳೆಯಲು ಬಂದದ್ದು ॥ ೬೧

ಒಕ್ಕಲಿಗರ ಮಗಳು । ಸೊಕ್ಕು ಹಮ್ಮುಗಳಿಲ್ಲ ।
ಚಿಕ್ಕ ಮಕ್ಕಳಂತೆ ತಿಳಿಮನ–ಸುಗಲವ್ವೆ
ಮುಕ್ಕಂಣನ ಮಗಳಾಗಿ ಬೆಳೆಯುವಳು ॥ ೬೨

ಸುಗ್ಗವ್ವೆಯ ತಾಯ್‌ತಂದಿ । ಹಿಗ್ಗಿದರು ವರ ನೋಡಿ ।
ಮೊಗ್ಗು ಅರಳುವ ಮೊದಲಿಗೆ–ಗೌಡರ
ಮಗ ಮುದ್ದು ಗೌಡನಿಗೆ ಒಪ್ಪಿಸಲು ॥ ೬೩

ಮಗನೀಗೆ ಒಪ್ಪುವ । ಸುಗುಣಿ ಸೊಸೆಯತಂದು ।
ಸಗ್ಗದ ಸುಖವು ಮರ್ತ್ಯದಿ–ಇಳದಿತ್ತು
ಹಿಗ್ಗಿದರು ಗೌಡರು ಗೌಡತಿ ॥ ೬೪

ಮುದ್ದು ಗೌಡರ ಮದುವಿ । ಸುದ್ದಿ ಕೇಳಿದ ಜನ ।
ಹಾದಿಬೀದಿ ತುಂಬಿ ಬರುತಿತ್ತು–ಕಾಲ್‌ಧೂಳಿ
ಎದ್ದು ಮುಖಕೆಲ್ಲ ಒರಸಿತ್ತು॥ ೬೫

ಕಳಸ ಕನ್ನಡಿಯಿಂದ । ಹೊಳೆದೀತು ಮಂಟಪ ।
ತಳಿರ ತೋರಣ ಕಟ್ಟಿಹರು–ಅಲ್ಲಲ್ಲಿ
ಬಾಳಿ ಕಂಬಗಳ ನಿಲ್ಲಿಸಿಹರು ॥ ೬೬

ಸುರಗಿ ಸುತ್ತ್ಯಾರವರು । ಹರದೆಯರೆಲ್ಲರು ।
ಅರಿಸೀಣ ಹಚ್ಚಲು ನೆರದಾರ–ಮಂಟಪದಿ
ವರವಧುವಿಗೆ ಕರೆತಂದು ॥ ೬೭

ಮುತ್ತೈದೆರೆಲ್ಲರು । ನತ್ತಿಟ್ಟು ನಲಿಯುತ ।
ಮುತ್ತಿನಾರುತಿ ಬೆಳಗೂತ-ಹಾಡಿದರು
ಸತಿಪತಿಗೆ ಜಯ ಜಯವೆಂದು ॥ ೬೮

ಗುರುವೀಗೆ ನೆನೆಯೂತ । ಹರನೀಗೆ ನುತಿಸೂತ ।
ಪರಮ ಪಾವನಗೆ ನೈಯೆಂಣಿ-ಎರೆಯೂತ
ಕರುಣೆಯ ಕೋರಿದರು ಸತಿ ಪತಿಗೆ ॥ ೬೯

ಹಂದರದೊಳಗಿನ । ಇಂದುಮುಖಿಯರೆಲ್ಲ ।
ಮಂದಹಾಸವ ಬೀರೂತ-ದೇವಕಾರ್ಯ
ನಂದದಿ ಮಾಡಿಹರು ನಲಿಯೂತ । ೭೦

ಧಾರೆಯ ಎರೆದರು । ನೀರೆ ಸುಗ್ಗಲ ದೇವಿಗೆ ।
ಪರಮ ಸಂತಸದಿ ಸಂಸಾರ-ಮಾಡಿ-ಇಹ
ಪರ ಸಾಧೀಸೆ ಮಗಳೆಂದು ॥ ೭೧

ತಂದೆತಾಯಿಗಳಿಗೆ । ಬಂಧು ಬಾಂಧವರಿಗೆ ।
ಕಂದಳಾಗಿ ಬೆಳೆದ ಸುಗ್ಗವ್ವೆ- ಈ ದಿನ
ತಂದೆತಾಯ್ ಮನೆಗೆ ಎರವಾಗಿ ॥ ೭೨

ಅತ್ತಿ ಮಾವಂದಿರು । ಹೆತ್ತ ತಾಯಿತಂದೆ ಎಂದು ।
ತೊತ್ತೆಲ್ಲ ನಿನ್ನಮಕ್ಕಳೆಂದು-ನೋಡಿಕೊಳೆ
ಉತ್ತುಮರ ಮಗಳಾಗಿ ಬಾಳವ್ವ ॥ ೭೩

ಪತಿಯನೆರಳಾಗಿ । ಹಿತದ ಸ್ನೇಹಿತೆಯಾಗಿ ।
ಪತಿಯೆ ಪರದೈವ ಎನುತಲಿ-ಸೇವೆಯ
ಮತಿವಂತೆ ಮಗಳೆ ನೀಮಾಡೆ ॥ ೭೪

ದೇವನಲ್ಲಿ ಬಕುತಿ । ಭಾವದಲ್ಲಿ ನಿಷ್ಠೆ ।
ನೋವಿಗೆ ಹೆದರಬೇಡವ್ವ-ಸಂಸಾರದ
ಧಾವತಿ ತಿಳಿದು ನಡೆಯವ್ವ ॥ ೭೫

ನಸುಕಿನಲಿ ಏಳಬೇಕು । ಕಸಕಡ್ಡಿ ತಗೆಬೇಕು ।
ಈಶನ ಸ್ಮರಿಸುತ ಮನೆಗೆಲಸ-ಮಾಡಬೇಕು
ನಸುನಗುತ ಮಾತು ಆಡಬೇಕು ॥ ೭೬

ನಯಬೇಕು ನುಡಿಯಲ್ಲಿ । ಭಯಬೇಕು ನಡೆಯಲ್ಲಿ ।
“ ದಯಬೇಕು ಸಕಲ ಜೀವರಲಿ ”–ತಂಗೆಮ್ಮ
ಲಯಬೇಕು ಶಿವನ ನೆನೆವಲ್ಲಿ ॥ ೭೭

ಕಾಯಕದಲ್ಲಿ ನಿನ್ನ । ಕಾಯವ ಉಳಿಸದೆ ।
ಮಾಯದ ಬಲೆಯಲ್ಲಿ ಸಿಗದಲೆ–ಎಲ್ಲರ
ಬಾಯಲ್ಲಿ ನಿನ್ನ ಹೆಸರಿರಲೆವ್ವ ॥ ೭೮

ಕಲ್ಲಿನಂಥ ಗುಣವ । ಕಲಿಬೇಡ ನನ್ನ ಮಗಳೆ ।
ಬಲ್ಲ ಸಂಸ್ಕಾರ ನಿನ್ನಮೇಲೆ–ಬೀರಿದೆ
ನೆಲ್ಲಿಕಾಯಿಯಂತೆ ಇರಬೇಕು ॥ ೭೯

ಶಿವನು ಮನ ನೋಡಲು । ಭವಕೆ ತಂದಾನವ್ವ ।
ದೇವ ಲೋಕದ ಮಗಳೆಂದು–ಎನಿಸವ್ವ
ತವರೀನ ಹೆಸರ ತರಬೇಕು ॥ ೮೦

ಬುದ್ಧಿಮಾತವ ಹೇಳಿ । ಗೆದ್ದರು ತಾಯಿತಂದೆ ।
ಬಿದ್ದಿಹಳು ಅವರ ಪಾದಕ್ಕೆ–ಸುಗ್ಗಲವ್ವೆ
ತಿದ್ದಿರೆಂದಳು ತನ್ನ ಮನವ ॥ ೮೧

ಸುಗುಣ ಮೂರುತಿ ನಮ್ಮ । ಭಾಗ್ಯದಧಿದೇವತೆ ।
ಸುಗ್ಗಲವ್ವೆ ನಿನ್ನ ಪಡೆದಂಥ–ನಮಗರಳು
ಹಿಗ್ಗೀನ ಮಡಲಲ್ಲಿ ಮುಳಿಗೀತು ॥ ೮೨

ಕಂಣು ತುಂಬಿದವಾಗ । ಸಂಣಾಗಿಹುದು ದನಿ ।
ಹೆಂಣ್ ಹಡೆದಗರಳು ತಂಣಗಾಗಿ–ಜಗಕೆ
ಕಂಣಾಗೆಂದು ಹರಸಿದರು ॥ ೮೩

ಹಸನಾದ ಮನಿಸಿನ । ಸೊಸೆ ಬಂದು ನಡೆವಾಗ ।
ಹೊಸಪೈರು ಮೊಳೆತು ಹಸಿರಾಗಿ–ಹೂವಾಗಿ
ಲೇಸದಿನಗಳ ಮುನ್‌ಸೂಚ ॥ ೮೪

ಸೊನ್ನಲಗಿಗಿಳದಿಹಳು । ಅನ್ನಪೂರ್ಣದೇವಿ ।
ಅನ್ನ ನೀರಿಗೆ ಕೊರತಿಲ್ಲ–ಸೊನ್ನಲಗಿ
ಹೊನ್ನಿನ ಕಣಿಯಾಗಿ ಕಂಡೀತು ॥ ೮೫

ಏಸು ಜನ ಬಂದರು । ಬೇಸರ ಇನಿತಿಲ್ಲ ।
ಬಿಸಿಮಾಡಿ ನೀಡುವಳು ಅಡಗಿಯ-ದೇವಿಯ
ಹೆಸರಾಯ್ತು ಹಳ್ಳಿ ಪಳ್ಳಿಯಲಿ ॥ ೮೬

ಬಡವರ ಮೇಲೆ ದಯೆ । ದುಡಿಯುವ ಆಳಿಗೆ ।
ಹಡದವ್ವ ಆಗಿ ಸಲುವುವಳು-ಸುಗ್ಗಲವ್ವೆ
ಗೌಡತಿ ಎಂಬ ಗರುವಿಲ್ಲ ॥ ೮೭

ಮಿತ ಭಾಷೆ ಸುಗ್ಗವ್ವೆ । ಅತಿ ಭಕ್ತಿ ಉಳ್ಳವಳು ।
ಸತಿಯರ ರೀತಿ ಅರಿತವಳು-ತಾಯವ್ವ
ಪತಿಯ ನೆರಳಾಗಿ ನಡೆವಳು ॥ ೮೮

ಅತ್ತಿಸೊಸೆಯ ಜಗಳ । ಹೆತ್ತತಾಯಿಯ ಗೋಳ ।
ಅತ್ತತ್ತು ಹೇಳುವ ನೊಂದವರಿಗೆ-ಧೀರದ
ಮಾತ್ ಹೇಳಿ ಮನೆಗೆ ಕಳುಹುವಳು ॥ ೮೯

ಮಕ್ಕಳು ಇಲ್ಲಂತ । ಕಕ್ಕಲಾತಿಯ ಮಾತು ।
ಪಕ್ಕದವರ ಮುಂದೆ ಆಡಿಲ್ಲ-ಲೋಕದ
ಮಕ್ಕಳ ತಾಯಾಗಿ ಇರುವಳು ॥ ೯೦

ಹರೆಯತನ ಉರುಳಿ । ನರೆಯಾಗಿ ತಲೆ ತುಂಬ ।
ತೋರಿತು ಮುಪ್ಪಿನ ಛಾಯೆಯು-ತಾಯಿಯ
ಹಿರಿಯತನ ಸಾರಿ ಹೇಳಿತ್ತು ॥ ೯೧

ವರಪ್ರಾಯ ಮೂಡಿತ್ತು । ಮಿರಿ ಮಿರಿ ಮಿಂಚೂತ ।
ಸಿರಿ ಶಿವತೇಜವು ಹೊರಹೊಮ್ಮಿ-ಕಂಡಿತ್ತು
ಧೀರ ಗಂಭೀರ ಮುಖವು ॥ ೯೨

ಪತಿಯ ನೆರಳಾಗಿ । ಸತಿತನ ಜತನಾಗಿ ।
ಹಿತದ ನುಡಿಗಳ ಹೇಳೂತ-ಕಳೆವಳು
ಸತಿಯಳಿವರ ಬಳ್ಳಿ ಹಬ್ಬಲಿ ! ॥ ೯೩

ಮುದ್ದುಗೌಡನು ಊರ । ತಿದ್ದಿಹನು ಜನಮನ ।
ಸಾಧುತನಕೆ ತವರಾಗಿ-ಸೊನ್ನಲಗಿ
ಮೇದಿನಿಯೊಳಗೆ ಹೆಸರಾಗಿ ॥ ೯೪

ಊರಲ್ಲಿ ಜಗಳಿಲ್ಲ । ಚೋರರ ಭಯವಿಲ್ಲ ।
ಜಾರತನದ ಸುಳುವಿಲ್ಲ-ಜನರೊಳು
ಹಿರಿ ಕಿರಿದೆಂಬ ಭೇದಿಲ್ಲ ॥ ೯೫

ಶಾಂತ ವೃತ್ತಿಯವರು । ಕಾಂತ್ಯುಳ್ಳ ಮುಖದವರು ।
ಭ್ರಾಂತಿಯ ಮೂಲ ತಿಳಿದವರು-ಸತಿಪತಿ
ಅಂತಕಾಂತಕನ ಗೆಲಿದವರು ॥ ೯೬

ಪೂರ್ವ ಜನುಮದ ನೇಹ । ಉರ್ವಿಯಲ್ಲಿ ಜನಿಸಿ ।
ಈರ್ವರು ಸುಖದಿಂದಿರುತಿಹರು-ಎಲ್ಲವು
ಸರ್ವೇಶಗರ್ಪಿಸಿ ನಡೆದಿಹರು ॥ ೯೭

ವರದಾನಿಗಳೆಂದು । ಪರಮ ಧರ್ಮಿಗಳೆಂದು ।
ಸಾರಿತ್ತು ಕೀರುತಿ ಸುತ್ತಲು-ಮಕ್ಕಳ
ಕೊರತ್ಯೊಂದು ಎದ್ದು ಕಂಡೀತು ॥ ೯೮

ಮುಟ್ಟು ತಟ್ಟಾಗಿತ್ತು । ಸುಟಗೊಂಡು ಶುಚಿಯಾಗಿ ।
ದಿಟಯೋಗಿಯ ಹುಟ್ಟನ ನೆಲವಾಗಿ-ನಿಂತಾಳ
ಸಾಟಿ ದಾಟೇದ ಸುಗ್ಗಲವ್ವೆ ॥ ೯೯

THE PRINTERS (MYSORE) PRIVATE LTD
LIBRARY
Accn. No...........
Date.......... ...
BANGALORE

ಸಂಧಿ ೨

ಕೊಂದಿಹನು ಇಂದುಧರ | ಅಂಧಕಾಸುರನನ್ನು |
ಬಿಂದುಗಳುರುಳಲು ನೆತ್ತರದ–ಆದರಿಂದ
ಒಂದೊಂದು ರಕ್ಕಸರು ಪುಟ್ಟಿಹರು || ೧

ಮೂಸನೂರರ್ದ್ಬೊರಗೆ | ವಾಸಿಪರು ರಕ್ಕಸರು |
ಬೇಸರ ಕೊಟ್ಟಿಹರು ಜನಕೆಲ್ಲ–ತನ್ನದು
ಅಸುರ ಶಕ್ತಿಯ ತೋರುತ || ೨

ವೀರಭಟ್ಟನು ಅಸುರರ | ಧೀರದಿ ಸುಟ್ಟಿಹನು |
ಭಾರಿ ಲೋಹದ ಗುಂಡುಗಳು–ಆದಾಗ
ಸುರಗಿಗಳ ಮಾಡಿಹನು ಕರಗೀಸಿ || ೩

ಹಾವಾಗಿ ಹರದಿಹವು | ನವರೂಪ ತಾಳಿಹವು |
ಧಾವಿಸಿ ಹೊಳೆಯ ಧುಮುಕಲು–ವೀರಭಟ್ಟ
ಎವಿ ಇಕ್ಕದೆ ನೋಡಿ ಬೆರಗಾಗಿ || ೪

ಮಾಸನೂರ ಹೊಳಿಯಲ್ಲಿ । ಏಸೊಂದು ದಿನದಿಂದ ।
ಹೊಸ ರೀತಿಯಲ್ಲಿ ಶಕ್ತಿಯ–ತೋರುತ
ವಾಸ ಮಾಡಿಹರು ರಕ್ಕಸರು ॥ ೫

ಹೊಳೆಯಲ್ಲಿ ಸುರಗಿಗಳು । ಥಳಥಳ ಹೊಳೆಯುತ ।
ಗಳಗಿಯಲಿ ಕಂಣ ಮರೆಯಾಗಿ–ಹೋಗುವವು
ಸುಳಿಯಲು ಜನರು ಹೆದರುವರು ॥ ೬

“ ಹಿಡಿದರೆ ಖಡ್ಗವು । ಒಡೆತನಕ ಜಯವಾಗಿ ।
ಹಿಡಿದ ಕಾರ್‍ಯಕೆ ಯಶವಾಗಿ–ಧಾರುಣಿಯ
ಸಡಗರ ನಿಮ್ಮನೆಯ ಕಸವಾಗಿ ” ॥ ೭

“ ಅಷ್ಟಐಶ್ವರ್ಯವು । ಇಷ್ಟದ ಆಳಾಗಿ ।
ದುಷ್ಟರ ಬಲವು ಎದುರಿಗೆ–ನಡೆಯದು
ಕಷ್ಟಕಾರ್ಪಣ್ಯ ಕಳೆಯುವದು ” ॥ ೮

ಜನರ ಸುದ್ದಿಯ ಕೇಳಿ । ಮನಸೋತು ಬಿಜ್ಜಳ ।
ಏನು ಯತ್ನಿಸಿ ಸುರಗಿಗಳ–ದೊರಕಿಸಲು
ಮನದಲ್ಲಿ ಯೋಚಿಸ ಹತ್ತಿದನು ॥ ೯

ಸುರಗಿಯ ಸಿದ್ಧಿಗಾಗಿ । ಕರೆತರಲು ಗೋರಖನ ।
ವರ ಮಂತ್ರಿಗಾಗ ಕಳುಹಿದನು–ಬಿಜ್ಜಳ
ದಾರಿ ನೋಡುತ ಆತುರದಿ ॥ ೧೦

ಅರಸ ಕರೆಸಿದನೆಂದು । ತ್ವರದಿಂದ ಬಂದಿಹನು ।
ಕರಸಿದ ಕಾರಣ ಕೇಳಿದನು–ಗೋರಖನು
ಪರಮ ಹರುಷದಿ ನುಡಿದನು ॥ ೧೧

ನಿನ್ನ ಇಷ್ಟದ ಸುರಗಿ । ಮಾನ್ಯನೆ ಸಿಗುವದು ।
ಹನ್ನೆರಡು ಸಾಸಿರ ಕನ್ನೆಯರ–ಕೊಂದರೆ
ಬೆನ್ಹತ್ತಿ ಸುರಗಿ ಬರುವದು ॥ ೧೨

ಆಸೆ ಪಟ್ಟರಸನು । ಹೇಸಿಲ್ಲ ಪಾತಕಕೆ ।
ದೆಸೆ ದಿಕ್ಕುಗಳೆಲ್ಲ ತಿರುಗಾಡಿ–ತರ್‍ರೆಂದನು
ಸಾಸೀರ ಕನ್ಯೆಯರ ಬಲಿಗಾಗಿ ॥ ೧೩

ಹನ್ನೆರಡು ಸಾವಿರಕೆ । ಇನ್ನೊಂದು ಕಡಿಮೆಯಿರಲು ।
ಅನ್ಯ ಕನ್ಯೆಯನು ತರಬೇಡಿ-ಜಾಕಲೆಯ
ಚಿನ್ನದಂಥ ಕನ್ಯೆಯ ಕರತರ್‍ರಿ ॥ ೧೪

ಗೋರಖನ ನುಡಿ ಕೇಳಿ । ಅರಸ ಬಿಜ್ಜಳರಾಯ ।
ತ್ವರದಿಂದ ಕರೆಯಿಸಿ ತನದಂಡು-ಕಳುಹಿದನು
ಭರದಿಂದ ತರಲು ಕನ್ಯೆಯನು ॥ ೧೫

ಮಡುವೀನ ಸುರಗೀಗೆ । ಮಡಿಬೇಕೆ ಮಕ್ಕಳು ।
ಕೆಡಗಾಲ ಒದಗೀತೆ ಅರಸನಿಗೆ-ನಾಡಿನ
ಕೊಡಗೂಸ ಬಲಿಯ ಕೊಡುವನು ॥ ೧೬

ಭೋಗದಾಶೆಯಿಂದ । ಜೋಗಿಯ ಮಾತಕೇಳಿ ।
ಆಗು ಹೋಗುದಕೆ ಅಂಜಿಲ್ಲ-ಬಿಜ್ಜಳನು
ಬೇಗ ನಿಲಿಸಿದನು ಬಲಿ ಕೊಡಲು ॥ ೧೭

ಮೂಸನೂರ ಕೆರಿ ಮೇಲೆ । ಹಸಗೂಸ ಬಾಲೆಯರು ।
ಕಸವೀಸಿಗೊಂಡರು ಭಯದಿಂದ-ನಮ್ಮಯ
ಅಸುವ ಕಸಿಯುವನು ಜೋಗಿಯು ॥ ೧೮

ಹೊಸ ಸೀರೆಗಳುಡಿಸಿ । ನೊಸಲಿಗೆ ಕುಂಕುಮ ।
ಸೋಸಿದ ಗಂಧ ಕಸ್ತೂರಿ-ಇಟ್ಟೆಹರು
ಕುಸುಮ ಮಾಲೆಯು ಕೊರಳಿಗೆ ॥ ೧೯

ಹೂಮಾಲೆ ಬಾಡಿಹವು । ಕುಮಾರಿಯರ ಕಂಠದ ।
ವ್ಯೋಮ ಮುಸುಕಿತ್ತು ಮೋಡದಿ-ಜನವೆಲ್ಲ
ಭೂಮಿಯು ಬಿರಿಲೆಂದು ಬೇಡಿದರು ॥ ೨೦

ಹೊಳೆವ ಖಡ್ಗವ ಕಂಡು । ಎಳೆಗಂಣು ತುಂಬಿದವು ।
ಹೊಳಿಯಲ್ಲಿ ಕಂಣೀರು ಕೂಡಿದವು-ಕನ್ಯೆಯರ
ಎಳೆಮುಖ ಕಪ್ಪುಗೊಂಡವು ॥ ೨೧

ಸಾಲಾಗಿ ನಿಂತಿರುವ । ಬಾಲೆಯರೆಲ್ಲರಲಿ ।
ಮೇಲಮಟ್ಟದ ಚಲುವಿಕೆ-ಬೀರೂತ
ಬಾಲೆ ರೇವಾಯಿ ನಿಂತಿಹಳು ॥ ೨೨

ಕಂಣು ಕುಕ್ಕುವ ಎಳೆ । ಹೆಂಣೀನ ಚಲುವಿಕೆ ।
ಪ್ರಾಣ ಉರುಳೂವ ಹೊತ್ತಿದು–ಬಂದಿತ್ತು
ಆಣತಿ ಹೊತ್ತು ತಾ ನಿಂದಿತ್ತು ॥ ೨೩

ಮಿಕಿ ಮಿಕಿ ಮುಖ ನೋಡಿ । ಬಿಕಿ ಬಿಕಿ ಅಳುವರು ।
ಏಕಕಾಲಕ್ಕೆ ಸುತಮುತ್ತ–ತುಂಬೀತು
ಮೂಕ ಕನ್ಯೆಯರ ಕರುಣಾರವ ॥ ೨೪

ಹೊತ್ತೀತು ಕಿಚ್ಚೆದ್ದು । ಹೆತ್ತ ತಾಯ್‌ಗಳ ಹೊಟ್ಟೆ ।
ಕತ್ತಲೆ ಕವಿದಿತ್ತು ಜಗವೆಲ್ಲ–ಅವರನ್ನು
ಅತ್ತರೂ ಕೇಳವವರಾರಿಲ್ಲ ॥ ೨೫

ವರದಿಂದ ಹುಟ್ಟೀದ । ಸುರಕನ್ಯೆ ರೇವಾಯಿಯು ।
ಕರೆದು ಒಯ್ದನು ಕೊಲ್ಲಲು–ಅರಸನು
ಗುರುವೆ ರೇವಣಸಿದ್ಧ ಬಾರಯ್ಯ ॥ ೨೬

ಎಲ್ಲ ಕೂಗೊಂದಾಗಿ । ಜಾಕಲೆಯು ಬಾಯಿಂದ ।
ಕಲ್ಲ ಸೀಳುವ ಆಲಾಪ–ಹೊರಹೊಮ್ಮಿ
ಬಲ್ಲ ರೇವಣಸಿದ್ಧಗೆ ಕೇಳಿಸೆ ॥ ೨೭

ಪೊರೆಯಲು ಬಂದಾನ । ಗುರು ರೇವಣಸಿದ್ಧನು ।
ಕರುಣೆಯು ಕರೆಗೆ ಓಗೊಟ್ಟು-ಹೊರಟನು
ವರಕನ್ಯೆಯರ ಬಿಡಿಸಲು ॥ ೨೮

ಬಂದನು ಭರದಿಂದ । ತಂದೆ-ರೇವಣಸಿದ್ಧನು ।
ಕಂದಮ್ಮರ ಕಡೆಗೆ ನೋಡಿದನು-ದಯಾಳು
ಕಂದೀದ ಮುಖಕಂಡು ಮರುಗಿದನು ॥ ೨೯

ಹೊಳೆವ ಖಡ್ಗದ ಕೈಗಳು । ಇಳಿದಾವ ಇಳಿಮೇಲೆ ।
ದಾಳಿ ಬಂತೆಂದರು ಜೋಗಿಯರು-ನಮ್ಮ ಪ್ರಾಣ
ಉಳಿಸಿಕೊಳ್ಳಿರೊ ಯಾರಾದರು ॥ ೩೦

ಸಿದ್ಧಯೋಗಿಯ ಕಂಡು । ಬಿದ್ದಾರ ಪಾದಕೆ ।
ಬುದ್ಧಿಗೇಡಿ ಸಾವು ಬದುಕಿಸಿರಿ-ಎಂದೆನುತ
ಬೀದಿಯಲಿ ಉರುಳ ಹತ್ತಿದರು ॥ ೩೧

ಮೊಗ್ಗಗಳೆಲ್ಲಕ್ಕೂ । ಸೊಕ್ಕೇಲಿ ನೆಲಕೊರಿಸಿ ।
ನುಗ್ಗಿಹೊಳಿಯಲ್ಲಿ ನೂಕಿದರೆ-ಸಿಕ್ಕೀತೆ
ಭೋಗದೈಸಿರಿ ಸುಖ ಶಾಂತಿ ॥ ೩೨

ಕೊಲ್ಲದಿರು ಕೊಡಗೂಸು । ನಿಲ್ಲು ಕೊಡುವೆನು ಸುರಗಿ ।
ಸಲ್ಲದು ನಿನಗೆ ಈ ಮಾರ್ಗವು-ಅರಸನೆ
ಹೊಲ್ಲ ಜೋಗಿಯ ಮಾತು ಕೇಳದಿರು ॥ ೩೩

ನಡೆ ಬಿಜ್ಜಳ ಹೊಳಿಯಲ್ಲಿ । ಕೊಡುವೆನು ಖಡ್ಗವ ।
ಕೂಡಿಕೊಂಡು ನಿನ್ನ ಪರಿವಾರ-ನಡೆ ಬೇಗ
ತಡಮಾಡ ಬೇಡ ಎನುತಲಿ ॥ ೩೪

ನದಿಯ ಮೇಲೆ ತನ್ನ । ಹೊದಿಕೆಯ ಹಾಸಿದನು ।
ಮೋದದಿ ರೇವಾಯಿಯ ಕರೆದನು-ಶ್ರೀಗುರು
ಉದಕದ ಮೇಲೆ ಕುಳಿತನು ॥ ೩೫

ಅರಸ ಪರಿವಾರೊಡನೆ । ಹರಿಗೋಲನೇರಿದನು ।
ಪೂರೈಸಲು ಮನ ಬಯಕೆಯ-ಬಲು ವೇಗ
ಹರಿಗೋಲ ಕೆರೆಯಲ್ಲಿ ನಡಿಸೆಂದನು ॥ ೩೬

ಒಡೆಯ ರೇವಣಸಿದ್ಧ । ತೊಡಿಮೇಲೆ ರೇವಾಯಿ ।
ಮಡುವಿನ ಕಡೆಗೆ ಹೊರಟಹನು-ರಕ್ಕಸರೆ
ಕಡೆಗೆ ಬರ್ರೆಂದು ಗುಡುಗಿದನು ॥ ೩೭

ಮಡುವಿನೊಳಗಿನ ಸುರಗಿ । ಗಡಗಡ ಗುಡಗಿತ್ತು ।
ಸಿಡಿಲಿನಂತೆ ಮಿಂಚು ಹೊಳದಿತ್ತು-ಅದು ಕಂಡು
ನಡುಗಿದರು ಬಂದ ಜನರೆಲ್ಲ ॥ ೩೮

ಉರಿಯ ಕಂಡು ಬಿಜ್ಜಳ ಗಾ । ಬರಿ ಗೊಂಡಿಹನು ।
ಸುರಗಿ ನೋಡದಲೆ ಕಂಣು ಮುಚ್ಚಿ-ಪರಿವಾರ
ತಿರುಗಿ ನಡೆಯಿರಿ ಸಾಕೆಂದನು ॥ ೩೯

ಅಂಜಿಲ್ಲ ಆಳುಕಿಲ್ಲ । ಕೆಂಜೆಡೆಯನ ಹಸ್ತದ ।
ಹಿಂಜರಿಯದೆ ಹಿಡಿದಾಳ ರೇವಕ್ಕ-ಸುರಗಿ
ಮಂಜಾಗಿ ಕಂಡವು ಜನಕೆಲ್ಲ ॥ ೪೦

ರೇವಾಯಿಯ ಕೈಗತ್ತಿ । ಹಾವಾಗಿ ಕಂಡಿಹವು ।
ಭಾವ ಹೆಡಿಯಾಗಿ ಮೂಡಿತ್ತು-ಬಿಜ್ಜಳನ
ಜೀವ ಹೆದರಿತ್ತು ಹಿಡಿಯಲು ॥ ೪೧

ಎಚ್ಚರಿದ್ದು ಕಂಣು । ಮುಚಿದನು ಬಿಜ್ಜಳ ।
ಬೆಚ್ಚಿಬಿದ್ದರಸ ನುಡಿದನು-ಮನದ
ಬಿಚ್ಚಿಟ್ಟ ಬಯಕೆ ಬರಿದಾಯ್ತು ॥ ೪೨

ಸಾಷ್ಟಾಂಗವೆರಗಿದನು । ಶ್ರೇಷ್ಠ ಸದ್ಗುರುವಿಗೆ ।
ನಷ್ಟವಾಯಿತು ಎನ್ನ ಮನದಾಸೆ-ಎನ್ನಯ್ಯ
ಕಷ್ಟ ಪರಿಹಾರ ಮಾಡಯ್ಯ ॥ ೪೩

ಹೊಳೆಯ ದಾಟಿಸಿರಿ । ವೇಳೆ ಕಳೆಯದಿರಿ ।
ಉಳಿದಿಲ್ಲ ಸುರಗಿಯ ದುರಾಶೆ-ಹೇ ದೇವ
ಬೆಳಕು ಮೂಡಿಹುದು ಮನದಲ್ಲಿ ॥ ೪೪

ಪುಣ್ಯದ ಪುತ್ಥಳಿ । ಗಣ್ಯನೆ ನಾ ಕಂಡೆ ।
ಸಂಣತನ ಕಳೆದು ಪೂರ್ವದ-ಶ್ರೀಗುರು
ಪುಣ್ಯ ಫಲಿಸಿತು ನಿಮ್ಮಿಂದ ॥ ೪೫

ತಿಳಿಯದೆ ಎಳೆಜೀವ । ಹೊಳಿಪಾಲ ಮಾಡೂತ ।
ಅಳಿಯುದ ಪಾಪಕ್ಕೊಳಗಾಗಿ-ನರಜನ್ಮ
ಅಳಿದರೂ ಕರ್ಮ ಉಳಿತಿತ್ತು ॥ ೪೬

ಸ್ವಾರ್ಥಕ್ಕಾಗಿ ಸಾಸಿರ । ವ್ಯರ್ಥಜೀವಗಳ ಕಳೆದು ।
ಧೂರ್ತ ಗೋರಖ ನಿನಗೇನು-ಸಿಗುವದು
ಮರ್ತ್ಯದಿ ಅಪಕೀರ್ತಿ ಬರುವದು ॥ ೪೭

" ಸುಡು ನಿನ್ನ ದುಷ್ಕರ್ಮ । ಬಿಡಲಾರೆ ಏ ಜೋಗಿ ।
ಕಡು ತಪ್ಪಿಗಾಗಿ ನಿಮಗೆಲ್ಲ-ನಾನಿನ್ನು
ಕೂಡಿಸಿ ಬಿಡುವೆನು ನದಿಯೊಳು " ॥ ೪೮

ಕಡು ಕೋಪಗೊಂಡು ತಾ । ಗುಡುಗುತ್ತ ನುಡದೀದ ।
ಒಡೆಯ ಬಿಜ್ಜಳ ರಾಯನ-ಮಾತುಗಳು
ಬಡೆದವು ಜೋಗಿಗಳ ಎದೆಗೆ ॥ ೪೯

ಕೋಪ ಬಿಡು ಇನ್ನೇತಕೆ । ಭೂಪತಿ ಬಿಜ್ಜಳನೆ ।
ಪಾಪ ಇನ್ನೊಂದು ಘಟಿಸುವದು-ನಮ್ಮಿಂದ
ಆಪತ್ತು ಬೇಡೆಂದನು ಗುರುದೇವ ॥ ೫೦

ಹೋಗಿರಿ ಜೋಗಿಯರೆ । ಸಾಗಿ ನಿಮ್ಮೂರೂರಿಗೆ ।
ಹಗೆಗಳಿಗೂ ಕೇಡಕು ಮಾಡದಿರಿ-ಮಾನವ
ಸುಗಮ ಮಾರ್ಗವ ಅರಿಯಿರಿ ॥ ೫೧

ಹಿಗ್ಗಿದರು ಮನದೋಳು । ಬಾಗಿ ಭಯ ಭಕ್ತಿಲಿ ।
ಯೋಗಿಯೆ ನಿಮ್ಮಿಂದ ಪಾವನ-ಆದೇವು
ಜೋಗಿಯರು ನುಡಿದರು ನಯದಿಂದ ॥ ೫೨

ಜೀವ ಹೊಡೆಯಲು ಬಂದ । ಸಾವಿರ ಜೋಗಿಗಳು ।
ಜೀವ ಉಳಿಸಿಕೊಂಡು ಹೊರಟರು-ಪರಮಂಗೆ
ಭಾವ ಬಕುತಿಯಲಿ ಶರಣೆಂದು ॥ ೫೩

ಎಳೆಯ ಚಂದಿರನಂಥ । ಕಳೆಯುಳ್ಳ ಕಾಂತಿಯು ।
ಸೆಳೆದಿತ್ತು ಬಿಜ್ಜಳನ ಕಂಣ್‌ಮನ-ರೇವಕ್ಕನ
ಅಳಿಯದ ಶಿವತೇಜ ರೂಪವು ॥ ೫೪

ಬಲಿಕೊಡಲು ತಂದಂಥ । ಶಾಲ ಹೊದ್ದಿರುವಂಥ ।
ಬಾಲಿಯ ರೂಪು ಸಾಸಿರ-ಪಾಲಾಗಿ
ಲೋಲದಿ ಬಿಜ್ಜಳಗೆ ಕಂಡೀತು ॥ ೫೫

ತಂದಿರುವ ಕನ್ಯೆಯರಾ- । ನಂದದಿ ಕಳಹೊತ ।
ತಂದೆತಾಯ್‌ಗಳಿಗೆ ಈ ಅರಸನ-ವಂದನೆ
ನೊಂದವರೀಗರುಹಿರಿ ಎಂದನು ॥ ೫೬

ಪರಿವಾರ ಕಳುಹಿಸಿ । ವರ ಕನ್ಯೆಯರ ಗೂಡ ।
ಅರಿಯದೆ ಮಾಡಿದ ಕರ್ಮಕ್ಕೆ-ಮನದೊಳು
ಮರುಗಿದನು ರಾಯ ಬಿಜ್ಜಳ ॥ ೫೭

ಶೋಕಸಾಗರದೊಳು । ನೂಕಿದ ಕರುಳೀಗೆ ।
ಜೋಕೆಮಾಡಿ ಮತ್ತು ದಂಡೆಗೆ-ತಂದದ್ದು
ಮೂಕಾಗಿ ನೋಡಿದರು ತಾಯ್‌ತಂದೆ ॥ ೫೮

ಶರಣೆ ಜಾಕಲೆ ತಾಯಿಯು । ವರಣಸೆ ಕೇಳೂತ ।
ಶರಣು ಶರಣೆಂದರು ತಾಯ್‌ತಂದೆ-ಹಡೆದವ್ವ
ಕಾರಣಿಕಳಾಗಿ ಜನಿಸಿಹಳು ॥ ೫೯

ಜಾಕಲೆ ತಾಯಿಯು । ಪಕ್ವ ಪುಣ್ಯದ ಫಲವು ।
ದಿಕ್ಕೆಲ್ಲ ಕೀರುತಿ ಸಾರಿತ್ತು-ಸುಕನ್ಯೆ
ರೇವಕ್ಕಗೆ ಶುಭವ ಕೋರಿದರು ॥ ೬೦

ಬಾಲೆಯರಿಗೆ ಘನ । ಲೀಲೆಯಿಂದ ಆಸು ನೀಡಿ ।
ಬಾಲ ರುದ್ರಮುನಿ ಸಹಿತ-ಹೊರಟನು
ಲೀಲೆಯಿಂದ ರೇವಣಸಿದ್ಧನು ॥ ೬೧

ಮುನಿಸಿದ್ಧಯತಿಗಳಿಗೆ । ಮನವಾರೆ ಅರಹೂತ ।
ಗ್ಯಾನದ ಕೀಲವ ತಿಳಿಸೂತ-ಸಂಚಾರ
ಅನುದಿನದಲಿ ಯೋಗಿ ಮಾಡುತಿರೆ ॥ ೬೨

ಖರ್ಪರ ಜೋಗಿಯ । ದರ್ಪವ ಕಳೆದಾತ ।
ಸರ್ಪಭೂಷಣನ ಶಿವತತ್ವ-ಬಿರೂತ
ಬರ್ಪ ಕುರುಹವ ಅರುವೂತ ॥ ೬೩

ಮೂರು ತನುವಿನಿಂದ । ಮೂರು ಲಿಂಗದ ಪೂಜೆಯ ।
ಮೂರೆಗ್ಹೊತ್ತು ಮಾಡುವ ಶಿವಯೋಗಿ-ಅರಿಯುವ
ಮೂರು ಕಾಲದ ದಿವ್ಯಜ್ಞಾನ ॥ ೬೪

ಸೊನ್ನದಂದಣ ಇಳಿದು । ಹೊನ್ನ ಆವುಗಿ ಬಿಟ್ಟು ।
ಸೊನ್ನಲಗಿ ಸೀಮಿಗೆ ಶರಣೆಂದು-ಬಾಗಿಹರು
ಸನ್ನುತ ಶಿವರೇವಣಸಿದ್ಧರು ॥ ೬೫

ದೇವರ ಗುಡಿ ಇಲ್ಲ । ಯಾವ ಕ್ಷೇತ್ರವು ಅಲ್ಲ ।
ಆವೂಗಿ ತಗೆದು ನಡೆಯುವ-ಕುರುಹು
ಆವ ಶಿಷ್ಯಗು ತಿಳದಿಲ್ಲ ॥ ೬೬

ನೂರಾರು ಶಿಷ್ಯರು । ಸಾರಿನಡೆದರು ಗುರು ।
ಪುರಜನರೆಲ್ಲ ಅಚ್ಚರಿಗೊಂಡು-ನುಡಿದರು
ಹರ ಇಳಿದನೇ ಕೈಲಾಸದಿಂದ ॥ ೬೭

ಉಘೆ ಎಂಬೊ ಶಬುದವು | ಮುಗಿಲಾಗಿ ನಿಂತೀತು |
ಮುಗಿಲೀಗೆ ಹೋಗಿ ಮುಟ್ಟೀತು-ಶಿವಯೋಗಿ
ಮಗ್ನ ಆಗಿರುವರು ಮನದೊಳು ‖ ೧೮

'ಉಘೆ ಚಾಂಗು ಭಲ' | ಗಗನಕ್ಕೆ ಮುಟ್ಟಿತ್ತು |
ಬಾಗಿ ನೋಡಿದರು ಬಾಗಿಲಿಗೆ-ಮುನಿಮುಂದೆ
ಯೋಗಿ ರೇವಣಸಿದ್ಧರ ಬರುವನು ‖ ೧೯

ಸನ್ನುತ ಗುರುವೀಗೆ | ಬಿನ್ನಹವ ಮಾಡಿಲ್ಲ |
ತನ್ನಿಂದ ತಾನೆ ಬಂದರೆಂತು-ನಮ್ಮಸಿಗೆ
ಏನು ಹಾಸಲೆವ್ವ ಯೋಗಿಗೆ ‖ ೨೦

ಮುದ್ದು ಗೌಡರಾಗ | ಎದ್ದು ಪಾದಕೆ ಎರಗಿ |
ಬುದ್ಧಿ ಬರಬೇಕು ಮನೆಯೊಳಗೆ-ಬಡವರ
ಇದ್ದ ಬಕುತೀಯ ಕೊಳಬೇಕು ‖ ೨೧

ಸುಗ್ಗಲವ್ವನ ಕಂಡು | ಸದ್‌ಗದಿತ ಶಿವಯೋಗಿ |
ಹಿಗ್ಗೂತ ಕಂಠವು ತುಂಬೀತು-ತುಳಕೀತು
ಕಂಗಳ ಧಾರೆಗಟ್ಟೀತು ‖ ೨೨

ಬಾಗಿಲೊಳಗೆ ಬಂದು | ಸುಗ್ಗಲವ್ವೆಯ ಮುಂದೆ |
ಬಾಗಿಹರು ಶಿವಯೋಗಿ ತಾಯೆಎಂದು-ಸುಗ್ಗವ್ವೆ
ಆಗ ಬೆರಗಾಗಿ ನೋಡುತಿರೆ ‖ ೨೩

ತಾಯ್ ಉಸಿರಡಗಿತ್ತು | ಬಾಯ್‌ನುಡಿ ತಡದಿತ್ತು |
ಕೈಯ್‌ಮಾಡಿ ಕೇಳಲು ಬರಲಿಲ್ಲ-ಸುಗ್ಗವ್ವೆಯ
ಮೈಯೆಲ್ಲ ಬೆವತು ತಂಪಾಯ್ತು ‖ ೨೪

ಏನೇನರಿಯದ ಮಹಾ | ಮೌನತಾಳಿದ ತಾಯೆ |
ಅನುರಾಗದಿ ಹೇಳಲು ಬಂದಿರುವೆ-ನಿನ್ನುದರದಿ
ಘನ ಶಿವಯೋಗಿ ಉದಿಸುವನು ‖ ೨೫

ಕಂಣು ತೆರೆದಳಾಗ | ಕನಸ ಕಂಡಂಗಾಯಿತು |
ಬಂಣಿಪ ಯೋಗಿಯ ನುಡಿಕೇಳಿ-ತಾಯವ್ವಗೆ
ತಂಣೀರ ಎರೆದಂಗಾಯಿತು ‖ ೨೬

ಶುದ್ಧ ಆಚಾರದಿಂದ | ಬದ್ಧ ಕಂಕಣರಾದ |
ಸಿದ್ಧ ಪ್ರಸಾದಿ ಸತಿಪತಿ-ಉದರದಿ-ಪ್ರ-
ಸಿದ್ಧ ಶಿವಯೋಗಿಯ ಅವತಾರ || ೭೭

ಮುದ್ದಪ್ಪ ನಿಂತಿಹನು | ಸದ್ದು ಇಲ್ಲದಂತೆ |
ಸುದ್ದಿ ಕೇಳಿದ ಮನ ಗದ್ದಲಕೆ-ಬಿದ್ದೀತು
ಸಾಧ್ಯವದೆಂತು ನಂಬುವದು || ೭೮

ಹೇಳಿದ್ದು ನಿಜವೇನು! | ಕೇಳಿದ್ದು ಹೌದೇನು |
ಮೇಳೈಸಿ ನಿಂತಿರುವ ಜನಕೆಲ್ಲ-ನೋಡಿದರೆ
ಗೋಳಕ್ಕೆ ಬಿದ್ದಿಹರು ತನ್ನಂತೆ || ೭೯

ತಾಯಿ ಸುಗ್ಗಲವ್ವೆ | ಮಾಯಾತ್ಮಕ ಮಗನಲ್ಲ |
ಕಾಯವೆ ಕೈಲಾಸ ಮಾಡುವನು-ನಿನ್ನಮಗ
ಹಾಯಾಗಿ ಶಿವನ ಕೂಡುವನು|| ೮೦

ಎಳ್ಳೀನ ಉದರದ | ತಿಳಿಯ ತೈಲಿನ ಇರವು |
ಕಳಾತೀತನು ನಿನ್ನ ಗರ್ಭದಲಿ-ಮೂಡಿ ತಾ
ಸೆಳೆದು ತಂದನು ಸೊನ್ನಲಗಿಗೆ || ೮೧

ನಂಬಿರಿ ಜನರೆಲ್ಲ | ಸಾಂಬನ ಮಹಿಮೆಯ |
ಇಂಬುಗೊಡಿರಿ ನಿಮ್ಮ ಮನದೊಳು-ಉದಿಸುವ
ಸಾಂಬ ಶಿವನು ಇವರ ಉದರದಲಿ || ೮೨

ರೇವಣಸಿದ್ಧನು ಬಂದು | ಶಿವಯೋಗಿ ಜನನದ |
ಶಿವಸಂದೇಶವ ಸಾರಿ ತಾ-ಹೊರಟನು
ಅವಲೋಕನದಾಚೆ ದೂರ ದೂರ || ೮೩

ಬಂದ ಜನರು ಬಲು | ನಂದದಿ ತಿರುಗಿತು |
ಬಂಧನ ಹರಿಸುವ ಶಿವಯೋಗಿ-ದರುಶನ-
ದಿ ಧನ್ಯ ಧನ್ಯವೆಂದು ಹರಸೂತ || ೮೪

ಗುರುವರನು ಬಂದದ್ದು | ಹರಡಿತ್ತು ಶುಭಸುದ್ದಿ |
ಊರರಸ ನನ್ನಪ್ಪ ಸತಿಯೊಡನೆ-ಬಂದು ತಾ
ಎರಗಿದನು ಗುರುವೀನ ಪಾದಕ್ಕೆ || ೮೫

ನನ್ನಪ್ಪ ದೇಸಾಯಿ । ಬಿನ್ನಹ ಮಾಡಿದನು ।
ಮಾನ್ಯ ಸದ್ಗುರುವೆ ನಮ್ಮನೆಗೆ-ದಯಮಾಡಿ
ವಿನಯದಿ ಬೇಡಿಕೊಳ್ಳುವೆವು ॥ ೮೬

ಕೇರಿಕೇರಿಗೆ ಹೋಗಿ । ಸಾರಿರಿ ಡಂಗೂರ ।
ಗುರುವರೇಣ್ಯನ ಪರಸಾದ-ಕೊಳ್ಳಲು
ಹಿರಿ ಕಿರಿಯರು ಬರಬೇಕು ॥ ೮೭

ವೃಷ್ಟಾನ್ನ ಎಡಿಮಾಡಿ । ಸಾಷ್ಟಾಂಗವೆರಗಿದಳು ।
ಶ್ರೇಷ್ಠ ಸದ್‌ಗುರುವೆ ಸಲ್ಲಲಿ-ಪರಸಾದ
ಇಷ್ಟಪ್ರಾಣ ಭಾವ ಲಿಂಗಕ್ಕೆ ॥ ೮೮

ಶರಣಿ ಚಾಮಲದೇವಿ । ಹರುಷದಿ ಕೇಳಿದಳು ।
ಊರ ಗೌಡರ ಉದರದಿ-ಹುಟ್ಟುವನೆ
ಪರಮಶಿವ ಸಿದ್ಧಯೋಗಿಯು ॥ ೮೯

ಸೊನ್ನಲಗಿ ಅರಸಿನೀ । ನನ್ನವ್ವ ಕೇಳವ್ವ ।
ಸನ್ನುತ ಶಿವಯೋಗಿ ಉದಯಿಸಿ-ನಿನ್ನೂರ
ಉನ್ನತ ಕೈಲಾಸ ಮಾಡುವನು ॥ ೯೦

ಜಾತರಿಗ್ಹೊರಟಂತೆ । ಆತುರದಿ ಜನ ಕೂಡಿ ।
ಭೂತೇಶ ರೇವಣಸಿದ್ಧರ-ಪರಸಾದ
ಅತಿ ಬಕುತಿಯಲಿ ಸಲಿಸೂತ ॥ ೯೧

ಬಂಣಿಸಲಾರೆವು । ಧನ್ಯ ಶಿವಯೋಗಿಯೆ ।
ಉನ್ನತ ನಿಮ್ಮ ಮಹಿಮೆ-ಈ ಜಗದ
ಕುನ್ನಿ ಮಾನವರೇನು ಅರಿವರು ॥ ೯೨

ಮರಳಿ ಸೊನ್ನಲಿಗಿಂದ । ಗುರು ರೇವಣಸಿದ್ಧರು ।
ತೆರಳಿದರು ಶ್ರೀಗಿರಿ ಸ್ಥಲಗಳ-ತೋರುತ
ವರ ರುದ್ರಮುನಿ ತನುಜಂಗೆ ॥ ೯೩

ಸತಿಪತಿ ಗೌಡರು । ಅತಿ ಹರುಷಗೊಂಡಿಹರು ।
ಪತಿತಪಾವನ ಗುರುರಾಯ-ಆಗಮಿಸಿ
ಅತಿರೀತಿ ಸಾರಿ ತೆರಳಿದರು ॥ ೯೪

ಕಾಯ ಪಲ್ಲಟವಾಗಿ । ತಾಯ್‌ತನ ತೋರಿತು ।
ಹೇಯ ಸಂಸಾರಕ್ಕೆ ಹೇಸಿದ-ಸುಗ್ಗಲವ್ವೆ
ಮಾಯಾತೀತನ ತಾಯಿ ಆಗುವಳು ॥ ೯೫

ಅವಯುವಗಳು ತುಂಬಿ । ಶಿವ ಕುರುಹು ಮೂಡಿಹವು ।
ಶಿವಯೋಗಿ ಜನ್ಮ ಭೂಮಿಯು-ಅಣಿಯಾಗಿ
ಭವಹರನ ಬರವ ಕಾಯುವದು ॥ ೯೬

ಶಿವಯೋಗಿ ಸಾರಲು । ಅವಯುವ ತುಂಬಿದವು ।
ಶಿವತೇಜದಿಂದ ಬೆಳಗಿದಳು-ಸುಗಲವ್ವೆ
ನವಜೀವ ತುಂಬುಕಾಯಳಾಗಿ ॥ ೯೭

ತುಂಬು ಜೀವನದ । ತುಂಬನುಭಾವದ ।
ಬಿಂಬಾಧರೆ ಶಿವಶಾಂಭವಿಯ-ಮಗಳು
ಸಂಭ್ರಮದಿ ಕಾಲ ಕಳೆವಳು ॥ ೯೮

ಉರಗ ಹಾಲು ಕಾರಿತು । ನೆರಳು ತಾ ನಡದೀತು ।
ಹರನ ವರವ ಆಗಲು ಕೇಳವ್ವ-ಪ್ರಾಯದ
ಮೆರಗು ಬಾಡಿದ್ದು ಮೂಡೀತು ॥ ೯೯

Cl. No. Q23 33N65
Acc. No. 199

THE PRINTERS (MYSORE) PRIVATE LTD.
LIBRARY
Accn. No..........
Date.......... ...
BANGALORE

ಸಂಧಿ ೩

ಜಗವೆಲ್ಲ ಮಲಗಿತ್ತು । ಯೋಗಿ ತಾ ಎಚ್ಚತ್ತು ।
ಬಗೆದು ತಾಯ್‌ತನ ಹೊರಬಂದ-ಸಿದ್ಧರಾಮ
ಮುಗಿಲ ಚಂದಿರನ ಬೆಳಗಿನಲಿ ॥ ೧

ಬೇನಿಲ್ಲ ಬೆವರಿಲ್ಲ । ತನು ಮನಕೆ ದಣುವಿಲ್ಲ ।
ಕನಿಕರದಿ ತಾಯಿ ಮಿಡುಕಿಲ್ಲ-ಪರಮ ಅ-
ಯೋನಿಜಗೆ ಜನುಮ ಕೊಟ್ಟಿಹಳು ॥ ೨

ಥರಥರ ನಡುಗಿಲ್ಲ । ನಾರಿಯರ ನೆರವಿಲ್ಲ ।
ಮೋರೆ ಕೆಡಿಸಿ ಬೇನೆ ತಿನಲಿಲ್ಲ-ಸುಗ್ಗವ್ವೆ
ಪರಮನ ತಾಯಾಗಿ ಮಲಗಿಹಳು ॥ ೩

ಮುಟ್ಟು ಮೈಲಿಗೆ ಇಲ್ಲ । ಬಟ್ಟೆಲಗಂಡೇನ ।
ದಿಟಯೋಗಿ ತಾ ಮಲಗಿಹನು-ಸಿದ್ಧರಾಮ
ದಿಟ್ಟಿ ಶಿವನಲ್ಲಿ ಇಟ್ಟಿಹನು ॥ ೪

ಹಸನೀಲಿಯ ಕಂಣು। ನಸುಗೆಂಪಿನಲಿ ನಿಂತು।
ಅಸು ಬೆಳಗಿನಲ್ಲಿ ಕೂಡಿತ್ತು-ಸಿದ್ಧೇಶ
ಶಿಶು ಶಿವತೇಜ ಹೊಂದೂತ॥ ೫

ತೊಳೆದ ಮುತ್ತಿನಂತೆ। ಹೊಳೆವ ಮಾಣಿಕದಂತೆ।
ಒಳಹೊರಗು ಬೆಳಗು ಬೀರಿತು-ನ್ಯೈಬಂಣ
ಥಳಥಳಿಪ ಕಾಂತಿ ಹೊಳದೀತು॥ ೬

ಸಿದ್ಧರಾಮನು ಭುವಿಗೆ। ಬಿದ್ದ ಆ ಚಣದಲ್ಲಿ।
ಮುದ್ದಾಡಿ ಎತ್ತಿದಳು ಗಿರಿಜಾತೆ-ನನಕಂದ
ಉದ್ಧರಿಸು ಭೂಲೋಕ ಮಾನವರ॥ ೭

ಕರಗಳಿ ತೊಟ್ಟಿಲ। ಹರಸೂತ ತೂಗಿದಳು।
ಹರಸಿದ್ಧರಾಮನೆ ಜಯ ಜಯ-ಮಂಗಲ
ಸಿರದಡವಿ ಮಾದೇವಿ ಪಾಡಿದಳು॥ ೮

ಹೆತ್ತವ್ವ ಎಚ್ಚತ್ತು। ಅತ್ತಿತ್ತ ನೋಡಿದಳು।
ಅತ್ತತ್ತು ಭೂಮಿಗೆ ಬಿದ್ದಿಲ್ಲ-ಕೂಸಿನ
ಸುತ್ತುಮುತ್ತು ಬೆಳಕು ಬೀರಿತ್ತು॥ ೯

ನಂಜುಂಡ ಜೀವದ। ಬಂಜೆತನವಳಿಯಿತು।
ಕೆಂಜೆಡೆಯವನ ದಯದಿಂದ-ಬದುಕಿನ
ಸಂಜೆ ಮುಂಜಾವು ಆಯಿತು॥ ೧೦

ಒಳಹೊರಗು ಶಿವತೇಜ। ತೊಳಗಿ ಬೆಳಗಿತ್ತು।
ಎಳೆ ಮುಖಕಾಂತಿ ತೇಲಿತು-ಸಿದ್ಧನ
ಕಳೆಯು ಶಿವನಂತೆ ಹೊಳೆದೀತು॥ ೧೧

ಬೆಳಗಾಗುತಲೀ ಸುದ್ದಿ। ಏಳುತ ಜನಕೇಳಿ।
ಹಳ್ಳಿ ತುಂಬೆಲ್ಲ ಹರಡೀತು-ದೂರದೂರ
ಕೇಳುತ ಅಚ್ಚರಿಗೊಂಡಿಹರು॥ ೧೨

ಸುಗ್ಗಲವ್ವೆ ಹಡೆದ। ಹಿಗ್ಗೀನ ಸುಗ್ಗಿಯು।
ಸಾಗಿ ಬಂದಿತ್ತ ನಮ್ಮನಿಗೆ-ಸತ್ಯಕ್ಕ
ಹೋಗಿ ನೋಡೋಣ ಕೂಸಿಗೆ॥ ೧೩

ಹೆಚ್ಚಿತು ಶಿವಭಕ್ತಿ । ಮೆಚ್ಚಿದರು ಲೀಲೆಯ ।
ಅಚ್ಚರಿ ಗೊಂಡರು ಕಂದನ–ಕಂಡವರು
ಸಚ್ಚಿದಾನಂದನ ನುತಿಸಿದರು ॥ ೧೪

ಒಂಭತ್ತು ತಿಂಗಳು । ತುಂಬಿಲ್ಲ ತಾಯೀಗೆ ।
ಗೊಂಬಿಯಂಥ ಕೂಸು ಬದುಕುವದು–ಹೆಂಗೆಂದು
ಕಂಬನಿ ಸುರಿಸಿದರು ನಾರಿಯರು ॥ ೧೫

ಎವೆಯಿಕ್ಕದ ಕಂದನ । ಹವ್‌ಹಾರಿ ನೋಡೂತ ।
ಸಾವ ಬಂತೇನವ್ವ ಕೂಸಿಗೆ– ಈ ಪರಿ
ದೇವರ ಕೋಪೇನ ತಾಯಿಗೆ ॥ ೧೬

ಮುತ್ತಿನಂಥ ಕೂಸು । ಅತ್ತಿದ್ದು ಕೇಳಿಲ್ಲ ।
ಎತ್ತಿಕೊಂಡರೆ ನಗಲಿಲ್ಲ–ಈ ಕೂಸು
ಅತ್ತಿಲ್ಲ ಕೆಳಗೆ ಇಳುಹಿದರು ॥ ೧೭

ಅರವತ್ತು ವರುಷಕ್ಕೆ । ಅರುಹಲು ಹುಟ್ಟಿದನು
ಅರವು ಮರವಿನ ತೊಡಕವ–ಬಿಡಿಸಲು
ಕುರುಹು ಆಗಿ ಬಂದನು ಭೂಮಿಗೆ ॥ ೧೮

ಆಕಳಿಕೆ ಅವಗಿಲ್ಲ । ಬಿಕಿಬಿಕ್ಕಿ ಅತ್ತಿಲ್ಲ ।
ಮಕ್ಕಳಂತೆ ಕೈಕಾಲು ಜಾಡಿಸಿ–ಆಡಲಿಲ್ಲ
ನಕ್ಕು ತಾ ತಾಯಿಗೆ ನಗಿಸಿಲ್ಲ ॥ ೧೯

ಅತ್ತತ್ತು ದಣದಿಲ್ಲ । ಹೆತ್ತವ್ವಗ ಕುಣಿಸಿಲ್ಲ ।
ಸುತ್ತ ನೆರೆಯವರ ಜಾಗರಣೆ–ಮಾಡಿಸಿಲ್ಲ
ಸತ್-ಚಿತ್-ಆನಂದ ಮೂರುತಿ ॥ ೨೦

ಹಸಿದ್ಹಾಲು ಕುಡಿದಿಲ್ಲ । ತುಸು ನಿದ್ದೆ ಮಾಡಿಲ್ಲ ।
ಉಸಿರ್ಹಾಕಿ ಕಂಣು ಮುಚ್ಚಿಲ್ಲ–ಯೋಗಿಯು
ಕೂಸಾಗಿ ಚಿಟಚಿಟ ಚೀರಿಲ್ಲ ॥ ೨೧

ಸ್ವಾನಂದ ಲೀಲೆಯಲಿ । ಸಾನಂದ ಮೂರುತಿ ।
ತಾನೊಂದೆಯಾಗಿ ಆಡುತಿರೆ–ಜನರೆಲ್ಲ
ಏನೊಂದು ಪರಿಪರಿ ನುಡಿವರು ॥ ೨೨

ಅಮರತ್ವ ಅರಿತವರು । ವಿಮಲತ್ವ ತಿಳಿದವರು ।
ಸುಮತಿಯರು ಮಾತನಾಡಿದರು–ಈ ಕೂಸು
ಅಮಮ ! ದೇವನ ಲೀಲೆಯದು ॥ ೨೩

ಅವರವರ ಕಂಣಿಗೆ । ಭಾವದಿ ಕಾಣೂತ ।
ಸಾವು ಹುಟ್ಟಿನ ಹೊರೆಯನು–ಹರಿಯುತ ಮಾ-
ನವರೊಳು ಬೆಳೆಯುತಿರೆ ॥ ೨೪

ಪರಮ ಹರುಷದಿಂದ । ಪುರಜನರೆಲ್ಲರು ।
ನೆರೆದು ತೊಟ್ಟಿಲ ಕಾರ್ಯಕ್ಕೆ–ಸೊನ್ನಲ-
ಪುರವೆಲ್ಲ ಸಿಂಗಾರ ಮಾಡಿದರು ॥ ೨೫

ಕಳೆಗುಂದದ ಕೂಸು । ತೊಳೆದ ಮುತ್ತಿನಂತೆ ।
ಬೆಳೆದನು ತಿಂಗಳ ಬೆಳಗಿನ–ಪರಿಕಂಡು ಬೆ-
ರಳು ಕಚ್ಚಿದರು ಪುರಜನರು ॥ ೨೬

ಬಂಧು ಬಳಗಕ್ಕೆಲ್ಲ । ಅಂದಳು ಸುಗ್ಗಲವ್ವೆ ।
ಕಂದಗೆ ಹೆಸರೇನು ಇಡಬೇಕು–ನೀವೆಲ್ಲ
ಒಂದೆ ಮನಸಿನಿಂದ ಹೇಳಿರಿ ॥ ೨೭

ಗುಜುಗುಜು ಗುಣುಗುತ । ಗುಜ್ಜೆಯರೆಂದರು ।
ಸೋಜಿಗವಲ್ಲೇನೆ ಹಡೆದದ್ದು–ಮನೆದೇವರ
ತೇಜ ಮೂಡಿ ಧರೆಗೆ ಬಂದೀತು ॥ ೨೮

ಮನಿದೇವ ಕೊಟ್ಟನು । ಅನ್ಯರ ಹೆಸರೇಕೆ ।
ಮನ್ನಿಸಿ ಹೆಸರಿಡು ತಾಯವ್ವ–ಕಂದಗೆ
ಮನಿದೇವ ಧೂಳಿಮಾಂಕಾಳ ॥ ೨೯

ಸಿಟ್ಟಿನ ದೇವರು । ಕೊಟ್ಟಿರಲಿಲ್ಲ ಕೂಸು ।
ಕಟ್ಟಕಡೆಗೆ ಕೊಟ್ಟನು–ಸುಗ್ಗವ್ವೆ
ಮೊಟ್ಟಮೊದಲವನ ನೆನೆಯವ್ವ ॥ ೩೦

ದೇವರ ಸಿಟ್ಟೆಂಬುದು । ಭಾವಕ್ಕೆ ಬಡಿಯಿತು ।
ಯಾವ ಮಾತಾಡದೆ ಸತಿಪತಿ–ಒಪ್ಪುತ
ದೇವ ಮಾಂಕಾಳನೆಂದು ಕರೆದರು ॥ ೩೧

ಬಾಗಿಣಕೆ ಬಂದವರು । ಜೋಗುಳ ಪಾಡಿರೆ ।
ಯೋಗಿಯು ವರದಿಂದ ಹುಟ್ಟಿದ-ಚಲುವಗೆ
ಬಾಗಿ ಹೆಸರಿಡರಿ ಮುದದಿಂದ ॥ ೩೨

ರೂಢಿಯ ಕೈಯಾಗ । ಆರೂಢ ಸಿಕ್ಕಿಹನು ।
ಜೋಡಾಗಿ ಬಪ್ಪಣ ಆಡಿಸುತ-ಕಂದನ
ಸಡಗರದಿ ತೂಗಿರೆ ಜೊ ಜೊ ಜೊ ॥ ೩೩

ಹುಟ್ಟುವ ಮುನ್ನವೆ । ದಿಟ ರೇವಣಸಿದ್ಧನ ।
ದಿಟ್ಟಿಗೆ ಕಂಡ ವರಶಿಶುವೆ- ಈ ನಮ್ಮ
ತೊಟ್ಟಿಲ ಕೂಸಾದೆ ಜೊ ಜೊ ಜೊ ॥ ೩೪

ಸಾಟಿಯ ದಾಟೀದ । ಕೋಟಿಗೊಬ್ಬಳು ತಾಯಿ ।
ಸಾಟಿ ನಿನಗಾರು ಸುಗಲವ್ವೆ-ಜೋಗುಳ
ಸಟಿ ಅಲ್ಲ ದಿಟವು ಜೊ ಜೊ ಜೊ ॥ ೩೫

ಮುದ್ದು ಗೌಡರ ಮನೆ । ಮುದ್ದಿನ ಕಣಿಯಾಗಿ ।
ಉದ್ಧರಿಸ ಬಂದೆ ನೀ ಲೋಕಕ್ಕೆ-ಸೊನ್ನಲಗಿ
ಸಿದ್ಧ ಸುಕ್ಷೇತ್ರ ಜೊ ಜೊ ಜೊ ॥ ೩೬

ಮರಡಿ ಮುದ್ದಪ್ಪನ । ವರ ವಂಶ ಕೊನರಿತು ।
ತರು ಲತೆ ಫಲ ನೀಡಲಿ-ಹೆತ್ತವರ
ಕರಳು ತಂಣಗೆ ಜೊ ಜೊ ಜೊ ॥ ೩೭

ಮುತ್ತಿನಂಥ ಕೂಸು । ಎತ್ತಿಕೊಳ್ಳಿರೆ ತಾಯಿ ।
ಅತ್ತದ್ದು ಯಾರು ಕೇಳಿಲ್ಲ-ಪರಿಪೂರ್ಣ
ಸತ್‌ಚಿತ್ತಾನಂದ ಜೊ ಜೊ ಜೊ ॥ ೩೮

ಬಿಂದು ತಾ ರೂಪಾಗಿ । ಸಂದಳಿದ ಶಿವಯೋಗಿ ।
ಇಂದುಧರನ ಅವತಾರಿ-ತಾ ಬಂದ /
ಸಂದೇಶ ಸಾರಲು ಜೊ ಜೊ ಜೊ ॥ ೩೯

ಉಸುರೆಂಬ ಬಸುರಿನ । ಶಿಶು ಶಿವಯೋಗಿಯೆ ।
ಅಸುವೆಂಬ ಹಾಲು ಕುಡಿ ಏಳು-ಪಡಕೋಳೊ
ನೊಸಲಿನ ಕಂಣು ಜೊ ಜೊ ಜೊ ॥ ೪೦

ಬಟ್ಟೆ ಬಯಲಾಗ । ಕಟ್ಟಿದ ತೊಟ್ಟಿಲ ।
ಗಟ್ಟಿಗ ಚೆನ್ನನ ಮಲಗಿಸಿ–ತೂಗಿರೆ
ತುಟ್ಟ ತುದಿಯಲಿ ಜೊ ಜೊ ಜೊ ॥ ೪೧

ಆಕಾಶವೆ ತೊಟ್ಟಿಲ । ದಿಕ್ಕುಗಳೆ ಕಟ್ಟಾಗಿ ।
ಚುಕ್ಕಿಗಳೆಲ್ಲ ಚಟ್ಟಾಗಿ–ತೂಗುವವು
ಅಕ್ಕರದ ಶಿಶುವೆ ಜೊ ಜೊ ಜೊ ॥ ೪೨

ಸತ್ಯ ಸದಾಚಾರದ । ಕುತನಿಯ ಹಾಸಿಗೆ ।
ನಿತ್ಯ ಪರಿಪೂರ್ಣತೆಯ ಹಚ್ಚಡ–ಹೊದ್ದಿದ
ಉತ್ತಮಾಂಗ ಮಗನೆ ಜೊ ಜೊ ಜೊ ॥ ೪೩

ಸಮತೆಯ ಹಾಲಿನಲಿ । ಸುಮತಿಯ ಸಕ್ಕರೆ ।
ಮಮಕಾರ ಸುಟ್ಟ ಕಿಚ್ಚಿನಲಿ–ಅಟ್ಟಿಸಿ
ಕಾಮಹರ ಕುಡಿಯೇಳು ಜೊ ಜೊ ಜೊ ॥ ೪೪

ಧರೆಯೆ ತಾಡೋಲೆಯು । ಮರಗಳೆ ಲೆಕ್ಕಣಿಕೆ ।
ಹರಿಯುವ ನೀರ ಮಸಿಮಾಡಿ-ಚಂದಾಗಿ
ಹರಮಹಿಮೆ ಅರಹು ಜೊ ಜೊ ಜೊ ॥ ೪೫

ಶಾಂತಿಯ ಪುತ್ಥಳಿ । ಕಾಂತ್ಯುಳ್ಳ ಕಳೆಯಾಗಿ ।
ಸಂತಸದಿ ದೇವಧ್ಯಾನದಲಿ–ಬೆಳೆದನು ಮ-
ಹಂತ ತನ್ನಲೀಲೆಯಲಿ ॥ ೪೬

ಎರಡು ಮಳೆಗಾಲಳಿದು । ಮೂರವು ಮುಗಿದವು ।
ಕರೆದರು:ಓಗೊಡಬಾರದೆ-ತಾಯಿಯ
ಮೋರೆಯ ನೋಡುತ ತಿರುಗುವಿ ॥ ೪೭

ಮಾತಾಡೊ ಮಾತಾಡೊ । ಮುತ್ತಿನಂಥ ಗಿಣಿಯೆ ।
ಸೋತೆನು ನಿನ್ನ ಮಾತಾಡಿಸಿ-ನನ ಮಗನೆ
ಆತುಮ ತಳಮಳಗೊಳ್ಳುವದು ॥ ೪೮

ತಾಯಿ ಮಗನ ಕರೆಸು । ಮಾಯದಿ ಅಪ್ಪಿಕೊಂಡು ।
ಕಾಯಗೊಂಡ ಸಿದ್ಧ ಸುಮ್ಮನೆ-ಇದ್ದಾಗ
ಭಯವಾಯಿತು ತಾಯಿಗೆ ಮೂಕನೆಂದು ॥ ೪೯

ಯಾರ ಮುಂದೆ ಹೇಳಲಿ । ಘೋರ ಮನದ ತಾಪ ।
ದೂರ ಮಾಡೊ ಶಿವನೆ ಲೋಕದ-ಜನಗಳು
ದೂರುವದು ನಾನು ಸಹಿಸೆನು ॥ ೫೦

ಹುಚ್ಚನಿಗೆ ಹಡೆದು । ಪೆಚ್ಚಾದೆ ಜಗದಿ ನಾ ।
ಚೊಚ್ಚಿಲ ಮಗ ಮಂಕೇನ-ತಾಯವ್ವ
ಕಿಚ್ಚು ಹತ್ತೀದೆ ನನ್ನ ಒಡಲಿಗೆ ॥ ೫೧

ಮರುಳು ಕಂಡರು ಜನಕ । ಮರುಳ ಮಾಡುವನು ।
ಸರಳ ಅತಿಮುಗ್ಧ ನಿನ ಕಂದ-ನಮದೆಲ್ಲ
ಕರಳು ಕರಗಿಸುವನು ಗುಣದಿಂದ ॥ ೫೨

ಹಸಿದು ಬಂದು ಎನಗೆ । ಬಿಸಿರೊಟ್ಟಿ ಬೇಡಿಲ್ಲ ।
ನಸು ನಗುತ ನನಗೂಡ ಮಾತಿಲ್ಲ-ತಾಯವ್ವ
ಬೇಸರ ಕಳೆಯಲು ಆಡಿಲ್ಲ ॥ ೫೩

ಹೊಲಕ ಕಳುಹಿ ನೋಡ । ಬಾಲಕರೊಡಗೂಡಿ ।
ಲೋಲದಿ ಆಕಳ ಕಾಯಲು-ಕಳುಹಿದರ
ಬಾಲಕರ ಕೂಡಿ ನುಡಿಯಲಿ ॥ ೫೪

ಸತಿ ಸುಗ್ಗಲದೇವಿ । ಪತಿಗೆ ಹೇಳಿದಳಾಗ ।
ಸುತನನ್ನು ಹೊಲಕೆ ಕಳುಹಿರಿ-ಮಕ್ಕಳಂತೆ
ಮಾತಾಡಿ ಉಂಣಲು ಕಲಿಯಲಿ ॥ ೫೫

ವಾರಿಗೆಯರ ಕೂಡಿ । ಕರುಗಳ ಗೂಡಾಡಿ ।
ನೀರಡಿಸಿ ಹಸಿದು ಉಂಣಲಿ-ಮಾಂಕಾಳ
ವಾರಿಗೆಯವರಂತೆ ಬೆಳೆಯಲಿ ॥ ೫೬

ನವಣೆಯ ಹೊಲದಾಗ । ಕಾವಲಾರದು ಇಲ್ಲ ।
ಕವಣೆಯ ಕಲ್ಲು ಹಿಡದಿಲ್ಲ-ಖಗ ಮೃಗ
ಮೇವು ತೆನೆ ತಿಂದು ಸುಖಿಸುವವು ॥ ೫೭

ಹೊಲತುಂಬ ಬೆಳೆಗಳು । ನೆಲ ಇನಿತು ಕಂಡಿಲ್ಲ ।
ಹಾಲು ತುಂಬಿದ ತೆನೆಗಳು-ಸುತ್ತೆಲ್ಲ
ಸಲೆ ಬಾಗಿ ಭೂಮಿಗೆ ನಮಿಸುವವು ॥ ೫೮

ಮಲ್ಲಿಗೆಯ ಮಂಟಪ। ಹೊಲದಾಗ ಹೂದೋಟ।
ಅಲ್ಲಲ್ಲಿ ನೀರು ಹರಿವೂದು-ಹಕ್ಕಿಗಳ
ಸೊಲ್ಲಿಗೆ ದನಿಯ ಕೊಡುವುದು॥ ೫೯

ಮಲ್ಲಿಗೆಯ ಮಂಟಪದಿ। ನೆಲಸಿಹನು ಶಿವಲಿಂಗ।
ಬಲ್ಲ ಬಕುತರಿಗೆ ಒಲಿಯುತ-ನವಣೆಯ
ಹೊಲದಾಗ ತೋರುತ ಮಹಿಮೆಯ॥ ೬೦

ಗೋವುಗಳ ಕಾಯಲು। ಕಾವ ತಾ ಹೋಗುವನು।
ಭುವಿಯೊಳು ಅಮರುತ ಕರೆಯುವ-ಪೊರೆಯುವ
ಸಾವಿಲ್ಲದ ಸತ್ವ ಕುಡಿಸೂವ॥ ೬೧

ಶಿವಲಿಂಗ ನೋಡುತ। ಜೀವ ಭಾವಳಿದನು।
ಭಾವ ಶಿವನಲ್ಲಿ ಬೆರಸಿಹನು-ಬಾಲಸಿದ್ಧ
ಭುವಿ ಜನಕೆ ಮರುಳ ಕಂಡಿಹನು॥ ೬೨

ಮರ್ತ್ಯಕ್ಕೆ ದೂರಾಗಿ। ಅರುವಿಗೆ ನೆರೆಯಾಗಿ।
ಪರಮ ಪಾವನ ವರಸಿದ್ಧ-ಬೆಳೆದನು
ಸುರಮ್ಯ ಶಿವನ ಲೀಲೆಯಲಿ॥ ೬೩

ಶಕ್ತಿ ವಲ್ಲಭ ಬಲು। ಯುಕ್ತಿಗಾರನವನು।
ಮುಕ್ತಿ ಮಂದಿರದ ಒಡೆಯನು-ಸಿದ್ಧನ
ಭಕ್ತಿ ಒರಿಗ್ಗುಚ್ಚಲು ಬಂದಿಹನು॥ ೬೪

ಹವಣಿಸಿ ಬಂದಿಹನು। ನವಣೆಯ ಹೊಲದೊಳು।
ಭಾವ ನೋಡಲು 'ಸಿದ್ಧ' ಎಂದು-ಕರೆದನು
ದೇವ ಮಲ್ಲಿನಾಥ ನಿಂತು ಮುಂದೆ॥ ೬೫

ಮುಚ್ಚಿದ ಕಣ್‌ತೆರೆದು। ಬೆಚ್ಚ ಬೆರಗಿನಲಿ।
ಸಚ್ಚಿದಾನಂದ ಮನೋಹರ-ಮೂರುತಿಗೆ
ಹಚ್ಚಿದ ಮಸ್ತಕ ಶಿರಬಾಗಿ॥ ೬೬

ಸ್ಪರುಶದಿಂದ ಬಲು। ಹರುಷಗೊಂಡನು ಸಿದ್ಧ।
ದರುಶನ ಹೊಸತೆಂದು ತೋರಿಲ್ಲ-ಬಹುಕಾಲ
ಎರವಾದಂತವನಿಗೆ ಅನಿಸೀತು॥ ೬೭

ಹುಟ್ಟುತನದ ಮೌನ । ಬಿಟ್ಟನು ಕಂಡು ಮಲ್ಲಯ್ಯನ ।
ತಟ್ಟನೆ ಅವನಡಿ ಹಿಡಕೊಂಡನು–ಸಿದ್ಧರಾಮ
ಮೊಟ್ಟ ಮೊದಲಿನ ಮಾತು ಆಡಿದನು ॥ ೬೮

ಮಲ್ಲಯ್ಯನ ಕಂಡು ತಾ । ಕುಲುಕುಲು ನಕ್ಕನು ।
ಸಲ್ಲಲಿತ ಪಾದವ ಹಿಡಿದನು–ಸಿದ್ಧೇಶ
ಉಲ್ಲಸದಿ ಹೊಲತುಂಬ ಕುಣಿದನು ॥ ೬೯

ಬಾಲನ ಹಿಗ್ಗವ ಕಂಡು । ಲೋಲದಿ ಎತಿಕೊಂಡು ।
ತಲೆಮೇಲೆ ಕೈಯ ತಿರವೂತ–ಮಲ್ಲಯ್ಯ
ಬಾಲಸಿದ್ಧನಿಗೆ ಮುದ್ದಿಟ್ಟನು ॥ ೭೦

ಹುಟ್ಟಿದಾಗಿನಿಂದ । ದಿಟ್ಟಿಟ್ಟು ನೋಡಿದ ।
ಬಟ್ಟಬಯಲಿನ ಮೂರುತಿಗೆ–ಬಾಲಯೋಗಿ
ತಟ್ಟನೆ ಪಾದ್ದಿಡಿದು ಉರುಳಿದನು ॥ ೭೧

ಕೂಸು ಸಿದ್ಧೇಶನೆ । ಲೇಸಾಗಲಿ ಎನಕಂದ ।
ಹಸಿದೀದೆ ನನ್ನ ಹೊಟ್ಟೆಯು–ಏಳೇಳು
ಕಸವೀಸಿ ನನಗೆ ಬಹಳೆಂದನು ॥ ೭೨

ಹಸಿದ ಹೊಟ್ಟೆಯ ಛಾಯೆ । ಪಸರಿಸಿ ಮುಖವೆಲ್ಲ ।
ತುಸು ಹೊತ್ತಿನಲಿ ಈಶನ–ತಳಮಳ
ಕೂಸಿಗೆ ಗಾಬರಿಗೊಳಿಸಿತ್ತು ॥ ೭೩

ಹಿಗ್ಗಿನ ಮುಖದಮೇಲೆ । ನುಗ್ಗಿ ಬಂದಿತು ದುಃಖ ।
ಬಗ್ಗಿ ಮುಖವ ನೋಡಿ ಎಂದನು–ನನದೇವ
ಸುಗ್ಗಿಯಲಿ ಹಸಿವೀನ ಕೊರಗೇಕೆ ॥ ೭೪

ಓಡೂತ ಎಡವೂತ । ಗಡಬಿಡಿ ತಿರುಗಾಡಿ ।
ಒಡೆಯ ಮಲ್ಲಯ್ಯನಿಗೆ ಸೀತೆನಿ–ತಂದನು
ಒಡನೆ ಹಾಸಿದ ಕರಿಕಂಬಳಿ ॥ ೭೫

ಬೆಳಸಿಯ ಹೊರೆ ತಂದು । ಇಳುವಿದನು ಧರಿಮೇಲೆ ।
ಹೊಳಿಸ್ಯಾಡಿ ನೋಡಿದನು ಎಳೆ ಎಳೆ–ಸೀತೆನೆ
ಇಳೆಯಾಣ್ಣನಿಗೆ ತಿನಿಸಲು ॥ ೭೬

ಕಿಚ್ಚು ಮಾಡಿದನು । ಎಚ್ಚರದಿಂದಲೆ ।
ಸಚ್ಚಿದಾನಂದಗೆ ಸೀತೆನೆ–ತಿನಿಸಲು
ಮೆಚ್ಚುಗೆಯ ಮಗ ಕುಳಿತಿದನು ॥ ೭೭

ಕುಳ್ಳಿರು ಎನದೇವ । ಹಾಲುಳ್ಳ ತೆನೆಗಳ ।
ಮೆಲ್ಲನೆ ಮೆಲಕ್ಹಾಕಿ ತಿನಬೇಕು–ಎನ್ನಯ್ಯ
ಎಲ್ಲಿಂದ ಬಂದ್ಹೇಳು ಎನಗಾಗಿ ॥ ೭೮

ನಿನಗಾಗಿ ಬಂದಿಲ್ಲ । ಎನಗಾಗಿ ಬಂದಿರುವೆ ।
ಅನ್ನಿಲ್ಲದೆ ಹಲಬುತ ಹಾದೀಲಿ–ತಿರಗೂತ
ಮುನ್ನ ಕತ್ತಲೆ ಬಂದು ಬೀಳದಲೆ ॥ ೭೯

ಹೊಟ್ಟೆ ತುಂಬಲೆಂದು । ಪುಟ್ಟಾದ ಕೈಯಿಂದ ।
ಸುಟ್ಟು ಕೊಡುವನು ಬೆಳಸಿಯ–ಸಿದ್ಧಗೆ
ಸುಟ್ಟಿದ್ದು ತಿಳಿದಿಲ್ಲ ತನ ಕೈಯ ॥ ೮೦

ಕೈಯೆಲ್ಲ ಗುಳ್ಳೆದ್ದು । ಮೈಯೆಲ್ಲ ಬೆವತಿತ್ತು ।
ಕಾಯ್ದವು ತಲೆ ಅಂಗಾಲ–ಬಾಲಕನ
ಮೈಯ ಮೇಲೆ ಪರಿವೆ ಇರಲಿಲ್ಲ ॥ ೮೧

ಕೆಂದಾದ ಕೈಯು ನೋಡಿ । ಮಂದಹಾಸವ ಬೀರಿ ।
ಕಂದನ ಬಕುತಿಯ ಕಂಡನು–ಮಲ್ಲಯ್ಯ
ಎಂದನು ಇನ್ನೂ ನೋಡುವೆನು ॥ ೮೨

ಹೆಸರೇನು ಹೇಳೆನಗೆ । ವಾಸಿಪ ಸ್ಥಳವೆಲ್ಲಿ ।
ಹಸಿವೆಯ ಪರಿಹರಿಸುವೆ–ಎನ್ನಯ್ಯ
ಕಸವಿಸಿಗೊಳ್ಳದಿರು ಮನದೊಳು ॥ ೮೩

ಮೇಲಗಿರಿಯಲ್ಲಿರುವೆ । ಮಲ್ಲಯ್ಯ ನನ ಹೆಸರು ।
ಅಲ್ಲಿಂದ ಬಂದಿರುವೆ ಇಲ್ಲಿಗೆ-ನನಕಂದ
ಬಲು ಹಸಿದು ಬಂದಿರುವೆ ದೂರಿಂದ ॥ ೮೪

ಏಳೇಳು ಸಿದ್ಧೇಶ । ವೇಳೆ ಬಹಳವಾಯ್ತು ।
ಎಳೆಯ ಬೆಳಸಿಯಿಂದ ನನ ಹೊಟ್ಟೆ-ತುಂಬಿಲ್ಲ
ಹುಳಿ ಮೊಸರು ಅನ್ನ ಉಣನೀಡು ॥ ೮೫

ಹೋಗಿ ಬರುವೆನು ದೇವ । ಬೇಗ ತರುವೆನು ಬುತ್ತಿ ।
ಹೋಗದಿರು ಎನ್ನಯ್ಯ ಎಲ್ಲಿಯು-ಮನೆಯಿಂದ
ಬೇಗ ಬರುವೆನು ಎನ ತಂದೆ ॥ ೮೬

ಮನ ಚೆನ್ನಮಲ್ಲನಲಿ । ತನು ದಾರಿಯು ನಡದೀತು ।
ಮನಿಕಂಡು ಸಂತಸಗೊಂಡನು-ಬಾಲಸಿದ್ಧ
ದನಿಮಾಡಿ ತಾಯಿಗೆ ಕರೆವನು ॥ ೮೭

ದುಡು ದುಡು ಓಡೂತ । ಎಡವೂತ ಬಂದನು ।
ಹಡೆದವ್ವನ ಕೊಳ್ಳಿಗೆ ಬಿದ್ದನು-ಸಿದ್ಧೇಂದ್ರ
ತಡಮಾಡದಿರು ಕೊಡು ಮೊಸರನ್ನ ॥ ೮೮

ಅವ್ವ ಅವ್ವ ಎಂಬ । ಮವ್ವದ ದನಿ ಕೇಳಿ ।
ಹವ್ವ ಹಾರಿ ನಿಂತಳು ತಾಯವ್ವ-ಕಂದನ
ಆವರಿಸಿ ಹಿಡಿದಳು ಹೊಟ್ಟೇಗೆ ॥ ೮೯

ಮೈಯುಪಡವಿ ಮುದ್ದಾಡಿ । ಕೈಯ ಹಿಡಿದು ಕುಲಕುತ ।
ಬಾಯ ನಿನಗ್ಹೆಂಗ ಬಂತ್ಹೇಳು-ನನಕೂಸೆ
ತಾಯೆಂಬುದು ನಿನಗೆ ತಿಳಿತ್ಹೆಂಗ ॥ ೯೦

ಎಂದಿಗಿಲ್ಲದ ಕಂದ । ಮಂದಹಾಸ ಬೀರುತ ।
ಚಂದಾಗಿ ಬುತ್ತಿಯ ಬೇಡಿದ-ನುಡಿ ಕೇಳಿ
ಕಂದನ ತಾಯ್‌ಗರಳು ಅರಳಿತು ॥ ೯೧

ಏಸು ಜನುಮದ ಪುಣ್ಯ ಫ- । ಲಿಸಿತ್ತು ನನ ಕಂದ ।
ಮೊಸರು ಕಲಸಿದ ಬುತ್ತಿ ನೀಡುವೆ-ನನ್ನಸುವೆ
ಏಸು ದಿನದ ಬಯಕೆ ತುಂಬೀತು ॥ ೯೨

ಹಡೆದು ಎಂಟೊರುಷಾಯ್ತು । ಬೇಡಿಲ್ಲ ಏನೇನು ।
ಪಡೆದಂಗಾಯಿತು ನುಡಿದಾಗ-ದೇವರ
ಕಡು ಕೋಪ ಲೋಪ ಆಯಿತು ॥ ೯೩

ಹಿಗ್ಗುತ ಕೊಟ್ಟಳು । ಸುಗ್ಗವ್ವೆ ಬುತ್ತಿಯ ।
ಸಗ್ಗದ ಸುಖವ ಉಂಡಳು-ತಾಯವ್ವ
ಬಗ್ಗಿ ಎತಿಕೊಂಡು ಅಪ್ಪಿದಳು ॥ ೯೪

ಬಿಡು ತಾಯಿ ಹೋಗುವೆ । ಒಡೆಯನಿಗೆ ಹೊಲದಾಗ ।
ಕೂಡಿಸಿ ಬಂದಿರುವೆ ಓಡುತ-ಹೋಗಿ ನಾ
ನೀಡುವೆ ಮೊಸರನ್ನ ಹಸಿದವಗೆ ॥ ೯೫

ತುತ್ತು ಮಾಡಿ ಉಣಿಸುವ । ಹೆತ್ತವ್ವನ ಹಂಬಲ ।
ಬತ್ತಿ ಹೋಯಿತು ನುಡಿಕೇಳಿ-ಸುಗಲವ್ವೆ
ಕತ್ತೆತ್ತಿ ನೋಡಿದಳು ಕಂದನ ॥ ೯೬

ಬುತ್ತಿಯು ಕೈಯಲ್ಲಿ । ಅತ್ತಿತ್ತ ನೋಡದಲೆ ।
ಮತ್ತನ ಪಾದಗಳು ಓಡಿದವು–ಕಂಣ್ಮನ
ಚಿತ್ತದೊಡೆಯನಲ್ಲಿ ಒಂದಾಗಿ ॥ ೯೭

ಕಂದನು ಹೋದ ದಾರಿ । ಸುಂದ ಬಡಿದು ನೋಡಿ ।
ಎಂದೆಂದು ಮರೆಯದ ಚಣವನು–ನೆನೆಯುತ
ಹಿಂದಿರುಗಿ ತಾಯಿ ಮನಿಯಾಗ ॥ ೯೮

ಹಿಗ್ಗಿನ ಸುಗ್ಗಿಯು । ಮೊಗ್ಗವು ಅರಳಿತ್ತು ।
ಸುಗ್ಗಲವ್ವೆಯ ಮುಖ ಕಮಲದಿ-ಮೂಡಿತ್ತು
ಗುಗ್ಗರಿಗಟ್ಟಿತ್ತು ಮೈಯೆಲ್ಲ ॥ ೯೯

ಸಂಧಿ ೪

ತಾಯಿಯ ನೆನಪಿಲ್ಲ । ಮಾಯದ ತೊಡಕಿಲ್ಲ ।
ಹಾಯಗೊಂಡಿತು ವೈಮನ-ಮಿಡಕೂತ
ಜೀಯನ ಹುಡುಕಲು ತೊಡಕೀತು ॥ ೧

ಹೊಲ ಕಂಡು ನವಣೆಯ । ಕುಲು ಕುಲು ನಗುವನು ।
ಬಲು ಬೇಗ ಹೆಜ್ಜೆಯನಿಡುತ-ಓಡಿದ
ಬಾಲ ಸಿದ್ಧರಾಮ ಹೊಲದಾಗ ॥ ೨

ಕರಿಯ ಕಂಬಳಿ ಮೇಲೆ । ಗಿರಿಮಲ್ಲನಿರಲಿಲ್ಲ ।
ಬರಿದಾಗಿ ಕಂಡಿತ್ತು ಬಾಲಗೆ-ಹೊಲವೆಲ್ಲ
ಉರಿದಂಗ ತೋರಿತ್ತು ಧಗಧಗ ॥ ೩

ದೇವನಿಲ್ಲದು ನೋಡಿ । ಭಾವ ಬಂದಿತು ತುಂಬಿ ।
ನೋವಾಗಿ ಹೊರಳಾಡಿ ಉರಳಾಡಿ-ಬಾಲಸಿದ್ಧ
ಹೆವ್ವಾರಿ ಎದ್ದು ನಿಂತಿಹನು ॥ ೪

ಬಿಸಿಯ ಸೀತೆನೆ ತಿಂದು । ಕಸವೀಸಿ ಬಹಳಾಗಿ ।
ಹಸಿರ ಗಿಡದಾಸರಕೆ ಹೋದೇನು-ನನ ದೇವ
ಸೊಸುವ ಗಾಳಿಗೆ ಕುಳಿತಿಹನೆ ॥ ೫

ಬಾಯಿ ಆರಿತೇನು । ಆಯಾಸ ಬಹಳೇನು ।
ಕೈಯಾಗ ಕಮಂಡಲ ಇತ್ತಲ್ಲೊ–ಮಲ್ಲಯ್ಯ
ಹಾಯಾಗಿ ನೀರು ಕುಡಿಲಿಲ್ಲ ॥ ೬

ಎತ್ತ ಹೋಗಿರುವಿಯೊ । ಸತ್ಯುಳ್ಳ ಎನದೇವ ।
ಬುತ್ತಿ ತರಲು ತಡಮಾಡಿಲ್ಲ–ನನ್ನಯ್ಯ
ಎತ್ತಾರೆ ಹೋಗುವದು ಸರಿಯೇನೊ ॥ ೭

ಓಡೋಡಿ ಬಂದಿರುವೆ । ಹಡೆದವ್ವ ತಡೆದರು ।
ಒಡೆಯಗೆ ಉಣಸಲು ತಡಸಡಿಸಿ–ಬಂದರೆ
ಓಡೆಲ್ಲಿ ಹೋದೆಯೊ ಎನ ತಂದೆ ॥ ೮

ನಿನಗಾಗಿ ತಂದ ಬುತ್ತಿ । ಇನ್ನೇನು ಮಾಡಲಿ ।
ಅನುತಾಪದಿಂದ ಅಳುತ–ಬಾಲಸಿದ್ಧ
ವನ ಹೊಕ್ಕು ಮುಂದೆ ನಡೆದನು ॥ ೯

ಹೊಲದೊಳಗಿದ್ದ ತನ್ನ । ಚಲುವ ಶಿವಲಿಂಗದ ।
ಒಲುವೀಲಿ ಮಾಡುವ ಪೂಜೆಯ–ಮರೆತನು
ಮಲ್ಲಯ್ಯನೆಂದು ಕೊರಗೂತ ॥ ೧೦

ಉಣಲಿತ್ತ ಬುತ್ತಿಯ । ತ್ರಿಣಯನಿಗೆ ಎಡೆಮಾಡಿ ।
ದನಕಾಯುವ ಹುಡುಗರಿಗೆ ಹಂಚುವ–ನೇಮವು
ಮನದೊಳಗೆ ಉಳಿದಿಲ್ಲ ಮರೆತನು ॥ ೧೧

ನೆಲದಮೇಲೆ ನಡೆದರೆ । ಕಾಲು ಮಾಸುವವೆಂದು ।
ಹೊಲಕೆ ಬರುವಾಗ ಎತಿಕೊಂಡು–ಒಯ್ಯುವ
ಒಲುವಿನ ತಂದೆಯ ನೆನಪಿಲ್ಲ ॥ ೧೨

ಕಂಣು ನೀರು ತುಂಬಿ । ಕಾಣಿಸದೆ ಬೀದಿಯು ।
ಸಂಣ ಮಗು ನಿಂತಾನ ನಿಂತಲ್ಲೆ–ದನಿ ತಗೆದು
ಬಂಣಿಸಿ ಮನದಾಗ ಕಂಡುದನು ॥ ೧೩

ಅತಿತ್ತ ನೋಡಿದನು । ಸುತ್ತೆಲ್ಲ ಸುಳಿದಾಡಿ ।
ಮತ್ತೆಲ್ಲಿಗ್ಹೋದನೊ ದೇವನು–ಅರಿಯೆನು
ಅತ್ತು ಹಲಬುತ್ತ ಹೊರಟನು ॥ ೧೪

ಹೊಲ ಬಿಟ್ಟು ತನ್ನೂರ । ನೆಲ ಬಿಟ್ಟು ಹೊರಟನು ।
ಕಾಲು ಕರೆದೊಯ್ದಲ್ಲಿ ಏಳೂತ–ಬೀಳೂತ
ಬಾಲಸಿದ್ಧೇಂದ್ರ ಸಾಗಿದನು ॥ ೧೫

ಸುಗ್ಗವ್ವೆಯ ಮನಿಯಾಗ । ಹಿಗ್ಗಿನ ಸುಗ್ಗಿಯು ।
ತಗ್ಗಿನ ಮನೆಯ ತಂಗೆವ್ವಗೆ–ಕರೆದು ಮಗ
ಹಿಗ್ಗೀಲಿ ಹೇಳಿದಳು ನುಡಿದದ್ದು ॥ ೧೬

ಎಂದಿಗಿಲ್ಲದ ಕಂದ । ಇಂದು ನುಡಿದನೆಂದು ।
ಬಂದ ಬಂದವರಿಗೆ ಹೇಳದಿರು–ಸುಗಲವ್ವೆ
ಸುಂದರಾಂಗನಿಗೆ ನದರ ಆದೀತು ॥ ೧೭

ಮಾತಾಡಿ ತಂಗೆವ್ವ । ತಾತಿರುಗಿದಳು ಮನೆಗೆ ।
ಆತುರದಿ ಅಕ್ಕವ್ವ ಬಂದಳು–ನಿನ ಮಗ
ಮಾತಾಡಿದ ಸುದ್ದಿ ನಿಜವೇನ ॥ ೧೮

ಏನು ಹೇಳಲಿ ಅಕ್ಕ । ಕನಸು ಕಂಡಂಗಾಯ್ತು ।
ಅನಿಸಿಲ್ಲ ಈ ಪರಿ ಘಟಿಸುವದು–ನನ ಕಂದ
ಮನ ಬಿಚ್ಚಿ ಮಾತಾಡಿ ಮರಳಿದನು ॥ ೧೯

ಸಿದ್ಧ ಮಾತನಾಡಿದ । ಸುದ್ದಿ ಊರತುಂಬೆಲ್ಲ ।
ಮುದ್ದುಗೌಡನ ಕಿವಿತನಕ–ಆ ಚಣ
ಎದ್ದು ಹಿಡಿದನು ಮನೆದಾರಿ ॥ ೨೦

ಕಾಂತೆಯ ಮುಖದ । ಶಾಂತಿಯ ಕಳೆ ನೋಡಿ ।
ಸಂತಸದಿ ಕೇಳಿದನು ಮಡದಿಗೆ–ಮುದ್ದಪ್ಪ
ಕಾಂತ್ಯುಳ್ಳ ಮುಖದ ಕತೆ ಹೇಳೆ ॥ ೨೧

ಎಂಟು ವರುಷದ । ಕಂಟಕ ಒಯಲಾಯ್ತು
ಕಂಠದಿ ಹೊರಬಂದ ನುಡಿಕೇಳಿ–ಆ ಹಿಗ್ಗು
ಅಂಟಿಕೊಂಡಿದೆ ನೈಮನಕೆ ॥ ೨೨

ಮಗು ಮುದ್ದು ಮಾಂಕಾಳ | ಈಗ ಬಂದಿದನೇನು |
ಹೋಗಿರುವನೆಲ್ಲಿ ಮುಂದ್ಹೇಳು-ಆತ ನಿನ
ಸಂಗಡ ಮಾತನಾಡಿ ಹೋದನೆ || ೩೩

ಹೊಲದಿಂದ ಬಂದು | ಬಲು ಛಲದಿಂದ ಬೇಡಿದನು
ಕಲಸಿದ ಮೊಸರನ್ನ ಕೊಡು ಎಂದು-ತವಕದಿ
ಸಲೆ ಹಸಿದವಗೆ ಉಣಿಸಲು ಓಡಿದನು || ೩೪

ಕುಂತವನೆದ್ದು ನಿಂತು | ಅಂತಾನ ಸುಗ್ಗಲೆ
ಕಾಂತೆ ಹೊಲಕ್ಕೆ ಹೊಗುವೆ-ಕಂದನ
ಹಂತ ಮಾತೀನ ತಿಳಿಯುವೆ || ೩೫

ಹೊತ್ತು ಹೋಗಿಲ್ಲಿನ್ನು | ಕತ್ತಲಾಗದ ಮುನ್ನ
ಎತ್ತಿಕೊಂಡು ತರ್ರಿ ಕಂದನ-ನಿಮ ದಾರಿ
ಆತುರದಿ ನಾನು ಕಾಯುವೆನು || ೩೬

ತೊದಲು ನುಡಿವನೇನು | ತಿದ್ದಿ ಮಾತಾಡಿದನೆ |
ಮುದ್ದಪ್ಪ ತನ್ನ ಮನದಾಗ-ನೆನೆಯುತ
ಹಾದಿ ಹಿಡಿದನು ತನ್ನ ಹೊಲದ || ೩೭

ನೋಡಿದ ಜನವೆಲ್ಲ | ಜೋಡಿಸಿ ಕೈಯಮುಗಿದು
ಗಡಬಡಿ ಎಲ್ಲಿ ಹೊರಟಿರಿ-ಒಬ್ಬರೆ
ಒಡೆಯರೆ ನಾನು ಬರಲೇನು || ೩೮

ಮಾತನಾಡದೆ ಬಲು | ಒತ್ತರ ಹೊರಟಿಹರು
ಎತ್ತ ಹೋಗುವದು ತಿಳಿಯದು-ಇಂದವರ
ಚಿತ್ತ ಎಲ್ಲೇನೊ ತೊಡಕೀದೆ || ೩೯

ನಿಸ್ಸೈದಿ ಹೊಲಕ್ಹೋಗಿ | ಮೆತ್ತನ ತನ ಮಗನ
ಎತ್ತಿಕೊಂಡು ತರುವ ದೊಡ್ಡದ-ಕೆಲಸ
ಗೊತ್ತಿಲ್ಲದಂಗ ಕೇಳುವಿ || ೪೦

ನವಣಿಯ ಹೊಲ ಕಂಡು | ಧಾವಿಸಿ ನಡೆದರು
ಆವ ಠಾವಿನಲಿ ನನ ಕಂದ-ಇರುವನು
ಅವನನ್ನು ಮಾತನಾಡಿಸುವೇನು || ೪೧

ಹೊಲದಾಗಿನ ಮೂಲೆ । ಮೂಲೆಲ್ಲ ಹುಡುಕಿದನು ।
ಬಾಲಸಿದ್ಧರಾಮ ಸಿಗಲಿಲ್ಲ-ಆತನ
ಮಲ್ಲಯ್ಯನು ಅಲ್ಲಿ ಇರಲಿಲ್ಲ ॥ ೩೨

ಎಡಬಲ ನೋಡವೆ । ಗಡಿಬಿಡಿ ತಿರುಗುತ ।
ತಡವಾದ್ಹಂಗೆ ಒಡಲುರಿ-ಉರಿತಿತ್ತು
ಹುಡುಗ ಮಾಂಕಾಳ ಸಿಗವಲ್ಲ ॥ ೩೩

ಹೊತ್ತು ಮುಣುಗಿತ್ತಾಗ । ಕತ್ತಲೆ ಒಳಹೊರಗು
ಗೊತ್ತಾಗದು ಏನು ಎಂತಾಯ್ತು-ಮುದ್ದುಗೌಡ
ಹೊತ್ತಾನ ಘನಭಾರ ಮನೆಯೆಡೆಗೆ ॥ ೩೪

ಮನೆಗೆ ಮರುಳುವಾಗ । ಅನುತಾಪಕ್ಕೊಳಗಾಗಿ
ಏನು ತಿಳಿಯದೆ ದಾರಿಯ-ಹಿಡಿದನು
ಘನ ಶೋಕದೊಳಗ ಮನಮಗ್ನ ॥ ೩೫

ಆಡಿದ್ದು ನೋಡಿಲ್ಲ । ನುಡಿದದ್ದು ಕೇಳಿಲ್ಲ ।
ಓಡುತ ಹೊಲಕೆ ಹೋದದ್ದು-ಕೇಳಿದೆ
ಕಡೆ ಆಯಿತು ನನ್ನ ಕಂಣಿಗೆ ॥ ೩೬

ಕತ್ತಲೆ ಕವಿದಿತ್ತು । ಅತ್ತ ಇತ್ತ ಸುತ್ತಲು ।
ನಿತ್ಯದ ಹೊತ್ತು ಹೊರಳಿತ್ತು-ಸಿದ್ಧೇಶ
ಮುತ್ತಿನಂಥ ಮಗ ಬರವಲ್ಲ ॥ ೩೭

ಇನ್ನು ಬರಲಿಲ್ಯಾಕೆ । ನನ್ನಕೂಸ ಕರಕೊಂಡು ।
ಚಿನ್ನನ ಬಾಯಿಯ ಮಾತಿಗೆ-ಮರುಳಾಗಿ
ಮನ ಮರೆತು ಅಲ್ಲಿಯೆ ಕುಳಿತರೆ ॥ ೩೮

ಏನು ಹೇಳಲಿ ನೀಲಾ ಮಾ- । ತಿನ ಮೋಹ ಜಾಲ ।
ಜನಕನ ಕಾಲು ತೊಡಕಿದವು-ತಂದೆ ಮಗ
ಏನೇನೊ ಮಾತು ತೀರವು ॥ ೩೯

ಮಗನಿಗೆ ಕರಕೊಂಡು । ಬೇಗ ಬರಬೇಕೆಂದು ।
ಹೋಗುವಾಗ ಅಂಣನಿಗೆ ಹೇಳಿಲ್ಲೇನ-ನಮ್ಮನಗೆ
ಹೋಗಿ ಬರ್ರೆಂದು ಕಳುಹಲೇನ ॥ ೪೦

ನಡೆದದ್ದು ಗೊತ್ತಿಲ್ಲ । ಅಡವಿಗೆ ಹೋದನ್ಹ್ಯಾಂಗ ।
ಹಡೆದವ್ವ ಯಾರಾರೆ ಜೋಡಮಾಡಿ-ಕಳಿಸಿದರ
ಕಡು ದುಃಖ ಆಗುತಿರಲಿಲ್ಲ ॥ ೪೧

ಓಡೂತ ಬಂದೆನಗೆ । ಜೇಡಿದನು ಮೊಸರನ್ನ ।
ಜೊಡ್ಯಾರು ಅವನಿಗೆ ಇರಲಿಲ್ಲ-ಒಬ್ಬನೆ
ಅಡವಿಯಿಂದ ನಡೆದು ಬಂದಿದ ॥ ೪೨

ಅಂಣ ಮುದ್ದುಗೌಡರು । ಕಂಣಬೆಳಕಿಲೆ ಹೋಗಿ ।
ತನ್ನ ಹೊಲದ ಮೂಲೆ ಮೂಲೆಲ್ಲ-ಹುಡಕಿದ್ದು
ನನ್ನ ಮಗ ನನಗೆ ಹೇಳಿದನು ॥ ೪೩

ಅರುವಿಲ್ಲದೆ ತಂದೆ । ಭರದಿಂದ ತಿರುಗುವದು ।
ನೆರೆಹೊಲದ ನಾಗಂಣ ನೋಡಿದನು-ಗೌಡರಿಗೆ
ನೆರವಾಗಲು ತಾನು ಹೋಗಿದನು ॥ ೪೪

ಹೊಲದಾಗ ಅತ್ತಿತ್ತ । ನಲಿತಿದ್ದ ಮಹಾಂಕಾಳ ।
ಕಲ್ಲಪ್ಪನು ಹೋಗಿ ಕರೆದರು-ಹುಡುಗನು
ಮಲ್ಲಯ್ಯ ಮಲ್ಲಯ್ಯ ಅನತಿದ್ದ ॥ ೪೫

ಓಡೂತ ಹೊರಟಿದ್ದ । ಜೋಡ್ಯಾರು ಇರಲಿಲ್ಲ ।
ನೋಡಿ ನನ್ನಕಡೆ ಬರಲಿಲ್ಲ-ಮಾಂಕಾಳ
ನಡೆದಿದನು ಕೈಯಲ್ಲಿ ಏನಿತ್ತೊ ॥ ೪೬

ಮೋರೆಯು ಬಾಡಿತ್ತು । ಸುರಿಸುತ ಕಂಣೀರು ।
ಕರೆದರು ನೋಡದೆ ಹೊರಟೆದನು-ಮಾತಿಲ್ಲ
ಮರೆಯಾದನು ನನ್ನ ಕಂಣಿಂದ ॥ ೪೭

ಲಿಂಗವ್ವ ಸೀಲವ್ವ । ತಂಗೆವ್ವನ ಮಾತ ಕೇಳಿ ।
ದಂಗು ಬಡೆದು ಕೂತಿಹಳು-ಸುಗ್ಗವ್ವೆಯ
ಕಂಗಳ ಧಾರೆ ಹರದಾವ ॥ ೪೮

ಬಂದ ಗೌಡರ ಮೋರೆ । ಕಂದಿತ್ತ ನೊಂದಿತ್ತ ।
ಕಂದನು ಕೈಯಾಗ ಇರಲಿಲ್ಲ-ಯಾರ ಕೂಡ
ಎಂದಿನಂತೆ ಮಾತು ಬರವಲ್ದು ॥ ೪೯

ಎಲ್ಲಕಡೆ ನೋಡುತ । ಕಲ್ಲಿನಂತೆ ಕೂತಿಹಳು ।
ಎಲ್ಲಿ ನನ ಮಗ ಎಂದು ಕೇಳುವ-ಅರುವಿಲ್ಲ
ಝಲ್ಲೆಂದಿತು ತಾಯ್ ಹೊಟ್ಟೆಯು ॥ ೫೦

ಮುಪ್ಪಿನ ಸುಗ್ಗಲವ್ವೆ । ಧಪ್ಪಂತ ಬಿದ್ದಿಹಳು ।
ಅಪ್ಪಿಕೊಂಡು ಅಕ್ಕವ್ವ ಎಂದಳು-ಮಾಂಕಾಳ
ತಪ್ಪಿರಬೇಕು ದಾರಿಯನು ॥ ೫೧

ಕಾಡದೆ ಬೇಡದೆ । ಕಿಡಗೇಡಿ ಶಿವ ತಾನು ।
ಗೌಡರ ಹೊಟ್ಟೇಲಿ ಕೊಟ್ಟದ್ದು-ಸತಿಪತಿಗೆ
ಗೂಢ ಒಗಟ್ಟಾಕಿ ಹೋದನಲ್ಲ ॥ ೫೨

ಜಲವರೆತ ಕೆರೆಯಂತೆ । ಶೀಲ ಮರೆದ ನರನಂತೆ ।
ಛಲ ಮರೆತ ರಣವೀರನಂತೆ–ಈ ಊರ-ಕೋ-
ಮಲಾಂಗನಿಗೆ ಎರವಾಯ್ತು ॥ ೫೩

ಹರಕಿಯ ಹೊತ್ತಿಲ್ಲ । ಊರೂರ ತಿರುಗಿಲ್ಲ ।
ದಾರಿದೇವಗೆ ಕೈಯ ಮುಗಿದಿಲ್ಲ–ಸತಿಪತಿ
ವರವಿನಿಂದ ಪಡೆದರು ಕಂದನ ॥ ೫೪

ಎಲ್ಲರ ಮಕ್ಕಳಂಗ । ಬೆಳದಿಲ್ಲ ನಿನ್ನಮಗ ।
ಬಲ್ಲ ಶಿವಯೋಗಿಯ ಶಿವತೇಜ–ಹೊಳದಿತ್ತ
ಬಾಲ ಮಾಂಕಾಳನ ಮುಖಲಿಂಗ ॥ ೫೫

ಬೇಡಿಲ್ಲ ಬಯಸಿಲ್ಲ । ಕಾಡಿಲ್ಲ ಹಟ ಮಾಡಿ ।
ಆಡಿಲ್ಲ ಮಕ್ಕಳ ಕೂಡಿಕೊಂಡು-ಮಾಂಕಾಳ
ಕಿಡಿಗೇಡಿತನ ಎಂದು ಮಾಡಿಲ್ಲ ॥ ೫೬

ಹುಟ್ಟಮೂಕನೆಂದು । ದಟ್ಟೇತು ಜನಮನ ।
ಮಾಟಗಾರನು ಬಂದು ಮಾತನಾಡಿ-ಸೀತೆನಿ
ಸುಟ್ಟು ತಿಂದನವನ ಕೈಯಿಂದ ॥ ೫೭

ಸುಡುಗಾಡ ಸಿದ್ಧನ । ನಾಡಾವದು ಗೊತ್ತಿಲ್ಲ ।
ಓಡಿಸಿ ಒಯ್ದಾನ ಹಸಗೂಸು-ಅವನೆಂಥ
ಚೇಡಿ ಬಲ್ಲವನಿರಬೇಕು ॥ ೫೮

ಬಾಯಿ ಬಂದ ಮಾಡಿ । ನಾಯಿ ಮಾಡಿ ಒಯ್ವರು ।
ಕಾಯ ಬೇರೊಂದು ಸೇರಿಸಿ-ಮಾಂತ್ರಿಕರು
ಮಾಯ ಮಾಡಿ ಮಗನ ಒಯಿದರೇ ೫೯

ಮಾತಿಗೆ ಮರುಳಾಗಿ । ಜತನದಿ ಎತ್ತಿಕೊಂಡು ।
ಪ್ರೀತಿಲಿ ಮನೆಗೆ ಒಯ್ದನೆ-ಮನೆಯಾಗ
ಸತಿಗೆ ಮಕ್ಕಳ ಹುಚ್ಚೇನ ॥ ೬೦

ಹಳ್ಳಿ ಪಳ್ಳಿ ತಿರುಗಿ । ಒಳ್ಳೆಯ ಮಕ್ಕಳಿಗೆಲ್ಲ ।
ಕಳ್ಳರು ಒಯ್ದು ಮಾರುವರು-ಅಂತಾರ
ಮಳ್ಳರಿಗೆ ದಿನಮಾನ ಇಲ್ಲಂತೆ ॥ ೬೧

ಸೊನ್ನಲಗಿ ಗೌಡರ । ಚಿನ್ನದಂತಹ ಕೂಸಿಗೆ ।
ಬೆನ್ನ ಹಚ್ಚಿಕೊಂಡು ಹೋದನೆ-ನೋಡುವೆ
ಹೊನ್ನಪ್ಪನಾದರೆ ಹುಡಕೂವೆ ॥ ೬೨

ಉತ್ತರ ದೇಶದಾಗ । ಧುತ್ತಂತ ಹೊಕ್ಕಿರುವ ।
ಎತ್ತಲಿನ ಜನ ಗೊತ್ತಿಲ್ಲ-ಕೊಡಲೆಪ್ಪ
ಅಂತಿದ್ದ ಯಾರೊ ನುಡಿದದ್ದು ॥ ೬೩

ಉತ್ತರ ದೇಶಕ್ಕೆ । ಮುತ್ತಿಗಿ ಹಾಕಿರುವ ।
ಎತ್ತ ನೋಡಿದರು ಹಾವಳಿ-ಆ ಜನ
ಎತ್ತಿ ಒಯ್ಯಲು ಬಂದಿದರೇ ॥ ೬೪

ಕೆಣಕಿ ನೋಡಲಿ ನಮ್ಮ । ದಣಿಯರ ಊರಿಗೆ ।
ತುಣು ತುಣುಕು ಮಾಡಿ ತುಳಿದೇವು-ಅವರಿಗೆ
ಮಣಿಮಣಿಸಿ ಶರಣು ಹೋಡಿಸೇವು ॥ ೬೫

ದೇವರ ಕೇಳಲು । ಭಾವ ಹೋಗಿದನವ್ವ ।
ಯಾವ ಭಯವು ಕೂಸಿಗಿಲ್ಲ-ದಾರ್‍ಯಾನ
ದೆವ್ವ ಬಂದು ದಾರಿ ತಪ್ಪಿಸ್ಯಾದ ॥ ೬೬

ದೇವರಂತಹ ಕೂಸು । ದೆವ್ವಯಾಕ ತಪ್ಪಿಸೀತು ।
ದೆವ್ವಿನ ಅಂಜಿಕೆ ನಮಗ್ಯಾಕ-ದ್ಯಾಮವ್ವ
ದೇವರ ಮಕ್ಕಳು ನಾವೆಲ್ಲ ॥ ೬೭

Cl. No. Q23 33N65 8163
Acc. No. 199. Vijaya Evening College Library
Bangalore-560 004.

ಜೋಶಿಯರ ಕೇಳ್ಯಾರ ಜೋ। ತಿಷ್ಯ ಮನೆಗ್ಹೋಗಿ।
ಕೂಸು ಇರುವದು ಬರುವದು-ಹೇಳ್ಯಾರ
ಏಸು ದಿನಕ್ಕೊ ತಿಳದಿಲ್ಲ॥ ೬೮

ಭೀಮ ಕಾಯದವನು। ರಾಮಣ್ಣ ಬಂದರು।
ರಾಮ ರಾಮ ಯಪ್ಪ ಗೌಡರೆ-ಮಂಗಳ್ವಾಡ
ಗ್ರಾಮ ಸುತ್ತಿ ಹುಡುಕುವೆನು॥ ೬೯

ಸಾಗಿ ಬಂದನು ಬೀಗ। ಯೋಗಣ್ಣ ಗೌಡನು।
ಬಾಗೇವಾಡಿಗೆ ನಾ ಹೋಗುವೆ-ನೆರೆಗಿದ್ದ
ಇಂಗಳೇಶ್ವರ ನೋಡಿ ಬರುವೆ॥ ೭೦

ಗುಡ್ಡ ಗಾಡ ತಿರುಗಿ। ಅಡ್ಡ ದಾರಿಲೆ ಹೋಗಿ।
ಗೌಡರ ಕಂದನ ತರುವೆವು-ಎಂದರು
ಗುಡ್ಡರು ವೀಳೆ ಎತ್ತಿದರು॥ ೭೧

ಹೊಲ ಹೊಲ ಹುಡುಕುವೆ। ಮೇಲ ಮಡ್ಡಿ ನೋಡುವೆ।
ಕುಲ ಕುಲಕ್ಕೆಲ್ಲ ಕೇಳೂತ-ಹೋಗುವೆ
ವಾಲಿಕಾರಗ ಅಪ್ಪಣೆ ಆಗಲಿ॥ ೭೨

ಒಕ್ಕಲಿಗ ಸೋಮನು। ಅಕ್ಕಸಾಲಿಗ ಶ್ಯಾಮ।
ಅಕ್ಕಲಕೋಟಿಗೆ ಹೊರಟರು-ಗೌಡರ
ಚಿಕ್ಕ ಚಿನ್ನನ ಹುಡುಕಲು॥ ೭೩

ಮಾದಾರ ಕೇರೆಲ್ಲ। ಮೊದಲಿಗೆ ಹೊರಟೀತು।
ಅದು ನೋಡಿ ಡೋಹರೆಲ್ಲರು-ನುಗ್ಗಿದರು
ಮುದ್ದು ಗೌಡರ ಮನೆ ಮುಂದೆ॥ ೭೪

ದೇವರಂತಹ ಗೌಡರು। ನಾವು ಮಾಡುವದೇನು।
ದೇವರ ಕೇಳಿ ನೋಡುವದು-ನಮ್ಮೂರ
ದೇವಿಯ ಜಾತರಿ ಮಾಡುವದು॥ ೭೫

ಕೇರಿ ಕೇರಿಗೆ ಸುದ್ದಿ। ಊರೂರಿಗೆ ಹಬ್ಬಿತ್ತು।
ಊರೂರು ಪರಿಪರಿಯ ಸುದ್ದಿಯ-ಕೇಳಿದ
ನೂರಾರು ಜನ ಬರುತಿಹರು॥ ೭೬

PRINTERS (MYSORE) PRIVATE LTD
LIBRARY
Accn. No.........
Date.........

ಒಬ್ಬರು ಒಂದೊಂದು ಮ- | ತ್ತೊಬ್ಬರು ಇನ್ನೊಂದು
ಅಬ್ಬರಿಸಿ ಜನ ಮಿಡುಕಿತ್ತು-ಜನಮನ
ಅಬಬ! ಶೋಕ ಸಾಗರದಿ ॥ ೭೭

ಹೊರಸೀನ ಮೇಲೀನ | ಅರಸೀಣ ತೆಗೆದಿಲ್ಲ |
ಕೊರಗೂತ ಬಂದಾರ ಬಾಣಂತಿಯರು-ಸುಗ್ಗವ್ವನ
ಸಿರತಿಯ ಮಗನೆಲ್ಲಿ ಹೋದನು ॥ ೭೮

ಹುಟ್ಟಿದಾಗ ಬಾರದ | ಇಷ್ಟೊಂದು ಜನವೆಲ್ಲ |
ನಿಟ್ಟುಸುರನಿಡುತ ಬರುವರು-ತಾಯಿ ತಂದೆ
ಸುಟ್ಟ ಹೊಟ್ಟೀಯ ತಣಿಸಲು ॥ ೭೯

ಚಲಿಸದಚಲ ಮನ | ಬಲತ್ತಿತ್ತು ಗೌಡರ |
ಫಲಿಸಿದ್ದು ಪಾಲೀಗೆ ಇಲ್ಲದಂತೆ-ಆದರೂ
ತಿಲಮಾತ್ರ ದೇವಗೆ ಹಳಿದಿಲ್ಲ ॥ ೮೦

ಬಂದ ಮಂದಿಗೂಡ | ಚಂದಾಗಿ ಮಾತ ಹೇಳಿ |
ನಂದದಿ ಉಪಚಾರ ಮಾಡೂತ–ಮನಮುಟ್ಟಿ
ಇಂದುಶೇಖರನಿಗೆ ನೆನೆಯೂತ ॥ ೮೧

ದೇವರ ಅಂಥವರು | ಭಾವ ಬಂಗಾರದವರು |
ಯಾವ ಮಾತೀಲಿ ನೋಯಿಸಿಲ್ಲ–ಜನಕೆಲ್ಲ
ಜೀವಕ್ಕಿಂತ ಹೆಚ್ಚು ನೋಡುವರು ॥ ೮೨

ಮೇರು ಅಂಥದು ನಮ್ಮ | ಧೀರ ಗೌಡರ ಮನವು |
ಮೀರಿ ನಿಂತಿದೆ ಸುಖದುಃಖ–ಸಂಸಾರ
ಥಾರಿ ಎರೆದಿಹರು ಶಿವನೀಗೆ ॥ ೮೩

ಮಾತೆ ಸುಗಲವ್ವೆಯ | ಆತೂಮ ಅರಳಿತ್ತು |
ಯಾತಕ್ಕೆ ಮೌನ ಮುರಿದೆಂದಳು-ಎನ ಕಂದ
ಮಾತು ಹೇಳಿ ಕಂಣ ಮರೆಯಾದೆಯಾ ॥ ೮೪

ಏಸು ಜನುಮದ ಪುಣ್ಯ | ಕೂಸಾಗಿ ಹುಟ್ಟಿ ನೀ |
ಮೋಸ ಮಾಡಿ ಮನೆ ಬಿಟ್ಟೋದಿ-ನಾಂಕಾಳ
ಕಸವಿಸಿ ಎನ್ನ ಒಡಲಾಗ ॥ ೮೫

ಸಂಣ ಮಗನಾಗಿ ತಾ । ಉಣಲಿಕ್ಕೆ ಬೇಡಿಲ್ಲ ।
ಕುಣದಾಡಿ ಮನೆ ತುಂಬ ಆಡಿಲ್ಲ-ಸುಕುಮಾರ
ದಣುವಾಗಿ ನಿದ್ದೆ ಮಾಡಿಲ್ಲ ॥ ೮೬

ಎಲ್ಲ ಮಕ್ಕಳಂತೆ । ಅಲ್ಲವ್ವ ನನ ಮಗ ।
ಸಲ್ಲಲಿತ ಶಿವನ ನೆನೆಯೂತ-ಕೂತರೆ
ಬಲ್ಲ ಯೋಗಿಯಂತೆ ಕಾಣುವ ॥ ೮೭

ಜೋಗಿಯ ಬೆನ್ಹತ್ತಿ । ಮಗ ಹೋದ ಬರಲಿಲ್ಲ ।
ಭೋಗ ತಪ್ಪದಲೆ ಉಣಬೇಕು-ತಾಯವ್ವ
ಮಗ ಮಗನೆಂದು ಮರಗೂತ ॥ ೮೮

ಮೂಕನಿದ್ದರೆ ಇರಲ್ಲಿ । ತೂಕಿನವ ಕೈಲಾಸದ ।
ಏಕಕಾಲಕ್ಕೆ ಬರಿದಾಯಿತು-ನನ ಮನಿ
ಸಾಕು ಸಾಕಾಯಿತು ಇರಲಾರೆ ॥ ೮೯

ಹಡೆದಿದೆನೆನ್ನುವ ಭಾವ । ಅಡಗಿ ಹೋಯಿತವ್ವ ।
ಬಡವಿಯ ಗೋಳ ಕೇಳದೇನೊ-ದೇವನೆ
ಒಡಲಗಿಚೆ ನಗೆ ಹೆಚ್ಚಾಯಿತು ॥ ೯೦

ನಡೆಯುವದು ಗೊತಿಲ್ಲ । ಎಡವುತ ಎಲ್ಹೋದಿ ।
ಕಡೆದಾಯಿತೇನೊ ನಿನ ನೋಡಿ– ಮಾಂಕಾಳ
ಬೇಡಿ ಮಸರನ್ನ ಒಯ್ದೆಲ್ಲೊ ॥ ೯೧

ಬೇಡದಲೆ ಕೊಟ್ಟು ನೀ । ಓಡಿಸಿ ಒಯ್ದಲ್ಲಿ ।
ಕಾಡಿನೊಳಗೆ ಜೋಡ ಅವಗ್ಯಾರು–ನಿನ್ಹೊರತು
ಒಡೆಯ ರೇವಣಸಿದ್ಧ ಕಾಪಾಡು ॥ ೯೨

ಎಂಟು ವರುಷದಿಂದ । ಅಂಟೆತು ಚಿಂತ್ಯೊಂದು ।
ಹೊಂಟು ಹೋದರೆ ಈ ಪರಿ–ಮನದಾಸೆ
ಸುಂಟರ ಗಾಳ್ಯಾಗಿ ಬಿಸೀತು ॥ ೯೩

ಮುಟ್ಟಲು ಮಾಸುವದು । ದಿಟ್ಟಿ ಹತ್ತೀತೆಂದು ।
ಬಟ್ಟೇಡತಿದ್ದೆ ಭಸಿತದ–ಹಣಿಮೇಲೆ
ಸುಟ್ಟು ಹೋಗಲೆಂದು ಕೆಟ್ಟಗಂಣು ॥ ೯೪

ಕೊಟ್ಟಿರುವಿ ಬೇಡದೆ । ಮುಟ್ಟಿ ಮನ ನೋಡಿದಿ ।
ಸುಟ್ಟು ಭಸಿತ ಮಾಡಿ ಧರಿಸಿರುವೆ–ಎನದೇವ
ಬಟ್ಟ ಬಯಲಾಗ ನಿಲಿಸೇದಿ ॥ ೯೫

ಮಗನ ನೆನವಿನಿಂದ । ಭುಗಿಲೇದಿತು ಹೊಟ್ಟೆಯು ।
ಮಗ್ಗುಲಲ್ಲಿ ಮಲಗುವ ಎನ ಕೂಸ–ಎಲ್ಹೋದಿ
ಮುಗಿಲು ಬಗೆದು ನಾ ನೋಡಲೇನ ॥ ೯೬

ಬೆಪ್ಪಾಗಿ ಕುಂತಳು । ರೆಪ್ಪೆಯು ಬಡೆದಿಲ್ಲ ।
ಮುಪ್ಪಿನ ತಾಯಿ ಸುಗಲವ್ವೆ–ಕಂಣ ಮುಂದೆ
ಕಪ್ಪು ಮೋಡ ಬಂದು ಮುಸುಕಿತ್ತು । ೯೭

ಚಿತ್ರದ ಗೊಂಬೆಯಂತೆ । ಮಿತ್ರಿ ಕುಂತಿಹಳಾಗ ।
ಸೂತ್ರ ಇತ್ತೇನು ಆ ಮಗನ–ಕೈಯೊಳಗೆ
ನೇತ್ರ ಚಲಿಸದೆ ಕೂತಿಹಳು ॥ ೯೮

ಹಡೆದವ್ವನ ಹೊಟ್ಟೆಗೆ । ಸಿಡಿಲು ಬಡೆದಿತ್ತಾಗ ।
ಹುಡುಕಿದರು ಕಂದನು ಸಿಗವಲ್ಲ–ಎಂಬ ಸುದ್ದಿ
ಕಿಡಿ ಕಿಡಿ ಬೆಂಕಿ ಕಾರಿತ್ತು ॥ ೯೯

ಸಂಧಿ ೫

ಎಂಟು ವರುಷದ ಬಾಲ । ಒಂಟೀಗ ನಡೆದನು ।
ಗಂಟಲ ನರ ಹರೆಯುವಂತೆ–ಕರೆಯೂತ
ಕುಂಟೂತ ಬೀಳೂತ ಮುಂದೆ ಮುಂದೆ ॥ ೧

ಮಲ್ಲಯ್ಯನ ಕಾಣಲು । ಎಲ್ಲವು ತೊರೆದಿಹನು ।
ಕಲ್ಲು ಮುಳ್ಳು ಎನ್ನದೆ ಹೊರಟನು–ಸುಕುಮಾರ
ಮಲ್ಲಯ್ಯ ಮಲ್ಲಯ್ಯ ನೆನೆಯುತ ॥ ೨

ಮೆತ್ತನ ಕಾಲೀನ । ನೆತ್ತರ ಸುರಿದರೂ ।
ಎತ್ತಿ ಕೊಳ್ಳಲು ಯಾರಿಲ್ಲ–ಮುಖವೆಲ್ಲ
ಬತ್ತಿ ಬಾಡಿದೆ ಸಿದ್ಧನ ॥ ೩

ಬುತ್ತೆಲ್ಹೋ ಬಿದ್ಹೋಯಿತು । ಚಿತ್ತ ಚೆನ್ನನಮೇಲೆ ।
ಅತ್ತಿತ್ತ ಅಲೆದಾಡಿ ಮೈಯೆಲ್ಲ–ಧೂಳಾಗಿ
ಮೆತ್ತನ ಮನಕೆ ಗಾಯಾಗಿ ॥ ೪

ವನ ವನ ತಿರುಗೂತ । ವನ ಪಶುಗಳಿಗೆಲ್ಲ ।
ಚೆನ್ನ ಮಲ್ಲನ ಕಂಡಿದಿರಾ–ಕಂಡರೆ
ಎನಗೊಮ್ಮೆ ಅವನ ತೋರಿರೊ ॥ ೫

ಮರದ ಬುಡದಲ್ಲಿ । ಶಿರ ಎತ್ತಿ ನೋಡಿದನು ।
ಸ್ಥಿರವಾಗಿ ನಿಂತೀದಿ ಹಿರಿ ಮರವೆ–ನೀ ಎನ್ನ
ಹರ ಮಲ್ಲನನು ಕಂಡಿದೆಯಾ ॥ ೬

ಕೋಗಿಲ ದನಿ ಕೇಳಿ । ಸಾಗಿ ಅಲ್ಲಿಗೆ ಹೋಗಿ ।
ಕೂಗಿ ಮಲ್ಲಯ್ಯನ ಕರೆತಂದು–ತೋರಿರಿ
ಬಾಗಿ ಅವನಡಿಯ ಹಿಡಿಯೂವೆ ॥ ೭

ಗಿಳಿಯ ಹಿಂಡವ ಕಂಡು । ಎಳೆ ಮಗು ಶಿವಸಿದ್ಧ ।
ಕಳವಳಿಸಿ ಕೇಳಿದನು ಗಿಳಿಗಳಿರ–ಮಲ್ಲಯ್ಯ
ಸುಳಿದ್ಹೋದ ದಾರಿಯ ತೋರಿರೆ ॥ ೮

ತುಂಬಿಯ ಹಿಂಡವ ಕಂಡು । ಹಂಬಲಿಸಿ ಓಡ್ಹೋಗಿ ।
ಸಾಂಬ ನನ್ನಯ್ಯನ ಕಂಡರೆ–ಹೇಳಿರೊ
ಕಂಬನಿ ಸುರಿಸೂತ ಕೇಳಿದನು ॥ ೯

ಚಿಗರಿಯ ಹಿಂಡಿನಲ್ಲಿ । ಜಿಗಿದಾಡುವ ಮರಿಗಳೆ ।
ಅಗಲಿದರೆ ತಾಯಿ ನಿಮಗೆಂತು–ದುಃಖವು
ಬೇಗ ಎನ ತಂದೆಗೆ ತೋರಿರೊ ॥ ೧೦

ಹರಿಯೂವ ಹಳ್ಳವೆ ನಿಂ- । ತಿರುವ ಕೆರಿಯೆ ।
ಹರ ಹೋದ ದಾರಿ ಇದೆ ಏನು–ನೊಂದು ತಾ
ಮರಗೂತ ಸುಕುಮಾರ ಕೇಳಿದನು ॥ ೧೧

ಕಾಡ ಆಕಳ ಕಂಡು । ಓಡೋಡಿ ಹೋಗುವನು ।
ಹಡೆದವ್ವ ನೀ ಎನ್ನ ಮಲ್ಲಯ್ಯನು–ಹಸಿದಾಗ
ಕುಡಿಯಲು ಹಾಲು ಕರದೇನ ॥ ೧೨

ಮಿಡಕೂತ ಕೇಳಿದನು । ಗಿಡಕೆಲ್ಲ ಶಿವಸಿದ್ಧ ।
ತಡ ಯಾಕೆ ಹೇಳಿರೆ ಮಲ್ಲಿನಾಥ–ಹೋಗುವಾಗ
ಅಡಿಯು ಮೂಡಿದವೇನು ಬನದಾಗ ॥ ೧೩

ಹೆಡೆ ತೆಗೆದು ಆಡೂವ | ತಡವಿದರೆ ಭುಸ್ಸೆಂದು |
ಕಡು ಕೋಪಗೊಂಡು ನೋಡುವ-ನಾಗುಣ
ಅಡಿಗಳ ತೋರಿಂದ ಮಲ್ಲೇಶನ || ೧೪

ಅಳಲೂತ ಬಳಲೂತ | ಎಳೆ ಮನದ ಸಿಧ್ಧೇಂದ್ರ |
ಮಳೆಗಾಲ ಬೇಸಿಗೆ ಭೇದಿಲ್ಲ-ಹುಡುಕಲು
ಛಳಿಗೂ ಲೆಕ್ಕಿಸದೆ ತಿರಗೂತ || ೧೫

ಕಾನನ ಶ್ವಾಪದಕೆ | ಆನಿ ಹುಲಿಗಳಿಗೆಲ್ಲ |
ಅನುರಾಗದಿಂದ ಕೇಳಿದನು-ಎನ್ನೊಡೆಯ
ಚನ್ನ ಮಲ್ಲೇಶನ ಅರಿಯಿರೆ || ೧೬

ತನ್ನದೆಲ್ಲವು ಮರೆತು | ಚೆನ್ನಿಗನ ಹುಡಕೂತ |
ಬೆನ್ನ ಹತ್ತಿ ಹೊರಟನು ಪರಸಿಯ-ಜನಗೂಡ
ಚೆನ್ನಮಲ್ಲೇಶನಿಗೆ ತೋರಿರೊ || ೧೭

ಬಿಕ್ಕಿ ಬಿಕ್ಕಿ ಅಳುವ | ಚಿಕ್ಕ ಸಿದ್ಧನ ಕಂಡು |
ಕಕ್ಕುಲಾತೀಲಿ ಕರೆದು ಕೇಳಿದರು-ತಾಯಿತಂದೆ
ಸಿಕ್ಕಿಲ್ಲವೇನು ಹುಡುಕಿದರು || ೧೮

ಬಂಗಾರದಂತಹ ಕೂಸು | ಹ್ಯಾಂಗ ಮರೆತರವ್ವ |
ಹಂಗ ಹರಿದು ಹೋದರೆ ತಾಯಿತಂದೆ-ದಾರಿಯ
ಜಂಗುಳಿಯೊಳಗೆ ಕಳೆದರೆ || ೧೯

ಯಾಕೆ ಅಳುವಿಯೊ ಕಂದ | ವ್ಯಾಕೂಳಗೊಂಡು ನೀ |
ಜ್ವಾಕೀಲಿ ಕರೆದೊಯ್ದು ತಾಯಿಯ-ಕೈಯಲ್ಲಿ
ಅಕ್ಕರದಿಂದ ಕೊಡುವೇವು || ೨೦

ಮುತ್ತಿನಂತಹ ಮಗನ | ಹೆತ್ತವ್ವ ಮರಿಬೇಕೆ |
ಹತ್ತೆಂಟು ಮಕ್ಕಳು ಇದ್ದಾರು–ಮತ್ತೆ ಬೇ-
ಸತ್ತು ಮುಂದೆ ಹೋದಳೆ || ೨೧

ಮಕ್ಕಳು ಹೊಟ್ಟೇಲಿ | ದಕ್ಕಲಿಲ್ಲವೆಂದು |
ಪಕ್ಕದ ಮನೆಯ ಪಾರಕ್ಕ–ಗಿರಿಮೇಲೆ
ಒಕ್ಕಳ ಹುಗ್ಗಿ ಹಾಕುವಳು || ೨೨

ಬಾಲನ ಪಡೆಯಲು । ಮೇಲ ಗಿರೀಗೆ ಹೋಗಿ ।
ಚೀಲ ಚೀಲ ಬೋನವ ಬಸಿದು–ಚೊಂಚರಿಗೆ
ನೀಲ್ಲವ್ವ ಉಣಿಸಿ ಬರುವಳು ॥ ೨೩

ಬೆಟ್ಟ ಏರಲು ಸೋತು । ಹಟ ಹಿಡಿದು ನಿಂತಾಗ ।
ಸಿಟ್ಟೀಲಿ ಮುಂದೆ ಹೋದರೆ-ತಾಯಿತಂದೆ
ನೆಟ್ಟನೆ ಪರವೂತ ಗಿರಿ ಏರಿ ॥ ೨೪

ಅತ್ತು ಅತ್ತು ಮುಖವು । ಬತ್ತಿರುವ ಸುಕುಮಾರ ।
ನೆತ್ತಿಯು ನೀರ ಕಂಡಿಲ್ಲ-ಹಸಗೂಸೆ
ಹೆತ್ತವ್ವನ ಹೆಸರು ಏನ್ಹೇಳು । ೨೫

ಎಲ್ಲಿ ನಿನ ತಾಯಿ ಎಂದು । ಅಲ್ಲಲ್ಲಿ ಕೇಳುವರು ।
ಮಲ್ಲಯ್ಯನ ತೋರಿರೆ ತಾಯಿಗಳಿರಾ-ಅವನಡಿ
ಹುಲ್ಲು ಕಡ್ಡಿಯಾಗಿ ಬದಕುವೆ ॥ ೨೬

ಸುತ್ತಮುತ್ತಿನ ಜನ । ಹತ್ತೆಂಟು ಕೇಳಲು ।
ಗೊತ್ತಾಗದಂತೆ ಹೊರಟನು–ಬಾಲಸಿದ್ಧ
ಚಿತ್ತ ಚೆನ್ನನಲ್ಲಿ ಇಟ್ಟಿಹನು ॥ ೨೭

ಊರ ಹೆಸರ ಕೇಳಲು । ದೂರ ದೂರ ಹಾಯುವನು ।
ಹರ ಮಲ್ಲಯ್ಯನೆ ಉಘೆ ಎಂದು-ನುಡಿಯಲು
ಹಿರಿ ಹಿರಿ ಹಿಗ್ಗೂತ ದನಿಗೊಡುವ ॥ ೨೮

ರಾಗ ದ್ವೇಷಗಳಳಿದು । ಭೋಗದಾಚೆ ನಿಂದ ।
ಯೋಗ ಸಾಧಕರು ಹಲವರು-ಹೊರಟಾರ
ಸಾಗಿ ಶ್ರೀಶೈಲ ಪರವುತಕೆ ॥ ೨೯

ಚಿತ್ತ ಶುದ್ಧಿಯವರು ।ಸತ್ಯ ಶರಣರವರು ।
ಬೆತ್ತ ಹಿಡಿದು ಪರವೂತ ಏರುವದು–ತಾ ಕಂಡು
ಕತ್ತು ಬಾಗಿಸಿ ಸಿದ್ಧ ಶರಣೆಂದ ॥ ೩೦

ಕಂದನ ಕಳೆ ಕಂಡು ಆ– । ನಂದ ಪಡುವರು ।
ಸಂದಳಿದು ಮಲ್ಲಯ್ಯ ಮಲ್ಲಯ್ಯ–ಎಂಬುವ
ಕಂದನ ನುಡಿ ಕೇಳಿ ತಣಿವರು ॥ ೩೧

ಸದಮಲ ಭಕ್ತೀಲಿ । ಚಿದ್ರೂಪ ಮಲ್ಲೇಶನ ।
ತದೇಕ ಧ್ಯಾನದಿ ಹೊರಟಿಹರು–ನೆನೆಯೂತ
ನಾದ ಬಿಂದು ಕಳಾತೀತನ ॥ ೩೨

ಕಂಬೀಯ ಹೊತ್ತುಕೊಂಡು । ಸಾಂಬನೆ ಭಲೆ ಎಂದು ।
ಶಂಭೊ ಮಲ್ಲಯ್ಯ ಉಘೆ ಎಂದು–ಸಾರೂತ
ಕಂಬಿಯ ಅಯ್ಯನವರು ನಡೆದಿಹರು ॥ ೩೩

ಊರೂರ ಮುದ್ದಲಸಿ । ಸಾರಿ ಶಿಷ್ಯರ ಹೆಸರು ।
ಏರೂತ ಪರವೂತ ಗಿರಿಮೇಲೆ–ಕಂಬಿಯುವರು
ನೀರು ನೀಡೂತ ಜನರಿಗೆ ॥ ೩೪

ಭಜನೆಯ ಮಾಡೂತ । ಸುಜನರು ಹೊರಟಿಹರು ।
ಅಜ ಹರಿ ವಂದಿತ ಪಾದವ–ಕಾಣಲು
ಸೋಜಿಗ ಸ್ಥಳಗಳ ನೋಡಲು ॥ ೩೫

ಜಾತರಿ ನೋಡಲು । ಆತುರದಿ ಹೊರಟಿಹೆವು ।
ಕ್ಷೇತ್ರಪಾಲ ಚೆನ್ನ ಮಲ್ಲನ-ದರುಶನಕೆ
ಅತಿ ದೂರದಿಂದ ಪರಸಿಗಳು । ೩೬

ಬಿಸಲಿಗೆ ಬಾಯಾಗ । ಎಸರಿರಲಿಲ್ಲ ಜನಕೆ ।
ಕೂಸು ಸಿದ್ಧನು ನೀರಿಗೆ ಬಾಯಿ-ತೆರೆದಿಲ್ಲ
ಅಸಮ ಮಲ್ಲೇಶನ ನೆನೆಯೂತ ॥ ೩೭

ಕಡಲಿಯ ಬೇಳೆಯನು । ಗಡ ನೀರೊಳು ನೆನೆಯಿಸಿ ।
ಒಡಲ ತಂಪಿಗೆ ನೀರುಳ್ಳಿ-ಕೂಡಿಸಿ
ಬಿಡದೆ ತಿನ್ನುವರು ಜನರೆಲ್ಲ ೩೮

ಸುಕುಮಾರನಿಗಾಗ । ಅಕ್ಕರದಿ ಕರೆತಂದು ।
ಮುಕ್ಕಳಗೂಡ ಕೂಡಿಸಿ-ಕೊಟ್ಟರೆ
ಗಕ್ಕನೆ ಎದ್ದು ಓಡುವನು ॥ ೩೯

ಓಡದಿರು ಏ ಕಂದ । ಒಡಲು ತಂಪಾಗಲಿ ।
ಗುಡ್ಡದ ಬಿಸಿಲು ಬಲು ಕೇಡು–ಮಾಡುವದು
ಬಿಡು ನಿನ್ನ ಹಟವ ತಿನಬಾರೊ ॥ ೪೦

ಒಲ್ಲೆನು ತಾಯವ್ವ । ಮಲ್ಲಯ್ಯನ ಕಾಣಲು ।
ಅಲ್ಲಲ್ಲಿ ಕಿಚ್ಚು ಹತ್ತಿದೆ-ನೆನಗಡಲಿ
ಒಲ್ಲೆನೆಂದು ಮುಂದೆ ಹೊರಟನು ॥ ೪೧

ಕಾಲೆಲ್ಲ ನೆತ್ತರ । ಮೇಲೆ ಬೇಸಿಗೆ ಬಿಸಿಲು ।
ಮೇಲಗಿರಿ ಏರೂತ ಹೊರಟನು-ಸಿದ್ಧೇಶ
ಲೋಲದಿ ದೇವನ ಕಾಣಲು ॥ ೪೨

ಕಾಲು ಜಾರುವದೆಂದು । ಕೋಲ್ಹಿಡಿದು ಕೈಯಾಗ ।
ಮೇಲ ಪರವುತ ಏರುವರ-ಸಂಗಡ
ಬಾಲ ನಡೆದನು ಶೋಕದಲಿ ॥ ೪೩

ಮುಂದಿನ ಪರಸಿಯುವರು । ಬಂದು ಕೈಹಿಡಿದಾರ ।
ಕಂದ ಯಾಕೆ ಅಳುವಿ ನಡೆ ಎಂದು-ರಮಿಸುವರು
ತಂದೆ ತಾಯ್ಗಳ ಹೆಸರು ಕೇಳುವರು ॥ ೪೪

ನೆತ್ತರ ಸುರಿದೀತು । ಉತ್ತುಮಾಂಗನೆ ಬಾರೊ ।
ಎತ್ತಿಕೊಳ್ಳುವರು ನಮ್ಮವರು-ಎಳೆಮೈಯ
ಮತ್ತೆ ಬಾಡೀತು ಬಿಸಲೀಗೆ ॥ ೪೫

ಬೆಟ್ಟ ಏರೂವಾಗ । ಕೆಟ್ಟ ಬಿಸಲಿಗಾಗಿ ॥
ತಟ್ಟಿನ ಆವುಗಿ ಮೆಟ್ಟ್ಯಾರ-ಜನಕೆಲ್ಲ
ತಟ ತಟ ಬೆವರು ಸುರಿವುದು ॥ ೪೬

ಬೇಸಿಗೆಯ ಬಿಸಿಲು । ಕೂಸು ಕುಡಿಯೊ ನೀರು ।
ಏಸೊಂದು ಜನ ನಿನಗೆ ಹೇಳಿದರೆ-ಕೇಳವಲ್ಲಿ
ಮೊಸರನ್ನ ಕೊಡುವೆ ಉಣು ಬೇಗ ॥ ೪೭

ಉಂಡು ತಿಂದು ನಡಿಯೊ । ದಂಡೀಸದಿರು ದೇಹ ।
ಕೆಂಡಗಂಣಿನ ಗಿರಿಮಲ್ಲನ-ತೋರುವೆವು
ಹಿಂಡ ಜನರಂಗ ನಡೆ ಕಂದ ॥ ೪೮

ಒಲ್ಲೆನು ತಾಯವ್ವ । ಮಲ್ಲಯ್ಯನು ಉಣದಲೆ ।
ಎಲ್ಲಿಗೆ ಹೋದನು ನಾ ಕಾಣೆ-ಎನ್ನುವನು
ವಿಲಿವಿಲಿ ಒದ್ದಾಡುವದು ಮನ ॥ ೪೯

ಊಟ ನನಗೊಲ್ಲೆನು। ಮಾಟಗಾರನು ಮಲ್ಲ
ನೋಟದ ಆಚೆ ಮಾಯಾದ-ತಾಯವ್ವ ಅ-
ಕಟಕಟ ಬಾಧೆಯ ಸೈರಿಸೆ ॥ ೫೦

ಎಲ್ಲ ಮಕ್ಕಳ ಹಂಗ। ಅಲ್ಲವ್ವ ಈ ಕೂಸು।
ಮಲ್ಲಯ್ಯನ ಮಹಿಮೆ ಅರಿಯೆವು-ಬಾಲನ
ಎಲ್ಲಿಂದ ತಂದನೊ ಗಿರಿಮಲ್ಲ ॥ ೫೧

ಎಂಟು ವರುಷದ ಮಗ। ಹೊಂಟಾನ ಬರಿಗಾಲ।
ಬಂಟರಂಗ ಗಿರಿಯ ಏರೂತ-ಭರದಿಂದ
ಒಂಟೀಗ ಶಿವ ಸಿದ್ಧರಾಮನು ॥ ೫೨

ಮಲ್ಲಯ್ಯನು ಮಾತಾಡಿ। ಎಲ್ಲಿಯೊ ಹೋದನಂತೆ।
ಅಲ್ಲಲ್ಲಿ ಹುಡುಕುತ ಹೊರಟೇದ-ಹುಡುಗಗೆ
ಇಲ್ಲಿ ಕರೆಯಿರಿ ಕೇಳೋಣ ॥ ೫೩

ನಿನ್ನ ಹೊಲಕೆ ಬಂದು। ಚನ್ನಮಲ್ಲೇಶನು।
ತಿನಲು ಬೇಡಿದನೆ ಸೀತೆನಿ-ಆತನು
ಉಣಲು ಬೇಡಿದನೆ ಮೊಸರನ್ನ ॥ ೫೪

ಹಾಲು ತುಂಬಿವ ತೆನಿ। ಮೇಲಗಿರಿ ಮಲ್ಲಯ್ಯಗೆ।
ಹೊಲದೊಳಗೆ ಸುಟ್ಟು ಕೊಟ್ಟೆನು-ನನ್ನಯ್ಯ
ಎಲ್ಲಿಗೆ ಹೋದನು ನಾಕಾಣೆ ॥ ೫೫

ಹಸಿವೆ ನಿನಗೆಂದು। ಕಸವಿಸಿಗೊಳ್ಳುತ।
ಮೊಸರನ್ನ ಬೇಡಿ ನನ ಕಳುಹಿದಿ-ನನ್ನಪ್ಪ
ಏಸು ದಿನ ನಿನಗೆ ಉಪವಾಸ ॥ ೫೬

ಜನಕೆಲ್ಲ ಬಿಟ್ಟನು। ವನದೊಳಗೆ ಸೇರಿವನು।
ಚೆನಮಲ್ಲನೆಂದು ಕೂಗುತ-ಕೂಗೂತ
ವನವೆಲ್ಲ ಸುತ್ತ ಹತ್ತಿದನು ॥ ೫೭

ಬಿದರ ಬನದಾಗ। ಹೆದರದೆ ಹೊಕ್ಕನು।
ಚದುರ ಚನ್ನಿಗನ ಕಾಣಲು-ಹಂಬಲಿಸಿ
ರೋದಿಸುತ ಕೇಳಿದ ಬನಕೆಲ್ಲ ॥ ೫೮

ಬಿದರಿಗೆ ಬಿದರ ತಿಕ್ಕಿ । ಉದುರಿತ್ತು ಕಿಡಿಬೆಂಕಿ ।
ಹಾದಿ ದೋರಿದವು ದೀಪಾಗಿ-ಸಿದ್ಧರಾಮ
ಮೋದದಿ ತಿರುಗಿದನು ಪರವೂತ ॥ ೫೯

ಅಂಬಲಿ ಹಳ್ಳ ದಾಟಿ । ಕಂಬನಿ ಸುರಿಸಿದನು ।
ನಂಬಿ ಕೆಟ್ಟೆನೊ ಎನ ದೇವ-ನಿನ್ನನು
ನಂಬಿ ಕರೆವರೆ ದೂರಾದಿ ॥ ೬೦

ಭೀಮನ ಕೊಳ್ಳವನೇರಿ । ರಾಮ ಹೊರಟನು ಆಗ ।
ಸ್ವಾಮಿ ಮೆಲ್ಲನೆ ದನಿದೊರೊ-ಎನ್ನುತ
ಕೋಮಲ ದೇಹದ ಅರುವಿಲ್ಲ ॥ ೬೧

ಕೈಲಾಸ ಬಾಗಿಲದಿ । ಉಲ್ಹಾಸದಿ ಕಂಬಿಯು ।
ಮೇಲಗಿರಿ ಮಲ್ಲಯ್ಯ ಉಘೆ ಎಂದು-ಗರ್ಜಿಸಿ
ಲೋಲದಲಿ ಕಂಬಿಯು ಆಡಿಸುವರು ॥ ೬೨

ಸಂಬಾಳ ನುಡಿಸೂತ । ಕಂಬಿಯು ತಿರವೂತ ।
ನಂಬಿದ ಶಿಷ್ಯರ ಹೆಸರ್ಹೇಳಿ-ಸಾರೂತ
ಸಾಂಬ ಮಲ್ಲಯ್ಯನೆ ಸಲುಹೆಂದು ॥ ೬೩

ಬಂದ ಭಕ್ತರು ಪರಮಾ- । ನಂದದಿ ಮುದ್ದಲಿಸಿ
ತಂದ ಬೆಲ್ಲವ ಹಂಚುವರು-ಮಲ್ಲೇಶ
ತಂದೆ ಎಲ್ಲರನು ಕಾಪಾಡು ॥ ೬೪

ಭವ್ಯ ಗುಡಿಯೊಳಗಿನ । ದಿವ್ಯ ಲಿಂಗದ ಮುಂದೆ ।
ಅವ್ವ ! ಕರೆದೊಯ್ದು ತೋರಿದರು-ಸಿದ್ಧಗೆ
ದೇವ ಮಲ್ಲಯ್ಯನು ಈತನೆ ॥ ೬೫

ಈತನೆ ಮಲ್ಲಯ್ಯ । ಜಾತರಿ ಕೂಡುವದು
ನಿತ್ಯ ಕ್ಷೇತ್ರವೆನ್ನುವರು-ಮಲ್ಲಯ್ಯನು
ಜ್ಯೋತಿರ್ಲಿಂಗ ಹನ್ನೆರಡರೊಳು ॥ ೬೬

ನಿನ್ನ ಮಲ್ಲೇಶನಿಗೆ । ಚೆನ್ನಿಗನೆ ನೋಡಿಲ್ಲಿ ।
ಇನ್ನಾದರು ನಮ್ಮ ಮಕ್ಕಳ-ಸಂಗಡ
ಅನ್ನ ಉಣಿಸುವೆವು ನಡೆ ಮಗುವೆ ॥ ೬೭

ಕಲ್ಲಿನ ಲಿಂಗಯ್ಯ । ಅಲ್ಲಿವನು ಮಲ್ಲಯ್ಯ ।
ಎಲ್ಲಿ ಹೋದನೆನ್ನ ಮಲ್ಲಯ್ಯ-ಮಾತಾಡಿ
ಸಲ್ಲದು ಅವನಿಂತು ಅಡಗುವದು ॥ ೬೮

ಹರ ಹರ ಶಿವ ಶಂಭೊ । ಪರಿಹರಿಸು ಎನ ತಾಪ ।
ಉರಿಯುವದು ಎದೆ ಹೊಟ್ಟೆ-ಮಲ್ಲೇಂದ್ರ
ತೋರಲಾರೇನೊ ನಿನ ಪಾದ ॥ ೬೯

ಗುಡಿಹೊರಗೆ ಹೊರಟಾಗ । ತಡವಿದರು ಜನರೆಲ್ಲ ।
ಗಡಗಡ ನೆಲವೆಲ್ಲ ಉರುಳಿದನು-ಬಾಲಸಿದ್ಧ
ಒಡನೆ ಮತ್ತೆದ್ದು ಓಡಿದನು ॥ ೭೦

ಮೇಳೈಸಿದ ಜನ । ಹಳಹಳಿಸುತ್ತಿಹುದು ।
ತಿಳಿಗೇಡಿ ಕಂದನು ಕೇಳದಲೆ-ಬೆಟ್ಟದ
ಕೊಳ್ಳ ಕಮರಿಯೆಡೆ ಹೊರಳಿದನು ॥ ೭೧

ಅಟಕೇಶನ ಗುಡಿಯಾಗ । ನೆಟ್ಟನೆನೋಡಿದನು ।
ದಿಟ ಮಲ್ಲಯ್ಯನು ಇರಲಿಲ್ಲ-ಅದು ಕಂಡು
ಚಟ್ಟನೆ ಎದ್ದು ನಡೆದನು ॥ ೭೨

ಶಿಖರೇಶನ ಗುಡಿಯಾಗ । ಮಿಕಿ ಮಿಕಿ ನೋಡಿದನು ।
ಏಕ ಕಾಲಕ್ಕೆ ಬರಿದಾಗಿ-ಕಂಡೀತು
ಬಿಕಿಬಿಕ್ಕಿ ಅಳುತ ಹೊರಳಿದನು ॥ ೭೩

ರುದ್ರಾಕ್ಷಿ ಮಠಕ್ಹೋಗಿ । ಚಿದ್ರೂಪನರಸೂತ
ಉದ್ರೇಕದಿಂದ ನುಡಿದನು–ನನ್ನಯ್ಯ
ಕ್ಷುದ್ರತನ ಸುಟ್ಟು ಬಂದಿರುವೆ ॥ ೭೪

ವಿಭೂತಿ ಮಠದಾಗ । ಅಭವನ ಹುಡುಕಿದನು ।
ನಾಭಿ ಕಿಚ್ಚೆದ್ದು ಉರಿವುದು-ನಿನಗಾಗಿ
ಅಭಿಮಾನ ನಿನ್ನದು ನಿನಗಿರಲಿ ॥ ೭೫

ಎಂಟು ವರುಷದವನು । ಹೊಂಟನು ಹುಡುಕೂತ ।
ಘಂಟೆಯ ಮಠದೊಳಗೆ ಇರಲಿಲ್ಲ–ಸಿದ್ಧೇಶ
ಹೊಂಟು ಮುಂದೆ ಮುಂದೆ ನಡೆದನು ॥ ೭೬

ಅರವತ್ತಾರು ಕಂಭದ । ಪರವುತ ಮಠದಾಗ ।
ಗುರುವೆ ನಿನ್ನನು ಕಾಣಲು-ಬಂದಿರುವೆ
ಮರುಗಿಸಿ ಮತ್ತೆ ತಿರವುವದೆ ॥ ೭೭

ಲಿಂಗದ ಹೊಳಿಯಾಗ । ಅಂಗಾಂಗ ತೊಳದೀದೆ ।
ಹಿಂಗಿಲ್ಲವೇನೊ ನನ ಕರ್ಮ-ಮಲ್ಲಿನಾಥ
ಭಂಗ ತರಬೇಡೊ ಮುಖತೋರೊ ॥ ೭೮

ಪಂಚೆಧಾರೆಯೊಳು । ಪಂಚ ಭೂತದಕಾಯ ।
ವಂಚನೆ ಇಲ್ಲದೆ ತೊಳದೀದೆ-ಎನ ದೇವ
ಪಂಚಮುಖದವನೆ ಕರುಣಿಸೊ ॥ ೭೯

ಪಲ್ಲಧಾರೆಯೊಳು । ಎಲ್ಲಕರಣವ ತೊಳೆದು ।
ಮಲ್ಲೇಶನೆ ನಿನ್ನನು ಹುಡುಕೂತ-ಬಂದಿರುವೆ
ಸಲ್ಲಲಿತ ಶಿವನೆ ವರವಾಗೊ ॥ ೮೦

ಬೇಳೆಯ ಬಸವಂಣ । ಹೇಳೆನಗೆ ದೇವನೆಲ್ಲಿ ।
ಇಳೆಯೊಳು ಇಳಿದು ಬಾಯೆಂದು-ಬಕುತರ
ಗೋಳ ಕೇಳಿ ಕಳೆಯಲಿಂದು ॥ ೮೧

ಬೆನ್ನಹಿಂದೆ ಕೂತಿರುವಿ । ಬೆನ್ನೀನ ಎಲುವಾಗಿ ।
ಚೆನ್ನಮಲ್ಲೇಶನ ಸತಿಯಳೆ-ಭ್ರಮರಾಂಬೆ
ಸನ್ನುತ ಶಿವನೆಲ್ಲಿ ಇರುವನು ॥ ೮೨

ಅವ್ವ ಅವ್ವ ಎಂದು । ಭವರಮ್ಮನ ಕರೆವನು ।
ಯಾವ ನೆವ ಎನಗೆ ಹೇಳದಿರು-ನಿಮ್ಮಗಲಿ
ಜೀವ ಬೇಸರಾಯ್ತು ಹಡೆದವ್ವ ॥ ೮೩

ತಾಯೆ ಭ್ರಮರಾಂಬೆಯೆ । ಗಾಯಗೊಂಡೇನವ್ವ ।
ಛಾಯದ ತಂಪು ಬೀಸವ್ವ-ನಿನ್ನ ಆ
ಜೀಯನ ಕರೆತಂದು ತೋರವ್ವ ॥ ೮೪

ಗಂಗೆ ನೀ ಪಾತಾಳಕೆ । ಹೆಂಗ ಬಂದಿದಿ ಹೇಳೆ ।
ಮಂಗಳ ಮೂರುತಿ ಮಾರಾಯನ-ಜಡೆಬಿಟ್ಟು
ಸಂಗರಹಿತಳಾಗಿ ಹರಿವೂತ ॥ ೮೫

ಎಳೆಯ ಚಂದಿರನೆ। ಕಳೆಯುಳ್ಳ ನಿನ ತೇಜ।
ಸೆಳೆದವು ಲೋಕದ ಕಂಣ್ಮನ–ನೀ ನಿನ್ನ
ಭಾಳಲೋಚನನ ಸಲೆ ತೋರೊ॥ ೮೬

ಅಮರನಯನ ಜ್ಯೋತಿ। ಕಾಣದೆ ಸೈರಿಸೆ।
ಕಮರಿಯ ಹಾರಿ ಪ್ರಾಣವ–ಕೊಡುವೆನು
ಪ್ರೇಮದಿ ತಂದೆ ಕಾಣಿಸೊ॥ ೮೭

ಬಾರೊ ಬಾ ಮಲ್ಲಯ್ಯ। ತೋರೊ ನಿನ್ನ ರೂಪ।
ಹರ ಹರ ಶಂಭೊ ಮಾದೇವ–ನಿನ್ನ ಪಾದ
ತೋರಲಾರೇನೊ ತವಕದಿ॥ ೮೮

ಘೋರ ಅಪರಂಪಾರ। ಪರವುತ ಕಮರಿಗೆ।
ಸಾರಿ ಹೋದನು ಶಿವಸಿದ್ಧ–ಕಂಣೀರು
ಧಾರೆಗಟ್ಟಿಹವು ಕೊಳ್ಳತುಂಬಿ॥ ೮೯

ಹರಹರ ಮಹಾದೇವ। ಪರಿಹರಿಸು ಜನುಮವ।
ಗುರುವೆ ಮಲ್ಲಯ್ಯ ಮಲ್ಲಯ್ಯ–ಸುಕುಮಾರ
ಹಾರಿದನು ಘೋರ ಕಮರಿಯ॥ ೯೦

ಎಳೆಯ ಕಂದನ ಕೂಗು। ಸೀಳಿಸಿ ಬೆಟ್ಟವನೆ।
ಏಳು ಸ್ವರದ ನಿನಾದವು–ತುಂಬಿತು
ಭಾಳಚಂದ್ರನಿಗೆ ಕೇಳಿತು॥ ೯೧

ಕರವಿಡಿದು ಎತ್ತಿದನು। ಗುರು ಮಲ್ಲಯ್ಯ ಆಗ।
ಭರದಿಂದ ಎದೆಗೆ ಅಪ್ಪಿದನು–ಸಿದ್ಧನ
ಒರಸಿದನು ಸುರಿವ ಕಂಣೀರು॥ ೯೨

ಅತ್ತತ್ತು ಬೇಸತ್ತು। ಸೋತು ಅಸುವ ನೀಗಲು।
ಇತ್ತ ಬಂದೇನೊ ನನಕಂದ–ಈ ನಿನ್ನ
ಉತ್ತುಮ ಕಾಯವ ಅರಪಿಸಲು॥ ೯೩

ಕುಲುಕುಲು ನಸು ನಕ್ಕು। ತಲೆ ಮೇಲೆ ವರಹಸ್ತ।
ಬಲು ಪಿರಿತಿಯಿಂದ ಇಟ್ಟನು–ಮಲ್ಲಯ್ಯ
ಒಲುವಿನ ಕೂಸೆ ಹರುಷಾಗಲಿ॥ ೯೪

ಬಿಡವಲ್ಲ ಪಾದಗಳ। ದೃಢದಿಂದ ಹಿಡಿದನು।
ಅಡಿಗಳ ಮೇಲೆ ಉರುಳಾಡಿ–ಎಂದನು
ಹಡೆದಪ್ಪ ನೀ ನನಗೆ ಅಗಲದಿರು॥ ೯೫

ಬಾಡಿದ ಮುಖದ ಮೇಲೆ। ಮೂಡಿ ಬಂದಿತು ತೇಜ।
ಒಡಲಾನ ಕಿಚ್ಚು ತಂಪಾಯ್ತು–ಬಾಲಸಿದ್ಧ
ಒಡೆಯ ಮಲ್ಲೇಶನ ಕಂಡಾಗ॥ ೯೬

ಮೇಲಕ್ಕೆ ಎತ್ತಿದನು। ಬಾಲಸಿದ್ಧೇಶನನು।
ಕಾಲನ ಕೈವಾಡ ಹರಿಯಿತು–ನಡೆ ಎಂದು
ಮೇಲಗಿರಿ ಮಹಾಂತ ನುಡಿದನು॥ ೯೭

ಕಿವಿಯಲಿ ಇಡಿಸಿದನು। ನವ ವಜ್ರಕುಂಡಲವ।
ಭವಭಯ ಹರಿಸಲು ಲಾಕೂಳ–ಕೊಟ್ಟನು
ದೇವ ಸಿದ್ಧರಾಮಗೆ ಮಲ್ಲಯ್ಯ॥ ೯೮

ಅಜ ಹರಿ ವಂದಿತ। ಮೂಜಗದೊಡೆಯನು।
ಗಜಾಂಬರ ಹೊದಿಸೂತ ಸಿದ್ಧಗೆ–ಕರೆದು ಗಿ-
ರಿಜೆಗೆ ನಿನ ಕಂದನ ಕೊಳ್ಳೆಂದ॥ ೯೯

ಸಂಧಿ ೬

ಅತಿ ಪ್ರೀತಿಯಿಂದಲಿ। ಸುತನನ್ನು ಅಪ್ಪಿಕೊಂಡು।
ಸತಿ ಗಿರಿಜಾತೆ ಶಿವನಿಗೆ–ಹೇಳಿದಳು
ಅತಿ ನೊಂದು ಕೊಂಡಿದೆ ಎನ ಕೂಸು॥ ೧

ಚಿಕ್ಕ ಪ್ರಾಯದ ಕೂಸೆ। ಮುಕ್ಕಂಣನಿಗೊಲಿಸಲು।
ಧಿಃಕ್ಕರಿಸಿ ಬಂದೆ ತಾಯಿ ತಂದೆ–ಬಕುತಿಯು
ಮಿಕ್ಕೀದೆ ಮಹಿಮಾವಂತನೆ॥ ೨

ಅಕ್ಕರದಿಂದ ಆಗ। ಮುಕ್ಕಂಣನೆತಿಕೊಂಡು।
ಕಕ್ಕುಲಾತಿಯ ಕೈಯ ಎಳೆದನು–ಸಿದ್ಧೇಂದ್ರ
ಗಕ್ಕನೆ ನೋಡಿ ಬಾ ಶ್ರೀಗಿರಿ॥ ೩

ಒಲ್ಲೆನೊ ಎನ್ನೊಡೆಯ। ಎಲ್ಲೆಲ್ಲಿ ನೋಡಲು।
ಎಲ್ಲವೂ ನಿನ್ನ ಪಾದದಲಿ–ಕಂಡುಂಡೆ
ಅಲ್ಲಲಿ ತಿರಗಾಟ ಇನ್ನೇಕೆ॥ ೪

ದೇವ ನೀನಿರುವಾಗ । ಪಾವಸಕೆ ಧಾವಿಸುತ ।
ಧಾವತಿಗೆಟ್ಟು ನಾ ತಿರುಗೆನು–ಕರುಣೆಯ
ತೀವಿದ ಸಾಕಾರ ನೀನಿರಲು ॥ ೫

ಕರೆದು ಭೈರವನಿಗೆ । ಗುರು ಮಲ್ಲಿನಾಥನು ।
ಗಿರಿಯ ವಿಸ್ತಾರ ನಾಲ್ವತೆಂಟು–ಯೋಜನ
ತಿರುಗಾಡಿ ಸಿದ್ಧನಿಗೆ ತೋರೆಂದನು ॥ ೬

ತಲೆದಡವಿ ತಪ್ಪಡಿಸಿ । ಬಾಲ ಸಿದ್ಧರಾಮು ।
ಕಾಲಭೈರವನು ತೋರುವನು-ಶ್ರೀ ಗಿರಿಯ
ಮೇಲಿರುವ ಬಂಗಾರ ಸಿರಿಗಿರಿಯ ॥ ೭

ನನ್ನಿರುವಿನ ಕೈಲಾಸ । ನೀ ನೋಡು ಎಲೆ ಸಿದ್ಧ ।
ಏನು ಲೀಲೆಯದು ತಿಳಕೋಳೊ-ಶ್ರೀ ಗಿರಿಯ
ಕೋನಿ ಕೋನಿಗಳಲ್ಲಿ ಅಲೆದಾಡು ॥ ೮

ಒಲ್ಲೀನೊ ನಾನಿನ್ನು । ಬಲ್ಲೆನು ನಿನ್ನ ಗುಣ ।
ಇಲ್ಲೆ ಇರುವೆನೆಂದು ಹೇಳೆನಗೆ-ಬಂದಿರುವಿ
ಮೇಲ ಪರವುತದ ಶಿಖರಕ್ಕೆ ॥ ೯

ನಂಬು ನನ್ನ ಮಾತಿನ್ನು । ಇಂಬುಗೊಡು ಮನದೊಳು ।
ಶಾಂಭವಿ ನಾನು ಇಲ್ಲಿಯೆ-ಇರುವೆವು
ನಂಬು ನಂಬೆಲೆ ಕಂದ ನನ ಮಾತು ॥ ೧೦

ನೊಂದ ಶಿಶುವಿಗಾಗ । ನಂದದಿ ಬಳಿ ಕರೆದು ।
ಕಂದ ನೋಡಿ ಬಾರೊ ಕೈಲಾಸ-ನಾವು ನಿನ್ನ
ಎಂದಿಗೂ ಅಗಲಿ ಇರಲಾರೆವು ॥ ೧೧

ಭೈರವನೆ ಕರದೊಯ್ಯೊ । ತೋರವಗೆ ಶ್ರೀ ಗಿರಿಯ ।
ಪರಿ ಪರಿ ಲೀಲೆಯ ಸ್ಥಲಗಳ-ತೋರಿಸಿ
ಕರಿ ತಾರೊ ಸಿದ್ಧನಿಗೆ ಮತ್ತಿಲ್ಲಿ ॥ ೧೨

ಹುಡಕೂತ ಬಂದವ । ನಡೆಯೂತ ಹೋಗುವದೆ ।
ನೋಡಕೂಡದು ಈ ಪರಿ ಮನ-ಮಿಡಕೂತ
ನುಡಿದಳು ತಾಯಿ ಭ್ರಮರಾಂಬೆ ॥ ೧೩

ತಾಯ್‌ಗರಳು ನಿನ್ನದು । ಹಾಯ ಗೊಳ್ಳುವದು ।
ಮಾಯೆಯ ಜಾಲ ಅಳಿಯಲು-ಕಳುಹಿದೆ
ದಾಯ ಮಾಡುವೆನವನ ಗ್ಯಾನದ ॥ ೧೪

ಚೀಳಿನ ಮೇಲೆ ಕುಳಿತು । ಸ್ಥಳಗಳ ತೋರಲು ।
ಎಳೆಗೂಸು ಸಿದ್ಧನ ಕರಕೊಂಡು-ಭೈರವ
ಹೊಳೆವ ಗಿರಿಯೆಲ್ಲ ತಿರುಗಾಡಿ ॥ ೧೫

ಭೀಕರವನ ಕಾಯವು । ಏಕ ವಸ್ತ್ರವು ಇಲ್ಲ ಅ- ।
ನೇಕ ಸ್ಥಲಗಳ ತೋರೂತ-ಸಿದ್ಧಗೆ
ಜೋಕೆಯಿಂದ ಒಯ್ದನು ಭೈರವ ॥ ೧೬

ಉದಯತಾಳ ಮರದ । ಉದಯ ಸೂರ್ಯನಗೂಡ ।
ಆದಿತ್ಯನೊಂದಿಗೆ ಅಡಗುವದು-ಸಾಧಿಪಗೆ
ಭೇದಿಸಿ ಬ್ರಹ್ಮಾಂಡಕ್ಕೊಯ್ಯುವದು ॥ ೧೭

ಉದಯತಾಳ ಮರದ । ತುದಿಗೇರಿ ನಿಂತನು ।
ತದ್‌ಗತನಾಗಿ ಬ್ರಹ್ಮಾಂಡ-ಕಂಡನು
ಮೋದದಿ ಬಾಲ ಸಿದ್ಧರಾಮು ॥ ೧೮

ಮೋಹಿನಿ ಗಜವೇರಿ । ಮೋದದಿ ಕುಳಿತವಗೆ ಮೇ- ।
ಲೆ ಹಾರಿಸಿ ಹೊರಳಿಸಿ-ನೋಡುವದು
ತಾ ಹೆದರದಿರೆ ಸಿದ್ಧಿಯ ನೀಡುವದು ॥ ೧೯

ಮೋಹಿನಿ ಗಜವನ್ನು । ಮೋಹವಿದೂರನು ।
ಬಹು ಸಂತಸದಿ ಏರಿದನು-ಶಿವಸಿದ್ಧ
ದೇಹ ಥಾವತಿ ಅಳಿದಿಳಿದನು ॥ ೨೦

ನೀರವಿದು ಮುಟ್ಟಿದರೆ । ಶರೀರ ಕಲ್ಲಾಗುವದು ।
ತೋರಿದನು ಭೈರವ ಶೈಲ್ಯೋದಕ-ಸಿದ್ಧಗೆ
ಅರುಹಿದನು ನೀರಿನ ಗುಣ ದೋಷ ॥ ೨೧

ಹರಹರ ಮಹಾದೇವ । ಗುರುವೆ ಮಲ್ಲಯ್ಯನೆಂದು ।
ನೀರಿನೊಳು ಹೋಗಿ ನಿಂತನು-ಸಿದ್ಧರಾಮು
ಅರುವಿನ ಆಗರ ಮರಳಿದನು ॥ ೨೨

ವಜ್ರಲೇಪದ ಕಲ್ಲು । ಸ್ಪಜ ಸೋಂಕಲು ಸಾಕು ।
ವಜ್ರ ಕಾಯವದು ಮಾಡುವದು-ಸಿದ್ಧೇಶ
ಸೋಜಿಗ ನೋಡಲು ಬಾ ಇಲ್ಲಿ ॥ ೨೩

ಮೂಜಗದೊಡೆಯನೆ । ಸೋಜಿಗ ನಿನ್ನ ಮಹಿಮೆ ।
ಭಜಿಪೆನು ತಂದೆ ನಿನ್ನನು-ಎಂದೆನುತ
ವಜ್ರಲೇಪದ ಕಲ್ಲು ಪಿಡಿದನು ॥ ೨೪

ಕುಮಾರ ದಾರಿ ಇದು । ಅಮರತ್ವ ನೀಡುವದು ।
ನೇಮ ಸತ್‌ಕ್ರೀ ಆಚಾರದಿ-ನಡೆಯಲು
ಕುಮಾರ ರೂಪವ ಕರುಣಿಸೆ ॥ ೨೫

ನಿಲ್ಲಲು ತಳದಲ್ಲಿ । ಮೇಲಕ್ಕಾರಿಸುವದು ।
ಲೀಲೆ ನೋಡೆಂದನು ಭೈರವ-ಸಿದ್ಧೇಶ
ಅಲ್ಲಿ ಹೋಗಿ ನಿಂತು ಬಂದನು ॥ ೨೬

ಕಾಣದೆ ಇರುವವು । ತಾಣದೊಳು ಶಸ್ತ್ರಗಳು ।
ಚಣದಿ ಕಾಯದೊಳು ರೂಪಿಸಿ-ಮಾನವಗೆ
ತಾಣದ ಹಿರಿಮೆ ತೋರುವವು ॥ ೨೭

ಕರ್ತರಿ ಜಲವ ಕಂಡು । ಮರ್ತ್ಯದ ಮನುಜರು ।
ಗೊತ್ತಾಗದೆ ನೀರು ಕುಡಿಯಲು-ಹೋದರೆ
ಕತ್ತರಿಸಿ ಹೋಗುವವು ಬೆರಳುಗಳು ॥ ೨೮

ನೀರ ಮುಟ್ಟಿದರೆ ಕೈ । ಕರ್ರನೆ ಕೊಯ್ವದೆನಲು ।
ತ್ವರದಿ ಸಿದ್ಧೇಶ ತನ್ನಂಗ-ಅದ್ದೀದ ತಾ
ಪರಮ ಹರುಷದಿ ಹೊರಬಂದ ॥ ೨೯

ಕೂಸೆಂದು ಮುಟ್ಟಲು ಹೋದ । ಏಸೊಂದು ಜನಗಳು ।
ಅಸು ನೀಗಿ ತುತ್ತಾಗಿ ಹೋದರು-ಪಾಪಿ ಕೂಸು
ವಿಶಾಲ ರೂಪು ತಾಳಿ ನುಂಗುತಿರೆ ॥ ೩೦

ಪಾಪಿ ಕೂಸನು ಕಂಡು । ಆ ಪರಬ್ರಹ್ಮ ಸಿದ್ಧ ।
ಅಪ್ಪಿದನು ಬಲು ಪ್ರೀತಿಯಿಂದ-ಕೂಸಿನ
ಪಾಪೆಂಬ ಶಾಪವು ಲೋಪಾಗಿ ॥ ೩೧

ಕಿಡಿ ಕಿಡಿ ಕೆದರೂವ । ಕೆಂಡಿನ ಮಡುವನು ।
ದಂಡಿಗೆ ನಿಂತು ತೋರಿದನು-ಭೈರವ
ಒಡೆಯನ ಆಣತಿ ಪಾಲಿಸುತ ॥ ೩೨

ಅಗ್ಗಿ ಸಾಗರದೊಳು । ನುಗ್ಗಿ ಧುಮುಕಿದ ಸಿದ್ಧ
ದಗ್ಧಗೊಂಡಿಲ್ಲ ಮೈಮನ-ಅದುಕಂಡು
ಮುಗ್ಧಗೊಂಡು ನಿಂತನು ಭೈರವ ॥ ೩೩

ಕುದಿವ ನೀರಿನ ಬಾವಿಯ । ಎದುರೊಯಿದು ತೋರಿದನು ।
ಉದರಕ್ಕೆ ಉರಿ ಯಾರು ಹಚ್ಚಿದರು-ನೋಡಪ್ಪ
ಸದಮಲಾಂಗನ ಸೂತ್ರ ವಿಚಿತ್ರ ॥ ೩೪

ನೀರನು ಮುಟ್ಟಿದರೆ । ಉರಿ ಎದ್ದು ಸುಡುವದು ।
ಸರಾಗದಿಂದ ನೀರೊಳಗೆ-ಹೋದ ಸಿದ್ಧ
ಬೆರಗಾದನು ಕಂಡು ಭೈರವ ॥ ೩೫

ಉರಿಯ ಹಳ್ಳವದು । ಹರದೀತು ಅಬ್ಬರದಿ ।
ತೊರೆಗಳು ಅದಕೆ ಕೆಂಡದ-ಲೀಲೆಯಲಿ
ವರಸಿದ್ಧರಾಮ ನೋಡಿದನು ॥ ೩೬

ಕಿಡಿಗಳ ಕಡಲವ । ಕೆಂಡಿನ ಕೆರಿ ದಾಟಿ ।
ನುಡಿಸಿದರೆ ನುಂಗುವವರಿಗೆ-ನುಡಿಸುತ
ಒಡೆಯ ಸಿದ್ಧೇಂದ್ರ ನಡೆದನು ॥ ೩೭

ಮಾತಾಡಿಸಿ ಮುಟ್ಟಲು । ಆತುರದಿ ಸುಡುವದು ।
ಮಾತಾಡಿಸುತ ಮುಂದಕ್ಕೆ-ನಡೆದನು ಅ-
ಜಾತನು ಸಿದ್ಧರಿಗೆ ಹೆದರಿಲ್ಲ ॥ ೩೮

ನುಡಿಸಲು ನುಂಗುವರು । ಹಿಡಿದರೆ ಸುಡುವವರು ।
ನೋಡಲು ಕಂಣ ಕೀಳುವರು-ಸಿದ್ಧಪತಿ
ನೋಡಿದನು ತಾಣ ಜೋಗಿಯರ ॥ ೩೯

ಮುಟ್ಟಿದರೆ ಸುಡುತಿದ್ದ । ದಿಟ್ಟಿಸಲು ಕೀಳೂವ ।
ಕೆಟ್ಟ ಸಿದ್ಧಿಯ ಕಂಣುಳ್ಳ-ನಾಗಾರ್ಜುನನ
ನಿಟ್ಟಿಸಿದ ತಲೆ ಕೊಟ್ಟ ತಾಣವನು ॥ ೪೦

ಮರವು ದೊಡ್ಡದದು । ನೆರಳೀಗೆ ಹೋದರೆ ।
ಮರಣಕ್ಕೆ ಒಳಗೆ ಆಗುವರು-ಸಿದ್ಧನು
ನೆರಳಿನ ತಂಪಿನಲಿ ತಣಿದನು ॥ ೪೧

ನಂಜಿನ ನೆರಳಿಗೆ । ಅಂಜಿಲ್ಲ ಅಳುಕಿಲ್ಲ ।
ನಂಜುಂಡನ ಲೀಲೆ ಅರಿತನು-ರಾಮನು
ಕೆಂಜೆಡೆಯವನ ನುತಿಸಿದನು ॥ ೪೨

ಹೊಗೆಯ ತಾಣಕೆ ಹೋಗಿ । ಮೂಗು ತಾ ಮುಚ್ಚಿಲ್ಲ ।
ಯೋಗಿಯು ಕಣ್ಣು ತೆರೆದನು-ಕಂಡನು
ಹೊಗೆಯಿಂದ ಹೊರಗೆ ಬಂದನು ॥ ೪೩

ಬಿತ್ತಿದರೆ ಬೆಳೆಯದು । ಬತ್ತುವ ಝುರಿಗಳು ।
ಸತ್ಯವಂತ ಸಿದ್ಧ ಅಡಿ ಇಟ್ಟ-ಭೂಮಿಯು
ಹೊತ್ತು ನಿಂತಿತು ಬೆಳೆ ಹೊಳೆಯ ॥ ೪೪

ನಡೆಯೂವ ಗಿಡಗಳ । ಹಾಡೂವ ಮರಗಳ ।
ಬೇಡಿದ್ದು ನೀಡುವ ತರುಗಳ-ನೋಡುತ
ಕೊಡಗೈಯವನ ನೆನೆಯುವನು ॥ ೪೫

ಕಂದರಗಳು ವಿವಿಧ । ಇಂದೂಧರನ ಕಥೆ ।
ನಂದದಿ ಹೇಳುತ ನಿಂತಿಹನು-ಕೇಳುತ
ಮುಂದೆ ಹೋಗದೆ ನಿಂತಿಹನು ॥ ೪೬

ಕಮ್ಮರಿಯ ಬಿಲದೋಳು । ಅಮುಂಡ ಭೈರವನ ।
ಕೆಮ್ಮನೆ ತೋರಿದನು ಭೈರವನು-ಕಂಡನು
ನಮ್ಮ ಸಿದ್ಧಗೆ ಯಾರ ಭಯವಿಲ್ಲ ॥ ೪೭

ಗುಹೆಗಳಿಗೆ ಕೇಳಿದರೆ । ಊಹೆಗೆಲ್ಲ ಉತ್ತರ ।
ಅಹುದೆಂದು ಒಪ್ಪಿಸುವ ರೀತಿ-ಕಂಡುಂಡು
ಬಹು ಬೆರಗುಗೊಂಡನು ಬಾಲಸಿದ್ಧ ॥ ೪೮

ನಡೆಯುವ ಕಲ್ಲುಗಳು । ಹಾಡುವ ಹಕ್ಕಿಗಳು ।
ನುಡಿಯುವ ಬ್ರಹ್ಮ ಪಾಷಾಣವು-ಪರವುತದಿ
ಹೆಡೆಯುಳ್ಳ ಸರ್ಪಗಳು ಅನಂತ ॥ ೪೯

ಪಾಷಾಣ ಪಕ್ಷಿಯಾ- । ಕಾಶಕೆ ಹಾರಿತು ।
ಪಾಷಾಣ ಕುಣಿಯ ಹತ್ತಿತು–ಅದು ಕಂಡು
ತೋಷಿಸಿ ಈಶನ ಸ್ಮರಿಸುವನು ॥ ೫೦

ಕದಳಿಯ ಬನದೊಳು । ಹೋದರೆ ಸಹಜದಿ ।
ಚಿದರ ಮಾಡಿ ಯಮುನೆಡೆಗೆ ಕಳುಹುವದು–ಸಿದ್ಧೇಶ
ಸದಮಲ ಸಹಜದಿ ನಡೆದನು ॥ ೫೧

ಇಡಲು ಹೋದರೆ ಕಾಲು । ಕಡೆದ್ಹಾಕುವದು ಕಾಯ ।
ದೃಢದಿಂದ ಸಿದ್ಧನು ತಿರುಗಾಡಿ–ನೋಡುತ
ಮೃಡನ ಭಜಿಸುತ್ತ ಮುದದಿಂದ ॥ ೫೨

ಬಿಲ್ವ ಬನದೊಳಗೆ । ನಿಲ್ವ ಪಿಶಾಚಿಗಳು ।
ಕಾಲ್ವಿಡಲು ನುಂಗಿ ಬಿಡುವದು–ಹೆದರದೆ
ನಿಲ್ವನು ಅಲ್ಲಿ ಬಾಲ ಸಿದ್ಧನು ॥ ೫೩

ಕರಿಯ ಬಂಣದ ಹುಲಿ । ಕರಡಿ ಬಿಳಿ ಬಂಣದವು ।
ಸುರಭಿ ಆ ಕರಗಳು ಅಲ್ಲಲ್ಲಿ–ಚರಿಸುವವು
ವರಸಿದ್ಧ ಕಂಡು ಅಚ್ಚರಿಗೊಂಡ ॥ ೫೪

ಕಪ್ಪು ಬಂಣವು ಬಲು । ಒಪ್ಪುವದು ಹಂಸಕೆ ।
ಪಿಪಿಲಿಕೆ ಗಿರಿಯ ಗಾತ್ರದವು–ಗಿರಿ ಮೇಲೆ
ಕೆಂಪು ಬಂಣದ ಹಂದಿಗಳು ॥ ೫೫

ಬೆಂಕಿ ಬಂಣದ ಎಮ್ಮೆ । ಜಿಂಕೆಗೆ ನರ ಮುಖ ।
ಬಿಂಕಿನ ಬಿಳಿ ಆನೆಯ ಹಿಂಡು–ಕಂಡನು
ಲೆಂಕ ಸಿದ್ಧರಾಮ ಮಲ್ಲಯ್ಯನ ॥ ೫೬

ಎರಡು ಮುಖದಾಕಳ । ನರ ಮುಖದ ಮೃಗವು ।
ಸರಸದಿ ಶಾಸ್ತ್ರವ ಓದುವವು–ಅದರರ್ಥ
ಕರಿಯು ವಿವರದಿ ಹೇಳುವದು ॥ ೫೭

ಗಿರಿ ಮೇಲೆ ಅಲ್ಲಲ್ಲಿ । ಪರುಷದ ಗಣಿಗಳು ।
ತರುವೆಲ್ಲ ಕಲ್ಪವೃಕ್ಷಗಳು–ಅದರಲ್ಲಿ
ಚರಿಸುವವು ಚರ ಮೃಗಗಳು ॥ ೫೮

ಚಿಂತಿಸಲು ದೊರಕುವದು । ಚಿಂತಾಮಣಿಗಳಲ್ಲಿ ।
ಸಂತತ ಬೀದಿಯಲಿ ಬಿದ್ದಿಹವು–ಮಲ್ಲಯ್ಯನ
ಚಿಂತನೆಯಲ್ಲಿ ಸಿದ್ಧ ನಡೆದನು ॥ ೫೯

ಹುಲ್ಲು ಕಡ್ಡಿ ಸಂಜೀವನಿ । ಕಲ್ಲುಗಳು ಚಿಂತಾಮಣಿ
ಕಲ್ಪವೃಕ್ಷಗಳು ಸಾಲುಗೊಂಡು–ನಿಂತಾವ
ಬಾಲಸಿದ್ಧಗೆ ನೆರಳು ನೀಡಲು ॥ ೬೦

ಅಮೃತದ ಕೂಪಗಳು । ಕಾಮಧೇನುವಿನಹಿಂಡು ।
ರಾಮ ಹೋಗಿ ಸಿದ್ಧರಸದ–ತಟಾಕದಿ
ಪ್ರೇಮದಿ ಸೇವಿಸಿ ತಣಿದನು ॥ ೬೧

ಮರು ಜೀವಣಿಯ । ಮರಗಳ ಸಾಲುಗಳು ।
ಮರಣ ಬಾಧೆಯು ದೂರ–ಸಿದ್ಧೇಶ
ಮರದ ಮಹತಿಯ ತಿಳಿದನು ॥ ೬೨

ಸಿರಿಗಿರಿಯ ಮೇಲಿನ । ಪರಿ ಪರಿಯ ತಾಣಗಳು
ತೋರಿದನು ಕಾಲ ಭೈರವನು–ಸಿದ್ಧನಿಗೆ
ಕರ ಮುಗಿದು ವರಸಿದ್ಧ ನೀಸೆಂದ ॥ ೬೩

ಚಿತ್ತದ ಒಡೆಯನ । ಪತ್ತುರಿಯ ಬನ ನೋಡಿ ।
ಉತ್ತಮಾಂಗ ಹದುಷದಿಂದ–ಶಿವನ
ಎತ್ತರದ ಕೈಲಾಸಕೆ ತೆರಳಿದನು ॥ ೬೪

ಊರ್ಧ್ವ ಮಾರ್ಗ ಕ್ರಮಿಸಿ । ಸಾಧಕ ಹೊರಟಿಹ ।
ಸಾಧಿಸಿ ಚೇಳಿನ ಮೇಲ್ಹತ್ತಿ–ಹೊಕ್ಕನು
ಮುದದಿ ಕೈಲಾಸ ಮಾದ್ವಾರ ॥ ೬೫

ದಿಗಂಬರ ಭೈರವನು । ಆಗಲ್ಲಿ ರುದ್ರ ಲೋಕ ।
ನಾಗ ಲೋಕವ ತೋರಿದನು–ಅಧೋ ಊರ್ಧ್ವದಿ
ಸಾಗಿ ಬಂದಿಹರು ತಪೋವನಕೆ ॥ ೬೬

ನಾಕು ಬಾಗಿಲ ನಡುವೆ । ಏಕಾಕಿ ನಿಂತಿಹನು ।
ತೂಕುಳ್ಳ ಕೈಲಾಸ ಮಂದಿರದಿ–ಶಿವ ಸಿದ್ಧ
ಲೋಕ ನಾಯಕನ ಲೀಲೆಯಲಿ ॥ ೬೭

ಮುಕುತಿಯ ಬಾಗಿಲಕೆ । ಬಕುತಿಯ ಮೂರುತಿ ।
ಲೋಕಾದಿ ಲೋಕಗಳ ಕೇರಿಯು–ತೋರುತ
ಏಕೈಕ ಸಿದ್ಧನ ಕರೆತಂದನು ॥ ೬೮

ವಿಸ್ತಾರ ಬಹಳದು । ದುಸ್ತರ ಸಿರಿಗಿರಿಯ ।
ಹೊಸ್ತಲಿನಾಚೆ ಸಾಗಿಹನು–ಸಿದ್ಧಗೆ
ವಸ್ತು ನಿರ್ದೇಶ ಹೊಳೆಯಿತು ॥ ೬೯

ಹರಿವಿರಿಂಚಿಗಳಿಂದ । ಸುರ ಮುನಿಗಳಿಂದ ।
ಸಿರಿ ಸರಸತಿಯರಿಂ ಪೂಜೆಯು–ಗೈವನು
ಗೌರಿವಲ್ಲಭ ಕೈಲಾಸದಲಿ ॥ ೭೦

ದೂರದಲಿ ಬರುವ । ಕರುಳೀನ ಕಂದನನು ।
ತೋರಿದಳು ಭ್ರಮರಾಂಬೆ ಪತಿಗೆ–ಕೋರುವಳು
ವರವಾಗಿರಿ ಕೂಸನ್ನು ಕೊಳ್ಳಿರಿ ॥ ೭೧

ಭೈರವನ ಸಂಗಡ । ವೀರ ಕಂದನ ಕಂಡು ।
ಹಿರಿ ಹಿರಿ ಹಿಗ್ಗಿದನು ಮನದೊಳು–ಮಲ್ಲೇಶ
ತೋರಲಿಲ್ಲ ತನ್ನ ಆನಂದ ॥ ೭೨

ಎದ್ದು ಮುಂದಕೆ ಹೋಗಿ । ಮುದ್ದಾಡಿ ಮೈದಡವಿ ।
ಅದೋ ನಿನ್ನ ತಂದೆ ದಾರಿಯ–ಕಾಯುವರು
ಎಂದಳು ತಾಯಿ ಭ್ರಮರಾಂಬೆ ॥ ೭೩

ತಾಯಿ ತಂದೆಯ ಕಂಡು । ಹಾಯ ಗೊಂಡಿತು ಜೀವ ।
ಮಾಯದ ಕೈಯು ಮಲ್ಲಯ್ಯನು–ಎಳೆದಾಗ
ಕಾಯದ ದಣಿವು ಮಾಯವಾಯ್ತು ॥ ೭೪

ಕಂದನ ಕಂಣೀರು । ತಂದೆ ತಾಯಿಯ ಪಾದ ।
ಮಿಂದಾವ ಮೂರು ಲೋಕವು–ಸಿದ್ಧನಾ–
ನಂದದ ಜಲವು ಸುರಿದವು ॥ ೭೫

ವರ ಸಿದ್ಧರಾಮಂಗೆ । ಕರೆತಂದು ಭೈರವನು ।
ಎರಗಿದ ಇಬ್ಬರ ಪಾದಕ್ಕೆ–ಸವಿ ನೋಟ
ಹರುಷಗೊಂಡು ತಾ ನಲಿಯುತ ॥ ೭೬

ಕೆಲಹೊತ್ತು ಬಾಯಿಂದ । ಒಲುವಿನ ಮಾತಿಲ್ಲ ।
ಕುಲುಕುಲು ನಗುತ ನೋಡಿದನು-ಮಲ್ಲಯ್ಯ
ತಲೆ ಮೇಲೆ ಕೈಯ ಎಳೆದನು ॥ ೭೭

ಅಂದಾದ ಸಿರಿಗಿರಿಯ । ಚೆಂದಾದ ತಾಣಗಳು ।
ಬಂದೇನೊ ಕಂಡು ಆನಂದದಿ-ಎನ ಕಂದ
ಮಂದ ಹಾಸದಿ ಕೇಳಿದ ಮಲ್ಲಿನಾಥ ॥ ೭೮

ತಾಣ ತಾಣಗಳಲ್ಲಿ । ಕೋಣಿ ಕೋಣಿಗಳಲ್ಲಿ ।
ಕಾಣುತಲಿದ್ದೆ ನಿನ್ನನು-ಎನ ತಂದೆ
ಚಣ ಮಾತ್ರ ಅಗಲಿ ಇರಲಾರೆ ॥ ೭೯

ಹೆತ್ತ ತಾಯಿ ತಂದೆ । ಚಿತ್ತ ಶುದ್ಧಿಯವರು ।
ಇತ್ತ ಕಣ್ಣಿಟ್ಟು ಕುಳಿತಾರ-ಬಾಲಸಿದ್ಧ
ಮತ್ತೆ ಸೊನ್ನಲಿಗೀಗೆ ತೆರಳಪ್ಪ ॥ ೮೦

ತಂದೆ ತಾಯ್‌ಗಳು ನೀವೆ । ಬಂಧು ಬಳಗವೆಲ್ಲ ।
ಇಂದುಧರನೆ ನೀವಿರುವಾಗ-ಎನಗಿನ್ನು
ಬಂದ ದಾರಿಯ ತೋರುವದೇ ॥ ೮೧

ಹೋಗಿ ಬಾ ಎನ ಕಂದ । ಸಾಗಿ ಸೊನ್ನಲಪುರಕೆ ।
ಯೋಗಿ ಶಿವಯೋಗಿಯಾಗಿ ಬಾಳು ನೀ-ಸಿದ್ಧೇಶ
ಚಾಗಿ ಲಿಂಗೋಪಭೋಗಿ ವಿರಾಗಿ ॥ ೮೨

ತಂದೆ ತಂದೆ ಎನುತ ॥ ಬಂದಿರುವೆ ಬಳಲುತ ।
ಬಂಧನದೊಳಗಿನ್ನು ನೂಕದಿರು-ಎನ್ನಯ್ಯ
ಅಂದಾದ ನಿನ್ನಡಿಯ ಬಿಡಲಾರೆ ॥ ೮೩

ನಿನ್ನ ಬಿಟ್ಟಿರಲಾರೆ । ಸೊನ್ನಲಗಿಗೆ ಮರಳದೆ ।
ಸನ್ನುತ ತಂದೆ ಚೆನ್ನಮಲ್ಲ-ನಿನ್ನೊರತು
ಎನ್ನ ಪ್ರಾಣ ಇನ್ನು ಇಡಲಾರೆ ॥ ೮೪

ನೀನಿದ್ದಲ್ಲಿರುವೆನು । ನಿನ್ನ ನೆರಳಾಗಿ ನಾ ।
ಬೆನ್ನಹತ್ತಿ ಬರುವೆನು ಬಾಲ ಸಿದ್ಧ–ಇರುವೆನು
ನೆನವಿನ ಮನೆಯ ಕೊನೆಯಲ್ಲಿ ॥ ೮೫

ನೀನುಂಡಿದ್ದುಣುವೆನು । ತಿನ್ನದಿರೆ ಬಿಡುವೆನು ।
ನಿನ್ನ ಗೀತೆಯ ಕೇಳಿ ತಣಿವೆನು–ಸುಕುಮಾರ
ನಿನ್ನ ಕಂಣಾಗಿ ಕಾಣುವೆನು ॥ ೮೬

ಪರವೂತದ ಐಸಿರಿ । ಬರುವಾಗ ತಕ್ಕೊಂಡು ।
ಬರಬೇಕು ಎನ್ನ ಗುರುದೇವ-ಇನ್ನ ಮುಂದೆ
ಅರಚಣ ನಿನ್ನಗಲಿ ಇರಲಾರೆ ॥ ೮೭

ಬರುವೆನು ಕುವರನೆ । ತರುವೆನು ಶಿವಸಿರಿ ।
ಬೆರೆವೆನು ನಿನ್ನ ಮೈಮನದಿ-ಬಾಲ ಸಿದ್ಧ
ಬೀರುವೆ ನಿನ್ನ ಮಹತಿಯ ॥ ೮೮

ಹರ ನಿನ್ನ ಆಣತಿ । ಮೀರಲಾರೆನು ದೇವ ।
ಪರತರ ಸುಕ್ಷೇತ್ರ ಸೊನ್ನಲಗಿ-ರಚಿಸುವೆ
ಉರುತರದ ಶರಣರ ಬರುವಿಗೆ ॥ ೮೯

ಹೊರಡಲು ನಿಂತವನು । ಉರಳಿ ಬಿದ್ದನು ಪಾದಕೆ ।
ಹೊರಳಾಡೂತ ಕೊರಗಿ ನುಡಿದನು–ಸಿದ್ಧರಾಮು
ಕರಳು ಹರಿವುದು ಹಡೆದಪ್ಪ ॥ ೯೦

ಮಾತು ಬರುವಲದಾಗ । ಯಾತರ ಈ ಜನುಮು ಅ- ।
ಜಾತನೆ ಇನ್ನೇಕೆ ಇರಬೇಕು-ಓ ತಂದೆ
ಮಾತು ಕೊಟ್ಟು ನೀ ಮರೆಯಾದರೆ ॥ ೯೧

ಚಿಂತೇಕೆ ಮಾಡುವಿ । ಶಾಂತ ಸುಕುಮಾರನೆ ।
ಹತ್ತಿರ ನಾನಿರುವೆನು ನೀನಿನ್ನ-ಸಂತಸದಿ
ಸೇರು ಸೊನ್ನಲಪುರದೋಳು ॥ ೯೨

ಕೆರೆ ಬಾವಿಗಳ ಕಟ್ಟು । ಅರವಟ್ಟಿಗೆಯನಿಟ್ಟು ।
ಊರ ಸುತ್ತ ಮುತ್ತ ಲಿಂಗವ-ಮುದ್ರಿಸಿ
ನಿರಮಿಸು ನವ ಸಿರಿಗಿರಿಯ ॥ ೯೩

ಅರವತ್ತೆಂಟು ತೀರ್ಥ । ವರ ಲಿಂಗಗಳನೆಲ್ಲ ।
ಗುರುತೀಸಿ ಅಲ್ಲಿ ನೆಡಬೇಕು-ಸಿದ್ಧರಸ
ಮರ್ತ್ಯಾ ಕೈಲಾಸ ಮಾಡಯ್ಯ ॥ ೯೪

ಹೆಸರಾವು ಲಿಂಗಕ್ಕೆ । ಅಸಮಾಕ್ಷನಿಡಲ್ಹೇಳು ।
ಬೆಸಗೊಳ್ಳುವೆ ನಿನ್ನ ಶರಗೊಡ್ಡಿ-ನಿನ್ನ ಈ
ಹಸಗೂಸಿಗುಸಿರು ಮಲ್ಲೇಶ್ವರ ॥ ೯೫

ನುಡಿದದ್ದೆ ಮಹಾಮಂತ್ರ । ನಡೆದದ್ದೆ ಸುಕ್ಷೇತ್ರ ।
ಇಡಲು ಬಯಸಿದ್ದೆ ಪುಣ್ಯನಾಮ-ಲಿಂಗಕ್ಕೆ
ಇಡು ನಿನ್ನ ಇಚ್ಛೆ ನಡೆಯಲಿ ॥ ೯೬

ಶಿವನ ಆಣತಿಯಂತೆ । ಭವಹರ ಶಿವ ಸಿದ್ಧ ।
ಭುವಿಯೊಳು ಅವಿಮುಕ್ತ ಕ್ಷೇತ್ರ-ರಚಿಸಲು
ಶಿವ ಮಹಿಮೆ ತೋರಲು ತೆರಳಿದನು ॥ ೯೭

ಗಿರಿಯು ಸಪ್ತ ಸ್ವರದಿ । ಪರಿ ಪರಿ ಹಾಡಿದವು ।
ಗಿರೀಶನಿಗೆ ನುತಿಸಿ ಕುಣಿಯುತ-ಸಿದ್ಧಗೆ
ಹರುಷದಿ ದನಿಗೊಟ್ಟು ನಲಿದವು ॥ ೯೮

ಬಾಲಸೂರ್ಯನಂತೆ । ಕಲೆಯುಳ್ಳ ತೇಜದಿ ।
ಬಾಲ ಸಿದ್ಧೇಶ ಹೊಳೆಯುತ-ಲೋಕದಿ
ಲೀಲೆಯ ತೋರಲು ನಡೆದಿಹನು ॥ ೯೯

ಸಂಧಿ ೭

ಇತ್ತ ಸೊನ್ನಲಗಿಯಲಿ । ಕತ್ತಲೆ ಕವಿದಿತ್ತು ।
ಮುತ್ತಿನಂಥ ಮಗನ ಕಳಕೊಂಡು-ಜನವೆಲ್ಲ
ಅತ್ತಿತ್ತ ಹುಡುಕಿ ದಣದಿಹರು ॥ ೧

ಪಣ ತೊಟ್ಟು ಹೋದವರು । ಚಣಮಾತ್ರ ಬಿಡುವಿಲ್ಲ ।
ತಾಣ ತಾಣದಿ ತಿರುಗಿದರು-ಸಿಗಲಿಲ್ಲ
ದಣಿದು ತಮ್ಮೂರಿಗೆ ಮರಳಿದರು ॥ ೨

ದೊಡ್ಡ ಬಾಯಿಂದ । ದುಡುಕಿ ಗೌಡರ ಮುಂದೆ ।
ಹುಡುಕಿ ತರುವೆವೆಂದ್ಹೇಳಿ-ನಾವಿನ್ನು
ಗೌಡರ ಮುಂದೆ ನಿಲ್ಲವೆಂತು ॥ ೩

ಮೋರೆ ತೋರುವ ಧೈರ್ಯ । ಯಾರಿಗೂ ಉಳದಿಲ್ಲ ।
ಯಾರೊ ಎಂತೊ ಎತ್ತಿ ಕುವರನ-ಒಯ್ದರು
ಮೀರಿತು ನಮ್ಮ ಅಲೆದಾಟ ॥ ೪

ದಿನವು ನಮಗೆಲ್ಲ | ಅನ್ನ ಕಾಣಿಸುವನು |
ಚೆನ್ನಿಗನೆಲ್ಲಿಗೆ ಹೋದನು-ಎಂದೆನುತ
ಕಂಣೀರು ಸುರಿಸುವರು ಬಾಲಕರು || ೫

ಕರೆಯ ಒಲ್ಲವು ಗೋವು | ಹರಿಯ ಒಲ್ಲವು ಹಳ್ಳ |
ಹಾರೂತ ಹಾಡುವ ಹಕ್ಕಿಗಳ-ಮಧುರ
ಏರಲೊಲ್ಲದು ದನಿಯು ಹಾಡಲು || ೬

ಮೇವ ಕಚ್ಚಲೊಲ್ಲವು | ಗೋವಿನ ಕರುಗಳು |
ಧಾವಿಸಿ ಸಿದ್ಧನ ಠಾವವ-ಮೂಸುತ
ಕಿವಿಗಳ ತಿರುವೂತ ನೋಡುವವು || ೭

ಸೊನ್ನಲಗಿ ಐಸಿರಿ | ಚೆನ್ನಿಗನೊಯದನೆ |
ಎನ್ನುವ ಪರಿ ಕಾಣುವದು-ಸಿದ್ಧನ
ಬೆನ್ಬುತ್ತಿ ಸುಖ ಶಾಂತಿ ಹೋಯಿತೆ || ೮

ಕಾಂತ್ಯುಳ್ಳ ಕಾಯವದು | ಚಿಂತೀಲಿ ಸುಡತಿತ್ತು |
ಸಂತತ ಸದ್‌ಗುರು ಧ್ಯಾನದಲಿ-ಕಾಲವ
ಕಾಂತೆ ಸುಗ್ಗಲದೇವಿ ಕಳೆದಳು | ೯

ಕೊಡಲಿಯ ದಂಡಿಗಿ | ಗಿಡಕುಲಕ ಕಾಳಾಯಿತು |
ಒಡಲಾಗಿನ ಉರಿಯು ದೇಹಕ್ಕೆ-ಹತ್ತೀತು
ಬಿಡದೆ ಸುಡುವುದು ಹಗಲಿರುಳು | ೧೦

ಚಿಕ್ಕ ಚಿನ್ನನು ಸಿದ್ಧ | ಸಿಕ್ಕ ಒಲ್ಲನೆಂಬುವ |
ಧಕ್ಕಿ ಕೊಟ್ಟಿತು ಈ ಸುದ್ದಿ-ಹಡೆದವ್ವ
ಬಿಕ್ಕಿ ಬಿಕ್ಕಿ ಅಳುವಾಗ ದನಿ ಬಿದ್ದು || ೧೧

ಉಂಣಲು ಬಯಸಿಲ್ಲ | ತಿನ್ನಲು ಬೇಡಿಲ್ಲ |
ಉಣಿಸಲು ಹೋಗಿ ಮರೆಯಾದಿ-ಎನ ಕೂಸೆ
ಎಣಿಸಲು ಬಾರದು ಎನ ದುಃಖ || ೧೨

ಬಾವಿಯು ನೀರು ಕಂಡು | ಧಾವಿಸಿ ಹೋದರೆ |
ಬಾವಿಯು ನೀರು ಬರಿದಾಯ್ತು-ಎನ್ನ ಈ
ಜೀವದ ಕರಳು ಹರಿದ್ಹೋಯಿತು || ೧೩

ನೆರಳನು ಬಯಸಿಲ್ಲ । ನೆರವಾಗಲು ತಾ ಬಂದು ।
ದೂರಾಗಿ ಉರಿಬಿಸಿಲು ಬಡದೀತು-ತಾಯಿ
ಪರಿಹರಿಸುವನು ಗುರುದೇವ ॥ ೧೪

ಸುಖ ದುಃಖವೆಂಬವು । ಲೆಕ್ಕಕೆ ತಾರದಲೆ ।
ಸುಖಿಸವ್ವ ನಿನ್ನ ಕಾಯಕದಿ–ಹಣೆಯ
ಲಿಖಿತ ತಪ್ಪೀತೆ ಸುಗ್ಗವ್ವೆ ॥ ೧೫

ಗುರುವಿನ ಕರುಣೆಯ । ಅರುಣೋದಯವಾದರೆ ।
ಹರಣಕೆ ಹೊಸ ಬೆಳಕು ನೀಡೂವ-ದೇವನು
ಕರುಣೆ ಇದ್ದರೆ ಕರೆತರುವ ॥ ೧೬

ಸಾಕು ಮಗನೆ ಇನ್ನು । ಜ್ವಾಕೆ ಮಾಡು ತಾಯಿಗೆ ।
ಮೂಕ ತಮ್ಮನ ಕಳಕೊಂಡಿ–ಬೊಮ್ಮಂಣ
ಸಾಕತಾಯ್ ತಂದೆ ವರವಿರಲಿ ॥ ೧೭

ಅಂಣ ಬೊಮ್ಮಯ್ಯನು । ಕಂಣೀರು ಸುರಿಸೂತ ।
ಹಣಿ ಹಚ್ಚಿ ನಮಿಸೂತ ತಾಯಿಗೆ-ತಣಿಸಲು
ಪಣತೊಟ್ಟು ನಿಂತನು ಹುಡಕಲು ॥ ೧೮

ಮತ್ತೆ ಬರುವನು ನಿನ್ನ । ಸುತ್ತ ಬೆಳಕ್ಹರಿಸಲು ।
ಕತ್ತಲೆ ಕವಿದದ್ದು ಉದಿಸುವದು-ಓ ತಾಯಿ
ಕರ್ತನ ಸೃಷ್ಟಿಯ ನೇಮುವದು ॥ ೧೯

ತಲೆ ಮೇಲಿ ಬೆನ್ನ ಮೇಲೆ । ಬಲಗೈಯ ಎಳೆಯುತ ।
ಬಲು ಹಂಣಾದ ಮನದಿಂದ–ನುಡಿದಳು
ಬಾಲನ ಕರತಾರೊ ಬೊಮ್ಮಂಣ ॥ ೨೦

ತುಂಬಿ ಬಂದಿತು ಕಂಠ । ಕಂಬನಿ ಸುರಿಸೂತ ।
ಸಾಂಬನ ಮನದಲ್ಲಿ ನೆನೆಯೂತ–ಸುಗಲವ್ವೆ
ತುಂಬಿದ ಎದೆಯಿಂದ ಕಳುಹಿದಳು ॥ ೨೧

ನಿನ್ನ ಹರಕೆ ಇರಲು । ಇನ್ನ್ಯಾವ ಭಯವೆನಗೆ ।
ಕಾನನದೊಳು ಹುಡಕುವೆ-ಹಡೆದವ್ವ
ಮನೆ ಮನೆಗೆ ಹೋಗಿ ಕೇಳುವೆ ॥ ೨೨

ಹರಕೆಯ ಹೊತ್ತನು । ಸರ ಸರನೆ ನಡೆದನು ।
ಕರ ತರುವೆ ನನ್ನ ತಮ್ಮನಿಗೆ-ತಾಯವ್ವ
ಉರಿಯುವ ಒಡಲ ತಣಿಸೂವೆ ॥ ೨೩

ಗಾಳಿಗಾಬರಿಯಾಗಿ । ಹಳ್ಳಿ ಪಳ್ಳಿ ತಿರುಗೂತ ।
ಕೇಳೂತ ಹೊರಟನು ಬೊಮ್ಮಂಣ-ತಾಯಿ
ಹೇಳಿರಿ ನನ ತಮ್ಮ ಎಲ್ಲಿರುವ ॥ ೨೪

ಯಾವೂರು ನಿಮ್ಮದು । ಅವ್ವ ಅಪ್ಪನ ಹೆಸರೇನು ।
ನೀವಿಬ್ಬರೆ ಹೊರಟದ್ದು ಎಲ್ಲಿಗೆ-ದಾರಿಯಲಿ
ಯಾವ ಊರಲ್ಲಿ ತಪಗಂಟು ॥ ೨೫

ಮಾತು ಕೇಳಿಲ್ಲ ಕಿವಿ । ಆತುರದಿ ಹೊರಟನು ।
ಅತ್ತಿತ್ತ ಕಂಣು ಹುಡಕಿತ್ತು-ತಮ್ಮನ
ಹೆತ್ತ ತಾಯಿಗೆ ತೋರಲು ॥ ೨೬

ಮುಂದಿನ ಊರಿಗ್ಹೋಗಿ । ಮಂದಿಗೆ ಕೇಳಿದನು ।
ತಂದೆ ತಾಯಿಗಳಿರಾ ನನ ತಮ್ಮ-ಊರಿಗೆ
ಬಂದು ಹೋದನೇನು ಹೇಳಿರಿ ॥ ೨೭

ನಿನಗಿಂತ ಸಂಣವನು । ನಿನ್ನಗಲಿ ಹೋದನೆ ।
ನಿನ ತಂದೆ ತಾಯಿ ಕೇಳಿದರೆ-ಏನೆನುವಿ
ಕನವರಿಸಿ ಜನ ನುಡದೀತು ॥ ೨೮

ಪರಸಿಯ ಜನ ಕಂಡು । ಭರದಿ ಮುಂದಕೆ ಹೋಗಿ
ಹೊರಟರಿ ನೀವೆಲ್ಲ ಎಲ್ಲಿಗೆ-ತಂಡ ತಂಡ
ವರ ಬಕುತಿಲಿ ಭಜಿಸುತ ॥ ೨೯

ಅಪ್ಪ ಮಲ್ಲಿನಾಥನ । ಒಪ್ಪುಳ್ಳ ಶ್ರೀ ಗಿರಿಗೆ ।
ತಪ್ಪದಲೆ ಹೋಗಿ ಬರುವೆವು-ನಾವೆಲ್ಲ
ಕಪ್ಪಗೊರಳನ ದರುಶನಕೆ ॥ ೩೦

ಬಾಗಿ ಬಂದವರಿಗೆ । ಕೂಗಿ ತಾ ಕರೆಯುವನು ।
ಯೋಗಿಯ ರೂಪದಲಿ ಕಾಣುವ—ಮಲ್ಲಯ್ಯ
ಹೋಗಿ ಕರೆತರುವನು ಶ್ರೀ ಗಿರಿಗೆ ॥ ೩೧

ಕಂಣಿಗೆ ಕಾಣುವನೆ। ಉಂಣಲು ಬೇಡುವನೆ।
ಸಂಣ ಮಕ್ಕಳಿಗೆ ಕಾಡುವನೆ–ಮಲ್ಲೇಶ
ಬಂಣಿಸಿ ಪರವುತಕೆ ಒಯ್ಯುವನೆ॥ ೩೨

ಪರಕಿಸಿ ನೋಡುವನು। ಪರಿಪರಿ ಮನ ಮುಟ್ಟಿ।
ಕೊರಗಿಸಿ ನೋಡಿ ಕರುಣಿಸಿ–ನಿಜರೂಪ
ವರ ಬಕುತರಿಗೆ ತೋರುವನು॥ ೩೩

ಬೊಮ್ಮಂಣನ ಮನದೋಳು। ಚಿಮ್ಮಿತು ಈ ಮಾತು।
ತಮ್ಮನು ಮತ್ತೆಲ್ಲಿ ಹೋಗಿಲ್ಲ–ನಡೆ ಎಂದು
ಸ್ವಾಮಿ ಶ್ರೀಗಿರಿಗೆ ಒಯ್ದನು॥ ೩೪

ಚಿಮ್ಮಿತು ಆಗ ಹೊರ–। ಹೊಮ್ಮಿತು ನೂರ ಮಡಿ।
ತಮ್ಮನ ಕರೆದು ತಾಯಿಯ–ಅಡಿಮೇಲೆ
ಹೆಮ್ಮೆಯಿಂದ ನಾನು ಹಾಕುವೆನು॥ ೩೫

ದಾರಿಯಲ್ಲಿಯ ಜನಕೆ। ತಿರುಗಿ ತಾ ನೋಡದಲೆ।
ಭರ ಭರ ಏರಿದನು ಗಿರಿಯ–ಕಡೆಗೊಮ್ಮೆ
ಗಿರಿ ಮಲ್ಲಯ್ಯನ ಗುಡಿ ಕಂಡನು॥ ೩೬

ಮಲ್ಲಯ್ಯನ ಗುಡಿಯಾಗ। ಇಲ್ಲಲ್ಲ ನನ ತಮ್ಮ।
ಎಲ್ಲಿ ಹೋದನೊ ತಿಳಿಯದು–ಗಿರಿ ಮೇಲೆ
ಮಲ್ಲಯ್ಯನ ಮರುಳ ಹುಡಕೂತ॥ ೩೭

ಪರವೂತ ಗಿರಿ ಮೇಲೆ। ಕೊರಗೂತ ತಿರುಗಿದ।
ದೂರದಲಿ ಸಿದ್ಧ ಕಂಡನು–ಬೊಮ್ಮಂಣ
ಹರುಷಗೊಂಡನು ಮನದೋಳು॥ ೩೮

ಭೈರವನು ಆಗ ತನ್ನ। ಗುರುತ ತಪ್ಪಿಸಿ ನಿಂತ।
ಗಿರಿಯ ಜೆಂಚರಂತೆ ಬೊಮ್ಮಗೆ–ಕಂಡನು
ದಾರಿ ನಡೆದ ಸಿದ್ಧರಾಮ ಮುಂದೆ॥ ೩೯

ಹುಚ್ಚನಂಥವನೀಗೆ। ಹೆಚ್ಚು ಕಡಿಮೆ ನುಡಿದರೆ।
ಬೆಚ್ಚಿ ಬೆದರಿ ಇಲ್ಲಿ ಕುಳಿತಾನು–ಮನದಿ
ಯೋಚಿಸಿದನು ಪರಿಣಾಮ॥ ೪೦

ತಮ್ಮನನು ರಮ್ಮಿಸಿ। ಸುಮ್ಮನೆ ನುಡಿಸದೆ।
ದಮ್ಮಯ್ಯನೆಂದು ಎತ್ತಿ ತಾ-ಒಯ್ಯಲು
ಬೊಮ್ಮಯ್ಯ ಮನದಿ ಮಾಡಿದನು॥ ೪೧

ಸಿದ್ಧನ ಕಂಡಾಗಲೆ। ಶುದ್ಧ ಸಾಧನೆಯಾಗ।
ಎದ್ದು ಕಂಡಿತು ಶಿವತೇಜ-ಅಂಣನ
ಬುದ್ಧಿ ಮನ ಚಿತ್ತವು ಬೆರಗಾಗಿ॥ ೪೨

ಕೇಳದಲೆ ತಾಯಿಗೂ। ಹೇಳದಲೆ ಯಾರಿಗೂ।
ಮಳ್ಳನಂತೆ ನೀ ತಿರಗೂತ-ಬಂದಿರುವಿ
ಗೋಳಿಟ್ಟು ತಾಯಿ ತಂದೆಗಳ॥ ೪೩

ಮಲ್ಲಯ್ಯನ ಗುಡಿಯಾಗ। ಅಲ್ಲಿ ನೀ ಇರಲಿಲ್ಲ।
ಮಲ್ಲಯ್ಯನ ದರುಶನ ಆಯಿತೆ—ನಾ ನಿನ್ನ
ಮೂಲೆಲ್ಲ ಹುಡುಕಿದೆ ಪರವೂತದ॥ ೪೪

ನನಗಾಗಿ ನೀನೆಷ್ಟು। ಘನ ಬಾಧೆಯೊಳಗಾದೆ।
ಮನ್ನಿಸ ಬೇಕೆನಗೆ ನನ್ನಂಣ-ನಿನಗಾಗಿ
ಏನು ಮಾಡಲಿನ್ನು ಹೇಳೆನಗೆ॥ ೪೫

ನಿನ್ನಿಂದ ಕಂಡಿಹೆನು। ಚಿನ್ನದ ಶ್ರೀಗಿರಿಯ।
ಉನ್ನತೋನ್ನತದ ತಾಣಗಳ-ಶಿವಸಿದ್ಧ
ಧನ್ಯ ಧನ್ಯ ನಿನಗೆ ಶರಣಾದೆ॥ ೪೬

ತಿರುಗಿ ಬರುತಿರಲಿಲ್ಲ। ಬರುವೆನೆಂದ್ಹೇಳಿದನು।
ಹರ ಮಲ್ಲಿನಾಥನು ನಮ್ಮೂರಿಗೆ-ಬರುವ
ಕುರುಹು ನೋಡುತ ನಿಲ್ಲೋಣು॥ ೪೭

ಚೆನ್ನಮಲ್ಲೇಶನು ತಾ। ಸೊನ್ನಲಗಿಗೆ ಬರುವನೆ।
ನಿನಗೆ ಮಾತುಕೊಟ್ಟು ಹೇಳಿದನೆ-ತಮ್ಮ
ನಿನ್ನ ಘನಮಹಿಮೆ ನಾನರಿಯೆ॥ ೪೮

ಬೊಮ್ಮಂಣ ನಡೆದನು। ತಮ್ಮ ಸಿದ್ಧನಗೂಡ।
ಧಾಮದ ದಾರಿ ಹಿಡಿದರು-ಕಾಣಲು
ಪ್ರೇಮದ ತಾಯಿ ತಂದೆಗಳ॥ ೪೯

ಮನೆಕಂಡು ಬೊಮ್ಮನ । ಮನ ತುಂಬಿ ಬಂದಿತು ।
ನನ್ನವ್ವ ಎಲ್ಲಿ ಇರುವೆ ಬಾ -ಎಂದೆನುತ
ಮನೆ ಹೊಕ್ಕು ತಾಯಿ ಪಾದ ಹಿಡಿದನು ॥ ೫೦

ನೊಂದಮನಕ ಅತಿ । ನಂದದ ಕಳೆ ಬಂತು ।
ಚಂದಿರನು ಮೋಡದ ಆಚೀಗೆ-ಬಂದಂತೆ
ಕಂದನ ಬರವು ತಾಯ್ ತಂದೆಗೆ ॥ ೫೧

ಪುತ್ರನ ಕಂಡೊಡನೆ । ನೇತ್ರಾವರಿಸಿ ನೀರು ।
ಚಿತ್ರ ಕಂಣಮುಂದೆ ಹೃತ್ ಪಟಲದ-ನಿಂತಿತು
ಮಿತ್ರಿ ಅಲುಗಿಲ್ಲ ಕೂತಿಹಳು ॥ ೫೨

ಯಾಕೆ ನನ ತಾಯವ್ವ । ಮೂಕಾಗಿ ಕೂತಿರುವಿ ।
ಲೋಕೋತ್ತರ ಮಗ ಎದುರಿಗೆ–ನಿಂತಿರಲು
ಶೋಕಸಾಗರದಿ ಮುಳುಗಿರುವಿ ॥ ೫೩

ಕಂಣೀರು ಒರಿಸೂತ । ಸಂಣ ದನಿ ನುಡಿದಳು ।
ಪಣ ಕಡೆಗೆ ಹಚ್ಚೀದಿ ನನ ಕಂದ–ತಾಯಿಯ
ರುಣ ತೀರಿಸಿದಿ ಬೊಮ್ಮಂಣ ॥ ೫೪

ತಂದೆ ತಾಯಿಯ ಪಾದ । ವಂದಿಸಿ ಸಿದ್ಧರಸನು ।
ಹೊಂದಿಗೆ ಕೂತನು ತಾಯಿಯು-ಕೇಳಿದನು
ನೊಂದುಕೊಂಡೇನ ಹಡೆದವ್ವ ॥ ೫೫

ಕಂದನಿಗೆ ಕರೆದಳು । ನಂದದಿ ಸುಗಲವ್ವೆ ।
ಚಂದಿರ ಮುಖದ ಚದುರನೆ–ನನ ಬಳಿಗೆ
ಮಂದಾರ ಹೂವೆ ಬಾರೆಂದು ॥ ೫೬

ಮತ್ತೊಮ್ಮೆ ಮಗನ । ಹೆತ್ತಂಗಾಯಿತೆನಗೆ ।
ಮುತ್ತಿನಂತ ಮಗನ ನೋಡಿ-ಭೂಮಿಯ
ಬಿತ್ತಿದ ಬೆಳ್ಕಬಾಡಿ ಬೆಳೆದಂತೆ ॥ ೫೭

ಆತುರದಿ ಕೇಳಿದಳು । ಮಾತೆ ಸುಗ್ಗಲದೇವಿ ।
ಪ್ರೀತಿಯ ನನ ಕೂಸೆ ನೀನೆಲ್ಲಿ–ಹೋಗಿದ್ದಿ
ಜಾತ ಬೇಸರವಾಗಿ ನೊಂದಿತು ॥ ೫೮

ಬೇಡಿ ಒಯ್ದ ಬುತ್ತಿ । ಒಡೆಯ ಮಲ್ಲಯ್ಯನಿಗೆ ।
ಎಡೆ ಮಾಡಿ ಕೂಡಿ ಉಂಡಿರೇನು–ಇಬ್ಬರು
ತಡಮಾಡದೆ ಮುಂದೆಲ್ಲಿ ಹೋದಿರಿ ॥ ೫೯

ಮಾತನಾಡಿದ ಸುದ್ದಿ । ಕೌತುಕದಿ ಕೇಳಿ ತಂದೆ ।
ಆತುರದಿ ನಿನ ಕಡೆಗೆ ಬಂದರು–ಹುಡುಕಿ ತಾ
ಸೋತು ಮನೆಕಡೆಗೆ ಮರಳಿದರು ॥ ೬೦

ನನ್ನ ಮುದ್ದಿನ ಕಣಿಯೆ । ನನ್ನ ಮಾತಿನ ಗಿಣಿಯೆ ।
ನಿನ್ನ ಮಾತಾಡಿಸಿ ಉಣಿಸುವ–ಹಂಬಲ
ತನ್ನಿಂದ ತಾನೆ ಬಯಲಾಯ್ತು ॥ ೬೧

ಕೊರಗೀದೆ ನಿನಗಾಗಿ । ಮರುಗೀದೆ ನಿನಗಾಗಿ ॥
ಬರುವಿನ ಕಡೆಗೆ ನನ ಕಂಣ–ನನ ಮಗನೆ
ಕರುಳಿನ ಕಂದ ನನ್ನಪ್ಪ ॥ ೬೨

ಮಾತು ಮಾತಾಡಿ ಮನ । ಸೋತಿಲ್ಲ ಸುಗಲವ್ವೆ ।
ಸುತನ ಮೇಲೆ ಹರುಷ ವರುಷವ–ಕರೆದಳು
ಮತಿವಂತ ಮಗನೆಂದು ಅಪ್ಪಿದಳು ॥ ೬೩

ಬುತ್ತಿ ಒಯ್ದ ದಿನ । ಚಿತ್ತಭಿತ್ತಿಯ ಮೇಲೆ ।
ಚಿತ್ತರದಂತೆ ಕಂಣ ಮುಂದೆ–ಕಟ್ಟೇತು
ಚಿತ್ತ ಮನಮುಗ್ನ ನಿನ್ನಲ್ಲಿ ॥ ೬೪

ನಡುವೆ ಸಿದ್ಧರಾಮ । ನುಡಿದನು ಆತುರದಿ ।
ಒಡೆಯ ಮಲ್ಲೇಶನ ಆಗಮನ–ಹೇಳಿದನು
ಹಡೆದ ತಾಯಿ ಸುಗ್ಗಲವ್ವೆಗೆ ॥ ೬೫

ನನ್ನ ದೇವನು ಮತ್ತೆ । ಸೊನ್ನಲಗಿಗೆ ಬರುವನು ।
ನನ್ನಿಯ ಮಾತು ಕೊಟ್ಟಿಹನು–ತಾಯವ್ವ
ಚೆನ್ನಮಲ್ಲೇಶನ ಬರುವಿನ ॥ ೬೬

ಚಿಕ್ಕತನದಿ ಸಿದ್ಧ । ಮುಕ್ಕಂಣನಿಗೊಲಿಸಿದ ।
ದಿಕ್ಕು ದಿಕ್ಕೆಲ್ಲ ಕೀರುತಿಯು–ಹಬ್ಬೀತು
ಅಕ್ಕರದಿ ಜನರು ಬರುತಿಹರು ॥ ೬೭

ಪರವುತ ಗಿರಿಮೇಲೆ। ವರ ಮಲ್ಲಿನಾಥನ।
ದರುಶನ ತಕ್ಕೊಂಡು ಸಿದ್ಧರಾಮು-ಅವನಿಂದ
ವರವ ಪಡಕೊಂಡು ಬಂದಿಹನು॥ ೬೮

ಸಿದ್ಧೇಶ ಮನೆಗೆ ಬಂದ। ಸುದ್ದಿ ತಿಳಿದು ಜನ।
ಮುದ್ದುಗೌಡರ ಮನೆ ಮುಂದೆ–ನೆರೆದಿತ್ತು
ಗದ್ದಲು ಗದ್ದಲು ಜನಸಂದಣಿ॥ ೬೯

ಚಕ್ಕಡಿ ಹೂಡಿಕೊಂಡು। ಅಕ್ಕ ಪಕ್ಕದ ಊರವರು।
ಒಕ್ಕಲ ಮುದ್ದಯ್ಯನ ಮನೆಗೆ–ಬಂದಿಹರು
ಮಿಕ್ಕಿದ ಮಹಿಮನ ದರುಶನಕೆ॥ ೭೦

ಬುತ್ತಿಯ ಕಟ್ಟಿಕೊಂಡು। ಎತ್ತಿನ ಮೇಲೆ ಹೇರಿ।
ಕತ್ತಲಾಗದ ಮುನ್ನ ಕಾಣಲು-ಹೊರಟರು
ಸುತ್ತಮುತ್ತಿನ ಹಳ್ಳಿಯವರು॥ ೭೧

ಕುದುರೆಯ ಮೇಲೆ ಕುಂತು। ಚದುರರು ಬಂದರು।
ಆದರದಿ ಬಂದ ಜನಕೆಲ್ಲ–ಗೌಡರ
ಮುದ್ದಪ್ಪ ಕೈ ಮುಗಿದು ಕರೆದನು॥ ೭೨

ಕ್ಷೇತ್ರಪಾಲನ ಬರವು। ಜಾತ್ರಿಗಿಂತಲು ಮೇಲು।
ಯಾತರ ಅರಿವು ಅವಗಿಲ್ಲ–ಸಿದ್ಧರಾಮು
ಪ್ರೀತನ ಧ್ಯಾನದಲಿ ಕೂತಿಹನು॥ ೭೩

ಮೇಣೆಯಲ್ಲಿ ಕುಳಿತು। ರಾಣಿ ಚಾಮುಲದೇವಿ।
ಕಾಣಲು ಬಂದಿಹಳು ಸಿದ್ಧೇಶಗೆ-ಗೌಡರು
ಮನ್ನಣೆಯಿಂದ ಕರೆದರು॥ ೭೪

ವರ ಪುತ್ರ ಸಿದ್ಧೇಶ। ಊರ ಬಿಟ್ಹೋದಾಗಲೆ।
ಊರಿಗೆ ಕೇಡು ಬಂತೆಂದು–ನಾನಾಗ
ಊರೂರ ಕೇರಿ ಹುಡಕಿಸಿದೆ॥ ೭೫

ಚಾಮುಲದೇವಿ ಆಗ। ಕೋಮಲಾಂಗನ ಕಂಡು।
ಸ್ವಾಮಿಗೆ ಆದರದಿ ತಲೆ ಬಾಗಿ-ನಿಂತಳು
ಸೋಮಧರನ ವರ ಸುತನವನು॥ ೭೬

ರಾಣಿ ಚಾಮಲದೇವಿ । ಹಣಿ ಹಚ್ಚಿ ನಮಿಸಿದಳು ।
ದಣಿದಾವೇನು ನಿಮ್ಮ ಪಾದ-ನಡೆನಡೆದು
ಚಣ ಮಾತ್ರ ವಿಶ್ರಾಂತಿ ಕೊಳ್ಳಿರಿ ॥ ೭೭

ಬಾಲತನದಿ ತನ್ನ । ಲೀಲೆಯಿಂದ ದೇವನ ।
ಒಲಿಸಿಕೊಂಡಿಹನು ಪತಿತ-ಪಾವನ
ಕುಲಕೋಟಿ ಉದ್ಧರಿಪ ಜನಿಸಿದ ॥ ೭೮

ಬರುವೆನೆಂದ್ಹೇಳಿದನ್ನೆ। ಗುರು ಮಲ್ಲಿನಾಥನು ।
ಸಾರಿದ ರೇವಣಸಿದ್ಧನ-ಕಾಲಜ್ಞಾನ
ತೋರುವನೆಂದು ಮರಳಿದಳು ॥ ೭೯

ಮಗನ ಮಹಿಮೆಗೆ । ಹಿಗ್ಗಿದರು ತಾಯಿ ತಂದೆ ।
ಅಘಟಿತ ಘಟಿತವ ಕಂಡರು-ಕುಲಜನ
ಹಗೆ ಆದರು ಆಗ ಗೌಡರಿಗೆ ॥ ೮೦

“ ಮನೆಯ ದೇವರ ಬಿಟ್ಟು । ಅನ್ಯ ದೇವರು ಇನ್ನು ।
ಸೊನ್ನಲಗಿಗೆ ತರುವದು–ತರವಲ್ಲ
ತನ್ನ ಮಗನಿಗೆ ಹೇಳಬೇಕು ॥ ” ೮೧

ಹೇಳದೆ ಹೋದವನು । ಗೋಳಾಡಿಸಿ ಬಂದಿಲ್ಲ ।
ಕೇಳ ಬೇಕಲ್ಲ ಹಿತ ಮಾತು-ತಿಳಿಗೇಡಿ
ಧೂಳಿಮಾಂಕಾಳ ಬಲು ಮರುಳ ॥ ೮೨

ಚೆನ್ನ ಮಲ್ಲೇಶನು । ಸೊನ್ನಲಗಿಗೆ ಬರುವನು ।
ಎನ್ನುವ ಸಿದ್ಧನ ನುಡಿ ಕೇಳಿ-ಮನುಜರು
ನನ್ನಿಯೇ ಎಂದು ಗುಣುಗುವರು ॥ ೮೩

ತರಕಿಸ ತೊಡಗಿದರು । ಗುರುತಿಸಲಿಲ್ಲವರು ।
ಮರತ್ಯದ ಮರುಳ ಮಾನವರು–ಈತ
ಮರುಳನೆನುವರು ಸಿದ್ಧನಿಗೆ ॥ ೮೪

ಪುಣ್ಯವಂತರ ನಿಜ । ಕಂಣುಳ್ಳ ಸುಜನರ ।
ಮಣಿದವು ಮಸ್ತಕ ಚಿತ್ತಗಳು-ಸಿದ್ಧಗೆ
ಅಣಿಯಾಂಕಧರನ ವರವೆಂದು ॥ ೮೫

ನುತಿಸಲು ಹಿತವಿಲ್ಲ। ಅತಿಗಳೆಯೆ ಕೋಪಿಲ್ಲ।
ಗತಿ ಮತಿ ನೀನೆ ಎನ್ನೂತ-ಸಿದ್ಧರಾಮು
ಧೃತಿಗೆಡದೆ ಬೆರೆವ ದೇವನಲಿ॥ ೮೬

ನೊಂದುಕೊಳ್ಳದಿರು। ನಂದದಿ ಇರಬೇಕು ಇನ್ನು।
ಕಂದ ನೀ ನಮ್ಮ ಮನೆಯ ದೀಪ–ಎಂದು
ತಂದೆ ತಾಯಿ ಶಾಂತದಿ ನಿದ್ರೀಸಿ॥ ೮೭

ಎಂಟು ವರುಷದ ಬಲು। ಬಂಟನು ವರ ಪುತ್ರ।
ಎಂಟು ದಾಟೇದ ಒಂಟಿಗನೆ–ನಮ್ಮ ಕಂದ
ದಾಂಟೇದಿ ನೀ ಭವಬಾಧೆಯ॥ ೮೮

ನಿನ್ನ ಕಾಣಲು ನಾನು। ಅನ್ನ ನೀರವ ತೊರೆದ್ಯೆ।
ಅನುದಿನದಲಿ ನಿನ್ನ ರೂಪವ-ಕಂಡೆನು
ನನ ಮಗುವೆ ತಿಳಿ ತಾಯ್‌ಗರಳು॥ ೮೯

ಎತ್ತಲಾರದ ಒಜ್ಜೆ। ಕತ್ತು ಮುರಿಯುವಂತೆ।
ಹೊತ್ತು ನಾ ನಿಲಲಾರೆ ಸಿದ್ಧರಾಮು–ನಿನ್ನ
ಮತಿಗೇಡಿ ತಂದೆಗೆ ಸಲುವಪ್ಪಾ॥ ೯೦

ಶಂಭುವಿನ ಬರುವನು। ನಂಬಿದ ಕಾರಣಿಕ।
ಇಂಬಿಲ್ಲ ಇನ್ನು ಯಾವದಕೆ-ಲೋಕದ
ಹಂಬಲ ಸಿದ್ಧಗೆ ಉಳಿದಿಲ್ಲ॥ ೯೧

ಅರಚಣ ಮರಿಯದೆ। ಗುರು ಮಲ್ಲೇಶನ ದಾರಿ।
ಕರುಳ ಕಂಣ್‌ಮನ ಒಂದಾಗಿ–ನೋಡುವ
ಸಾರಿ ಬರುವಂಥ ಶುಭ ದಿನವ॥ ೯೨

ಶಿವರೂಪ ಮಲ್ಲಯ್ಯ। ಭವಹರ ಮಲ್ಲಯ್ಯ।
ದೇವರ ದೇವ ಚೆನ್ನಮಲ್ಲೇಶ–ಓ ತಂದೆ
ಧಾವಿಸಿ ಬಾರೊ ಮುಖದೋರೊ॥ ೯೩

ಹರರೂಪ ಮಲ್ಲಯ್ಯ। ಗುರುರಾಯ ಮಲ್ಲಯ್ಯ।
ಬರುವಿ ಎಂದೊ ದೇವ ಮಲ್ಲಯ್ಯ–ಬಂಗಾರ
ಗಿರಿಯ ಮಲ್ಲಯ್ಯ ಶರಣೆಂಬೆ॥ ೯೪

ಭಕ್ತಿಮಾಡಲು ಸರ್ವ | ಶಕ್ತ ನಾನಲ್ಲವಯ್ಯ |
ಮುಕ್ತಿಯ ವಲ್ಲಭನೆ ನೀ ಬಾರೊ–ಮಲ್ಲೇಶ
ಶಕ್ತಿ ಭ್ರಮರಾಂಬನ ಕರೆತಾರೊ || ೯೫

ಮಲ್ಲಯ್ಯನುಸುರಿದ | ಬಲ್ಲ ಸಂದೇಶವನು |
ಸಲ್ಲಲಿತ ಸಿದ್ಧೇಶ ನೆನೆಯುತ-ದಿನರಾತ್ರಿ
ಎಲ್ಲೆಲ್ಲಿ ಕಾಣುವನು ಮಲ್ಲಯ್ಯನ || ೯೬

ಪತಿತರ ಹಿತ ನೋಡು | ಸತಿಕುಲವನುದ್ಧರಿಸು |
ಜಾತಿ ಸೂತಕ ಕಿತ್ತಿ ಒಗೆ-ಸಿದ್ಧರಾಮ
ಜಿತೇಂದ್ರಿಯನಾಗಿ ಬಾಳೆಂದು || ೯೭

ಶರಣರ ತಿಳಿ ಬಾಳು | ಕರುಣಿಸಿ ನಮ್ಮವರು |
ಹರಣ ಕರಣ ತೊಳೆಯಲು–ಲೋಕದಿ
ವರವಾಗಿ ನಿನ್ನವರು ಬರುವರು || ೯೮

ಕರೆದಾಗ ಹಂಬಲಿಸಿ | ಬರುವೆನು ಸಿದ್ಧರಾಮ |
ಪರವೂತ ಅಲ್ಲಿಯು ನೆಲಿಸುವೆ-ಬರುವ
ಕುರುಹು ತೋರುವೆನೆಂದದ್ದು || ೯೯

ಸಂಧಿ ೮

ಮೋಡ ಮುಸುಕಿತ್ತಾಗ। ಗಾಢ ಕತ್ತಲೆಗವಿದು।
ಸಿಡಿಲು ಮಿಂಚಿನ ಗೊಂಚಲ–ಮೂಡಿತು
ಮೋಡಾವರಿಸಿದ ಗಗನದೊಳು ॥ ೧

ಭರರರ ಭರರರ । ಬಿರುಗಾಳಿ ಬೀಸಿತು ।
ತರು ಮರಗಳ ಕೇಳೂತ–ಗಗನದಿ
ಪರಿಪರಿ ಕುರುಹು ತೋರಿತು ॥ ೨

ಮೋಡದ ಒಡಲಿನ। ಸಿಡಿಲು ಮಿಂಚಿನ ಕಾಂತಿ।
ಗಡಗಡ ನಾದ ನಿನಾದ–ಮಾಬೆಳಗು
ನೋಡುವರ ಕಂಣು ಕುಕ್ಕಿದವು ॥ ೩

ಮಳೆಯು ಸುರದಿತ್ತು। ಛಳಿ ಗಾಳಿ ಸುಗಂಧ।
ಹೊಳೆವ ಮಿಂಚಿನ ದಾರಿದೀಪ–ಆದವು
ಮೊಳಗಿದವು ಮೇಘ ವಾದ್ಯಗಳು ॥ ೪

ಉದಯಾಸ್ತಮಾನದಿ। ಹುದುಗೀದ ಹಂಬಲವು।
ಸದಮಲ ಸಿದ್ಧನಿಗೆ ಫಲಿಸಿತು-ಮಹಾಲಿಂಗ
ಮಂದಾರದ ಕೆಳಗೆ ಮೂಡಿದನು॥ ೫

ಆಣತಿಯಂತೆ ತಾ। ಅಣಿಯಾಂಕಧರನನ್ನು।
ತಾಣಕೆ ಕರೆತರಲು ಹೊರಟರು—ಸಿದ್ಧೇಶ
ಅಂಣ ಬೊಮ್ಮನ ಕರಕೊಂಡು॥ ೬

ದೇವ ದೇವನ ಕಂಡು। ಭಾವಾತೀತನಾಗಿಹನು।
ಯಾವರಿವು ಸಿದ್ಧಗೆ ಉಳಿದಿಲ್ಲ-ಚಿತ್‌ಪ್ರಾಣ
ದೇವನಲಿ ಒಂದುಗೂಡಿದವು॥ ೭

ಲಿಂಗಯ್ಯನ ಕಂಡಾಗ। ಅಂಗಾಂಗ ರೋಮಾಂಚ।
ಕಂಗಳ ಧಾರೆ ಸುರಿದವು-ಲಿಂಗಯ್ಯಗೆ
ಮಂಗಳ ಮಜ್ಜನವಾಯಿತು॥ ೮

ದಟ್ಟಾದ ನೀಲಿಯ। ಬೆಟ್ಟದ ಮೇಲೆ ಸೊನ್ನದ।
ಗಟ್ಟಿಯ ಇಟ್ಟಂತೆ ಹೊಳದೀತು—ಥಳ ಥಳ
ದಿಟ್ಟಿ ನಟ್ಟಿತು ಸಿದ್ಧರಾಮನ॥ ೯

ನಳನಳಿಸಿ ನೋಡಿದನು। ಥಳ ಥಳಿಪ ಲಿಂಗಕ್ಕೆ।
ಪುಳಕಪ್ರತತಿ ಕೈಯಿಂದ-ತಕ್ಕೊಂಡನು
ನಿಳಯ ನಿರ್ಮಲ ಸಿದ್ಧರಾಮ॥ ೧೦

ಸೂಸುವ ಗಾಳಿಯ। ಬಸುರಿನ ಓಂಕಾರವು।
ಪಸರಿಸಿ ಹತ್ತು ದಿಕ್ಕೆಲ್ಲ ಲಿಂಗಕ್ಕೆ-ಮಂತ್ರ
ವಾಸಿಸಲು ಎದೆಯ ತಾಣವಾಗಿ॥ ೧೧

ಗತಿ ನೀನೆ ಮಲ್ಲಯ್ಯ। ಮತಿ ನೀನೆ ಮಲ್ಲಯ್ಯ।
ಹಿತದ ಹೆಗ್ಗುರಿಯ ತೋರುತ-ಎನ್ನಯ್ಯ
ಸತತ ನಿಜದರಿವು ಬೀರೆನಗೆ॥ ೧೨

ಬಿಂಬಾದ ಬ್ರಹ್ಮಾಂಡದಿ। ತುಂಬಿ ತುಳುಕುವವನೆ।
ನಂಬಿದವರ ಮನೆಗೆ ಬರುವವನೆ—ಮಲ್ಲಯ್ಯ
ಇಂಬು ಕೊಡು ಪದಾಂಬುಜದಲಿ॥ ೧೩

ಚೆನ್ನಮಲ್ಲನ ತಂದು । ತನ್ನ ಮನೆಯಲ್ಲಿಟ್ಟು ।
ಅನ್ಯೋನ್ಯ ಭಾವದಿ ಪೂಜೆಯ–ಮಾಡೂತ
ಸನ್ನುತ ಸಿದ್ಧರಾಮ ಇರುವನು ॥ ೧೪

ನಿತ್ಯದಿ ಮೂರ್ ಹೊತ್ತು । ಸತ್ ಚಿತ್ತಾನಂದನ ।
ಸತ್ಯ ಸಂಧಾನದಿ ಪೂಜಿಸುತ-ಸಿದ್ಧರಾಮು
ಅತ್ಯಹರುಷದಿ ಇರುವನು ॥ ೧೫

ಗೌಡರ ಮನೆಗೆ ಬಂದು । ಗುಡಗೀತು ಕುಲಜನ ।
ಹುಡುಗ ಬಿಟ್ಟನು ಕುಲದೇವ-ಮಲ್ಲಯ್ಯಗೆ
ನಡೆದು ಕೊಳ್ಳುವದು ತರವಲ್ಲ ॥ ೧೬

ಕುಲದೇವರೆಂಬ ಛಲ । ಇಲ್ಲ ನಿಮ ಮಗನಿಗೆ ।
ಮಲ್ಲಯ್ಯನ ನೆಲಿಸಿದನು–ಆತನಿಗೆ
ಕುಲದಭಿಮಾನವು ಎನಿತಿಲ್ಲ ॥ ೧೭

ದೇವ ದೇವರಲ್ಲಿ ನಾವು । ಭಾವ ಭೇದವ ಮಾಡಿ ।
ನಾವು ಹೆಸಿರಿಟ್ಟು ಕರಿಯುವೆವು-ನಮಗೆ
ದೇವನೊಬ್ಬನೆ ಎಂದು ಗೌಡರು ॥ ೧೮

ಇಳಿ ವಯಸ್ಸಾಯಿತು । ಬಿಳಿನರೆ ತಲೆ ತುಂಬ ।
ಎಳ್ಳಷ್ಟು ಅಭಿಮಾನ ಉಳಿದಿಲ್ಲ–ಗೌಡರೆ
ಧೂಳಿ ಮಾಂಕಾಳ ಕುಲದೇವ ॥ ೧೯

ಕುಲಗೇಡಿ ಮಗನಿಗೆ । ಕಲಿಸಿಲ್ಲ ಬುದ್ಧಿಯ ।
ಕುಲದ್ರೋಹಿಗೆ ಇಡಬೇಕು–ಗೌಡರಿಗೆ
ತಲೆಯಾಗ ಬೀಳುವದು ಬೆಳಕು ॥ ೨೦

ಸಿಟ್ಟಿಗೆ ಬಂದ ಜನ । ತಟ್ಟನೆ ನುಡದೀತು ।
ನಟ್ಟವು ಮಾತುಗಳು ಮನಸಿಗೆ–ಗೌಡರು
ಪಿಟ್ಟಂತೆ ನುಡಿಯದೆ ಮೌನದಿ ॥ ೨೧

ಸತ್ಯವ ನುಡಿದರೆ । ಗೊತ್ತಾಗದು ಈ ಜನಕೆ ।
ವ್ಯರ್ಥ ಮಾತನಾಡಿ ಏನು ಫಲ-ಎಂದರು
ಸತ್ಯವನರಿತ ಮುದ್ದುಗೌಡರು ॥ ೨೨

ತೂರಿ ಬಂದ ಜನರ । ಬಿರಿ ನುಡಿ ಬಿಸಿಯಾಗಿ ।
ಸೂರೆಗೊಂಡವು ಕಿವಿ ಮೇಲೆ-ಸಿದ್ಧನು
ತ್ವರದಿ ಬಿದ್ದನು ಮನೆಹೊರಗೆ ॥ ೨೩

ಊರ ಹೊರಗೆ ಬಂದು । ಕಿರಿದಾದ ಮಠ ಕಟ್ಟಿ
ಹರ ಮಲ್ಲೇಶನ ಪೂಜಿಸುತ–ಸಿದ್ಧೇಶ
ವರ ಯೋಗಾಭ್ಯಾಸ ಮಾಡುವನು ॥ ೨೪

ಒಲುವಿನ ತಮ್ಮನ । ಬೆಲೆ ತಿಳಿದ ಬೊಮ್ಮಣ್ಣ ।
ಕುಲ ತಾಯಿತಂದೆಯ ಬಿಟ್ಟು-ಬಂದನು
ಮಲ್ಲೇಶನ ಪ್ರೀತಿಯ ಕಂದನು ॥ ೨೫

ಮನೆಮಾರವ ಬಿಟ್ಟು । ಜನರನು ಲೆಕ್ಕಿಸದೆ ।
ಅನುರಾಗದಿಂದ ಬಂದಿದ–ಬೊಮ್ಮಗೆ
ಘನ ಯೋಗದೀಕ್ಷೆ ಕೊಟ್ಟನು ॥ ೨೬

ರಾಗ ಭೋಗವ ತೊರೆದು । ಯೋಗಿ ತಾ ಕೂತಿಹನು ।
ಯೋಗದ ಕೀಲವನು ತಿಳಿದು–ಅನವರತ
ಯೋಗಿ ಕುಲ ಚಕ್ರವರ್ತಿಯು ॥ ೨೭

ಒಂದೆರಡು ತಿಂಗಳು । ಸಂದು ಹೋಗಿದವಾಗ ।
ಇಂದುಧರಗೆ ಎಚ್ಚರಾಗೆ–ಸಿದ್ಧರಾಮ
ಕಂದನಿಗೆ ಮಾತು ಕೊಟ್ಟದ್ದು ॥ ೨೮

ಮಗಳೆ ಚಾಮಲದೇವಿ । ಅಗಣಿತ ಮಹಿಮಗೆ ।
ಜಾಗೆ ಕೊಡು ಎಂಬ ನುಡಿಯ-ಕೇಳಿ ತಾ ಬೆ-
ರಗು ಗೊಂಡಳು ಕನಸ ಕಂಡು ॥ ೨೯

ಅಕ್ಕ ನಾನೊಂದು ಇಂದು । ಚೊಕ್ಕ ಕನಸವ ಕಂಡೆ ।
ಮಿಕ್ಕಿದ ಶಿವತೇಜವು ಬಂದು–ಹೇಳಿತು
ಚಿಕ್ಕ ಸಿದ್ಧಗೆ ಭೂಮಿ ಕೊಡೆಂದು ॥ ೩೦

ತಂಗಿ ಚಾಮಲದೇವಿ । ಇಂಗಿತ ತಿಳಕೋಳೆ ।
ಸಂಗರಹಿತ ಸಿದ್ಧಗ ಭೂಮಿ–ಕೊಡಲು
ಜಂಗಮ ಬಂದು ಹೇಳಿದನು ॥ ೩೧

ಕ್ರೋಶ ಭೂಮಿ ಕೊಡಲು । ಈಶನು ತಿಳಿಸಿದನು ।
ಹೊಸ ಕ್ಷೇತ್ರ ಅಲ್ಲಿ ನಿರ್ಮಿತ-ಮಾಡುವನು
ಲೇಸ ಬರುಸಿ ಜೀವರಾಶಿಯ ॥ ೩೨

ಕೇಳೆ ಸಖಿ ಚಾಮುಲೆ । ವೇಳೆ ಕಳೆಯ ಬೇಡ ।
ತಿಳಕೋಳೆ ಅದು ಕನಸಲ್ಲ–ಶ್ರೀ ಗುರು
ತಿಳಿಸಿದನು ಈ ಸಂದೇಶ ॥ ೩೩

ಗೆಳತಿಯ ಮಾತು ಕೇಳಿ । ತಿಳಿ ಬೆಳಕು ಮೂಡಿತು ।
ವೇಳೆ ಕಳೆಯದೆ ಮೇಣೆ ತರಿಸಿ-ಹೊರಟಳು
ಗಳಿಗೆಯಲಿ ದರುಶನಕೆ ॥ ೩೪

ಬಿದ್ದ ಕನಸಿನ ಪರಿ । ಸಿದ್ಧರಾಮುನಿಗರುಹಿ ।
ಇದ್ದ ಭೂಮಿಯ ಅರಪಿಸಿ-ಚಾಮುಲೆ
ಶುದ್ಧಳಾದೆನೆಂದು ವಂದಿಸಿ ॥ ೩೫

ತಾಯಿ ಚಾಮುಲದೇವಿ । ಹಾಯಾಗಿ ಕೂತಿರುವೆ ।
ಮಾಯೆ ಇಹುದವ್ವ ಮಣ್ಣಿದು–ನನಗಾವ
ಮಾಯದ ತೊಡಕು ಬೇಡವ್ವ ॥ ೩೬

ಗುರು ಕೊಟ್ಟ ಸಂದೇಶ । ಮೀರಲಾರೆನು ದೇವ ।
ಉರುತರದ ಕ್ಷೇತ್ರ ಈ ಊರು–ಆಗುವದು
ವರ ಸಿದ್ಧಯೋಗಿ ನಿನ್ನಿಂದ ॥ ೩೭

ಗಿರಿ ಮೇಲೆ ಹೇಳಿದ । ಗುರು ಮಲ್ಲೇಶನ ಮಾತು ।
ಭರದಿ ಕಣ್ಮುಂದೆ ಕಟ್ಟಿದವು–ಸಿದ್ಧೇಶ
ಅರಪಿತ ಮಲ್ಲಯ್ಯಗೆ ಎಂದನು ॥ ೩೮

ರಾಣಿ ಚಾಮುಲದೇವಿಯು । ತಣಿದಿಲ್ಲ ಕಂಣುಗಳು ।
ಅಣಿಮಾದಿ ಸಿದ್ಧಿಸಾಧಿಪ–ಯೋಗೀಶ ಮು-
ಕ್ಕಂಣನೆ ಸಿದ್ಧರಾಮನೆಂಬ ॥ ೩೯

ಸಾಷ್ಟಾಂಗವೆರಗಿದಳು । ಶ್ರೇಷ್ಠ ಸಿದ್ಧನಿಗಾಗ ।
ಇಷ್ಟಾರ್ಥ ಸಿದ್ಧಿ ನೀಡಯ್ಯ–ಈ ಭವದ
ಕಷ್ಟಕಾರ್ಪಣ್ಯ ಪರಿಹರಿಸು ॥ ೪೦

ಭೂಮಿ ಸಿಕ್ಕಿತು ಈಗ । ರಾಮನೆ ನಮಗಿನ್ನು ।
ಸ್ವಾಮಿ ಮಲ್ಲಯ್ಯಗೆ ದೇಗುಲ–ಕಟ್ಟೋಣ
ಕಾಮ ಹರನಿಲ್ಲಿ ನೆಲೆಸುವನು ॥ ೪೧

ಗುಡಿಯ ಕಟ್ಟಿಸಲು । ದುಡ್ಡಿಲ್ಲ ಕೈಯಲ್ಲಿ ।
ಒಡೆಯ ಮಲ್ಲೇಶ ಇನ್ಯಾರ-ಮನದಿ
ಮೂಡುವನು ಏನೊ ತಿಳದಿಲ್ಲ ॥ ೪೨

ಅಂಣನ ನುಡಿಕೇಳಿ । ಕಂಣು ತೆರೆದನು ಯೋಗಿ ।
ಹಣದಾಸೆ ನಮಗೆ ಬೇಡಣ್ಣ-ಮಲ್ಲಿನಾಥ
ಹಣವಿಲ್ಲದ ಕಡು ಬಡವನೆ ॥ ೪೩

ಹೊಡೆದನು ಗುದ್ದಲಿ । ತಡಮಾಡದೆ ಸಿದ್ಧೇಶ ।
ದೊಡ್ಡ ಕೊಪ್ಪರಗಿ ಹೊನ್ನಿನ–ಭೂಮಿಯ
ಅಡ್ಡ ಬಿದ್ದಿದೆ ಮುನ್ ಕಾರ್‍ಯಕೆ ॥ ೪೪

ಹೊನ್ನಿನ ಹರವಿಗಳ । ಅಂಣ ನೋಡಿದನಾಗ ।
ನಿನ್ನ ಮಹಿಮೆ ಅರಿಯೆವು–ಶಿವಸಿದ್ಧ
ಹೊನ್ನರನ್ನವು ಸುರಿವುದು ॥ ೪೫

ದೂರ ದೇಶಗಳಿಂದ । ಕರೆಸಿ ಶಿಲ್ಪಜ್ಞರನು ।
ತೋರಿದನು ಜಾಗ ಕಟ್ಟಿಸಲು–ದೇಗುಲ
ಹರ ಮಲ್ಲಯ್ಯನ ಸ್ಥಾಪಿಸಲು ॥ ೪೬

ಒಡೆಯ ಮಲ್ಲಯ್ಯನ । ಎಡ ಬಲ ಹಿಂದೆ ಮುಂದೆ ।
ಬಿಡದೆಂಟು ದಿಕ್ಕುಗಳಲ್ಲಿ–ಲಿಂಗಗಳ
ಸಡಗರದಿ ನಿರ್ಮಿಸಿದನು ॥ ೪೭

ನವಣೆಯ ಹೊಲದಾಗ । ದೇವ ಕೂತಲ್ಲೊಂದು ।
ಸೇವಿಸಿದ ಸೀತೆನಿ ಠಾವಿನಲಿ–ಮಲ್ಲಯ್ಯ
ಧಾವಿಸಿ ರೂಪವ ತೋರಿದಲ್ಲಿ ॥ ೪೮

ಹದಿನೇಳು ಯೋಗಲಿಂಗ । ಸದಮಲ ಸಿದ್ಧೇಂದ್ರ ।
ಸಾಧಿಸಿ ನಿರ್ಮಾಣ ಮಾಡಿದನು–ಬಯಸಿದ
ನಂದಿಕೇಶನ ಉದಯವು ॥ ೪೯

ಗೋವುಗಳ ಹಟ್ಟಿಗೆ। ದೇವರಾಮನು ಬಂದು ।
ಕವಿಲೆಗಳ ನೋಡ ನೋಡುತ- ಅಲ್ಲಿ ಭೂ-
ದೇವಿಯ ಮುಂದೆ ಅಚಲಿತ ॥ ೫೦

ಭೂದೇವಿ ಹೆಸರಿನ । ಗೋದೇವಿ ಬರಡವಳು ।
ಸಾಧಿಸಿ ಗರ್ಭದಾನದ ದಿನವೆ–ಜನ್ಮ
ವೋದದಿ ಬಸವಗೆ ಕೊಟ್ಟಿಹಳು ॥ ೫೧

ಹುಟ್ಟಿನ ಶುಭದಿನವೆ। ತಟ್ಟನೆ ಬಸವಂಣ ।
ಬಟ್ಟ ಬಯಲೊಳಗೆ ಬೆಳೆದು ತಾ-ನಿಲ್ಲಲು
ನಿಟ್ಟಿಸಿ ಅರಿತನು ಶಿವಸಿದ್ಧ ॥ ೫೨

ಕುರುಹು ಸಾರಿದನೆಂದು। ಗುರು ಸಿದ್ಧರಾಮನು ।
ಊರ ಜನರೆಲ್ಲ ಬೆರಗಾಗಿ-ಬಂದಿಹರು
ವರ ಮಹಿಮೆಯನ್ನು ಕಾಣಲು ॥ ೫೩

ನವ ವಾದ್ಯ ನುಡಿಸೂತ। ಕವಿಲೆಯ ಕರುವನ್ನು ।
ಭಾವ ಬಕುತಿಯಲಿ ಕರೆತಂದ-ಸಿದ್ಧರಾಮ
ದೇವ ಕಪಿಲಸಿದ್ಧನ ಸ್ಥಾಪಿಸಲು ॥ ೫೪

ನಿಲಯದೊಳಗೆ ಹೊಕ್ಕು। ಸಲ್ಲಲಿತ ನಂದೀಶ ।
ಸಲೆ ಶಿವತತ್ವವ ಸಾರಲು-ಬಂದನು
ನಲಿದು ಶಿವನ ಅರ್ಚಿಸಲು ॥ ೫೫

ಒಡನೆ ವಾದ್ಯಗಳು। ನುಡಿದವು ಪರಿಪರಿಯ ।
ಗಡನೆ ವ್ಯಾಪಿಸಿ ದೆಸೆದಿಕ್ಕು–ತುಂಬಿತು
ಮೃಡ ಜಯ ಉಘೆ ಎಂಬ ನಿನಾದ ॥ ೫೬

ಧರ್ಮವೆ ಅಂಗಾಂಗ। ರೋಮಂಗಳೆ ಪರದೈವ।
ನಿರ್ಮಲ ಶಾಂತಿಯ ಸಾರುತ–ಸರಗಂಟೆ
ಮರ್ಮ ತಿಳಿಸುವವು ತತ್ವದ ॥ ೫೭

ನಾಲ್ಕು ಪಾದಂಗಳೆ। ನಾಲ್ಕು ಯುಗಂಗಳವು ।
ಮೇಲಾದ ಪ್ರಣವದು ಪಾದದಿ–ಒಂದಾಗಿ ಕ-
ಪಿಲ ಸಿದ್ಧನ ಪೂಜೆಗಣಿಯಾಗಿ ॥ ೫೮

ಉಸಿರು ಮಾಮಂತ್ರಾಗಿ । ಬಸೆಯುವ ಬಾಯ್ಬುರುಗ
ಕುಸುಮಂಗಳಾಗಿ ಅರಳೀತು–ಬಸವನ
ಅಸು ಜ್ಯೋತಿಯಾಗಿ ಬೆಳಗೀತು ॥ ೫೯

ನಿಂತಿರುವ ಪಾದಂಗಳು । ಹಂತು ಮೀರಿದವಾಗ ಮ-
ಹಂತ ಮಲ್ಲಯ್ಯನ ನಿಜರೂಪ–ಕಂಡವು
ಕಾಂತ್ಯುಳ್ಳ ಸುಜ್ಞಾನ ನೇತ್ರಗಳು ॥ ೬೦

ನಂದಿ ಮಾಡಿದನಾಗ । ಇಂದುಧರನ ಪೂಜೆಯ ।
ಒಂದೆ ಚಣದೊಳು ಬಸವಂಣ–ಹೊಂದೀದ
ನಂದದಿ ಕಪಿಲ ಸಿದ್ಧಮಲ್ಲನಲಿ ॥ ೬೧

ನೆರೆದ ಜನಗಳೆಲ್ಲ । ಬೆರಗಾಗಿ ನೋಡುತಿರೆ ।
ಹರ ಹರ ಮಲ್ಲಯ್ಯ ಉಘೆ ಉಘೆ–ಎಂದು
ವರ ಸಿದ್ಧತಿಲಕ ಜಯ ಜಯ ॥ ೬೨

ಜಯ ಜಯತು ಎನ್ನಯ್ಯ । ಭಯದೂರ ಭವಹರ ।
ಜಯ ಜಯತು ಚೆನ್ನಮಲ್ಲೇಶ–ಕರುಣಾಳು
ಸ್ವಯಲೀಲಾ ಲಿಂಗವೆ ಶರಣೆಂಬೆ ॥ ೬೩

ನುತಿಸುತ ಕುಣಿದನು । ಅತಿ ಪರವಶದಿಂದ ।
ಗತಿ ಮತಿ ನೀನೆ ಹಿತದಿಂದ–ಪೊರೆಯೈ
ಮತಿಗೇಡಿ ಕಂದ ಇವನೆಂದು ॥ ೬೪

ಅಮಳ ಲಿಂಗಯ್ಯನಿಗೆ । ಕಾಮಹರನು ತನ್ನ ।
ಪ್ರೇಮದಿ ಕರದೊಳು ಪಿಡಿದನು–ಸಿದ್ಧೇಶ
ನಮಿಸಿದನು ಪೂಜೆಗೈಯುತ ॥ ೬೫

ಕಪಿಲ ಸಿದ್ಧಮಲ್ಲನ । ಸ್ಥಾಪಿಸಿ ಸಿದ್ಧರಾಮ ಸ್ವ- ।
ರೂಪವ ಕಾಣುತ ಶಿವನಲ್ಲಿ–ನಿತ್ಯ ಅ-
ನುಪಮ ಸುಖಶಾಂತಿ ಹೊಂದೂತ ॥ ೬೬

ತನುವ ಸೂರೆಗೊಂಡು । ಮನವ ಮಾರುಗೊಂಡು ।
ಘನಲಿಂಗದೋಳು ಕೂಡಿಕೊಂಡು–ಸಿದ್ಧೇಶ
ತಾನೆ ಅವನಾಗಿ ಹೊಂದಿಕೊಂಡ ॥ ೬೭

ಜನ ಸಂದಣಿಯದೆಲ್ಲ । ಮನ ಚಿತ್ತ ಒಂದಾಗಿ ।
ಘನ ಯೋಗಿಯ ನೋಡೂತ-ಬಕುತರು
ತನ್ನದೆಲ್ಲವನು ಮರೆತರು ॥ ೧೮

ಹದಿನಾರು ಲಿಂಗಗಳ । ಮೊದಲು ಅರುಹಿದಂತೆ ।
ಮೋದದಿ ಸ್ಥಾಪಿಸಿದ ಸಿದ್ಧ–ಮಾನವತ
ಉದ್ಧರಿಸ ಬಂದವಗೆ ಶರಣೆಂದು ॥ ೧೯

ಒಂದು ಯೋಜನದಷ್ಟು । ಹೊಂದಿಸಿ ನಾಲ್ಕು ನಿಟ್ಟು ।
ತಂದೆ ಕಟ್ಟಿದನು ದಾಸೋಹ-ಸಿದ್ಧೇಂದ್ರ
ಬಂದವರಿಗೆ ಅನ್ನವ ನೀಡಲು ॥ ೨೦

ಸಕಲ ಜೀವಿಗಳಿಗೆ । ಬೇಕಿರುವ ಆಸನವ ।
ಸಾಕಾಗುವನಕ ನೀಡೂತ–ಸಿದ್ಧರಾಮ
ಏಕೋಭಾವದಿ ನೋಡುವನು ॥ ೨೧

ನಿತ್ಯ ನಿಷ್ಕಾಮಯಜ್ಞ । ಸತ್ಯುಳ್ಳ ಶಿವನಿಗೆ ಸಾ- ।
ಹಿತ್ಯವೆ ತನ್ನನೆ ಮಾಡೂತ-ಹೋಮವ
ಕರ್ತೃ ಸಿದ್ಧರಾಮ ಮಾಡುವನು ॥ ೨೨

ಅನ್ನ ಅರಿವೆ ಆಸರ । ಧನವ ನೀಡುವನು ।
ದನಕರು ದಾನ ಮಾಡೂವ-ದಯಾಳು
ದೀನರ ದುಃಖ ಹರಿಸೂವ ॥ ೨೩

ಅನ್ನ ಔಷಧ ದಾನ । ಹೊನ್ನ ಕನ್ಯೆಯ ದಾನ ।
ದೀನ ದಲಿತರಿಗೆ ಭೂದಾನ-ಗೋದಾನ
ಗ್ಯಾನದ ಮಹಾದಾನ ಅನುಗಾಲ ॥ ೨೪

ಉರಿಗಂಣ ಉರಿಯಾಗಿ । ಅರುವೆ ಸಾಹಿತ್ಯವಾಗಿ ।
ಹರ ಮಲ್ಲಯ್ಯನ ನಾಮ ಮಂತ್ರಾಗಿ–ನಿತ್ಯದಿ
ವರ ಸಿದ್ಧನು ಯಜ್ಞ ಮಾಡುವ ॥ ೨೫

ನವಗ್ರಹಗಳ ತೃಪ್ತಿ । ತವಕದಿ ಮಾಡುವನು ।
ಭುವಿಯೋಳು ಸುಖಶಾಂತಿಯು-ಲಭಿಸಲು
ದೇವ ಸಿದ್ಧರಾಮ ಬಯಸೂವ ॥ ೨೬

ಅವರಿವರೆನ್ನದೆ । ಭುವಿ ಜೀವಿಗಳಿಗೆಲ್ಲ ।
ಅವಿರತ ದಾನ ಮಾಡುವ–ಮಾದಾನಿ
ಶಿವನವತಾರಿ ಎನ್ನುವರು ॥ ೭೭

ಜಂಗಮಾರಾಧನೆಯ । ಪಿಂಗದೆ ನಡಿಸಿದನು ।
ಸಂಗರಹಿತ ಮಹಾಯೋಗಿಯು–ನಿತ್ಯದಿ
ಗಂಗಾಧರನಿಗೆ ನುತಿಸುತ ॥ ೭೮

ಪುಣ್ಯ ಪಾವನವಾದ । ಗಣ್ಯ ಕ್ಷೇತ್ರಕೆ ಯೋಗಿ ವ- ।
ರೇಣ್ಯ ಪ್ರದಕ್ಷಿಣೆ ಹಾಕೂತ–ನಡುರಾತ್ರಿ ಮೂ-
ಡಣ ದಿಶೆ ನೋಡಿ ಬೆರಗಾಗಿ ॥ ೭೯

ಮಧ್ಯರಾತ್ರಿಯಲ್ಲಿ । ಸಿದ್ಧನ ಸೊನ್ನಲಗಿಗೆ ।
ಸಾಧಿಸಿ ಶಿವಗಣರನ್ನು–ಕಳುಹಿದ
ಆದಿಶಕ್ತಿಯರು ಅವರೆಂಟು ॥ ೮೦

ಕರ್ರನ ಕರಿ ಬಂಣ । ಕ್ವಾರಿಯ ಹಲ್ಲುಗಳು ।
ಪರವುತದಂಥ ಕಾಯದ–ಗಣರು
ತಿರವೂತ ಬಟ್ಟಲಗಂಣು ॥ ೮೧

ಕಿವಿಯಲ್ಲಿ ಕುಂಡಲ । ಹಾವುಗಳು ಕೊರಳಲ್ಲಿ ।
ದಿವ್ಯ ಆಯುಧ ಕೈಯಲ್ಲಿ-ಕೆಂಪು ಮೀಸಿ
ಶಿವಗಣ ಭೀಕರ ಕಾಣುವದು ॥ ೮೨

ಮಣಿ ಮುಕುಟ ಕಾಂತಿ । ಫಣಿ ಕುಂಡಲ ಒಪ್ಪೂತ ।
ಪಾಣಿಯಲಿ ಶೂಲ ಡಮರು–ರುಂಡ ಮಾಲೆ
ಗಣರು ಸಿದ್ಧಗೆ ನಮಿಪರು ॥ ೮೩

ವೀರಭದ್ರ ಚಂಡಿಯು ।, ವರ್ತ್ಯ ಕೋಲಾಹಲನು ।
ವೀರಕರ ನಂದಿ ಮಾಕಾಳ-ಮೂಕ
ಭೈರವ ಮದಗಜವದನ ॥ ೮೪

ತಲೆಗೂದಲು ಕೆದರಿ । ಸಲೆ ರುಂಡಾಭರಣವ ।
ಮಾಲೆಯು ಕೊರಳಿಗೆ ಚೋಳಿನ–ಕೈಯಲ್ಲಿ
ಶೂಲ ಡಮರು ಖಡ್ಗ ಧರಿಸಿಹರು ॥ ೮೫

ಅದಿರದೈತ್ಯಂದುಂಚನು । ಕ್ರೋಧ ಉನ್ಮತ್ತ ಚಂಡನು ।
ದುದಾರ ಸ್ವಚ್ಛಂದ ಮೂಕನು-ಭೈರವರ
ಪಾದುಕೆಯುಲಿ ದಿಗ್ವಸನವ ॥ ೮೬

ಎಂಟು ಜನ ಭೈರವರು । ಬಂಟರು ಸಿದ್ಧನ ಕಂಡು ।
ಒಂಟಿಗಾಲಿಲಿ ಕೈ ಮುಗಿದು-ಕೇಳಿದರು
ಬಂಟರಿಗಪ್ಪಣೆ ಏನೆಂದು ॥ ೮೭

ಬಿಚ್ಚಿದ ತಲೆಗೂದಲು । ಬಚ್ಚಬರಿಯ ಕಾಯ ।
ಹಚ್ಚನ ಮೈಬಂಣ ಕೊರಳ-ರುಂಡಮಾಲೆ
ಅಚ್ಚ ಕೆಂಪು ಹೂ ಮಾಲೆಗಳು ೮೮

ಹವಳದ ಆವೂಗಿ । ಹಾವಿನ ವಸ್ತ್ರ ಒಡವೆ ।
ದೇವತೆಗಳು ನಿಂತರು-ಕೈಮುಗಿದು
ಶಿವ ಸಿದ್ಧರಾಮನ ಎದುರಿಗೆ ॥ ೮೯

ವಿಜಯೆ ಯಮದೂತಿ ಪ- । ರಾಜಿತೆ ಮಕರಿ ಜಯೆ ।
ಅಜಿತ ಷಷ್ಠಿ ಕಾಳ ರಕ್ಕಸಿ-ಬಂದರು
ಸೋಜಿಗದ ಶಕ್ತಿಯರುಗೂಡಿ ॥ ೯೦

ಏಳು ಶಿವಗಣರ । ಮೇಳೈಸಿ ಕಳುಹಿದನು ।
ಇಳೆಗೆ ಬರಲೊಬ್ಬಲೊಪ್ಪನು-ದೇವತ್ವ
ಅಳಿದು ದೈತ್ಯನಾಗೆಂದ ಶಿವನು ೯೧

ನುಡಿದದ್ದು ಕೇಳಿದನು । ಒಡೆಯ ಸಿದ್ಧೇಂದ್ರನು ।
ಮೃಡ ನಿಮಗೆ ಇಲ್ಲಿ ಕಳುಹಿದ-ಕಾರಣ
ಒಡನೆ ನನಗೆ ನೀವು ಅರುಹಿರಿ ॥ ೯೨

ಊರ ಕಾವಲಕೆಂದು । ಮಾರಹರ ಕಳುಹಿದನು ।
ತೋರಯ್ಯ ನೆಲೆಸಲು ತಾಣಗಳ-ನಿನ್ನ
ಊರ ಕಾಯುವೆವು ಅನುಗಾಲ ॥ ೯೩

ಕವಿದುಂಚ ಭೈರವನು । ದೇವಿ ವಿಜಯಳಿಗೆ ।
ಕಾವಲಕೆಂದು ಮೂಡಣಕೆ-ನೇಮಿಸಿದ
ದೇವ ಗಣ ವೀರೇಶನನ್ನು ॥ ೯೪

ಬೆನಕನೆಂಬ ಗಣನ । ಘನ ಚಂಡಿ ಭೈರವನ ।
ಸ್ಥಾನ ತೋರಿದ ಆಗ್ನೇಯ–ಅಜಿತೆಯೆ
ನೀನು ಅಲ್ಲಿಗೆ ಹೋಗೆಂದನು ॥ ೯೫

ದಕ್ಷಿಣ ಕಾವುದಕೆ । ಈ ಕ್ಷಣ ತೆರಳಿರಿ ।
ದಕ್ಷಿಣಕೆ ನಂದಿ ಮಾಕಾಳ-ಜಯೆ
ಲಕ್ಷಿಸಿರಿ ಉನ್ಮತ್ತ ಭೈರವರೆ ॥ ೯೬

ವರ ಚಂಡೇಶನೆ । ಪುರದ ನೈಋತ್ಯ ದಿಕ್ಕು ಮ- ।
ಕರಿ ಕ್ರೋಧ ಭೈರವನೆ-ಕಾವಲಕೆ
ತ್ವರದಿಂದ ಪೋಗಿರೆಂದನು ॥ ೯೭

ವೀರಕರ ಗಣನನ್ನು । ಗುರು ಭೈರವನಿಗೆ ।
ವೀರಾಜಿತೆ ಶಕ್ತಿಗೆ ಸಿದ್ಧ-ಕಳುಹಿದ
ಪೊರೆಯಲು ಪಡುವಣ ದಿಕ್ಕು ॥ ೯೮

ವೀರ ಕೋಲಾಹಲನೆ । ಭೈರವ ಸ್ವಚ್ಛಂದನೆ ।
ವರಶಕ್ತಿ ಷಷ್ಠಿ ಬಾರೆಂದು–ಹೇಳಿದ
ಪುರ ವಾಯವ್ಯಕ್ಕೆ ನೆಲೆಸೀರಿ ॥ ೯೯

—

ಸಂಧಿ ೯

ಉತ್ತುಮಗಣ ಮಶ್ರುವಂ । ಶಕ್ತಿ ಯಮದೂತಿಯು ।
ಮತ್ತೆ ಮೂಕ ಭೈರವ ಬರ್‍ರೆಂದು–ಹೇಳಿದ
ಉತ್ತರ ದಿಕ್ಕು ಪೊರೆಯಲು ॥ ೧

ಕಾಳರಕ್ಕಸಿಗಾಗ । ಹೇಳಿದನು ಕಾರವಗೆ ।
ತಿಳಿಯಿತೆ ದುರಾತ್ಮ ಭೈರವ–ಕಾವಲ
ಸಲೆ ಸೊನ್ನಲಗೀಯ ಈಶಾನ್ಯ ॥ ೨

ಹೇಳಯ್ಯ ಸಿದ್ಧರಾಮ ।ಕಳುಹಿದನು ಚಂದ್ರಮೌಳಿ ।
ಸ್ಥಳದೋರು ನನಗೆ ನೆಲಿಸಲು–ಸೊನ್ನಲಗಿ
ಹೊಳೆಯಲಿ ಅಷ್ಟ ಐಶ್ವರ್ಯದಿ ॥ ೩

ಮಿಂಚಿನ ಪರಿ ನಿನ್ನ । ಸಂಚಲವಿಹುದವ್ವ ನೀ ।
ಕಂಚು ಮಿಂಚಾಗಿ ಹೊಳಿಯುವಿ–ತಾಯಿ
ಕಾಂಚನಕ್ಕಾಗಿ ಮಕ್ಕಳು ದೂರ ॥ ೪

ಹೋಗಲಿನ್ನೆಲ್ಲಿಗೆ । ಯೋಗಿ ಸೇವೆಯ ತೊರೆದು ।
ಇಗೊ ನಾನು ಭಾಷೆ ಕೊಡುವೆನು–ಎನ್ನುತ
ಬಾಗಿದಳು ಲಕ್ಷ್ಮಿಯು ಚರಣಕ್ಕೆ ॥ ೫

ಸೊನ್ನಲಾಪುರದೊಳು । ಚೆನ್ನಮಲ್ಲಿಕಾರ್ಜುನನ ।
ದನಕರು ಕಾಯಲು ಇರು ತಾಯೆ–ಸ್ಥಿರ
ಅನುದಿನದಲಿ ಸೇವೆಗೈಯುತ ॥ ೬

ದೇವಾಂಗನೆಯರಾಗ । ತಾವಾಗಿ ಬಂದಿಹರು ।
ಸೇವೆ ಸಲ್ಲಿಸಲು ಸಿದ್ಧನಲಿ–ಊರಿಗೆ
ದೇವದೇವತೆಗಳ ಕಾವಲು ॥ ೭

ನಶ್ವರ ದೇಹಿಯಲ್ಲ । ವಿಶ್ವತೊಮುಖಿ ಅವನು ।
ಈಶ್ವರನ ಅವತಾರಿಯು–ಯೋಗೀಶ
ಶಾಶ್ವತರೂಪಿ ಸರ್ವಜ್ಞನು ॥ ೮

ನುಡಿದದ್ದೆ ಮಾಮಂತ್ರ । ನಡೆದದ್ದೆ ಸುಕ್ಷೇತ್ರ ।
ಹಿಡಿದ ಕಾಯಕವೆ ಕೈಲಾಸ–ಸಿದ್ಧ
ಒಡಲ ಬಯಲೊಳು ಚರಿಸುವ ॥ ೯

ನಡೆದರೆ ಹೆಜ್ಜಿಲ್ಲ । ನುಡಿಯಲ್ಲಿ ಶಿವಶಕ್ತಿ ।
ಒಡಲಿಗೆ ಹಸಿವು ತೃಷೆಯಿಲ್ಲ–ಯೋಗಿ
ಒಡಲಿನ ಕೈವಾಡ ಮೀರಿದನು ॥ ೧೦

ಚಿತ್ತೆಂಬ ಭಿತ್ತಿಯಲಿ । ಉತ್ತಮಾಂಗನ ಪಾದ ।
ಒತ್ತಿ ಮೂಡಿಹವು ಅಭೇಧ್ಯ–ಸಿದ್ಧ
ಸತ್ಯದ ನಿಧಿಯು ನೆಲಿಸಿಹನು ॥ ೧೧

ಮೀನ್‌ಗಂಣಿನ ಯೋಗಿ । ಮನವಿದ್ದು ಗೆದ್ದವನು ।
ತನುವಿಗೆ ನೆರಳು ಇಲ್ಲದ–ಯೋಗೀಂದ್ರ
ಘನಕ್ಕೆ ಘನವಾಗಿ ನಿಂದಿಹನು ॥ ೧೨

ದೆಸೆ ದೆಸೆಗಳಿಗೆಲ್ಲ । ಪಸರಿಸಿ ಕೀರುತಿಯು ।
ಅಸಮ ಸಿದ್ಧನ ದರುಶನಕೆ–ದೂರಿಂದ
ವಸುಧಿಯ ಅರಸರು ಬರುವರು ॥ ೧೩

ಹೊನ್ನ ರನ್ನದ ಕಾಣಿಕೆ । ಮನ್ನಿಸಿ ಗುರುವಿಗೆ ।
ಸನ್ನುತನೆ ಶರಣೆನ್ನುತ–ಸಿದ್ಧಗೆ
ಅನ್ಯೋನ್ಯ ಬಕುತಿ ಅರ್ಪಿಸುತ ॥ ೧೪

ಮಿಡಿ ಮಿಡಿ ಮಿಡಕೂತ । ಕುಡಿಯಲು ನೀರಿಲ್ಲ ।
ಓಡಿದವು ಖಗಮೃಗವೆಲ್ಲ–ನೀರು
ಕುಡಿದು ಉಳಿಸಲು ಪ್ರಾಣವ ॥ ೧೫

ಜನ ಜಂಗುಳಿಗೆಲ್ಲ । ದನ ಕರುಗಳಿಗೆಲ್ಲ ।
ಹನಿ ನೀರು ಕಾಣದಂತಾಗಿ–ಸಿದ್ಧನ
ಸಾನಿಧ್ಯಕೆ ಬಂದು ಶರಣೆಂದು ॥ ೧೬

ಕೆಸರನು ಕಂಡಾಗ । ಮೂಸುವವು ದನಕರು ।
ತುಸು ನೀರಿಲ್ಲ ಕುಡಿಯಲು-ನೋಡೂತ
ಕಾಸವಿಸಿಗೊಂಡು ಒಕ್ಕಲಿಗರು ॥ ೧೭

ಒಕ್ಕಲತನದವರು । ಮುಕ್ಕಾಲ ಜನವಿತ್ತು ।
ಹಕ್ಕಿಯಂತೆ ಬಾಯಿ ಬಿಡತಿತ್ತು–ಸೊನ್ನಲ-
ಚಿಕ್ಕ ಹಳ್ಳಿ ಸೊರಗಿ ಸಣ್ಣಾಯಿತು ॥ ೧೮

ಖಗ ಮೃಗವೆಲ್ಲವು । ಮೃಗಜಲ ಕಂಡವು ॥
ಹೋಗಿದವು ಬಳಿ ಓಡೂತ–ಬಾಯಾರಿ
ಆಗ ಅವು ದಣಿದು ಹೌಹಾರಿ ॥ ೧೯

ನೀರ ಹೊತ್ತು ತಂದಾರ । ದೂರಿಂದ ಸೇವಕರು ।
ಯಾರಿಗೂ ನೀರು ಸಾಲದು–ಅದು ಕಂಡು
ಮರುಗಿದ ಸಿದ್ಧ ಮನದೊಳು ॥ ೨೦

ಅಯ್ಯೊ ಈ ಸೊನ್ನಲಗಿ । ಬಾಯ್ತೆರದು ಬಿಕ್ಕುವದು ।
ಸಾಯುವವು ಜೀವಿಗಳೆಲ್ಲ–ಮರುಗಿದ ।
ದಯಾಳು ಶಿವ ಸಿದ್ಧರಾಮಯ್ಯ ॥ ೨೧

ದಿನ ಕಳೆವುದು ಬೇಡ । ಸೊನ್ನಲಗಿಯಲ್ಲೊಂದು ।
ಚನ್ನ ಕೆರೆಯ ತೋಡುವೆನು–ತರುವೆ
ಚೆನ್ನಮಲ್ಲೇಶನ ಶ್ರೀ ಗಂಗಾ ॥ ೨೨

ಜನ ಜಂಗುಳಿಗಾಗಿ । ದನಕರು ಕುಡಿಯಲು ।
ಅನುಗಾಲ ಪಶುಪಕ್ಷಿಗಳಿಗೆ–ಕೆರೆಯು
ತಾನೆ ಅಗಿಯಲು ಅಣಿಯಾದೆ ॥ ೨೩

ಚೆನ್ನಮಲ್ಲನ ಗುಡಿಯು । ಸ್ಥಾನ ಅಗ್ನೇಯಕ್ಕೆ ।
ಘನ ಸಿದ್ಧರಾಮನು ಕೆರೆಯ–ತೋಡಲು
ಅನುವಾದನು ಗುದ್ದಲಿ ಕರದೊಳು ॥ ೨೪

ಕೆರೆಯ ಸೀಮೆಯ ನಡುವೆ । ಗುರುರಾಯ ನಿಂತನು ।
ಕರದೊಳು ಗುದ್ದಲಿ ಸಲಾಕೆ–ಕಂಡಾಗ
ಬೆರಗುಗೊಂಡರು ಗುಡ್ಡರು ॥ ೨೫

ಗುಡ್ಡರಿಗೆ ಅರುಹಿದ । ದೊಡ್ಡದೊಂದು ಮಾತವ ।
ದುಡಿಮೆಯ ದಾನ ಮಾಡಿರಿ–ನನ್ನೊಡನೆ
ಒಡಲ ದುಡಿಸಿರಿ ಪಾವನ ॥ ೨೬

ಸಿದ್ಧನ ಕೈಯೊಳಗಿನ । ಗುದ್ದಲಿ ನೋಡುತ ।
ಸಿದ್ಧರಾಗಿ ನಿಂತರು ಗುಡ್ಡರು–ಆತುರ
ಬದ್ಧಕಂಕಣರಾಗಿ ಅಗಿಯಲು ॥ ೨೭

ನಾಲಕು ಸಾವಿರ ಗುಡ್ಡರು । ಮೇಲೆತ್ತಿ ಗುದ್ದಲಿಯ ।
ನೆಲಕೆ ಒಮ್ಮಿಲೆ ಇಳಿಸೂತ–ಗುರುವಿಗೆ
ಎಲ್ಲರು ಜಯವೆಂದು ನುತಿಸುತ ॥ ೨೮

ಬಿಸಿಲು ಬೆವರೆನ್ನದೆ । ಹಸಿವು ನೀರಡಿಕೆಲ್ಲ ।
ಕೇಸರಿಯಂತೆ ಶಿವನಾಮ–ಗರ್ಜಿಸುತ
ಬೇಸರಿಸದೆ ದುಡಿವರು ॥ ೨೯

ಒಡೆಯ ಸಿದ್ಧರಾಮ । ಗುಡ್ಡರೊಂದಿಗೆ ಕೆಲಸ ।
ಮಾಡುವದು ನೋಡಿ ನಾಚೂತ–ಓಡಿಬಂದು
ದುಡಿಯ ಹತ್ತಿದರು ಪೈಗಳ್ಳರು ॥ ೩೦

ಭೂತೋದ್ಧಾರಕನೆಂಬ । ಖ್ಯಾತಿ ಪಡೆದ ಶಿವನೆ ।
ಪತಿತರ ಹಿತಕೆ ಶ್ರಮಿಸುವ–ಕಂದನೆಂದು
ಪತಿಗೆ ಅರುಹಿದಳು ಗೌರಮ್ಮ ॥ ೩೧

ನಿಮ್ಮನೆ ನುತಿಸುತ। ಅಮಮ! ದುಡಿತವು।
ನೆಮ್ಮದಿಯಿಂದ ಗೈಯ್ಯುವನು–ಕಂಣು
ಸೋಮಧರನೆ ಇನ್ನು ತೆರೆಯಿರಿ॥ ೩೨

ಕಾಯಕದ ಮಹತಿಯ। ಸ್ವಯ ಆಚಾರದಿ ತೋರಿ।
ಕಾಯವೆ ಕೈಲಾಸ ಮಾಡಿದನು–ಗಂಗೆಯ
ಜೀಯ ಕಳುಹಿರಿ ಬಲು ಬೇಗ॥ ೩೩

ಗೌರಿ ಮಾತವ ಕೇಳಿ। ಹರನಾಗ ಹೇಳಿದನು।
ತ್ವರದಿಂದ ಧರೆಗ್ಹೋಗೆ ಗಂಗೆ ನೀ–ಸಿದ್ಧನ
ಪುರವ ಪಾವನಗೊಳಿಸಲು॥ ೩೪

ಅಂಗ ನಿರ್ಮಲ ನಿಗಂಧ। ತುಂಗ ಬಲವುಳ್ಳವರು।
ಗಂಗೆ ಮೊದಲು ಮಾನದಿಗಳು–ಕೈಮುಗಿದು
ಸಂಗರಹಿತನ ಮುಂದೆ ನಿಂತರು॥ ೩೫

ತೇಜದ ಬಲನೋಡಿ। ಸೋಜಿಗಗೊಂಡಿಹನು।
ಸುಜಾತೆಯರೆ ನಿಮ್ಮ ಆಗಮನ–ಇಲ್ಯಾಕೆ
ಅಜಾತ ಸಿದ್ಧರಾಮ ಕೇಳಿದನು॥ ೩೬

ನಿನ್ನ ಊರಲಿ ನಾವು। ಸನ್ನಿಧಿಯಲಿ ಇರುವೆವು॥
ಸ್ಥಾನ ಸುಕ್ಷೇತ್ರವಾಗಿದೆ-ಕೆರೆಯಲಿ
ಪುಣ್ಯನದಿಗಳು ನೆಲಿಸುವೆವು॥ ೩೭

ಕೆರೆಯ ಮಧ್ಯದಿ ಆಗ। ಹೊರಹೊಮ್ಮಿ ಚಿಮ್ಮಿದರು।
ಅರವತ್ತೆಂಟು ನದಿಗಳ ಉಗಮ–ಭೋರೆಂದು
ನಿರಾಳ ನಿರ್ಮಲ ಝುರಿಯಿಂದ॥ ೩೮

ಗಂಗೆ ತಾ ಬಂದಿಹಳು। ತುಂಗ ಭದ್ರೆಯ ಕೂಡಿ।
ಭಾಗೀರಥಿ ಯಮುನೆ ಗೋದಾವರಿ–ಚಿಮ್ಮಿದರು
ಯೋಗಿ ಸಿದ್ಧರಾಮನ ಕೆರೆಯಲ್ಲಿ॥ ೩೯

ಮಾನಸ ಸರೋವರ। ಸೀನಾ ಭೀಮಾ ಕೃಷ್ಣೆ।
ಪೆನ್ನಾರ ಪಾಲಾರ ದಾಮೊದರ–ಆಗ
ನೈನಗಂಗಾ ಬಂದರು ನಲಿಯುತ॥ ೪೦

ಜಯಮಂಗಲಿ ರೇವಾ । ಕೊಯನಾ ಲೋಕಪಾವನೆ ।
ಗಾಯತ್ರಿ ದೋದವತಿ ಕಾಪಿನಿ-ತಾಪಿ
ಪ್ರಯಾಗ ಬಂದಿಹರು ಕೆರೆಯೋಳು ॥ ೪೧

ಸರಸ್ವತಿ ಮಂಜೀರೆಯು । ಕರಿಹೊಳೆ ಕಪಿಲೆಯು ।
ಈರಾವತಿ ಚೂಡಾಮಣಿ ಚಂಬಲ-ಹಾರಂಗಿ
ಶರಾವತಿ ಶರಯು ಬಂದಿಹರು ॥ ೪೨

ನರ್ಮದಾ ಕಾವೇರಿ । ಕುಮುದಿನಿ ಸತಲಜ ।
ಹೇಮವತಿ ವರದಾ ವೇದಾವತಿ-ಝೀಲಮ
ಗೋಮತಿ ಪಯುಷ್ಣಿ ಹರುಷದಿ ॥ ೪೩

ಬ್ರಹ್ಮಪುತ್ರೆಯು ಸೋನ । ಹೆಮ್ಮಯ ಮರೆತರು ।
ಬ್ರಹ್ಮಿಣಿ ಬೈತರಾಣಿಯು-ಸುವರ್ಣ
ಚಿಮ್ಮಿದರು ಕೆರೆಯೊಳು ಭವಾನಿ ॥ ೪೪

ಲಿಂಗದಹೊಳೆ ಚಕ್ರ । ಸಂಗಮನೊಳಕೊಂಡು ।
ಮಂಗಳ ಧ್ವನಿಯಿಂದ ಪಾಡೂತ-ವೇಣಾ
ಗಂಗಮ್ಮನ ಪಾವನ ಒಡಲೊಳು ॥ ೪೫

ನೇತ್ರಾವತಿ ಸಾವಿತ್ರಿ । ಸೀತೆಯು ಮಹಾನದಿ ।
ಚಿತ್ರಾ ಸಾಬರಮತಿ ಕಾಲಿಂದಿ-ಬೇಗ
ಗೌತಮಿ ಕೂಡಿದರು ಕೆರೆಯೊಳು ॥ ೪೬

ಸಿಂಧು ಅರ್ಕಾವತಿಯು । ಮಂದಾಕಿನಿ ಮಲಪ್ರಭೆ-ಕು ।
ಮುದ್ವತಿ ಘಟಪ್ರಭೆಯು-ಬೆರೆಯಲು
ಮೋದದಿ ಬಂದಿಹರು ಗಂಗೆಯಲಿ ॥ ೪೭

ಇಂದ್ರಾಯಣಿಯು ತಾ । ಸಾಂದ್ರಮಹಿಮೆ ಕೇಳಿ ।
ಚಂದ್ರಭಾಗೆಯಳ ಕರಕೊಂಡು-ತ್ವರದಿಂದ
ಬಂದಿಹಳು ಅತಿ ಬಕುತಿಯಲಿ ॥ ೪೮

ಅಷ್ಟಾಷಷ್ಠಿ ತೀರ್ಥದಿ । ಶ್ರೇಷ್ಠ ಶ್ರೀ ಗಂಗೆಯು ।
ಇಷ್ಟಾರ್ಥ ಸಿದ್ಧಿಯ ನೀಡಲು-ವಾಸಿಪಳು
ಅಷ್ಟಾಂಗ ಯೋಗಿಯ ಪುರದೊಳು ॥ ೪೯

ಶುದ್ಧ ಕಾಯಕದಿಂದ । ತಿದ್ದಿದನು ಜನಮನ ।
ಉದ್ಯಾನ ಉಪವನ ನಿರ್ಮಿಸಿ-ಜೀವಿಗಳು
ಮೋದದಿ ಬಂದು ನೆಲೆಸಲು ॥ ೫೦

ಅಭಿನವ ಶ್ರೀಶೈಲ । ಶೋಭಿಪ ಸೊನ್ನಲಗಿ ।
ಅಭವ ಸಿದ್ಧ ಮಲ್ಲನವತಾರಿ-ದೇವನು
ಅಭಯ ನೀಡೂತ ಪೊರೆವನು ॥ ೫೧

ಕೆರೆಯಲ್ಲ ಶ್ರೀಗಂಗಾ । ಹಿರಿಯ ತೀರ್ಥಂಗಳು ।
ಸಾರಿ ಕ್ಷೇತ್ರದಿ ವಾಸಿಪವು-ಈ ಸುದ್ದಿ
ತೂರಿ ದೆಸೆದಿಕ್ಕು ಹರಡಿತ್ತು ॥ ೫೨

ದೇಶ ದೇಶಗಳಿಂದ । ಸಾಸಿರ ಜನ ಜಂಗುಳಿ ।
ಕ್ಲೇಶ ಹರಿಸೂವ ಗುರುವಿನ–ಪಾದ ದ-
ರುಶನಕೆಂದು ಬರುತಿಹರು ॥ ೫೩

ಹಿರಿ ಕಿರಿಯರೆನ್ನದೆ । ಗುರುವಿನ ಸಂಗಡ ।
ಕೆರೆ ಮಣ್ಣು ಹೊರುವರೆಲ್ಲರು–ಪಾವನ
ಗುರು ಮಹಿಮೆಯ ಹರಸೂತ ॥ ೫೪

ಕೆರೆಯ ಮಧ್ಯದೋಳು । ಕುರುಹು ಆದ ಜಾಲಿಯ ।
ಮರದ ಬುಡದಲ್ಲಿ ಧ್ಯಾನಸ್ಥ–ಸಿದ್ಧೇಶ
ಸ್ಥಿರ ಪದ್ಮಾಸನದಿ ಕೂತಿಹನು ॥ ೫೫

ವೃತ್ತಿನಿರೋಧಿಸಿದ । ಚಿತ್ತವ ಕೇಂದ್ರಿಸಿ ।
ಸುತ್ತಿರ್ದ ಪವನದ ಸಂಚಲ–ನಿಲ್ಲಿಸಿ
ನೆತ್ತಿಯ ಜ್ಯೋತಿ ಕಂಡಿಹನು ॥ ೫೬

ಹಠ ಲಂಬಿಕೆ ಯೋಗದಿ । ಘಟ ಕುಂಭದೊಳಗಿನ ।
ತೊಟ್ಟಿಟ್ಟ ಅಮೃತ ಬಿಂದುವಿನ–ರಸವುಂಡು
ಅಷ್ಟಾಂಗಯೋಗಿ ಸುಖಿಸುವನು ॥ ೫೭

ಗಗನ ಚಂದಿರನ । ಮಿಗೆ ಕಳೆ ಕಂಡು ತಲೆ- ।
ತೂಗಿ ನಿಬ್ಬೆರಗಾಗಿ ಕೂತಿರುವ-ಸಿದ್ಧಗೆ
ಮೃಗ ಬಂದು ಮೈಗೆ ತಿಕ್ಕೀತು ॥ ೫೮

ಚಂಚಲ ಚಿಗರಿಯು । ಸಂಚಲಗೊಳಿಸಿತು ।
ನಿಶ್ಚಲತನವನು ಭಂಗಿಸಿ-ತ್ರಿಕರಣ
ಎಚ್ಚರಗೊಳಿಸಿ ನಿಂತಿಹುದು ॥ ೫೯

ಅಕಟಕಟ ಕೆಟ್ಟೆನು । ಏಕಮುಖಿಯಾಗೂತ ।
ಸುಖಿಸುವೆನೆಂದರೆ ಮಾಯೆಯು-ಕಾಡೀತು
ಸಾಕುಮಾಡೊ ದೇವ ಈ ಪರಿ ॥ ೬೦

ನೊಂದ ಮನದಿಂದಾಗ । ಇಂದುಧರನ ನುತಿಸಿ ।
ಮುಂದೆ ನೋಡಿದ ಕಣ್ತೆರೆದು-ಆಗಲ್ಲಿ
ಸುಂದರಾಂಗ ವಂದಿಸಿ ನಿಂದಿಹನು ॥ ೬೧

ಗುರುವೆ ಸದ್‌ಗುರುವೆ । ಪರಮ ಪಾವನನೆ ।
ಪರಿಹರಿಸು ಭವತಾಪವ-ಮದ್‌ಗುರು
ಕರುಣಾಮಯ ಪಾವನಕರ ॥ ೬೨

ಎರಳೆರೂಪವ ತಾಳಿ । ಪರವಶ ದೂರಿಸಿ ।
ವರ ರೂಪತಾಳಿ ನುತಿಸೂತ್ತ-ನೀನಿಲ್ಲಿ
ಬರುವ ಕಾರಣ ಅರುವೆನಗೆ ॥ ೬೩

ಗುರು ವಚನವ ಕೇಳಿ । ಉರತುಂಬಿ ಬಂದೀತು ।
ಸ್ವರ ಗದಗದ ನಡುಗಿತ್ತು-ಮೇಘಚೂಡ
ಪರವಶನಾಗಿ ನುಡಿದನು ॥ ೬೪

ಪುಣ್ಯಧನ ಎನತಂದೆ । ಜನನಿ ನವಕುಸುಮಗಂಧಿ ।
ತಾಣ ಜಲಜಾತಖೇಟವು-ಇರುತಿರಲು
ಕಾಣದೆ ಶಾಪಕ್ಕೆ ಒಳಗಾದೆ ॥ ೬೫

ಹೇಮಕೂಟ ಕೈವಲ್ಯ । ಧಾಮ ಮಾಮುನಿಗಳ ।
ಸ್ವಾಮಿ ಅವರನ್ನು ಎಡವಿದೆ-ಶಪಿಸಿ
ಭೂಮಿಯಲಿ ಜಿಂಕೆ ಆಗೆನಲು ॥ ೬೬

ಒಡೆಯನೆ ನಿಮ್ಮಿಂದ । ಬಡವ ಮುಕ್ತನಾದೆ ।
ವಡಮುಖವೆಂಬ ಸುರಗಿಯ-ಅರ್ಪಿಸಿ
ಕಡೆಗಾಗುವೆನು ಈ ಜನುಮದಿ ॥ ೬೭

ಸುರಗಿಯ ಕಾಣಿಕೆ । ತರವಲ್ಲ ನನಗೇಕೆ ।
ಶೂರ ವೀರರಣದವರಿಗೆ-ಕೊಡುವದು
ಹರ ಬಕ್ಕುತರು ಹತ ಮಾಡರು ೬೮

ಕರುಣಾಕರನೆ ನಿನ್ನ । ವರ ಹಸ್ತದೊಳಗಿರಲಿ ।
ಪರಂಪರೆ ಇದು ಬಂದದ್ದು–ನಿನ್ನಡಿಗೆ
ಅರಪಿಸಿ ನಾನು ತಣಿಯುವೆ ॥ ೬೯

ಭಕ್ತೀಲಿ ಕೊಟ್ಟಿರುವ । ಶಕ್ತೀಯ ಶಸ್ತ್ರವಿದು ।
ಮುಕ್ತ ಹಸ್ತನ ಕೈಯಲ್ಲಿ–ಒಪ್ಪವದು
ಶಕ್ತಿಯುತ ಶಿವನ ಠಾವಿನಂತೆ ॥ ೭೦

ಹೆಂಣಿನ ಕಂಣೀನ । ಬಾಣಕೆ ಅಳುಕಿಲ್ಲ ।
ಆಣವ ಮಾಯಾ ಕಾರ್ಮಿಕ- ಮೂರು
ಅಣುಮಾತ್ರ ಯೋಗಿಗೆ ಮುಟ್ಟಿಲ್ಲ ॥ ೭೧

ನಿಜವಾದ ವೈರಿಯು ಮ– । ನುಜಂಗೆ ದುರ್ಗುಣ ।
ಸುಜನ ಶ್ರೇಷ್ಠಗೆ ಒಪ್ಪುವದು–ಸಿದ್ಧನ
ಅಜಯ ಶಸ್ತ್ರವು ಹಸ್ತದಲಿ ॥ ೭೨

ಕಸಕಡ್ಡಿ ತೆಗೆಯುತ । ಸಸಿಗಳ ಬೆಳಸಿದನು ।
ಹಸನಾದ ನೀರು ಉಣಿಸೂತ–ಶಿವಸಿದ್ಧ
ಹೊಸ ಹೂತೋಟ ಬೆಳಸಿದನು ॥ ೭೩

ಮರಗು ಮಲ್ಲಿಗೆ ಜಾಜಿ । ಸುರಗಿ ಶೀವಂತಿಯ ।
ಪಾರಿಜಾತದ ಹೂ ಪರಿಮಳ-ಬೀರೂತ
ಪರಿಪರಿ ಪುಷ್ಪಗಳರಳಿದವು ॥ ೭೪

ಚಂಪಕ ಬಕುಳಿಯ । ಸಂಪಿಗೆ ತುಂಬಿಯು ।
ಕೆಂಪು ಬಿಳಿ ನೀಲಿಯ ಬಂಣದ-ಹೂಗಳು
ತಂಪಾಗಿ ಕಂಪಾಗಿ ನಲಿದಿಹವು ॥ ೭೫

ಬಿಳಿ ಕೆಂಪುದ್ವಾಶಾಳ । ಒಳಮೈಯ ಬಲು ಚಂದ ।
ದಳಗಳ ಮಧ್ಯದಿ ಕರ್ಣಿಕೆಯು–ಸುಂದರ
ಹಳದಿ ಬಂಣ ಮನ ಸೆಳೆದಿತ್ತು ॥ ೭೬

ಹಚ್ಚನ ಹಾಸಿಗಿಯು । ಬಿಚ್ಚಿ ಹಾಸಿದ ಹಾಗೆ ।
ಅಚ್ಚ ಹೊಡೆದಂತೆ ಬಣ್ಣಗಳು–ಕಂಡವು
ಬಿಚ್ಚಿ ಅರಳೀದ ಹೂವುಗಳು । ೭೭

ಹೂವಿನ ತೋಟದಲಿ । ದೇವ ಪೂಜೆಗೆ ಹೂವು ।
ಭಾವದಿ ಸಿದ್ಧಯೋಗಿ ಕೊಯ್ಯುತ-ಆಗ
ನವಯೋಗಿ ಸಿದ್ಧನ ಎದುರಿಗೆ ॥ ೭೮

ಹೇಳೊ ಹೇಳೊ ಯೋಗಿ । ವೇಳೆ ಕಳೆಯು ಬೇಡ ।
ಅಳಿದು ಹೋಗಲೋ ಉಳಿಯಲಿ–ನುಡಿ ಎಂಬ
ಕಳವಳಿಸಿದ ನುಡಿ ಕೇಳಿತು ॥ ೭೯

ಭಾವದಿಂ ಪಾಡೂತ । ಹೂವ ಎತ್ತುವಾಗ ।
ಯಾವ ನುಡಿಗಳು ಕೇಳಿಸದೆ-ಸಿದ್ಧೇಶ
ದೇವ ದೇವನ ನುತಿಸುವನು ॥ ೮೦

ಸಿಟ್ಟಿಗೆಬಂದ ಯೋಗಿ । ಗಟ್ಟಿಸಿ ನುಡಿದನು
ಬಿಟ್ಟು ಹೋಗಲೊ ಇಲ್ಲಿರಲೊ-ಸಿದ್ಧೇಶ
ತಟ್ಟನೆ ನುಡಿಯೊ ತಡವೇಕೊ ॥ ೮೧

ನನಾಗ್ಯಾಕೆ ಕೇಳುವಿ । ನೀನಿರುವದು ತೆರಳುವದು ।
ಮನಸಿನ ಪರಿಯಂತೆ ಮಾಡಯ್ಯ–ಯೋಗಿಯೆ
ಏನೆನಗೆ ಕೇಳದೆ ಮರಳ್ಹೋಗು ॥ ೮೨

ಸಿದ್ಧನ ಬಿರಿ ಮಾತು । ಬಿದ್ದವು ಕಿವಿಮೇಲೆ ।
ಸದ್ದ ಇಲ್ಲದ್ಹಂಗೆ ಬಿದ್ದೀತು–ಕಾಯವು
ಸಿದ್ಧ ವಚನದಿ ಅಸು ನೀಗಿತು ॥ ೮೩

ಶವ ಕಂಡು ಯೋಗಿಯು । ನೋವಾಯಿತು ಮನಕೆ ।
ಯಾವ ಕಾರಣ ಪ್ರಾಣ ನೀಗಿದನು–ತಿಳಿಯದೆ
ಶಿವ ಸಿದ್ಧರಾಮನು ಬೆರಗಾದನು ॥ ೮೪

ಅರೆಕ್ಷಣ ತಡೆಯದೆ । ಭರದಿಂದ ಮಲ್ಲೇಶನ ।
ಚರಣಕ್ಕೆ ಯೋಗಿ ಎರಗಿದನು–ಸಿದ್ಧೇಶ
ಮರಮರ ಮರಗೂತ ನುಡಿದನು ॥ ೮೫

ಅಪರಾಧ ಘಟಿಸಿತು । ವಿಪರೀತ ಇಂದೊಂದು ।
ಮಾಪತಿ ನಿನ್ನ ಧ್ಯಾನಿಸುವಾಗ-ಬಂದವಗೆ
ಕೋಪಗೊಂಡು ಮಾತನಾಡಿದೆ ॥ ೮೬

ಬಿತ್ತು ಕಿವಿಗೆ ಮಾತು । ಕತ್ತಲೆ ಮುಸುಕೀತು ।
ನೆತ್ತಿ ಬಾಗಿಲ ತೆಗೆದು ಆ ಚಣ-ಗಗನದ
ಎತ್ತರ ಉರಿಯು ಹಾರೀತು ॥ ೮೭

ಶಿವ ತೇಜದ ಕಾಯ । ಶವದಂತೆ ಉರಳಿತ್ತು ।
ಅವಲೋಕಿಸಿ ಭಯಪಟ್ಟೆನು-ಓ ತಂದೆ
ದೇವ ದೇವನೆ ಎನ್ನ ಕಾಪಾಡು ॥ ೮೮

ಸುರಿವ ಕಂಬನಿ ತೊಡೆದು । ಶಿರವ ಮೇಲೆತ್ತಿದನು ।
ಹರ ಮಲ್ಲಿನಾಥ ನುಡಿದನು-ಸಿದ್ಧ ನಿನ್ನ
ದರುಶನದಿ ಪಾವನ ಗೊಂಡಿಹನು ॥ ೮೯

ಅತಿಹಂಸನೆಂಬ ಯತಿ । ಅತಿ ಕಾಮಿ ಇರುವನು ।
ಮತಿಹೀನ ಅನಾಚಾರಿಯಾಗಿ-ಅದು ಕಂಡು
ಅತಿ ಕೋಪಗೊಂಡ ಮೈಳಾಕನು ॥ ೯೦

ಭವಮಾಲೆಯೊಳಗಾಗಿ । ಭುವಿಯೊಳು ಜನಿಸಿ ।
ಶಿವ ಸಿದ್ಧರಾಮನ ಶಿಷ್ಯನಾಗಿ-ಸಂತತ
ಸೇವೆಗೈದು ಭವವ ನೀಗೆಂದನು ॥ ೯೧

ಮೂಲಸ್ವಾಮಿ ಎಂಬುವ । ಬಾಲಕ ಜನಿಸುವನು ।
ಲೋಲದಿ ಯೋಗ ಸಾಧಿಸುವ-ನಿನಗಾತ
ಬಲವುಳ್ಳ ಶಿಷ್ಯನಾಗುವನು ॥ ೯೨

ಭೋಗಕ್ಕೆ ಒಳಗಾದ । ನಾಗಾರ್ಜುನ ಸಿದ್ಧರನು ।
ಹೋಗಿ ಶಿಷ್ಯೋತ್ತಮ ತರುವನು-ಸಿದ್ಧೇಶ
ಯೋಗಿ ಉತ್ತುಂಗ ಭದ್ರನು ॥ ೯೩

ಘನ ಸಿದ್ಧರನು ತಂದು । ನಿನ್ನಡಿಗೆ ಒಪ್ಪಿಸಿ ॥
ಲೀನದಿ ಸೇವೆ ಗೈಯುವನು-ಉತ್ತುಂಗ
ಜನನ ಮರಣ ಮೀರುವನು ॥ ೯೪

ಜೋಪಾನ ಮಾಡಿಡು । ಶಾಪ ಮುಕ್ತನ ಕಾಯ ಅ- ।
ನುಪಮ ನೆಲಮನಿ ಕಟ್ಟಿಸಿ-ಉತ್ತುಂಗ
ಅಪರೂಪ ನಿನ್ನ ಶಿಷ್ಯರೊಳು ॥ ೯೫

ಮಲ್ಲಯ್ಯನ ನುಡಿಕೇಳಿ । ತಲ್ಲಣವ ನೀಗಿದನು ।
ಸಲ್ಲು ಸಲ್ಲಿಗೆ ಚೆನ್ನಮಲ್ಲನ–ಸ್ಮರಿಸುತ
ಬಲ್ಲ ಸಿದ್ಧನು ತೆರಳಿದನು ॥ ೯೬

ಶಿವನ ಅಪ್ಪಣೆಯಂತೆ । ಶವವು ವೈಭವದಿಂದ
ಶಿವಮೂರ್ತಿ ಸಿದ್ಧನು ಗಂಗೆಯ-ದಡಿಗಿಟ್ಟು
ಶವ ಕಾಯುವನು ಅಪ್ಪಣೆಯಂತೆ ॥ ೯೭

ಹಠಯೋಗಿ ಸಿದ್ಧನ । ದಿಟದ ಕೀರುತಿ ಕೇಳಿ ।
ಮಠಕೆ ದೂರದಿಂ ಜನಗಳು-ಬರುತಿರೆ
ಪಠಿಸುತ ಸಿದ್ಧನ ನಾಮವನು । ೯೮

ವಿರತಿ ಅಚ್ಚಳಿಯದ । ಮೂರುತಿಯ ಕೀರುತಿ ।
ಸಾರಿತು ಮೂರು ಲೋಕದಿ–ಮನ್ಮಥ
ಹರ ಶಿವ ಸಿದ್ಧರಾಮಯ್ಯ ॥ ೯೯

ಸಂಧಿ ೧೦

ಎಳೆ ಕರುಗಳು ತನ್ನ । ಬಳಿ ನಿಂತಿವೆ ತಾಯಿಯ ।
ಸುಳಿ ಬಗೆದು ಬರುವ ಬೆಳೆಯಂತೆ—ಕಂಡವು
ಸೆಳೆಯುತ್ತ ದಿಟ್ಟ ತಮ್ಮೆಡೆಗೆ ॥ ೧

ತುಂಬಿದ ಮೈಕಟ್ಟು । ಕೊಂಬಿನ ಚಲುವಿಕೆ ।
ಹಂಬ ಎಂದು ಸಿದ್ಧನ ಕರೆಯೂತ—ಗೋವು
ಕಂಬನಿ ಹರುಷದಿ ಸುರಿಸುವವು ॥ ೨

ಚಿನ್ನದ ಸರಪಳಿ । ಝಣ ಝಣ ನುಡಿಯುವ ।
ಸಣ್ಣ ದೊಡ್ಡ ಗಂಟೆ ಸರಗಳು । ಮಾಣಿಕದ
ಹಣಿ ಮೇಲೆ ಒಪ್ಪುವ ಪದಕವು । ೩

ಕಾಲಲಿ ರುಳಿಗಳು । ಬಾಲಿಗೆ ಸರಗೊಂಡೆ ಮೈ-
ಮೇಲೆ ಪೀತಾಂಬರ ಹೊದ್ದ—ಹಸುಗಳು
ಸಾಲು ಸಾಲಗೊಂಡು ನಿಂತಿಹವು ॥ ೪

ತುರುಹಟ್ಟಿಗೆ ಹೋಗಿ । ಕರುಗಳಿಗೆ ಆಡಿಸುತ ।
ಗುರು ಸಿದ್ಧರಾಮನು ನಲಿಯುತ-ನಿಂದಾಗ
ಬೆರಗುಗೊಂಡನು ಚಿಗರಿಯ ಕಂಡು । ೫

ಚಿಗರಿಯ ಎದೆಯೊಳಗ । ಬಗೆದು ನಟ್ಟಿತು ಬಾಣ ।
ರಗುತ ಸುರಿಯುತಿತ್ತು ದಳದಳ-ಮೆತ್ತನ ನ-
ಡಗಿತ್ತು ಮೈಯೆಲ್ಲ ಗದಗದ ॥ ೬

ಓಡುತೋಡುತ ಬಂದು । ಎಡವಿ ತಾ ಬಿದ್ದಿತು ।
ಕೂಡಿಸಿ ಹಾಕಿದ ಸಗಣಿಯ-ತಿಪ್ಪೆಯಲಿ
ತಡಪಡಿಸೂತ ಬಳಲೂತ ॥ ೭

ಚಂಚಲ ಗಂಣೀನ । ಅಂಚೆಲ್ಲ ನೀರುಂಡು ಆಗ ।
ಮಿಂಚು ಮಾಯಾಗಿ ಹೋಗಿತ್ತು-ಜಿಂಕೆಯ
ಸಂಚಲವ ನಿಂತುಕೊಂಡಿತ್ತು ॥ ೮

ಕಾಲುಗಳ ಒದ್ದಾಟ । ನಾಲಿಗೆ ಹೊರಬಿತ್ತು ।
ಮೇಲೆ ಮುಖವೆತ್ತಿ ನೋಡಿತು-ಯೋಗಿಯು
ಮೇಲ್‌ಗರುಳವದು ಕಳವಳಿಸಿ ॥ ೯

ಹರ ಹರ ಎನುತಲಿ । ಕರುಣಾಳು ಕೈಯಿಂದ ।
ಮರಣಕ್ಕೆ ಒಳಗಾದ ಜಿಂಕೆಯ-ಎತ್ತಿ
ಒರಸಿದನು ಮೆತ್ತಿದ ಸಗಣಿಯ ॥ ೧೦

ಯೋಗಿಯ ಸ್ಪರ್ಶದಿ । ಭೋಗವ ನೀಗಿದನು ।
ಚಿಗರಿಯ ಕಾಯವು ಮಾಯಾಗಿ-ಗಂಧರ್ವ
ಯೋಗಿ ಪಾದವನು ಬಿಡವಲ್ಲ ॥ ೧೧

ಧನ್ಯ ಧನ್ಯ ಗುರುವೆ । ನಿನ್ನಿಂದ ಪಾವನನಾದೆ ।
ಮುನ್ನಿನ ಪಾಪವು ಪರಿಹಾರ-ಆಯಿತು
ಎನ್ನ ಶ್ರೀ ಗುರುವಿನ ದರುಶನದಿ ॥ ೧೨

ಹರಿಣಿರೂಪವ ತಾಳಿ । ಧಾರುಣಿಯಲಿ ಜನನವ ।
ಕಾರಣವೇನು ತಿಳಿಯದು-ನೀನ್ಯಾರು
ಸುರಲೋಕ ಬಿಟ್ಟು ಬಂದಿರುವಿ । ೧೩

ಜನಕನ ನಾಮವು । ವಿನುತಲೋಹಿತ ಕೇತು ।
ನನ್ನ ಹೆಸರು ಮಯೂರಕನು-ನಾನೊಮ್ಮೆ
ಜನಕೂಡಿ ಬೇಟೆ ಆಡಿದೆ ॥ ೧೪

ಶತಶೃಂಗವೆಂಬುವ । ಅತಿದೊಡ್ಡ ಕಾನನದಿ ।
ಮತಿಗೇಡಿಯಾಗಿ ಮೃಗಗಳ-ಬೇಟೆ
ಅತಿ ಹರುಷದಿ ಮಾಡುವಾಗ ॥ ೧೫

ಹೆದರಿತು ನಮ್ಮ ನೋಡಿ । ಬೆದರಿ ಓಡಿತು ಮೃಗ ।
ಚದುರಾದ ಒಂದು ಜಿಂಕೆಯು-ನನ ಬಾಣ ಕೆ
ಬಿದ್ದೀತು-ಆಗ ಬಲಿಯಾಗಿ ॥ ೧೬

ಓಡುತೋಡುತ ಹೋಗಿ । ದಾಡನೆ ಬಿದ್ದೀತು ಜಿಂಕೆ
ನೋಡಿ ನೋವಾಯಿತು ಯತೀಶಗೆ-ಆಗ
ಕಡು ಕೋಪದಿ ಶಾಪವಿತ್ತನು ॥ ೧೭

ಕೋಪಗೊಂಡ ಮುನಿಯು । ಶಾಪವಿತ್ತನು ಎನಗೆ ।
ಅಪರಾಧ ಮನ್ನಿಸಲು ಬೇಡಿದೆ-ನಿಮ್ಮಿಂದ
ಶಾಪ ಮುಕ್ತನು ಆಗೆಂದನು ॥ ೧೮

ಮುನಿ ವಿಶ್ವದರ್ಶನ । ಮುನಿದು ಕೊಟ್ಟ ಶಾಪವು ।
ಘನಯೋಗಿ ನಿಮ್ಮಿಂದ ಪರಿಹಾರ-ಎನ್ನೂತ
ನೆನೆಯುತ ಮರಳಿದನು ಗಂಧರ್ವನು ॥ ೧೯

ಅಂಣ ಬೊಮ್ಮಂಣನು । ಪುಣ್ಯ ಕೇದಾರ ಕ್ಷೇತ್ರವ ।
ಕಂಣಿಲಿ ನೋಡಲು ಬಯಸಿದ-ಸಿದ್ಧನು
ದಣಿ ಬೇಡ ಎಂದನು ತಿರುಗಾಡಿ ॥ ೨೦

ಹೊನ್ನಿನ ಹುಳವದು । ತನ್ನ ಬೆಳಕರಿಯದೆ ।
ಅನ್ಯ ಠಾವಿನಲ್ಲಿ ಹುಡುಕುವದು–ಅಂಣ
ಸೊನ್ನಲಗಿ ಬಿಟ್ಟು ಹೊರಟಿರುವಿ ॥ ೨೧

ಹೆಮ್ಮೆಯಲಿ ದಾಟಿದನು । ಸೀಮೆ ಸೊನ್ನಲಿಗೆಯ ।
ಒಮ್ಮೆಲೆ ಕಂಣು ಕುರುಡಾಗಿ–ಬೊಮ್ಮಣ್ಣ
ಸ್ವಾಮಿ ಸಿದ್ಧರಾಮನೆ ಶರಣೆಂದು ॥ ೨೨

ಅಂಣ ಬೊಮ್ಮಂಣನ । ಕಂಣು ಕಳೆದುದು ನೋಡಿ ।
ಪುಣ್ಯಾಭಿರಾಮನು ಮರುಗೂತ–ಕೈಹಿಡಿದು
ಚೆನ್ನನ ಗುಡಿಗೆ ನಡೆ ಎನುತ ॥ ೨೩

ಅಂಣನಿಗೆ ಮುಸುಕಿದ । ಕಂಣ ಮೇಲಿನ ಪರೆ ।
ಚಣ ಮಾತ್ರದೊಳು ಹರದೀತು–ಗುರು ಮು–
ಕ್ಕಣ ಸಿದ್ಧೇಂದ್ರ ಪೊರೆಯೆಂದನು ॥ ೨೪

ಕರೆತಂದು ತೋರಿದನು । ವರ ಮಲ್ಲಿಕಾರ್ಜುನನ ।
ರಾರಾಜಿಸುವ ದೇಗುಲವದು–ಅಲ್ಲಿಯು
ಮೆರೆವ ಕ್ಷೇತ್ರಗಳ ಸಂದಣಿ ॥ ೨೫

ಕ್ಷೇತ್ರಗಳ ಮಹಾ । ಸೂತ್ರವ ಅರಿತವನು ।
ಕ್ಷೇತ್ರನಾಥರನ್ನು ಕರೆದು–ನುಡಿಸಿದ
ಸೂತ್ರಧಾರ ಸಿದ್ಧರಾಮೇಶ್ವರ ॥ ೨೬

ಅಲ್ಲಿ ಇಲ್ಲಿ ಎಂಬುವ । ಸಲ್ಲದಿದು ಸಂದೇಹ ।
ನಿಲ್ಲದಲೆ ಬರಿದಾಯಿತು–ಬೊಮ್ಮಯ್ಯ
ಬಲ್ಲಹನ ಪಾದ ಹಿಡಿದನು ॥ ೨೭

ಘಮ ಘಮ ಸುಗಂಧ । ಅನುಪಮ ಚಲುವಿಕೆ ।
ನಮಿಸಿ ಸಿದ್ಧನಿಗೆ ಬಕುತೀಲಿ–ಎಂದನು
ಅಮಮಮ ಪಾವನನಾದೆನು ॥ ೨೮

ಸುಂದರಾಂಗನ ಅಂದ । ಚಂದ ಚಲುವಿಕೆ ನೋಡಿ ।
ಬಂದ ಕಾರಣ ಸಿದ್ಧ ಕೇಳಿದ–ನೀನಾರು
ತಂದೆ ತಾಯ್‌ಗಳ ಹೆಸರೇನು ॥ ೨೯

ಕುಮುದಶೇಖರನೆಂದು । ಪ್ರೇಮದಿಂನ್ಹೆಸರಿಟ್ಟು ।
ಮಮತೆಯಿಂದೆನ್ನ ಸಲಹಿದರು–ಸಂಭ್ರಮ
ಮದುವೆ ಮಾಡಿದರು ಅವರೆನ್ನ ॥ ೩೦

ಅಳಕಾಪುರವೆಲ್ಲ । ಹೋಳದೀತು ವೈಭವದಿ ।
ಸ್ಥಳಗಳ ಬಂಣಿಪದಸದಳ–ಕುಬೇರ
ಕೊಳ್ಳವ ನಿರ್ಮಿಸೆ ಜಲಕ್ರೀಡೆಗೆ ॥ ೩೧

ವಸಂತ ಕಾಲದ । ಉತ್ಸವದಿ ನಮಗೆಲ್ಲ ಅ– ।
ತಿ ಸಂತಸದಿ ಕ್ರೀಡಿಸಲು–ಕರೆಯೆ
ವಸಂತ ನಮಗೆ ಎಳೆದೊಯ್ಯಿತು ॥ ೩೨

ಎಳೆಯ ಮಾಮರಗಳು । ಕದಳಿಯ ಬನಗಳು ।
ಬಳ್ಳಿ ಏರಿದ ಗಿಡವೆಲ್ಲ–ಕೊಳ್ಳದಿ ಕ–
ಮಳ ಅರಳಿವೆ ಬಲು ಚಂದ ॥ ೩೩

ನೀರಕೋಳಿಯು ಹಂಸ । ಪಾರಿವಾಳ ಕೋಗಿಲೆ ।
ಪರಿ ಪರಿ ಬಣ್ಣದ ಹಕ್ಕಿಗಳು–ಬನದಿ
ಗರಿ ತೆಗೆದು ಆಡುವ ನವಿಲುಗಳು ॥ ೩೪

ವಿಶ್ವ ಕರ್ತನ ಪಡಿ । ವಿಶ್ವವವನೆ ಬೇರೊಂದು ।
ಐಶ್ವರ್ಯದ ಬಲದಿ ನಿರ್ಮಾಣ–ಕೃತ್ರಿಮ
ವಿಶ್ವವ ರಚಿಸಿದನು ಕುಬೇರ ॥ ೩೫

ಪರಿ ಪರಿ ಹೂಗಳು । ಪರಿಮಳ ಬೀರುತ ।
ಪರಿಪಕ್ವ ಫಲಗಳ ಗೊಂಚಲ–ವನದಿ
ತರುಮರಗಳು ಶೋಭಿಪವು ॥ ೩೬

ಕೃತಕ ಕಮ್ಮಟದೋಳು । ಅತಿ ಮನೋಹರ ಕೊಳ್ಳ ।
ಸತಿಯೊಡನೆ ಕ್ರೀಡಿಸುವಾಗ–ಮೀನ್ ಕಂಡು
ಅತಿ ಹೆದರಿದಳು ನನ್ನವಳು ॥ ೩೭

ಚದುರಿಯ ದನಿ ಕೇಳಿ । ಬೆದರಿ ಹೊಡೆದ ಬಾಣ ।
ಅದರ ಕೀಲವು ತಪ್ಪಿ ಆಗಸಕೆ–ಹಾರಿತು
ಎದೆಗೆ ಬಡದಿತ್ತು ಯತೀಶನ ॥ ೩೮

ಕೋಪಿಸಿ ಕಪಿಲವ್ರತಿಪ । ಶಾಪವಿತ್ತನು ಆಗ ।
ಪಾಪಿ ನಿನ್ನದೆಗೆ ಮೀನವು–ಅಂಟಲಿ
ವ್ಯಾಪಿಸಲಿ ದೇಹಕ್ಕೆ ದುರ್ಗಂಧ ॥ ೩೯

ಪರಿಮಳ ಬೀರುವ । ನೀರಿನೊಳು ಆಡುವಾಗ ।
ಹರಿದು ಹೋಯಿತು ಜನ ದೂರ–ಮೈಯೆಲ್ಲ
ನಾರಿತು ಹೊಲಸು ದುರ್ಗಂಧ ॥ ೪೦

ಪೆಚ್ಚಾದೆ ಎದೆ ಮೇಲೆ। ಮುಚ್ಚವನು ನೋಡುತ।
ನಾಚಿದೆ ದುರ್ಗಂಧ ವಾಸನೆಗೆ-ನಾನಾಗ
ಆಚೆ ಆಚೆ ಹೊರಟೆ ತೊರೆದೆಲ್ಲ॥ ೪೧

ಸಿಟ್ಟಾದ ಮುನಿಗಳ। ಗಟ್ಟಿ ಪಾದವ ಹಿಡಿದು।
ಕೆಟ್ಟೆನೊ ದೇವಾ ಆಡುತ-ನಿನಗೆ
ಪೆಟ್ಟು ತಾಗಿದಕೆ ಮನ್ನಿಸು॥ ೪೨

ಮಾಯದ ಪರಿ ನಿನ್ನ। ಕಾಯದ ಕಣ್ಣಿನ ಮೇಲೆ।
ಹಾಯ ಗೊಂಡಿತ್ತೊ ಎನ ಮನ-ನಿನ್ನೆದೆ
ಗಾಯ ಗೊಂಡಾಗ ತಿಳಿಯಿತೆ॥ ೪೩

ಮರೆದು ಅಪರಾಧ। ಪರಿಹರಿಸು ಯತಿವರ।
ಪೊರೆದೆನ್ನ ಪಾಪವಿಮುಕ್ತನ-ಮಾಡಯ್ಯ
ಪರಿವಾರದೊಳಗೆನ್ನ ಕೂಡಿಸು॥ ೪೪

ಅಷ್ಟಾಷಷ್ಠಿ ತೀರ್ಥವ। ಸೃಷ್ಟಿಸುವ ಸಿದ್ಧೇಶ।
ಶ್ರೇಷ್ಠ ಯೋಗಿ ಚಕ್ರವರ್ತಿಯ-ದರುಶನದಿ
ನಷ್ಟಾದಿತು ಎಂದನು ದುರ್ಗಂಧ॥ ೪೫

ಗಂಗೆಯೊಳಗೆ ಮಿಂದು। ಅಂಗಾಂಗ ಶುಚಿಯಾಗಿ।
ಮಂಗಳ ಮೂರುತಿ ಸಿಧ್ಧಯೋಗಿ-ನಿನ್ನಿಂದ
ಹಿಂಗಿತು ಎನ್ನ ಶಾಪವದು॥ ೪೬

ವಂದಿಸಿ ಚರಣಕ್ಕೆ। ನಂದದಿ ಮರಳಿದನು।
ಗಂಧರ್ವನು ತನ್ನ ಲೋಕಕ್ಕೆ-ಸಿಧ್ಧೇಶ
ಬಂಧಮುಕ್ತನೆಂದು ಸಾರುತ॥ ೪೭

ಹರಿನಾರಾಯಣನೆಂದು। ಕರತಾಳ ಹಾಕುತ।
ನಾರದ ಬಂದನು ಕೈಲಾಸದಿ-ಸಭೆಯೊಳು
ಹರನ ವಂದಿಸಿ ನಿಂದಿಹನು॥ ೪೮

ಹರನ ಸಭೆಯೋಳು। ಸುರಗಣ ಶಿವಗಣರು।
ನಾರದನ ಕಡೆ ಕುತೂಹಲದಿ-ನೋಡುತ
ತರುವ ಸುದ್ದಿಗೆ ಕಿವಿಗೊಡುತ॥ ೪೯

ಕಟ್ಟಿಹನು ಮುಡಿ ಮೇಲೆ। ಮೆಟ್ಟಿಹನು ಆವುಗಿ।
ಉಟ್ಟಿಹನು ಜರದ ಒಲ್ಲಿಯ-ನಾರದನು
ಸೆಟ್ಟನ ತಂಬುರಿ ಕೈಯಲ್ಲಿ॥ ೫೦

ಬನ್ನಿ ನಾರದರೆ। ಇನ್ನೇನು ಹೊಸ ಸುದ್ದಿ।
ಚೆನ್ನಮಲ್ಲೇಶನು ಕೇಳಿದನು-ನಾರದ
ಬಿನ್ನವಿಸುವೆನು ಎಂದನು॥ ೫೧

ಏನು ಹೇಳಲಿ ದೇವ। ಹೀನ ಮಾತುಗಳಿಲ್ಲಿ।
ಮುನಿ ಉತ್ತಾರಕನ ಸಭೆಯೋಳು-ಕಂಡೆನು
ಲೀನತನವಲ್ಲಿ ಎನಿತಿಲ್ಲ॥ ೫೨

ನಿಂದೆಯ ಸುರಿಮಳೆ।ಕುಂದು ತರುವ ಮಾತು।
ನೊಂದಿತ್ತು ಎನ್ನ ಮನವಾಗ-ಮಹಾದೇವ
ಒಂದು ಚಣ ನಿಲ್ಲದೆ ಬಂದೆನು॥ ೫೩

ಖಿನ್ನ ಮುಖವ ನೋಡಿ। ಪನ್ನಗಧರ ನುಡಿದನು।
ನಿನ್ನನು ಯಾರು ಬೈದರೆ-ಮುನಿಗಳು
ಉನ್ಮತ್ತರಾಗಿ ನುಡಿವರೆ॥ ೫೪

ಹಾಲಾಹಲ ವಿಷಪಾನ। ಲೋಲದಿ ಮಾಡಿದನು।
ಸಲಹುವನು ತ್ರಿಲೋಕವನೆ-ಹೊದ್ದಲು
ಹುಲಿ ಗಜಚರ್ಮವು ಮೈಮೇಲೆ॥ ೫೫

ಏರಲು ಮುದಿ ಎತ್ತು।ಇರಲು ಹಾಳು ಬೆಟ್ಟ।
ಉರಗದಲಂಕಾರ ಮೈಮೇಲೆ-ಒಪ್ಪಿದೆ
ಶಿರದಲಿ ಚಂದಿರ ಥಳ ಥಳ॥ ೫೬

ವಸ್ತು ಒಡವೆಗಳಿಲ್ಲ। ಕಸ್ತೂರಿ ಪೂಸಿಲ್ಲ।
ಮಸ್ತಕ ಮೈಯೆಲ್ಲ ಭಸ್ಮವ-ಬಳೆದು
ವಿಸ್ತಾರಾತೀತನು ವಾಸಿಪನು॥ ೫೭

ಉರಿಸಿಹನು ಕಾಮನ। ಉರಿಗಂಣಿನ ಶಿವನು।
ಮಾರಹರನೆಂದು ನಾಮುವ-ಪಡೆದನು
ಹರ ಹರ ಶಂಭೊ ಮಹಾದೇವ॥ ೫೮

ಇಂದುಧರನೆ ನಿನ್ನ । ಸಂದಿಲ್ಲದ ಮಹಿಮೆಯ ।
ನಂದದಿ ಬಂಣಿಸಿ ಸುತಿಸಲು-ಯತಿ ಮುನಿ
ಕಂದಗೊರಳನಿಗೆ ಜಯವೆಂದು ॥ ೫೯

ನಿನ್ನನು ಪಾಡಲು । ಎನ್ನ ಮನ ತಣಿದೀತು ।
ಉನ್ನತೋನ್ನತ ಮಹಾದೇವ-ಸಭೆಯಲಿ
ಉನ್ಮತ್ತ ನೀಲಪಟನೆಂದನು ॥ ೬೦

ಕಾಮನ ಸುಟ್ಟನೆ । ಉಮಾವರ ಗಂಗಾಧರ ।
ವಾಮಾಂಗದೊಳು ಗೌರಿಯು-ಹೊತ್ತಿಹನು
ಪ್ರೇಮದಿ ಜಡೆಯೊಳು ಗಂಗೆಯನು ॥ ೬೧

ನಿಂದೆಯ ಕೇಳದಲೆ । ಬಂದಿರುವೆ ಎನ್ನ ತಂದೆ ।
ಮಂದಹಾಸ ಬಿಡು ದೇವನೆ-ಮುನಿಯ ಕರೆ-
ತಂದು ಸಭೆಯೊಳು ಕೇಳೆಂದನು ॥ ೬೨

ಕರೆಯಲು ಕಳುಹಲು । ತ್ವರದಿಂದ ಯತಿ ಬಂದು ।
ಹರನನ್ನು ವಂದಿಸಿ ನಿಂತನು—ನೀಲಪಟ
ಕರೆತಂದನು ಹೊಂದಿಗೆ ರತಿಯಳ ॥ ೬೩

ನಾರದನೆಡೆ ನೋಡಿ । ಏರಿತು ಸಿಟ್ಟು ಯತಿಗೆ ।
ಅರುಹುವೆ ಸುರಮುನಿ ಮಹಿಮೆ—ಎಂದನು
ಹರಸಭೆಯೊಳಗಿನ ಸುರರಿಗೆ ॥ ೬೪

ನಾರದ ಮುನಿಗಳು । ನಾರಿ ರೂಪವ ಧರಿಸಿ ।
ಅರವತ್ತೆಂಟು ಗಂಡು ಹೆಂಣೊಂದು-ಹೆತ್ತರು
ವರ ಕಾಮ ರತಿಯರ ಕೃಪೆಯಿಂದ ॥ ೬೫

ಹದಿನಾರು ಸಾವಿರ । ಮದನಾರಿಯರ ಕೂಡಿ ।
ಸದಾ ಕ್ರೀಡೆಯೊಳು ರಮಿಸುವ-ಶ್ರೀಹರಿ
ರಾಧಾ ರುಕ್ಮಿಣಿ ಸತ್ಯಭಾಮೆಯರು ॥ ೬೬

ಚತುರಾನನನ ತಲೆ । ಹತವಾಯಿತು ಕಾಮನ ।
ಮಿತಿ ಮೀರಿದ ಮಹಿಮೆಯಿಂದಲೆ-ಸುರರು
ಗತಿಗೆಟ್ಟು ಮತಿಹೀನರಾದರು ॥ ೬೭

ತೊಡೆಮೇಲೆ ಶ್ರೀ ಗೌರಿ । ಜಡೆಯೊಳು ಶ್ರೀ ಗಂಗಾ ।
ಒಡೆಯನ ಸ್ಥಿತಿಗತಿ ಈ ಪರಿ–ಇರುವಾಗ
ಬಡ ಸುರಾಸುರರ ಪಾಡೇನು ॥ ೬೮

ನೀಲಪಟನ ಮಾತು । ಆಲಿಸಿ ಸುರಗಣರು ।
ತಲೆದೂಗಿದರು ಅಹುದೆಂದು–ನಾರದ
ನೋಡುತ ನಾಚಿಕೊಂಡನು ॥ ೬೯

ನಸು ನಕ್ಕು ಶಿವನು । ಕುಸುಮಧರನ ಕರೆಸಿ ।
ಏಸು ಸುಮನಾಸ್ತ್ರಗಳು ನಿನ್ನಲ್ಲಿ-ಕಾಮನೆ
ಬೀಸಿ ನೋಡು ಎನ್ನ ಹಸುಳನಿಗೆ ॥ ೭೦

ಒಲ್ಲೆನು ಮಹಾದೇವ । ಬಲ್ಲೆನು ವರ ಮಹಿಮೆ ।
ಕೊಲ್ಲುವರು ನನ್ನನ್ನು ಕಡೆಗೊಮ್ಮೆ-ಕೋಪಿಸಿ
ಸಲ್ಲು ಇಲ್ಲದಂತೆ ಮಾಡುವರು ॥ ೭೧

ಗಿರಿಜೆಯ ಕೃಪೆಯಿಂದ । ಚರಿಸುತಲಿರುವೆನು ।
ವರಸುರ ಯತಿಮುನಿ ನರರ–ಮಾರ-
ಹರನೆ ನಿನ್ನವರಲ್ಲಿ ನಾನೊಲ್ಲೆ ॥ ೭೨

ಹೆದರದಿರು ಕಾಮನೆ। ಸಿದ್ಧರಾಮನ ಮೇಲೆ ।
ಮಧುರ ಹೂವಿನ ಬಾಣವನು–ಬಿಡು ನೀ
ಎದುರಿಸುವನೆ ನಗುನಗುತ ॥ ೭೩

ವಾಮದೇವನ ಆಜ್ಞೆ । ಕಾಮನು ಪಡಕೊಂಡು ।
ರಾಮನ ಸೋಲಿಸಲು ಬಲವ–ಪಣಕ್ಹಚ್ಚಿ
ವಾಮಾಂಗಿ ಗಿರಿಜೆಗೆ ನಮಿಸಿದ ॥ ೭೪

ಸಿದ್ಧಿ ಪುರುಷನ ಪ್ರ । ಸಿದ್ಧಿಮೂರು ಲೋಕದಿ ।
ಬುದ್ಧಿ ಭ್ರಮೆ ಮಾಡುವ ಸಿದ್ಧನ–ಗೆದ್ದು ನಾ
ಸುದ್ದಿಯ ತರುವೆನು ಮರಳುತ ॥ ೭೫

ಹಿರಿಯಾಶೆ ಹಿಡಕೊಂಡು । ಹರನನ್ನು ವಂದಿಸಿ ।
ಭರದಿಂದ ಬಂದನು ಭೂಲೋಕದಿ–ಕಾಮನು
ಪರಮ ಯೋಗಿಯ ಜಯಿಸಲು ॥ ೭೬

ಹಸರ ಸೀರೆಯನುಟ್ಟು । ವಸುಧೆಯು ನಿಂತಳು ।
ಕುಸುಮಗಳರಳಿ ವಿಧ ವಿಧದ-ಸುಗಂಧ
ಸೂಸುವ ಗಾಳಿಯಲಿ ತೂರಿದವು ॥ ೭೭

ಸೀಳಹಾಕುವ ಹಕ್ಕಿ । ಗಿಳಿಗಾನ ಪಾಡೂತ ಕೋ- ।
ಕೀಳೆ ಮಧುರ ಧ್ವನಿಗೊಟ್ಟು-ತವ್ಮೆಡೆಗೆ
ಸೆಳೆವವು ಕಿವಿ ಕಂಣುಗಳ ॥ ೭೮

ನೇಸರನ ಉದಯವು । ಹೊಸ ಸೊಬಗು ತಂದಿತ್ತು ।
ಸೂಸುವ ತಂಗಾಳಿ ತಣಿಸಿತು-ಕಾಮನು
ಕುಸುಮಾಸ್ತ್ರ ಪಿಡಿದು ಅಣಿಯಾದ ॥ ೭೯

ಯೋಗ ಮಾರ್ಗದಿಂದ । ತೂಗಿ ನಿಬ್ಬೆರಗಾದನು ।
ಯೋಗಿ ಸಿದ್ಧರಾಮ ದಿನದಂತೆ-ಕುಳ್ಳಿರ್ದು
ಆಗು ಹೋಗುಗಳ ಅರಿಯನೆ ॥ ೮೦

ಸಮಾಧಿಯೊಳಗಿದ್ದ । ರಾಮನ ಗೆಡೆಯಲು ।
ಸುಮನಾಸ್ತ್ರ ಬಿಡಲು ಹವಣಿಸಿ-ಬೇಗನೆ
ಕಾಮಿನಿಯನು ಸೃಜಿಸಿದನು ॥ ೮೧

ತುಂಬಿದ ತೋಳಗಳು । ತುಂಬಿದೆ ಪ್ರಾಯವು ।
ಇಂಬುಗೊಟ್ಟಿತ್ತು ಕಾಮಿನಿಗೆ-ಚಲುವಿಕೆ
ಕಾಂಬವರ ಕಂಣು ಪಿಳಕವು ॥ ೮೨

ತೇಲುವ ಚಂದಿರನ । ನಿಲ್ಲಿಸಿ ನಟ್ಟ ನಡುವೆ ।
ನೀಲಿಯ ಬಂಣವ ತೀಡಿದಂತೆ-ಕಂಡವು
ಬಾಲೆಯ ನಂಬಿದ ಕಂಣುಗಳು ॥ ೮೩

ನೀಳಗೂದಲ ರಾಶಿ । ನೀಳ ತೋಳವ ದಾಟಿ ।
ಇಳಿದವು ಬೆನ್ನಿಗೆ ಪಸರಿಸಿ-ತಂದವು
ಬಿಳಿ ಬಂಣಿಗೆ ಕಪ್ಪಿನ ಹಿನ್ನೆಲೆ ॥ ೮೪

ಎತ್ತರ ನಿಲುವಿನ । ಮೆತ್ತನ ಮೈಯವಳು ।
ಕತ್ತು ತಿರುಗಿಸಿ ನಿಂತರೆ-ಸುರರು
ಹೆತ್ತವರಾರೆಂದು ಕೇಳುವರು॥ ೮೫

ಕಿಣಿ ಕಿಣಿ ನುಡಿಯುವ । ಕಂಕಣ ಕೈತುಂಬ ।
ಕುಣಿವಂತೆ ಇಡುವಳು ಹೆಜ್ಜೆಯ–ಮೋಹಿನಿ
ಹಣೆಮೇಲೆ ಹುಬ್ಬು ತೀಡಿದಂತೆ ॥ ೮೬

ಒಂಕಿ ಬಾಪುರಿ ತೋಳ । ಬಿಂಕೀಲಿ ತಿರುವೂತ ।
ಸೊಂಕಿದರೆ ಬಾಡೂವ ಮುಡಿಹೂವು-ರಂಭೆಯ
ಅಂಕಿತ ಸುರಮುನಿ ಯತಿಗಳು ॥ ೮೭

ಎತ್ತರ ಹಣೆಮೇಲೆ । ಕತ್ತುರಿ ಕಿರಿ ಬೆರಳು ॥
ಮುತ್ತು ಮಾಣಿಕದ ಬೈತಲೆಗೆ–ಪದಕವು
ಕತ್ತಿನ ಸಂಗಡ ಕುಣದೀತು ॥ ೮೮

ಸಂಣನ ನಡುವಿಗೆ । ಚಿನ್ನರನ್ನದ ಪಟ್ಟಿಯು ।
ಮಣಿ ಸರಗಳು ಹೊಳೆದವು-ಉಡುಗೆ
ಬಂಣದ ಪಿತಾಂಬರ ಕುಬ್ಬಸ ॥ ೮೯

ಕೊರಳಿಗೆ ಒಪ್ಪಿದವು । ಸರಗಳು ರನ್ನದ ।
ಬೆರಳಿಗೆ ಉಂಗರ ಸರಪಳಿ-ವಜ್ರದ
ಕಿರಿಗೆಜ್ಜೆ ಜಣ ಜಣ ಕಾಲೊಳು ॥ ೯೦

ನೀರಿಗೆಗಳ ಚಿಮ್ಮೂತ । ಸೆರಗನು ಸರಿಸೂತ ।
ಗರಗರ ಕಂಗಳ ತಿರವೂತ–ಮದನಾರಿ
ಪರಮ ಯೋಗಿಯ ಮುಂದೆ ನಿಂತಳು ॥ ೯೧

ಕಾಮನು ತನ್ನ ಬಾಣ । ರಾಮನ ಮೇಲೆಸೆದು ।
ಕಾಮಿನಿಯು ಸರ್ವರೂಪವ-ತೋರಿದಳು
ವ್ಯಾಮೋಹಹರ ಸಿದ್ಧನು ನಿಶ್ಚಲ ॥ ೯೨

ಬೇಸತ್ತು ಬಿಲ್ಲುಗಳ । ಬೀಸಾಡಿದನು ಕಾಮ ।
ಕಸವಿಸಿಗೊಂಡು ಕಿರಚಿವನು-ಸಿದ್ಧೇಶ
ಅಸಮಾಕ್ಷ ಕಂಣು ತೆರೆದನು ॥ ೯೩

ತಾಯೆ ಅನುಪಮೆ ನೀನು । ಮಾಯೆಯ ಪುತ್ಥಳಿ ।
ಛಾಯೆ ನಿನದೇಕವ್ವ ಇಲ್ಲಿಗೆ-ಹೆತ್ತವ್ವ
ಕಾಯವಿದು ಚೆನ್ನನಿಗರ್ಪಿತ ॥ ೯೪

ಕರುಣಾಕರನೆ ನಿನ್ನ। ಸೆರಗೊಡ್ಡಿ ಬೇಡುವೆನು।
ಮರುಳಾದೆನು ನಿನ್ನ ರೂಪಕ್ಕೆ–ಯೋಗೀಶ
ವರವಾಗು ಬಂದೆನು ಹಂಬಲಿಸಿ। ೯೫

ಗಂಡ ಆದನು ಎನಗೆ! ಗಂಡರ ಆಳವನು।
ಹೆಂಡತಿ ನನಗೆಂತು ನೀನವ್ವ–ಓ ತಾಯಿ ಪ್ರ-
ಚಂಡ ನನ ಗಂಡ ಬಲು ಚೆಲುವ॥ ೯೬

ಸತಿ ಕಂಡು ಸೋಲದೆ। ಯತಿ ಮುನಿ ಸುರರಿಲ್ಲ।
ಪತಿತಪಾವನ ಎನಗಿನ್ನು–ಹಿತದಿಂದ
ಪಿತ ಶಿವನಲ್ಲಿ ಕಳಿಸಯ್ಯ॥ ೯೭

ಚಪಲ ಚೇಷ್ಟೆಗಳು। ಆ ಪರ ಬ್ರಹ್ಮನೆಂಬ।
ತಪ್ತ ಬೇಗೆಯಲಿ ಕಮರಲು–ಕಾಮನು
ತಪ್ಪಾಯ್ತು ಸಿದ್ಧರಾಮು ಶರಣೆಂದು॥ ೯೮

ನಿನ್ನವರು ಸೋಲರು। ಎನ್ನ ಸುಮನಾಸ್ತ್ರಕ್ಕೆ।
ಸನ್ನೂತ ಸಿದ್ಧಗೆ ಶರಣಾದೆ–ಮಹಾದೇವ
ಉನ್ನತ ನಿನ್ನ ಬಕುತರು॥ ೯೯

ಸಂಧಿ ೧೧

ಮರಬ ಗ್ರಾಮದವರು । ಪಾರವರು ಸೊನ್ನಲಗಿ
ಕೆರೆಗೆ ಬಂದರು ಸ್ನಾನಕ್ಕೆ-ಅಂದರು
ನೀರಿಗೆ ಸಂಸ್ಕಾರವಿಲ್ಲೆಂದು ॥ ೧

ನೀರಿಗೆ ಮಂತ್ರಿಸಿ । ಕೆರೆಯೊಳು ಮುಳುಗೂತ ।
ಶಿರವೆತ್ತಿ ಮೇಲೆ ಬರುವಾಗ–ಕಾಗಿಯು
ಹಾರಿ ಬಂದು ಮುಟ್ಟಿ ಹೋಗುವದು ॥ ೨

ಕಾಗೆ ಮುಟ್ಟದೆ ಎಂದು । ಮೂಗವ ಹಿಡಕೊಂಡು ।
ಬೇಗನೆ ಮತ್ತೆ ಮುಳುಗುವ-ಪಾರ್ವರನು
ಕಾಗೆ ಕಾ ಕಾ ಎಂದು ಮುಟ್ಟುವದು ॥ ೩

ಉದಯ ಕಾಲದಿಂದ । ಗದ ಗದ ನಡುಗೂತ ।
ಉದಕದೊಳಗೆ ಮುಳುಗೂತ-ಬೇಸತ್ತು
ಸಂಧ್ಯಾಕಾಲಕೆ ಹೊರ ಬಂದರು ॥

ಏನು ಸೋಜಿಗವಿದು । ಹೀನ ಕಾಗೆಯು ಅಸ್ತ- ।
ಮಾನದ ವರೆಗೆ ಮುಟ್ಟಿದ–ಕಾರಣ
ಜನ ಅರಿತರು ಸಿದ್ಧಮಹಿಮೆಯ ॥ ೫

ತೀರ್ಥವೆಂದರಿಯದೆ । ವ್ಯರ್ಥ ದಣಿಯುವಿರಿ ।
ಸಾರ್ಥಕಗೊಳಿಸಿರಿ ಜನುಮದ-ಸಿದ್ಧ ಸ-
ಮರ್ಥನ ದರುಶನ ಪಡೆಯಿರಿ ॥ ೬

ತಪ್ಪಾಯಿತು ಗುರುದೇವ । ಅಪ್ಪ ಶ್ರೀ ಸಿದ್ಧರಾಮ ।
ಅಪ್ಪ ಎಂದು ನಾವು ಮಂತ್ರಿಸೆ-ತೀರ್ಥವಿದು
ಒಪ್ಪವೆವು ನಮ್ಮ ರಕ್ಷಿಸಿರಿ ॥ ೭

ತಿಳಿಯದೆ ಮಹಿಮೆಯ।ಮುಳು ಮುಳುಗಿ ಬೇಸತ್ತು ।
ಬಳಿ ಸಾರಿ ಬಂದೆವು ಎನ ತಂದೆ-ಸಿದ್ಧೇಶ
ತೊಳಿಯೊ ನಮ್ಮ ಮನದ ಸಂದೇಹ ॥ ೮

ಮಲ ಮೂರು ತೊಳೆಯದೆ । ಜಲದೊಳು ಮುಳಗೂತ ।
ಕುಲವನರಿಸೂತ ತಿರುಗೂವ–ಜಾಣರೆ
ಮೇಲು ಕೀಳದ ಮೂಲ ತಿಳಿಯಿರಿ ॥ ೯

ಜಯ ಜಯತು ಸಿದ್ಧೇಶ। ಭಯದೂರ ಭೂತೇಶ ।
ಸ್ವಯ ತೇಜದಿ ಬೆಳಗುವ ಜ್ಯೋತಿ–ಶ್ರೀ ಪಾದ
ನಯ ಬಕುತಿಯಲಿ ಭಜಿಪೆವು ॥ ೧೦

ಸಂಗರಹಿತ ಸಿದ್ಧನ ।ಪಿಂಗದಲೆ ಪೊಗಳೂತ ।
ಗಂಗೆಯ ಮಹಿಮೆಯ ಪೇಳೂತ–ಮುರಬಕೆ
ಮಂಗಳ ಪಾಡೂತ ತೆರಳಿದರು ॥ ೧೧

ಇರುಳಿನಲಿ ದಿನದಂತೆ । ಪುರವ ಸುತ್ತುವಾಗ ।
ಗಿರಿಯಾಕಾರದ ಗಣಪತಿ-ನಿಂದಿಪನು
ವರ ಸಿದ್ಧಪತಿಯೆ ಶರಣೆಂದು ॥ ೧೨

ನೆರೆ ಊರು ಸೇಳಿಗೆಯ ।ವರ ಗಣಪತಿ ನಾನು ।
ಗುರುವೆ ನಿನ್ನ ಈ ಕ್ಷೇತ್ರದಿ-ಎನಗೆ
ಇರಲು ಜಾಗೆ ಕೊಡು ಎಂದನು ॥ ೧೩

ವಿಕ್ರಮ ನಿನ ರೂಪು। ಚಿಕ್ಕಾದ ಸೊನ್ನಲಗಿ।
ವಕ್ರತುಂಡ ನಿನಗೆ ಠಾವೆಲ್ಲಿ–ಎಂದನು
ಚಕ್ರವರ್ತಿ ಯೋಗಿ ಸಿದ್ಧೇಶ॥ ೧೪

ನಿನ್ನ ಸೇಳಿಗೆ ಬಿಟ್ಟು। ಸೊನ್ನಲಗಿಗೆ ಬಂದಿರುವೆ।
ನಿನ್ನ ಊರಿನವರು ಕೇಳಲು–ಬಂದರೆ
ನಾನೇನು ಉತ್ತರಿಸಲೆಂದನು॥ ೧೫

ನಿಮ್ಮವನೆ ಇದ್ದರೆ। ಸಮ್ಮತಿಸಿ ಒಯ್ಯುವದು।
ನಮ್ಮ ಒಪ್ಪಿಗೆ ಇರುವದು–ಎನ್ನುತ
ಸುಮ್ಮನೆ ಇರು ಸಿದ್ಧರಾಮನೆ॥ ೧೬

ಬಾರೆಂದು ಕರೆಯಲು। ಸರ್ರನೆ ಗಣಪತಿಯು।
ಕರದೊಳಗೆ ಬಂದನು ಸಿದ್ಧನ–ಗಣೇಶ
ಪುರದೋಳು ಸ್ಥಾಪಿಸು ಎಂದನು॥ ೧೭

ಏಳು ದಿಕ್ಕಿಗೆ ಇರಲು। ಮೇಳೈಸಿ ಬಂದಿಹರು।
ಹೇಳಿದಂತೆ ಅಲ್ಲಲ್ಲಿರುವರು–ಬೆನಕನೆ
ಕೇಳು ನಿನ್ನ ದಿಕ್ಕು ಈಶಾನ್ಯ॥ ೧೮

ಸೊನ್ನಲಪುರದೊಳು। ಅನ್ನ ವಸ್ತ್ರವ ನೀಡುತ।
ನಿನ್ನ ಬಕುತರಿಗೆ ಸೌಭಾಗ್ಯ-ಕರುಣಿಸಿ
ಸಾನಿಧ್ಯದೊಳು ಇರುವೆನು॥ ೧೯

ದುಷ್ಟನಿಗ್ರಹ ಮಾಡಿ! ಶಿಷ್ಟಪರಿಪಾಲಕನು।
ಮೃಷ್ಟಾನ್ನ ಭೋಜನ ಪ್ರಿಯನು-ಗಣೇಶ
ಇಷ್ಟಾರ್ಥ ಸಿದ್ಧಿ ನೀಡುವನು॥ ೨೦

ಚಿನ್ನಮಲ್ಲನಡಿಯ। ಸಾನಿಧ್ಯದೊಳು ನೀನು।
ಅನುದಿನ ಅರ್ಚನೆಗೈಯುತ–ನೆಲಿಸಲು
ಬೆನಕಗೆ ಆಣತಿ ಮಾಡಿದನು॥ ೨೧

ಗಜಾನನ ಸ್ಥಾಪಿಸಲು। ಭಜಿಸೂತ ಬಕುತೀಲಿ।
ಮೂಜಗದೊಡೆಯನ ಬಳಿಗೆ-ತಂದಿಹರು
ಗಜಾನನ ಜಯ ಜಯವೆಂದು॥ ೨೨

ಕೆಲವು ದಿನ ಕಳೆದವು । ಅಲ್ಲಲ್ಲಿ ಅರಸೂತ ।
ಬಲ್ಲ ಯೋಗಿಯ ಪುರದೊಳು-ಬೆನಕ
ನೆಲಿಸಿದ ಸಂಗತಿ ಕೇಳಿದರು ॥ ೨೩

ಸೇಳಿಗಿ ಜನ ಬಂದು । ಕೇಳಿದರು ಸಿದ್ಧೇಶಗೆ ।
ಹೇಳದೆ ನಮ್ಮ ಗಣಪತಿ–ತರುವದು
ಒಳಿತೇನು ಘನ ಯೋಗಿಯೆ ॥ ೨೪

ತಂದಿಲ್ಲ ವಿಘ್ನೇಶನ । ಬಂದರೆ ಒಯ್ಯುವುದು ।
ಮಂದಿಗೆ ಹೇಳಿದನು ಆತಂಕ-ಇಲ್ಲೆಂದು
ಮಂದಹಾಸದಿ ಸಿದ್ಧರಾಮೇಶ ॥ ೨೫

ಗಣಪತಿ ಒಯ್ಯಲು । ಚಣಮಾತ್ರ ತಡೆಯದೆ ।
ಕುಣಿಯುತ ಹರುಷದಿ ಬಂದರು–ಪಾದಕೆ
ಮಣಿದರು ಸಿದ್ಧಗೆ ಜಯವೆಂದು ॥ ೨೬

ಸೇಳಿಗಿಯ ಜನಕೂಡಿ । ವೇಳೆಯ ಕಳೆಯದೆ ।
ಬಾಳಗಣೇಶನ ಜಾಗೆಯ–ಅಗೆಯಲು
ಮೇಳೈಸಿ ಮೊದಲು ಮಾಡಿದರು ॥ ೨೭

ಮಂಗಳ ಮೂರುತಿ । ಕಂಗಳಿಗೆ ಚಿಕ್ಕವನು ।
ಅಂಗುಲ ಜಾಗ ಸರಿದಿಲ್ಲ–ಜನವೆಲ್ಲ
ದಂಗುಗೊಂಡೀತು ಅಚ್ಚರಿಯಿಂ ॥ ೨೮

ಅಗೆದು ದಣಿದರು । ಹೋಗಿ ಎತ್ತುಗಳ ತಂದು ।
ಬಿಗಿದರು ಹಗ್ಗವ ಬೆನಕಂಗೆ–ಎಳೆಯಲು
ಹಗ್ಗ ಹರಿದು ಎತ್ತು ಬಿದ್ದವು ॥ ೨೯

ಅಲಿಗಳ ಇಕ್ಕದೆ । ಚಲಿಸದ್ಯೋಗಿಯು ।
ಸಲೆ ಪರಿಪೂರ್ಣಾನಂದದಿ–ಕೂತಂತೆ
ಬಾಲಗಣಪತಿ ಕೂತಿಹನು ॥ ೩೦

ಸೊನ್ನಲಗಿ ಸೇಳಿಗಿ । ಇನ್ನು ಸುತ್ತಿನ ಹಳ್ಳಿ ।
ಜನ ನೋಡಿ ಬೆರಗುಗೊಂಡಿತ್ತು-ಸಿದ್ಧನ
ಘನ ಮಹಿಮೆ ಕೊಂಡಾಡ ಹತ್ತಿತ್ತು ॥ ೩೧

ಕೆಟ್ಟ ಜನಗಳಿಗಾಗ । ಸಿಟ್ಟು ತಲೆಗೇರಿತ್ತು ।
ಹಠಯೋಗಿ ಹೂಡಿದ ಈ ಆಟ-ನಾವೆಲ್ಲ
ಒಟ್ಟಾರೆ ಮುರಿಯ ಬೇಕೆಂದರು ॥ ೩೨

ಹೊಟ್ಟೆಗಿಚ್ಚಿನಿಂದ । ತಟ್ಟನೆ ತಿರುಗಿದರು ।
ಒಟ್ಟುಗೂಡಿಸಿ ಕಬ್ಬಿಲರನು–ಹೇಳಿದರು
ದಿಟನಿಗೆ ಬೇಡಿರಿ ಪರಸಾದ ॥ ೩೩

ಮಬ್ಬ ಕಬ್ಬಿಲರಾಗ । ಉಬ್ಬುಬ್ಬಿ ಬಂದಿಹರು ।
ಸಾಂಬನ ಪ್ರಸಾದ ಬೇಡುತ–ಯೋಗಿಯಲಿ
ನಂಬುಗಿ ಇದ್ದಂತೆ ನಟಿಸೂತ ॥ ೩೪

ಸಚ್ಚಿದಾನಂದನಾಗ । ಎಚ್ಚರಗೊಂಡಿಹನು ।
ಇಚ್ಛಿತ ಪ್ರಸಾದ ನೀಡುವೆ–ನೀವದು
ಎಚ್ಚರದಿಂದ ಸೇವಿಸಿರಿ ॥ ೩೫

ನೀಡುವ ಹೊತ್ತದು । ಒಡೆಯರೆ ಹೇಳಬೇಕು ।
ಕೂಡಿಕೊಂಡು ನಾವು ಬರುವೆವು-ದೇವನ
ಎಡಿ ನಮಗೆ ನೀಡಿ ಕಳುವಿರಿ ॥ ೩೬

ಮಧ್ಯಾಹ್ನ ಪೂಜೆಗೆ । ಸಿದ್ಧರಾಮ ಕರೆದನು ।
ಶುದ್ಧ ಪ್ರಸಾದವ ನೀಡುವೆ–ನೀವೆಲ್ಲ
ಸದ್ಭಕ್ತಿಯಿಂದ ಸೇವಿಸಿರಿ ॥ ೩೭

ಮಾತು ಗೆದ್ದೆವೆಂದು ।ಆತುರದಿ ತಿರುಗಿದರು ।
ಸೋತು ಸಿದ್ಧರಾಮ ಪರಸಾದ–ನೀಡಲು
ಆತನೆ ನಮಗೆ ಕರೆದನು ॥ ೩೮

ಸೇಳಿಗಿ ಜನಕಾಗ । ಹೋಳಿಗಿ ಉಂಡಂಗಾಯ್ತು ।
ಅಳಿಸಿ ಬಿಡುವೆವು ಸಿದ್ಧಗ-ಇನ್ನೊಮ್ಮೆ
ಸೇಳಿಗಿ ಹೆಸರು ತೆಗೆದ್ಹಂಗ ॥ ೩೯

ಪೂಜೆಯ ಮಾಡಿದನು । ಮೂಜಗದೊಡೆಯನ ।
ಸೋಜಿಗದೆಡೆಯ ಮಾಡಿದನು-ಮಲ್ಲೇಶ
ಮೂಜಗಕಾಗಿ ಕುಡಿದಿರುವಿ ॥ ೪೦

ವಿಷವನೆ ಸೇವಿಸಿ । ತೋಷಿಸಿದಿ ಜಗವೆಲ್ಲ ।
ಈಶ ಇನ್ನೊಮ್ಮೆ ಕುಡಿ ಏಳು–ಓ ತಂದೆ
ಪೋಷಿಸಲು ನಿನ್ನ ಶಿವತತ್ವ ॥ ೪೧

ಸಿಂಗಿ ಕಾಳಕೂಟವ । ಮಂಗಳ ಮಹಿಮನು ।
ಲಿಂಗದ ಎಡೆಗಾಗಿ ತರಸಿದನು–ಜನ ಕಂಡು
ಇಂಗಿತ ತಿಳಿದು ನುತಿಸಿಹರು ॥ ೪೨

ಭವಹರನ ಪ್ರಸಾದ । ತವಕದಿ ತಂದನು ।
ಸೇವಿಸ ಬರ್ರಿ ಬಯಸಿದ–ಪ್ರಸಾದ
ತವೆ ಮೋದದಿಂದೆ ನೀಡುವೆ ॥ ೪೩

ಸಿಂಗಿ ಕಾಳಕೂಟವ । ಲಿಂಗಕ್ಕೆ ಎಡೆಮಾಡಿ ।
ಮಂಗಳಮಯ ಸಿದ್ಧ ನೀಡಲು–ಹೋದಾಗ
ದಂಗು ಬಡಿದು ಓಡಿ ಹೊರಟರು ॥ ೪೪

ಹಾಲಾಹಲದ ಬಲು । ಲೀಲೆಯ ಪರಸಾದ ।
ಖಳ ಖಳ ಖಳ ಕುದಿಯಲು–ವಿಷಗಾಳಿ
ಇಳೆ ಮುಸುಕಿ ಕಪ್ಪು ಮೂಡಿತು ॥ ೪೫

ಉಗ್ರ ವಾಸನೆಯಿಂದ । ಶೀಘ್ರದಿ ಓಡಿದರು ।
ಜಾಗೃತಗೊಂಡ ಜಡಮನ–ಕಬ್ಬಿಲರ
ಉಗ್ರತನ ಲೋಪವಾಯಿತು ॥ ೪೬

ಕರೆದು ಗುಡ್ಡರಿಗಾಗ । ಪರಸಾದ ಸವಿರೆಂದು ।
ಪರಮ ಹಸ್ತದಿಂದ ನೀಡವನು–ಗುಡ್ಡರು
ಹರುಷದಿ ಬಕುತಿಲಿ ಸೇವಿಸೆ ॥ ೪೭

ಮೊದಲೆ ಹಾಲಾಹಲ । ಕುದಿಯುವುದು ಖಳ ಖಳ ।
ಸದ್‌ಭಕ್ತರ ಕರದಿ ನೀಡಲು–ಗುಡ್ಡರು
ಮುದ್‌ಗುರು ಜಯವೆಂದು ಕೊಂಡರು ॥ ೪೮

ಸಂಣವರು ದೊಡ್ಡವರು । ಅಂಣ ತಮ್ಮಂದಿರು ।
ಹೆಂಣು ಮಕ್ಕಳು ಹುಡುಗರು–ಕೊಂಡುಂಡು
ತಣಿದರು ಮುಪ್ಪಿನವರೆಲ್ಲ ॥ ೪೯

ಸಿದ್ಧ ಹಸ್ತದ ಪರಮು। ಶುದ್ಧ ಪ್ರಸಾದವನು।
ಬುದ್ಧಿಹೀನರು ಸೇವಿಸದೆ–ಭವದ
ಬಾಧೆಗೊಳಗಾದರು ಭವಿಗಳು ॥ ೫೦

ನನ್ನಯ್ಯ ಪರವುತದ। ಚೆನ್ನಮಲ್ಲಿಕಾರ್ಜುನ।
ಕುನ್ನಿಗಳರಿಯರು ಪ್ರಸಾದ-ಮಹಿಮೆ
ಸನ್ನುತ ನಿನಗೆ ಶರಣೆಂಬೆ॥ ೫೧

ಅತಿ ಬಕುತಿಯಿಂದ। ನುತಿಸಿದ ಸಿದ್ಧರಾಮು।
ಗತಿ ಮತಿ ಎನ್ನ ಹಿತದ-ದಾರಿ ನೀ
ಪತಿ ಕಪಿಲ ಸಿದ್ಧಮಲ್ಲೇಶನೆ॥ ೫೨

ಸುತ್ತುವಾಗ ಸೊನ್ನಲಗಿ। ಕತ್ತಲೆ ಕವಿದಿತ್ತು।
ಚಿತ್ತದ ಒಡೆಯ ಮಲ್ಲಯ್ಯಗೆ–ಬಕುತೀಲಿ
ನುತಿಸೂತ ನಡೆದನು ಸಿದ್ಧೇಶ॥ ೫೩

ರಾತ್ರಿಯ ವೇಳೆಯದು। ಕ್ಷೇತ್ರ ಸುತ್ತುವಾಗ।
ಒತ್ತರದಿ ಬಂದಳು ದೂರದಿ-ಕಿರುಚುತ
ನೆತ್ತರ ಕುಡಿಯಲು ರಕ್ಕಸಿಯು॥ ೫೪

ಕಾಳ ರಕ್ಕಸಿ ಬಂಣ। ಕಾಳರಾತ್ರಿಯಲಿ ಕೂಡಿ।
ಬೆಳ್ಳನ ಹಲ್ಲು ಕಾಣುವವು–ಕೈಯಲಿ
ಹೊಳೆವುದು ಖಡ್ಗ ಥಳ ಥಳ॥ ೫೫

ಮೆತ್ತನ ಕಾಯದ। ಉತ್ತುಮಾಂಗನ ಕಂಡು।
ನೆತ್ತರ ಕುಡಿಯಲು ಹವಣಿಸಿ-ರಕ್ಕಸಿ
ಧುತ್ತಂತ ಎದುರಿಗೆ ನಿಂತಳು॥ ೫೬

ಕೆದರಿದ ಕೂದಲು। ಹೆದರಿಕೆ ಬರುವಂಥ।
ಮದವೇರಿದ ಮೈಯ ವಿಕ್ರಾಳ–ಕೈಯಲಿ
ಹದವಾದ ಖಡ್ಗ ಪಿಡಿದಿಹಳು॥ ೫೭

ಕರ್ರನ ಮೈಬಂಣ। ಉರಿಗಂಣಿನ ಉಗ್ರತೆ।
ಕರ ಕರ ತಿನ್ನೂತ ಹಲ್ಲುಗಳ-ಸಿದ್ಧನ
ಕೋರಿದಳು ರಕುತ ಕೊಡು ಎಂದು॥ ೫೮

ಅತ್ತಿತ್ತ ನೋಡದಲೆ । ಚಿತ್ತ ಚನ್ನನ ಮೇಲೆ ।
ಸತ್ಯುಳ್ಳ ಸಿದ್ಧರಾಮ ನಡೆದಾಗ–ಕಾಳವ್ವಗೆ
ಮತ್ತಿಷ್ಟು ಕೋಪ ತಲಗೇರಿ ॥ ೫೯

ಮರ್‍ರನೆ ಮರುಗೂತ । ಕಿರ್‍ರನೆ ಕಿರಚೂತ ।
ಸರ್‍ರನೆ ಚಿತ್ರ ವಿಚಿತ್ರವ –ತೋರುತ
ಭಿರ್‍ರನೆ ಹೆದರಿಸಲು ಹವಣಿಸಿ ॥ ೬೦

ಹೆದರದೆ ಹೊರಟೇದ । ಸದಮಲ ಸಿದ್ಧೇಂದ್ರ ।
ಬದುಕು ಸಾವನು ದಾಟಿದ–ಯೋಗೀಂದ್ರ
ಮೋದದಿ ನೆನೆಯುತ ಮಲ್ಲೇಶನ ॥ ೬೧

ನನ್ನಪ್ಪ ದಯವಾಗು । ಸುಮ್ಮನೆ ಹೊರಟಿರುವಿ ।
ದಮ್ಮಯ್ಯ ನನ್ನ ಹೊಟ್ಟೆ ಹಸಿದಿದೆ–ದೇವ
ನಿಮ್ಮ ರಕುತ ಕುಡಿದು ತಣಿಯುವೆ ॥ ೬೨

ಕಾಯ ಭೂಮಿಗೆ ತಂದ । ತಾಯಿ ನಿನ್ನ ರಕುತ ।
ಘಾಯ ಮಾಡಿ ಕುಡಿ ಹಡೆದವ್ವ-ಈ ಕಾಯ
ಮಾಯೆ ನಿನ್ನ ಆಧೀನ ಮಾಡಿದೆ ॥ ೬೩

ಹೆಂಣು ಹೆಂಣಲ್ಲ ತಾಯೆ । ಹೆಂಣು ರಕ್ಕಸಿ ಅಲ್ಲ ।
ಹೆಂಣು ಸಾಕ್ಷಾತ ಕಪಿಲಸಿದ್ಧ-ತಾಯೆ ನೀ
ಮುಂಣಿನ ಕಾಯದ ಮಲ್ಲಿನಾಥ ॥ ೬೪

ಹಸಿವೆಯಾಗಿದೆ ಎಂದು । ಮೊಸರನ್ನ ಬೇಡಿದಿ ।
ಅಸಮಾಕ್ಷ ಉಂಡು ತಣಿಲಿಲ್ಲ–ಕಾಯದ
ಬಿಸಿ ರಕುತ ನಿನಗೆ ಅರ್ಪಿತ ॥ ೬೫

ಮಾತು ಕೇಳಿ ಬಲು । ಆತುರದಿ ಸುರಗಿಯು ।
ಮೆತ್ತನ ಕಾಯಕ್ಕೆ ಇರಿವಳು–ರಕ್ಕಸಿ
ನೆತ್ತರಿಲ್ಲದ ನೋಡಿ ಬೆರಗಾಗಿ ॥ ೬೬

ಕಡೆದರು ರಕುತಿಲ್ಲ । ಗಡನೆ ಕೇಳಿದಳಾಗ ।
ಒಡಲು ಹೊಕ್ಕು ಕುಡಿಯುವೆನು–ನೆತ್ತರ
ತಡಮಾಡದಿರು ಸುಕುಮಾರನೆ ॥ ೬೭

ಆಶೆಗೊಂಡಿದ ಬಲು । ಹೇಸಿ ರಕ್ಕಸಿಗಾಗ ।
ತೋಷದಿ ಒಡಲಲ್ಲಿ ಹೋಗಲು–ಸಿದ್ಧ ಪ್ರ–
ವೇಶ ಕೊಟ್ಟನು ಹರುಷದಿ ॥ ೬೮

ಹಿಗ್ಗುತ ಹರಸೂತ । ನುಗ್ಗಿದಳು ಒಡಲೊಳು ।
ಝಗ ಝಗಿಸುವ ಹೊಂಬೆಳಗು-ಕಂಡು ಅ-
ತಿ ಗಾಬರಿಗೊಂಡಳು ಕಾಳವ್ವ ॥ ೬೯

ಸದಮಲ ಸಿದ್ಧನ । ಉದರ ಅತಿ ನಿರ್ಮಲ ।
ಹೃದಯದಳಮಧ್ಯ ಬೆಳಗುವ-ಜ್ಯೋತಿಯ
ಹೆದರಿದಳು ಕಾಣುತ ರಕ್ಕಸಿ ॥ ೭೦

ಮರಳಿ ಬರಲು ಯಾವ । ದಾರಿಯು ಸಿಗಲಿಲ್ಲ ।
ಕೋರಿದಳು ಸಿದ್ಧರಾಮುಗೆ–ಅಧೊದ್ಯೈತ್ಯಿ
ಹೊರಬಿದ್ದಳು ಅಧೊಮುಖದಿಂದ ॥ ೭೧

ರಕ್ತ ಮಾಂಸಗಳಿಂದ । ಯುಕ್ತ ಧಾತುಗಳಿಂದ ।
ವ್ಯಕ್ತವಾದ ಆ ಶರೀರದೊಳು-ವಾಸವು
ಮುಕ್ತಿ ಮಂದಿರದ ಒಡೆಯನ ॥ ೭೨

ಹಿಂದೊಮ್ಮೆ ಗಿರಿಮೇಲೆ । ಕಂದನ ನಿಷ್ಠೆಯನು ।
ನಂದದಿ ನೋಡಿ ತಣಿಯದೆ-ಗಿರೀಶ
ಇಂದು ನೋಡಲು ಬಯಸಿದನು ॥ ೭೩

ವಿಮಲತ್ವ ಅರಿತವ । ಸುಮನ ಸಂಪನ್ನನೆ ।
ಪ್ರೇಮದ ಪುತ್ಥಳಿ ಬಾರೆಂದು-ಕರೆದನು
ಸೋಮಧರ ಬಲು ಪ್ರೀತಿಯುಲಿ ॥ ೭೪

ತೋರುವೆ ಹಸಗೂಸೆ । ಈರೇಳು ಲೋಕವನು ।
ತ್ವರದಿಂದ ನಡಿಯೊ ನನಗೂಡ-ನಿನಗಾನು
ಹಿರಿದಾದ ರೂಪ ತೋರುವೆನು ॥ ೭೫

ಹಿರಿ ಹಿರಿ ಹಿಗ್ಗೂತ । ವರ ಸಿದ್ಧರಾಮನು ।
ಭರದಿಂದ ಶಿವನ ಬೆನ್ಹತ್ತಿ–ನಡೆದನು
ಪರಮನ ಸಂಗಸುಖದೋಳು ॥ ೭೬

ಭೂಲೋಕ ಸಗ್ಗವು । ದೇವ ನಾಗಲೋಕವು ।
ತವೆ ವಿಷ್ಣುಲೋಕ ತಪಲೋಕ-ಮೋವದಿ
ಅವಲೋಕಿಸುತ ಹೊರಟನು ॥ ೭೭

ಸಾಕಾರ ನಾಮಂಗಳ । ಲೋಕಂಗಳೆಲ್ಲವನು ।
ಮೂಕವಿಸ್ಮಿತನಾಗಿ ನೋಡುತ-ಸಿದ್ಧೇಶ
ಲೋಕೇಶನ ಲೀಲೆ ಎಂದನು ॥ ೭೮

ಹೆದರದೆ ನಡೆದೀವ । ಚದುರನ ಕಂಡಾಗ ।
ಬೆದರಿಸಿ ಕಂದನ ಬಕುತಿಯ-ನೋಡಲು
ಅದಿಲಿಂಗ ತಾ ಬಯಿಸಿದನು ॥ ೭೯

ಕೊರೆಕೊರೆದು ನೋಡುವ । ಒರೆಗ್ಹಚ್ಚಿ ನೋಡುವ ।
ಜರೆದು ನೋಡುವನು ನಿಷ್ಠೆಯ-ಮಲ್ಲಯ್ಯ
ಮರೆಯಾಗಿ ಮಾಯವಾಗುತ ॥ ೮೦

ಮೂಸಿಯೊಳಗೆ ಹಾಕಿ । ಕಾಸಿ ಸೋಸಿ ಬಡೆಯಲು ।
ಗಾಸಿ ಆಗಲಿಲ್ಲ ಬೆಂಕಿಯಲಿ-ಬಂಗಾರ
ಹೊಸ ಬಂಣವು ಮಿನುಗುವದು ॥ ೮೧

ಸ್ವಯ ಶಿವಲೋಕದ । ಗಯಾಪುರಕೆ ಒಯ್ದು ।
ಮಾಯವಿರೂಪದ ವೈಚಿತ್ರ್ಯ-ತೋರಿದ
ಜೀಯ ಪ್ರಮೋದದಿ ಸಿದ್ಧನಿಗೆ ॥ ೮೨

ವಿಶ್ವತೊಮುಖಿಯಾಗಿ । ವಿಶ್ವತೊಬಾಹು ಆಗಿ ।
ವಿಶ್ವತೊಚಕ್ಷು ತೋರಿದನು-ರೂಪವ
ವಿಶ್ವನಾಥನು ಆಗ ಸಿದ್ಧನಿಗೆ ॥ ೮೩

ಸಿಟ್ಟೀಲಿ ನೋಡುವ । ಕೆಟ್ಟ ಮುಖದ ಹಲವು ।
ಚಿಟ್ಟಂತ ಚೀರಿ ಬೆದರುವ-ಹೆದರೂವ
ಬಟ್ಟಲಗಂಣು ತಿರವೂವ ॥ ೮೪

ಬಿಬ್ಬನೆ ಬಿರಿಯೂವ । ಅಬ್ಬರಿಸಿ ಅಳುವವು ।
ಹುಬ್ಬಿಗೆ ಗಂಟಿಕ್ಕಿ ನೋಡುವ-ಹಾಡೂವ
ಉಬ್ಬುಬ್ಬಿ ಮಾತುಗಳಾಡೂವ ॥ ೮೫

ನಿತ್ಯದಿ ನಿರುಪಮ | ಸತ್ಯ ಸ್ವಾನಂದದಲಿ |
ಚಿತ್ತಿಟ್ಟು ಲಕ್ಷಿಸುವರು ನಿತ್ಯ–ಕೆಲವರು
ಮಿಥ್ಯದಿ ಕಾಲ ಕಳೆಯುವರು || ೮೬

ದೈನ್ಯತೆಯಿಂದ ತನ್ನ | ಖಿನ್ನ ಮುಖವ ಮಾಡಿ |
ತನ್ನನು ತಾ ಶೋಕಾಗ್ನಿಯಲಿ–ಸುಡುವ
ಅನೇಕರನು ಕಂಡಿಹನಲ್ಲಿ || ೮೭

ಭೀಕರ ರೂಪವದು | ಸಾಕಾರಗೊಂಡಿಹುದು |
ಲೋಕೇಶನು ಆಗ ಹೆದರದೆ–ಬೆರೆತನು
ಏಕೋಭಾವದ ಬಾಲಕನು || ೮೮

ರುದ್ರನ ಮಹಾರೂಪ | ರೌದ್ರಾಗಿ ಕಂಡಿಹುದು |
ಭದ್ರಾಕಾರವಾಗಿ ನಿಲಲು–ಸಿದ್ಧೇಂದ್ರ
ಚಿದ್ರೂಪನೆಂದು ನುತಿಸಿದನು || ೮೯

ಉಮಾಪತಿಯು ಆಗ | ಸೌಮ್ಯಾಕಾರವ ತಾಳಿ |
ಅಮಮಮ ನಿನ್ನ ನಿಶ್ಚಲತೆ–ಕಂಡೆನು
ಪ್ರೇಮದ ಪುತ್ಥಳಿ ಬಾರೆಂದನು || ೯೦

ಆಕಾಶದ ಅತ್ತತ್ತ | ಸಾಕಾರಿಲ್ಲದ ಬೆಳಗು |
ಮೂಕವಿಸ್ಮಿತನಾಗಿ ಕಾಣುತ–ಸಿದ್ಧೇಶ
ಏಕವಾಗಲು ಅಣಿಯಾದ || ೯೧

ಬೇಡ ಬೇಡಲೊ ಕಂದ | ಕೂಡದಿರು ಎನ್ನೊಳು |
ರೂಢಿಯೊಳು ಎನ್ನ ಮಹಿಮೆಯ–ಬೀರೆಂದು
ಮೃಡನು ಸಾಕಾರ ತೋರಿದನು || ೯೨

ಹಣೆಮೇಲೆ ತ್ರಿಪುಂಡ | ಕಂಣು ಕಾರುತ ಕೆಂಡ |
ಫಣಿ ಅಲಂಕಾರ ಕೊರಳಲಿ–ಶಿರದಲಿ
ಮಣಿಮುಕುಟವದು ಥಳ ಥಳ || ೯೩

ಎಳೆಯ ಕೆಂಜೆಡೆಗಳು | ಕಳೆತುಂಬಿದ ಬೆಳಕು |
ಎಳೆಯ ಚಂದಿರನು ಹಣೆಮೇಲೆ–ಗಂಗೆಯು
ಜುಳು ಜುಳು ಹರಿವಳು ಜಡೆಯಿಂದ || ೯೪

ಅಕಾರರಹಿತ ದೇವ। ಸಾಕಾರಗೊಂಡು ನೀ।
ಏಕವದು ಅನೇಕವಾಗೂತ-ಕಾಣುವಿ
ಬೇಕಾಗಿ ನಿರುಪನೆ ರೂಪಾಗಿ॥ ೯೫

ಬಿಗಿದಪ್ಪಿ ಹೇಳಿದನು। ಮಗುವೆ ನಾ ಬರುವೆನು।
ಸಾಗಿ ಸೊನ್ನಲಗಿ ವಾಯವ್ಯ–ದಿಕ್ಕಿಗೆ
ಯೋಗಿಯೆ ಆದಿಲಿಂಗ ರೂಪದಿ॥ ೯೬

ಮಂಗಳಮಯವಾದ। ಲಿಂಗರೂಪ ಧರಿಸಿ।
ಕಂಗೊಳಿಸುವೆನು ಎನ್ನ ಕಂಡ–ಆದಿ-
ಲಿಂಗವೆಂದ್ದೆಸರಿಟ್ಟು ಸ್ಥಾಪಿಸು॥ ೯೭

ಅರಿಯದ ತರಳನ। ಕರಹಿಡದು ಪೊರೆಯಯ್ಯ।
ಮರೆವೆಯ ಮನೆಯೊಳು ಇರುವ-ಕಂದನ
ವರಲಿಂಗ ರೂಪದಿ ಬೆರೆಯಯ್ಯ॥ ೯೮

ನಿನ್ನ ಅಮರಜ್ಯೋತಿ। ಎನ್ನ ಕರಣಂಗಳಲಿ।
ಭಿನ್ನವಿಲ್ಲದಲೆ ಬೆಳಗಲಿ–ಓ ದೇವ
ಸನ್ನುತ ಪ್ರಸನ್ನ ಶರಣೆಂಬೆ॥ ೯೯

ಸಂಧಿ ೧೨

ಸೊನ್ನಲಾಪುರದೊಳು । ಚನ್ನ ವಾಯವ್ಯ ದಿಕ್ಕಿಗೆ ।
ಚೆನ್ನಿಗ ಲಿಂಗಯ್ಯ ವಾಸಿಪನು—ಬೇಗನೆ
ಪನ್ನಗಧರನ ಕರೆದೊಯ್ಯೊ ॥ ೧

ಹರನ ಆಣತಿಯಂತೆ । ಭರದಿಂದ ಬಂದನು ।
ಪುರಜನಕೆ ಕರೆಸಿ ಸಿದ್ಧರಾಮ-ಹೇಳಿದನು
ಪರನ ತರಲು ನಡೆಯಿರಿ ॥ ೨

ಬಸವಂಗೆ ತಂದಿಹರು । ಹಸನಾಗಿ ಮೈ ತೊಳೆದು ।
ನೊಸಲಿಗೆ ವಿಭೂತಿ ಧರಿಸೂತ—ರುದ್ರಾಕ್ಷಿ
ಬಾಸಿಂಗ ಜೂಲು ಒಪ್ಪಿದವು ॥ ೩

ಸಾಲು ಸಾಲುಗೊಳ್ಳುತ । ಲೀಲೆಯ ರಥಕ್ಕೆಂದು ।
ಮೇಲಗಿರಿಮಲ್ಲನ ವಾಹನ-ಹೋರಿಗಳು
ಸಲೆ ಸಡಗರದಿ ನಿಂತಿಹವು ॥ ೪

ತುಂಬಿದ ಮೈಕಟ್ಟು । ಕೊಂಬಿನ ಚಲುವಿಕೆ ।
ಹಂಬರಿಸುತ ನಿಂತಿದ್ದು-ಕಂಡು ಜನ
ಕಂಬನಿಗರೆದರು ಹರುಷದಿ ॥ ೫

ತೇರಿಗೆ ಹೂಡಿರುವ । ಹೋರಿ ಎತ್ತುಗಳ ಸಾಲು
ಮೀರಿದ ಲಿಂಗಕ್ಕೆ ಕರೆತರಲು-ಸಿದ್ಧಾಗಿ
ಸಾರಿ ಸತ್‌ಪಥವ ನಡೆದವು ॥ ೬

ಮಿಂದು ಮಡಿಯನುಟ್ಟು । ಚಂದ ವಿಭೂತಿ ಬಟ್ಟು ।
ಗಂಧ ಕುಂಕುಮ ಹಣಿಮೇಲೆ-ಒಪ್ಪೂತ
ಮಂದಗಮನಿಯರು ಬಂದರು ॥ ೭

ಹರದೆಯರೆಲ್ಲರು । ಹರುಷದಿ ಬಂದಿಹರು ।
ಕರದೊಳಗಾರತಿ ಪಿಡಿದಿಹರು-ಶಿವಸಿದ್ಧ
ವರ ಗುರುವೆ ನಿನಗೆ ಶರಣೆಂದು ॥ ೮

ತಾಳ ಮದ್ದಲಿಯವರು । ಮೇಳೈಸಿ ಕೊಂಬುಗಳ ।
ಡೊಳ್ಳ ಸಾಂಬಾಳ ಮೃದಂಗ-ನವವಾದ್ಯ
ಕಾಳೆ ಎದೆಗ್ಹೋಗಿ ಮುಟ್ಟಿತು ॥ ೯

ಆಗಸದಿ ಹಾರಾಡುತ । ಸೊಗಸಾಗಿ ಸಾರೀತು ।
ನಿಗಮ ನಿರುಪಮ ಹಿರಿಮೆಯ—ನಂದಿಕೋಲು
ಮುಗಿಲಿಗೆ ಹೊಸಕಳೆ ತಂದೀತು ॥ ೧೦

ಸಿದ್ಧ ಚಕ್ರವರ್ತಿಯು । ಮಧ್ಯದಿ ನಡೆದಿಹನು ।
ಬದ್ಧರನು ಮುಕ್ತ ಮಾಡುವ-ಇಷ್ಟಾರ್ಥ
ಸಿದ್ಧಿ ನೀಡಿ ಸಲಹುವ ಸದ್ಧರ್ಮ ॥ ೧೧

ಸಂಣವರು ದೊಡ್ಡವರು । ಹಂಣಾದ ಮುದುಕರು ।
ಕಂಣಿಲ್ಲದವರು ಹರುಷದಿ-ಹೊರಟರು
ಹೆಂಣುಮಕ್ಕಳು ಬಲು ಬೇಗ ॥ ೧೨

ತೋರಿಸಿದ ದಿಕ್ಕಿಗೆ । ಗುರು ಸಿದ್ಧೇಶ್ವರ ಹೋಗಿ ॥
ಕರಮುಗಿದು ಕೋರಿದ ಭೂಮಿಗೆ—ಎನ್ನನು
ಉರುತರದ ಲಿಂಗವ ತೋರವ್ವ ॥ ೧೩

ಹೊತ್ತಿರುವಿ ಲೋಕಕ್ಕೆ । ಹೆತ್ತವ್ವ ಪೊರೆಯುತ ।
ಹೊತ್ತು ಲೆಕ್ಕಿಸದೆ ಅವಿರತ–ಪಾಪಿಯು
ಉತ್ತಮ ಎನ್ನದೆ ಸಮನಾಗಿ ॥ ೧೪

ಬಿರಿಬಿರಿ ಬಿಚ್ಚೀತು । ಧರಣಿಯ ಹೊಟ್ಟೆಯು ।
ಗುರು ಸಿದ್ಧರಾಮನು ಕಂಡನು–ಆದಿಲಿಂಗ
ಹರ ಹರ ಜಯವೆಂದು ವಂದೀಸಿ ॥ ೧೫

ಸಜ್ಜಿಗೆ ಒಳಗಿರುವ ॥ ಮೂಜಗದೊಡೆಯನ ।
ಮಜ್ಜನಗೈಯಲು ತಗೆದಂತೆ-ಸಿದ್ಧನು
ಸೋಜಿಗ,ಲಿಂಗಯ್ಯನ ತಗೆದನು ॥ ೧೬

ಅಮಳ ಲಿಂಗಯ್ಯನಿಗೆ । ರಾಮನು ಅತಿ ಬಕುತಿ ।
ಪ್ರೇಮದಿ ಪಿಡಿದನು ಕರದೊಳು-ಲಿಂಗವ
ಅಮಮಮ ಬೆಳಗು ಮಾಬೆಳಗು ॥ ೧೭

ಆದಿಲಿಂಗನು ತಾ ಅ– । ನಾದಿ ರೂಪಕೆ ಬಂದನು ।
ಮೇದಿನಿ ಒಡಲೋಳು ಪುಟ್ಟಿದ–ಲಿಂಗವೆ
ಆದಿ ಅನಾದಿಯೆ ಜಯ ಜಯ ॥ ೧೮

ನಾಮ ರೂಪವಾಚೆಯ । ವ್ಯೋಮಾಕೇಶನೆ ಎನ್ನನು ।
ಪ್ರೇಮದಿ ಪೊರೆಯಲು ಭೂಮಿಗೆ–ಬಂದು ನೀ
ನಾಮ ರೂಪಕ್ಕೆ ಒಳಗಾದಿ ॥ ೧೯

ಮೇದಿನಿ ಒಡಲೊಳಗಿನ । ಆದಿಲಿಂಗನಿಗಾಗ ।
ಭೇದಿಸಿ ತಂದನು ಶಿವಸಿದ್ಧ–ರಾಮಯ್ಯ
ಸಾಧಿಸಿ ಪೂಜೆಯ ಮಾಡಲು ॥ ೨೦

ಕರದೊಳಗೆ ಪಿಡಿದಿಹ । ಪರಮ ಲಿಂಗಯ್ಯನ ।
ಪರಿ ಪರಿಯಿಂದ ನುತಿಸೂತ-ನ್ಯೈವುರಿತು
ಹರಹರನೆಂದು ಕೂಗುತ ॥ ೨೧

ಕಂಗಳ ಧಾರೆಗಳು । ಮಂಗಳಮಯ ಶಿವಗೆ ।
ಪಿಂಗದ ಮಜ್ಜನಗೈಯುತ-ಕಾಮ ಸುಟ್ಟ
ಲಿಂಗಕ್ಕೆ ಭಸಿತ ತೀಡಿದನು ॥ ೨೨

ಮನವೆ ಚಂದನವಾಗಿ । ಘನತಾರೆ ಅಕ್ಷತೆ ।
ಬನ್ನಿ ಪತ್ತುರಿ ಹೂವು ಧರಿಸೂತ-ಸಿದ್ಧೇಶ
ಚಿನುಮಯಗಾರತಿ ಎತ್ತಿದನು ॥ ೨೩

ಆರದ ಆರತಿಯು । ಅರುವಿನಿಂದ್ಹಿಡಿದೆತ್ತಿ ।
ಮಿರೀದ ಲಿಂಗಕ್ಕೆ ಬೆಳಗೂತ-ಸುಚಿತ್ತ
ಕರಪೂರದಾರತಿ ಹರನಿಗೆ ॥ ೨೪

ಅಂಗ ಗುಣವ ಆದಿ- । ಲಿಂಗಕ್ಕೆ ಎಡೆ ಮಾಡೂತ ।
ಕಂಗಳ ನೋಟ ಸಮರಸ-ಹೊಂದೂತ
ಮಂಗಳನಿಗೆ ವೀಳ್ಯೆ ಅರ್ಪಿಸಿ ॥ ೨೫

ತನ್ನನೆ ಮರೆತನು । ಸನ್ನುತ ಸಿದ್ಧರಾಮನು ।
ಅನೋನ್ಯವಾಗಿ ಬೆರೆತನು–ಲಿಂಗವೆ
ಧನ್ಯ ಧನ್ಯನೆಂದು ಭಜಿಸೂತ ॥ ೨೬

ಪೊರೆಯಲು ಬಂದಿರುವಿ । ಧರೆಯ ಮಾನವರಿಗೆ ।
ಕರುಣಾಳು ನಡೆ ಬೇಗ ಪುರಕ್ಕೆ–ಲಿಂಗವೆ
ತೇರ ತಂದಿರುವೆ ಕರೆಯಲು ॥ ೨೭

ಮಾರಹರನಿಗಾಗ । ತೇರಿನೊಳಗೆ ಕೂರಿಸಿ ।
ಗುರು ಸಿದ್ಧನಾಗ ವಂದಿಸಿ–ನಡಿರೆಂದು
ಹೋರಿಗಳಿಗಪ್ಪಣೆ ಮಾಡಿದನು ॥ ೨೮

ಆದಿಲಿಂಗನ ತೇರು । ಮೋದದಿ ನಡೆಯುತಿರೆ ।
ಹಾದಿ ನಡೆದಂತೆ ಸಿದ್ಧೇಶನ–ಹಿಂದಿಂಬೆ
ಸಾಧೀಸಿ ಸಿದ್ಧನ ಒಡಗೂಡಿ ॥ ೨೯

ಕಾಲ ಚಕ್ರ ಶಿವನ । ಲೀಲೆಯಿಂದ ನಡೆದಂತೆ ।
ಗಾಲಿಗಳು ಗರಗರ ತಿರಗೂತ–ನಡೆದಿದೆ
ಮೇಲಗಿರಿ ಮಲ್ಲನ ತೇರವು ॥ ೩೦

ಅತ್ತಿತ್ತ ನೋಡಿದನು । ಕತ್ತಲೆ ಕವಿದಿತ್ತು ।
ಎತ್ತುಗಳ ಬಿಚ್ಚಲು ಆಣೆ-ಮಾಡಿದ
ಸತ್ಯವಂತ ಸಿದ್ಧನು ಗುಡ್ಡರಿಗೆ ॥ ೩೧

ನಿತ್ಯ ನೇಮದಂತೆ । ಸತ್ಯ ಮೂರುತಿ ಪೂಜೆ ಆ- ।
ದಿತ್ಯ ಉದಿಸೂವ ವೇಳೆಗೆ-ನೀವಿನ್ನು
ಎತ್ತುಗಳ ಹೂಡದಿರಿ ತೇರಿಗೆ ॥ ೩೨

ಕಾಳ ರಾತ್ರಿ ಕಳೆದು । ಬೆಳಗಾಗಲು ಗುಡ್ಡರು ।
ವೇಳೆ ಕಳೆಯುವದು ಉಚಿತವೆ–ಎಂದು
ಕಾಳಹರನಪ್ಪಣೆ ಮರೆತರು ॥ ೩೩

ಹೂಡಿದರು ಹೋರಿಗಳ । ಜೋಡಿಸಿ ಜತನಾಗಿ ।
ಸಡಗರದಿಂದ ಆ ತೇರಿಗೆ–ಗುಡ್ಡರು
ನಡೆಯಿರೆಂದು ನ್ಯೈದಡವೂತ ॥ ೩೪

ಗುರುವೀನ ಆಣತಿ । ಮರವು ಆಯಿತಾಗ ।
ಹೋರಿಗಳ ಕಸವು ಅಡಗೀದೆ–ಎನ್ನುತ
ಜೋರಾಗಿ ಹೊಡೆದರು ಗುಡ್ಡರು ॥ ೩೫

ಧರೆ ಮೇಲೆ ಗಾಲಿಗಳು । ತಿರುಗದೆ ನಿಂತವು ।
ಗಿರಿಯಂತೆ ಜಡವಾಗಲು–ಹೋರಿಗಳು
ಥರ ಥರ ನಡುಗಹತ್ತಿದವು ॥ ೩೬

ನಡುಗಲು ಬಿಡಲಿಲ್ಲ । ಕಡು ಕೋಪದಿಂದಲೆ ।
ಗುಡ್ಡರು ಹೊಡೆಯ ಹತ್ತಿದರು–ಎತ್ತುಗಳು
ಮಡಿದು ಭೂಮಿಗೆ ಬಿದ್ದವು ॥ ೩೭

ಪೂಜೆಯ ಮಾಡುವಾಗ । ಸೋಜಿಗವನು ಕಂಡು ।
ಮೂಜಗದೊಡೆಯ ಮಲ್ಲಯ್ಯನ-ಸಾನಿಧ್ಯ
ಆ ಜೀವಗಳೆಲ್ಲ ಬಂದಿಹವು ॥ ೩೮

ಎಲೆ ಮಲ್ಲಿಕಾರ್ಜುನನೆ । ಸಲೆ ನಿನ್ನ ತೇರಿನ ।
ಒಲುವೀನ ಎತ್ತುಗಳ ಅಸು–ಬಂದಿಹವು
ಬಲುಬೇಗ ಕಳಹುವದಯ್ಯ ॥ ೩೯

ತೇರಿಗೆ ಹೂಡಿರುವ । ಹೋರಿಗಳ ಅಸು ನೀಗಿ ।
ಧರೆ ಮೇಲೆ ಬಿದ್ದದು ಕಂಡಾಗ-ಗುಡ್ಡರು
ಥರ ಥರ ನಡುಗಿ ಕೂತರು । ೪೦

ಅಸು ನೀಗಿದ ನೋಡಿ । ಬಿಸಿಗಂಣ ತೆರದಿಲ್ಲ ।
ನಸುನಕ್ಕು ಎತ್ತುಗಳ ಕಡೆಗೆ—ನಡೆದ
ಅಸಮಾಕ್ಷ ಸಿದ್ಧರಾಮೇಶ ॥ ೪೧

ಲಿಂಗಮುದ್ರಿತ ಬಸವ । ಮಂಗಳಮಯನೇಳು ।
ಪಿಂಗದೆ ದುಡಿಯುವಿ ಜನಕಾಗಿ-ಏಳೇಳು
ಮಂಗಳಮಯ ರಥವ ಎಳೆಯಲು ॥ ೪೨

ಮಮತೆಯಿಂದ ಎಳೆದ । ರಾಮನ ವರದ ಹಸ್ತ ।
ರೋಮ ರೋಮಕೆ ಹೊಸ ಚೇತನ-ಎತ್ತುಗಳು
ಭೂಮಿ ಮೇಲೆ ಎದ್ದು ಕೂತವು ॥ ೪೩

ಸಿದ್ಧನ ಶಿವನುಡಿ । ಬಿದ್ದಿಹವು ಕಿವಿಮೇಲೆ ।
ನಿದ್ದೆಯಿಂದ ಎಚ್ಚರಾದಂತೆ-ಹೋರಿಗಳು
ಎದ್ದು ನಿಂತವು ಸಿದ್ಧನ ಮುಂದೆ ॥ ೪೪

ಜಯ ಜಯತು ಸಿದ್ಧೇಶ । ಭಯದೂರ ಭೂತೇಶ ।
ಕಾಯೊ ಮನ್ನಿಸಿ ಕರುಣೇಶ-ಬಕುತರ
ಸುಯಿದಾನದಿ ಸಲುವಯ್ಯ ॥ ೪೫

ಅಸು ಪಡಕೊಂಡ ಆ । ಹೊಸ ಹೋರಿಗಳು ಆಗ ।
ಅಸಮಾಕ್ಷ ಸಿದ್ಧೇಶನ ಹಿಂದೆ-ನಡೆದಾಗ
ವಸುಧಿ ಜನ ನೋಡಿ ಬೆರಗಾಗಿ ॥ ೪೬

ಮುಂದೆ ನಡೆದ ಸಿದ್ಧ । ಹಿಂದೆ ನಡೆದಿತು ತೇರು ।
ಸಂದಿಲ್ಲದ ಸಾಸೀರ ಜನ ಕೂಡಿ-ಉಘೆ ಎಂದು
ನಂದದಿ ಹರಸೂತ ಗರ್ಜಿಸಿ ॥ ೪೭

ಆದಿ ಲಿಂಗಯ್ಯನಿಗೆ । ಸಾಧೀಸಿ ತಂದಿಹನು
ಮೋದದಿ ಪುರದಲಿ ಸ್ಥಾಪಿಸಲು-ಸಿದ್ಧನು
ಸದಮಲ ಹೃದಯರ ಕರೆಸಿದ ॥ ೪೮

ಉಳಿಯ ಮುಟ್ಟಿಸದ । ಗೋಳಾಕಾರದ ಲಿಂಗವು ।
ಕಳೆ ತುಂಬಿ ಪುಳುಕಿ ಚಲ್ಲೀತು-ಜೀವರ
ಕುಳಕೋಟಿ ಉದ್ಧರಿಸುವದು ॥ ೪೯

ಶಿವಶಕ್ತಿ ಸಂಯೋಗದ। ಅವಿಭಕ್ತ ಅಭೇದ್ಯ।
ಶಿವಲಿಂಗ ಸ್ವಯಂಭು ತೇಜದ-ಶತಕೋಟಿ
ತವೆ ಬೆಳಗು ಮಹಾಬೆಳಗು॥ ೫೦

ಊರ ಸುತ್ತಲಿ ಲಿಂಗ। ಕೇರಿ ಸುತ್ತಲಿ ಲಿಂಗ ಸಾ-।
ವೀರ ಲಿಂಗವ ಸ್ಥಾಪಿಸಲು-ಅಣಿಯಾದ
ವರ ಆದಿಲಿಂಗದ ಕರುಣದಿ॥ ೫೧

ಕಾರಹುಂಣವಿ ಮುಂಚೆ। ಬರುವ ಚತುರ್ದಶಿ।
ಸಾರ ಶುಭಲಗ್ನ ಇರುವದು-ನಡುರಾತ್ರಿ
ಮಾರಹರನ ಸ್ಥಾಪನೆಯು॥ ೫೨

ದೂರ ದೇಶಗಳಿಂದ। ಹಿರಿಹಿರಿ ಹಿಗ್ಗೂತ।
ಗುರುವಾಜ್ಞೆಯಂತೆ ಕೂಡಿತು-ಜಾತರಿ
ಊರ ಸುತ್ತಮುತ್ತ: ಗಾವೂದ॥ ೫೩

ಪೂಜೆಗೆ ಸಾಹಿತ್ಯವು। ಸುಜನರು ತಂದಿಹರು।
ಭಜನೆಯ ಮೇಳಕೂಡಿತು-ಗುರುವಿನ
ಸೋಜಿಗ ಬಂಣಿಸಿ ಹಾಡಿತು॥ ೫೪

ಹೋಮ ಧೂಪಾದಿಗಳ। ನೇಮದ ಅರ್ಚನೆಯು।
ಸೋಮಧರನಿಗೆ ಮಾಡೂತ-ಯೋಗೀಶ
ಕಾಮಹರಗೆ ಬಲು ಬಕುತಿಯಲಿ॥ ೫೫

ಉಪಮೆಗೆ ಬಾರದ। ಅಪರೂಪ ದ್ರವ್ಯಂಗಳು।
ಉಪಚರಿಸಿ ಪೂಜೆಯ ಮಾಡಲು-ಕೂಡಿಟ್ಟ
ಮಾಪತಿ ಸಿದ್ಧ ಕುಲತಿಲಕ॥ ೫೬

ಕೊಂಡಾಡಿ ಕುಣಿಯೂತ। ಮುಂಡಾಡಿ ಹಾಡಿದನು।
ಪಿಂಡ ಬ್ರಹ್ಮಾಂಡ ನಾಯಕನೆ-ರಕ್ಷಿಪ
ಕೆಂಡಗಂಣಿನವಗೆ ನುತಿಸೂತ॥ ೫೭

ಭಸಿತ ಗಂಧವ ತೀಡಿ। ಪೂಸಿ ಕತ್ತುರಿ ಕುಂಕುಮ।
ಸೋಸಿದ ಬಿಲ್ವಪತ್ತುರಿಯ-ಪರಿಮಳ
ಕುಸುಮ ಧರಿಸೂತ ಪರಿಪರಿ॥ ೫೮

ಮದ ಮೋಹ ಅಳಿದಾತ। ಸದಮಲ ಹೃದಯದಿ।
ತದಗತನಾಗಿ ಸಿದ್ಧರಾಮ-ತಂದಿಹನು
ಸುಧೆ ನಾಗಲೋಕದ ಭೂಲೋಕಕೆ॥ ೫೯

ಸಂಭ್ರಮದಿಂದ ಅತಿ। ಬಿಂಬಾಧರನಿಗೆ ಆಗ।
ಅಭಿಷೇಕ ಮಾಡಲು ಬಕುತಿಲಿ-ಹೂಗಳು
ನಭದಮಂಡಲದಿಂದ ಸುರಿದವು॥ ೬೦

ಸಿದ್ಧ ತನ್ನ ಹೃದಯದ। ಗದ್ದುಗೆ ಹಾಸಿದನು।
ಸುಧೆ ಎರೆದನು ಮನವಾರಿ-ಲಿಂಗಕ್ಕೆ
ತದೇಕ ಧ್ಯಾನದಿ ನುತಿಸುತ॥ ೬೧

ಧೂಪಸುಟ್ಟು ಪರಮ। ದೀಪವ ಬೆಳಗಿದನು।
ಮಾಪತಿ ಲಿಂಗಕ್ಕೆ ನೈವೇದ್ಯ-ಅರ್ಪಿತ
ಅಪ್ಪ ಆದಿಲಿಂಗ ಶರಣೆಂದು॥ ೬೨

ತಣಿದನ ಕುಣಿದನು। ಮಣಿಯೂತ ಪಾದಕ್ಕೆ।
ಹಣೆಗೆ ಪಾದವು ಸೋಂಕಿತು-ದೇವನೆ
ಗುಣದೋಷ ಸುಟ್ಟು ಹೋಯಿತು॥ ೬೩

ನಿನ್ನ ನೆನವಿನಿಂದ। ಮನಮೀರಿ ನಿಂತಿಹುದು।
ತನುವಿನ ಇರವು ಮರೆತು-ನಿನ್ನಲಿ
ಧ್ಯಾನಮಗ್ನವಾಗಿ ಬೆರೆತು॥ ೬೪

ಮಂಗಳ ಮಜ್ಜನದಿ। ಲಿಂಗಯ್ಯನು ಸಂತೈಸಿ।
ಲಿಂಗವೆಲ್ಲವು ಮುಖವಾಗಿ-ಸಲಿಸಿದ-ಅ-
ಭಂಗ ಆದಿಲಿಂಗ ಸುಖಸಂಗ॥ ೬೫

ನಂದದ ಭರದಲ್ಲಿ। ನಂದೀಯ ಏರಿದನು।
ಬಂದು ಸೇವಿಸಲು ಕರೆದನು-ಅಮೃತ
ಮಂದಮತಿಯ ಶಿಷ್ಯರಿಗೆ॥ ೬೬

ಯಾಕೆ ಎಮಗಮೃತ। ಸಾಕಾಯಿತು ನೋಡುತಲೆ।
ಬೇಕಿಲ್ಲ ಯಾರಿಗೂ ಅಮೃತ-ಸಿದ್ಧರಾಮ
ಲೋಕನಾಥನೆ ನಿನಗಿರಲಿ॥ ೬೭

ಕೊಡಬಂದರೆ ಅಮೃತ। ಅಡ್ಡಬಂದಿತು ಕರ್ಮ।
ಗುಡ್ಡರೆ ನಿಮ್ಮಲ್ಲಿ ನಿಷ್ಠೆಯು-ಬಲಿಯಲಿ
ಕೊಡುವೆನಾಗ ನಿಮಗಮೃತ॥ ೬೮

ತಟ್ಟನೆ ಹೊರಟನು। ದಿಟಯೋಗಿ ಸಿದ್ಧರಾಮು।
ತಟಾಕ ಮಧ್ಯದಿ ಅಮೃತ-ಸುರಿಯಿಸಿ
ನೆಟ್ಟಿಹನು ಅಮೃತಲಿಂಗವ॥ ೬೯

ಬಡವರಿಗೆ ಧನವ। ನೀಡಿದನು ಅನ್ನವನು।
ಬೇಡಿದವರಿಗೆಲ್ಲ ವಸ್ತ್ರವ-ಕೊಡುವನು
ಒಡೆಯ ಸಿದ್ಧ ಮನದಣಿಯೆ॥ ೭೦

ಕಾಣಬಾರದ ವಸ್ತು। ತನ ಬಾಗಿಲಕೆ ಬರಲು।
ಹಣೆಬರಹ ಬೇಕು ಕೊಳ್ಳಲು-ಪ್ರಸಾದ
ಉಣ್ಣಲು ಪುಣ್ಯದ ಬಲಬೇಕು॥ ೭೧

ಪುಣ್ಯ ಒದಗೀತಾಗ। ಕಣ್ಣು ತೆರೆದವು ಬೇಗ ವ-।
ರೇಣ್ಯರೆ ನಮಗೆ ಅಮೃತ-ನೀಡಿರೆಂದು
ಗಣ್ಯ ಬಕುತರು ಬೇಡಿದರು॥ ೭೨

ಸಿದ್ಧಯೋಗಿ ಲೋಕವ। ಉದ್ಧರಿಸ ಬಂದಿಹನು।
ಉದ್ಧರಿಸಲು ಸೊನ್ನಲಗಿ-ವಾಸವು ಪ್ರ-
ಸಿದ್ಧಿಯು ದೇಶದೇಶದೊಳು॥ ೭೩

ಊರೂರ ಜನಗಳು। ಬರುವರು ಬಕುತಿಯಲಿ।
ದರುಶನದಿ ಪಾವನರಾಗಿ-ಅನುದಿನ
ಸ್ಮರಿಸೂತ ಸಿದ್ಧನ ನಾಮವನು॥ ೭೪

ಹಾವಿನಹಾಳ ಕಲ್ಲಯ್ಯ। ಶಿವಭಕ್ತ ಸದಯನು।
ಅವಿರತ ಶಿವಧ್ಯಾನದಲಿ-ಇರುತಿರೆ
ಕಿವಿಗೆ ಬಿತ್ತು ಸಿದ್ಧನ ಮಹಿಮೆ॥ ೭೫

ಕೇದಾರ ಗುರುಗಳು। ಸದಾಚಾರಿ ಶಿವಯೋಗಿ।
ಸದುಪದೇಶವ ಭೋಧಿಸುತ-ಪಾವನ
ಸದ್‌ಭಕ್ತರಿಗೆ ಮಾಡುವರು॥ ೭೬

ಯೋಗಿಯ ಮಹಿಮೆ ಕೇಳಿ। ಸಾಗಿ ಬಂದಿಹರಲ್ಲಿ।
ಬಾಗಿ ಶರಣೆಂದು ನಮಿಸೂತ-ಸಿದ್ಧೇಶ
ಯೋಗಿವರೇಣ್ಯನೆ ಜಯ ಜಯತು॥ ೭೭

ಕೇದಾರ ಗುರುಗಳಿಗೆ। ಸದ್‌ಭಕ್ತ ಕಲ್ಲಯ್ಯನ।
ಮೋದದಿ ಯೋಗಿ ನಮಿಸೂತ-ಸಿದ್ಧನು
ಗದಗದ ಕಂಠದಿ ಕರೆದನು॥ ೭೮

ಬಡವನ ಆಶ್ರಮಕೆ। ಒಡೆಯರ ಆಗಮನ।
ನೀಡಿತು ಪರಮ ಆನಂದವ-ಶರಣರ
ಅಡಿ ಇಟ್ಟ ಭೂಮಿ ಪಾವನವು॥ ೭೯

ನಿನ್ನಿಂದಲೆ ಈ ಊರು। ಸೊನ್ನಲಗಿ ಸುಕ್ಷೇತ್ರ।
ಉನ್ನತ ನಾಮವದು ಪಡೆಯಿತು-ಯೋಗೀಶ
ಸನ್ನುತನೆ ನಿನಗೆ ಶರಣೆಂಬೆ॥ ೮೦

ಬಿನ್ನವಿಸಿಕೊಂಬುವೆ। ಮನ್ನಿಸಿರಿ ಕೋರಿಕೆಯ।
ಸೊನ್ನಲಗಿಯಲ್ಲಿಯೆ ಇರಬೇಕು–ಶರಣರಿ
ಬೆನ್ನಿನ ಎಲುವಾಗಿ ಸಲಹೂತ॥ ೮೧

ಹಿರಿಯ ಯೋಗಿಯ ನಿಜ। ಕಿರಿಯತನವ ಕಂಡು।
ಹಿರಿಹಿರಿ ಹಿಗ್ಗೂತ ಮನದಾಗ-ಇಬ್ಬರು
ಇರಲು ಒಪ್ಪಿದರು ಊರೊಳಗೆ॥ ೮೨

ಮಿತ್ರರಿಬ್ಬರುಗೂಡಿ। ಕ್ಷೇತ್ರ ನೋಡಲು ಹೋಗಿ।
ಛತ್ರದಲಿ ಮಾತಗಳಾಡೂತ–ಕೂತಾಗ ವಿ-
ಚಿತ್ರ ಘಟನೆಯು ಘಟಿಸಿತು॥ ೮೩

ಹಂಣಾದ ಮುದುಕನೊಬ್ಬ। ಬಣ್ಣಿಸಿ ನುಡಿದನು।
ಪುಣ್ಯ ಒದಗಿತು ಈ ಊರಿಗೆ–ಯೋಗಿ
ಗಣ್ಯವರೇಣ್ಯನ ಜನನದಿ॥ ೮೪

ಹಳ್ಳಿ ನಮ್ಮದು ಚಿಕ್ಕ। ಕಳ್ಳಿ ಕಾಣುವದಲ್ಲಲ್ಲಿ।
ಬೆಳೆಯಿತು ಮುದ್ದಪ್ಪ ಸುಗ್ಗವ್ವೆ-ಅವರಿಂದ
ಹೊಳೆಯಿತು ಕ್ಷೇತ್ರಾಗಿ ಮಗನಿಂದ॥ ೮೫

ಊರ ಸುತ್ತಲು ಲಿಂಗ। ಕೇರಿ ಕೇರಿಗಳಲ್ಲಿಯು।
ವರದೇಗುಲ ಭಾವಿ ಹೂದೋಟ-ಜನರು
ಹರುಷದಿ ಉಂಡುಟ್ಟು ಇರುವರು॥ ೮೬

ಮುಪ್ಪುತನ ಬಂದಾಗ। ಮುಪ್ಪುಹುಚ್ಚವು ಕೂಡಿ।
ತಪ್ಪು ಒಪ್ಪು ನೀನು ಅರಿಯದೆ-ಮಾತಾಡಿ
ಬೆಪ್ಪು ಮಾಡುವಿ ನೀ ಜನಕೆಲ್ಲ॥ ೮೭

ಸುಕ್ಷೇತ್ರ ಈ ಊರಲ್ಲ। ಮೋಕ್ಷದಾತ ಈತನಲ್ಲ।
ಕುಕ್ಷಿ ತುಂಬಿದರೆ ಹೊಗಳೂಪ–ಈ ಜನಕೆ
ರಕ್ಷಿಸಿ ಇಟ್ಟಿರುವನು ಊರಲ್ಲಿ॥ ೮೮

ಮುಚ್ಚುಮುಚ್ಚಿಲೊ ಬಾಯಿ। ಹುಚ್ಚನಂತೆ ಬೊಗಳೂವಿ।
ಎಚ್ಚರದಿ ಮಾತಾಡೊ ಏ ಮರುಳೆ-ಸೊನ್ನಲಗಿ
ಸಚ್ಚಿದಾನಂದನ ಕೈಲಾಸವು॥ ೮೯

ಸೊನ್ನಲಗಿಯಲಿ ನಿಂತು। ಶ್ವಾನಿನಂತೆ ಬೊಗಳೂವಿ।
ಹೀನತನ ನಿನ್ನದು ನುಡಿಯಲ್ಲಿ–ಮೂಡಿದೆ
ಗ್ಯಾನಹೀನರ ಮಾತು ಸುಡುಸುಡು॥ ೯೦

ಪುಣ್ಯ ಕಾಶಿಯು ಅಲ್ಲ। ಗಣ್ಯ ಶ್ರೀಗಿರಿಯಲ್ಲ।
ಬಣ್ಣಿಸಲು ಕೇದಾರವಲ್ಲ-ಈ ಊರು
ಸಣ್ಣ ಹಳ್ಳಿ ದೊಡ್ಡದಾಗಿಹುದು॥ ೯೧

ಪಾವನ ಕ್ಷೇತ್ರವಿದು। ದೇವ ಸಿದ್ಧರಾಮನಿಂದ।
ಭುವಿಯೊಳು ಕೈಲಾಸ ಇಳಿದಂತೆ-ಕಾಣೊ ನೀ
ಸುವಿಚಾರದಿಂದ ತಿಳಕೋಳೊ॥ ೯೨

ಬಡಿವಾರ ಮಾತೇಕೆ। ಮೃಡನವತಾರಿಯು।
ಒಡನೆ ತೋರಲಿ ತನ್ನ ಮಹಿಮೆ-ನಾವೆಲ್ಲ
ಕೂಡಿ ನೋಡಿದ ಮೇಲೆ ಒಪ್ಪೋಣ॥ ೯೩

ನಿಂದೆಯನು ಕೇಳಿ ಬಲು। ಬೆಂದರವರೀರ್ವರು।
ಬಂದರು ಸಿದ್ಧೇಶನ ಮಠಕ್ಕೆ–ನೊಂದು
ವಂದಿಸಿ ನುಡಿದರು ಯೋಗೀಂದ್ರಗೆ॥ ೯೪

ಕ್ಷೇತ್ರ ಸುತ್ತಿ ನೋಡೂತ । ಛತ್ರದಲಿ ಕೂತಾಗ ।
ಚಿತ್ರ ವಿಚಿತ್ರ ನಿಂದೆಯ ಮಾಡಿ–ದುರ್ಜನ
ನೇತ್ರದಿ ಮಂಣು ಎಸೆಯುವರು ॥ ೯೫

ವಂದೀಪ ಸುಜನರು । ನಿಂದಕರು ನಮ್ಮವರು ।
ಕುಂದು ಮಾತನಾಡಿ ಕುದಿವರು-ಮನೆಗೆ
ಬಂದು ಬೈದು ಹೋದರು ನಮ್ಮವರೆ ॥ ೯೬

ಕತ್ತಲೆ ಕವಿದಿರಲು । ಎತ್ತಣ ತಿಳಿಬೆಳಕು ।
ಚಿತ್ತಮನಕೆ ಮಲ ಮುಸುಕಲು–ಆತಗೆ
ಉತ್ತುಮರು ಕಾಣರು ಕಂಣೀಗೆ ॥ ೯೭

ಅಂದಿಂದು ಎಂದೆಂದಿಗು । ನಿಂದಕರಿರುವರು ।
ಬಂದದ್ದು ಬಾಯಿಗೆ ನುಡಿವರು-ಕೆಲರು
ಇಂದುಧರನಿಗೂ ಹಳಿಯುವರು ॥ ೯೮

ವರಯೋಗಿಯ ಸಾಮರ್ಥ್ಯ । ಅರಿಯರು ದುರುಳರು ।
ಬರಿ ಮಾತು ಹೇಳಲು ತಿಳಿಯದು–ಸಿದ್ಧೇಶ
ಮರ್ತ್ಯದಿ ತೋರಯ್ಯ ಹರಮಹಿಮೆ ॥ ೯೯

ಸಂಧಿ ೧೩

ಹರ ಮುನಿಯಲು ನಮಗೆ । ಗುರು ಕಾಯ್ವನೆಂಬರು ।
ಶರಣರು ಮುನಿಯಲು ಯಾರ್ಯಾರು-ಕಾಯರು
ಅರಿತು ಮಾನವರು ನಡಿಬೇಕು ॥ ೧

ಬಚ್ಚಿಟ್ಟ ಮಹಿಮೆಯು । ಬಿಚ್ಚಿಡು ಜನಮನದಿ ।
ಮೆಚ್ಚುವಂತೆ ಮಾಡು ಕುಜನರ—ಈ ಊರು
ಸಚ್ಚಿದಾನಂದನ ಸುಕ್ಷೇತ್ರವು ॥ ೨

ಭಕ್ತಿಗೆ ತವರೀದು । ಮುಕ್ತಿಗೆ ಮೂಲಹುದು ।
ಶಕ್ತಿಗೆ ಬೀಡಾದ ಸೊನ್ನಲಗಿ-ಮಹಿಮೆ
ವ್ಯಕ್ತಪಡಿಸಯ್ಯ ಭುವಿಯೊಳು ॥ ೩

ಶರಣರ ಆಣತಿಯ । ಮೀರಲಾರದೆ ನಾನು ।
ಕರೆಸುವೆ ಊರೂರ ಜನಕೆಲ್ಲ-ತೋರುವೆ
ಹರ ಚೆನ್ನಮಲ್ಲೇಶನ ಮಹಿಮೆ ॥ ೪

ಕರೆಯಿಸಿ ಶಿಷ್ಯರನು। ಅರುಹಿದನು ಆಣತಿ।
ಸಾರುವೆ ಕ್ಷೇತ್ರದ ಮಹತಿಯ-ಬೇಗನೆ
ಬರಲು ಹೇಳಿರಿ ಸಕಲರಿಗೆ॥ ೫

ಯೋಗಿಯ ದರುಶನಕೆ। ಹೋಗಿ ಬರುವೆವೆಂದು।
ಬಾಗಿದ ಮುದುಕರು ಮಕ್ಕಳು–ಕೂಡಿ
ಸಾಗಿ ಬಂದರು ಸೊನ್ನಲಗಿಗೆ॥ ೬

ಶಿಷ್ಟರು ಕೆಲವರು। ದುಷ್ಟರು ಹಲವರು।
ಮೃಷ್ಟಾನ್ನ ಭೋಜನ ಪ್ರಿಯರು-ಬಂದರು
ಇಷ್ಟಮಿತ್ರರು ಜತೆಗೂಡಿ॥ ೭

ಸಂದಿಲ್ಲದೆ ಜನಗಳು। ಬಂದು ನೆರೆದರು ಆಗ।
ವಂದಿಸಿ ಮಲ್ಲೇಶನ ಗುಡಿಮುಂದೆ–ನೋಡಲು
ಕಂದಗೊರಳನ ಮಹಿಮೆಯು॥ ೮

ಸಭೆಗೆ ಬಂದವರೆಲ್ಲ। ನಭಕೆ ಮುಟ್ಟುವಂತೆ।
ಶುಭಕರ ಸಿದ್ಧೇಂದ್ರ ಜಯಜಯ-ಎಂದು
ಅಭವಗೆ ಸ್ವಾಗತ ಬಯಸೂತ॥ ೯

ಸ್ವಂತ ನೆಯ್ದಿಹ ಬಟ್ಟೆ। ಕಾಂತಿಯ ಕಾಷಾಯದ।
ಶಾಂತ ಸ್ವರೂಪುಳ್ಳ ಸಿದ್ಧೇಶನು–ಬರಲು
ನಿಂತು ಬಕುತರು ನುತಿಸಿದರು॥ ೧೦

ಆದಿಯಿಂದಾಚೆಯದು। ಭೇದಿಸಿದ ಭಸಿತವ।
ಮೋದದಿ ಹಣೆಗೆ ಧರಿಸಿದನು-ಆ ಭವ
ಪಾದದಿ ಆವುಗಿ ಮೆಟ್ಟಿಹನು॥ ೧೧

ಕೊರಳಲ್ಲಿ ರುದ್ರಾಕ್ಷಿ। ಕರದಿ ಯೋಗದಂಡವು।
ತ್ವರದಿಂದ ಸಭೆಗೆ ಬಂದಿಹನು–ಯೋಗಿ
ಸಾರಲು ಗಿರಿಮಲ್ಲನ ಘನತೆ॥ ೧೨

ಕಿಕ್ಕಿರಿದ ಸಭೆಯೋಳು। ಪೊಕ್ಕನು ಮಹಾಯೋಗಿ।
ಚೊಕ್ಕಾದ ಶಿವತೇಜ ಬಿರೂತ-ಜನರು
ಪಕಪಕ ಕಂಗಳ ಬಿಡುತಿಹರು॥ ೧೩

ಕೂಡಿದ ಜನಕೆಲ್ಲ। ಜೋಡಿಸಿ ಕರಮುಗಿದು।
ನೋಡೂತ ಯೋಗೀಶ ನುಡಿದನು–ಭಕ್ತರೆ
ಬಡವನಿಗೆ ಓಗೊಟ್ಟು ಬಂದಿಹಿರಿ॥ ೧೪

ಲೋಕನಾಥನ ನುಡಿಗೆ। ಮೂಕಗೊಂಡಿತು ಜನ।
ಏಕ ಚಿತ್ತರಾಗಿ ಸಿದ್ಧೇಶನ–ನೋಡೂತ
ಲೋಕಕ್ಕೆ ಶಿವ ಬಂದನೆಂದರು॥ ೧೫

ಪಂಚಲೋಹದ ಗುಂಡು। ಕಿಚ್ಚಿನೊಳಗೆ ಇಕ್ಕಿ।
ಎಚ್ಚರದಿ ತನ್ನಿರಿ ಕಮ್ಮಾರರೆ–ನೀವು
ಕಿಂಚಿತ್ ಹೆದರದೆ ಇಕ್ಕಳದಿ॥ ೧೬

ಕೂಡಿದ ಬಕುತರು। ನುಡಿ ಕೇಳಿ ಗದಗದ।
ನಡುಗಿದರು ತಮ್ಮ ಮನದಾಗ–ಹರನೆ
ನೋಡುವದೇನೆಂತು ತಿಳಿಯದು॥ ೧೭

ಬೆಂಕಿ ಕಾರುವ ಗುಂಡು। ಸೊಂಕಿದರೆ ಸುಡುವದು।
ಶಂಕಿಸದೆ ಇಡಲು ಹೇಳಿದನು–ಯೋಗೀಶ
ಓಂಕಾರ ಮಂತ್ರವ ಸ್ಮರಿಸೂತ॥ ೧೮

ಸಾರುವೆ ಸಾರುವೆನು। ಕರ ಎತ್ತಿ ಸಾರುವೆನು।
ಹಿರಿ ಕಿರಿಯರೆದುರು ಸಾರುವೆ–ದಿಕ್ಕೆಲ್ಲ
ಭೇರಿ ನುಡಿಸುವೆ ಶಿವತತ್ವದ॥ ೧೯

ಬರ್ರಿನ್ನು ಕಮ್ಮಾರರೆ। ತರ್ರಿ ಕಾಸಿದ ಗುಂಡು।
ಕರವ ಚಾಚಿದೆ ನಿಮ್ಮೆದುರಿಗೆ–ನೀವಿನ್ನು
ತರಲು ತಡ ಮಾಡದಿರಯ್ಯ॥ ೨೦

ಹಿಡಿಯುವೆ ಹಿಡಿಯುವೆ। ಎಡ ಅಂಗೈಯಲಿ ಗುಂಡು।
ಕಿಡಿಕಿಡಿ ಬೆಂಕಿಯ ಕಾರುವ–ಈ ಗುಂಡು
ಸುಡದಿರೆ ಮಹಿಮೆ ಅರಿಯಿರಿ॥ ೨೧

ಕಾಯಕ ಮಾಡುವಾಗ। ಜೀಯನ ಸೇವೆಯನು।
ಭಯ ಬಕುತಿಯಿಂದ ಮಾಡಿದರೆ–ನಿಮಗೆ
ಸ್ವಯರೂಪದಿ ಹೊಂದಿಕೊಳ್ಳುವನು॥ ೨೨

ಪಂಚಕ್ರೋಶದಿ ಬಂದು । ಸಂಚಿತ ಪಾಪವಳಿದು ।
ಪಂಚಭೂತಾತ್ಮಕ ದೇಹವನು–ಬಿಟ್ಟರೆ
ಪಂಚವದನನು ಮುಕ್ತಿ ನೀಡುವನು ॥ ೨೩

ಡುಡ್ಡು ಬಡ್ಡಿಯ ಮುಟ್ಟಿಸಿ । ಗಡನೆ ರುಣಮುಕ್ತನು ।
ಒಡನೆ ಮಲ್ಲನಲ್ಲಿಗೆ ಬಂದಾತ–ಪುಣ್ಯಾತ್ಮ
ನೋಡಿರಿ ಅಂಗುಷ್ಟ ಸುಡದಿರೆ ॥ ೨೪

ಧಾವಿಸಿ ಕ್ಷೇತ್ರಕೆ ಹೋಗಿ । ಸಾವಿರ ಶಿವಲಿಂಗಕ್ಕೆ ।
ಭಾವಿಸಿ ಪೂಜೆಯ ಮಾಡಿದಷ್ಟು–ಫಲ ಈ
ಠಾವಿನ ಒಂದು ಲಿಂಗ ಪೂಜೆಗೆ ॥ ೨೫

ಸೊನ್ನಲಗಿ ಲಿಂಗಕ್ಕೆ । ಬೋನವ ಹಿಡಿಯಲು ।
ಅನ್ಯ ಸಾಸಿರ ಲಿಂಗ ತಣಿವವು–ನಂಬಿರಿ
ಎನ್ನ ತೋರಬೆರಳು ಸುಡದಿರೆ ॥ ೨೬

ಅರವತ್ತೆಂಟು ಜನಕೆ । ಕರೆದು ಉಣನೀಡಲು ।
ಆರು ಸಾವೀರದ ಎಂಟುನೂರು–ಜನಕೆ
ಕರೆದು ಉಣಿಸಿದ ಫಲವಿಹುದು ॥ ೨೭

ಮೃಡನ ನಿವಾಸವಿದು । ಕಡಿಮೆ ಅಲ್ಲ ಈ ಕ್ಷೇತ್ರ ।
ಧೃಡದಿಂದ ನಂಬಿಕೊಳ್ಳಿರೊ–ಸುಡಲಿ
ನಡುಬೆರಳು ಸಟೆಯಾದರೆ ॥ ೨೮

ಅನ್ನಛತ್ರದ ಕಾಳು । ಮನಿಗೆ ತಂದರೆ ಸೇವಕ ।
ಮನ್ನಿಸಿ ಹಸಮಾಡಿ ಕೊಟ್ಟರೆ–ನೀವು
ಅನ್ನಛತ್ರದಿ ಬಿನ್ನಹ ಮಾಡಿದಂತೆ ॥ ೨೯

ಮಿಂದು ಪಾಕವ ಮಾಡಿ । ಹೊಂದಿಸಿ ಕೊಟ್ಟರೆ ನೀವು ।
ಇಂದುಧರನ ಛತ್ರ ಇಟ್ಟಂತೆ–ಸುಳ್ಳಾದರೆ
ಬೆಂದು ಹೋಗಲಿ ಅನಾಮಿಕೆಯು ॥ ೩೦

ಹತ್ತು ಸುಜನರನ್ನು । ಮತ್ತೊಂದು ಕ್ಷೇತ್ರದೊಳು ।
ತುತ್ತು ಮಾಡಿ ಉಣಸೀದ ಪಲವು-ಛತ್ರಕ್ಕೆ
ಉತ್ತುಮ ಪಾಕ ಮಾಡಿ ಕಳುಹಲು ॥ ೩೧

ಕಿರಿಯ ಬೆರಳಿನ ಮೇಲೆ। ಉರಿವ ಗುಂಡವನಿಕ್ಕಿ।
ಸಾರಿದನು ಸಿದ್ಧರಾಮನಾಗ-ನಂಬಿರಿ
ನಾರಿಯರೆ ಮಲ್ಲಿಕಾರ್ಜುನನ॥ ೩೨

ಶಿವಲಿಂಗ ಪೂಜೇಯು। ತವೆ ಸ್ಥೂಲ ಸೂಕ್ಷ್ಮದಿ।
ಅವಿರತವಾಗಿ ಧ್ಯಾನಿಸೂವ–ಭಕ್ತನು
ಶಿವನೊಳಗೈಕ್ಯ ಆಗುವನು॥ ೩೩

ಎಡಗೈಯ ಗುಂಡವದು। ಒಡನೆ ಬಲಗೈಯದಿ।
ನಡುವಣ ಬೆರಳಿಗೆ ಸಿದ್ಧೇಶ–ಇಟ್ಟನು
ಸುಡದಿರೆ ನಂಬಿರೆ ಮಲ್ಲಯ್ಯನ॥ ೩೪

ಇಡುವೆನು ಈ ಗುಂಡು। ಸುಡದಿರೆ ಹೆಬ್ಬಟ್ಟು।
ದುಡಿತದಲಿ ಭಾವ ಹಸನಾಗಿ–ಇಟ್ಟರೆ
ಒಡೆಯ ಚೆನ್ನಮಲ್ಲ ಒಲಿವನು॥ ೩೫

ಹಾಲು ಬೆಣ್ಣೆಯು ಸಿಗದೆ। ಬಾಲಕರು ಮಡಿದರು।
ಚಲಿಸದೆ ಮನವು ಸೇವೆಯ-ಮಾಡಿದರೆ
ಒಲಿದು ಹೊಂದಿಕೊಳುವನು ದೇವ॥ ೩೬

ಕಂಗೊಳಿಸುವ ಗುಂಡು। ಅಂಗುಲಿ ಅನಾಮಿಕೆಯು।
ಹಿಂಗದಲೆ ಬೆಂದು ಬೆಂಡಾಗಲಿ–ಸುಡದಿರೆ
ಲಿಂಗದ ಮಹಿಮೆ ತಿಳಿಯಿರಿ॥ ೩೭

ತಾಯಿ ತಂದೆ ಹೋದರು। ಜೀಯ ಮಲ್ಲನ ಸೇವೆಯು।
ಕಾಯಾ ವಾಚಾ ಮನಸಾ ಮಾಡಿರಿ-ಆತ ಭವ-
ಭಯ ಪರಿಹರಿಸುವನು॥ ೩೮

ಉರಿಯ ಕಾರುವ ಗುಂಡು। ಕಿರಿಬೆರಳ ಮೇಲಿಟ್ಟು।
ಗುರುಸಿದ್ಧ ಭಾಷೆ ಕೊಟ್ಟನು-ನಂಬಿರೊ
ವರ ಕಪಿಲಸಿದ್ಧ ಮಲ್ಲಯ್ಯನ॥ ೩೯

ಊರಲ್ಲಿ ನೆಲೆಸಿರುವ। ಅರವತ್ತೆಂಟು ಲಿಂಗಕ್ಕೆ।
ಧೀರ ಮನದಿ ಅರ್ಚಿಸಿದರೆ-ಜೀವವು
ಪರಶಿವನಲಿ ಬೆರೆಯುವದು॥ ೪೦

ಮಂಗಳಮಯ ಸಕಳ। ಲಿಂಗಗಳಿಗೆ ಬಕುತಿ।
ಹಿಂಗದಲೆ ಪೂಜೆ ಮಾಡಿದರೆ–ದೇವನು
ಸಂಗ ಸಮರಸ ಹೊಂದುವನು॥ ೪೧

ಮಂದಮತಿಯು ಬಿಟ್ಟು। ಕಂದಗೊರಳನ ಪೂಜೆ।
ಸಂದೇಹವಿಲ್ಲದಲೆ ಮಾಡಿರೊ–ದಿಟವಿದು
ಬೆಂದು ಹೋಗಲಿ ಬಲಮುಂಗೈಯು॥ ೪೨

ಆದಿಲಿಂಗಯ್ಯನಿಗೆ। ಆದರದಿ ನಮಿಸೂತ।
ಸಾಧೀಸಿ ಹೋಮುವನು ಕಂಡರೆ–ಸಗ್ಗದ
ಸದನದಿ ನೀವು ಸುಖಿಸುವಿರಿ॥ ೪೩

ನಂಬಿರೊ ನಂಬಿರೊ ನೀವು। ಕಾಂಬುವ ಕಂಗಳಿಗೆ।
ಸಾಂಬನ ಮಹಿಮೆಯು ನಂಬಿರೊ–ಸುಡದಿರೆ
ಕಬ್ಬಿನ ಗುಂಡು ಎಡಮುಂಗೈಯ॥ ೪೪

ಮೂಕಾಗಿ ಮುಗ್ಧರಾಗಿ। ಲೋಕೇಶ ಸಿದ್ಧನಿಗೆ।
ಭೀಕರ ರುದ್ರಾವತಾರನಿಗೆ–ನೋಡೂತ
ಏಕವಾದವು ಮನಚಿತ್ತಗಳು॥ ೪೫

ತಪ್ತಾದ ಗುಂಡವದು। ಸಪ್ತಧಾತು ದಾಟೇದ।
ವ್ಯಾಪ್ತಗೊಂಡಿದ ಮಾಕಾಯವ–ಸೋಂಕಲು
ತೃಪ್ತಾಗಿ ತಂಪಾಗಿ ಕರಿಗೊಂಡಿತು॥ ೪೬

ಕಾಸಿರುವ ಈ ಗುಂಡು। ಬಿಸಿ ಆರಿ ತಂಪಾಯಿತು।
ಕಾಸಿರಿ ಬೆಂಕಿಯ ಕಾರುವಂತೆ–ಕಮ್ಮಾರರೆ
ತುಸು ವೇಳೆ ಕಳೆಯ ಬೇಡಿರಿ॥ ೪೭

ಗುರುವಿನ ಆಣತಿ। ತ್ವರದಿಂದ ಪಾಲಿಸುತ।
ಉರಿಯಲ್ಲಿ ಇಟ್ಟರು ಕಮ್ಮಾರರು–ಗುಂಡದು
ಉರಿ ಬೇರೆ ತಾ ಬೇರೆ ಕಂಡಿಲ್ಲ॥ ೪೮

ಕಾಸಿದ ಗುಂಡನ್ನು। ಏಸೊಂದು ಕಮ್ಮಾರರು।
ಕಾಸವಿಸಿಗೊಂಡು ಇಕ್ಕಳದಿ–ತಂದರು
ಆಸೆಮನ ಹಸ್ತದಲಿಟ್ಟರು॥ ೪೯

ಪಂಚಲೋಹದ ಗುಂಡು । ಗೊಂಚಲ ಕೆಂಡಿನ ತಪ್ತ ।
ಕಂಚು ಮಿಂಚಾಗಿ ಕೆಂಡಿತ್ತು–ಯೋಗಿಯು
ಸುಚಿತ್ತ ಹಸ್ತದಲಿ ಪಿಡಿದನು ॥ ೫೦

ಕೆಂಡ ಕಾರುವ ಲೋಹದ । ಗುಂಡವನು ಹಿಡದಿರೆ ।
ಚಂಡೇಶನ ಮಹಿಮೆ ಸಾರುವಾಗ–ಆಡುವ
ಚೆಂಡು ಹಿಡಿದಂತೆ ಕಂಡೀತು ॥ ೫೧

ಕೇಳಿರಿ ಜನಗಳಿರಾ । ಹೇಳುವೆನು ಮತ್ತೊಮ್ಮೆ ।
ಭಾಳಚಂದಿರನ ಘನತೆಯ-ಅರುಹಲು
ವೇಳೆಯು ನನಗೆ ದೊರಕಿದೆ ॥ ೫೨

ಮಮಕಾರ ತಾಣದಲಿ । ಸಮತೆಯ ತುಂಬಿರೊ ।
ಸೋಮಧರನ ರೂಪು ಜಗವೆಲ್ಲ–ಇಲ್ಲದಿರೆ
ವಾಮಹಸ್ತವು ದಗ್ಧವಾಗಲಿ ॥ ೫೩

ಸೊನ್ನಲಗಿ ಗ್ರಾಮಕ್ಕೆ । ಚೆನ್ನಮಲ್ಲ ಬಾರದಿರೆ ।
ಇನ್ನೇಕೆ ಇರಬೇಕು ನಾನಿಲ್ಲಿ-ಗುಂಡಿನ
ಅನಾಹುತಕೆ ಒಳಗಾಗಲಿ ॥ ೫೪

ಪರವುತ ಕ್ಷೇತ್ರದ । ಪರತರ ಲಿಂಗಗಳು ।
ಊರೊಳು ಬಂದು ನೆಲಿಸದೆ-ಇದ್ದಲ್ಲಿ
ಉರಿಯಲಿ ಎನ್ನ ಬಲಗೈಯ ॥ ೫೫

ಕಿರಿದಲ್ಲ ಸೊನ್ನಲಗಿ । ಗಿರಿ ಅಹುದು ಚೆನ್ನನ ।
ಹಿರಿ ಕ್ಷೇತ್ರವಾಗಿ ಪರಿಣಮಿಸಿ–ಮಾನವರ
ಪರಿಪರಿ ಪಾಪವ ಕಳೆಯುವದು ॥ ೫೬

ವರ ಚೆನ್ನಮಲ್ಲೇಶನ । ಕಿರಣಕ್ಕೆ ಮೂಲಾಗಿ ।
ಪರಿಪರಿ ವೈಭವದಾಗರವು–ಆಗದಿರೆ
ಉರಿದು ಹೋಗಲಿ ಬೆರಳುಗಳು ॥ ೫೭

ಮುಂಚೇಳು ಜನುಮದ । ಪಂಚ ಮಹಾಪಾಪದ ।
ಸಂಚಿತ ಪ್ರಾರಬ್ಧ ಆಗಾಮಿ-ಹೋಗದಿರೆ
ಪಂಚಲೋಹದ ಗುಂಡು ಸುಡಲಿನ್ನು ॥ ೫೮

ದಾನಿ ಎಂಬಭಿಮಾನವು। ಮನದಲ್ಲಿ ಹೊಳೆದರೆ।
ಅನುಮಾನವಿಲ್ಲದೆ ಎನ ಕೈಯ-ಸುಡಲೆಂದ
ಹೀನಕ್ಕೆ ಮನವು ಎಳೆದರೆ॥ ೫೯

ಯೋಗಿ ಎಂಬಭಿಮಾನ। ತಾಗಿದರೆ ಮನಕ್ಕೆ।
ಹೋಗಲಿ ಬೆರಳು ಸುಟ್ಟೆಂದು–ಬಕುತರೆ
ಈಗಾದರು ನಂಬಿರಿ ಮಲ್ಲೇಶನ॥ ೬೦

ದಂಡಿಸಿ ದೈತ್ಯರನು। ರುಂಡವ ಧರಿಸಿ ಹರ।
ತಾಂಡವ ನೃತ್ಯ ಮಾಡುವಾಗ-ಮಾರುದ್ರ
ಕಂಡಂತೆ ಕಾಂಬುವನು ಶಿವಸಿದ್ಧ॥ ೬೧

ಪಾಪಿಗಳ ಎದೆ ಎಲ್ಲ। ಕಂಪೀಸ ತೊಡಗೀತು।
ಲೋಪಗೊಂಡವು ದುರ್ಗುಣ-ಯೋಗೀಶ
ಉಪಮಾತೀತನಿಗೆ ಶರಣೆಂದು॥ ೬೨

ಸಂದೇಹ ಉಳಿದಿಲ್ಲ। ಬಂಧನ ರಹಿತನೆ।
ನೊಂದುಕೊಂಡವು ಮನವೆಲ್ಲ–ಎನ್ನುತ
ವಂದಿಸುತ ಬೇಡಿಕೊಂಡರು॥ ೬೩

ಹೋಮ ಪೂಜೆಯುಗೆಂದು। ಕೋಮಲ ಕರಪುಷ್ಪ।
ಸೋಮನಿಗಾಗಿ ಮುಡಪಿಟ್ಟ-ಶಿವಸಿದ್ಧ
ರಾಮನೆ ಶರಣು ಶರಣಾರ್ಥಿ॥ ೬೪

ಕಿಡಿಕಿಡಿ ಬೆಂಕಿಯ। ಕಿಡಿಗಳ ಕಾರುವ ಆ।
ಬಿಡು ಬೆಂಕಿಗುಂಡು ಧರಿಮೇಲೆ-ಸಿದ್ಧೇಶ
ಅಡಿಗಳಿಗೆ ಶರಣು ಶರಣಾರ್ಥಿ॥ ೬೫

ಜಯ ಜಯತು ಸಿದ್ಧೇಶ। ಕಾಯಾತೀತ ಯೋಗೀಶ।
ಕಾಯೊ ಕರುಣಾಳು ಸರ್ವೇಶ-ಮಕ್ಕಳಿಗೆ
ದಯದೋರೊ ಸಿದ್ಧರಾಮೇಶ॥ ೬೬

ಗುರು ಸಿದ್ಧರಾಮುನಿಗೆ। ಕರುಣೆ ಹುಟ್ಟಿತು ಆಗ।
ಧಾರುಣಿಗೆ ಗುಂಡು ಒಗೆದಾಗ-ಆ ಚಣ
ಉರಿ ಎದ್ದು ಪೃಥವಿ ಸುಟ್ಟೀತು॥ ೬೭

ಯೋಗಿಯ ಕೈಗುಂಡು । ಸಾಗಿ ನೆಲಕೆ ಉರುಳಿ ।
ಧಗ್‌ಂತ ಉರಿಯು ಎದ್ದೀತು-ಕಂಡು ಮಾ-
ಯೋಗಿ ಉಘೆ ಚಾಂಗ ಭಲರೆಂದು ॥ ೬೮

ಗುರುವೆ ಪರಮು ಕಲ್ಪ- । ತರುವೆ ನಿನಗೆ ಶರಣು ।
ಅರುವೆ ಶಿವಜ್ಯೋತಿ ಆಗರವೆ-ಶರಣು
ಪರನೆ ಶ್ರೀಗುರು ಸಿದ್ಧರಾಮು ॥ ೬೯

ಜಯಕ್ಕೆ ತವರಾಗಿ । ಮಾಯೆಗೆ ಮರ್ದಿಸಿ ನೀ ।
ಕಾಯಧಾವತಿಯಿಂದ ದೂರಾದಿ-ಸಿದ್ಧನೆ
ದಯದೋರಿ ಕಾಪಾಡು ಕರುಣಾಳು ॥ ೭೦

ಜಡದೊಳಗೆ ಸತ್ಯುಳ್ಳ । ನಡೆಯ ತುಂಬಿದ ದೇವ ।
ಒಡೆಯ ಸಿದ್ಧರಾಮು ಜಯವೆಂದು-ಗರ್ಜಿಸೆ
ಧೃಢ ಬಕುತಿಯಲಿ ಸಭಿಕರು ॥ ೭೧

ಕೈಮುಗಿದು ನಿಂತನು । ರಾಮುನು ಸಭೆಯೊಳು.।
ಪ್ರೇಮದಿ ನೋಡೂತ ನಗುತ-ಪೇಳಿದನು
ತಮಗಿಂತ ನಾನು ಕಿರಿಯನು ॥ ೭೨

ಗುರುಗಳೆ ಈ ಪರಿ । ತರವಲ್ಲ ಆಡುವದು ।
ಚರಣ ಹಿಡಿದು ಜನ ಕೇಳಿತು-ಭಕ್ತಿಯ
ಕಿರಣ ಪ್ರಕಾಶಗೊಂಡಿತಲ್ಲಿ ॥ ೭೩

ಗುರು ಶಿಷ್ಯರೆಂಬುವ । ಹಿರಿ ಭೇದವಳಿಯಲಿ ।
ಗಿರಿಮಲ್ಲನಲಿ ನಿಷ್ಠೆ ಬಲಿಯಲಿ-ಸಿದ್ಧನು
ಸಾರಿ ಹೇಳಿದ ಸೂತ್ರ ಇದರಲ್ಲಿ ॥ ೭೪

ಭಾವ ಶುಚಿಯಾಗಲು । ದೇವನ ನಂಬಿರಣ್ಣ ।
ಸಾವು ಹುಟ್ಟೇನ ಗುಟ್ಟವನು-ಅರಿತು
ಶಿವ ಜೀವರ ನೇಹ ಬೆಳಿಸಿರಿ ॥ ೭೫

ಬೆಂಕಿಯು ಸಿದ್ಧನಿಗೆ । ಲೆಂಕಿಯಾಗಿರುವದು ।
ಶಂಕರನ ಮಹಿಮೆ ಕಂಡುಂಡು-ಜನವು
ಕಿಂಕರವಾಗಿ ನುಡಿ ಕೇಳಿತು ॥ ೭೬

ಊರೂರ ಜನಕೆಲ್ಲ। ಗಿರಿಮಲ್ಲನ ಪ್ರಸಾದ।
ಕರಮುಟ್ಟಿ ನೀಡಿ ಉಪಚರಿಸಿ-ಯೋಗಿ
ಒರೆದು ಬಂದ ಜನಕೆ ಕಳುಹಿದನು॥ ೭೭

ಕಾಯಕದ ಹಿರಿಮೆಯ। ಬಾಯಿಂದ ಬಣ್ಣಿಸದೆ।
ಕಾಯ ದುಡಿಸಿ ಜನಕೆ ತೋರಿದ-ಶ್ರೀಗುರು
ಮಾಯಾ ಕೋಲಾಹಲ ಮೂರುತಿ॥ ೭೮

ಗುರುಸಿದ್ಧನ ಮಹಿಮೆ। ಪರಿಪರಿ ಹೊಗಳುತ।
ತಿರುಗಿತು ಬಕುತ ಜನವೆಲ್ಲ–ಸಿದ್ಧನು
ಗಿರೀಶನ ಪೂಜೆಗೆ ಅಣಿಯಾದನು॥ ೭೯

ಸಿದ್ಧಿಗೆ ತವರೆಂಬ ಪ್ರ–। ಸಿದ್ಧಿ ಪಸರಿಸಿತು।
ಬುದ್ಧಿವಾದದಿ ಬಲು ಚತುರನು–ಎಂಬುವ
ಸುದ್ದಿ ಹಬ್ಬಿತು ತ್ರಿಭುವನದಿ॥ ೮೦

ಅಣಿಮಾದಿ ಸಿದ್ಧಿಗಳು। ತೃಣವಾಗಿ ಕಾಣುವವು।
ರುಣಿಯಾಗಿ ರಿದ್ಧಿಸಿದ್ಧಿಗಳು–ದುಡಿವವು
ಹಣೆಗಂಣಿನ ಸಿದ್ಧಯೋಗಿಯಲಿ॥ ೮೧

ಚರಾಚರರ ಸುಖಕೆ। ನಿರತದಿ ದುಡಿಯುತ।
ಪರಿಪೂರ್ಣ ಜ್ಞಾನಮೂರುತಿ–ಸಿದ್ಧೇಶ
ಪರಮಾನಂದದಿ ವಾಸಿಪನು॥ ೮೨

ನಿತ್ಯಾನಂದ ನಿಜಗುರು। ಸತ್ಯವಂತ ಸತ್‌ಶೀಲ।
ಜಿತೇಂದ್ರಿಯ ಜಾತಪುನಿತ–ಮಾಯೋಗಿ
ಅತಿ ಉನ್ನತ ಸಾಧಿಪ ವಿರಾಗಿ॥ ೮೩

ಸೊನ್ನಲಾಪುರ ವಾಸ। ಚೆನ್ನಿಗ ಸಿದ್ಧಯೋಗಿ।
ತನ್ನನೆ ಮರೆತು ಸಕಲರ–ಸುಖಕಾಗಿ
ಅನುದಿನದಲಿ ಚಿಂತಿಸುವನು॥ ೮೪

ಸಿದ್ಧನ ಕೀರುತಿಯು। ಬಿದ್ದೀತು ಕಿವಿಮೇಲೆ।
ಎದ್ದೀತು ಹೊಟ್ಟೆ ಉರಿಗಿಚ್ಚು–ಖರ್ಪರ
ನಿದ್ದಿಲ್ಲದೆ ತಳಮಳಕೊಳಗಾಗಿ॥ ೮೫

ಸಿದ್ಧಿಯಲಿ ನಿಪುಣ । ಸಿದ್ಧಿಸುವೆನು ಕುಟಿಲ- ।
ವಿದ್ಯಾಸಾಗರ ಬಿರುದು ನನ್ನದು-ಹೆಸರು
ಮಧ್ಯದಿ ಫಡಕೊಳ್ಳುವನಿವನ್ಯಾರು ॥ ೮೬

ಸುಮ್ಮನೆ ಬಿಡುವೇನೆ । ಹೆಮ್ಮೆ ಪಡುವ ಸಿದ್ಧ- ।
ರಾಮನೆ ನಿನ್ನನು ಜಯಿಸುವೆ-ನೋಡುವೆ
ಹೋಮಾದಿ ನೇಮಗಳ ಮಾಡುವದು ॥ ೮೭

ಸಾಧಿಸಿದ ವಿದ್ಯೆಯನು । ವಾದೀಸಿ ಸೋಲಿಸುವೆ ।
ಹದಗೆಡಿಸಿ ಒದ್ದಾಡುವಂತೆ-ಮಾಡಲು
ಹದಿನೆಂಟು ಪೀಠದ ನೆರವೆನಗೆ ॥ ೮೮

ಹದಿನೆಂಟು ಪಟ್ಟದ । ಮದಜೋಗಿಣಿಯರಿಗೆ ।
ಇದ್ದಸುದ್ದಿ ಹೇಳಿ ಕಳುಹಿದನು-ಕುಟಿಲ
ವಿದ್ಯಾಸಾಗರ ಖರ್ಪರ ಜೋಗಿ ॥ ೮೯

ಕುಟಿಲ ವಿದ್ಯೆಗಳಲ್ಲಿ । ಸಟೆಯ ಸಿದ್ಧಿಗಳಲ್ಲಿ ।
ಮಾಟಮದ್ದು ಬಲ್ಲ ಜೋಗಿಗಳು-ಬಂದರು
ಒಟ್ಟುಗೂಡಿ ಖರ್ಪರನ ಬಳಿಸಾರಿ ॥ ೯೦

ಮುದುಕ ಜೋಗಿ ಒಬ್ಬ । ಬುದ್ಧಿಮಾತು ಹೇಳಿದ ।
ಸಿದ್ಧಕುಲತಿಲಕನ ಹೆಸರೀಗೆ-ಹೋದರೆ
ಬುದ್ಧಿಗೇಡಿತನ ಆದೀತು ॥ ೯೧

ಬಡಬಡಿಸ ಬೇಡೆಲೊ । ಹೆಡಕ ಮುರಿಯುವೆನು ।
ಒಡನೆ ನಮ್ಮೊಡನೆ ನಡೆ ಬೇಗ-ನಿನ್ನದು
ಬಿಡು ಬುದ್ಧಿವಾದವ ಮುದಿಜೋಗಿ ॥ ೯೨

ಖರ್ಪರ ಜೋಗಿಯ ಆ । ದರ್ಪದ ನುಡಿ ಕೇಳಿ ।
ಸರ್ಪವು ಗರುಡನ ಕಂಡಂತೆ-ಸರ್ವರು
ಬರ್ಪ ಕಂಟಕಕೆ ಒಳಗಾದರು ॥ ೯೩

ಬಿಚ್ಚೀದ ತಲೆಗೂದಲು । ಕಿಚ್ಚುಕಾರುವ ಕಂಣು ।
ಹಚ್ಚಿದರು ಕಂದಿಯಾದಿ ಐದು ಬಂಣ-ಕೈಯಲಿ
ಬಿಚ್ಚಿಹಿಡಿದಿರುವ ಚಕ್ರಗಳು ॥ ೯೪

ಸ್ಥೂಲಾದ ದೇಹಕೆಲ್ಲ । ಸಲೆ ಬಳಿದ ಕೆಂಮುಂಣು ।
ಜೋಲಾಡುವ ಹರಕು ಕಿವಿಗಳು–ಕೊರಳ
ಮಾಲೆಗಳು ಶಂಖೀನ ತರತರ ॥ ೯೫

ಸಡಿಲಾದ ಬಾಯಿಂದ । ನುಡಿಯೂತ ಅವಾಚ್ಯ ।
ನಡೆದರು ಬೀದಿಯ ತುಂಬೆಲ್ಲ–ಸಿದ್ಧರ
ಒಡೆಯನ ಬಲವ ಮುರಿಯಲು ॥ ೯೬

ಮುಕ್ಕಂಣನ ಬಲವ । ಲೆಕ್ಕಿಸದೆ ಅಸುರರು ।
ಸೊಕ್ಕಿನಿಂದ ತಾವೆ ಹಾಳಾದರು–ಪೊಕ್ಕರು
ಸೊಕ್ಕಿನ ಜೋಗಿಗಳು ಸೊನ್ನಲಗಿ ॥ ೯೭

ಹೋಮುವ ಹೊತ್ತಿಸಲು । ರಾಮನು ಆಸನ ಹಾಕಿ ।
ನೇಮ ನಡೆಸಲು ಕೂತಾಗ–ಜೋಗಿಯು
ವಾಮಮಾರ್ಗವನು ತಳೆದನು ॥ ೯೮

ಆ ಕ್ಷಣದಿ ಖರ್ಪರನು । ಅಕ್ಷತೆ ಹಿಡಿದನು ।
ದಕ್ಷತೆಯಿಂದ ಮಂತ್ರವನು–ಪಠಿಸಿ
ಲಕ್ಷೀಸಿ ಹೋಮದಿ ಒಗೆದನು ॥ ೯೯

ಸಂಧಿ ೧೪

ಬಿರುಗಾಳಿ ಬೀಸಿತು । ಉರಿ ಉಡುಗಿ ಒಯ್ದಿತು ।
ಸುರಿದೀತು ಮಳೆಧಾರಿ ಒಮ್ಮೆಲೆ–ಯಜ್ಞಕುಂಡ
ನೀರಿನಿಂದ ತುಂಬಿ ತುಳಕೀತು ॥ ೧

ಕೊಟ್ಟ ಬೋನ ತುಪ್ಪವು । ಇಟ್ಟ ದ್ರವ್ಯಂಗಳೆಲ್ಲ ।
ತಟ್ಟನೆ ಜಲದೊಳು ನಡೆದಾಗ–ಜೋಗಿಯ ।
ದಿಟಯೋಗಿಯು ಮಾಟ ಅರಿತನು ॥ ೨

ಜೋಗಿಯ ಕುಟಿಲಾಟ । ಯೋಗಿನಾಥನು ಅರಿತು ।
ಆಗ ಉರಿಗಂಣು ತೆರೆದನು–ಸಿದ್ಧಪತಿ
ಅಗ್ನಿನೇತ್ರದಿ ಹೋಮ ಹೊತ್ತಿಸಿ ॥ ೩

ಹೋಮ ಮಾಡುವ ಮಹಾ । ನೇಮಕ್ಕೆ ಅಡ್ಡಿತಂದ ಅ- ।
ಧಮನ ಮಾಟ ತಿಳಕೊಂಡ–ಶ್ರೀ ಸಿದ್ಧ-
ರಾಮನು ಅತಿ ಕೋಪಗೊಂಡನು ॥ ೪

ಸಿಟ್ಟೀಲಿ ಉರಿಗಂಣ । ಬಿಟ್ಟಾಗ ಸಿದ್ಧಪತಿ ।
ತಟ್ಟನೆ ಧಿಗಿಭುಗಿಲ್ ಧಿಗಿಲೆಂದು–ನೆಟ್ಟನೆ
ಸುಟ್ಟೀತು ಅಬ್ಬರದಿ ಜೋಗಿಯರ ॥ ೫

ನಾಲೀಗಿ ಚಾಚೂತ । ಬಲು ವೇಗದಿ ಹೊರಟ ।
ಜ್ವಾಲೆಯನು ಕಂಡು ಎನಿಸಿತು–ಧರೆಗೆ
ಕಾಲರುದ್ರನು ಬಂದನೇನೊ ॥ ೬

ಕೋವೂರ ತನಕಲೂ । ಜೀವಿಗಳಿಗೆ ಸುಡುತ ।
ಧಾವೀಸಿ ದಳ್ಳುರಿ ಪಸರೀಸಿ–ದಯೆ ದೋ-
ರೂತ ದೇವನು ಮರುಗಿದನು ॥ ೭

ಲೋಕ ಕಲ್ಯಾಣಕ- । ನೇಕ ಕರ್ಮವ ಮಾಡಿ ।
ಯಾಕೆ ಎನಗೀ ಕೋಪ ಬಂದೀತು–ನಿಷ್ಪಾಪಿ
ಲೋಕ ಜೀವಿಗಳ ಬಲಿದಾನ ॥ ೮

ಉರಿಯ ಬಾಯಲಿ ಸಿಕ್ಕ । ಚರಾಚರರಾಹುತಿ ।
ಕೊರಗೂತ ಕಂಡ ಸಿದ್ಧೇಶ–ಅಕಟಕಟ
ಘೋರ ಅಪರಾಧ ಘಟಿಸೀತು ॥ ೯

ಎಚ್ಚೆತ್ತು ಸಿದ್ಧರಾಮ । ಬೆಚ್ಚಿಬಿದ್ದನು ಆಗ ।
ಕಿಚ್ಚಿನೊಳು ಬೆಂದು ಬೆಂಡಾದ–ಜೀವಿಗಳ
ಎಚ್ಚರದಿ ಪೊರೆಯಲು ಅಣಿಯಾದ ॥ ೧೦

ದುಷ್ಟರ ಶಿಕ್ಷಿಸಲು । ಶಿಷ್ಟರ ಪಾಲಿಸಲು ।
ಇಷ್ಟದೇವ ಚೆನ್ನಮಲ್ಲನು–ಇರುತಿರೆ
ದುಷ್ಟ ಶಿಷ್ಟರ ಹೊಣೆ ನಮಗೇಕೆ ॥ ೧೧

ನೊಂದನು ಬೆಂದನು । ನಂದ ಮೂರುತಿ ಸಿದ್ಧ ।
ಇಂದುಧರನೀಗೆ ನೆನೆದನು–ಓ ತಂದೆ
ಮಂದಮತಿಗೆ ಸಲುಹೆಂದನು ॥ ೧೨

ಕರುಣೆಯ ನೋಟದ । ಕಿರಣವ ಬೀರೂತ ।
ಕರುಣಾಕರ ಸಿದ್ಧ ನೋಡೂತ–ಜೀವರು
ಹರಣ ತುಂಬಿ ಹರುಷಗೊಂಡರು ॥ ೧೩

ಸುಟ್ಟ ಊರವೆಲ್ಲ । ಪಟ್ಟಣಾಗಿ ಕಂಗೊಳಿಸಿ ।
ದಿಟ ಯೋಗಿಯ ಕಾರುಣ್ಯದಿ-ಹೊಸ
ಪುಟ ತಿರುವಿದಂತೆ ಕಂಡೀತು ॥ ೧೪

ನಿದ್ದೀಗಂಣಿನಿಂದ । ಎದ್ದು ಬಂದವರಂತೆ ।
ಸಿದ್ಧನ ಬಳಿಸಾರಿ ಬಂದರು–ಯೋಗೀಶ
ಬದ್ಧರಿಗೆ ಉದ್ಧರಿಸು ಎಂದರು ॥ ೧೫

ಜೋಗಿ ಜೋಗಿಣಿಯರು । ಯೋಗಿ ಮುಕ್ಕಂಣಿನಿಂದ ।
ಬೇಗೆಯಲಿ ಸುಟ್ಟು ಶುಚಿಯಾಗಿ-ನಮ್ಮದಿ
ಯೋಗಿವರಣ್ಯನೆ ಕಾಪಾಡೆಂದು ॥ ೧೬

ದುಷ್ಟತನದಿ ಬಲು । ಕಷ್ಟಕೊಡದಿರು ಜನಕೆ ।
ನಷ್ಟವಾಗೆ ಕುಟಿಲ ವಿದ್ಯೆಯು-ಮುಂದೆ
ಶ್ರೇಷ್ಠ ಶಿವನನ್ನು ಭಜಿಸಿರಿ ॥ ೧೭

ಸಿದ್ಧಪತಿ ನಿನ್ನಿಂದ । ಗೆದ್ದೆವು ಭವ ದುಃಖ ।
ಶುದ್ಧವಾದವು ನಮ್ಮ ತನುಮನ–ಎಂದನು
ವಿದ್ಯಾಸಾಗರ ಖರ್ಪರ ಜೋಗಿ ॥ ೧೮

ಭೂತೇಶ ನಿನ್ನಡಿಗೆ । ಸೋತು ಶರಣಾದೆವು ।
ಯತಿವರೇಣ್ಯನೆ ಭೂತಪ್ರೇಮಿ–ಸಿದ್ಧೇಶ
ಗತಿ ಮತಿ ನೀಡಿ ಸಲುಹೆಂದು ॥ ೧೯

ವಾದಿಸಲು ಬಂದವನು । ಪಾದಕ್ಕೆ ಎರಗಿದನು ।
ಸದಮಲ ಸಿದ್ಧೇಂದ್ರ ಶರಣೆಂದು-ಜೋಗಿಯು
ಮದವಳಿದು ಮುದದಿಂದ ಬೇಡಿದ ॥ ೨೦

ಜೋಗಿಗಳ ಉಪಚರಿಸಿ । ಯೋಗ ಕ್ಷೇಮವ ಕೇಳಿ ।
ಯೋಗಿ ಚಕ್ರವರ್ತಿ ಸಿದ್ಧರಾಮ–ಕಳುಹಿದ
ಜೋಗಿ ಖರ್ಪರನ ಪರಿವಾರ ॥ ೨೧

ಹಾಡೂತ ಹರಸೂತ । ಕೂಡಿ ಹೊರಟಿರುವಾಗ ।
ಕಾಡತನ ಕಳೆದನು ಸಿದ್ಧೇಶ-ಜಯವೆಂದು
ನೋಡೂತ ಜನ ಹರಿಸಿದರು ॥ ೨೨

ನೀಲಿಯ ಮೋಡಗಳು । ಓಲಾಡಿ ಬರುವವು ।
ಬಲು ಹರುಷದಿ ಕುಣಿವವು-ನವಿಲು
ನಲಿದಾಡಿದವು ಗರಿ ಪಸರಿಸಿ ॥ ೨೩

ಗಾಳಿ ಬೀಸಿತು ಆಗ । ಮಳೆಧಾರಿ ಮುತ್ತಿನಂಥ ।
ಇಳೆ ಮೇಲೆ ಸುರಿದವು ಸವನಾಗಿ–ಆನಂದ
ಬಳಿ ಸಾರಿ ಬಂದೀತು ಜನಕೆಲ್ಲ ॥ ೨೪

ನಿಶೆ ಬಂದು ಇಳಿದಾಗ । ಶಶಿ ಮುಖ ತೋರದೆ ।
ಮಶಿ ತೀಡಿ ಕಪ್ಪು ಕಂತೆಯ-ಲೇಪನ ಆ-
ಕಾಶದ ತುಂಬ ಆವರಿಸಿ ॥ ೨೫

ಕಪ್ಪು ಕುದುರೆಗಳಿಗೆ । ಒಪ್ಪೀತು ಕರಿ ರಥವು ।
ಕಪ್ಪು ಕಾಯದ ಸಾರಥಿಯು-ರಾತರಿ
ಕಪ್ಪು ಕಾರ್ಮೋಡವು ತುಂಬಿತ್ತು ॥ ೨೬

ಸಿದ್ಧನು ಹೊರಟನು । ಮಧ್ಯರಾತ್ರಿಯಲಿ ।
ಇದ್ದ ನೇಮವ ತೀರಿಸಲು-ಬೇಗನೆ
ಬಿದ್ದನು ಮಠದ ಹೊರಗಡೆ ॥ ೨೭

ಊರ ಸುತ್ತಿನ ಲಿಂಗದ । ದರುಶನ ಮಾಡಲು ।
ವೀರ ವ್ರತಿಸಿದ್ಧ ಹೊರಟನು-ಧ್ಯಾನವು
ಗುರು ಕಪಿಲಸಿದ್ಧಮಲ್ಲನದು ॥ ೨೮

ಕೋಲಮಿಂಚಿನ ಬೆಳಕು । ಲೋಲದಿ ನೋಡುತ ।
ಲೀಲೆಯ ಸ್ಮರಿಸ ಹತ್ತಿದನು-ಯೋಗೀಶ
ಮಲ್ಲನ ಭಜಿಸುತ ಕುಣಿದನು ॥ ೨೯

ಕಪ್ಪು ಪರದೆಯು ಹರಿದು । ಚಪಲ ಚಲುವೆ ತನ್ನ ।
ಬೆಪ್ಪಗೊಳಿಸಿ ಬೆಳಕು ತೋರುತ-ಅಡಗುತ
ಸಪ್ಪಳ ಮಾಡುತ ಓಡುವಳು ॥ ೩೦

ಧೀರ ಸಿದ್ಧಪತಿಗೆ । ವೀರವ್ರತ ಯೋಗಿಯ ।
ಮಾರಾರಿ ಕಂಡು ನಮಿಸಲು-ಬಂದಳು
ಮಿರಿಮಿರಿ ಮಿಂಚುತ ವಿದ್ಯುತ್ತಿ ॥ ೩೧

ಕಿಡಿಕಿಡಿ ಕೆದರೂತ । ಗುಡುಗೂತ ಬಂದಂಥ ।
ದುಡುಕಿನ ಮಿಂಚಿಗೆ ಕೋಪಿಸಿ-ಶಿವಸಿದ್ಧ
ಹಿಡಿದನು ಶಸ್ತ್ರದ ಕೊನೆ ಮೇಲೆ ॥ ೩೨

ನಿರಪರಾಧಿಗಳಿಗೆ । ತೋರ ಜೀವಿಗಳಿಗೆ ।
ಕ್ರೂರ ಕಟಕರಂತೆ ಕೊಲ್ಲುವ–ನಿನ್ನನು
ಸುರಗಿಯ ಮೊನೆಗೆ ಏರಿಸುವೆ ॥ ೩೩

ಪಾಪ ಕಳೆಯಲು ಬಂದೆ । ವಿಪರೀತ ಘಟಿಸಿತು ।
ಕೋಪಗೊಂಡ ಯೋಗಿ ನೀಗಿಸುವ–ಎನ್ನನು
ಮಾಪತಿ ಮೃತ್ಯುಹರ ಕಾಪಾಡು ॥ ೩೪

ಭುವಿಗಿಳಿದ ವಿದ್ಯುತೆಗೆ । ತವೆ ಚುಚ್ಚಿ ಶಸ್ತ್ರಕ್ಕೆ ।
ಶಿವಸಿದ್ಧರಾಮನು ಕೈಯಲಿ–ಹಿಡಿಯಲು
ಕವಿದ ಕತ್ತಲೆ ಆಗ ಕರಗೀತು ॥ ೩೫

ಚಂಚಲ ಚಲುವೆಯು । ಕೆಂಚು ಮಿಂಚಿನ ರಾಣಿ ।
ಸಂಚಲವಳಿದು ಕೈಯಲಿ–ಹೂವೀನ
ಗೊಂಚಲದಂತೆ ಒಪ್ಪುವಳು ॥ ೩೬

ಬಿರುಗಾಳಿ ಬಿಟ್ಟಾಗ । ತರತರದ ಹೂವುಗಳು ।
ಥರಥರ ನಡುಗೂತ ಗಾಬರಿ–ಆ ಪರಿ
ಪರನಿಗೆ ಕರೆದಳು ವಿದ್ಯುತ್ತೆ ॥ ೩೭

ಪೊರೆಯ ಬಾ ಎನ್ನ । ಪರಮ ಪಾವನ ದೇವ ।
ಮೊರೆಹೊಕ್ಕು ಬೇಡಿಕೊಂಬೆನು–ಬೇಗ ಬಾ
ಸುರಗಿಯ ಮೊನೆಯಿಂದ ಪೊರೆಯಲು ॥ ೩೮

ಸಿಡಿಲಿನ ಆರ್ತದ । ನುಡಿಕೇಳಿ ಶಿವನಾಗ ।
ಒಡನೆ ಬಂದು ಸಿದ್ಧಗೆ ಕೇಳಿದ–ಯೋಗಿಯೆ
ಬಿಡುಗಡೆ ಮಾಡು ವಿದ್ಯುತ್ತೆಗೆ ॥ ೩೯

ಮಿಡುಕುವ ಮಿಂಚಿಗೆ । ಮೃಡನವಲೋಕಿಸುತ ।
ಸುಡು ನಿನ್ನ ಯೋಗಾಭ್ಯಾಸವ–ಏ ಮರುಳೆ
ಬಿಡು ಬಿಡು ಮಿಂಚು ಬಯಲಿಗೆ ॥ ೪೦

ಅಪ್ಪಣೆ ಆಗುತಲೆ। ಒಪ್ಪಿವನು ಸಿದ್ಧಯೋಗಿ।
ಕ್ಷಿಪ್ರದಿ ಮಿಂಚಿಗೆ ಮುಕ್ತವ-ಮಾಡಿದ
ಸುಪ್ರಸಿದ್ಧ ಯೋಗಿವರೇಣ್ಯನು॥ ೪೧

ಪೊರೆಯಲು ಬಂದಿರುವಿ। ವರ ಸಿದ್ಧರಾಮನೆ।
ತರವಲ್ಲ ಈ ಪರಿ ಹಿಂಸೆಯು-ನೀ ಬಂದ
ಗುರಿ ಮರೆತು ಆಚರಿಸುವದೆ॥ ೪೨

ಬಡಜೀವಿಗಳಿಗೆ। ಒಡನೆ ಪ್ರಾಣವ ತಗೆವ।
ಸಿಡಿಲಿಗೆ ಶಿಕ್ಷಿಸಿ ಅಲಗಿಗೆ-ಚುಚ್ಚಲು
ಒಡಯನೆ ನನ್ನದು ತಪ್ಪೇನು॥ ೪೩

ಹಾಲಾಹಲ ವಿಷವು। ಕೊಲುವದು ಜಗಕೆಂದು।
ಲೀಲೆಯಿಂದ ನನ್ನ ಕೊರಳಲ್ಲಿ-ಧರಿಸಿದ್ದು
ಬಾಲಸಿದ್ಧ ನಿನಗೆ ತಿಳಿಯದೆ॥ ೪೪

ದಂಶಮಾಡಿ ಜೀವಕೆ। ಹಿಂಸಿಸುವ ಸರ್ಪಕ್ಕೆ।
ಧ್ವಂಸಮಾಡಿ ನಿರ್ನಾಮ ಮಾಡಿಲ್ಲ-ನನ್ನ
ಅಂಶಿಕ ಪೂಜೆ ಗೈಯುವವು॥ ೪೫

ಗರಳ ಕಂಠನೆಂದು। ಉರಗಕಂಕಣನೆಂದು।
ಕರೆವರು ಸುರಮುನಿ ಜನರು-ಸಿದ್ಧರಾಮ
ಮರವಿಗೆ ಮನವ ಕೊಡದಿರು॥ ೪೬

ಆಲಿಸು ಕರುಣಾಳು। ಪಾಲಿಸು ಶಿಶುವಿಗೆ।
ಕಲಿಸು ಬುದ್ಧಿಯ ಕಡೆತನ-ಓ ದೇವ
ಬಲಿಸು ಸುಜ್ಞಾನದ ಅಂಕುರ॥ ೪೭

ಚರಣವ ಪಿಡಿದನು। ಕರುಣೆಯ ಕೋರಿದನು।
ಶಿರಬಾಗಿ ಸಿದ್ಧನು ನಾಚುತ-ಕಂಣೀರ
ಧಾರೆ ಸುರಿಸಿದನು ಸವನಾಗಿ॥ ೪೮

ಮಳೆಧಾರೆ ಸುರಿವಾಗ। ಚಳಿಗಾಳಿ ತೂರುತಿರೆ।
ಇಳೆಗೆ ಬಂದೆಯಾ ಎನಗಾಗಿ-ಓ ತಂದೆ
ತಿಳಿಗೇಡಿಯ ತಪ್ಪು ಮನ್ನಿಸು॥ ೪೯

ಮಾಯಾರಹಿತ ಸಿದ್ಧ | ಭಯರಹಿತ ಭೂತೇಶ |
ಕಾಯದ ಕೈಯಲ್ಲಿ ಸುರಿಗೇಕೊ-ನೀನಿನ್ನು
ದಯವಮಾಡಿ ಸುರಗಿ ತಗೆದಿಡು || ೫೦

ಅಂಜಿಕೆ ನಿನಗೇಕೆ | ಸಂಜೆ ಮುಂಜಾವಿನದು |
ನಂಜುಂಡ ಎನ್ನ ಶಿಶುವೆ ನೀ-ಸಿದ್ಧೇಂದ್ರ
ಮಂಜು ಹರಿಯಲಿ ಅಜ್ಞಾನದ || ೫೧

ಭಕ್ತ ಮನಮಂದಿರದಿ | ಶಕ್ತಿ ಸಹಿತ ಶಿವನೆ |
ಮುಕ್ತಿ ನೀಡಲು ರಮಿಸುವನೆ-ಹೇ ದೇವ
ಭಕ್ತಿ ಯುಕ್ತಿ ಎಣಿಸದಿರಯ್ಯಾ || ೫೨

ಹೊಳೆವ ಕೆಂಜೆಡೆಯವ | ಹೇಳೂತ ಮಾಯವಾದ |
ಬಳಿಸಾರಿ ಬಂದನು ಚೆನ್ನನು-ಅಗಲಲು
ತಿಳಿಯದೆ ಮನವು ಬೆಂದೀತು || ೫೩

ಬೀಸಾಡಿದನಲಗಕ್ಕೆ | ಹೇಸಿ ನಿನ ಹಿಡಿಲಾರೆ |
ಅಸಮಾಕ್ಷನ ಮನಕೆ ನೋವಾಗಿ-ಬಂದನು
ವಸುಧಿಗೆ ಇಳಿದು ಇರುಳಲಿ || ೫೪

ಭಾಂಡಾಗಾರದೊಳು ಪ್ರ- | ಚಂಡ ಶಕ್ತಿಯ ಸಿದ್ಧನು |
ಚೆಂಡು ಎಸೆದಂತೆ ಎಸೆದನು-ಯೋಗಿಯು
ಕೆಂಡಗಂಣಿನ ಕರುಣಾಳು || ೫೫

ನಿತ್ಯದ ನೇಮದಂತೆ | ಮೆತ್ತನ ಮಾಪಾದಗಳು |
ಸುತ್ತಲು ಹೊರಟವು ಸೊನ್ನಲ-ಗ್ರಾಮವು
ಕತ್ತಲೆಯ ಗರ್ಭದಿ ಮಲಗಿತ್ತು || ೫೬

ಕರಿಯ ಬಂಣದ ನಾಯಿ | ಸೊರಗಿ ಸಂಣಾಗಿತ್ತು |
ಕಿರುದನಿಯಿಂದ ಕುಂಯಿಗುಟ್ಟಿ-ಬಂದು ತಾ
ಗುರುಚರಣಕ್ಕೆ ಉರುಳಿತು || ೫೭

ಮರೆವೆಂಬ ಕತ್ತಲೆಯು | ಪರಮನ ಪಾದ್ಹಿಡಿದು |
ಪರಿಪರಿಯಿಂದ ಮೊರೆಹೊಕ್ಕು-ಬೇಡಿತು
ಗುರುವೆ ಪಾವನವ ಮಾಡೆಂದು || ೫೮

ದಯಾಮಯ ದೇವನು । ನಾಯಿಯ ಮೈಮೇಲೆ ।
ಕೈಯ ಎಳೆದು ಕಂಣೀರು ತಂದನು–ಯೋಗಿ
ಕಾಯದ ಭೇದವ ಅಳಿದಾತ ॥ ೫೯

ನಾಯಿಗಿಂತಲು ಯಾವ । ಹೇಯ ಜನುಮಲ್ಲೆಂದು ।
ಬಾಯಿಂದ ಬಡಬಡಿಸುವರು–ಸದ್ಗುಣ
ಛಾಯೆಯಾಗಿರುವದು ಮರೆವರು ॥ ೬೦

ಡೊಂಕು ಬಾಲಿನ ನಾಯಿಯು । ಮುಂಕು ಸೊರಗಿದ ಮೈಯು ।
ಕಿಂಕುರವಾಣಿಯಲಿ ಕುಂಯಿಗುಡುತ–ಬಂದಿತು
ಶಂಕರನ ಶಿಶುವಿನ ಸಾನಿಧ್ಯ ॥ ೬೧

ಜೋತಾಡುವ ಕಿವಿಗಳು । ಸೋತು ಸಂಣಾದ ಕಾಯ ।
ರಾತರಿಯ ರೂಪ ಹೊದ್ದುಕೊಂಡು-ಬಂದೀತು
ಕತ್ತಲೆಗೂಡ ಒಂದಾಗಿತ್ತು ॥ ೬೨

ಮರವೆಯು ಎಂಬೂದು । ಕರಿನಾಯಿ ರೂಪದಿ ।
ಎರಗೀತು ಸಿದ್ಧನ ಪಾದಕ್ಕೆ–ಬೇಡೂತ
ಕರುಣಾಳು ಬೆಳಕು ತೋರೆಂದು ॥ ೬೩

ಉರುಳಾಡುವ ನಾಯಿಗೆ । ಕರದಿಂದ ಎತ್ತಿಕೊಂಡು ।
ಕರುಣಾಮೂರುತಿ ಮರುಗಿದ-ಪ್ರಾಣಿಗೆ
ಬೀರಿದನು ತನ್ನ ದಯೆದಿಟ್ಟಿ ॥ ೬೪

ಭೂತನಾಥನು ಅತಿ । ಪ್ರೀತಿಯಿಂದ ನಾಯಿಗೆ ।
ಮಾತನಾಡಿಸ ತೊಡಗಿದನು–ಕತ್ತಲೆ
ರಾತರಿ ಕಳೆದು ಬೆಳಗಾಯಿತು ॥ ೬೫

ಮೂಡಣ ದಿಕ್ಕವದು । ನೋಡ ನೋಡುತ ಕೆಂಪು ।
ಉಡುಗೆ ಉಟ್ಟು ಬಾಲರವಿಗೆ–ಜನುಮ
ಒಡನೆ ಕೊಟ್ಟಳು ಬಯಲೊಳು ॥ ೬೬

ಗೂಡಿನ ಹಕ್ಕಿಗಳು । ಮೂಡಣ ಬೆಳಗಿನಲಿ ।
ಜಾಡಿಸಿ ತಮ್ಮ ರೆಕ್ಕೆಗಳ-ಸುಮಧುರ
ಜೋಡಾಗಿ ಹಾಡಿದವು ದನಿಗೂಡಿ ॥ ೬೭

ಅರುಣಾಚಲದಿ ತನ್ನ । ಕರುಣೇಯ ಬೆಳಕನು ।
ಅರುಣ ನೀಡಿದನು ದಿನದಂತೆ–ಕಾಯಕಕೆ
ಧಾರುಣಿಯ ಪ್ರಾಣಿಯು ಅಣಿಯಾಗಿ ॥ ೬೮

ಸಕಲ ಚರಾಚರಕೆ । ಏಕೊಮುಖವಾಗಿ ನೋಡಿ ।
ಅಕಲಂಕ ನಿರ್ಮಲ ಮಹಾಯೋಗಿ-ನಾಯಿಗೆ
ನೂಕಿಲ್ಲ ತನ್ನ ಬಳಿಯಿಂದ ॥ ೬೯

ಬೆಳಗಿನ ಪೂಜೆಗೆ । ಮೊಳಗಿದ ವಾದ್ಯಗಳು ।
ಕೇಳದೆ ಹೋದವು ಕಿವಿಗಳು–ಭೂತೇಶ
ಕಳವಳಗೊಳ್ಳುತ ಕುಳಿತನು ॥ ೭೦

ಮಲ್ಲಿಕಾರ್ಜುನ ಪೂಜೆ । ಅಲ್ಲಿಯೆ ನಿಂತು ಹೋಯಿತು ।
ಬಲ್ಲಹನ ಬದಿಯಲ್ಲಿ ನಾಯಿಯು–ಬೀದಿಯಲಿ
ಎಲ್ಲ ಮರೆತು ಅಲ್ಲೆ ಕುಳಿತಿಹನು ॥ ೭೧

ನಾಯಿಯ ಮೈಮೇಲೆ । ಕೈಯುಗಳ ಆಡಿಸುತ ।
ಹೇಯಕಾಯದಿ ಮುಕ್ತನಾಗೆಂದು–ಸಿದ್ದೇಶ
ಜೀಯನ ಪಾದಕ್ಕೆ ಸೇರೆಂದನು ॥ ೭೨

ಗುಡ್ಡರೆಲ್ಲರು ಕೂಡಿ । ಓಡೋಡಿ ಬಂದಿಹರು ।
ನೋಡೂತ ಯೋಗಿಯ ಕಂಣೀರು–ಶಿಷ್ಯರು
ಒಡೆಯನ ದುಃಖಕ್ಕೆ ಬೆರಗಾಗಿ ॥ ೭೩

ಕರಿಯ ನಾಯಿಗೆ ಬೇಗ । ತರ್ರೆಂದನು ಶಿಷ್ಯರಿಗೆ ।
ಹರ ಮಲ್ಲಯ್ಯನ ದೇಗುಲಕೆ-ಪ್ರಸಾದ
ವರ ಪೂಜೆಗೈದು ಕೊಡುವೆನು ॥ ೭೪

ನಗಾರಿ ನೌಬತ್ತು । ಜಾಂಗೂಟೆ ಭೇರಿಗಳು ।
ಆಗ ಮೊಳಗಿದವು ವಾದ್ಯಗಳು-ನಿನಾದ
ಗಗನಕ್ಕೆ ಹೋಗಿ ಮುಟ್ಟೀತು ॥ ೭೫

ಸುಜನ ಸತ್‌ಪಥದ । ಸೋಜಿಗ ತೋರಲು ।
ಮೂಜಗದೊಡೆಯ ಮಲ್ಲಯ್ಯನ–ಭಜಿಸುತ
ಪೂಜಿಸಲು ಬಂದ ಗುಡಿಯೊಳಗೆ ॥ ೭೬

ನಿತ್ಯನೇಮಗಳಂತೆ । ಸತ್ಯವಂತ ಸಿದ್ಧರಾಮನು ।
ಉತ್ತುಮ ಮಲ್ಲೇಶನ ಪೂಜೆಯ–ಮಾಡೂತ
ಎತ್ತಿದ ಧೂಪಾರತಿ ಉಘೆ ಎಂದು ॥ ೭೭

ಉಘೆ ಎಂಬ ಶಬುದವು । ಸಾಗಿ ಎಲ್ಲೆಡೆಯಲ್ಲಿ ।
ಕೂಗಿತು ನಾಯಿಯೂ ಉಘೆ ಎಂದು–ದೈನ್ಯದಿ
ಬಾಗಿ ನಮಿಸಿತು ಭವಹರಗೆ ॥ ೭೮

ಮಲ್ಲಯ್ಯನ ಪರಸಾದ । ಎಲ್ಲರಿಗೂ ಹಂಚೂತ ।
ಬಲ್ಲಿಗೆ ಬಂದನು ನಾಯಿಯ-ಬಾಯಲ್ಲಿ
ಮೆಲ್ಲನೆ ಪ್ರಸಾದ ಹಾಕಿದನು ॥ ೭೯

ಮಡಿ ನೀನು ಎಂದು । ಒಡನೆ ನುಡಿದನು ಸಿದ್ಧ ।
ತಡವಿಲ್ಲದೆ ಮೈಮೇಲೆ ಕೈಯಾಡಿಸಿ-ನಾಯಿಗೆ
ಜಡಕಾಯ ಬಿಟ್ಟು ಜಯವಾಗು ॥ ೮೦

ಕರಿಯ ನಾಯಿಯ ಕಾಯ । ಬರಿದಾಗಿ ಭೂಮಿಗೆ ।
ಎರಗಿತು ಪ್ರಸಾದಮಯವಾಗಿ-ನೋಡೂತ
ಬೆರಗಾದರು ಕೂಡಿದ ಜನವೆಲ್ಲ ॥ ೮೧

ಹಿಂದಣ ಜನುಮದ । ಬಂದ ದೋಷರಾಶಿಯು ।
ಇಂದಿಗೆ ನಾಶವಾಯಿತು ನಿನ್ನ-ಮಹಿಮೆಯ
ಮಂದಮತಿಯರು ಅರಿಯರು ॥ ೮೨

ಮನುಜನಾದರೇನು । ಹೀನಗುಣವುಳ್ಳನಕ ।
ಶ್ವಾನನಗಿಂತ ಕರಕಷ್ಟ–ಕಾಣಿರೊ
ಗ್ಯಾನವಂತರೆ ನೀವು ಅರಿಯಿರಿ । ೮೩

ಯಾಕೆ ಈ ಪರಿ ನೀನು । ಮೂಕಾಗಿ ಬಳಲಿದಿ ।
ಸಾಕಾಯಿತೇನು ಈ ಭುವಿಯು–ಉಘೆಕಾಳ
ಯಾಕೆ ಗುಡಿ ಬಿಟ್ಟು ಹೊರಟೇದಿ ॥ ೮೪

ಮಲ್ಲೇಶನ ಪ್ರಸಾದ । ಸಲ್ಲಿಸಿ ಹೊರಟಿರುವಿ ।
ಉಲ್ಲಸದಿ ಉಘೆ ಉಘೆ ಎಂದು–ಉಘೆಕಾಳ
ಸೊಲ್ಲು ಅಡಗಿತೆ ಮಲ್ಲನಲಿ ॥ ೮೫

ಶಾಪ ವಿಮೋಚನೆಯ । ರೂಪತಾಳಿತು ದಿವ್ಯ ।
ವಿಪರೀತ ನೋಡಿತು ಜನವೆಲ್ಲ-ಯೋಗಿಯೆ
ಕಾಪಾಡು ಎಂದನು ಗಂಧರ್ವನು ॥ ೮೬

ವಿನಯ ಭಕ್ತಿಯಿಂದ । ತನು ಸೂರೆಗೊಂಡೀತು ।
ಮನಮುಟ್ಟಿ ಪಾದವ ಪಿಡಿದನು-ಗಂಧರ್ವ
ಘನ ಗುರು ಸಿದ್ಧರಾಮಯ್ಯನ ॥ ೮೭

ಸುಂದರಾಂಗನೆ ನೀನು । ಬಂದ ದಾರಿಲಿ ಮರಳಿ ।
ಇಂದುಧರನ ದರುಶನ-ಪಡಕೋಳೊ
ಮಂದಹಾಸದಿ ಸಿದ್ಧ ಎಂದನು ॥ ೮೮

ಗುರು ಸಿದ್ಧರಾಮನ್ನ । ಚರಣಕ್ಕೆ ಎರಗೂತ ।
ಪರಿಮಳಕ್ಕೆರಗುವ ತುಂಬಿಯ-ಪರಿಯಂತೆ
ಕರುಣೆಯ ಕಾಸಾರದಿ ಮುಳುಗಿದ ॥ ೮೯

ಜಯಜಯತು ಸಿದ್ಧೇಶ । ಕಾಯವಿದುರ ದೇವ ।
ಹೇಯ ಪಾವನ ಗೈದವನೆ-ಎನ್ನುತ
ರಾಯ ಗಂಧರ್ವ ತೆರಳಿದನು ॥ ೯೦

ಕೇಳಿರೊ ಶಿಷ್ಯರೆ । ಗೋಳ ನಾಯಿಯ ಜನ್ಮದ ।
ವೇಳೆ ಬಲು ಕೆಟ್ಟ ಬಂದೀತು-ಗಂಧರ್ವಗೆ
ಭೋಳಾಸಾಂಬನ ಸಭೆಯೊಳು ॥ ೯೧

ದೇವ ದೇವತೆಗಳು । ಭಾವಭಕ್ತಿಯಲಿ ಬಂದು ।
ಸೇವೆಗೈಯುತಿರೆ ಶಿವನಿಗೆ-ಗಂಧರ್ವ
ಧಾವಿಸಿ ಬಂದು ಶರಣೆಂದನು ॥ ೯೨

ಭೋಗವಾಸನು ಬಂದು । ನಾಗಭೂಷಿತನಿಗಾಗ ।
ಬಾಗಿ ಸಾಷ್ಟಾಂಗವೆರಗಲು-ಕಾಲುಗಳು
ಉಗ್ರಮುಖನಿಗೆ ತಾಗಿದವು ॥ ೯೩

ಗಂಧರ್ವನೆ ನೀ ಬಲು । ಅಂಧಮದದಿ ಬಂದು ।
ಹಿಂದು ಮುಂದೇನು ನೋಡದಲೆ-ಗಣಕೆ
ಚಂದೇನು ಕಾಲು ಬಡಿಸುವದು ॥ ೯೪

ಕೋಪಾಗ್ನಿ ಕಂಗಳೊಳು । ರೂಪತಾಳಿತು ಕೆಂಪು ।
ಕೋಪದಿ ಕಾಯವು ನಡುಗಿತ್ತು-ಉಗ್ರಮುಖ
ಶಾಪವಿತ್ತನಾಗ ಸಭೆಯೊಳು ॥ ೯೫

ಕೊಡುವೆನು ನಿನಗಾನು । ಕಡುಶಾಪ ಏ ಮರುಳೆ ।
ಮಾಡಿದಿ ಅವಮಾನ ಶಿವಗಣಕೆ-ಧರೆಯಲಿ
ಬಡ ಕರಿನಾಯಿಯಾಗಿ ಜನಿಸು ॥ ೯೬

ಗುಡುಗಿನ ಮಾತುಗಳು । ಬಡೆದವು ಸಿಡಿಲಾಗಿ ।
ನಡುಗಿದನು ಗದಗದ ಭೋಗವಾಸ-ಗಣನ
ಅಡಿ ಹಿಡಿದು ಬೇಡಿಕೊಂಡನು ॥ ೯೭

ಶಿವಗಣರ ಅವಮಾನವು । ಯಾವ ಕಾಲದಿ ನಾನು ।
ಭವದಲಿ ಕೂಡ ಬಯಸಿಲ್ಲ-ಬಲ್ಲೆನು
ಶಿವನಿಂ ಅಧಿಕರು ಭಕ್ತರು ॥ ೯೮

ಬಿಡುವೊ ಬಂಣದ ಮಾತು । ಕಾಡುಕೋಣನ ಸೊಕ್ಕು ।
ಕೆಡಗಾಲಕೆ ಬಂದು ಒದಗಿತ್ತು-ಹೋಗಿನ್ನು
ಜಡಕಾಯ ತೊಟ್ಟು ಮರ್ತ್ಯಕ್ಕೆ ॥ ೯೯

ಸಂಧಿ ೧೫

ಶಿವನ ಸಭೆಗೆ ಬಂದು । ಭವಬಾಧೆಗೊಳಗಾಗಿ ।
ಭುವಿಯೊಳು ಹುಟ್ಟಿ ಬರಬೇಕೆ-ಬೇಡುವೆ
ವಿವೇಕದಿ ನೀಡು ಉಶಾಪವ ॥ ೧

ತಟ್ಟನೆ ಎದ್ದು ಹೋದ । ಸಿಟ್ಟಿನ ಗಣನಾಥನ ।
ನಟ್ಟಿದಗಂಣಿಂದ ನೋಡೂತ-ಸಭೆಯು
ತಟಸ್ಥವಾಗಿ ಕುಳಿತಿತ್ತು ॥ ೨

ಅಘೋರ ಮುಖದಿಂದ । ಉಗ್ರರೂಪವ ತಾಳಿ ।
ಶೀಘ್ರದಿ ಬಂದು ಉಗ್ರನಾಥನು–ಕೊಟ್ಟಂಥ
ಬೇಗ ಶಾಪದಿ ಮುಕ್ತ ಮಾಡಯ್ಯ ॥ ೩

ಭುವಿಯೊಳು ಸೊನ್ನಲಗಿ । ಅವಿಮುಕ್ತ ಕ್ಷೇತ್ರದಿ ।
ದೇವ ಮಲ್ಲೇಶನ ಪ್ರಸಾದ-ನನ್ನಿಂದ
ಸೇವಿಸಿ ಮುಕ್ತನಾಗೆಂದ ಶಿವನು ॥

DECCAN HERALD
TO BE RETURNED
WITH REVIEW

ಶಿವನ ಆಣತಿಯಂತೆ | ಭುವಿಯೊಳು ಜನಿಸಿದ |
ದೇವಲೋಕದ ಗಂಧರ್ವನು-ಪ್ರಸಾದ
ಸೇವಿಸಿ ಇಂದು ಮುಕ್ತನಾದನು || ೫

ಭೋಗವಾಸದ ಜನನ | ಯೋಗಿಯು ಹೇಳುತ |
ಈಗಾದನು ನಾಯಿಜನುಮದಿ-ಮುಕ್ತನು
ಭೋಗ ಸರಿಯಿತೆಂದು ಕರ್ಮದ || ೬

ತಿಳಿಯದೆ ತಪ್ಪಿದರು | ಇಳಿದನು ಇಳೆಮೇಲೆ |
ತಾಳಿದನು ನಾಯಿಯ ಜನ್ಮವ-ಹರಹರ
ಗೋಳಬೇಡ ದೇವಲೋಕದ || ೭

ದೇವಲೋಕವು ಇಲ್ಲಿಯೆ | ಸೇವೆ ಮಾಡುವ ಅಲ್ಲಿದೆ |
ಧಾವತಿ ಬಿಡರಿ ಜಡತನದ-ಗುಡ್ಡರೆ
ದೇವಭಕ್ತರಾಗಿ ಬಾಳಿರಿ || ೮

ತೊಟ್ಟಿರುವ ದೇಹಕ್ಕೆ | ಕೊಟ್ಟಿಲ್ಲ ಬೆಲೆಯನು |
ದಿಟ್ಟಪಾವನರಾದ ಪುಣ್ಯಾತ್ಮರು-ಜಗದಿ
ದಿಟ್ಟಿಸಿ ನೋಡುವರು ನಿಜರೂಪ || ೯

ದಿಟಯೋಗಿ ನಿನ್ನಲ್ಲಿ | ಹುಟ್ಟಿನ ಭೇದವಿಲ್ಲ |
ಕೊಟ್ಟು ಪ್ರಸಾದವನು ಪಾವನ-ಮಾಡಿದಿ
ಕೆಟ್ಟ ನಾಯಿಯ ಜನ್ಮ ಕಳೆದಿದಿ || ೧೦

ಮೂರು ಕಾಲವರಿತ | ಗುರುಗಳ ಮಹಿಮೆಯು |
ಪರಿಪರಿಯಿಂದ ಬಂಣಿಸುತ-ಭಕ್ತರು
ಪರಮಾವತಾರಿ ಹರನೆನ್ನುತ || ೧೧

ಹರಹರ ಮಹಾದೇವ | ಗಿರಿಮಲ್ಲಿನಾಥನೆ |
ಸುರಾಸುರವಂದಿಪ ದೇವನೆ-ಪೊರೆಯೊ
ಚರಾಚರ ಸಕಲ ಜೀವಿಗೆ || ೧೨

ನುತಿಸುತ ಸಕಲರು | ಅತಿ ಬಕುತಿಯಿಂದಲಿ |
ಗತಿಮತಿ ಹಿತನು ನೀನೆಂದು-ಬೇಡೂತ
ಶಿತಿಕಂಠ ಶರಣು ಶರಣೆಂದು || ೧೩

ಚಾಂಗುಭಲ ಉಘೆಯೆಂಬ । ಮಂಗಲಮಯ ಮಂತ್ರ ।
ಇಂಗಿತವರಿದು ಕೂಗಿದ-ನಿನಾದದಿ
ಕಂಗೊಳಿಸಿದನು ಮಲ್ಲೇಶ ॥ ೧೪

ಮಲ್ಲಯ್ಯ ಉಘೆ ಎಂದು । ಸಲ್ಲಸಲ್ಲಿಗೆ ನುತಿಸಿ
ಬಲ್ಲ ಭಕ್ತರನು ಗುಡಿ ತುಂಬ-ಕಂಡನು
ಸಲ್ಲಲಿತ ಸಿದ್ಧರಾಮೇಶ ॥ ೧೫

ಶಿವಹರ ಶಂಕರ । ಭವಹರ ಭೂತೇಶ ।
ಭುವಿ ಜೀವಿಗಳಿಗೆ ಉದ್ಧಾರ-ಮಾಡುವ
ದೇವ ಸಿದ್ಧಪತಿಯೆ ಶರಣೆಂಬೆ ॥ ೧೬

ಒಡವೆ ವಸ್ತುಗಳೆಲ್ಲ । ಮುಡಗಿಡಲೇತಕೆ ।
ಬಡತನದ ಬಾಳು ಬಲು ಕೆಟ್ಟ-ನಾವೆಲ್ಲ
ದುಡಿದರೂ ಸಂಸಾರಕೆ ಸಾಲದು ॥ ೧೭

ಒಡವೆಗಳೆಲ್ಲವ । ತಡಮಾಡದೆ ದಾಯಾದಿ ।
ದುಡ್ಡು ಕೊಡಿಸಲು ಬಿಲ್ಲೇಶಗೆ-ಕೊಟ್ಟನು
ಬಡವನ ಬೆವರಿನ ವಸ್ತುಗಳು ॥ ೧೮

ದುಡ್ಡಿನ ಬಡ್ಡಿಹಚ್ಚಿ । ಕೊಡಿಸುವೆ ನಾ ನಿನಗೆ ।
ಬಿಡು ಬಡತನದ ಚಿಂತೆಯ-ನಿಮ್ಮ
ಒಡವೆಗಳೆಲ್ಲ ಜತನ ಮಾಡುವೆ ॥ ೧೯

ಹಿಗ್ಗೂತ ಹರಸೂತ । ಬಗ್ಗಿ ನಮಿಸಿದನಾಗ ।
ಸುಗ್ಗಿಕಾಲದಕ್ಕಿಂದ ಹರುಷದಿ-ಮುಂದೆ
ವೆಗ್ಗಳ ದುಡ್ಡು ಕಂಡು ಕಂಡಿತು ॥ ೨೦

ಹೊಟ್ಟೆ ತುಂಬ ರೊಟ್ಟಿ । ಬಟ್ಟೆಬರೆ ಮೈಮೇಲೆ ।
ಕೆಟ್ಟ ಬಡತನದಿ ದೂರಾಗಿ-ಬೊಮ್ಮನ
ದಿಟ್ಟಿಯು ನಮ್ಮೇಲೆ ಬಿದ್ದಿದೆ ॥ ೨೧

ಕತ್ತಲೆಯ ರಾತ್ರಿಯಿದು । ಮೆತ್ತಗೆ ನಡೆಯಣ್ಣ ।
ಕುತ್ತಿಗಿ ಹಿಚಕ್ಯಾರು ಕಳ್ಳರು-ನಿನಗೆ
ಪತ್ತೆ ಇಲ್ಲದಂತೆ ಮಾಡುವರು ॥ ೨೨

ದೇವರಂಥವ ನೀನು । ಧಾವಿಸಿ ಬಂದಿರುವಿ ।
ಯಾವ ಜನುಮದ ಪುಣ್ಯವು-ಬೊಮ್ಮಣ್ಣ
ಬೇವಿನ ಸಂಸಾರ ಸವಿಯಾಯ್ತು । ೨೩

ಬಂದಿಹನು ಭರದಿಂದ । ಮಂದಹಾಸದಿ ದಾಯಾದಿ ।
ಚಂದ ಮಾತ್ಹೇಳಿ ಮನೆಯಲ್ಲಿ-ಬಿಲ್ಲೇಶ
ತಂದೆಯಾಗಿ ಬಂದನು ನಮಗೆಲ್ಲ ॥ ೨೪

ಒಡವೆ ನೋಡಿದನಾಗ । ಕಡು ಆಶೆಪಟ್ಟಾನ ।
ದುಡಿಯದೆ ಬಂದ ಒಡವೆಯ-ಪಂಚೆಯ
ಉಡಿಯಲಿ ಕಟ್ಟಿದ ಬಿಲ್ಲೇಶನು ॥ ೨೫

ರಗುತಿನ ಸಂಬಂಧ । ಯುಗತಿಲಿ ಬಳಸಿದ ।
ಹಗಲು ನೋಡ್ಯಾರು ಜನರೆಂದು-ಬಿಲ್ಲೇಶ
ಮಿಗೆ ನಸುಕಿನೊಳು ಹೊರಟನು ॥ ೨೬

ದುಡಿಯದೆ ಬಂದಿರುವ । ಒಡವೆ ವಸ್ತುಗಳೆಲ್ಲ ।
ತಡ ಮಾಡದೆ ಮಾರಿಕೊಂಡನು-ಬಂದ ಹಣ
ಕಡೆಗೆ ಹಚ್ಚಲು ಅಣಿಯಾದನು ॥ ೨೭

ದುಷ್ಟರ ರೀತಿಗಳ । ಎಷ್ಟಂತೆ ಬಂಣಿಪುದು ।
ಶಿಷ್ಟರಂತೆ ಮಾತನಾಡೂತ–ಜನರನ್ನು
ಕಷ್ಟಕ್ಕೆ ಈಡು ಮಾಡಿಡುವರು ॥ ೨೮

ಏಸೊಂದು ಜನಕೆಲ್ಲ । ಮೋಸ ಮಾಡುತಲಾತ ।
ಏಸೇಸು ಊರ ತಿರಗೂತ–ಕಡೆಗೊಮ್ಮೆ
ಬೇಸರಿಸಿ ಸೊನ್ನಲಗಿ ಹೊಕ್ಕನು ॥ ೨೯

ದೇವ ಸಿದ್ಧರಾಮನೆ । ಭವರೋಗ ವೈದ್ಯನೆ ।
ಭುವಿಯೊಳು ನಿನ್ನ ಹೊರತ್ಯಾರು–ಇಲ್ಲೆಂದು
ಸವಿನಯ ಸಾಷ್ಟಾಂಗ ಹಾಕಿದನು ॥ ೩೦

ಬೆಂದು ಬಂದಿರುವ ಈ । ಕಂದನ ಸಲುಹಯ್ಯ ।
ಇಂದುಧರನ ಪರಮಾವತಾರಿ-ಸಿದ್ಧೇಶನೆ
ಬಂದಿರುವೆ ಚರಣಕ್ಕೆ ಎಂದನು ॥ ೩೧

ಪರಧನ ಬಳಿಸಿದ । ನರರೊಳಧಮನೀತ ।
ಚರಿಸೂತ ಬಂದನು ಮಲ್ಲನ-ಬಳಿಗೆ
ಪರಮಪಾವನ ಮಾಡಬೇಕು ॥ ೩೨

ದೇವಲೋಕದವರು । ಭುವಿಗಿಳಿದು ಬಂದರು ।
ಸೇವೆಗೈದು ಶಾಪಮುಕ್ತರು- ಆ ಪರಿ
ಭಾವ ಪಲ್ಲಟ ಈತನದಾದೀತು ॥ ೩೩

ಸದಯ ಸಿದ್ಧೇಂದ್ರನು । ಮುದದಿಂದ ನುಡಿದನು ।
ಹೃದಯ ಪಲ್ಲಟ ಮಾಡಿಕೊಳೊ-ಹುಟ್ಟಿನ
ಉದಯವಾಗಲಿ ಹೊಸತನದ ॥ ೩೪

ದಯೆ ಇಲ್ಲದ ಮನುಜ । ನಯವಿಲ್ಲದ ವಾಣಿಯು ।
ಕ್ರಿಯೆ ಇಲ್ಲದ ಜ್ಞಾನ ನಿಜವಲ್ಲ-ಕಾಣಿರೊ
ಮಾಯೆ ಎಂಬದು ಜಗವು ದಿಟವಲ್ಲ ॥ ೩೫

ಬಿಲ್ಲೇಶ ಬೊಮ್ಮನಿಗೆ । ಬಲ್ಲ ಬೋಧವ ಕೊಟ್ಟು ।
ಇಲ್ಲೆ ಇರು ಎಂದು ಅಪ್ಪಣೆ-ಮಾಡಿದನು
ಕ್ಷುಲ್ಲಕತನವಳಿ ಎಂದ ಸಿದ್ಧನು ॥ ೩೬

ಗುಡ್ಡರಂತೆ ಬೊಮ್ಮನು । ಉಡುಗರೆಯ ಉಟ್ಟನು ।
ಒಡೆಯ ಸಿದ್ಧೇಶನ ಸೇವೆಗೆ-ಅಣಿಯಾದ
ಒಡಲಿನ ಗುಣಗಳು ಕಳೆದಿಲ್ಲ ॥ ೩೭

ನಟಿಸೂತ ವಿನಯದಿ । ದಿಟತನವ ತೋರೂತ ।
ಕುಟಿಲತನಕ್ಕೆ ಭಕ್ತಿ ಆವರಣ-ಹೊದ್ದು
ಆಟವಾಡಲು ವೇಷ ಹಾಕಿದನು ॥ ೩೮

ತೋರಿಕೆಯಲಿ ಜಾಣನು । ಕರಮುಗಿದು ಬಾಗೂತ ।
ಪರಮ ಶಿಷ್ಯರಂತೆ ನಟಿಸೂತ-ಬಿಲ್ಲೇಶ
ಮರುಳ ಮಾಡಿದನು ಸಕಲರ ॥ ೩೯

ಕಾಗಿಯ ಮೈಯಬಂಣ । ಕೋಗಿಲೆಯಂತಿರಲು ।
ಕೂಗೀತೆ ಮಧುರ ಸ್ವರದಿಂದ-ಹುಟ್ಟೇನ
ಸಾಗಿ ಬಂದಿರುವ ಗುಣಧರ್ಮ ॥ ೪೦

ದಿನಕಳೆದು ಹೋದಂತೆ । ಮನದಂಜಿಕೆ ದೂರಾಗಿ ।
ಮನೆಮನೆ ತಿರುಗಾಡ ಹತ್ತಿದನು-ಬಿಲ್ಲೇಶ
ಮನಮುಟ್ಟಿ ಸೇವೆ ಮರೆತನು ॥ ೪೧

ಮೆತ್ತಗೆ ಮಾತನಾಡಿ । ಉತ್ತುಮನಂತಿರುವನು ।
ಕತ್ತು ಕೊಯ್ಯಲು ಧೂರ್ತನೀತನು–ಕುಹಕ
ಗತ್ತುಗಾರಿಕೆ ಯಾರು ಅರಿಯರು ॥ ೪೨

ಸಿದ್ಧೇಶನ ಸೇವೆಯಲಿ । ಇದ್ದಾನೆಂಬುವ ನಿಜ ।
ಸುದ್ದಿ ಕೇಳಿದ ದಾಯಾದಿಗಳು-ಎಲ್ಲರು
ಸದ್ದು ಇಲ್ಲದಲೆ ಬಂದಿಹರು ॥ ೪೩

ನಡು ಬೀದಿಯಲಿ ಬೊಮ್ಮ । ಗಡಿಬಿಡಿ ಹೊರಟಾಗ ।
ತಡವೂತ ದಾಯಾದಿಗಳಾಗ-ಸೌಮ್ಯದಿ
ಬೇಡಿದರು ಕೊಟ್ಟೀದ ದ್ರವ್ಯವ ॥ ೪೪

ಬೆಚ್ಚಿಬಿದ್ದು ನುಡಿದನು । ಅಚ್ಚರಿಗೊಳ್ಳುತಲಿ ।
ಎಚ್ಚರ ತಪ್ಪೀತೆ ನಿಮಗೆಲ್ಲ–ಮರುಳರೆ
ಯೋಚಿಸಿರಿ ಯಾರಿಗೆ ಕೊಟ್ಟದ್ದು ॥ ೪೫

ಬಿಲ್ಲೇಶನ ಬಾಯಿಂದ । ಹೊಲ್ಲ ನುಡಿಗಳ ಕೇಳಿ ।
ಎಲ್ಲರು ಬೆರಗುಗೊಂಡರು–ಬಿಲ್ಲೇಶಗೆ
ಮೆಲ್ಲನೆ ಮತ್ತೊಮ್ಮೆ ಕೇಳಿದರು ॥ ೪೬

ನಿಮ್ಮ ಒಡವೆ ವಸ್ತು । ಒಮ್ಮೆಯಾದರು ನೋಡಿಲ್ಲ ।
ಕೆಮ್ಮನೆ ಕೆಟ್ಟೀನೋ ಈ ಪರಿ–ನಾ ನಿಮ್ಮನು
ಸುಮ್ಮನೆ ಬಿಡಲಾರೆ ಎಂದನು ॥ ೪೭

ಆಚಾರದಲಿ ನಾನು । ಶುಚಿಯಾಗಿ ಇರುವೆನು ।
ಅಚಲಿತ ಎನ್ನ ಬುದ್ಧಿಮನ-ಇರಲು
ನಾಚಿಕೆ ಬಾರದೆ ಕೇಳಲು ಎನ್ನ ॥ ೪೮

ಬಿಡು ನಿನ್ನ ಬೂಟಾಟ । ಸುಡು ನಿನ್ನ ಈ ವೇಷ ।
ಕೊಡು ನಮ್ಮ ವಸ್ತ್ರ ಒಡವೆಗಳ–ಸುಮ್ಮನೆ
ಬಡಬಡಿಸ ಬೇಡಲೊ ಬೊಮ್ಮನೆ ॥ ೪೯

ನಿಮ್ಮ ಒಡವೆಗಳನ್ನು । ಒಮ್ಮೆಯು ಹಿಡಿದಿಲ್ಲ ।
ಸ್ವಾಮಿ ಮಲ್ಲೇಶನು ಕೊಟ್ಟಿರುವ–ಧನವ
ನೇಮ ನಿತ್ಯಕೆ ನಾ ಸಲಿಸಿದೆ ॥ ೫೦

ಬಡವರ ಬಾಯ್‌ಬಡೆದು । ಮೃಡನಿಗೆ ತೋರೂತ ।
ಬಡಿವಾರದ ಮಾತು ಹೇಳದಿರು–ಬೊಮ್ಮಾ
ಬಿಡಲಾರೆವು ನಾವಿನ್ನು ನಿನ್ನನು ॥ ೫೧

ಇಲ್ಲದ ಧನವಿಂದು । ಎಲ್ಲಿಂದ ತರಲ್ಹೇಳು ।
ಸಲ್ಲದ ಮಾತುಗಳಾಡಿದರೆ-ನೀಗುವೆ
ಕಲ್ಲೀಲೆ ಹೊಡಕೊಂಡು ಪ್ರಾಣವ ॥ ೫೨

ದುಡ್ಡು ಬೇಡಿದರೆ ನೀ । ದಡ್ಡನಂತೆ ವರ್ತಿಸುವಿ ।
ಗುಡ್ಡರ ವೇಷವಿದು ಸಲ್ಲದು-ಏ ಪಾಪಿ
ಸುಡು ನಿನ್ನ ಕೋಪದಾವೇಶವ ॥ ೫೩

ದೊಡ್ಡವರ ಬೆಲೆ ಇಲ್ಲ । ಗುಡ್ಡರಿಗೆ ಬಯ್ಯುವರೆ ।
ನೋಡಿರೊ ಕೇಳಿರೊ ಅಣ್ಣಂದಿರೆ-ನಾನಿವರ
ಬಿಡಲಾರೆ ಪ್ರಾಣ ತೆಗೆಯದಲೆ ॥ ೫೪

ಕೋಪದ ಅತಿರೇಕ । ರೂಪಗೊಂಡಿತು ಆಗ ।
ವ್ಯಾಪಿಸಿತು ಕೋಪದ ಒದರಾಟ–ಜನರು
ವಿಪರೀತ ಘಟಿಸದಿರಲೆಂದರು ॥ ೫೫

ಹಣ ಬೇಡ ಮಹಾರಾಯ । ರುಣದೊಳಗೆ ಹೋಗಿನ್ನು ।
ಗುಣ ಕಳೆದು ಕೊಳ್ಳುವೆವಿನ್ನು–ನಾವು
ದಣಿದೆವು ನಿನ್ನನು ಬೇಡಿ ಬೇಡಿ ॥ ೫೬

ಹಣ ವೆಚ್ಚವಾಯಿತು । ದಣಿದೇವು ಬಂದು ಇಲ್ಲಿ ।
ಸಂಣತನವ ನಮ್ಮ ಉಡಿಯಲ್ಲಿ–ಕಟ್ಟಿಕೊಂಡು
ಪುಣ್ಯದ ಈ ಊರು ಬಿಡುವೆವು ॥ ೫೭

ಪರಧನ ಕಿತ್ತುಕೊಂಡು । ಊರು ಬಿಟ್ಟು ಓಡಿ ಬಂದು ।
ವರ ಭಕ್ತನಂತೆ ನಟಿಸೂತ–ಮೋಸ ಮಾಡಿ
ನರಕಕ್ಕೆ ನೀನು ಗುರಿಯಾದೆಯಾ ॥ ೫೮

ಗುರು ಸಿದ್ಧರಾಮನ । ವರ ಶಿಷ್ಯರಿಗೆ ಬಯ್ದು
ಊರಿಗೆ ಹೋಗುವಿರಾ ನೀಚರೆ-ನಿಮಗೆ
ಹರ ಭಕ್ತರಾಣೆ ಹೆಜ್ಜೆ ಇಟ್ಟರೆ ॥ ೫೯

ಚಿತ್ತ ಭ್ರಷ್ಟನು ನಮಗೆ । ವಿತ್ತವ ಕೊಡದಲೆ ।
ಉತ್ತುಮಾಂಗನ ಭಕ್ತರಾಣೆ–ಇಟ್ಟರೆ
ಸತ್ಯಕ್ಕೆ ಬೆಲೆ ಇಲ್ಲದಂತಾಯಿತು ॥ ೬೦

ಗೊಳಾಡಿ ಗುಡುಗಿದರು । ಕಳವಳಗೊಳ್ಳುತ ।
ಕೇಳವರು ಯಾರು ಇಲ್ಲಿಲ್ಲವೆ-ಈ ಠಕ್ಕ
ಕೀಳು ಜನರ ಮಾತು ಮೆಲಾಯ್ತು ॥ ೬೧

ಕೂಡಿದ ಜನಗಳೆ । ನೋಡಿರಿ ಇವರಾಟ ।
ಒಡೆಯ ಸಿದ್ಧನ ಮಹಿಮೆಯು–ಗೊತ್ತಿಲ್ದೆ
ಬಡಬಡಿಸುವರು ಮದವೇರಿ ॥ ೬೨

ಹೊಡೆಯಿರಿ ಇವರಿಗೆ । ಬಡಿಯರಿ ಮೈತುಂಬ ।
ನಡೆಯಲು ಬಾರದಂತೆ ಮಾಡಿ–ತೋರಿರಿ
ಮೃಡನವತಾರಿಯ ಮಹಿಮೆಯನು ॥ ೬೩

ಜ್ಞಾನ ಹೀನನ ಮಾತು । ಏನೇನು ತಿಳಿಯದೆ ।
ಮೌನ ತಾಳಿತು ಅಗ ಜನವೆಲ್ಲ–ಬಿಲ್ಲೇಶ
ಶ್ವಾನಿನಂತೆ ಬೊಗಳುತಿಹನು ॥ ೬೪

ಸಿದ್ಧೀಗೆ ತವರೂರು । ಶುದ್ಧಾಚಾರದ ಈ ಊರು ।
ಬಿದ್ದು ಹೋಯಿತೆ ದಿಟಮಾತು–ಎಂದು
ಬೀದಿಯಲಿ ನಿಂತು ಗೋಳಿಟ್ಟರು ॥ ೬೫

ಸಿದ್ಧರಾಮನ ಕಿವಿಗೆ । ಬಿದ್ದಿತು ಈ ಮಾತು ।
ಬುದ್ಧಿ ಹೇಳಿದರೂ ತನ್ನ ಗುಣ-ಬಿಡದ
ಮದ್ದಾನೆ ಬೊಮ್ಮನಿಗೆ ಕರೆತರ್ರಿ ॥ ೬೬

ಥರ ಥರ ನಡಗೂತ । ಗುರುವಿನ ಎದುರಿಗೆ ।
ಧೀರ ಸಾಲದೆ ನಿಂತಿಹರು–ದಾಯಾದಿ
ನೀರು ಸುರಿಸೂತ ಕಂಣಿಂದ ॥ ೬೭

ಹಸಿದ ಹೊಟ್ಟೆಯ ಛಾಯೆ। ಪಸರಿಸಿ ಮುಖವೆಲ್ಲ।
ಕಸವಿಸಿಗೊಂಡು ಉಸರಿದರು–ಬೊಮ್ಮನ
ಹೇಸಿತನದ ಗುಣಗಳನು ॥ ೬೮

ಅನ್ನ ಛತ್ರವನಿಟ್ಟು। ಇನ್ನೇನು ಫಲವಾಯ್ತು।
ಬನ್ನೀರಿ ಭಕ್ತರೆ ಪ್ರಸಾದ–ಕೊಳ್ಳಿರಿ
ಸನ್ನೂತ ಚೆನ್ನಮಲ್ಲೇಶನ ॥ ೬೯

ದಯಾಮಯನು ಆಗ। ದಾಯಾದಿಗಳಿಗೆಲ್ಲ।
ಸ್ವಯ ಹಸ್ತದಿಂದ ನೀಡಿದನು–ಮಂಗಲ-
ಮಯ ಕರುಣಾಕರ ಸಿದ್ಧೇಶ ॥ ೭೦

ಹರ ಸಿದ್ಧರಾಮೇಶ। ಕರೆಸಿ ಬೊಮ್ಮಯ್ಯನಿಗೆ
ಪರಿಪರಿ ತಿಳಿಸಿ ಹೇಳಿದನು–ತಂದ ಆ
ಪರಧನವ ಕೊಟ್ಟು ಕಳುಹೆಂದು ॥ ೭೧

ಹೆಮ್ಮೆ ಬಿಡದಲೆ ಮತ್ತೆ। ಬೊಮ್ಮಯ್ಯ ನುಡಿದನು।
ಕೆಮ್ಮನೆ ಕೆಟ್ಟೆನೊ ಗುರುದೇವ–ನೀವು
ಸುಮ್ಮನೆ ಹೇಳ ತೊಡಗಿದಿರಿ ॥ ೭೨

ಕಳುಹಿಸು ಅವರಿಗೆ। ಬಳಸೀದ ಧನಕೊಟ್ಟು।
ಕಳವಳದ ಠಕ್ಕು ಸಾಕಿನ್ನು–ಮರುಳೆ
ಕಳ್ಳರಗಿಂತ ಕಡೆಯಾದಿಯಲ್ಲೊ ॥ ೭೩

ತಮ್ಮ ಆಣತಿ ನಾನು। ದಮ್ಮಯ್ಯ ಮೀರಲಾರೆ।
ಸ್ವಾಮಿ ಇದೊಮ್ಮೆ ಕ್ಷಮಿಸುವದು–ನೀಚರು
ನೇಮಿಸಿ ಅವಮಾನಿಸ ಬಂದಿಹರು ॥ ೭೪

ಕಿಡಿಕಿಡಿಗೊಂಡನು। ಕಿಡಿಗಂಣಿನ ಯೋಗೀಶ।
ಬಡಬಡಿಸ ಬೇಡಲೊ ಶತಮೂರ್ಖ-ಬಾಹ್ಯದ
ಸುಡು ನಿನ್ನ ಈ ವೇಷ ಬಿಲ್ಲೇಶ ॥ ೭೫

ಕೊಟ್ಟವರಿಗೆ ಧನವನ್ನು। ಮುಟ್ಟಿಸ ಬೇಕೆಂಬ।
ಹಟ ಹಿಡಿಯ ಬೇಕು ತಂದವರು–ತಿಳಿಯೊ
ಸಟೆತನವ ಬಿಟ್ಟುಕೊಡಬೇಕು ॥ ೭೬

ಸಿದ್ಧನ ನುಡಿಕೇಳಿ । ಎದ್ದಿತು ಕೂಡಿದ ಜನ ।
ಬಿದೀಗೆ ಕರೆದು ಒಯಿದರು-ಬೊಮ್ಮಗೆ
ಕ್ರೋಧದಿ ಹೊಡೆಯು ತೊಡಗಿದರು ॥ ೭೭

ಚೋರ ಭಕ್ತಿ ತೋರುತ । ಗುರು ಆಜ್ಞೆ ಮೀರೂತ ।
ಉರದೊಳಗೆ ಕಲುಷ ತುಂಬಿದ-ದುಷ್ಟಗೆ
ಊರ ಹೊರಗೆ ದಬ್ಬೂತ ತಂದರು ॥ ೭೮

ಗುರುವೀಗೆ ಮೀರಿದ । ಹಿರಿ ಗಂಟಿಗಳ್ಳನನು ।
ಕರೆದೊಯ್ದರು ದಾಯಾದಿಗಳು–ಮುಂದೀನ
ಊರಿಗೆ ನ್ಯಾಯ ಕೊಡಿರೆಂದು ॥ ೭೯

ಗುರುವಿನ ಆಣತಿಯ । ಮೀರಿದ ನೀಚನನು ।
ತರಬೇಡಿರಿ ನಮ್ಮ ಊರೊಳಗೆ-ಆತನ
ಮೋರೆ ನಾವು ನೋಡಲಾರೆವು ॥ ೮೦

ಕೀಳ ಜನುಮವಿದು । ಹಾಳಾಗಲೆಂದವನು ।
ಹಳ್ಳಿಯ ಹೊರಗಣ ಹಾಳಗುಡಿ-ಹೊಕ್ಕನು
ಕಾಳನ ಬಾಯಿಗೆ ತುತ್ತಾಗಲು ॥ ೮೧

ಗುರುವಿನ ಸೇವೆಗೆ । ಎರವಾಗಿ ಬಂದಿರುವೆ ।
ನರಕ ಪ್ರಾಪ್ತಿಯು ಇಹದಲ್ಲಿ-ಆಯಿತು
ಸುರಗಿ ನೀ ಎನ್ನ ಹೃದಯ ಸೇರು ॥ ೮೨

ಕಚಕಚ ಮೈತುಂಬ । ಚುಚ್ಚಿಕೊಂಡನು ಬೊಮ್ಮ ।
ಬೆಚ್ಚನ ರಕುತ ಸುರಿವುದು–ಕಂಡಾಗ
ಬೆಚ್ಚಿ ಬಿದ್ದರು ದಾಯಾದಿಗಳು ॥ ೮೩

ಎಲೆ ಎಲೆ ಬೊಮ್ಮಯ್ಯ । ಕೊಲಬೇಡ ನರಜನ್ಮ ।
ಹುಲ್ಲು ಕಡ್ಡಿಯಲ್ಲ ಹುಟ್ಟಬರಲು-ಮರುಳೆ
ಸಲ್ಲದು ಹೊಲೆತನ ನಿನ್ನದು ॥ ೮೪

ರಗುತಿನ ಮಡಲಲ್ಲಿ । ನಿರ್ಗತಿಕ ಬಿದ್ದಿಹನು ।
ಮುಗಿಯಿತು ಬೊಮ್ಮನ ಕಥೆಯಿಲ್ಲಿ–ಎನ್ನುತ
ಸಾಗಿದರು ಜನ ಸೊನ್ನಲಗಿಗೆ ॥ ೮೫

ಗುರುವಿನ ಪಾದಕ್ಕೆ । ಶರಣು ಮಾಡಿದರಾಗ ।
ಅರುಹಿದರು ಬೊಮ್ಮನ ಸುದ್ದಿಯ-ಹೇಳಲು
ಸ್ವರ ನಡುಗಿತು ಭಯದಿಂದ ॥ ೮೬

ನೋಡಿದಾ ನೋಟವ । ಓಡೋಡಿ ಬಂದು ಹೇಳಿ ।
ಅಡಿ ಹಿಡಿದು ಸಿದ್ಧಗೆ ಕೇಳಿದರು-ಶ್ರೀ ಗುರು
ಬಡವರ ಗತಿ ಇನ್ನೇನಯ್ಯ ॥ ೮೭

ಅನಾಚಾರಿಗೆ ಯಾವ । ಮಾನಾಪಮಾನವಿಲ್ಲ ।
ಹೀನ ಕೆಲಸಕ್ಕೆ ಹೇಸಿಲ್ಲ-ಕಡೆಗೊಮ್ಮೆ
ಮಾನವ ಜನ್ಮವ ಕಳಕೊಂಡ ॥ ೮೮

ಕೇಳಿ ಮರಗುತ ಸಿದ್ಧ । ಹೇಳಿದನು ಅವರಿಗೆ ।
ಹಾಳ ದೇಗುಲದಿ ಬಿದ್ದೆಣಕೆ-ಸಂಸ್ಕಾರ
ವೇಳೆ ಕಳೆಯದೆ ಮಾಡಿರಿ ॥ ೮೯

ಮನಬಿಚ್ಚಿ ಹೇಳಿರಿ । ಧನವೆಷ್ಟು ನಿಮ್ಮದು ।
ಅನುಮಾನಿಸದೆನಗೆ ಕೇಳಿರಿ-ಭಕ್ತರೆ
ಧನಕೊಟ್ಟು ನಿಮಗೆ ಕಳಹುವೆ ॥ ೯೦

ಬೊಮ್ಮನ ಹಣವೆಲ್ಲ । ಸ್ವಾಮಿ ಸಿದ್ಧರಾಮನಾಗ ।
ಕಮ್ಮಿ ಒಂದು ಕಾಸು ಮಾಡದಲೆ-ಉಡಿ ತುಂಬ
ಒಮ್ಮೆ ಹಾಕಿದನು ದಯಾಮಯ ॥ ೯೧

ಬಡವರು ನಾವೆಲ್ಲ । ಕೊಡಲಿಲ್ಲ ಕಾಣಿಕೆಯ ।
ಉಡಿತುಂಬಿ ಕೊಟ್ಟ ಹಣ ನಿಮ್ಮ-ಮಹಾ
ಅಡಿಮೇಲೆ ನಾವು ಸುರಿವೆವು ॥ ೯೨

ಬಿಲ್ಲೇಶನ ಹಣವಿದು । ಮಲ್ಲಯ್ಯನು ಕೊಟ್ಟಿರುವ ।
ಸಲ್ಲಲಿ ಭಕ್ತರೆ ನಿಮಗಿಂದು-ಕೊಳ್ಳಿರಿ
ಬಲ್ಲಹನ ನೆನವು ನೆಲಿಸಲಿ ॥ ೯೩

ಹಿರಿಹಿರಿ ಹಿಗ್ಗೂತ । ಗುರುವಿನ ಪಾದಕ್ಕೆ
ಎರಗೂತ ತುಂಬಿ ಎರಗಿದಂತೆ-ಕಂಗಳ
ನೀರು ಸುರಿದವು ಸವನಾಗಿ ॥ ೯೪

ಹಾಡುತ ಹರಸುತ । ಬಡ ದಾಯಾದಿಗಳು ।
ಉಡಿತುಂಬ ಭಾಗ್ಯಕಟಿಕೊಂಡು–ಊರಿಗೆ
ಒಡೆಯನ ನೆನೆಯುತ ಹೊರಟರು ॥ ೯೫

ಮನೆಯ ಕೋಣೆಯಲಿ । ಧನ ಸುರಿದು ತೋರುತ ।
ಮನೆಮಡದಿ ಮಕ್ಕಳಿಗೆಲ್ಲ-ಹೇಳಿದರು
ಘನಗುರು ಸಿದ್ಧೇಶನ ಕರುಣೆ ॥ ೯೬

ಹಣ ಕಾಣದ ಕಂಗಳು । ತಣಿದವು ಧನ ನೋಡಿ
ಅಣಿಮಾದಿ ಸಿದ್ಧಿಯ ಗುಣದಾತ-ಕೊಟ್ಟನು
ಕಣ್ಣೊಂದು ಬೇಡಲು ಎರಡನು ॥ ೯೭

ಕರುಣಾಕರನ ಮಹಾ । ವರವ ಪಡೆದ ಮೇಲೆ ।
ಘೋರ ಬಡತನ ಬಯಲಾಯ್ತು-ನಮ್ಮ ಈ
ನರಜನ್ಮದ ಯಾತನೆ ದೂರಾಯಿತು ॥ ೯೮

ನಿತ್ಯ ಪರಿಪೂರ್ಣನೆ । ಸತ್ಯ ಸಿದ್ಧರಾಮನೆ ।
ಕಾತ್ಯಾಯಿನಿ ಪ್ರಿಯ ಕಂದನೆ-ಜಯ ಜಯ
ಮಾತೃ ಹೃದಯದ ಮಹಾದೇವನೆ ॥ ೯೯

ಸಂಧಿ ೧೬

ನಿತ್ಯ ನೇಮದ ಪೂಜೆ। ವ್ರತದಲ್ಲಿ ನಿರತನು।
ಸತ್ಯಸಂಧಾನದಿ ಮನಮಗ್ನ–ಸಿದ್ಧರಾಮ
ನಿತ್ಯಾನಂದ ನಿರುಪಾಧಿಕನು ॥ ೧

ಗೋವಿನ ತಂಡಗಳು । ಮಾವಿನ ತೋಟಗಳು ।
ಹೂವು ಅರಳಿದವವು ಪರಿಪರಿ–ಸಿದ್ಧನು
ದೇವನ ಲೀಲೆಯ ಹಾಡಿದನು ॥ ೨

ಮೂರುಹೊತ್ತು ಸಿದ್ಧನು । ಏರಿ ಹೋಗುತಲಿದ್ದ ।
ಹರನ ದರುಶನ ಪಡೆಯಲು–ಕೈಲಾಸಕೆ
ಅರುವೀನ ಗಿರಿಯನು ಏರುತ॥ ೩

ಉದಯ ಕಾಲದಲೆದ್ದು । ಸದಮಲ ಸಿದ್ಧೇಂದ್ರ ।
ಮುದದಿಂದ ಹೊರಟನು ಕೈಲಾಸಕೆ–ಉತ್ಸವ
ಎದುರು ಬರುವದನು ಕಂಡನು ॥ ೪

ಛತ್ರ ಚಾಮರ ಬೀಸಿ। ಸ್ತೋತ್ರಗಳ ಹಾಡುವರು।
ಮಿತ್ರೆಯರು ಕುಣಿಯುತ ನಡೆದರು-ನೋಡುವರ
ನೇತ್ರಕ್ಕೆ ಮನೋಹರ ಕಂಡೀತು॥ ೫

ಸಾಂಬನ ದರುಶನಕೆ। ಸಂಭ್ರಮದಿ ಹೊರಟಾಗ
ಕಾಂಬವರ ಕಂಣು ಬೆರಗಾಗಿ-ಗಂಧರ್ವ
ರಂಭೆರತಿ ಪತಿಯ ರೂಪುಳ್ಳವ॥ ೬

ಗಗನಾಕಾಶದೊಳು। ಯೋಗಿಯು ಬರುವದನು।
ಆಗ ಕಂಡಾನ ಗಂಧರ್ವನು-ಬಕುತಿಲಿ
ಬೇಗ ಇಳಿದನು ಉನ್ನತಾಸನದಿಂದ॥ ೭

ವಿನಯದಿ ಬಂದನು। ತನುಜ ನಿಮ್ಮವನೆಂದು।
ಘನ ಸಿದ್ಧ ಯೋಗಿಯ ಪಾದವ-ಹಿಡಿದನು
ಅನುದಿನದಿ ನೀ ಸಲುಹೆಂದು॥ ೮

ಒಳ ಹೊರಗೆನ್ನದೆ। ಹೊಳೆಯುತ ಶಿವತೇಜ।
ಅಳಿಯದ ಶಾಂತಿ ಬೀರಿತು-ಗಂಧರ್ವ
ಆಳುವನು ತನ್ನ ಲೋಕವ॥ ೯

ಸುಕುಮಾರ ನಮಗೇಕೆ। ಭಕ್ತಿಲಿ ನಮಿಸುವಿ।
ಲೋಕ ನಾಯಕ ನೀ ಕಾಣುವಿ-ನಿನ್ನಲಿ
ಸಕಲ ಭೋಗ ಭಾಗ್ಯ ಕೂಡಿಹುದು॥ ೧೦

ಹೆತ್ತ ತಂದೆ ನಿಮ್ಮಯ। ತೊತ್ತಿನ ಹಸಗೂಸು ನಾ।
ಮೃತ್ಯು ಲೋಕದ ಕರಿ ನಾಯಿಯ-ಜನ್ಮದಿ
ಇತ್ತು ಉಶಾಪ ಪಾವನಗೈದಿಹೆ॥ ೧೧

ನಿನ್ನ ಕರುಣೆಯಿಂದಲೆ। ಮುನ್ನಿನ ದಿವ್ಯ ದೇಹ।
ಮನ್ನಣೆ ಐಶ್ವರ್ಯ ಒದಗಿತು-ರಾಜನಾದೆ
ಉನ್ನತ ಗಂಧರ್ವ ಲೋಕದ॥ ೧೨

ಏನು ಹೇಳಲಿ ಎನ್ನ। ಹೀನಾದ ದುರ್ಭಾಗ್ಯ।
ತನ್ನ ಪಾಪಕರ್ಮದಿಂದೆನ್ನ-ಕುವರನು
ಹೀನ ನರಕ್ಕೆ ಗುರಿಯಾಗೆ॥ ೧೩

ಮುಕ್ತ ಮಾಡಲು ದಿವ್ಯ । ಶಕ್ತಿಯು ನಿಮ್ಮದೆಂದು ।
ಭಕ್ತಿಯಲಿ ಬಂದೆ ಸೊನ್ನಲಗಿಗೆ-ಮಹಾಶಕ್ತಿ
ಯುಕ್ತ ಪ್ರಸಾದ ತಂದೆ ನಿಮ್ಮದು ॥ ೧೪

ಅಗಲಿದ ಕರುಳೀನ । ಮಗನೀಗೆ ಅಪ್ಪಿದೆನು ।
ಸಗ್ಗದ ಸುಖವ ಕಂಡೆನಾಗ-ಓ ತಂದೆ
ಅಗಲಿ ಕೂಡಿದ ಪರಮಾನಂದವ ॥ ೧೫

ನಾವಿಬ್ಬರು ಹರುಷದಿ । ಧಾವಿಸಿ ಬರುವಾಗ ।
ನೋವಿನ ದನಿಯಲಿ ನಿನ್ನ ನಾಮ-ನುತಿಸೆ
ರವರವ ನರಕೀಯು ಒಬ್ಬನು ॥ ೧೬

ಸ್ವಾಮಿ ನಿನ್ನ ನೆನೆದಾಗ । ಯಮ ಬಾಧೆ ದೂರಾಗಿ ।
ಕಾಮಿತಾರ್ಥವು ದೊರೆಯುವದು-ಇದು ನಿತ್ಯ
ನೇಮದ ಹೊರತದು ಕಂಡೆವು ॥ ೧೭

ಯಾತನೆ ತಾಳದಲೆ । ಪಾತಕಿ ಬೊಮ್ಮಯ್ಯನು ।
ಆತುರದಿ ನಿನ್ನ ದರುಶನ-ಬಯಸೂತ
ರಾತರಿ ಹಗಲು ನೆನೆಯುವನು ॥ ೧೮

ತಾಯಿತನ ಹಸುಳೆಗೆ । ಮಾಯದಿ ಸಲಹುವಳು ।
ಕಾಯೊ ಕೃಪಾಳು ಪಾಮರರ-ರಕ್ಷಿಸು
ಜೀಯ ನಿನ್ನಡಿಗೆ ಶರಣೆಂಬೆ ॥ ೧೯

ಉಶಾಪವಿತ್ತೆನಗೆ । ಈಶನಡಿ ತೋರಿದಿ ।
ಪೋಷಿಸಿದಿ ದೀನ ದಯಾಳು-ನಿನ್ನಯ
ಕೂಸು ಬೊಮ್ಮಯ್ಯಗೆ ಸಲುಹಯ್ಯ ॥ ೨೦

ಬಿಲ್ಲೇಶ ಬೊಮ್ಮಯ್ಯನು । ಸಲ್ಲದ ಕರ್ಮವ ಮಾಡಿ ।
ಮಲ್ಲೇಶನಿಗೆ ದೂರ ಆದಾಗ-ನನ್ನಲ್ಲಿ
ಇಲ್ಲ ಯಾವ ಶಕ್ತಿಯು ಪೊರೆಯಲು ॥ ೨೧

ಶಿವ ಶಿವ ಸಿದ್ಧರಾಮ । ಭವ ಬಾಧೆ ಬಿಡಿಸೆಂದು ।
ರವರವ ನರಕದಿ ನೆನೆವಾಗ-ಯೋಗಿಯೆ
ಜೀವದ ಪರಿವೆಯು ಅವಗಿಲ್ಲ ॥ ೨೨

ಅನಾಚಾರಿಯು ಬೊಮ್ಮ | ತಾನು ಮಾಡಿದ ಕರ್ಮವ |
ಮನವಾರೆ ಉಂಡು ಬಳಲಿದರೆ-ನನ್ನಿಂದ
ಏನೇನು ಆಗದು ಸುಕುಮಾರನೆ || ೨೩

ಗುರುತಂದೆ ಗುರುತಾಯಿ | ಗುರುಬಂಧು ಬಳಗೆಂದು |
ಕೊರಗೂತಲಿರುವ ಶಿಶುವೀಗೆ-ಪೂರೆಯೊ
ಕರುಣಾಮಯ ಶಿವ ಸಿದ್ಧೇಶನೆ || ೨೪

ನನ್ನ ಕೈಲ್ಲೇನಿಹುದು | ಚೆನ್ನಮಲ್ಲೇಶನಿಗೆ |
ಬಿನ್ನಪವ ಮಾಡಿ ಕೊಳ್ಳುವೆ-ಬಿಲ್ಲೇಶನ
ತನುಮನ ಶುಚಿ ಮಾಡೆಂದು || ೨೫

ಬಂದನು ಸಿದ್ಧರಾಮು | ಇಂದುಧರನ ಮುಂದೆ |
ಕಂದು ಕುಂದಿರುವ ಮುಖದಿಂದ–ನಿಂತನು
ಕಂದನ ಕೂಗು ಕೇಳಿರೆಂದು || ೨೬

ಬೆಂದ ಮನದಿ ಸಿದ್ಧ | ನೊಂದು ಪಿಡಿದನು ಪಾದ |
ಇಂದುಧರ ಸಿದ್ಧಗೆ ಅಪ್ಪಿದನು-ಕೇಳಿದ
ಕುಂದಿದ ಮುಖದ ಕಾರಣವ || ೨೭

ಕಪ್ಪುಗೊರಳಿನ ದೇವ | ಅಪ್ಪ ಮೂಲೋಕದ |
ತಪ್ಪು ಕ್ಷಮಿಸೂತ ಬಂದಿಹೆ-ಕಂದನ
ತಪ್ಪು ಒಪ್ಪು ಎಣಿಸದಿರಯ್ಯ || ೨೮

ತಪ್ಪು ಮಾಡಿರುವದು | ನೆಪ್ಪು ನನಗಿಲ್ಲ ಕಂದ |
ಒಪ್ಪಿಕೊಂಡಿರುವ ಪರಿ ಹೇಳು–ಎನ್ನೂತ
ಅಪ್ಪಿದನು ಶಂಕರನು ಸಿದ್ಧನಿಗೆ || ೨೯

ತಿಳಿಗೇಡಿ ಶಿಷ್ಯನು | ಕೊಳೆಯೂವ ನರಕದಿ |
ಕಳವಳಗೊಂಡ ಗಂಧರ್ವನ-ಹೇಳಿಕೆ
ಕೇಳಿ ಬಂದಿರುವೆನು ನಿನ್ನಡಿಗೆ || ೩೦

ಬಿಲ್ಲೇಶ ಬೊಮ್ಮಯ್ಯನು | ಸಲ್ಲದನಾಚಾರಿ |
ಮಲ್ಲಯ್ಯ ನಿನಿಗೇನು ಹೇಳಲಿ-ಆತನ
ಕ್ಷುಲ್ಲಕತನದ ಕರ್ಮಗಳ || ೩೧

DECCAN HERAL
LIBRARY.

ಲೋಕನಾಯಕನೆ । ಯಾಕೆ ಮನ ನೋಡುವಿ ।
ಸಾಕಾಗಿ ಬಾಧೆಯ ತಾಳದಲೆ-ಬೊಮ್ಮನು
ಏಕಚಿತ್ತದಿ ನೆನೆಯುವನು ॥ ೩೨

ಹೋಗು ಹೋಗೆಲೆ ಕಂದ । ಬೇಗ ಯಮಸದನಕ್ಕೆ ।
ಯೋಗಿ ಭವರೋಗ ವೈದ್ಯನೆ-ನೀನು ಭವ-
ರೋಗಿಗೆ ಮುಕ್ತನ ಮಾಡಯ್ಯ ॥ ೩೩

ಅಪರಾಧ ಕ್ಷಮಿಸಿ ನೀ । ತಾಪತ್ರಯ ಕಳೆಯೂತ ।
ಕಾಪಾಡು ನಿನ್ನ ಹಸುಳೆಗೆ ಎಂದು-ಸಿದ್ಧ
ಮಾಪಾದ ಹಿಡಿದು ನಮಿಸಿದನು ॥ ೩೪

ಕಂದನ ಕರುಣೆಯ । ಇಂದುಧರನು ಕಂಡು ।
ಮಂದಹಾಸವನು ಬಿರೂತ-ಹಿಡಿದೆತ್ತಿ
ಕಂದನ ಮುದ್ದಾಡಿ ನುಡಿದನು ॥ ೩೫

ಮುದ್ದು ಮಗನೆ ಬಾಲ । ಸಿದ್ಧರಾಮನೆ ಹೋಗು ।
ಬಿದ್ದು ನರಕದಿ ಬಾಧೆಯನು-ಭೋಗಿಪ
ಅಧಮನಿಗೆ ಪಾವನ ಮಾಡಯ್ಯ ॥ ೩೬

ಕುನ್ನಿಗಳ ಅಪರಾಧ । ಮನಸಿಗೆ ತಾರದಲೆ ।
ಮನ್ನಣೆ ಕೊಟ್ಟಿರುವೆ ಮಾತಿಗೆ–ಎನ್ನಯ್ಯ
ಪನ್ನಗಧರ ಪರಮೇಶನೆ ॥ ೩೭

ಉರತುಂಬಿ ಬಂದೀತು । ಸುರಿದವು ಕಂಣೀರು ।
ವರಭಕ್ತಿಲಿ ಸಿದ್ಧ ನಡೆದನು–ಸ್ಮರಿಸುತ
ಸುರವರ ಸುರಗಣ ವಂದಿಪನ ॥ ೩೮

ದಯಾಗುಣನೆ ನಿಜ । ಕಾಯುಗೊಂಡ ಸಿದ್ಧ ।
ಸಂಯಮಿನಿ ಎಂಬ ಪಟ್ಟಣಕೆ-ಹೊರಟನು
ಜೀಯ ಮಲ್ಲನ ಆಣತಿಯಂತೆ ॥ ೩೯

ನರಕದಲಿ ಬಿದ್ದ ಆ । ದುರಾಚಾರಿ ಬೊಮ್ಮಯ್ಯ ।
ಕೊರಗುತ ಮರಗೂತ ಸಿದ್ಧನ–ನೆನೆಯುತ
ತೋರೆಂದ ನಿನ್ನ ದಿವ್ಯಪಾದವ ॥ ೪೦

ಗುರುವಿನ ಆಜ್ಞೆಯನು । ಮೀರಿ ಬಂದೆ ನರಕದಿ ।
ಮರೆಯಲಾರೆನು ನಿನ ಪಾದ-ಸಿದ್ಧರಸ
ತೋರಲಾರೇನೊ ನಿನ ರೂಪ ॥ ೪೧

ಗುರುವಿನ ನೆನಹು ಎನ್ನ । ಉರದೋಳು ಇರಲು ।
ಕರಕರನೆ ಕಾಯ ಕೊರೆದರೂ-ಯಮರಾಜ
ಮರಗೆನು ಕೆಟ್ಟ ಈ ಕಾಯಕ್ಕೆ ॥ ೪೨

ಗುರುವಿನ ನೆನೆವಾಗ । ಅರಿಯೆನು ಬಾಧೆಯ ।
ನರಕ ಸ್ವರ್ಗ ಎಂಬ ಭೇದವು-ಎನಿತಿಲ್ಲ
ಹರ ಸಿದ್ಧರಾಮನೆ ಜಯ ಜಯ ॥ ೪೩

ಈ ತರದ ನುಡಿಗಳು । ಆತನ ಬಾಯಿಂದಲೆ ।
ಓತು ಮನದಿಂದ ಕೇಳಿದನು-ಸಿದ್ಧನ
ಆತುಮ ನೊಂದುಕೊಂಡೀತು ॥ ೪೪

ದೂರಿಂದ ಬರುಲಿರುವ । ಮೀರಿದ ಶಿವಕಳೆಯ ।
ಕ್ರ್ವಾರಿ ಮೀಸೆಯ ಯಮರಾಯು-ಕಂಡು ಅಂ-
ತರಂಗದಿ ಭಯಗೊಂಡನು ॥ ೪೫

ಸಾನಂದ ಶಿವಯೋಗಿ । ತಾನೊಂದು ಶಿವಮಂತ್ರ ಅ- ।
ವನಂದು ನುಡಿದದ್ದು ಸ್ಮರಿಸಿದ-ಈ ಲೋಕ
ಏನೊಂದು ಪರಿಮಾಡಿ ಹೋಗಿದನು ॥ ೪೬

ಸಿದ್ಧನ ಅಡಿಮೇಲೆ।। ಬಿದ್ದನು ಯಮರಾಜ ।
ಗದಗದ ನಡುಗತೊಡಗಿದ-ಶ್ರೀ ಗುರು
ಸದಮಲ ಸಿದ್ಧೇಂದ್ರ ರಕ್ಷಿಸು ॥ ೪೭

ಸಿದ್ಧನ ಮಾಪಾದಗಳು । ಬಿದ್ದವು ಯಮಪುರಿ ।
ಶುದ್ಧವಾಗಿ ಪರಿಣಮಿಸಿತು-ಪಾಪಿಗಳ
ಉದ್ಧಾರವಾಗುವ ಕಾಲವಿದು ॥ ೪೮

ನಾಯಕ ನರಕದಿ । ಕಾಯೊ ಸಿದ್ಧರಾಮನೆಂದು ।
ಬಾಯಿ ಬಿಡುತಲಿರುವ ಬಿಲ್ಲೇಶ-ತಲೆ ಎತ್ತಿ
ದಯಾಳು ಸಿದ್ಧಗೆ ನೋಡಿದನು ॥ ೪೯

ನೋಡಿದೆ ನಿನ್ನರೂಪ । ಹಾಡುವೆ ನಿನ್ನ ನಾಮು ।
ಕೂಡಿಕೊಂಡಿರುವೆ ನಿನ್ನಡಿಯ–ಸಿದ್ಧೇಶ
ಈಡ್ಯಾಡಿದೆ ನರಕ ಸ್ವರ್ಗವನೆ ॥ ೫೦

ನರಕದಲ್ಲಿಯ ಮಹಾ- । ಘೋರ ಯಾತನೆ ಕಂಡು ।
ಕರುಳು ಮರುಗಿತು ಯೋಗಿಯ–ಬಾಯಿಂದ
ವರ ಪಂಚಾಕ್ಷರಿಯು ಹೊರಬಿತ್ತು ॥ ೫೧

ನರಕದೆದುರಿಗಿದ್ದು । ಮರೆತು ಬಿಟ್ಟನು ಯೋಗಿ ।
ಗರಕ ಆಗಿದ ಶಿವನಾಮದಿ–ಸಿದ್ಧಯೋಗಿ
ವೀರಾಮ ರಾಮಯೋಗಿವರ ॥ ೫೨

ಭಕ್ತವತ್ಸಲ ಸಿದ್ಧ । ಮುಕ್ತಿಯ ವರದಾತ ।
ಮುಕ್ತಹಸ್ತದಿ ತನ್ನ ಲಾಕೊಳ–ಬಿಟ್ಟನು
ಭಕ್ತ ಬೊಮ್ಮನೆ ಬಾರೆನುತ ॥ ೫೩

ವ್ಯಾಕೊಳನಾದ ಬೊಮ್ಮ । ಲಾಕೊಳ ಹಿಡಿದನು ।
ಲೋಕೇಶ ಸಿದ್ಧನಿಗೆ ಮನವಾರೆ-ಒಂದಿಸಿ
ಜೋಕೆಯಲಿ ಮೇಲೆ ಹೊರಟನು ॥ ೫೪

ಮೇಲಕ್ಕೇರುವ ಬೊಮ್ಮನ । ಕಾಲು ಹಿಡಿದನು ಒಬ್ಬ ।
ಸಾಲಾಗಿ ಸರಪಳಿ ಆಯಿತು–ಎಲ್ಲರು
ಕಾಲು ಹಿಡಿದರು ಒಬ್ಬರೊಬ್ಬರು ॥ ೫೫

ನರಕಿಗಳ ಸರಪಳಿ । ಅರಿತು ನೋಡಿದ ಸಿದ್ಧ ।
ಹರನ ಆಣತಿ ಪಡಕೊಂಡು–ಬರುವೆನು
ನರಕಿಗಳೆ ನಿಮ್ಮ ಮುಕ್ತ ಮಾಡಲು ॥ ೫೬

ಅನುಮಾನಗೊಂಡವರು । ಮನದಲ್ಲಿ ಮರಗೂತ ।
ಹೀನರಿಗೆ ಪಾವನ ಮಾಡಯ್ಯ–ಮಹಾಯೋಗಿ
ಪುನಿತವಾದೆವು ನಿಮ್ಮ ಕಂಡಾಗ ॥ ೫೭

ಸುಮ್ಮನೆ ನಿಂತಿರುವೆ । ಪ್ರೇಮಮಯ ಜಗದೀಶ ।
ನಮ್ಮ ಕೈಗಳು ಸೋಲುವವು-ಸಿದ್ಧರಾಮ
ದಮ್ಮಯ್ಯ ನಮಗೆ ಕರುಣೇಸು । ೫೮

ಮರಗೂತ ಸಿದ್ಧರಾಮ । ಕೊರಗೂತ ನುಡಿದನು ।
ಹರನ ಆಜ್ಞೆ ಎನಗೆ ಇಲ್ಲದಲೆ-ನಿಮ್ಮನು
ನರಕದಿಂದೀಚೆ ಹೇಗೆ ತೆಗೆಯಲಿ ॥ ೫೯

ಬಂದನು ಭರದಿಂದ । ನಿಂದನು ಕೈಮುಗಿದು ।
ನಂದಿವಾಹನ ಮುಂದೆ ಸವಿನಯ-ಸಿದ್ಧೇಶ
ನೊಂದ ಮನದ ಪರಿ ಅರುಹಲು ॥ ೬೦

ಸಟೆಯನು ಸಾಧಿಸಲು । ಕುಟಿಲತನದಿಂದಲಿ ।
ಹೊಟ್ಟೆ ಹೊರಕೊಂಡು ಹಾರಾಡಿ–ಬಡೆದಾಡಿ
ಪಟ್ಟಣಕೆ ಬಂದಿಹರು ಯಮನ ॥ ೬೧

ಹೊಟ್ಟೆಕಿಚ್ಚಿನಿಂದತಿ । ಸುಟುಕೊಂಡು ಕಡೆತನ ।
ಅಟ್ಟಿದ ಅನ್ನವ ಉಣದಲೆ-ಬಂದಿಹರು
ಘೋರ ಯಾತನೆಗೆ ಒಳಗಾಗಿ ॥ ೬೨

ಜೀವಿಗಳ ಹಿಂಸಿಸಲು । ಯಾವಾಗಲು ಹೇಸಿಲ್ಲ ।
ಸಾವು ಬಂದಾಗ ತನ್ನ ಮನೆಗೆ-ಅಳುವರು
ಜೀವಗಳ್ಳರು ಅಲ್ಲಿ ಇರುವರು ॥ ೬೩

ಆಶೆಗಾಗಿ ಬಹಳ । ವೇಷವನು ಧರಿಸೂವ ।
ಹೇಸಿ ಸಂಸಾರದಿ ನಟಿಸೂತ-ಯಮನ
ಪಾಶಕ್ಕೆ ಸಿಲುಕಿ ಬಂದಿಹರು ॥ ೬೪

ಎಲ್ಲ ಜನಗಳಿಗಿಂತ । ಬಲ್ಲಿಹೆವು ನಾವೆಂದು ।
ಇಲ್ಲದ ಗಮ್ಮ್ರ ಗರುವಿಕೆಯು–ತೋರೂತ
ಹಲ್ಲಾಗ ಸಿಕ್ಕಿಹರು ಯಮದೂತರ ॥ ೬೫

ಅನುಮಾನವಿಲ್ಲದಲೆ । ಮನ ನೋಯಿಸಿ ಮಾತಾಡಿ ।
ತನ್ನದೆ ಸಾಧೀಪ ಕುನ್ನಿಗಳು-ನರಕದ
ಘನಬಾಧೆಯೊಳಗಾಗಿ ಬಂದಿಹರು ॥ ೬೬

ಲೋಭದಿಂ ಗಳಿಸಿ ಧನ । ಕ್ಷೋಭಿತ ಮಾನವರು ।
ಲಾಭಕ್ಕಾಗಿ ಬಡೆದಾಡೂತ-ಹಲವರು
ಸಾಂಬಗೆ ಮರೆತರು ನರಕಿಗಳು ॥ ೬೭

ಅನಾಚಾರಿಗಳು ತಮ್ಮ। ಮನದಂತೆ ನಡೆ ನುಡಿ।
ಅನುದಿನದಿ ಪರರ ಹಿಂಸಿಸಿ-ದುಸ್ತರದಿ
ಅನುತಾಪಗೊಂಡರು ಕೆಲವರು ॥ ೬೮

ಪರಧನವ ಬಳಿಸಿ । ಪರಸತಿಯ ಒಡಗೂಡಿ ।
ದುರಿತ ಕರ್ಮಕ್ಕೆ ಒಳಗಾಗಿ-ನರಕಿಗಳು
ಕೊರಗೂತ ಯಾತನೆ ಭೋಗಿಸುತ ॥ ೬೯

ಹಿಂದೀನ ಪಾಪಂಗಳ। ಇಂದುಣುತಲಿರುವರು ।
ಮಂದಮತಿಗಳ ಕರ್ಮವ-ಬಿಡಿಸಯ್ಯ
ಬಂಧನದೋಳು ಬಳಲುವರು ॥ ೭೦

ಬಂಧನ ಬಿಡಿಸಲು। ಇಂದುಧರ ನಿನ್ನಡಿಗೆ।
ನೊಂದದ್ದು ನೋಡಿ ಸಹಿಸದೆ-ಇಲ್ಲಿ ಓಡಿ
ಬಂದಿರುವೆ ಭೂತನಾಥನೆ ॥ ೭೧

ದುರಿತ ಕರ್ಮಗಳಿಂದ । ನರಕಕ್ಕೆ ಒಳಗಾಗಿ ।
ಚರಿಸೂವ ಜೀವಿಗಳಿಗಾಗಿ–ಸಿದ್ಧರಾಮ
ಕೊರಗೀದರೇನು ಫಲವಿಲ್ಲ ॥ ೭೨

ರಕ್ಷಿಸು ಕರುಣಾಳು । ಸಾಕ್ಷಾತ ಭವಹರನೆ ।
ಪಕ್ಷಪಾತವ ಮಾಡದಲೆ–ರಕ್ಷಿಸು
ಮೋಕ್ಷದಾತ ದೀನದಯಾಳು ॥ ೭೩

ವಿಷವನ್ನೆ ಕುಡಿದು ನೀ। ಪೋಷಿಸಿ ಜಗವೆಲ್ಲ ।
ಈಶ ಭೂತೇಶ ಪಾವನನೆ-ಪಾಪಿಗಳ
ದೋಷವಿನಾಶನೆ ಜಗದೀಶ ॥ ೭೪

ಮೂರು ಪುರಗಳ ಸುಟ್ಟು । ಸುರಗಣರ ರಕ್ಷಿಸಿ ।
ಚರಾಚರರ ಸುಖಕ್ಕಾಗಿ–ಕೊರಗೂತ
ಏರಿದಿ ಶುಂಭುವೆ ಹಾಳಬೆಟ್ಟ ॥ ೭೫

ಹೊಳೆವ ಕೆಂಜೆಡೆಯಿಂದ। ಇಳಿದು ಶ್ರೀಗಂಗೆಯು ।
ತೊಳೆಯುವಳು ಪಾಪದ ರಾಶಿಯು–ಶಿವ ಚಂದ್ರ-
ಮೌಳಿಶ್ವರ ಲಿಂಗವೆ ವರವಾಗು ॥ ೭೬

ಕಂದನ ಕಳವಳದ। ನೊಂದ ನುಡಿಗಳ ಕೇಳಿ।
ಮಂದಹಾಸದಿ ದೇವ ನುಡಿದನು-ಮಾದಾನಿ
ಬಂಧನದಿ ಮುಕ್ತ ಮಾಡಯ್ಯ॥ ೭೭

ಪಾಪ ತೊಳೆಯಲು ನೀನು। ತುಪ್ಪಿನ ಅಭಿಷೇಕ।
ಒಪ್ಪಿಕೋಳೊ ಸಿದ್ಧನೆ ಮಾಡಲು-ಎಂದನು
ಕಪ್ಪುಗೊರಳಿನ ಶಂಭು ಶಂಕರ॥ ೭೮

ಭೋಳಾಸಾಂಬ ನಿನಗೆ। ಇಳೆಯ ಜನಗಳ।
ಗೋಳ ಗೊತ್ತಿಲ್ಲ ನೀಲಕಂಠ-ಉಣ್ಣಲು
ತಿಳಿ ತುಪ್ಪ ದೊರಕಲೊಲ್ಲದು॥ ೭೯

ಬಡತನವೆಂಬುವದು। ಕಡುತರ ನರಕವು।
ಬಿಡದೆ ಕಾಡುವದೇನ್ಹೇಳು-ಸಿದ್ಧೇಶ
ಒಡನೆ ದೂರಮಾಡಬೇಕಯ್ಯ॥ ೮೦

ಯಮಭಾದೆ ಬಿಡಿಸಲು। ಸ್ವಾಮಿ ಕೇಳಲು ಬಂದೆ।
ಭೂಮಿಯ ನರಕದ ಬಾಧೆಯ-ಬಿಡಿಸಲು
ವಾಮದೇವನೆ ಎನಗೆ ಹೇಳುವಿ॥ ೮೧

ಉರ್ವಿಯೊಳಗೆ ನೀನು। ಸರ್ವಶಕ್ತ ಯೋಗಿ।
ಸರ್ವ ಸಿದ್ಧಿಗಳಿಗೆ ತವರಾಗಿ-ಸಮರ್ಥ
ಸರ್ವಜ್ಞ ಸರ್ವರ ರಕ್ಷಿಸು॥ ೮೨

ಬಡಮಕ್ಕಳಿಗೆ ಹಾಲು। ಉಡಲು ತಾಯಿಗೆ ಸೀರೆ।
ಒಡಲ ತುಂಬ ಅನ್ನ ನೀಡೂತ-ರೋಗವ
ಹೊಡೆದೋಡಿಸಬೇಕು ಸಿದ್ಧೇಶ॥ ೮೩

ಬಡವರ ಮದುವೆ ನೀ। ಸಡಗರದಿಂದಲಿ।
ಒಡನೆ ಸಾಸಿರ ಮಾಡುವದು-ಸಿದ್ಧೇಶ
ಕೂಡಲೆ ಒಪ್ಪಿಕೊಳ್ಳಯ್ಯ॥ ೮೪

ಮಾಡೂವಿ ಮನಮುಟ್ಟಿ। ನೀಡುವಿ ನಿಜವರಿತು।
ದುಡಿಯಲು ಕಲಿಸು ಶುದ್ಧದಿ-ಮಾನವರ
ಬಡತನ ಪರಿಹರಿಸಯ್ಯ॥ ೮೫

ಮಾಡಿದ ಕರ್ಮವದು । ಬಿಡದು ಏನಾದರು ।
ನಡೆಯಬೇಕು ಸದಾಚಾರದಿ–ಶಿಷ್ಯಗೆ
ಬಿಡುಗಡೆ ಮಾಡಿ ಕಲಿಸಯ್ಯ ॥ ೮೬

ಸಕಲ ಜೀವಿಗಳಲಿ । ಕುಕುಲಾತಿ ಇದೆ ಕಂದ ।
ಲೋಕೇಶನಾಗಿ ಬಾಳುವಿ–ಸಿದ್ಧರಾಮ
ಯಾಕೆ ಚಿಂತಿಸುವಿ ಯೋಗಿನಾಥ ॥ ೮೭

ಸಿದ್ಧರಾಮನೆ ನೀನು । ಶುದ್ಧ ಅಮೃತ ತಂದು ।
ಬದ್ಧರನು ಉದ್ಧಾರ ಮಾಡಲು–ಪಾತಾಳದಿ
ಇದ್ದ ಅಮೃತ ಎನಗೆ ಎರೆಯಯ್ಯ ॥ ೮೮

ನಿನ್ನ ಅಮರ ಶಕ್ತಿ । ಬೆನ್ನಿಗೆ ಇರುವಾಗ ।
ಇನ್ನಾವ ಭಯವು ಎನಗಿಲ್ಲ–ಮಹೇಶ
ಇನೊಮ್ಮೆ ಅಮೃತ ಎರೆಯುವೆ ॥ ೮೯

ಹೋಗು ಬೇಗನೆ ಕಂದ । ಸಾಗಿ ಯಮಪಟ್ಟಣಕೆ ।
ಭೋಗಿಸುವ ಯಾತನೆ ಕಳೆಯಯ್ಯ–ನಿನ್ನಿಂದ
ನೀಗುವರು ನರಕ ಬಾಧೆಯನು ॥ ೯೦

ಹಿಗ್ಗಿನಿಂದ ಮುಖದ । ಮೊಗ್ಗ ಅರಳಿತು ಆಗ ।
ಬಾಗಿ ಶೂಲಿಯ ಪಾದ ಹಿಡಿದನು–ಸಿದ್ಧ
ಯೋಗಿಕುಲ ಚಕ್ರವರ್ತಿಯು ॥ ೯೧

ಮೆಚ್ಚಿದನು ಭಕ್ತಿಗೆ । ಸಚ್ಚಿದಾನಂದ ಶಿವನು ।
ಹುಚ್ಚನೆ ಏಳೆಂದು ಎಚ್ಚರ–ಮಾಡಿದನು
ನಚ್ಚಿನ ಮೆಚ್ಚಿನ ಕುವರನ ॥ ೯೨

ಹರ ಸಿದ್ಧರಾಮಯ್ಯ । ಗುರು ಸಿದ್ಧರಾಮೇಶನೆ ।
ಕರುಣೆಯ ಕಾಸಾರ ನೀ ಬಾರೊ–ಎನ್ನುತ
ನರಕಿಗಳು ಸಿದ್ಧನಿಗೆ ನೆನೆವರು ॥ ೯೩

ಪುಣ್ಯಾಭಿರಾಮನಿಗೆ । ಕಂಣಾರೆ ಕಂಡಾಗಲೆ ।
ಕಂಣು ಮನ ತುಂಬಿ ತುಳಕಿತು–ದೀನರು
ಕುಣಿದರು ಸಿದ್ಧನ ನುತಿಸೂತ ॥ ೯೪

ಶಿವನ ಆಣತಿಯಂತೆ । ಭವಮಾಲೆ ಹರಿಸಲು ।
ಜಾವಜಾವಕೆ ದೇವನ ನೆನೆದು-ಮುಂದಾಗಿ
ಶಿವಯೋಗಿ ಸಿದ್ಧೇಶ ಹೊರಟನು ॥ ೯೫

ಬಂದನು ಕರುಣಾಳು । ಇಂದುಧರನವತಾರಿ ।
ಕಂದರೆ ಏಳಿರಿ ಎನುತಲಿ-ಲಾಕೂಳ
ತಂದೆ ಸಿದ್ಧರಾಮ ಎತ್ತಿದನು ॥ ೯೬

ಯಮಪುರದಲಿ ಸಿದ್ಧ-। ರಾಮನು ನಿಂತಿಹನು ।
ಪ್ರೇಮದ ಖಣಿ ಮೇಣ್ ಪುಣ್ಯದ-ಶಿಖಾಮಣಿ ।
ನಮಃಶಿವಾಯ ಉಚ್ಚರಿಸೆ ॥ ೯೭

ಹಿಗ್ಗಿನಿಂದ ಕತ್ತು । ಬಿಗಿದು ಬಂದಿತು ಸಿದ್ಧ- ।
ಯೋಗಿಯು ಕಂಣೀರು ಸುರಿಸಿ-ವೈಮರೆತು
ಕೂಗಿದನು ಪಂಚಾಕ್ಷರಿ ಮಂತ್ರವ ॥ ೯೮

*ಯಮಸದನಕೆ ಹೋಗಿ । ಸ್ವಾಮಿಕಂಡೆ ಯಾತನೆ
ಕುಮಾರನಿಗೆ ಮಾಪ್ರಸಾದ-ಕೊಟ್ಟಾಗ
ನಿಮಿಷದಿ ದಿವ್ಯತ್ವ ಪಡಕೊಂಡ ॥ ೯೯

---

*೯೯ರ ಪದವನ್ನು ೧೪ನೆ ಪದದ ನಂತರ ಹಾಡುವದು.

ಸಂಧಿ ೧೭

ನರಕವಾಸವು ಪುಣ್ಯ–। ಪುರವಾಗಿ ನಿಂದಿತ್ತು ।
ದುರಿತಕರ್ಮಂಗಳು ದೂರಾಗಿ-ಪತಿತರು
ವರಸಿದ್ಧರಾಮನ ಹರಸಿದರು ॥

ಕಿವಿಮೇಲೆ ಬಿದ್ದೀತು । ಭವಹರನ ಮಾಮಂತ್ರ ।
ಜೀವಿಗಳು ಪಾಶದಿ ಮುಕ್ತಾಗಿ-ಎಲ್ಲರು
ಶಿವಸಿದ್ಧನ ಪಾದವ ಹಿಡಿದರು ॥ ೨

ಪಾಪಿಗಳ ಮಹಾಪಾಪ । ಲೋಪಮಾಡಲು ಬಂದ ।
ಕಾಪಾಡಲು ಬಂದ ದಯಾಮಯ–ಯಾರ್‍ಯಾರ
ತಪ್ಪು ಎಣಿಸದೆ ಸಲುಹಲು ॥ ೩

ಭಕ್ತಪಾಲ ಪರಮ ವಿ- । ರಕ್ತ ಸಿದ್ಧನು ಬಂದ ।
ಮುಕ್ತ ಮಾಡುತ ನಮಗೆಲ್ಲ-ದಿವ್ಯ ಅವಿ-
ಮುಕ್ತ ಕ್ಷೇತ್ರದ ಒಡೆಯನು ॥ ೪

ತಿಮಿರಹರ ಸಿದ್ಧ- । ರಾಮ ನಿನ ಬೆಳಕಿಪತಿಲಿ ।
ಪ್ರೇಮದಿ ಸಲವು ಮಹಾಯೋಗಿ-ನಮಗಿನ್ನು
ಧಾಮವ ತೋರೊ ವಿರಾಮದ ॥ ೫

ಪರಿಪರಿಯಿಂದ ಈ । ದುರಿತ ಕರ್ಮವನುಂಡು ।
ಜರೆದು ಹೋಯಿತು ತನುಮನ-ದೀನರ
ಹರನಾಗಿ ಗುರುವಾಗಿ ಪೊರೆದಿಹೆ ॥ ೬

ಸೊನ್ನಲಿಗಿಗೆ ಬಂದರು । ಬೆನ್ನತ್ತಿ ಯೋಗಿಯ ।
ತನು ಮನದಿಂದ ಸೇವೆಯನು-ಸಲ್ಲಿಸಿ
ಅನುಭವದಿ ಹುಟ್ಟು ಕಳೆಯಲು ॥ ೭

ಪತಿತ ಪಾಮರರ । ಪಾತಕ ಪರಿಹರಿಸಿ ।
ಜಾತಮಾಡಿಹನು ಪಾವನ-ದೀನರ
ಹಿತದಿ ಸಲಹುತ ಸಿದ್ಧರಾಮ ॥ ೮

ಹಿಂದಣ ಕರ್ಮದ ಮಹಾ । ಬಂದ ಪಾಪದ ರಾಶಿ ।
ಇಂದಿಗೆ ಹರಿದು ಹೋಯಿತು-ಮುಂದೆ
ನಂದಿವಾಹನನಿಗೆ ಅಂಜಬೇಕು ॥ ೯

ಕೆಟ್ಟ ಕಾಯಕೆ ಮೆಚ್ಚಿ । ಹುಟ್ಟದಿರಿ ಭುವಿಯೊಳು ।
ನೆಟ್ಟನೆ ಶಿವನ ಪೂಜಿಸುತ-ಈ ಭವ
ಸುಟ್ಟು ಗೆದೆಯಿರಿ ಶಿವತೇಜದಿ ॥ ೧೦

ಶುದ್ಧ ಕಾಯಕಮಾಡಿ । ಬುದ್ಧಿವಂತರಾಗಿ ।
ತಿದ್ದೀರಿ ನಿಮ್ಮ ತ್ರಿಗುಣವ-ಈ ಭವದ
ಹೊದ್ದಿದ ಮಾಯೆಯ ಹರಿಯಿರಿ ॥ ೧೧

ನುಡಿಯಿರಿ ಸತ್ಯವನು । ನಡೆಯಿರಿ ಆಚಾರದಿ ।
ದುಡಿಯಿರಿ ಮೈ ಉಳಿಸದೆ-ಯಾರೀಗೆ
ದುಡುಕಿ ಮನ ನೋಯಿಸಬೇಡಿರಿ ॥ ೧೨

ದೇವನನು ಬಕುತಿಯ । ಭಾವದಿ ಪೂಜಿಸುತ ।
ದೇವರ ಕಾರ್ಯಕ್ಕೆ ಹಿಂದಿಂದೆ-ಜರಿಯದೆ
ಸೇವೆಗೈಯುವದು ಮುದದಿಂದ ॥ ೧೩

Cl. NO. O23 33N65
Acc. NO. 199.

ಬಡವರ ಮೇಲೆ ದಯೆ । ಇಡಿರಿ ಮನಮುಟ್ಟಿ ।
ಕೆಡಕ ಬಯಸದಿರಿ ಯಾರಿಗೆ-ಊರೊಳು
ಒಡಕ ಹುಟ್ಟಿಸದಿರಿ ಕಡೆತನ ॥ ೧೪

ಶಿವಸಿದ್ಧರಾಮನೆ । ಭವರೋಗ ವೈದ್ಯನೆ ।
ಭುವಿಗೆ ಅವತರಿಸಿದಿ-ಮಾಯೋಗಿ
ಸೇವೆ ಮಾಡಲು ಕಲಿಸಯ್ಯ ॥ ೧೫

ಭಕ್ತಿಯ ಮಾರ್ಗವನು । ಸಕಲರಿಗೆ ತೋರಲು ।
ಮುಕ್ತಿಯ ಒಡೆಯನ ಅಭಿಷೇಕ-ಮಾಡಲು ವಿ-
ರಕ್ತ ಸಿದ್ಧನು ನಿಂತಿಹನು ॥ ೧೬

ಗುಡ್ಡರೆ ನೀವು ಇನ್ನು । ತಡಮಾಡದಿರಿ ಬೇಗ ।
ಒಡೆಯ ಆದಿಲಿಂಗಯ್ಯನಿಗೆ-ಅಭಿಷೇಕ
ಮಾಡುವದು ವೈಶಾಖ ಹುಣ್ಣಿಮೆಗೆ ॥ ೧೭

ಅದೆ ಶುಭ ಸಮಯದಿ । ಮುದದಿಂದ ಬಡವರ ।
ಮದುವೆ ಸಾಸೀರ ಮಾಡುವದು-ಬೇಗನೆ
ವಧು ವರರೀಗೆ ಬರ ಹೇಳಿರಿ ॥ ೧೮

ಗುರುವೀನ ಪಾದಕ್ಕೆ । ಎರಗಿದರು ಶಿಷ್ಯರು ।
ತ್ವರದಿಂದ ನಾಲ್ಕು ನಿಟ್ಟಿಗೆ-ಹೊರಟರು
ಗುರುಸಿದ್ಧರಾಣತಿ ಪಡಕೊಂಡು ॥ ೧೯

ಕೆಂದ ಬಂಣದ ಬಲು । ಚಂದ ಚಂದ ಹೋರಿಗಳು ।
ನಂದಿಯಹಂಗ ಮೈಮಾಟ-ಹಂಡ ಬಂಡ
ಹೊಂದಿ ನಡೆದವು ಸಾಲುಗೊಂಡು ॥ ೨೦

ಮುತ್ತಿನಂಥ ಬಂಣದ । ಎತ್ತುಗಳು ಬಲು ಚಂದ ।
ಕತ್ತು ತಿರುವಲು ಬಾರದಂಗ-ಮೈತುಂಬಿ
ಒತ್ತಿನಟ್ಟಂಥ ಕೋಡುಗಳು ॥ ೨೧

ಹಿಂಡಾಗಿ ಹೊರಟಾವ । ಚೆಂಡಿನಂಗ ಹಾರುತ ಪ್ರ- ।
ಚಂಡ ಕೀರೂತಿ ಸಾರೂತ-ಸಿದ್ಧನ ಅ-
ಖಂಡ ಶಿವತೇಜ ಬೀರೂತ ॥ ೨೨

ಹೆಜ್ಜೆ ಎತ್ತಿಟ್ಟಾಗ। ಗುಜ್ಜಿಯರು ಕುಣಿದ್ಹಾಂಗ।
ಗೆಜ್ಜೆಯ ದನಿ ಬಲುಚಂದ-ಕೇಳೂತ
ಲಜ್ಜಿತರಾದರು ನೀರೆಯರು॥ ೨೩

ಮೇಲಾದ ಹಣೆಕಟ್ಟು। ಬಾಲ ಗೊಂಚಲ ಪರಿ।
ಕಾಲೆತ್ತಿ ಇಟ್ಟರೆ ಕುಣಿದ್ಹಂಗ-ಕಂಡವು
ಹಾಲು ಬಂಣದ ಹೋರಿಗಳು॥ ೨೪

ಜರದ ಪೀತಾಂಬರ। ಹರಿದು ಝೂಲವ ಮಾಡಿ।
ಹೋರಿಗಳ ಮೇಲೆ ಹೊದ್ದೀಸಿ-ತಲೆಗೆ
ತುರಾಯಿ ಕಟ್ಟಿಹರು ಮುತ್ತೀನ॥ ೨೫

ಸಿಂಗರಿಸ ಹಾಕಿಹರು। ಬಂಗಾರ ವಸ್ತಗಳ।
ಲಿಂಗಮುದ್ರೆಯು ಮೈಮೇಲೆ-ಹಣೆತುಂಬ
ಮಂಗಲ ವಿಭೂತಿ ಧರಿಸಿಹರು॥ ೨೬

ಕಾವಿಯ ಪತಾಕಿಗೆ। ದೇವ ಬಸವನ ಮುದ್ರೆ।
ಅವಿರತ ಆಗಸದಿ ಹಾರೂತ-ಸಾರಿತು
ಅವಿಮುಕ್ತ ಕ್ಷೇತ್ರ ಸೊನ್ನಲಗಿ॥ ೨೭

ಕೊಂಬ ಮದ್ದಲಿ ಜಾಂಗಟಿ। ಸಂಭ್ರಮದಿ ನುಡಿಸೂತ।
ಸಾಂಬ ಶಿವನೀಗೆ ಹಾಡೂತ-ನಡೆದಾಗ
ಕಾಂಬವರ ಕಂಣು ಬೆರಗಾಗಿ॥ ೨೮

ಊರೂರ ಬಕುತರು। ಕರೆದು ತಮ್ಮೂರಲ್ಲಿ।
ಗೌರವಿಸಿ ಭಕ್ತಿ ಕಾಣಿಕೆಯ-ಸಲ್ಲಿಸಿ
ದರುಶನಕೆ ಬರುವೆವೆಂದರು॥ ೨೯

ನಾರಿಯರು ಕೂಡಿಕೊಂಡು। ಗುರುವಿನ ಮಾಮನೆಗೆ।
ಪರಿಪರಿ ಪಕ್ವಾನ್ನ ಸಲ್ಲಿಸಲು-ಭಕ್ತೀಲಿ
ಕರೆದರು ನೆರೆಹೊರೆಯವರ॥ ೩೦

ಶಾವಿಗೆ ಸೈದಾಣಿ। ಸೌತಿಬೀಜ ಉಗರೊತ್ತು।
ಬೇವಿನಹೂ ಪರಡೀಯ-ಮಾಡಿದರು
ನವಯುವತಿಯರು ಸಂಭ್ರಮದಿ। ೩೧

ಹಪ್ಪಳ ಸಂಡಗಿಯ । ಉಪ್ಪಿನ ಕಾಯಿಗಳ ।
ಮುಪ್ಪಿನವರು ಅತಿ ಹರುಷದಿ-ಮಾಡಿದರು
ಅಪ್ಪ ಸಿದ್ಧರಾಮನ ಜಾತರಿಗೆ ॥ ೩೨

ಸಂಣಾದ ಮಾಲೂದಿ । ಎಂಣಿ ಹೋಳಿಗೆ ಲಡ್ಡುಗಿ ।
ಬಂಣೀನ ಕುರುಡಿಗೆ ಉಗದಪ್ಪಳ-ಮಿತ್ರೆಯರು
ಅಣಿಮಾಡಿ ಕಳುಹಿದರು ಛತ್ರಕ್ಕೆ ॥ ೩೩

ಬೇಸನ ಗರಿಉಂಡೆ । ಏಸೊಂದು ಪರಿ ಕಟ್ಟಿ ।
ಬಿಸಿಬಿಸಿ ಕರಜಿ ಕಾಯಿಯ–ಮಾಡಿದರು
ಬೇಸರಿಸದೆ ಸುರಳಿ ಹೋಳಿಗೆಯ ॥ ೩೪

ಹುರಿಟ್ಟ ಬಾನದ್ದಿಟ್ಟ । ಕರದಂಟ ಕೋಡಬೇಳಿ ।
ಬುರುಬುರಿ ಚಕ್ಕಲಿ ಗಿಲಿಗಿಂಚಿ-ಮಾಡಿದರು
ಖಾರಪುರಿ ಸಜ್ಜಕದ ಹೋಳಿಗಿ ॥ ೩೫

ಮಂಡಿಗಿ ಎಳ್ಳಿನ । ಸಂಡಿಗಿ ಗುಳ್ಳುಂಡಿ ।
ಹಿಂಡಿಗಳ ಕುಟ್ಯಾರ ತರತರದ–ಅಡಗಿ
ಮಾಡಿ ಕಳುಹಲು ಭಕ್ತೀಲಿ ॥ ೩೬

ಹುಗ್ಗೀಯ ಕುಟ್ಯಾರ । ಹೀಗ್ಹೂತ ಹಾಡೂತ ।
ರಾಗಿ ಗೋದಿ ಜೋಳ ಸಜ್ಜೆಯ–ಬೀಸ್ಯಾರ
ಯೋಗಿ ಸಿದ್ಧರಾಮನ ನುತಿಸೂತ ॥ ೩೭

ಭತ್ತ ಕುಟ್ಟುವಾಗ । ಹೊತ್ತು ಗೊತ್ತಾಗಲಿಲ್ಲ ।
ಉತ್ತುಮ ಅಕ್ಕಿಯ ರಾಶಿ-ಹಾಕಿದರು
ಚಿತ್ತ ಸಿದ್ಧೇಶನ ನೆನೆವಲ್ಲಿ ॥ ೩೮

ಹೆಪ್ಪ ಹಾಕಿ ಹೊಸೆದು । ತುಪ್ಪ ಕಾಯಿಸಿ ಬೇಗ ।
ಅಪ್ಪ ರಾಮಯ್ಯನ ದಾಸೋಹಕೆ-ನಾರಿಯರು
ತುಪ್ಪಿನ ಕೊಡಗಳ ತಂದಿಹರು ॥ ೩೯

ಹಾಲಿನ ಕುಂಭಗಳು । ತಲೆಮೇಲೆ ರಂಭೆಯರು ।
ಬಲಗೈಯ ಬೀಸುತ ನಡೆದಾರ-ಹಳ್ಳಿಯ
ಚೆಲುವೆಯರು ಸೊನ್ನಲಾಪುರಕೆ ॥ ೪೦

ನೊಸಲಿಗೆ ವಿಭೂತಿ । ಹಸನಾದ ಮನಸಿನ ।
ಮೊಸರಿನ ಕೊಡ ತಲೆ ಮೇಲೆ-ನಾರಿಯರು
ನಸು ನಗುತ ಹೊತ್ತು ನಡೆದಿಹರು ॥ ೪೧

ಗಾಣಿಗರು ಬಕುತೀಲಿ । ಕಂಣಿಗೆ ನಿದ್ದಿಲ್ಲವೆ ।
ಗಾಣ ಆಡಿಸ್ಯಾರ ಬೆಳತನ–ಸಿದ್ಧರಾಮನ
ಎಂಣಿ ಮಜ್ಜನಕೆ ಸಲ್ಲಿಸಲು ॥ ೪೨

ಎಳ್ಳೆಣ್ಣೆ ಕುಸುಬೀಯ । ಒಳ್ಳೆಣ್ಣೆಯ ಕೊಡಗಳ ।
ಹಳ್ಳಿ ಪಟ್ಟಣದವರು ತಂದಾರ–ಯೋಗಿಗೆ
ಅಳಿಲ ಸೇವೆಯ ಸಲ್ಲಿಸಲು ॥ ೪೩

ಬೆಲ್ಲ ತುಂಬಿಕೊಂಡು । ಉಲ್ಲಸದಿ ಬಂಡಿಗಳು ।
ಗುಲುಗುಲು ಗೆಜ್ಜೆಯ ನಾದವ–ಮಾಡೂತ
ಸಲೆ ಸೊನ್ನಲಗೀಗೆ ಹೊರಟವು ॥ ೪೪

ಸಕ್ಕರಿ ಹೇರಿದ । ಲೆಕ್ಕಿಲ್ಲದ ಹೋರಿಗಳು ।
ಥಕಥಕ ಕುಣಿಯುತ ನಡೆದಾಗ-ಜನರು
ಮಿಕಿಮಿಕಿ ನೋಡಹತ್ತಿದರು ॥ ೪೫

ಬಾಳಿ ಕುಂಬಳಕಾಯಿ । ಎಳೆಯ ಸೌತೆಕಾಯಿ ।
ಹೊಳೆ ಬದನೀಕಾಯಿ ಹೀರಿಕಾಯಿ–ಚಾವಳಿ
ಕಳುಹಿದರು ಬಟಾಣಿ ಬಂಡಿ ಬಂಡಿ । ೪೬

ಪಡವಳ ತಿಪರಿಯ । ಬೆಂಡಿ ಅವರಿಕಾಯಿ ।
ಸಂಡಿಗಿಗುಂಬಳ ಗಜ್ಜರಿ–ಮೂಲಂಗಿ
ಕಡಲೆ ಪಲ್ಯೆ ಸಲ್ಲಿಸಿದರು ॥ ೪೭

ಮೆಣಸಿನ ಕಾಯಿ ಡೊಣ್ಣ– । ಮೆಣಸಿನ ಕಾಯಿ ಶಾವಿ ।
ಹುಣಸೀನಕಾಯಿ ಹುಳಿ ಪಲ್ಯೆ–ದಾಸೋಹಕೆ
ಹಂಣುಗಳ ತಂದಿಹರು ತರತರದ ॥ ೪೮

ಮೆಂತೆ ಸಬ್ಬಸಗಿ । ಕೋತಂಬರಿ ಕರಿಬೇವ ।
ಸಂತೆಯಲಿ ಸಿಕ್ಕೀವ ಪಲ್ಲೆಗಳ–ರಾಶೀಯ
ಸಂತಸದಿ ತಂದು ಒಟ್ಟಿದರು ॥ ೪೯

ಕಸಕಸಿ ಕೊಬ್ಬರಿ। ಹೊಸ ತೆಂಗಿನ ಕಾಯಿ।
ಮಸಾಲಿ ಜಿನಸ ಮರೆಯದೆ-ತಂದಾರ
ಏಸೆಂತ ಹೆಸರು ಹೇಳುವದು॥ ೫೦

ಉಡಿಯಕ್ಕಿ ಸಾಮಾನ। ಅಡಿಕೆ ವಿಳ್ಯೆದ ಎಲೆ।
ಬಿಡದೆ ತಂದಾರ ಭಕ್ತಿಯಲಿ-ಮಮತೆಯ
ಉಡುಗರೆ ಮೊದಲು ಮಾಡಿಕೊಂಡು॥ ೫೧

ಬಾಸಿಂಗ ದಂಡೆಗಳು। ಏಸೊಂದು ತಂದಿಹರು।
ಹೊಸತರದ ಹಾರ ತುರಾಯಿ—ಹೂಗಾರರು
ವಸುಧೀಶನಲ್ಲಿಯ ಕಾರ್ಯಕ್ಕೆ॥ ೫೨

ಮಾಂಗಲ್ಯಸೂತ್ರಗಳು। ಕಾಲುಂಗರ ಕಿರಿಪಿಲ್ಲೆ।
ಬಂಗಾರ ಬುಗುಡಿ ಮೂಗುತಿ-ಪತ್ತಾರರು
ಮಂಗಲ ಕಾರ್ಯಕ್ಕೆ ತಂದಿಹರು॥ ೫೩

ಬೀದಿಯ ಸಿಂಗರಿಸಿ। ಕದಳಿಯ ಕಂಬ ಕಟ್ಟಿ।
ಹದಿನಾರು ಜಾತಿಯ ಪತ್ರಗಳ—ತೋರಣ
ಸದರಿಗೆ ಒಪ್ಪಿದವು ತಳಿರ॥ ೫೪

ಬಿಳಿಯ ರಂಗವಲಿ। ಏಳೇಳು ಬಂಣದವು।
ಥಳಿ ಹೊಡೆದು ಮನೆಮುಂದೆ—ಹಾಕಲು
ಕಳೆತಂದು ಕೊಟ್ಟೀತು ಬೀದಿಗೆ॥ ೫೫

ಕಳಸ ಕನ್ನಡಿಯಿಂದ। ಹೊಳೆದೀತು ಮಂಟಪ।
ತಳಿರ ತೋರಣ ಭರಜರಿ—ಕಟ್ಟಿಹರು
ಇಳಿಬಿಟ್ಟರು ಮುತ್ತಿನ ಝುಲ್ಲರಿ॥ ೫೬

ಚಿತ್ರಕಾರನು ಲೋಕ-। ಸೂತ್ರಧಾರನ ಕ್ಷೇತ್ರವ।
ನೇತ್ರ ಕುಕ್ಕುವಂತೆ ಬರೆದನು-ಮಂಟಪ
ಚಿತ್ರ ವಿಚಿತ್ರ ಲೀಲೆಯದು॥ ೫೭

ಈರೇಳು ಲೋಕಂಗಳ। ಚರಾಚರಗಳೆಲ್ಲ।
ತೋರಿದ ಕುಂಚೀನ ಕೌಶಲ್ಯ—ಚಿತ್ರಕಾರ
ಮರ್ತ್ಯಕ್ಕೆ ಕೈಲಾಸ ಇಳಿದಂತೆ॥ ೫೮

ರಂಗಮಂಟಪ ಶಿವ- । ಲಿಂಗದ ಕಳೆತುಂಬಿ ।
ಸಂಗರಹಿತನ ಮಹಿಮೆಯು–ಸಾರೂತ
ಮಂಗಳಮಯವಾಗಿ ತೋರಿತು ॥ ೫೯

ಓಂಕಾರ ಪ್ರಣವದು । ಸಾಕಾರಗೊಳಿಸಿದನು ।
ಲೋಕಗಳನೇಕ ತೋರಿದನು–ಮಂಟಪ
ಏಕ್ಕೈಕಮಾಡಿ ಮುಗಿಸಿದನು ॥ ೬೦

ದೂರ ದೇಶದವರು । ದಾರೀಲಿ ಬರುವಾಗ ।
ಅರವಟ್ಟಿಗೆ ಅನ್ನಛತ್ತರ–ಇಟ್ಟಾರ
ವರಸಿದ್ಧರಾಮನ ಬಕುತರು ॥ ೬೧

ದೂರ ದೇಶದವರು । ಕರಕೊಂಡು ಬೀಗರಿಗೆ ।
ಗುರುಸಿದ್ಧರಾಮನ ಕಾರ್ಯಕ್ಕೆ-ಹೊರಟರು
ವರಪುಣ್ಯ ಪಡೆದುಕೊಳ್ಳಲು ॥ ೬೨

ಮದುವಿಮಕ್ಕಳಿಗೆ । ಮೋದದಿ ಕರಕೊಂಡು ।
ಸದಮಲ ಗುರುವಿನ ತಾಣಕ್ಕೆ–ಹೊರಟರು
ಸುದತಿಯರೆಲ್ಲರು ಜತೆಗೂಡಿ ॥ ೬೩

ಒಂಕಿ ಬಾಪುರಿಯಿಟ್ಟು । ಕಂಕಣ ಕೈಕಟ್ಟು ।
ಕುಂಕುಮ ಬಟ್ಟು ನೊಸಲಿಗೆ-ಇಟ್ಟಾರ
ಬಿಂಕೀಲಿ ಹೆಜ್ಜೆಯನಿಡುತ ॥ ೬೪

ಸರಗಿ ಪುತ್ತಳಿಸರ । ತೋರ ಚಂದಿರಹಾರ ।
ಸೂರ್ಯಹಾರ ಗೋದಿಸರ–ಮುತ್ತಿನ್ಹಾರ
ಕೊರಳಾಗ ಹೊನ್ನದ ಸರಗಳು ॥ ೬೫

ಪಾಟಲಿ ಬಿಲವರ । ಗೋಟ ಮುತ್ತಿನ ಬಳಿ ।
ಬಟ್ಟಿನಾಗುಂಗರ ತರತರ–ಇಟ್ಟಾರ
ಕಟ್ಟಾಣಿಸರ ಕಟ್ಟಿಹರು ॥ ೬೬

ವಾಲಿ ವಜ್ರದ ತೇಜ । ಬಾಲೆಗಲ್ಲಿನ ಮೇಲೆ ।
ಓಲಾಡುವಾಗ ಹೊಳೆದಾವ–ನಾರಿಯರ
ಚಲುವೀಕೆ ಚಿಮ್ಮಿ ಚಲ್ಲುತ ॥ ೬೭

ಮುತ್ತು ರತ್ನ ವಜ್ರದ। ನತ್ತು ಮೂಗಿನಾಗ।
ಮತ್ತೆ ಇಟ್ಟಾರ ವಜ್ರದಡಾಬ-ನೀರೆಯರು
ಕತ್ತು ಕುಣಿಸುತ ನಡೆದಾರ॥ ೬೮

ದಟ್ಟ ಪೀತಾಂಬರುಟ್ಟು। ಕಟ್ಯಾರ ಮುತ್ತಿನದಂಡಿ।
ಪಟ್ಟ ಇಟ್ಟಾರ ಹೊನ್ನರನ್ನದ-ತುರುಬೀಗೆ
ಕಟ್ಯಾರ ಚಿನ್ನದ ಹೂಮಾಲೆ॥ ೬೯

ಕಾಲುಂಗರ ಕಿರಿಪಿಲ್ಲೆ। ಕಾಲಗೆಜ್ಜೆ ಕಡಗ।
ಬಾಲೆಯರ ಕಾಲಲ್ಲಿ ರುಳಿ-ಪೈಂಜಣ
ಗಿಲಿ ಗಿಲಿ ಎಂದು ನುಡದಾವ॥ ೭೦

ಸೆರಗೀಗೆ ಸಾವಿರ। ನೀರಗಿಗೆ ನೂರಾರು।
ಜರತಾರಿ ಸೀರಿ ಬಲು ಭಾರಿ-ನಡೆದಾರ
ವಾರಿಗೆ ಗೆಳತಿಯರು ಕೂಡಿಕೊಂಡು॥ ೭೧

ಗುಬ್ಬಿಕಂಣ್ಣಿನ ಸೀರಿ। ಟಬ್ಬಿಯ ಕುಬ್ಬಸ।
ಹಬ್ಬಕುಡುವ ಸೀರೆಯನುಟ್ಟು-ಹೊರಟಾರ
ಉಬ್ಬುಬ್ಬಿ ಸೊನ್ನಲಗಿ ಜಾತರಿಗೆ॥ ೭೨

ಹಸಿರಪೈಠಣಿ ಮೇಲೆ। ಕುಸಲದ ಹೂಗಳು।
ಕಸುತಿ ತಗೆದಾರ ಕುಬಸೀಗೆ-ಕನ್ಯೆಯರು
ಬಿಸಲೆನ್ನದೆ ಹೊರಟಾರ ಹರುಷದಿ॥ ೭೩

ಮಂಗಳವಾಡದ ಸೀರಿ। ಹೆಂಗಳೆಯರು ಉಟ್ಟಾರ।
ಕಂಗಳನೋಟದಿ ಹರಷವು-ತುಂಬೀತು
ಮಂಗಳಮಯಯೋಗಿ ಕಾಣಲು॥ ೭೪

ಚಂದಿರಕಳೆ ಸೀರಿ। ಇಂದುಮುಖಿಯರುಟ್ಟು।
ಗಂಧ ಕಸ್ತೂರಿ ಬೊಟ್ಟು ಹಣೆಗೆ-ಒಪ್ಪಿಹವು
ಮಂದಗಮನೆಯರು ನಡೆದಾರ॥ ೭೫

ಹಗಲಚಿಕ್ಕಿಯ ಸೀರಿ। ಮುಗಿಲಬಂಣದ ಕುಬ್ಬಸ।
ಉಗಾದಿಗೊಮ್ಮೆ ಉಡುವಂಥ-ಸುಂದರಿ
ಬೇಗನೆ ಉಟ್ಟರು ಜಾತರಿಗೆ॥ ೭೬

ನೀಲಿಬಂಣದ ಸೀರಿ। ಗುಲಾಬಿ ಅಂಚವ।
ಸಲೆ ಹೇಳಿ ನೇಯಿಸಿದ ಸೀರಿ–ಉಟ್ಟಾರ
ವಾಲಿ ಬುಗಡಿಯ ಜೋಡಿ ಇಟ್ಟಾರ॥ ೭೭

ರತನ ಕಮಳದ್ಹೂವ। ಕುತನಿಯ ಕುಬ್ಬಸ।
ಜತನ ಮಾಡಿಟ್ಟು ತೊಟ್ಟಾರ–ಕೊರಳಾಗ
ಮುತ್ತು ಮಾಣಿಕದ್ಹಾರ ಇಟ್ಟಾರ॥ ೭೮

ಬಿಳಿಯರೇಶಿಮೆ ಸೀರಿ। ಒಳ್ಳೆ ಮುತ್ತಿನ ಚ್ಯಾರ।
ಬೆಳಗಿನ ಚಿಕ್ಕಿ ಹೊಳೆದ್ಹಂಗ–ಚೆನ್ನೆಯರ
ಬಿಳಿಯ ಬಂಣಕೆ ಹೋಲಿತು॥ ೭೯

ಕೆಂಡಚಿಕ್ಕಿಯ ಸೀರಿ। ಗೊಂಡೆ ಮುತ್ತಿನ ಸರ।
ದಂಡ ಆಳುವರ ಹೆಂಡರು–ಉಟಕೊಂಡು
ಗಂಡಂದಿರ ಸಂಗಡ ಹೊರಟಾರ॥ ೮೦

ನಾರಿಯರು ಉಟ್ಟಸೀರಿ। ನೂರೊಂದು ಬಂಣದವು।
ಯಾರು ಬಂಣಿಸಿದರು ಸಾಲದು–ದಾರಿಯಲಿ
ತರತರ ಬಂಣ ಕಂಡಿತ್ತು॥ ೮೧

ಊರೂರ ಗೌಡರು। ಸರದಾರ ದೇಸಾಯಿ।
ಹೊರಟಾರ ಕುದರಿಯ ಏರಿ–ಭಕ್ತೀಲಿ
ಬೆರಸಿ ಸುಭೇದಾರ ಮೊದಲಾಗಿ॥ ೮೨

ಆನಿಅಂಬಾರಿ ಏರಿ! ಮೇಣೆ ಪಲ್ಲಕಿ ಹತ್ತಿ।
ಸೊನ್ನಲಿಗಿಗೆ ಬಂದರು ಅರಸರು–ಸಿದ್ಧಗೆ
ರನ್ನ ಹೊನ್ನಿನ ರಾಶಿ ಸಲ್ಲಿಸಲು॥ ೮೩

ಕಂಟಲಿಎತ್ತಿನವರು। ಒಂಟಿಯ ಮೇಲಿನವರು।
ಬಂಟರು ನೆಂಟರು ಹೊರಟಾರ–ದರುಶನದಿ
ಕಂಟಕ ದೂರಗೈಯ್ಯಲು॥ ೮೪

ಸೌರಾಷ್ಟ್ರ ಭಕ್ತರು। ಸಾರೂತ ಹೊರಟಾರ।
ಕೀರೂತಿ ಸಿದ್ಧರಾಮೇಶನ–ಪಾದಕೆ
ಅರಪಿಸಲು ವಜ್ರ ವೈಡೂರ್ಯ॥ ೮೫

ಕುದುರೆಯ ಮೇಲೇರಿ | ಊದೂತ ಬಾರಿಸುತ |
ಬೀದಿಯಲಿ ಜನ ಬರತಿತ್ತು-ಸೊನ್ನಲಗಿ
ಮೇದಿನಿಯ ಕೈಲಾಸ ಕಂಡೀತು || ೮೭

ಜರದೊಲ್ಲಿ ನಿಲುವಂಗಿ | ಭರಜರಿ ಶಾಲುಗಳು |
ಕರವತಧಡಿಯ ಧೋತರ-ಉಡುಗರೆ
ಹೊರಟಿಹರು ಸಿದ್ಧನ ದರುಶನಕೆ || ೮೮

ಕಶಿ ಅಂಗಿ ಮೇಲಂಗಿ | ಏಸೊಂದು ತರದಂಗಿ |
ಹೊಸ ಹೊಸ ಮುಂಡಾಸ ಸುತ್ಯಾರ-ತವಕದಿ
ಅಸಮನ ಕ್ಷೇತ್ರಕೆ ಹೊರಟಾರ || ೮೯

ಸುತ್ಯಾರ ಮಂದಿಲ | ಮುತ್ತಿನ ತುರಾಯಿ |
ಹತ್ತು ಬೆರಳಿಗೆ ರನ್ನದ-ಉಂಗುರ
ಕತ್ತಿನಲಿ ನವರತ್ನ ಹಾರಗಳು || ೯೦

ಕರ್ಣಕುಂಡಲ ಶುಭ್ರ- | ವರ್ಣಕೆ ಒಪ್ಪಿಹವು ಸಂ- |
ಕೀರ್ಣ ಪಚ್ಚೆ ಪುಷ್ಪಾದಿ-ಮಣಿಗಳು
ಪೂರ್ಣ ಐಶ್ವರ್ಯ ತೋರಿಹವು || ೯೧

ಕರಿಯ ಕಂಬಳಿ ಹೊದ್ದು | ಕುರುಬರು ಹೊರಟರು |
ಕೊರಳಾಗ ಡೊಳ್ಳು ಕಟಗೊಂಡು-ಕುಣಿಕುಣಿದು
ಪರವೆ ಇಲ್ಲದಲೆ ನುಡಿಸಿಹರು || ೯೨

ತಾಳ ಮದ್ದಲಿಯವರು | ಮೇಳವ ಮಾಡಿಕೊಂಡು |
ಹಳ್ಳಿಪಳ್ಳಿಗಳಿಂದ ಹೊರಟರು-ನುಡಿಸೀದ
ಪೊಳ್ಳೆಲ್ಲ ತುಂಬೀತು ನಿನಾದ || ೯೩

ನಾನಾವಾದ್ಯದ ಸ್ವರ | ಬಾನಿಗೆ ಮುಟ್ಟೀತು |
ಜನಸ್ತೋಮ ಬಂದು ನೋಡೂತ-ಸಿದ್ಧನ
ಘನ ಕೀರುತಿ ಹಾಡಿ ಹರಸೀತು || ೯೪

ಸುವರ್ಣಪುರವು | ಅವರ್ಣನೀಯವಾಗಿ |
ಭವಾರ್ಣವವಾಗಿ ಪರಿಣಮಿಸಿ-ಭಕ್ತರ
ಶಿವಾರ್ಪಣ ಭಾವವು ಹೆಚ್ಚೀತು || ೯೫

ಸುಜನರು ಸುಸ್ವರ। ಭಜನೆಯ ಪದಗಳ।
ಮೂಜಗದೊಡೆಯನ ನುತಿಸಿ-ಹಾಡಿದರು
ಅಜ ಹರಿ ವಂದಿಪ ದೇವನ॥ ೯೬

ಬಂದಂಥ ಭಕ್ತರು। ವಂದಿಸಿ ಸಿದ್ಧಗೆ।
ತಂದ ಕಾಣಿಕೆ ಸಲ್ಲಿಸಿ–ಶಿವಸಿದ್ಧ
ತಂದೆ ಸಲುಹೆಂದು ಕೋರಿದರು॥ ೯೭

ಕುಂದಿಲ್ಲ ಕೊರತಿಲ್ಲ। ಬಂದಾರ ಸಿಂಗಾರದಿ।
ನಂದಿಧ್ವಜ ಗಗನದಿ ಹಾರಾಡಿ-ಸಾರೀತು
ನಂದಿವಾಹನನ ಮಹಿಮೆಯ॥ ೯೮

ದೇವರ ದೇವನೆ। ಶಿವಶಿವ ಹರಹರ।
ಪಾವನಾಕಾರ ಶಿವಸಿದ್ಧ-ರಾಮಯ್ಯ
ಶಿವಯೋಗಿ ಜಯ ಜಯವಾಗು॥ ೯೯

ಸಂಧಿ ೧೮

ಸೊನ್ನಲಗಿ ಎಂಬುದು । ಸಾನದು ಹಳ್ಳಿಯು ।
ಜನ ಅಲ್ಲಲ್ಲಿ ತುಂಬಿ ತುಳುಕೀತು-ಸಿದ್ಧನ
ಗುಣಗಾನ ಮಾಡಹತ್ತೀತು ॥ ೧

ಬಂದ ಬಕುತರಿಗೆಲ್ಲ । ಅಂದಾದ ಬೀಡಾರ ।
ತಂದೆ ಸಿದ್ಧರಾಮ ಒದಗೀಸಿ-ಕೊಟ್ಟನು
ಸಂದಿಲ್ಲದ ಸಾಸಿರ ಜನಕೆಲ್ಲ ॥ ೨

ಬಡವರು ಒಡೆಯರು । ಕಡು ದೀನದಲಿತರು ।
ಓಡೋಡಿ ಬರುತಿಹರು-ಜಾತ್ರೆಗೆ
ಕೂಡಿಹರು ಎಲ್ಲರು ಒಂದಾಗಿ ॥ ೩

ಮಕ್ಕಳಿಗೆ ಹಾಲು । ಸಕ್ಕರೆ ಹಣ್ಣುಗಳ ।
ಚಿಕ್ಕವರಿಗೆ ಬೇಡಿದ ಫಲಹಾರ-ಕೊಡುವರು
ಲೆಕ್ಕಿಲ್ಲದ ಸೇವಕರು ನೆರೆದರು ॥ ೪

ಜಳಕೀಗೆ ಬಿಸಿನೀರು ।ಬಳಿಸಲು ತಿಳಿನೀರು।
ಇಳಿಸಿದಲ್ಲೆಲ್ಲ ಊಟದ–ಉಪಚಾರಕೆ
ಕಳಸಗಿತ್ತಿಯರು ನಿಂತಿಹರು ॥ ೫

ಒಂದೆ ಮದುವೀಗೆ। ಗೊಂದಲ ಹಿಡಿವುದು।
ಸಂದಿಲ್ಲದ ಸಾವಿರ ಮದುವೆಯ–ಸಿದ್ಧತೆ
ಅಂದ ಚಂದಾಗಿ ನಡದೀತು ॥ ೬

ಅವರವರ ಕಾಯಕ। ತಾವಾಗಿ ಮಾಡುವರು।
ಸೇವಕರು ಭಯ ಭಕ್ತಿಯಲಿ–ಓಡಾಡಿ
ದೇವನ ಶುಭಕಾರ್ಯವ ॥ ೭

ನಿದ್ದಿ ನೀರಡಿಕಿಲ್ಲದೆ। ಸಿದ್ಧರಾಮನ ಶಿಷ್ಯರು।
ಬದ್ಧ ಕಂಕಣರಾಗಿ ದುಡಿವರು–ನಿಷ್ಠೆಯಲಿ
ಸಿದ್ಧನ ಹಾಡಿ ಹರಸಿದರು ॥ ೮

ದೀನ ದಲಿತರು। ಹೀನ ಪಾವನರೆಂಬ।
ಜ್ಞಾನಿ ಮೂಢರ ಭೇದಿಲ್ಲ–ಎಲ್ಲರು
ಮಾನವರೆಂಬುದು ಬಲ್ಲರು ॥ ೯

ಯೋಗಿವರೇಣ್ಯನು। ಬೇಗ ಮಾಡಿದಪ್ಪಣೆ।
ಸಾಗಿಸಲು ಮುಂದಿನ ಕಾರ್ಯವ–ಬಂದಿಹರು
ಯೋಗಿ ಭೋಗಿ ತ್ಯಾಗಿಗಳೆಲ್ಲ ॥ ೧೦

ಋತುವಿನೊಳಗೆ ಋತು। ಅತಿಚಂದ ವಸಂತ।
ಶೀತಲ ಪವನ ಬೀಸಿದರೆ–ಬಿಸಲಿಗೆ
ಸೋತಮನ ಮತ್ತೆ ಚೇತರಿಸಿ ॥ ೧೧

ಹಸಿರು ಸೀರೆಯನುಟ್ಟು। ವಸುಧೆ ತಾ ನಿಂತಾಳ।
ಹೊಸತನಕೆ ಮತ್ತೆ ಕರೆತಂದು–ರೈತರು
ಕಸುವೀಲಿ ದುಡಿಯ ತೊಡಗಿದರು ॥ ೧೨

ನಂದನ ವನದಂಥ। ಅಂದಾದ ಬನಸಿರಿ।
ಮಂದಾರಹೂವ ತೂಗ್ಯಾವ–ತುಂಬಿಗಳು
ಸುಂದರ ಕುಸುಮಕೆ ಎರಗುವವು ॥ ೧೩

ಓಂಕಾರ ನುಡಿದಂತೆ । ಝೇಂಕರಿಸುತ ತುಂಬಿ ।
ಬಿಂಕೇಲಿ ಸುಮಧುರ–ಪಾನಗೈದು
ಸೋಂಕಿನ ಸುಖವ ಪಡೆವವು ॥ ೧೪

ತಾಯಿಗೆ ಎರವಾದ । ಬಾಯಿಲ್ಲದ ಕೋಗಿಲೆ ।
ಬಾಯಲಿ ಅವ್ವೋ ಅವ್ವೋ ಎಂದು–ಕೂಗುತ
ಮಾಯದ ನೆರಹು ಬೇಡಿಹವು ॥ ೧೫

ತಾಯಿಯ ಕಳಕೊಂಡು । ಹಾಯಗೊಂಡು ಹಾಡಿ ।
ಜೀಯನ ಆಸರ ಬೇಡೂತ–ಕೋಗಿಲೆ
ಕಾಯ ಕಪ್ಪಾಗಿ ಕರಿಗೊಂಡಿದೆ ॥ ೧೬

ತುಂಬಿದ ಚಂದಿರನು । ಅಂಬುಧಿಗೆ ತನ ಶೀತ ।
ಬಿಂಬದ ಕಳೆ ಮನವಾರೆ-ನೀಡಿದನು
ತುಂಬಿ ತುಳುಕೀದೆ ಅಂಬುಧಿಯು ॥ ೧೭

ವೈಭವ ಸಂಪನ್ನ । ಶುಭ ಮಂಗಲ ದಿನ ।
ಅಭವ ಹೇಳಿದನು ವೈಶಾಖ–ಹುಂಣಿಮೆ
ಶುಭಲಗ್ನಕೆ ಇದು ಸುದಿನವು ॥ ೧೮

ಪೂಜೆಗಿಂತ ಮೊದಲು । ಸುಜನರಗೂಡ ಸಿದ್ಧ ।
ಭಜನೆಯ ಮಾಡೂತ ಕೆರೆಯ-ಅಗೆದಾಗ
ಸೋಜಿಗವಾಯಿತು ಭಕ್ತರಿಗೆ ॥ ೧೯

ಅರಸರು ಬಂದರು । ನಾರಿಯರೊಡಗೂಡಿ ।
ಕೆರೆಯ ಮಂಣು ಹೊತ್ತು ತುಂಬಲು-ನಿಂತಾಗ
ಬೇರೆ ಜನಗಳ ಪಾಡೇನು ॥ ೨೦

ಕಾಯಕದ ಮಾಮಂತ್ರ । ಬಾಯಿಂದ ಹೇಳದೆ ।
ಕೈಯಿಂದ ಮಾಡಿ ತೋರುವ-ಸಿದ್ಧರಾಮ
ಸ್ವಯಂ ಸಿದ್ಧನಲ್ಲದೆ ಮತ್ತೇನು ॥ ೨೧

ದೆಸೆದೆಸೆಯೊಳು ಸ್ವರ । ಪಸರಿಸಿ ಆ ಚಣದಿ ।
ಬಿಸಿಲಿನ ತಾಪ ಮರೆಸಿತು-ಸುಜನರ
ಅಸುವಿಗೆ ಚೇತನ ತಂದೀತು ॥ ೨೨

ಕ್ಷೇತ್ರದ ಶೃಂಗಾರ । ಕರ್ತೃ ಕಂಣಿಲೆ ಕಂಡು ।
ಸೂತ್ರಧಾರ ಸಿದ್ಧ ಮನಗಂಡು-ಹಾರೈಸಿ ತ್ರಿ-
ನೇತ್ರನ ಪೂಜೆಗೆ ಅಣಿಯಾದ ॥ ೨೩

ಆದಿಲಿಂಗಯ್ಯನ ಅ- । ಭೇದ್ಯದಿ ನುತಿಸೂತ ।
ಮೋದದಿ ಸಿದ್ಧೇಶ ನಮಿಸಿದ-ಎಚ್ಚತ್ತು
ಸುಧಾರಸ ಮಜ್ಜನಕ್ಕಿಲ್ಲೆಂದ ॥ ೨೪

ಹೊತ್ತು ಮುಳುಗಿತ್ತಾಗ । ಕತ್ತಲೆ ಕವೆದಿತ್ತು ।
ಉತ್ತುಮಾಂಗನು ತನ್ನ ಭಕ್ತರ-ಕರೆಸೀದ
ಚಿತ್ತಿಟ್ಟು ಕೇಳಿರಿ ನೀವೆಲ್ಲ ॥ ೨೫

ಧುರ್ಜಟಿಯನ । ಪೂಜೆ ಸಾಹಿತ್ಯದಲಿ ।
ಮಜ್ಜನಕ್ಕೆರೆಯಲು ಅಮೃತ-ತರಲಿಕ್ಕೆ
ಸುಜನರೆ ಕೈಲಾಸಕ್ಹೋಗುವೆ ॥ ೨೬

ನಿಲ್ಲಿಸ ಬೇಡಿರಿ । ಎಲ್ಲ ವಾದ್ಯಂಗಳನು ।
ಬಲ್ಲಹನ ಉತ್ಸವ ನಡೆಯಲಿ-ತರುವೆನು
ನಿಲ್ಲದಲೆ ಅಮೃತ ಬಲುಬೇಗ ॥ ೨೭

ಲಿಂಗಮಜ್ಜನಕ್ಕೆ ಅ- । ಭಂಗ ಅಮೃತ ತರಲು ।
ಸಂಗರಹಿತ ಸಿದ್ಧರಾಮಯ್ಯ-ಹೊರಟನು
ಮಂಗಳಮಯ ಶಿವನ ಕೈಲಾಸಕೆ ॥ ೨೮

ತನ್ಮಯನಾದನು । ಉನ್ಮನಿ ಸೇರಿದನು ।
ಚಿನ್ಮಯನಿಗೆ ಕಂಡು ಹರಸಿದನು-ಸಿದ್ಧ ಮ-
ನೋನ್ಮನೆಂದು ಎರಗಿದನು ॥ ೨೯

ಮೂಕ ವಿಸ್ಮಿತನಾಗಿ । ಯಾಕೆ ನಿಂದೆ ಸಿದ್ಧ ।
ಸುಕುಮಾರ ಎನ್ನ ಪ್ರೀತಿಯ-ಕಂದನೆ
ಲೋಕವಿರೋಧಿ ಯೋಗೀಶನೆ ॥ ೩೦

ಬೇಡಲು ಬಂದಿರುವೆ । ಕೊಡಗೈಯ ಒಡೆಯನೆ ।
ಬಡವನಿಗೆ ನೀಡಿ ಸಲುಹಯ್ಯ-ದೇವನೆ
ತಡಮಾಡ ಬೇಡ ನೀಡಯ್ಯ ॥ ೩೧

ಕೊಡುವೆನು ಹಸುಳೆ । ಬೇಡೊ ನೀ ಬಾಯಬಿಚ್ಚಿ ।
ಧೃಡಮನದ ಸಿದ್ಧ ಕುವರನೆ–ಎಂದೆನುತ
ಮೃಡ ಎತ್ತಿಕೊಂಡ ಸಿದ್ಧನಿಗೆ ॥ ೩೨

ಚೋಳರಾಜನಿಗೆ । ಮಳೆಗರೆದಿ ಹೊನ್ನಿನ ।
ಆಳಾಗಿ ಬಾಗಿಲವನೆ ಕಾಯ್ದಿ–ಭಕ್ತಂಗೆ
ಮೌಳೀಶ್ವರ ಲಿಂಗವನಿತ್ತೀದಿ ॥ ೩೩

ಮಳೆ ಬೇಕೆ ಹೊನ್ನೀನ । ಆಳಾಗಿ ಬರಲೇನು ।
ಹೇಳು ಎನಕಂದ ನಿನಗಾಗಿ–ಲಿಂಗರೂಪ
ತಾಳಿ ಬಂದಿರುವೆ ಇಳೆಯೋಳು ॥ ೩೪

ನಿನ್ನ ಪೂಜೆಗಾಗಿ । ಉನ್ನತವಹ ಅಮೃತ ।
ನಿನ್ನಿಂದ ಪಡಕೊಂಡು ಹೋಗಲು–ಬಂದಿಹೆ
ಎನ್ನಯ್ಯ ನೀಡಿ ಕಳುಹಯ್ಯ ॥ ೩೫

ಇಷ್ಟು ಬೇಡಲು ನೀನು । ಎಷ್ಟೊಂದು ಸೋತಿರುವಿ ।
ಕಷ್ಟದಿಂದತಿ ಕಳವಳ–ಪಡುತಿರುವಿ
ಇಷ್ಟಾರ್ಥ ಸಿದ್ಧಿ ಆಗುವದು ॥ ೩೬

ಹರುಷಗೊಂಡ ಸಿದ್ಧ । ಹರನ ಪಾದವ ಪಿಡಿದ ।
ತ್ವರದಿಂದ ಹೇಳು ಎನ್ನಯ್ಯ–ಮಜ್ಜನಕೆ
ವರ ಸುಧಾರಸವ ಒಯ್ಯುವೆನು ॥ ೩೭

ಪಾತಾಳ ಲೋಕದಿ । ಭೂತ ವೇತಾಳರು ।
ಜತನ ಮಾಡಲು ಅಮೃತ–ಕೂತಿಹರು
ಮತಿವಂತ ಮಗುವೆ ತಕ್ಕೋಳೊ ॥ ೩೮

ಮಾತು ಕೇಳಿದ ಸಿದ್ಧ । ಪಿತನ ಪಾದವ ಹಿಡಿದ ।
ಆತುರದಿ ಹೊರಟನು ಪಾತಾಳಕೆ–ಅಲ್ಲಿಯ
ಅತಿ ವೈಭವಾಗರದ ಅರುವಿಲ್ಲ ॥ ೩೯

ನಾಗಕನ್ನಿಕೆಯರು । ಪೋಗುವರು ಅತ್ತಿತ್ತ ।
ಭೋಗ ಐಶ್ವರ್ಯಕ್ಕೆ ಕೊರತಿಲ್ಲ–ಅರಮನೆ
ಅಗಣಿತ ವೈಭವಸಂಪನ್ನವು ॥ ೪೦

ವನವೆಲ್ಲ ಕಲ್ಪತರು । ಘನ ಕಾಮಧೇನುಗಳು ।
ಓಣೆಲ್ಲ ಪರುಷದ ಕಟ್ಟೆಗಳು-ಬೀದಿಯ ಪಾ-
ಷಾಣ ಚಿಂತಾಮಣಿಗಳು ॥ ೪೧

ಅರಮನೆಯೊಳಗಿತ್ತು । ವರ ಕನಕದ ಕಂಭವು ।
ಮಿರಗುವ ಚಿಂತಾಮಣಿ ಮುಚ್ಚಳ-ಮುದ್ರಿತ
ವರ ಸುಧಾರಸವು ತುಂಬೀತು ॥ ೪೨

ಕೆಂಡಗಂಣಿನ ಪ್ರ- । ಚಂಡ ಕಾಯದವರ ।
ದಂಡ ನಿಂತಿತ್ತು ಕಾವಲಕೆ-ರಕ್ಕಸರು
ಗಂಡ ಬೇತಾಳ ಪಿಶಾಚಿಗಳು ॥ ೪೩

ಕ್ವಾರಿ ದವಡಿಯ । ಕ್ರೂರರು ಅಸುರರು ।
ಕೂರಲ ತಲೆಯೆಲ್ಲ ಕೆದರೀತು-ಮೀಸೆಗಳು
ಆ ರಕ್ತಬಂಣ ಭೀಕರವು ॥ ೪೪

ಮನವ ನೋಡಿ ನೋಡಿ । ಚನ್ನಮಲ್ಲ ದಣಿದಿಲ್ಲ ।
ಇನ್ನೊಮ್ಮೆ ನೋಡಲು ಅಣಿಯಾದ-ಮಾದೇವ
ಮುನ್ನ ತಾ ಪಾತಾಳಕಿಳಿದ್ಹೋದ ॥ ೪೫

ಕುಂಭ ಕಾವಲದವರಿಗೆ । ಶಂಭು ಕರೆದನು ಬೇಗ ।
ಹಂಬಲಿಸಿ ಅಮೃತ ಕೊಳ್ಳಲು-ಬಂದವಗೆ
ಸಾಂಬ ಭಕ್ತರಾಣೆ ಹಾಕಿರಿ ॥ ೪೬

ಎನಗೆ ಅಂಜಿದಂತೆ । ಎನ್ನವರಿಗಂಜುವನೆ ।
ಸನ್ನುತರೆಂಬುದು ಅರಿಯನೆ-ನೋಡುವೆ
ಇನ್ನೊಮ್ಮೆ ಪರಕಿಸಿ ಸಿದ್ಧನ । ೪೭

ಅಸುರರಿಗೆ ಹೇಳಿ । ವಿಷಕಂಠ ತಿರುಗಿದನು ।
ಪಶುಪತಿ ಕೈಲಾಸಕೆ ತೆರಳಲು-ಪಾತಾಳಕೆ
ಅಸಮಾಕ್ಷ ಸಿದ್ಧ ಇಳಿದಿಹನು ॥ ೪೮

ಸಿದ್ಧನ ಕಂಡಾಗ । ಕ್ರುದ್ಧಾಗಿ ಕಿರುಚುತ ।
ಇದ್ದ ಉಗ್ರತೆ ಮೈದಾಳಿ-ಬಂದಂತೆ
ಅದ್‌ಭೂತ ರೂಪ ತಾಳಿದವು ॥ ೪೯

ನಾಲಿಗೆ ಭೂಮಿತನ । ಬಲಗೈಯಲಿ ಕಪಾಲ ।
ಸಲೆ ಎಡಗೈಯಲಿ ಖಡ್ಗವ–ಹಿಡಿದರು
ತಲೆ ಮುಟ್ಟಿದೆ ಉರ್ಧ್ವ ಆಗಸಕೆ ॥ ೫೦

ಕ್ರುದ್ಧಗಂಣಿನಿಂದ । ಸಿದ್ಧರಾಮಗೆ ನೋಡಿ ।
ಹದ್ದು ಮೀರಿ ಇಲ್ಲಿಗೆ ಬಂದಿರುವಿ-ನೀ ನಿನ್ನ
ಬುದ್ಧಿ ಎಲ್ಲಿಟ್ಟಿರುವಿ ಮದನಮೂರುತಿ ॥ ೫೧

ಅಂಜಿಲ್ಲ ಅಳುಕಿಲ್ಲ । ನಂಜುಂಡನ ಕುವರನು ।
ಹಿಂಜರಿಯದೆ ಮುಂದಕ್ಕೆ ಧುಮುಕಿದ-ಮುದ್ರೆ
ಸಂಜೀವ ರಸಕುಂಭವ ಒಡೆಯಲು ॥ ೫೨

ಕುಂಭಕ್ಕೆ ಹಿಡಿದರೆ । ಸಾಂಬಭಕ್ತರ ಆಣೆ ।
ಹುಂಬನಂತೆ ಇಲ್ಲಿ ಬಂದಿರುವಿ-ಏ ಮರುಳೆ
ದಂಭ ಬಿಡು ಇಲ್ಲಿಂದ ಪೋಗೆಂದವು ॥ ೫೩

ಆಣೆ ಎಂಬುದು ಅತಿ ತೀ- । ಕ್ಷಣ ಸುರಗ್ಯಾಗಿ ।
ಕ್ಷಣದೋಳು ಎದೆಗೆ ನಟ್ಟೀತು-ಸಿದ್ಧನ
ಪ್ರಾಣ ಕಳವಳಗೊಂಡೀತು ॥ ೫೪

ಶಿವನಗಿಂತಲು ಎನಗೆ । ಶಿವಭಕ್ತರು ಶ್ರೇಷ್ಠರು ।
ಕಿವಿಯಿಂದ ಕೇಳಲಾಗದು-ಶಿವ ಶಿವ
ಯಾವ ಪಾಪದ ಫಲ ಒದಗಿತ್ತು ॥ ೫೫

ತಡಪಡಿಸುತ್ತ ಅವನು । ಜಡಕಾಯನಾಗಿ ಮರಳಿ ।
ಮೃಡನ ಕಾಣಲು ಹೊರಟನು-ದಾರಿಯ
ನಡೆದರು ಕೈಲಾಸ ಬಾರದು ॥ ೫೬

ಮೃಡನ ಮಹಾಪೂಜೆಗೆ । ತಡವಾಯಿತೆಂದನು ।
ಗಡಬಡಿಯಿಂದ ನಡೆದನು-ಸಿದ್ಧರಾಮ
ಒಡನೆ ಶಿವಮಂದಿರವ ತಲುಪಿದನು ॥ ೫೭

ಹಿರಿಯ ಬಾಗಿಲ ದಾಟ । ಹರನ ಸಭೆಯೊಳು ಬಂದು ।
ಮೋರೆ ಕೆಳಗ್ಹಾಕಿ ನಮಿಸಿದನು-ಶಿವನಾಗ
ಬಾರೊ ಕಂದನೆಂದು ಕರೆದನು ॥

ಅತಿ ದುಃಖಿತನಾಗಿ । ಕತ್ತು ತುಂಬಿ ಬಂದಿತ್ತು ।
ಮಾತು ದುಃಖದ ಮಡಲಲ್ಲಿ–ಮುಳಗಿತ್ತು
ಅತಿ ತಪ್ತಗೊಂಡಿತ್ತು ಎದೆಯೆಲ್ಲ ॥ ೫೯

ಕಂಬನಿ ಸುರಿಸೂತ । ಸಾಂಬನೆದುರಿಗೆ ನಿಂತು ।
ಕಾಂಬುದಯ್ಯ ನಿನ್ನ ಕಂದನ–ಶಂಭುವೆ
ಇಂಬುಗೊಡು ನಿನ್ನ ಅಡಿಯಲ್ಲಿ ॥ ೬೦

ಕಂಬನಿ ತೊಡೆದನು । ಕುಂಭಿನಿ ಒಡೆಯನು ।
ಕುಂಭ ಎಲ್ಲಿಟ್ಟೆ ಅಮೃತದ–ಎನ್ನುತ
ಸಾಂಬ ಮನದೊಳು ನಸುನಕ್ಕನು ॥ ೬೧

ಯಾಕೆ ಮುದ್ದುಮಗನೆ । ಜೋಕೆಯಲಿ ತಂದೇನು ।
ಬೇಕಷ್ಟು ಅಮೃತ ತರಲಿಕ್ಕೆ–ಹೇಳಿದೆ
ಮೂಕಾಗಿ ನಿಂತ ಕಾರಣವೇನು ॥ ೬೨

ಕಾವಲುಗಾರರು । ಧಾವಿಸಿ ಬಂದೆನಗೆ ।
ಶಿವಭಕ್ತರಾಣೆ ಇಟ್ಟರು–ಶಶಿಧರ
ಜೀವ ಹೋದಂತಾಯ್ತು ಕೇಳೂತ ॥ ೬೩

ಲೋಕಾದಿ ನಾಯಕನೆ । ಯಾಕೆ ಈ ಪರಿ ಎನ್ನ ।
ಸಾಕಾಗುವನಕ ಪರಕಿಸಿ–ನೋಡೂತ
ಸಕಲ ಭಕ್ತರ ಆಣೆ ಇಡಿಸೀದಿ ॥ ೬೪

ಶರಣರ ಆಣೆಯ ಕೇಳಿ । ಹರಣ ಹೋಯಿತೆನ್ನ ।
ಮರಣ ಬಾಧೆಯ ಒಳಗಾದೆ–ಶಂಕರ
ಪರಿಹರಿಸಯ್ಯ ಪಾಪವ ॥ ೬೫

ಬುತ್ತಿ ತರಲು ಕಳುಹಿ । ಮೆತ್ತಗೆ ಮಾಯವಾಗಿ ।
ಮತ್ತೆ ಅಮೃತ ತರಲು–ಕಳುಹಿಸಿ
ಭಕ್ತರಾಣೆ ಇಡಿಸಿ ನೋಡುವಿ ॥ ೬೬

ಕಳೆಗುಂದಿದೆ ನಿನ್ನ । ಎಳೆಮುಖ ಎನಕಂದ ।
ತಿಳಿಗೇಡಿ ರಕ್ಕಸರ ಶಪಥವ–ಮನ್ನಿಸಿ ಮ–
ರಳಿ ಮತ್ತಿಲ್ಲಿ ಬರಬೇಕೆ ॥ ೬೭

ಪಿಶಾಚಿಯ ಮಾತುಗಳು । ಅಶುಚಿ ಇರುವವು ।
ಈಶನು ಬೇರೆ ನೀ ಬೇರೆ-ಉಂಟೇನು ಕ-
ಲಶದ ಅಮೃತ ಬಿಟ್ಯಾಕೆ ॥ ೧೮

ನಾನು ನೀನೆಂಬುವ । ಭಿನ್ನ ಭೇದವು ಇಲ್ಲ ।
ನಿನಗಿಂತ ಭಕ್ತರು ಅಧಿಕರೆ-ಶಿವಸಿದ್ಧ
ಅನುರಾಗದಿ ಅಮೃತ ತರಹೋಗು ॥ ೧೯

ಹರನಗಿಂತಲು ಮೇಲು । ಗುರು ತಾನು ಎಂಬುವರು ।
ಶರಣರು ಮೀರಿಹರು ಎಲ್ಲರನು-ದೇವೇಶ
ಅರಿತು ಮರೆತಂತೆ ನುಡಿಯುವಿ ॥ ೨೦

ಕಂದನ ನುಡಿ ಕೇಳಿ । ಮಂದಹಾಸವ ಬೀರಿ ।
ಬಂಧ ಮೋಕ್ಷವಳಿದ ಕಂದನೆ-ಹೋಗಿನ್ನು
ಅಂದಾದ ಅಮೃತವ ತರಲು ॥ ೨೧

ಸಾಕೊ ಎನ್ನತಂದೆ । ನೂಕದಿರು ಮತ್ತೆ ಮತ್ತೆ ।
ಬೇಕಿಲ್ಲ ಅನ್ಯ ಅಭಿಷೇಕ-ತರುವದು
ಇಕೊ ಕಂಣೀರಿನಿಂದ ಮಾಡುವೆ ॥ ೨೨

ರಕ್ಕಸರ ಮಾತಿನ್ನು । ಲೆಕ್ಕಿಸದೆ ಒಳಹೋಗು ।
ಗಕ್ಕನೆ ಘರ್ಘರ ಮುದ್ರೆಯ-ಒಡೆದು ನೀ
ಚೊಕ್ಕಾದ ಅಮೃತ ತರಹೋಗು ॥ ೨೩

ಹಿಗ್ಗೂತ ಹೋದನು । ಯೋಗಿ ಸಿದ್ಧರಾಮ ।
ನುಗ್ಗಿ ಪಾತಾಳ ಲೋಕಕ್ಕೆ-ತರಲು
ವೆಗ್ಗಳ ಅಮೃತ ಭೂಲೋಕಕೆ ॥ ೨೪

ಮದ ಮೋಹ ಅಳಿದಾತ । ಸದಮಲ ಹೃದಯದ ।
ತದಗತನಾಗಿ ಸಿದ್ಧೇಂದ್ರ-ನಾಗಲೋಕದ
ಸುಧೆ ತಂದನು ಭೂಮಂಡಲಕೆ ॥ ೨೫

ಕೊಟ್ಟಿರುವ ವೇಳೆಗೆ । ಘಟ ತುಂಬಿ ಅಮೃತವ ।
ದಿಟಯೋಗಿ ತಂದ ಜಯಜಯ-ಎನ್ನುತ
ನಿಟಲಾಕ್ಷಗೆ ಶರಣು ಶರಣೆಂದರು ॥ ೨೬

ಸಿದ್ಧನ ಬರುವಿನಿಂದ। ಉದ್ಧಾರಾದೆವು ನಾವು।
ಶುದ್ಧ ಅಮೃತ ಭೂಮಿ ಮೇಲೆ-ತಂದಂಥ
ಸದ್ಗುರುವೆ ನಮೊನಮೊ ಎಂದು ॥ ೭೭

ಮೊಳಗಿದವು ವಾದ್ಯಗಳು। ಎಳೆಯ ಸುಮಂಗಲೆಯರು।
ಹೊಳೆಯುವ ಆರುತಿ ಬೆಳಗಿದರು-ಶಿವಸಿದ್ಧ
ಇಳೆಯಾಣ್ಮ ನಿನಗೆ ಶರಣೆಂದು ॥ ೭೮

ನಗಾರಿ ನವಬತ್ತು । ಜಾಂಗುಟ ಜೋಡಗಂಟೆ ।
ಆಗ ಮೊಳಗಿದವು ಭೇರಿಯು-ಶಂಖನಾದ
ಗಗನವೆಲ್ಲವ ತುಂಬಿತ್ತು ॥ ೭೯

ನವ ವಾದ್ಯಂಗಳು । ತಾವಾಗಿ ನುಡಿದಿಹವು ।
ಕಿವಿಗೆ ಇಂಪಾಗಿ ಕೇಳಿಸಿತು-ಜನರೆಲ್ಲ
ಶಿವಸಿದ್ಧರಾಮನ ನುತಿಸಿದರು ॥ ೮೦

ಮಿಂದು ಮಡಿಯನುಟ್ಟು। ಅಂದ ವಿಭೂತಿ ಪೂಸಿ।
ಸಾಧು ಸಿದ್ಧಯೋಗಿ ಹರುಷದಿ-ಅಣಿಯಾದ
ಸಾಧಿಸಿ ಪೂಜೆಯ ಮಾಡಲು ॥ ೮೧

ಸಿದ್ಧ ಆಸನಹಾಕಿ। ಬದ್ಧ ಕಂಕಣನಾಗಿ।
ಬುದ್ಧಿ ಮನ ಚಿತ್ತ ಅರ್ಪಿಸಿ-ಕೂತಿಹನು
ಶುದ್ಧ ಮನದ ಶಿವಸಿದ್ಧರಾಮ ॥ ೮೨

ಪನ್ನೀರ ತುಂಬೀದ । ಚಿನ್ನರನ್ನದ ಕುಂಭ ।
ಕನ್ನೆಯರು ತಂದು ಇಳುವೂತ-ಗುಡಿತುಂಬ
ತನ್ನದೆ ಬೆಳಕು ಬೀರಿಹುದು ॥ ೮೩

ಕಳಸ ಕನ್ನಡಿಯಿಂದ। ಹೊಳೆಯುತ ದೆಸೆದಿಕ್ಕು।
ಕಲಶ ತಂದ ನಾರಿಯರ-ಕಂಕಣಕೈಬೆ-
ರಳು ಚೆಲುವಿಕೆ ಸಾರುವದು ॥ ೮೪

ಹೊನ್ನಕಲಶ ರುದ್ರ- । ಕನ್ನೆಯರು ತಂದಿಹರು ।
ಅನ್ನಪೂರ್ಣೆಯು ತಾ ತಂದಳು-ಕುಂಭವ
ಪಿನಾಕಿಯ ಪೂಜೆಗೆ ಹರುಷದಿ ॥ ೮೫

ಅಗ್ರೋದಕದ ಕುಂಭ | ಶೀಘ್ರದಿ ಹದಿಮೂರು |
ಉಗ್ರಃಕಪರ್ದಿಯ ಮಜ್ಜನಕೆ-ಅಣಿಮಾಡೆ
ಅಗ್ರಗಣ್ಯನ ಸೇವೆಗೈಯಲು || ೮೬

ದಶಾಮೃತ ರಸದ ಕ- | ಲಶಗಳು ನಾಲ್ಕು ಆ- |
ಕಾಶ ಗಂಗಾಜಲ ತುಂಬಿದ-ಹದಿಮೂರು
ತುಷಾರೋದಕದ ಕುಂಭ ಒಂದು || ೮೭

ಹದಿನೆಂಟು ಕಲಶಕ್ಕೆ | ಮೋದದಿ ಹೊನ್ನೀನ |
ಹದಿನೆಂಟು ಕಮಲವಿಟ್ಟು-ನಾರಿಯರು ಸಂಭ್ರ-
ಮದಿ ಮೆರೆಸುತ ತಂದಿಹರು || ೮೮

ಜಾಜಿಮಲ್ಲಿಗೆ ಪುಷ್ಪ | ಸೂಜಿಮಲ್ಲಿಗೆ ದವನ |
ರೋಜಾಂಬರಿ ನಿತ್ಯಮಲ್ಲಿಗೆ-ಮರುಗ
ರಾಜಶೇಖರನಿಗೆ ಪನ್ನೀರಿಲೆ || ೮೯

ಗಗನಮಲ್ಲಿಗೆ ಪುಷ್ಪ | ನಾಗಮಲ್ಲಿಗೆ ಪುಷ್ಪ |
ಸುಗಂಧರಾಜ ಕನಕಾಂಬರಿ-ಬಿಂದಿಗೆ
ನಾಗಲಿಂಗ ಪುಷ್ಪ ನೀಲಾಂಬರಿ || ೯೦

ಪಾರಿಜಾತದ ಪುಷ್ಪ | ಇರುವಂತಿಗೆ ಪುಷ್ಪ |
ಕರಣಕುಂಡಲ ತರತರದ-ಕೇದಿಗೆ
ಕೋರಂಟಿ ಸಿಂಹಾಚಲಸಂಪಿಗೆ || ೯೧

ಗೋಕರ್ಣ ದೇವಕಣಿಗಲ | ಎಕ್ಕಿಹೂ ಕಾಶಿತುಂಬಿ |
ಲಕಲಿಪತ್ರಿ ಬಿಲ್ವಕಸ್ತೂರಿ-ಚಂಪಕ
ಬಕುಳ ಸೂರ್ಯಕಾಂತಿ ಪುಷ್ಪಗಳು || ೯೨

ಬಿಳಿಯ ಸೇವಂತಿಗೆ | ನೀಲಿಯ ಸೇವಂತಿಗೆ |
ಹಳದಿ ಸೇವಂತಿಗೆ ಕೆಂದಾದ-ಸೇವಂತಿಗೆ
ಏಳು ಸುತ್ತಿನ ಮಲ್ಲಿಗೆಹೂ || ೯೩

ದುಂಡುಮಲ್ಲಿಗೆ ಜಾಜಿ | ಕಡ್ಡಿದಾಸವಾಳದ ಹೂ |
ಚೆಂಡುಹೂ ಬಿಳಿ ಸ್ಪಟಿಕ-ಸಂಪಿಗೆ
ಕೆಂಡಸಂಪಿಗೆ ಗಣೇಶಹೂ || ೯೪

ಬಿಳಿಯ ಕಣಿಗಲಹೂ। ಏಳು ಸುತ್ತಿನ ಕಣಿಗಲ।
ಬಿಳಿ ದಾಸವಾಳ ಪಚ್ಚೆತೆನೆ–ಬನ್ನಿಪತ್ರಿ
ಎಳೆಯ ಶ್ರೀಗಂಧದ ಪತ್ತುರಿ॥ ೯೫

ಹಳದಿ ಗುಲಾಬಿ ಹೂ। ಸಲೆ ಕೆಂಪ ಗುಲಾಬಿ।
ಬಿಳಿಯ ಗುಲಾಬಿ ಹಸಿರು–ಗುಲಾಬಿ
ನೀಲಕಂಠನಿಗೆ ತುಂಬೆ ಹೂ॥ ೯೬

ನಂದಿಬಟ್ಟಲದ ಹೂ। ಕೆಂದ ಸ್ಪಟಿಕದ ಹೂ।
ಚಂದನ ಬಿಳಿ ಸ್ಪಟಿಕದ ಹೂ–ಮಂದಾರ
ಸಂಧ್ಯಾರಾಣಿ ಮನೋರಂಜನ॥ ೯೭

ಬಿಳಿ ಕಮಲದ ಹೂ। ನೀಲಿ ಕಮಲದ ಹೂ॥
ಹಳದಿ ಕಮಲದ ಹೂಗಳು–ಬಿಲ್ವಪತ್ರಿ
ಬಿಳಿ ಕೆಂಪ ಕೆಂದ ರುದ್ರಾಕ್ಷಿ ಹೂ॥ ೯೮

ಶಿವಾಲಯದೊಳಗೆ। ಹೂವಿನ ಪರಿಮಳ।
ದವನ ಮರುಗ ಕೇದಿಗೆಯ–ಸುಗಂಧ
ಪವನದಿ ಕೂಡಿ ವ್ಯಾಪಿಸಿತು॥ ೯೯

ಸಂಧಿ ೧೯

ಚಂದ್ರಶೇಖರನಿಗೆ । ಗಂಧವನು ಧರಿಸಲು ।
ಚಂದನವ ತಂದು ಇಟ್ಟಿಹರು–ಸುಗಂಧ
ಮಂದ ಮಾರುತದೊಳು ಕೂಡೀತು ॥ ೧

ಎಳ್ಳು ಅಕ್ಕಿಯೊಳಗೆ । ಮುಳಜವಿ ಉದ್ದಿನಬೇಳೆ ।
ಬಿಳಿ ಸಾಸವಿಯ ಬೆರಸಿದ–ಅಕ್ಷತೆಯ
ಭಾಳಲೋಚನ ಪೂಜೆಗೆ ॥ ೨

ಹಾಲಮಡ್ಡಿ ಕರ್ಪುರ । ಶಿಲಾರಸ ದೇವದಾರ ।
ಲೋಲ ನಾಗರಮೋತಿ ಚಂದನ–ಕರ್ಚೂರ
ರಾಳ ಗುಗ್ಗುಳದ ದಶಾಂಗ ॥ ೩

ನೂರೊಂದು ಬತ್ತಿಗಳು । ವಾರಿಗೆಯ ಗೆಳತಿಯರು ।
ಮೀರಿದ ಆದಿಲಿಂಗಯ್ಯನಿಗೆ–ಬೆಳಗಲು
ಹಿರಿಹಿರಿ ಹಿಗ್ಗೂತ ತಂದಿಹರು ॥ ೪

ಕಡ್ಡಿಗೆ ಬತ್ತಿಸುತ್ತಿ । ಒಡೆಯ ಲಿಂಗಯ್ಯನಿಗೆ ।
ಸಡಗರದಿ ಬೆಳಗಲು ತಂದರು–ಮಂಗಳ
ಹಾಡಿ ಹರಸಲು ಹರನಿಗೆ ॥

ಹರದೆಯರು ಕರ್ಪುರ । ಅರಪಿತ ಭಾವದಿ ।
ನಿರವಯನಿಗೆ ಬೆಳಗಲು–ಚಿನ್ನದ
ತರತರದ ಆರುತಿ ತಂದಿಹರು ॥ ೬

ಹೊನ್ನರನ್ನಿನ ತಟ್ಟಿ । ಕನ್ಯೆಯರು ಬಲುಚಂದ ।
ಬಣ್ಣದ ಹೂಗಳ ಬರೆದು ತಾ–ಬತ್ತಿಗಳ
ಕೋನ ಕೋನದಿ ಇಟ್ಟಿಹರು ॥ ೭

ಟೆಂಗು ಬಾಳೆಹಂಣು । ಅಂಗುರ ಅಂಜೀರ ।
ಪಿಂಗದಲೆ ಶೇಬು ಕಿತ್ತಳೆ–ಡಾಳಿಂಬ
ಮಂಗಳೆಯರು ದ್ರಾಕ್ಷೆ ತಂದಿಹರು ॥ ೮

ಶುದ್ಧ ಉದಕವ ತನ್ನ । ಸಿದ್ಧಹಸ್ತದಿ ಎರೆದ ।
ಆದಿಲಿಂಗಯ್ಯನಿಗೆ ನುತಿಸುತ–ಸಿದ್ಧರಾಮ
ಇದ್ದ ಕರಣಂಗಳ ಎರೆದನು ॥ ೯

ಹಾಲಿನ ಅಭಿಷೇಕ । ಹಾಲಾಹಲ ಕುಡಿದಾತ ।
ಮೇಲಾದ ದೇವ ಮಾದೇವಗೆ–ಮಾಡೂತ
ಲೋಲ ಸುಧೆಯಲಿ ಮುಳಗಿಹನು ॥ ೧೦

ಮೊಸರಿನ ಧಾರೆಯ । ಹಸನಾದ ಮನಸೀಲೆ ।
ಅಸು ಲಿಂಗಕ್ಕೆ ಎರೆದನು–ಯೋಗಿನಾಥ
ಅಸಮಗುಣ ಎನಗೆ ನೀಡೆಂದ ॥ ೧೧

ತುಪ್ಪೀನ ಅಭಿಷೇಕ । ಅಪ್ಪ ಸಿದ್ಧರಾಮಯ್ಯ ।
ಮುಪ್ಪುರಹರನಿಗೆ ಮಾಡುವಾಗ–ಚರಾಚರ
ತುಪ್ಪುಂಡು ತೇಗಿತು ಆ ಚಣ ॥ ೧೨

ಜೇನುತುಪ್ಪವ ತಂದು । ದಾನಿ ಎರೆದನು ಆಗ ।
ಜೇನಿನ ಹುಳವು ಪರಿಮಳ–ಉಂಡಂತೆ
ಗ್ಯಾನವನುಣಿಸಿ ತಣಿಸಯ್ಯ ॥ ೧೩

ಸಕ್ಕರೆಯ ಮಜ್ಜನ । ಮುಕ್ಕಣ್ಣನಿಗೆರೆದು ।
ಮಿಕ್ಕೀದ ಸುಖಶಾಂತಿಯನು-ನೀಡೆಂದು
ಚೊಕ್ಕಮನದಿ ಬೇಡಿಕೊಂಡನು ॥ ೧೪

ಅರ್ಘ್ಯ ಪಾದ್ಯ ಆಚಮನ । ಭರ್ಗನಿಗಭಿಷೇಕ ।
ಮಾರ್ಗ ತೋರೆಂದ ಮುಕ್ತಿಯ-ವಲ್ಲಭನೆ
ಸ್ವರ್ಗ ನರಕಗಳಾಚೆಯದು ॥ ೧೫

ದಶವಿಧ ಮಜ್ಜನವ । ಈಶನಿಗೆ ಮಾಡೂತ ।
ತೋಷದಿ ಸಂತೃಪ್ತ ಆಗೆಂದ-ಯೋಗೀಶ
ಪೋಷಿಸಬಾರೆಂದ ಲೋಕಂಗಳ ॥ ೧೬

ಪನ್ನೀರಿನ ಅಭಿಷೇಕ । ಪನ್ನಗಧರನಿಗೆ ।
ಸನ್ನೂತ ಯೋಗಿ ಮಾಡೂತ-ಕೋರಿದ
ಚೆನ್ನೀಗ ಲಿಂಗವೆ ಮನ್ನೀಸು ॥ ೧೭

ಹತ್ತು ದಿಕ್ಕುಗಳೆಂಬ । ಉತ್ತುಮ ಉಡುಗರೆ ।
ಮುತ್ತು ನವರತ್ನದ ವಸ್ತುಗಳ-ಸಿದ್ಧೇಶ
ಮೃತ್ಯುಹರನೀಗೆ ಧರಿಸೀದ ॥ ೧೮

ಬೆಳ್ಳನ ಪಟ್ಟಾವಳಿ । ತೆಳ್ಳನ ಪಟ್ಟಾವಳಿ ।
ಹೊಳೆಯೂವ ದಿವ್ಯಾಂಬರವು-ಸಿದ್ಧರಸ
ತ್ರಿಲೋಚನನಿಗೆ ಧರಿಸಿದನು ॥ ೧೯

ಆದಿಯ ಅತ್ತತ್ತಿನ । ಸಾಧೀಸಿದ ಚಿದ್‌ಭಸಿತ ।
ಆದಿ ಲಿಂಗಯ್ಯನಿಗೆ ಧರಿಸಿದ-ಯೋಗಿವರ
ಭೇದವ ಮರೆತು ಬೆರೆತನು ॥ ೨೦

ಅಷ್ಟಗಂಧದಿ ತನ್ನ । ಇಷ್ಟದೇವತೆಯನ್ನು ।
ನಿಷ್ಠೆಯಿಂದ ಯೋಗಿ ತೀಡುತ-ಲಿಂಗವೆ
ಶ್ರೇಷ್ಠಾಧೀಶ ಎನಗೆ ಸಲುಹೆಂದ ॥ ೨೧

ಅರಶೀಣ ಕುಂಕುಮ । ಅರಗಜ ಸುಗಂಧ ।
ಉರಗಕಂಕಣನೀಗೆ ತೀಡುತ-ಲೋಕದ
ಚರಾಚರಕ್ಕೆ ಸಲುಹೆಂದನು ॥ ೨೨

ನಕ್ಷತ್ರ ಎಂಬೂವ । ಅಕ್ಷತೆಯನು ಧರಿಸಿ ।
ದಕ್ಷತೆಯಿಂದ ಚರಣಕ್ಕೆ-ಎರಗೂತ
ರಕ್ಷಿಸು ಎಂದನು ಪಾಮರರ ॥ ೨೩

ಆಚಾರ ಉಚ್ಚಾರ । ಎಚ್ಚರ ಎಂಬೂವ ।
ಸಚ್ಚಿದಾನಂದಗೆ ತ್ರಿದಳದ-ಪತ್ತ್ರಿ
ನಚ್ಯೂತ ನಲಿಯೂತ ಧರಿಸಿದ ॥ ೨೪

ಹೃದಯ ಕಮಲದ ಹೂವು । ತದೇಕ ಧ್ಯಾನದಲಿ ।
ಉದಯಿಸಿ ವಿಕಸಿತಗೊಂಡಿತು-ಮನಮುಟ್ಟಿ
ಸಿದ್ಧೇಶ ಗೌರೀಶನಿಗರ್ಪಿಸಿದ ॥ ೨೫

ದಶಾಂಗ ಸುಟ್ಟಿಹನು । ದಶವಿಧದಿಂದಲಿ ।
ದಶದಿಕ್ಕುಗಳಲಿ ಘಮುಘಮು-ಯೋಗಿ
ಈಶನಡಿಯಲಿ ಏಕವಾಗಿ ॥ ೨೬

ಉತ್ತರಾಣಿ ಕಡ್ಡಿಗೆ । ಹತ್ತಿ ಸುತ್ತಿದ ಬತ್ತಿ ।
ಅತಿ ಬಕುತಿಯಲಿ ಬೆಳಗಿದನು-ಯೋಗೀಶ
ಚಿತ್ತದ ಒಡೆಯ ಚಂದ್ರಧರಗೆ ॥ ೨೭

ಪಂಚಾರತಿಯ ಎತ್ತಿ । ಪಂಚವದನನಿಗಾಗ ।
ಸಂಚಯವಳಿದ ಮಾಯೋಗಿ-ಬೆಳಗೀದ
ಮಿಂಚಿನ ಗೊಂಚಲ ಹೊಳೆಯಿತು ॥ ೨೮

ಶುಚಿ ಎಂಬುವ ಕರ್ಪುರಕೆ । ಎಚ್ಚರೆಂಬುವ ಜ್ಯೋತಿ ।
ನಚ್ಚಿನ ಶಿವನೀಗೆ ಬೆಳಗಿದನು-ಸಿದ್ಧೇಶಗೆ
ಎಚ್ಚರ ಮೈಮೇಲೆ ಎನಿತಿಲ್ಲ ॥ ೨೯

ಜಯ ಜಯವೆನುತಲಿ । ಭಯಹರನಿಗಾರುತಿ ।
ಕಾಯ ಗುಣವ ಅಳಿದಾತನು-ಯೋಗಿವರ
ಸ್ವಯ ಲಿಂಗಕ್ಕೆ ಬೆಳಗಿದನು ॥ ೩೦

ಜೋಡ ಗಂಟೆಗಳು । ನುಡಿದಿಹವು ಓಂಕಾರ ।
ಬಿಡದೆ ನಿನಾದ ಸುಸ್ವರ-ಯೋಗಿರಾಜ
ದೃಢಮನದಿ ಮೃಡನಲಿ ಒಂದಾಗಿ ॥ ೩೧

ಸವಿಯುವ ಪಕ್ವಾನ್ನ । ದೇವಾನ್ನ ಅಮೃತಾನ್ನ ।
ದಿವ್ಯಾನ್ನ ಭಕ್ತೀಲಿ ತಂದಿರುವೆ-ನಿನಗಾಗಿ
ದೇವೇಶನೆ ಎಡೆಯ ಮಾಡಲು ॥ ೩೨

ಹೊಸ ಪರಿಯಾಣದೊಳು । ಏಸೊಂದು ಪದಾರ್ಥ ।
ಮೀಸಲಾಗಿದೆ ದೇವ ನಿನಗಾಗಿ-ಉಣ್ಣೀಗ
ಈಶ್ವರನೆ ಇನ್ನು ತಡ ಯಾಕೆ ॥ ೩೩

ಬಿಳಿ ಎಲೆಯೊಳಗಿನ । ಎಳೆ ಎಲೆಗಳ ತಂದು ।
ಹಳಕ ಹಾಕಿ ಪಚ್ಚಕರ್ಪೂರದ-ಸುಗಂಧ
ವೀಳ್ಯ ನೀಲಲೋಹಿತಂಗರ್ಪಿಸಿ ॥ ೩೪

ನಂಬುಗೆ ಎಂಬುವ । ತಾಂಬುಲ ತ್ರಿಕರ್ಣದ ।
ಸಾಂಬನಿಗರ್ಪಿತ ಮಾಡಲು-ತಂದಿರುವೆ
ಕಂಬನಿ ಸುರಿವವು ಸವನಾಗಿ ॥ ೩೫

ಹೊನ್ನರನ್ನದ ರಾಶಿ । ಚಿನುಮಯ ಚಲುವಂಗೆ ।
ತನ್ನನೆ ತಾನೆ ಅರ್ಪಿಸಿ-ರಮಿಸಿದನು
ಚೆನ್ನೀಗ ಲಿಂಗಯ್ಯನ ರೂಪಿನಲಿ ॥ ೩೬

ಛತ್ತರದ ಸುತ್ತಲು । ಮುತ್ತಿನ ಮಾಲೆಗಳು ।
ತೆತ್ತಿಹವು ವಜ್ರ ವೈಢೂರ್ಯ-ಥಳ ಥಳ
ಸತ್ಯ ಮೂರುತಿಯ ತಲೆಮೇಲೆ ॥ ೩೭

ಬಂಗಾರ ಕಟ್ಟೀನ । ಸಿಂಗಾರಕೆ ತವರಾದ ।
ಗಂಗಾಧರನಿಗೆ ಚಾಮರ-ಬೀಸೂತ
ಮಂಗಳ ಮೂರುತಿ ಜಯ ಜಯ ॥ ೩೮

ಬಿಳಿಯ ಮುತ್ತಿನ ತೇಜ । ಹೊಳೆದವು ಕೂದಲು ।
ಎಳೆ ಎಳೆ ಬೇರೆ ಕಂಡಿಲ್ಲ-ವೈಭವಕೆ
ಕಳೆ ತಂದು ಕೊಟ್ಟಿತು ಚವರೀಯ ॥ ೩೯

ಹೊನ್ನೀನ ತಾಲಪತ್ರ । ರನ್ನವ ಕೆತ್ತಿಸಿದ ।
ಚಿನುಮಯನೀಗೆ ಬೀಸುತ-ಸಿದ್ಧರಾಜ
ತನ್ಮಯನು ತನ ಮರೆತನು ॥ ೪೦

ದರ್ಪಣ ತೋರಿದನು । ಸರ್ಪಭೂಷಣನಿಗೆ ।
ಅರ್ಪಣೆ ತನು ಮನ ಧನವೆಂದು–ಲಿಂಗದಿ
ತೋರ್ಪ ಬೆಳಕನು ಕಂಡುಂಡ ॥ ೪೧

ತರ ತರದ ಹೂವಿನ । ಪರಿಮಳ ಸೇವಿಸಲು ।
ಎರಗಿ ಬಂದಂತೆ ತುಂಬಿಗಳು–ನೈಮರೆತು
ಗಿರೀಶನ ಪಾದಕ್ಕೆ ಎರಗಿದನು ॥ ೪೨

ಶರಣು ಶರಣೆಂದು । ಹರಣವ ಅರ್ಪಿಸಿ ।
ಕರುಣಾಕರನೇ ವರವಾಗು–ಮುಂದೀನ
ಕಾರುಣಿಕ ಕಾರ್ಯವು ನಿನ್ನದೆ ॥ ೪೩

ಉಘೆ ಚಾಂಗ ಭೋರೆಂಬ । ಮಿಗಿಲಾದ ಜಯ ಘೋಷ ।
ಗಗನಕ್ಕೆ ಹೋಗಿ ಮುಟ್ಟೇತು–ವಾದ್ಯಗಳು ಮೊ-
ಳಗಿದವು ಎದೆಯು ಮಿಡಿವಂತೆ ॥ ೪೪

ಪೂಜೆಯ ಮುಗಿಸಿದ । ಮಾಜನರ ಕೂಡಿಕೊಂಡು ।
ಭೋಜನ ಶಾಲೆಗೆ ಕರೆತಂದು-ಕರದಿಂದ
ಸುಜನರಿಗೆ ಉಣಲು ನೀಡಿದನು ॥ ೪೫

ಲಿಂಗಕ್ಕೆ ಮುಖವಾದ । ಜಂಗಮರಿಗೆ ಸಿದ್ಧೇಶ ।
ಪಿಂಗದೆ ಪ್ರಸಾದ ಎಡೆಮಾಡಿ-ನಮಿಸುತ
ಮಂಗಳ ಮೂರುತಿ ಸಲ್ಲಿಸೆಂದ ॥ ೪೬

ಕಪಿಲಸಿದ್ಧ ಮಲ್ಲನು । ರೂಪ ಅನಂತ ತೋರಿ ।
ವ್ಯಾಪಿಸಿ ಭೋಜನಶಾಲೆಯಲಿ–ಕೂತಂತೆ
ಮಾಪತಿ ಸಿದ್ಧನಿಗೆ ಕಂಡೀತು ॥ ೪೭

ಅಡಿಗೆಯ ಮಾಡಿಕೊಂಡು । ಹೆಡಗಿಯ ತುಂಬಿಕೊಂಡು ।
ಸಡಗರದಿ ಬಂದಿಹರು ಭಕ್ತರು–ದಾಸೋಹಕೆ
ದೃಢಮನದಿ ಸಲ್ಲಿಸಲು ಪ್ರಸಾದ ॥ ೪೮

ಸಿದ್ದರಾಮನ ಹಸ್ತದ । ಶುದ್ಧವಾದ ಪ್ರಸಾದ ।
ಸುಧೆಗಿಂತ ಸವಿಯು ಹತ್ತಿತು–ಉಣ್ಣುತ
ಸಿದ್ಧೇಶ್ವರನ ಹಾಡಿ ಹರಸಿದರು ॥ ೪೯

ಮೇಲು ಕೀಳುಗಳೆಂಬ। ಮಲ ತೊಳೆದ ಯೋಗೀಶ।
ಕುಲಕೋಟಿ ಮಾನವರಿಗೆಲ್ಲ–ನೀಡಿದನು
ಸಲ್ಲಿಸಿ ತೃಪ್ತಿಗೊಂಡಿಹರು॥ ೫೦

ಚಂದಿರನ ವಿರಹದಿ। ನೊಂದುಕೊಂಡ ಚಕೋರಂಗೆ।
ಒಂದು ಚಣ ತಡಮಾಡದೆ–ಹುಂಣಿವಿಗೆ
ಇಂದು ಉದಯಿಸಿದ ರಮಿಸಲು॥ ೫೧

ತಿಂಗಳ ಬೆಳಗಿನಲಿ। ಮಂಗಳಮಯವಾಗಿ।
ಕಂಗೊಳಿಸುತ ಬೆಳದಿಂಗಳ–ಭೂಮಿಯ
ಅಂಗಳದಿ ಸುರವೀದೆ ಶೀತಳ॥ ೫೨

ಯಾವ ಅಂತರ ಮೇಲೆ। ಯಾವ ತಂತರದಿಂದ।
ಭಾವದಲಿ ಮೂಡಿ ನಿಂತಾನ–ಚಂದೀರ
ದೇವರ ಕಾರ್ಯಕ್ಕೆ ಅಣಿಯಾಗಿ॥ ೫೩

ಮಾಮನೆಯದೆಲ್ಲವನು। ನೇಮವ ಮುಗಿಸೀದ।
ಸ್ವಾಮಿ ಎಲ್ಲರಿಗೂ ಉಣನೀಡಿ–ಮದುವೆ
ಪ್ರೇಮದಿ ಮಾಡಿ ಹರಸೋಣ॥ ೫೪

ಕಡು ಬಡತನದಿಂದ। ಒಡಲಿಗೆ ಬಡಕೊಂಡು।
ಮಡದಿ ಮಕ್ಕಳ ಕಾಣದಲೆ–ಕೂತವರ
ಒಡೆಯ ಮದುವೆಯ ಮಾಡುವನು॥ ೫೫

ಮದುವೆಯ ಹಂದರಕೆ। ಸದಮಲ ಸಿದ್ಧೇಂದ್ರ।
ಮೋದದಿ ಬಂದು ತಲುಪಿದನು–ಜಯವೆಂದು
ಸುದತಿಯರಾರತಿ ಎತ್ತಿದರು॥ ೫೬

ಉಘೆ ಉಘೆ ಎಂದು। ಮಿಗಿಲಾದ ಭಕ್ತಿಯಲಿ।
ರಾಗಿ ವಿರಾಗಿ ಯೋಗೀಶನೆ–ಅವನಡಿಗೆ
ಬಾಗಿ ಶರಣೆಂದು ನಮಿಸಿದರು॥ ೫೭

ನವವಾದ್ಯಗಳ ನಾದ-। ರವ ಮಧುರ ಸ್ವರ ನುಡಿದು।
ನವ ವಧುವರರಿಗೆ ಶುಭಕೋರಿ–ಪಾಡಿದವು
ಶಿವಸಿದ್ಧರಾಮನ ಹರಸೂತ॥ ೫೮

ಜರದ ಹೂವಿನ ಸೀರಿ। ಮುರಗಿಬಳೆ ಕೈಯಾಗ।
ತೋರಹಾರ ಬಂಗಾರ ಸರಿಗೆ–ಅಮೃತೆ
ಹರಳಿನ ನತ್ತು ಮೂಗಿನಲಿ॥ ೫೯

ಜರದಂಚಿನ ಸೀರಿ। ಸರಸ್ವತಿ ಉಟ್ಟಿಹಳು।
ಹರಳು ಚಿನ್ನದ ಸರಗಳು–ಮೂಗಿನಲಿ
ಹರಳೀನ ನತ್ತು ಒಪ್ಪೀತು॥ ೬೦

ನೀರಗಿಗೆ ನೂರಾರು। ಸೆರಗೀಗೆ ಸಾವೀರ।
ಗೌರಮ್ಮ ಉಟ್ಟಿಹಳು ಭರಜರಿ–ಹೊನ್ನ-
ಹಾರ ತೋಳಿಗೆ ಒಂಕಿ ಬಾಪೂರಿ॥ ೬೧

ರಂಗವಲ್ಲಿಯ ಸೀರಿ। ಲಿಂಗದಹೂ ಕುಪ್ಪಸ।
ಸಿಂಗಾರಸರ ಪಾಟ್ಲಿ ಗೋಟ–ಯಮುನಾ
ಉಂಗುರ ಮುತ್ತು ಮಾಣಿಕದ॥ ೬೨

ನವರಂಗಿಯ ಸೀರಿ। ಶಿವಗಂಗಾ ಉಟ್ಟಿಹಳು।
ನೇವಳ ಪವಳ ಸರವನಿಟ್ಟು–ಮುತ್ತೀನ
ಹೂವಿನ ಪಾಟ್ಲಿ ಕುಂದಣದುಂಗುರ॥ ೬೩

ದೇವತಾವಳಿ ಸೀರಿ। ಹೂಜರಿಯ ಕುಪ್ಪಸ।
ಹವಳ ಬವಳದ ಸರವನಿಟ್ಟು–ಪಾರ್ವತಿ
ಬಾವುಲಿ ಬುಗುಡಿ ನೀಲಬೆಂಡೋಲೆ॥ ೬೪

ಸೋಮಕಾಂತಿಯ ಸೀರಿ। ಸುಮತಿ ಉಟ್ಟಿರುವಳು।
ಕಮಳದ ಸರ ಮುತ್ತಿನ ಜಾಳಿ-ಮುಡಿಗೆ
ಹೂಮಾಲೆ ಹೊನ್ನ ಹರಳಿನದು॥ ೬೫

ಚದುರಂಗ ಚಿಕ್ಕಿ ಸೀರಿ। ಶ್ರೀದೇವಿ ಉಟ್ಟಿಹಳು।
ಗೋದಿಸರ ಮುತ್ತು ವಜ್ರದ ಟೀಕೆ-ಬೆರಳಿಗೆ
ಮುದ್ರೆಯುಂಗುರ ಕುಂದಣದು॥ ೬೬

ಗಜಾವಳಿಯ ಸೀರಿ। ಗುರ್ಜರಿ ಕುಪ್ಪಸ ತೊಟ್ಟು।
ವಜ್ರದ ಬೆಂಡೋಲೆ ಮುತ್ತಿನ ಕಂಠಿ-ಬಸಮ್ಮ
ಬಾಜುಬಂದ ನಾಗಮುರಿಗೆ॥ ೬೭

ಕೇಶರಿ ಜರಿಯ ಸೀರಿ । ರೇಶಿಮೆಜರಿ ಕುಪ್ಪಸ ।
ತ್ರಿಶೂಲಹಾರ ಪಚ್ಚೆಯ ಸರ-ರನ್ನದೋಲೆ
ಶಶಿಕಲೆ ಮುಡಿಗೆ ಪಚ್ಚೆಯ ಮಾಲೆ ॥ ೬೮

ಚಂದ್ರಾವಳಿಯ ಸೀರೆ । ಚಂದ್ರಮ್ಮ ಉಟ್ಟಿಹಳು ।
ಚಂದ್ರಹಾರ ಮೂಗಿನಲಿ ನತ್ತು-ಕಿವಿಯಾಗ
ಚಂದ್ರಬಾವುಲಿ ಗುಬ್ಬಿಬಾವುಲಿ ॥ ೬೯

ಸೂತ್ರಾವಳಿಯ ಸೀರಿ । ಚಿತ್ರಾವಳಿ ಕುಪ್ಪಸ ।
ಚತುರಾಳ ಕೊರಳಿಗೆ ರನ್ನದ್ಹಾರ-ಮಂಗಳ
ಸೂತ್ರ ರನ್ನದ ಚಿನ್ನದ ॥ ೭೦

ಸಿಂಹಾವಳಿ ಪೈಠಣಿ । ಮೋಹನ ಮಾಲೆಯನಿಟ್ಟು ।
ಸಿಂಹಮುಖದ ಕಂಕಣ ಬಳಿ-ರಟ್ಟಿ ಬಳಿ
ಮಹಾದೇವಿ ಹೊರಟಳು ಬಳಕೂತ ॥ ೭೧

ಅಂಜರಿ ರೇಖೆಯ ಸೀರಿ । ವಿಜಯೆ ಉಟ್ಟಿರುವಳು ।
ವಜ್ರದ ಚಿನ್ನದ ಚಿಂತಾಕು-ಬೆರಳಿಗೆ
ಗೆಜ್ಜೆಯ ಉಂಗುರ ಇಟ್ಟಿಹಳು ॥ ೭೨

ಹೊನ್ನಧಾರಿಯ ಸೀರೆ । ಸುನೀತೆ ಉಟ್ಟಿಹಳು ।
ತನಮನಿ ವಜ್ರಪಚ್ಚದ ಬಳಿ-ಮೂಗಿನಲಿ
ರನ್ನದ ಮೂಗುತಿ ಇಟ್ಟಿಹಳು ॥ ೭೩

ಕೊಂಡಿ ಚಿಕ್ಕಿಯ ಸೀರಿ । ಗೊಂಡೆಮುತ್ತಿನ ಸೆರಗ ।
ತೋಡೆ ವಜ್ರದ ಮುತ್ತಿನ ಟೀಕೆ-ಪ್ರಮಿಲಾ
ಬೆಂಡೋಲಿ ತಾಲೂಕ ದ್ರಾಕ್ಷೆಗೊಂಚಲ ॥ ೭೪

ಮೋತಿ ಚೂರಿಯ ಸೀರಿ । ಶಾಂತಾ ಉಟ್ಟಿರುವಳು ।
ಜಾತಮುತ್ತಿನವಾಲಿ ಮುತ್ತಿನಹಾರ-ಮೂಗುತಿ
ಮುತ್ತಿನ ಜಲ್ಲರಿ ಹರಳಿನದು ॥ ೭೫

ಕುಸುಮಾವಳಿಯ ಸೀರಿ । ಕಸುತೀಯ ಕುಬ್ಬಸ ।
ಕಸ್ತೂರಿಯ ಕೊರಳಲಿ ಮುತ್ತಿನಕಂಠಿ-ಮುತ್ತಿನ
ಹೊಸದಾದ ನತ್ತು ಮೂಗಿನಲಿ ॥ ೭೬

ಹಂಡ ಚಿಕ್ಕಿಯ ಸೀರೆ । ದುಂಡಮುತ್ತಿನ ಗೊಂಡೆ ।
ಗೊಂಡೆ ಹೆರಳಿಗೆ ಪಿಂಪಣಿ-ವೀರಮ್ಮನ
ಗುಂಡು ಹಚ್ಚಿದ ಬಂಗಾರ ಪಟ್ಟ ॥ ೭೭

ಬದಾಮಿ ಜರಿ ಸೀರೆ । ಖಾದಿ ಕುಪ್ಪಸ ತೊಟ್ಟು ।
ಬದಾಮಿ ಉಂಗುರ ಪವನಸರ-ಗುರುದೇವಿ
ಪದಕ ಚಿನ್ನದ ರನ್ನದ ಹಾರ ॥ ೭೮

ನೀಲಿಯ ಪೀತಾಂಬರ । ನೀಲಮ್ಮ ಉಟ್ಟಿಹಳು ।
ನೆಲ್ಲಿಕಾಯಿ ಸರ ನಿರಗಿಬಳಿ-ಮುತ್ತಿನ
ನೀಲದುಂಗುರ ಬೆರಳಿಗೆ ॥ ೭೯

ಕೆಂದ ಪೀತಾಂಬರವ । ಸುಧೆ ಉಟ್ಟಿರುವಳು ।
ಅಂದ ಮುಡಿಗೆ ಮುತ್ತಿನ ಸೊಂಡಿಲ-ಬೈತಲ
ಬಿಂದಿ ಬಿಜವರ ಬಲುಚೆಂದ ॥ ೮೦

ಸುಖಾವಳಿಯ ಸೀರೆ । ಶಕುಂತಲೆ ಉಟ್ಟಿಹಳು ।
ಮೇಖಲೆ ಇಟ್ಟಿಹಳು ಸೊಂಟನಲಿ-ಬೈತಲ
ರೇಖೆಯಲಿ ಬಿಳಿಮುತ್ತಿನ ಸರ ॥ ೮೧

ಕರಿಯ ಜರಿಯ ಸೀರಿ । ಹರಳು ರಾಗುಟಿ ಚೌರಿ ।
ಹರಳೆಲೆ ನೊಸಲೀಗೆ ಉಮೆಯ-ಕೈಯಲಿ
ಹರಡಿ ಕಂಕಣ ಗೀರಬಳೆಯು ॥ ೮೨

ಗೆಜ್ಜೆಟೀಕೆ ಹೊನ್ನಟೀಕೆ । ಗೆಜ್ಜೆಡಾಬ ಇಟ್ಟಾಳ ।
ಗೆಜ್ಜೆದುಂಗುರ ಪೈಂಜಣ-ಮಧುಮಾಲಾ
ಗುಜ್ಜಿ ಇಟ್ಟಿಹಳು ಹೂಮಾಲೆ ॥ ೮೩

ನೀಲ ಮುತ್ತಿನ ಜಮುಕಿ । ಉಲಿವ ಬಾಹುಲಿ ತೋಳಿಗೆ ।
ಸಾಲ ರನ್ನದ ಮಾಲೆ ಬೈತಲಿಗೆ-ಸ್ವರೂಪಳ
ನೀಲಕುಂತಳದೆಲೆ ಕೊರಳಲ್ಲಿ ॥ ೮೪

ದೊಡ್ಡ ಜಡೆಯ ಹೂವು । ಅಡ್ಡಕೇದಿಗೆಯ ಹೂವು ।
ಜೋಡದುಂಡು ಕಡಗ ಕೈಯಲಿ-ಶಾರದಮ್ಮ
ದೊಡ್ಡ ಮುತ್ತಿನಕಂಠಿ ಕೊರಳಾಗ ॥ ೮೫

ಹೊನ್ನರನ್ನದ ಜಮುಕಿ। ಚಿನ್ಮಯಿ ಇಟ್ಟಿಹಳು।
ರನ್ನದ ಪದಕ ಕೊರಳಿಗೆ-ಕಾಲಲ್ಲಿ
ಚೈನ ಪೈಂಜಣ ಜಣಜಣ॥ ೮೬

ಗುಲು ಗುಲು ಗೆಜ್ಜೆಯು। ಬಾಲೆಯ ಕಾಲಲ್ಲಿ।
ಲೋಲಕ ಕುಂದಣ ಕಿವಿಯಲಿ-ಭಾರತಿ
ಕೀಲದ ಕಂಕಣ ಕೈಯಲಿ॥ ೮೭

ವೈಭವದಿ ಹೊರಟನು। ವಿಭವನು ಹರುಷದಿ।
ಆಭರಣ ಕೊರಳ ಕರ್ಣದಿ-ಹಂದರದ
ಶುಭಕಾರ್ಯದಿ ಓಡಾಡುತಿಹನು॥ ೮೮

ರೇಶಿಮೆ ಜರಿ ಹೂವು। ಹೊಸ ನಮುನೆ ಹೊಲಗಿಯ।
ಬಸವೇಶ ಅಂಗಿ ತೊಟ್ಟಿಹನು-ಕೊರಳಲಿ
ಹೊಸ ಕಂಠಿ ರನ್ನ ಚಿನ್ನದ॥ ೮೯

ಭರಜರಿ ಟೊಪ್ಪಿಗಿಗೆ। ತುರಾಯಿ ಮುತ್ತಿನದು।
ಕೊರಳ ಹಾರಕಂಠಿ ಮುತ್ತಿನದು-ಸಕಲೇಶ
ಹರಳುಂಗುರ ಇಟ್ಟಿಹನು ಬೆರಳಿಗೆ॥ ೯೦

ಜರಿಯ ಬುಟ್ಟಿಯ ಅಂಗಿ। ತೋರ ಹಾರ ಮುತ್ತಿನ।
ಬೆರಳಿಗೆ ಮುತ್ತುವಜ್ರದ ಉಂಗುರ-ಮಹೇಶ
ಹೊರಟಾನ ಹುಡುಗರ ಕೂಡಿಕೊಂಡು॥ ೯೧

ಕುತನೀಯ ಜರಿಅಂಗಿ। ರತನದ ಕಂಠಿಸರ।
ಮುತ್ತಿನ ಚೌಕಡಿ ಕಿವಿಯಾಗ-ಸಾನಂದ
ಮುತ್ತಿನ ಪೋಚೆಯು ಕೈಯ್ಯಾಗ॥ ೯೨

ಕಸೂತಿ ಜರಿಯ ಅಂಗಿ। ನೊಸಲಿಗೆ ವಿಭೂತಿ।
ಪೊಸ ಮುತ್ತಿನ ಕಂಠಿ ಕೊರಳಾಗ-ಜಯದೇವ
ಹೊಸರನ್ನದುಂಗುರ ಬೆರಳಿಗೆ॥ ೯೩

ರೇಶಮಿ ಜರದಂಗಿ। ಹೊಸಕುಂಚಿಗೆ ಹೂವು।
ನೊಸಲೀಗೆ ಪಚ್ಚದ ಪದಕವ-ಗಿರೀಶ
ಹೊಸ ಮುತ್ತುಹವಳದ ಕೈಕಟ್ಟ॥ ೯೪

ಹೂವಿನ ಜರದಂಗಿ। ರವಿಶಂಕರ ತೊಟ್ಟಿಹನು।
ಮಾವಿನ ಚಿನ್ನದ ಉಡದಾರ-ಗೋಪ
ಪವನಸರ ಮಾಣಿಕದುಂಗುರ ॥ ೯೫

ನಿಲುವಂಗಿ ಜರತಾರಿ। ನೀಲಮುತ್ತಿನ ಪದಕ।
ಕಾಲಲ್ಲಿ ಕಿರಿ ಗೆಜ್ಜೆಯನಿಟ್ಟು-ಉಂಗುರ
ಬಾಲ ಶಿವಯೋಗಿ ಬೆರಳಿಗೆ ॥ ೯೬

ಲಿಂಗಮುದ್ರೆಯ ಸೀರಿ। ಸಂಗಮ್ಮ ಉಟ್ಟಿಹಳು।
ಬಂಗಾರ ಮುತ್ತಿನ ರುದ್ರಾಕ್ಷಿ-ಹಂದರದಿ
ಪಿಂಗದೆ ಅಪ್ಪಣೆ ನೀಡುವಳು ॥ ೯೭

ನೇತ್ರಾವಳಿಯ ಸೀರಿ। ಮಿತ್ರಿ ಗಂಗಮ್ಮ ಉಟ್ಟು ನ-।
ಕ್ಷತ್ರಮಾಲೆ ಚಿಂಚಪಟ್ಟೆ-ಮುಗಬೊಟ್ಟು
ಕರ್ತುವಿನ ಕಾರ್ಯಕ್ಕೆ ತೊಡಗಿದಳು ॥ ೯೮

ಅರಿಷಿಣ ಹಚ್ಚಲು। ಸುರಗಿಯ ಸುತ್ತಿದರು।
ಹರುಷದಿ ಮುದುಮುಕ್ಕಳಿಗೆ-ಎಂಣೆರೆದು
ಹರದೆಯರು ಹರನ ಪಾಡಿದರು ॥ ೯೯

ನೈಯೆಣ್ಣೆ ಪದ

ಶ್ರೀ ಗುರುದೇವನಿಗೆ। ಶ್ರೀ ಗಿರಿಜಾ ವಲ್ಲಭಗೆ।
ಶ್ರೀ ಗಣಪತಿಯ ತಂದೆಗೆ-ನೈಯೆಣ್ಣೆ
ಸುಗುಣಿಯರೇ ನೀವು ಹಚ್ಚಿರೆ ॥ ೧

ಶ್ರೀ ಮಹಾದೇವನಿಗೆ। ಸೋಮಧರ ಶಿವನಿಗೆ।
ಕಾಮಹರ ಶಂಭೋ ಶಂಕರಗೆ-ನೈಯೆಣ್ಣೆ
ಕಾಮಿನಿಯರೆ ನೀವು ಹಚ್ಚಿರೆ ॥ ೨

ಶ್ರೀ ಸರ್ವಮಂಗಲೆಗೆ। ಶ್ರೀ ಸುಲಲಿತೆಗೆ।
ಶ್ರೀ ಸಾವಿತ್ರಿ ಗಾಯತ್ರಿಗೆ-ನೈಯೆಣ್ಣೆ
ಹೊಸ ಮುತ್ತೈದಿಗೆ ಹಚ್ಚಿರೆ ॥ ೩

ಓಂಕಾರ ರೂಪಿಣಿಗೆ। ಹ್ರೀಂಕಾರಿ ವಾಣಿಗೆ।
ಸೌಂಕಾರ ಸದನೆ ಶಾಂಭವಿಗೆ-ನೈಯೆಣ್ಣೆ
ಶಾಂಕರಿಗೆ ಹಚ್ಚಲು ಬನ್ನೀರೆ ॥ ೪

ಪನ್ನೀರ ಎರೆಯಿರಿ। ಕನ್ಯೆಯರು ಜತೆಗೂಡಿ।
ಮುನ್ನೀನ ಸಂಸಾರ ಸುಖದಿಂದ-ಸಾಗಲಿ
ಅನ್ನಪೂರ್ಣೆಪತಿ ವರವಾಗಲಿ ॥ ೫

ವರನಿಗೆ

ಶ್ರೀ ಗಂಗಾಧರನಿಗೆ, ಶ್ರೀ ಸಂಗಮೇಶನಿಗೆ |
ತ್ರಿಲಿಂಗ ರೂಪನಿಗೆ ನೀವು ಹಚ್ಚೇರಿ ನೈಯೆಣ್ಣೆ || ೧

ನಂದಿವಾಹನನಿಗೆ, ಇಂದುಶೇಖರನಿಗೆ |
ಕಂದಗೊರಳಾನಂದನಿಗೆ ನೀವು ಹಚ್ಚೇರಿ ನೈಯೆಣ್ಣೆ || ೨

ನಿತ್ಯ ನಿರಂಜನಗೆ, ಸತ್ಯ ಸ್ವರೂಪನಿಗೆ |
ಮುತ್ತೈದೆಯರೆಲ್ಲರು ನೀವು ಹಚ್ಚೇರಿ ನೈಯೆಣ್ಣೆ || ೩

ನಿಖಿಲ ನಿರ್ಮಲನಿಗೆ, ಸಕಲ ಸಂರಕ್ಷನಿಗೆ |
ಮುಕ್ಕಣ್ಣ ಶಿವನಿಗೆ ನೀವು ಹಚ್ಚೇರಿ ನೈಯೆಣ್ಣೆ || ೪

ಶಾರದೆವರನಿಗೆ, ತ್ರಿಪುರ ಸಂಹರನಿಗೆ |
ಗಿರಿರಾಜನಳಿಯನಿಗೆ ನೀವು ಹಚ್ಚೇರಿ ನೈಯೆಣ್ಣೆ || ೫

ಮಿಂದೂವ ಪನ್ನೀರ ಹಂದರಕೆ ತನ್ನೀರೆ |
ಶಂಕರನ ಜಳಕೀಗೆ ನೀವು ಹಚ್ಚೇರಿ ನೈಯೆಣ್ಣೆ || ೬

ವಧುನಿಗೆ

ಶ್ರೀ ಸರ್ವಮಂಗಲೆಗೆ, ಶ್ರೀ ಪಾರ್ವತಿ ದೇವಿಗೆ |
ಶ್ರೀ ಗಿರ್ವಾಣಪೂಜಿತೆಗೆ, ನೀವು ಹಚ್ಚೇರಿ ನೈಯೆಣ್ಣೆ || ೧

ಚಿನ್ನದ ಗಣಿಕೀಗೆ, ರನ್ನದ ಎಲೆ ಸುತ್ತಿ |
ಕನ್ಯೆಯರೆಲ್ಲರು ಕೂಡಿ, ನೀವು ಹಚ್ಚೇರಿ ನೈಯೆಣ್ಣೆ || ೨

ಉಮಾಕಾತ್ಯಾಯನಿಗೆ, ರಮಾರುದ್ರಾಂಬಿಕೆಗೆ |
ಹೈಮವತಿ ಸುಮತಿಗೆ, ನೀವು ಹಚ್ಚೇರಿ ನೈಯೆಣ್ಣೆ || ೩

ಭವಾನಿ ಭೈರವಿಗೆ, ಶ್ರೀದೇವಿ ಶಾರದೆಗೆ |
ಶಿವಶಾಂತೆ ಕಾಂತೆಗೆ, ನೀವು ಹಚ್ಚೇರಿ ನೈಯೆಣ್ಣೆ || ೪

ರಾಜರಾಜೇಶ್ವರಿಗೆ, ಗಜಮುಖನ ತಾಯಿಗೆ |
ಅಜಹರಿವಂದಿತೆಗೆ, ನೀವು ಹಚ್ಚೇರಿ ನೈಯೆಣ್ಣೆ || ೫

ಸುಲಲಿತೆ ಬಾಲೆಗೆ, ಕಲ್ಯಾಣಿ ಭ್ರಮರಾಂಬೆಗೆ |
ದೇವಿ ಶರಣರ ಕನ್ಯೆಗೆ, ನೀವು ಹಚ್ಚೇರಿ ನೈಯೆಣ್ಣೆ || ೬

ಸಂಧಿ ೨೦

ದೇವನಪ್ಪಣೆಯಂತೆ । ದೇವ ಕಾರ್ಯವ ಬಲು ।
ಸೇವಾಭಾವದಿಂದ ಸಾಗಿಸುತ-ಭಕ್ತೀಲಿ
ಶಿವ ಸಿದ್ಧರಾಮನನು ನೆನೆದರು ॥ ೧

ಕಳಸಕನ್ನಡಿಯಿಂದ । ಹೊಳೆವ ಮಂಟಪದೋಳು ।
ಎಳೆಯ ಮುತ್ತೈದೆರು ವಧುವರ-ಕರೆತಂದು
ವೇಳೆ ಕಳೆಯದೆ ಕಾರ್ಯ ಮುಂದೊರಿಸೆ ॥ ೨

ಉಡುಗರೆ ಉಡಿಸಿದರು । ಸಡಗರದಿಂದತಿ ।
ವಡವೆ ವಸ್ತುಗಳ ಮದುಮಕ್ಕಳಿಗೆ-ಹಾಕಲು
ನೋಡುವರು ಬೆರಗುಗೊಂಡರು ॥ ೩

ಹಸೆ ಮೇಲೆ ಕುಳ್ಳಿರಿಸಿ । ಹೊಸ ವಧುವರರಿಗೆ ।
ನೊಸಲಿಗೆ ವಿಭೂತಿ ಕುಂಕುಮ-ಮಂಗಲ
ಬಾಸಿಂಗ ಹೂವು ಮುಡಿಸಿದರು ॥ ೪

ಒಡನೆ ಮಾಂಗಲ್ಯ ಕಟ್ಟಿ । ಉಡಿಯಕ್ಕಿ ಸಾಮಾನ ।
ಉಡಿಯಲ್ಲಿ ತುಂಬಿದರು ಕನ್ಯೆಯರ-ಕಾಲಲ್ಲಿ
ಇಡಿಸಿದರು ಕಾಲುಂಗರ ಕಿರಿಪಿಲ್ಲೆ ॥ ೫

ಧಾರೆರೆದು ತಾಯಿತಂದೆ । ಕರುಳೀಗೆ ಒಪ್ಪಿಸುತ ।
ವರನಿಗೆ ನಮಿಸುತ ಕೋರಿದರು-ನೀವಿನ್ನು
ಕರವಿಡಿದು ಪೊರೆಯಿರಿ ಮಗಳಿಗೆ ॥ ೬

ಲಿಂಗಯ್ಯನ ಎದುರಿಗೆ । ಜಂಗಮರ ಸಾಕ್ಷಿಯಾಗಿ ।
ಮಂಗಳಮಯನ ಕಾರುಣ್ಯದಿ-ಸಾಸಿರೆರಡು
ಕಂಗಳು ಭೇದವಳಿದವು ॥ ೭

ಸಾವಿರ ವಧುಗಳಿಗೆ । ಸವಿಯದ ತಾಳಿ ಕಟ್ಟಿ ।
ದೇವ ಮಾಡಿದನು ಶುಭಲಗ್ನ-ಆಗಲೆ
ಶಿವಶಕ್ತಿಯರ ಸಂಯೋಗ ॥ ೮

ಹೊನ್ನೀನ ತಟ್ಟೆಯಲಿ । ರನ್ನದ ಮಂಗಳಾರುತಿ ।
ಕನ್ಯೆ ಮುತ್ತೈದೆರು ಬೆಳಗೂತ-ಸತಿಪತಿಗೆ
ಸೊನ್ನಲಗೀಶನೆ ಸಲುಹೆಂದು ॥ ೯

ಸದರಂಗಿ ತೊಟ್ಟಿಹನು । ಪದಕ ನವರತ್ನದ ।
ಮದುಮಕ್ಕಳ ಅಣ್ಣ ಬಸವಣ್ಣ-ಜನಕೆಲ್ಲ
ಹಂದರದಿ ಹೂವ ಕೊಡುವನು ॥ ೧೦

ವಧುವರರು ಬಂದು । ಸಿದ್ಧೇಶ್ವರನಿಗೆ ಭಕ್ತಿ ।
ಶುದ್ಧಮನದಿಂದ ನಮಿಸೂತ-ಕೋರಿದರು
ಸಿದ್ಧರಾಮನೇ ರಕ್ಷಿಸುವುದು ॥ ೧೧

ಸಾಸೀರ ಮದುವೆಗಳ । ಬೇಸರಿಲ್ಲದೆ ಮಾಡಿ ।
ನಸುನಗುತ ನಿಂತಿಹನು ಮಧ್ಯದಿ-ಸಿದ್ಧೇಶ
ಈಶನೆ ನಿನ್ನದೇ ಕೃಪೆ ಎಂದು ॥ ೧೨

ಭೂಮ ಮಾಡುವ ಲಗ್ನದ । ನೇಮವ ಮುಂದೊರಿಸೆ ।
ಕಾಮಿನಿಯರು ತಂದರು ಸಾಹಿತ್ಯ-ಪದಗಳ
ಪ್ರೇಮದಿ ಹಾಡಿ ಹರಸಿದರು ॥ ೧೩

ಭೂಮದ ಪದ

ಭೂಮವ ತುಂಬುವ| ನೇಮವ ಅರಿಬೇಕು|
ಸೋಮಧರನ ನೆನೆಯಿರೆ ಸೋ| ಶಿವಸಿದ್ಧ ಎನ್ನಿರಿ ಸೋ|| ೧

ಮುತ್ತೈದಿ ಕೊರಳಲಿ| ಮುತ್ತಿನ ಸರಗಳು|
ನತ್ತಿಟ್ಟ ಬಾಲೆ ತೆರೆಬಾರೆ ಸೋ| ಶಿವಸಿದ್ಧ ಎನ್ನಿರಿ ಸೋ|| ೨

ಮದುಮಗಳೆ ನೀ| ಮದುಮಗ ನೀ ಬಾರೋ|
ಸಾಧಿಸಿ ಭೂಮ ತೆರೆಯಿರಿ ಸೋ| ಶಿವಸಿದ್ಧ ಎನ್ನಿರಿ ಸೋ|| ೩

ಮುಚ್ಚಿದ ಭೂಮವ| ಎಚ್ಚರದಿ ತೆರೆಬೇಕು|
ಮುಚ್ಚಿ ಬಾಗೀಣ ಬೀರಬೇಕು ಸೋ| ಶಿವಸಿದ್ಧ ಎನ್ನಿರಿ ಸೋ|| ೪

ಎಣ್ಣೆಯು ಹೋಳಿಗೆ| ಚೆನ್ನಿಯು ಸಕ್ಕರೆ|
ಜಾಣೆ ಮುತ್ತೈದಿ ಕೊಳ್ಳಬಾರೆ ಸೋ| ಶಿವಸಿದ್ಧ ಎನ್ನಿರಿ ಸೋ|| ೫

ಹಚ್ಚಿದ ಜ್ಯೋತಿಯು| ಎಚ್ಚರದಿ ನೋಡವ್ವ|
ಬಚ್ಚಿಟ್ಟ ಬಯಕೆ ಅರಿಬೇಕು ಸೋ| ಶಿವಸಿದ್ಧ ಎನ್ನಿರಿ ಸೋ|| ೬

ಸಾಸಿರ ಬಳಗವು| ಕೂಸ ಒಪ್ಪಿಸ ಬಂದು|
ಸೊಸೆ ನಿಮ್ಮ ಮನೆಗೆ ಕೊಳ್ಳಿರಿ–ಕೋರುತ
ಹಸುಳೆಗೆ ಒಪ್ಪಿಸುತ ಪಾಡಿದರು|| ೧೪

ಕೂಸು ಒಪ್ಪಿಸುವ ಪದ

ಮಗಳೇ ಹೋಗಿ ಬಾರಮ್ಮ ||ಪ||
ಒಂಬತ್ತು ತಿಂಗಳ| ಹೊತ್ತು ಹೆತ್ತಿದ ಮಗಳೆ|
ಉತ್ತುಮರ ಮನೆಗೆ ಕೊಡಬೇಕು|| ೧

ಚೆಂದರವಿ ಹಾಸೀದ| ಹೊಂದಿಸಿ ಹೊಚ್ಚೀದ|
ಕಂದಮ್ಮನ ಸಾಕಿ ಸಲುವಿದ|| ೨

ಎಣ್ಣೆ ಹಚ್ಚಿ ಎರೆದು| ಕಣ್ಣಿಗೆ ಕಾಡಿಗೆ ಹಾಕಿ|
ಬಣ್ಣ ಬಣ್ಣ ಉಡಿಸಿ ತೊಡಸೀದ|| ೩

ಜೋಗುಳ ಪಾಡೂತ| ತೂಗುತ ತೊಟ್ಟಿಲ|
ಬಾಗಿ ಮುಖ ನೋಡಿ ನಲಿದಾಡಿ|| ೪

ಬೆಳ್ಳಿಯ ಬಟ್ಟಲಾಗ| ಒಳ್ಳೆ ಹಾಲು ಸಕ್ಕರೆ|
ಬಾಲಿಗೆ ಪ್ರೀತಿಲಿ ಕುಡಿಸೀದ|| ೫

ಮಾತು ತೊದಲುವಾಗ। ಪ್ರೀತಿಲಿ ನುಡಿಸಿದ।
ಎತ್ತಿ ಹೆಜ್ಜೆ ಇಡಲು ಕಲಿಸಿದ॥ ೬

ನಕ್ಕು ನಗಿಸುತ। ಅಕ್ಕರದಿ ಆಡೂತ।
ಚಿಕ್ಕ ಮಗಳೆನ್ನ ಮನತುಂಬಿ॥ ೭

ಸಣ್ಣಕ್ಕಿಯ ಬಾನ। ಬೆಣ್ಣೆ ಕಾಸಿದ ತುಪ್ಪ।
ಉಣಸಿದ ನಿನಗೆ ತುತ್ತುಮಾಡಿ॥ ೮

ದಟ್ಟಿ ಪೀತಾಂಬರುಡಿಸಿ। ಪಟ್ಟೆ ಚಿನ್ನದ ಇಡಿಸಿ।
ಕಟ್ಟಿದ ಮುತ್ತು ಕೊರಳಾಗ॥ ೯

ಓದಿ ಬರುವಳೆಂದು। ಹಾದಿ ಕಾಯುತಲಿದ್ದೆ।
ಮೇಧಾವಿ ನನ್ನ ಮಗಳೆಂದು॥ ೧೦

ಸುಖವಾಗಿ ಬೆಳಸಿದ। ಮುಖ ನೋಡಿ ಹರಸಿದ।
ಸಖನ ಕೈಹಿಡಿದು ಹೊರಟೇನ॥ ೧೧

ಎಳೆಬಾಳಿ ಸುಳಿಹಂಗ। ಬೆಳಸಿದ ಮಗಳಿಗೆ।
ಕಳಿಸುವೆ ಪತಿಯ ಅರಮನೆಗೆ॥ ೧೨

ಬಳಗಕ್ಕೆ ಬೇಕಾದಿ। ಗೆಳತಿಯರ ಪ್ರೀತಿಯ।
ಗಳಿಸಿ ಬೆಳೆದೀದಿ ಮುದ್ದು ಮಗಳೆ॥ ೧೩

ಸಾಲೆಂಬ ಸಂಸಾರಕೆ। ಬಾಲೆ ನಿನ್ನ ಕಳಹುವೆ।
ಶೀಲೆ ಸಂಪನ್ನೆ ಸುಗುಣಿಯೇ॥ ೧೪

ಅತ್ತಿ ಮಾವನ ಸೇವೆ। ಪತಿದೇವನ ಸೇವೆಯ।
ಪ್ರೀತಿ ಬಕುತಿಲಿ ಮಾಡಮ್ಮ॥ ೧೫

ನಾದನಿ ನೆಗೆಯಣಿ। ಮೈದುನ ಭಾವರಿಗೆ।
ಹದ ನುಡಿದು ಮನವ ಗೆಲೆಯುಮ್ಮ॥ ೧೬

ಒಡವೆ ವಸ್ತುವ ಬೇಡಿ। ಕಾಡದಿರು ಪತಿಯನು।
ಜೋಡಾಗಿ ಕೂಡಿ ನಡೆಯುಮ್ಮ॥ ೧೭

ಸತಿಪತಿಗಳ ಭಾವ। ಹಿತದಿಂದ ಒಂದೆ ಮಾಡಿ।
ಪ್ರೀತಿಲಿ ಕಾಲ ಕಳೆಯುಮ್ಮ॥ ೧೮

ನಲ್ಲನ ನೆರಳಾಗಿ। ನಲುಮೆಯ ಸೊಸೆಯಾಗಿ।
ಸಲ್ಲ ಬೇಕಮ್ಮ ಅಲ್ಲಿ ಇಲ್ಲಿ॥ ೧೯

ಹಿರಿಯರ ಅಪ್ಪಣೆ। ತ್ವರದಿಂದ ಪಾಲಿಸುತ।
ಹರುಷದಿ ಕೆಲಸ ಮಾಡಮ್ಮ॥ ೨೦

ಬೆಳಗೀಗೆ ಏಳಬೇಕು । ಜಳಜಳ ಕಸ ತೆಗೆದು
ಥಳಿ ಹೊಡೆದು ರಂಗೋಲಿ ಹಾಕವ್ವ ॥ ೨೧

ಹಸಗೂಸಿನಂತೆ ನೀ । ನಸನಗುತಲಿರಬೇಕು ।
ಹಸನಾದ ಮನವ ಇಡುವವ್ವ ॥ ೨೨

ತೊತ್ತುಗಳಿಗೆ ನಿನ್ನ । ಹೆತ್ತ ಮಕ್ಕಳ ಹಾಂಗ ।
ಹೊತ್ತಿಗೆ ಉಣಿಸಿ ತಣಿಸವ್ವ ॥ ೨೩

ಮೊರೆಹೊಕ್ಕು ಬಕುತಿಲಿ । ಹರನ ಪೂಜೆಯ ಮಾಡು ।
ಶರಣರ ವಚನ ಹಾಡವ್ವ ॥ ೨೪

ಶರಣರ ಸವಿ ನುಡಿಯ । ಅರಗಿಸಿ ನಡಿ ಬೇಕು ।
ದುರಿತ ಕರ್ಮಗಳ ಕಳಿವವು ॥ ೨೫

ಮುದ್ದು ನನ್ನ ಮಗಳೆ । ಸಿದ್ಧರಾಮನು ನಿನಗೆ ।
ಅದ್ದಲಿ ಅಮರ ಅಮೃತದಿ ॥ ೨೬

★

ನೊಳಗಿದವು ಮಂಗಳ । ಬೆಳಗಿನ ವಾದ್ಯಗಳು ।
ಕೇಳಿ ಬೆಳಗಿನ ಪೂಜೆಗೆ–ಹೊರಟನು
ವೇಳೆ ಕಳೆಯದೆ ಸಿದ್ಧರಾಮನು ॥ ೧೫

ಬೇಗ ಮಿಂದನು ಸಿದ್ಧ । ಯೋಗಿ ಭಸಿತವ ಪೂಸಿ ।
ನಗಚಾಪ ನಿರ್ಮಲನ ಪೂಜೆಗೆ–ಕೂತಾಗ
ಸಾಗಿ ಬಂದಿಹರು ಭಕ್ತರು ॥ ೧೬

ತುಂಬಿದ ಹೃದಯದ । ಕಂಬನಿ ಸುರಿಸೂತ ।
ಸಾಂಬನಿಗಭಿಷೇಕ ಮಾಡಿದನು–ಕಾರ್ಯ
ಅಂಬಾಪತಿಯೆ ನಿನ್ನದೆಂದು ॥ ೧೭

ನಿನ್ನ ಆಣತಿಯಂತೆ । ಅನ್ನಪೂರ್ಣೆಯು ನಿಂದು ।
ಕನ್ಯಾದಾನ ಸಾಸಿರ ಮಾಡಿದಳು–ದೇವನೆ
ಅನ್ಯವಲ್ಲ ನಿನ್ನ ಕರುಣೆಯಿದು ॥ ೧೮

ಪರಮಾನಂದದಿ ಯೋಗಿ । ಪರಮೇಶನ ಪೂಜಿಸಿ ।
ಹರ ನಿನ್ನ ಪೂಜೆ ಶುಭಲಗ್ನ–ಸಾಗಿಸಿ ನೀ
ಪರನೆ ಎನ್ನನು ಪೊರೆದಿರುವಿ ॥ ೧೯

ರಾಜರಾಜಾತ್ಮನಿಗೆ। ಪೂಜಿಸುತ ಸಿದ್ಧರಾಮ।
ನಿಜಾನಂದದ ಕಡಲಿನಲಿ–ಮುಳಗೂತ
ರಾಜಶೇಖರನೀಗೆ ನಮಿಸಿದನು॥ ೨೦

ಶಿವ ಮಹಾದೇವನೆ। ಪಾರ್ವತಿ ವಲ್ಲಭನೆ।
ಸರ್ವೇಶ ಸರ್ವಜ್ಞ ಭೂತೇಶನೆ–ನಿನ್ನಡಿಗೆ
ಸವಿನಯದಿ ಸೇವೆ ಸಲ್ಲಿಸುವೆ॥ ೨೧

ಶಂಭೋ ಮಹಿಮೋಗ್ರ। ಶಾಂಭವಿಪ್ರೀಯಕರನೆ।
ಕುಂಭಿನಿ ಒಡೆಯನೆ ಶ್ರೀಕಂಠನೆ–ನಿನ್ನಡಿಗೆ
ಶರಣು ಸಾಂಬ ಸದಾಶಿವ ಶಂಕರನೆ॥ ೨೨

ಬಾಲಚಂದ್ರಮಂಡಿತನೆ। ಶೂಲ ಡಮರುಧರನೆ।
ಕಾಲಸಂಹಾರ ನಿರ್ಲೇಪನೆ–ಕಪಾಲಿ
ಕೈಲಾಸಮಂದಿರ ಜಗದೀಶನೆ॥ ೨೩

ನಂದಿವಾಹನ ಶಿವನೆ। ಮಂದಾಕಿನಿಧರನೆ।
ಮಂದರನಿವಾಸ ವಾಗೀಶನೆ–ಜಯತು
ಬಂದ ಭಕ್ತರಿಗೆ ಪೊರೆಯುವದು॥ ೨೪

ಮುಗಿಸಿ ಮಾಪೂಜೆಯ। ಯೋಗಿವರ ಬಂದನು।
ಬೇಗ ಭೋಜನ ಶಾಲೆಯಲಿ–ಸಿದ್ಧೇಶ
ಸಾಗಿಸಲು ಜನರ ಪಂಕ್ತಿಗಳ॥ ೨೫

ಕರೆಯಿಸಿ ಭಕ್ತರನು। ಉರುತರದ ಪ್ರಸಾದ।
ಪರಮನು ತನ್ನ ಹಸ್ತದಿಂದ–ನೀಡಿದನು
ವರ ಭಕ್ತೀಯಲಿ ಸಲ್ಲಿಸಿರೆಂದು॥ ೨೬

ಒಂಟಿಗರು ಬಂದವರು। ಹೊಂಟರು ಜೋಡಾಗಿ।
ನೆಂಟರು ಬೀಗರು ಕೂಡಿಕೊಂಡು–ಉಂಡು
ಮಂಟಪದಿ ಹರಸುತ ಸಿದ್ಧನ॥ ೨೭

ದಿವ್ಯ ಪುರುಷನ ಆ। ಭವ್ಯ ಕಾರ್ಯವ ಕಂಡು।
ಅವತಾರಿ ಪುರುಷನೆ ನಮೊ ಎಂದು–ವಂದಿಸಲು
ಭಾವಭಕ್ತಿಯಿಂದ ಬಾಗಿದರು॥ ೨೮

ಗುರುವೆ ಮಹಾಗುರುವೆ। ಪರಮಪಾವನ ದೇವ।
ಮರೆಯದ ಭಾಗ್ಯವ ನೀಡಿದಿ–ಸಿದ್ಧರಾಮ
ಹರಕೆಛತ್ತರವಿರಲಿ ತಲೆಮೇಲೆ॥ ೨೯

ಆ ಪತಿತಪಾವನನು। ಪಾಪವಿದೂರನು।
ಕಪಿಲ ಸಿದ್ಧಮಲ್ಲಿಕಾರ್ಜುನ–ನಿಮ್ಮನು
ಕಾಪಾಡುವನು ಹೋಗಿ ಬನ್ರೆಂದನು॥ ೩೦

ಬಂದವರು ಹೊರಟರು। ತಂದೆಗೆ ನುತಿಸುತ।
ಚಂದಿರನ ಬೆಳಗಿನಲಿ ಹಾಡೂತ–ಪಾಡೂತ
ಅಂದಿಂದು ಮುಂದೆ ಮೆರೆವ ಸಿದ್ಧನ॥ ೩೧

ಎಂದಿನಂತೆ ಸಿದ್ಧರಾಮ। ಇಂದುಧರನ ಪೂಜೆ।
ಬಂದವರಿಗೆ ಬೇಡಿದ್ದು ನಿಡೂತ–ಜೀವರು
ನೊಂದರೆ ತನ್ನದೆ ಎನ್ನೂತ॥ ೩೨

ಅನ್ನಛತ್ರದೊಳಗೆ। ಚಿನ್ನಾಟವಾಡೂತ।
ಸನ್ನಿಧಿ ಪ್ರೀತಿಯ ಬೆಕ್ಕದು–ಬೆಳೆದೀತು
ದಿನದಿನಕೆ ದೊಡ್ಡದಾಗೂತ॥ ೩೩

ಹಣೆ ಮೇಲೆ ವಿಭೂತಿ। ಮಣಿರುದ್ರ ಕೊರಳಲಿ।
ದಣಿಯದೆ ಆಟವಾಡೂತ–ಬೆಕ್ಕಿನ
ದನಿ ಕನಿಕರ ಮೆವ್ ಮೆವ್॥ ೩೪

ಯೋಗಿವರ ಬಂದಾಗ। ಸಾಗಿ ಹತ್ತಿರ ಹೋಗಿ।
ಬಾಗಿ ನಮಿಸೂತ ಸಿದ್ಧನಿಗೆ–ಸುತ್ತೂತ
ಕೂಗಿ ತನ್ನ ಮಾತಿನಲಿ ಜಯವೆನುತ॥ ೩೫

ಭೂತನಾಥನು ತನ್ನ। ಪ್ರೀತಿ ವರದ್ಹಸ್ತವನು।
ಮಾತಾಡಿಸಿ ಮೈಮೇಲೆ ಎಳೆಯೂತ–ಸಿದ್ಧೇಶ
ಭೂತಸ್ನೇಹಿ ಎಂಬೂದು ಕಂಡೀತು॥ ೩೬

ತಾಯಾದಳು ಮಕ್ಕಳಿಗೆ। ಹಾಯಾಗಿ ಹಾಲುಣಿಸಿ।
ಮಾಯದ ಮರಿಗಳ ಸಲಹುತ–ಬೆಕ್ಕದು
ಈಯುವದು ಮುದ್ದು ಮರಿಗಳ॥ ೩೭

ಧಗಧಗ ಉರಿಯುವ। ಮಿಗೆ ಶಬ್ದ ಮಾಡುವ।
ಬೇಗೆಯುಲಿ ಸಿಕ್ಕು ಬೆಕ್ಕದು–ಪ್ರಾಣ
ನೀಗಿ ದೇಹಸುಟ್ಟು ಬಿದ್ದೀತು॥ ೩೮

ಚಿತ್ತವನು ಸೆಳೆಯೂವ। ಮೆತ್ತನ ಮೈವುಳ್ಳ।
ಹೆತ್ತವ್ವನ ಹುಡುಕಿ ಕಿರಚೂವ–ಮರಿಗಳ
ಎತ್ತಿಡಿದು ಯೋಗಿ ಮರುಗಿದನು॥ ೩೯

ಭೂತದಯೆಯಿಂದತಿ ಪ್ರೀ-। ರಿತನಾದ ಸಿದ್ಧನು।
ಆತಿನೊಂದುಕೊಂಡ ಮನದೊಳು–ಶಿಷ್ಯರೆ
ಸತ್ತ ಬೆಕ್ಕಿಗೆ ಎತ್ತಿ ತನ್ರೆಂದನು॥ ೪೦

ಸುಟ್ಟ ಬೆಕ್ಕಿನ ಶರೀರ। ಮುಟ್ಟಗಗೊಂಡಿತ್ತು।
ಸುಟ್ಟಬದನೆ ಹಂಗ ಆಗಿತ್ತು–ಯೋಗಿ
ನೆಟ್ಟನೆ ಕನಿಕರದಿ ನುಡಿದನು॥ ೪೧

ಯಾಕೆ ಮೌನವು ಇಂದು। ಸಾಕಾಯಿತೆ ಆಡುವದು।
ಅಕ್ಕರದಿ ಹಾಲು ಉಣಿಸುವದು–ಮರಿಗಳ
ನೆಕ್ಕಿ ಮಮತೆಯ ಬೀರುವದು॥ ೪೨

ತಾಯಿಯನೆ ಕಳಕೊಂಡು। ಬಾಯಿ ಬಿಡುವ ನಿನ್ನ।
ಛಾಯೆಯಂತಿರುವ ಮರಿಗಳ–ನೀನಿನ್ನು
ಕಾಯಕಂಕುಳದಿ ಕರಕೋಳೆ॥ ೪೩

ಕಣ್ಣಿನ ಕಾರುಣ್ಯದಿ। ಪ್ರಾಣ ತಿರುಗಿತು ಆಗ।
ಪಾಣಿ ಸ್ಪರ್ಶದಿ ನವಶಕ್ತಿಯ–ಪಡೆದಿತು
ಚಣದಿ ಮರಿಗಳತ್ತ ಓಡಿತು॥ ೪೪

ಸಿದ್ಧನ ಪಾದದ ಮೇಲೆ। ಬಿದ್ದು ಉರುಳಾಡಿತ್ತು।
ನಿದ್ದೆಯಿಂದ ಎಚ್ಚರವಾದಂತೆ–ಕಂಡಿತು
ಮುದ್ದು ಮರಿಗಳ ತಾಯಾಗ॥ ೪೫

ರೂಢಿಯೊಳಗೆ ನಿಮ್ಮ। ಜೋಡಿಲ್ಲ ದಯೆಯಲ್ಲಿ।
ಮೃಡ ಸಿದ್ಧಯೋಗಿ ಜಯಜಯ–ಎನ್ನುತ
ಅಡಿಗಳಿಗೆ ಎರಗಿದರು ಭಕ್ತರು॥ ೪೬

ಬೊಮ್ಮಿಶೆಟ್ಟಿಯು ಬಲು । ಹಮ್ಮಳಿವ ನಿಜಭಕ್ತ ।
ಸ್ವಾಮಿ ಸಿದ್ಧಗೆ ಸೇವೆ ಸಲ್ಲಿಸೂತ–ಸೊನ್ನಲಿಗಿ
ಗ್ರಾಮದಿ ಸುಖವಾಗಿ ಇರುತಿಹನು ॥ ೪೭

ಸತಿ ಕಾಳವ್ವೆಯು ತನ್ನ । ಪತಿಸೇವೆ ಗೈಯ್ಯುತ ।
ಹಿತದಿಂದ ಸಂಸಾರ ಸಾಗಿಸುತ–ಸಿದ್ಧೇಶ
ಗತಿ ನೀನೆ ಎಂದು ನುತಿಸೂತ ॥ ೪೮

ಸಂಸಾರದ ತೇರವನು । ಹಿಂಸಿಸದೆ ಸಾಗಿಸುತ ।
ಮಾಂಸಪಿಂಡದ ಗುಣವ ಅರಿತು–ಸತಿಪತಿ
ಸಂಸಾರ ಪಾರಮಾರ್ಥ ಸಾಧಿಪರು ॥ ೪೯

ಮುತ್ತೈದಿ ಕಾಳವ್ವೆಗೆ । ಹತ್ತೆಂಟು ಮಕ್ಕಳು ।
ಪತಿ ಬೊಮ್ಮಿಶೆಟ್ಟಿಯ ನೆಳಲಾಗಿ–ದಿನಗಳು
ಗತಿಸಿದವು ಹೊಸ ತೆರದಲಿ ॥ ೫೦

ಒಕ್ಕಲ ಬೊಮ್ಮಿಶೆಟ್ಟಿಗೆ । ಮಕ್ಕಳು ಮೊಮ್ಮಕ್ಕಳು ।
ತಕ್ಕ ಹೆಂಡತಿ ಮನೆಯೊಳಗೆ–ಐಸಿರಿ
ಉಕ್ಕೀತು ನಾನಾ ವಿಧದಿಂದ ॥ ೫೧

ನವಶಕ್ತಿ ನೀಡಯ್ಯ । ಭವರೋಗ ವೈದ್ಯನೆ ।
ಸವೆಯುವದು ಮನಕಾಯವು–ಶಿವಸಿದ್ಧ
ದೇವನೆ ರಕ್ಷಿಸು ಎನ್ನೂತ ॥ ೫೨

ಗುರುವಿನಲಿ ನಿಷ್ಠೆ । ಹರಚೆನ್ನಮಲ್ಲನಲಿ ।
ಪರಮ ಭಕ್ತರಾಗಿ ಬಾಳಿಹರು–ಸತಿಪತಿ
ಪುರದೊಳಗೆ ಶ್ರೇಷ್ಠರೆಂದೆನಿಸೂತ ॥ ೫೩

ಸ್ವಾಮಿಗೆ ಪ್ರಸಾದ । ನೇಮ ಹಸುಗೆ ಮಾಡಲು ।
ಧಾಮ ಸಿಂಗರಿಸಿ ನೆಂಟರನು–ಬಲು
ಪ್ರೇಮದಿ ಕರೆಸಿ ಕೊಂಡಿಹರು ॥ ೫೪

ಮದುವೆಯ ಮನೆಯಂತೆ । ಸುದತಿಯರು ಹರುಷದಿ ।
ಮೋದದಿ ಕೆಲಸವ ಮಾಡೂತ–ಒಳಹೊರಗೆ
ಉದಯದಿಂಮೊಡಾಡುತಿಹರು ॥ ೫೫

ಹಿರಿ ಅಜ್ಜಿ ಕಾಳವ್ವೆಯು । ಹಿರಿಹಿರಿ ಹಿಗ್ಗೂತ ।
ವರಪ್ರಸಾದಕ್ಕೆ ಸಾಹಿತ್ಯ-ತಗೆವಾಗ
ಉರುಗ ಕಡಿದು ಅಸು ನೀಗಿದಳು ॥ ೫೬

ಹಂದರ ಮೇಲ್ಹಬ್ಬಿದ । ಸುಂದರ ಬಿಳ್ಳಿಯ ।
ಬೆಂದಿತು ತಾಪದಿ ಕುಂದಿತು–ಆ ಮನೆಯ
ಹಂದರ ಕುಸಿದು ಬಿದ್ದೀತು ॥ ೫೭

ಕರುಣೆ ಇಲ್ಲದ ದೇವ । ವರಭಕ್ತಿಲಿ ನಿನಗಾಗಿ ।
ಪ್ರಸಾದ ಅಣಿಮಾಡುತಿರೆ–ಈ ರೀತಿ
ಉರಗ ಕಡಿದು ತಾಯಿ ಮಡಿಬೇಕೆ ॥ ೫೮

ಊರಿಗೆ ತಾಯಾಗಿ । ಕೇರಿಗೆ ಹಿರಿಯಳು ।
ಸಾರೂತ ಹಿತ ವಚನವ–ಜನಕೆ
ತೋರೂತ ಸತ್ಯಮಾರ್ಗವನು ॥ ೫೯

ತಾಯೆ ನಿನ ಪ್ರೀತಿಯು । ಸಾಯುವರ ಬದುಕಿಸಿ ।
ಬಾಯಾನ ತುತ್ತು ಬಾಯೊಳಗೆ–ಹಾಕೂತ
ಮಾಯದಿ ಬಡವರ ಸಲುಹಿದಿ ॥ ೬೦

ಉರಗ ಕಡಿದ ಸುದ್ದಿ । ಪುರವೆಲ್ಲ ಹಬ್ಬೀತು ।
ಭರದಿಂದ ಜನವೆಲ್ಲ ಕೂಡೀತು-ತಾಯಿಯ
ವಿರಹದಿಂದ ನೊಂದುಕೊಂಡೀತು ॥ ೬೧

ಮಡದಿ ಮಡಿದ ಸುದ್ದಿ । ಕಡುದುಃಖ ಕೊಡಲಿಲ್ಲ ।
ಒಡೆಯ ಸಿದ್ಧನ ಸೇವೆಯಲಿ-ಬೊಮ್ಮಶೆಟ್ಟಿ
ತೊಡಗಿಹನು ತ್ರಿಕರಣಪೂರಿತ ॥ ೬೨

ಮಡದಿ ಕಾಳವ್ವೆಯು । ಮಡಿಬೇಕೆ ಮನಿಯಾಗ ।
ಬಡಹಾವು ಕಡಿಸಿಕೊಂಡವಳು-ದೇವನೆ
ಬಿಡಲಾರೆ ಸೇವೆಯ ಅರ್ಧಕ್ಕೆ ॥ ೬೩

ಜೀವನದ ಸಂಗಾತಿ । ಹಾವು ಕಡಿದು ಮಡಿದರು
ಧಾವಿಸಲಿಲ್ಲ ಮನೆಕಡೆಗೆ-ಬೊಮ್ಮಶೆಟ್ಟಿ
ಶಿವಸಿದ್ಧನಲಿ ಅಚಲ ನಿಷ್ಠೆಯು ॥ ೬೪

ಬಂದ ಜನಗಳಿಲ್ಲ । ನೊಂದು ನುಡಿದೀತಾಗ ।
ಚಂದಲ್ಲ ಈ ಪರಿ ಮುದಿಯಾಟ-ಶೆಟ್ಟಿಗೆ
ಇಂದೆ ಬಂತೆ ಸೇವೆ ಮಾಡುವದು ॥ ೬೫

ಜಳಕ ಮಾಡಿಸಿದರು । ಕಾಳವ್ವೆಯ ಶವಕಾಗ ।
ಗೋಳಿಟ್ಟಿತು ಬಳಗವೆಲ್ಲವು-ಬೊಮ್ಮಂಣ
ಕಳೆದುಕೊಂಡನೆ ಹೃದಯವ ॥ ೬೬

ಹೊಸಸೀರೆಯ ನುಡಿಸಿ । ನೊಸಲಿಗೆ ವಿಭೂತಿ ।
ಹೊಸಮನೆಯಾಗ ಹಿರಿಯಳು-ಕಾಳವ್ವೆ
ನಸು ನಗುತ ಕೂತುಕೊಂಡಂತೆ ॥ ೬೭

ಹೂವು ಮುಡಿಸಿದಾಗ । ದೈವಿಶಕ್ತಿ ಸಂಪನ್ನೆ ।
ದೇವಿಯಂತೆ ಕಾಣುತಿಹಳು-ಕಾಳವ್ವೆ
ದೇವರ ಮನೆಗೆ ಹೋಗಿಹಳು ॥ ೬೮

ಪರಿಪರಿಯಿಂದ ತಾಯ । ವರಗುಣವ ನೆನೆಯುತ ।
ಪುರಜನ ಬಳಗ ಮಕ್ಕಳು-ಶೋಕ ಸಾ-
ಗರದಿ ಮುಳುಗಿತ್ತು ಆಗ ॥ ೬೯

ನಡಗಂಬ ನಡುಗಿಲ್ಲ । ದೃಢಮನದ ಬೊಮ್ಮಂಣ ।
ಒಡೆಯ ಸಿದ್ಧನ ಸೇವೆಯಲಿ-ಮನಮುಟ್ಟಿ
ಮಾಡೂತ ಅಲ್ಲಿಯೆ ಕುಳಿತಿಹನು ॥ ೭೦

ಬಕುತಿ ಒರೆಗಲ್ಲಿಗೆ । ತಿಕ್ಕಿತಿಕ್ಕಿ ನೋಡಿದರು ।
ಜಕ್ಕನೆ ಜರೆದಿಲ್ಲ ಬೊಮ್ಮಿಶೆಟ್ಟಿ-ಭಪ್ಪರೆ
ಚೊಕ್ಕ ಚಿನ್ನವೆಂದನು ಸಿದ್ಧ ॥ ೭೧

ಪರಿಯಾಣದೊಳು ತನ್ನ । ಕರುಣಪ್ರಸಾದ ಕೊಟ್ಟು ।
ಗುರುಸಿದ್ಧರಾಮನು ಹೋಗೆಂದ-ಬೊಮ್ಮಯ್ಯ
ವರಸತಿಯಳ ಕೂಡಿ ಸೇವಿಸಿರಿ ॥ ೭೨

ಸಿದ್ಧನ ಅಡಿಮೇಲೆ । ಬಿದ್ದನು ಬೊಮ್ಮಿಶೆಟ್ಟಿ ।
ಸಿದ್ಧ ಹಸ್ತದ ಪ್ರಸಾದ-ದೊರೆಯಿತು
ಸಿದ್ಧಿಸಿತು ಮನದ ಆಸೆಯು ॥ ೭೩

ದೇವ ನೀನೊಲಿದರೆ । ಜೀವ ಬಾರದೇನಯ್ಯ ।
ಹಾವಿನ ವಿಷವು ಅಮೃತ-ಆಗುವದು
ದೇವ ನಿನ ಕರುಣೆ ನಾ ಬಲ್ಲೆನು ॥ ೨೪

ಏಳೇಳು ಸದ್ಭಕ್ತನೆ । ವೇಳೆ ಬಹಳಾಯಿತು ।
ಕಾಳವ್ವೆ ಕುಳಿತಿಹಳು ನಿನಗಾಗಿ-ಹೋಗಿನ್ನು
ಹೇಳು ಸತಿಗೆ ಪ್ರಸಾದ ಕೊಳ್ಳಲು ॥ ೨೫

ಹರುಷ ವರುಷವಾಗಿ । ಸುರಿಸೂತ ಕಂಣೀರು ।
ಭರದಿಂದ ಬಂದನು ಮನೆಗಾಗ-ತನ್ನನು
ಕರೆಯಲು ಕೂತಂತೆ ಕಂಡಳು ॥ ೨೬

ತಂಪೆಯನು ಕಂಡಾಗ । ನೊಂದುಕೊಂಡೆಲ್ಲರು ।
ಚಂಪೇನು ಈ ಪು ಹೋಗುವದು-ಲೋಕದ
ಬಂಧನ ಹರಿದು ತಾಯಿ ಹೋದಳು ॥ ೨೭

ಮಾತು ಕೇಳಿಸಲಿಲ್ಲ । ಆತನ ಕಿವಿಗಳಿಗೆ ।
ಓತು ಮನದಿಂದ ಕಾಳವ್ವೆಗೆ-ಎಂದನು
ಸತಿಯಳೆ ಪ್ರಸಾದ ತಂದಿಹೆನು ॥ ೨೮

ಏಳೇಳು ಕಾಳವ್ವೆ । ವೇಳೆ ಬಹಳವಾಯ್ತು ।
ಕೊಳ್ಳೇಳು ತಂದ ಪ್ರಸಾದ-ಸತಿಯಳೆ
ತಾಳೇಳು ಈಗ ಹಸಜೀವ ॥ ೨೯

ನಟ್ಟಗೂಟವ ಕಿತ್ತಿ । ತಟ್ಟನೆ ಕುಡಿದಳು ।
ನೆಟ್ಟನೆ ಎದ್ದಳು ಕಾಳವ್ವೆ-ಮಸ್ತಕ
ಇಟ್ಟಳು ಪತಿಯ ಪಾದದಿ ॥ ೩೦

ಉಡಿಸಿದ ಹೊಸಸೀರೆ । ಮುಡಿಸಿದ ಹೂವಾಗ ।
ಕೂಡಿಸಿದ ಜಾಗ ಮಂಗಲ-ಮಯವಾಗಿ
ಕಾಡುವ ವೇಳೆ ಕಡೆಯಾಯ್ತು ॥ ೩೧

ಶುದ್ಧ ಮನದಿ ಆಗ । ಸಿದ್ಧನ ನೆನೆಯೂತ ।
ಎದ್ದು ಹೊ ಟಿಹಳು ಮಠಕ್ಕೆ-ಮೈಮೇಲಿ
ಇದ್ದಿಲ್ಲ ಯಾವ ಪರಿವೆಯು ॥ ೩೨

ದೇವ ದೇವನ ಲೀಲೆ। ಭಾವ ತುಂಬಿ ಹರಸೂತ।
ಧಾವಿಸಿ ಕಾಳವ್ವೆಯ ಹಿಂಬಾಲಿ-ಜನವೆಲ್ಲ
ಪಾಪನಕರ ಗುರು ಸಲುಹೆಂದು॥ ೮೩

ನಂಬಸೆ ನೆಚ್ಚದೆ। ಸಾಂಬನ ಮಹಾಮಹಿಮೆ।
ಅಂಬುಧಿಯ ನೀರು ಹೊತ್ತೊತ್ತು-ಸೋತಂತೆ
ಕಾಂಬವರ ಕಣ್ಣು ಅರಿಯಲಿಲ್ಲ॥ ೮೪

ಗುರುವೆ ಕಲ್ಪತರುವೆ। ಪರಮ ಜಗದ್ಗುರುವೆ।
ಕರುಣೆಯ ಮಂಗಲ ಮೂರುತಿ-ಶಿವಸಿದ್ಧ
ವರ ಯೋಗಿಶನೇ ಜಯ ಜಯ॥ ೮೫

ವಿಷವ ಅಮೃತ ಮಾಡಿ। ತೋಷಿಸಿ ಭಕ್ತರನು।
ಪೋಷಿಸುತ ಜಗಜೀವಿಗಳ-ರಕ್ಷಕನು
ದೋಷನಾಶ ಶೋಕವಿನಾಶ॥ ೮೬

ಬೊಮ್ಮಶೆಟ್ಟಿಯ ಭಕ್ತಿಗೆ। ಸ್ವಾಮಿ ತಾ ಮೆಚ್ಚಿಹನು।
ಪ್ರೇಮದಿ ಕರುಣ ಪ್ರಸಾದವ-ನೀಡಿದನು
ಅಮಮ ಮಹಿಮೆ ಇದು ಎಂತಹದು॥ ೮೭

ಗುರುವಿನ ನೆನೆಯುತ। ಪರವಶಳಾಗಿ ಸತಿ।
ಚರಣ ಹಿಡಿದಳು ಎರಗುತ-ಕಾಳವ್ವೆ
ಎರೆದಿಹಳು ಕಣ್ಣೀರಿನಭಿಷೇಕ॥ ೮೮

ದೇವ ದೇವನೆ ನಿನ್ನ। ಪಾವನ ಪ್ರಸಾದವ।
ಸೇವಿಸಿ ನಾನು ನಿನ್ನ ಪಾದವ-ಕಂಡೆ
ಜೀವ ನೀಡಿ ಎನ್ನ ಸಲುಹಿದಿ॥ ೮೯

ಮರೆಯಲಾರೆನೊ ನಿನ್ನ। ಪರಮ ಶ್ರೀಗುರುದೇವ।
ಕರುಣಾಕರ ದೀನದಯಾಳು-ನಂಬಲು
ಪೊರೆಯುತ ಬಂದಿರುವೆ ಜೀವಿಗಳ॥ ೯೦

ಆತನ ನೆನವಿನಲಿ। ಜಾತ ಪುನೀತವಾಗಿ।
ಮಾತು ಬಾರದೆ ಹೋಯಿತು-ಕಾಳವ್ವೆ
ಸ್ಥಿತ ಪ್ರಜ್ಞಳಂತೆ ಮೂಕಾಗಿ॥ ೯೧

ಸತಿ ಪತಿಗಳಿ ನಿಮ್ಮ | ಹಿತವಾಯಿತು ಶಿವಭಕ್ತಿ |
ಅತಿ ಕರುಣೆಯಿಂದ ಒಲಿದನು-ಮಲ್ಲೇಶ
ಗತಿ ಮತಿ ನೀಡಿ ಕಾಪಾಡುವನು || ೯೨

ಚೆನ್ನಮಲ್ಲೇಶನಿಗೆ | ಬೋನದ ನೈವೇದ್ಯವ |
ಮನೆಗ್ಹೋಗಿ ಬೇಗ ಕಳುಹವ್ವ-ತಾಯಿ
ಜನಗಳಿಗೆ ಪ್ರಸಾದ ನೀಡವ್ವ || ೯೩

ಗುರುವಿನ ಆಣತಿ | ತ್ವರದಿಂದ ಪಡಕೊಂಡು |
ವರಪ್ರಸಾದವ ಮಾಡಿದಳು-ಕಾಳವ್ವೆ
ಪರಮಂಗೆ ನೈವೇದ್ಯ ಕಳುಹಿದಳು || ೯೪

ನೆರಳು ಬಿಸಿಲಾಗಿತ್ತು | ಕರಳು ತಾ ಕೊರಿಗಿತ್ತು |
ಇರುಳು ಆಗಿದೆ ಉಣನೀಡು-ತಾಯವ್ವ
ಗರಳಕಂಠನ ಮಹಿಮೆ ಸಾರೇಳು || ೯೫

ಸಂತಸದಿ ಮನೆಯಲಿ | ಪಂತಿಯು ಕೂತೀತು |
ಕಾಂತಿಯಿಂದ ಮುಖ ಅರಳೀತು-ಜನವೆಲ್ಲ
ಶಾಂತ ಸದ್ಗುರುವಿಗೆ ನೆನೆಯಿತು || ೯೬

ಗುರುವಿನ ಕರುಣೆಯ | ವರಪ್ರಸಾದವನು |
ಕರಕೊಂಡು ಕೊಂಡರು ಜನಕೆಲ್ಲ-ಸಿದ್ಧೇಶ
ಗುರುವೆ ನೀ ಗತಿ ಮತಿ ಹಿತವೆಂದು || ೯೭

ಬೆಂದ ಒಡಲಿಗೆ ಆ- | ನಂದದ ತೆರೆ ಬಂದು |
ಸಂದು ಬಿಡದೆ ಹಾಯ್ದಂತೆ ಪುರ-ಜನರಾ-
ನಂದ ತುಂದಿಲರಾಗಿಹರು || ೯೮

ಸತ್ತವರಿಗೆ ಪ್ರಾಣವ | ಇತ್ತನು ಗುರುದೇವ |
ಚಿತ್ತಶುದ್ಧಿಯ ಸದ್ಭಕ್ತರಿಗೆ-ಬೇಡಿದ್ದು
ಸತ್‌ಚಿತ್ತಾನಂದ ನೀಡುವನು || ೯೯

ಸಂಧಿ ೨೧

ಆಮುಗಿ ದೇವಯ್ಯನು । ಕಾಮಾರ್ಥಂಗಳ ಗೆದ್ದು ।
ನೇಮದಿ ಕಾಯಕ ಮಾಡೂತ-ಸೊನ್ನಲಗಿ
ಗ್ರಾಮದಿ ನೆಲಸಿದ ಮಾಶರಣ ॥ ೧

ಸತಿ ಶಾಂತಾದೇವಿಯು । ಜೊತೆಗೂಡಿ ಕಾಯಕ ।
ಹಿತದಿಂದ ಲಿಂಗಪೂಜೆಯ-ಮಾಡೂತ
ಗತಿಸುತಲಿದ್ದಳು ಕಾಲವನು ॥ ೨

ಸೊನ್ನಲಗಿಯಲಿ ದೇವ । ಚೆನ್ನಮಲ್ಲನ ಜಾತ್ರೆ ।
ಸನ್ನುತ ಸಿದ್ಧೇಶ ವರುಷದಂತೆ-ಮಾಡಿರೆ
ಅನ್ನ ಸಾಮಗ್ರಿಯ ಕೂಡಿಸುತ ॥ ೩

ಸೇವಕರು ಮನೆಮನೆ । ಧಾವಿಸಿ ಧಾನ್ಯವಕೊಟ್ಟು ।
ಅವ್ವವರೆ ನೀವು ಹಸಮಾಡಿರಿ-ಶ್ರೀಗುರು
ಸೇವೆ ಮಾಡಿರವ್ವ ಮನಮುಟ್ಟಿ ॥ ೪

ಎಲ್ಲರಂತೆ ಧಾನ್ಯವ। ಬಲ್ಲಿದ ಅಮುಗಿದೇವ-।
ನಲ್ಲಿಗೆ ತಂದಿಹರು ಸೇವಕರು-ತಾಯೆ
ಸಲ್ಲಿಸಿರಿ ಶ್ರೀ ಗುರುಸೇವೆಯನು॥ ೫

ಹೊರಗಿಂದ ಬಂದೊಡನೆ। ಶರಣ ಅಮುಗಿದೇವ।
ಸುರವೀದ ಧಾನ್ಯವೆಲ್ಲಿಯದು-ಕೇಳೂತ
ತ್ವರದಿಂದ ಒಳಗಡೆ ಬಂದನು॥ ೬

ನಾನು ಒಳಗಡೆ ಇದ್ದೆ। ಧ್ವನಿಕೇಳಿತು ಗೊತ್ತಿಲ್ಲ।
ಧಾನ್ಯ ಸಿದ್ಧರಾಮನ ಶಿಷ್ಯರು-ಇಟ್ಟದ್ದು
ನಾನರಿಯೆ ನನ್ನ ಪತಿದೇವ॥ ೭

ಭವಿಯ ಈ ಧಾನ್ಯವನು। ಸೇವಕರು ಮನೆಯಲ್ಲಿ।
ತವಕದಿ ಇಟ್ಟು ಹೋದರೇನು-ಸತಿಯೆ
ಭವಿಯ ಧಾನ್ಯವನು ಹೊರಗಿಡು॥ ೮

ಪತಿದೇವನ ಅಪ್ಪಣೆ। ಸತಿ ಶಿವಶರಣೆಯು।
ವ್ರತದಂತೆ ಪಾಲಿಸುತಿಹಳು-ಶರಣೆ
ಆತುರದಿ ಹೊರಗೆ ಬಂದಳು॥ ೯

ವೇಳೆ ಕಳೆಯದೆ ದೇವಿ। ಕಾಳುಕಡಿ ಬೇಗನೆ।
ಬಳಕೊಂಡು ತಂದಳು ಹೊರಗಡೆ-ಮನೆಯ
ಒಳಗಡೆ ಒಂದು ಕಾಳು ಬಿಡದಲೆ॥ ೧೦

ಶರಣರ ಗುಡಿಸಲ। ಹೊರಗಡೆ ಇಟ್ಟ ಕಾಳು।
ದಾರಿಯಲಿ ಜನ ನೋಡೂತ-ಬಲು
ಬೆರಗಾಗಿ ಯೋಗೀಶಗೆ ಹೇಳಿದರು॥ ೧೧

ನಾನು ಕಳುಹಿದ ಆ। ಧಾನ್ಯವನು ಹೊರಗಡೆ।
ಏನು ತಿಳಿದಿಟ್ಟಿರುವರವರಾರು-ಹೇಳಿ
ತ್ರಿನೇತ್ರದಿಂದ ಉರಿಸುವೆ॥ ೧೨

ಸಿಟ್ಟನಿಂದ ಯೋಗೀಶ। ಬಿಟ್ಟನು ಉರಿಗಂಣು।
ತಟ್ಟನೆ ಶರಣರ ಮನೆಸುತ್ತ-ಸುತ್ತೂತ
ಬಟ್ಟ ಬಯಲಿನ ಮನೆ ಸುಡಲಿಲ್ಲ॥ ೧೩

ಕಟ್ಟಿ ಬೇಗನೆ ಗಂಟು। ಬಿಟ್ಟು ಹೋಗೋಣು ಊರು।
ಸಿಟ್ಟೇನ ಯೋಗಿಯ ಊರಲ್ಲಿ-ನಮ್ಮಿರವು
ಒಟ್ಟು ಲೇಸಲ್ಲ ನಡೆ ಮುಂದೆ॥ ೧೪

ಮೂರು ಗಂಟುಗಳಾದವು। ಹೊರುವದು ಎಂತಿವು।
ಎರಡು ಇಬ್ಬರು ಹೊರುವದು-ಸಾಧ್ಯವು
ಮೂರನೆಯದು ಇಲ್ಲೆ ಉಳಿಯಲಿ॥ ೧೫

ಬಲ್ಲ ಯೋಗಿಯ ದೇವ। ಮಲ್ಲಯ್ಯ ಬರುವನು।
ಇಲ್ಲಿದ್ದ ಗಂಟು ಹೊರುವನು-ಭಕ್ತನ
ಎಲ್ಲ ತಪ್ಪು ಒಪ್ಪ ಕೊಳ್ಳುತ॥ ೧೬

ಎಲ್ಲಿ ಸಿಕ್ಕದು ಕೆಲಸ। ಇಲ್ಲಿಗೆ ಬಂದಿರುವೆ।
ಕೂಲಿ ಮಾಡಲು ನಿಮ್ಮಲ್ಲಿಗೆ-ನನಗಿಲ್ಲಿ
ಮಲ್ಲನೆಂದು ಎಲ್ಲರು ಕರೆವರು॥ ೧೭

ಹೆಚ್ಚಾಗಿ ಉಳಿದದ್ದು। ಎಚ್ಚರದಿ ಹೊರಬಾರೊ।
ನಿಚ್ಚ ಶರಣ ಅಮುಗಿದೇವನ-ನುಡಿಕೇಳಿ
ಅಚ್ಚರಿಗೊಂಡಳು ಶಿವಶರಣೆ॥ ೧೮

ಬೀಸುವ ಕಲ್ಲಿನಗಂಟು। ನಸುನಕ್ಕು ಎತ್ತಿದನು।
ಅಸಮ ಶರಣರಗೂಡ ಹೋದನು-ಮುಂದಿನ
ವಾಸಿಪ ಗ್ರಾಮದಿ ಇಳುವಿದನು॥ ೧೯

ಕೂಲಿ ತಕ್ಕೊಂಡು ಬೇಗ। ಮಲ್ಲಯ್ಯ ತೆರಳಿದನು।
ಬಲ್ಲಹ ಯೋಗೀಶ ಅಭಿಷೇಕ-ಮಾಡುತಿರೆ
ಮೆಲ್ಲನೆ ತಲೆನೋವು ಎಂದನು॥ ೨೦

ಕನಿಕರದಿ ನುಡಿದ। ಧ್ವನಿ ಕೇಳಿ ಸಿದ್ಧರಾಮ।
ಏನಾಯಿತು ದೇವ ಶಿಕ್ಕೆ-ನನ ಕೈಯ
ನಿನ ಶಿರಕೆ ಮುಟ್ಟಲು ನೆರಳುವೆ॥ ೨೧

ಏನು ಹೇಳಲಿ ಸಿದ್ಧ। ನಿನ್ನ ತಪ್ಪಿಗಾಗಿ ಕೂಲಿ।
ಮೌನದಿ ನಾನು ಮಾಡಿದೆನು-ಕಂಪನೆ
ನಿನ್ನಿಂದ ಅಧಿಕರು ಶಿವಶರಣರು॥ ೨೨

ಯಾವ ತಪ್ಪು ನನ್ನಿಂದ। ದೇವನೆ ಘಟಿಸಿಲ್ಲ।
ನೋವಾಯಿತೆ ಹೇಳು ಬೇಗನೆ-ಓ ತಂದೆ
ಶಿವಶರಣರ ವಾಸ ಎಲ್ಲಿತ್ತು॥ ೧೩

ಸೊನ್ನಲಿಗೆಯಲ್ಲಿವರ। ಸನ್ನುತ ವಾಸವಿತ್ತು।
ನೀನು ಉರಿಗಂಣು ಬಿಟ್ಟಾಗ-ಸತಿ ಪತಿ
ನಿನ್ನೂರು ಬಿಟ್ಟು ಹೊರಟರು॥ ೧೪

ಬೀಸುನಕಲ್ಲಿನ ಗಂಟು। ಅಸಮ ಶಿವಶರಣರದು।
ಕಸಿನು ನಾನೆ ಹೊತ್ತು ಹೋದೆನು-ಅವರು
ವಾಸಿಸ ಹೋದ ಹಳ್ಳಿಗೆ॥ ೧೫

ತಪ್ಪಾಯಿತು ಕ್ಷಮೆದೋರು। ಅಪ್ಪ ಮಲ್ಲಿನಾಥನೆ।
ಕೋಪೆಂಬ ಪಾಪ ತಲೆಗೇರಿ-ನನ್ನಿಂದ
ವಿಪರೀತ ಇಂದು ಘಟಿಸೀತು॥ ೧೬

ನಿಲ್ಲಲಾರೆನು ದೇವ। ಬಲ್ಲ ಶರಣರಡಿಗೆ।
ಸಲ್ಲಿಸುತ ಹೋಗುವೆ ವಂದನೆ-ಓ ತಂದೆ
ಇಲ್ಲಿ ನೆಲಸಲು ಕರೆತರುವೆ॥ ೧೭

ಸೇವಿಸದೆ ಪ್ರಸಾದ। ಧಾವಿಸುತ ಸಿದ್ಧರಾಮ।
ಶಿವಶರಣರಿದ್ದ ಠಾವಿಗೆ-ವಂದಿಸುತ
ಭಾವ ಭಕ್ತಿಯಲಿ ಬಂದನು॥ ೧೮

ತಪ್ಪು ಎನ್ನಿಂದಾಯ್ತು। ಅಪ್ಪಿಕೊಂಡು ಮನ್ನಿಸಿ।
ಕೋಪದ ಕೈಯಲಿ ಬುದ್ಧಿ ನೀಡಿ-ಕೆಟ್ಟೆನು
ಅಪ್ಪ ಶರಣರ ನಡೆಯರಿ॥ ೧೯

ಮುಂದಿಟ್ಟ ಹೆಜ್ಜೆಯನು। ಹಿಂದಿಡಲಾರೆವು।
ಬಂದ ದಾರಿಲಿ ತಿರುಗಿ ಹೋಗು-ನಾವು
ಇಂದಿಲ್ಲಿಯೆ ಲಿಂಗಪೂಜೆ ಗೈಯುವೆವು॥ ೨೦

ಸಂಗರಹಿತ ಮಹಾ। ಮಂಗಳ ಗುರುವಿನ।
ಪಿಂಗದಲೆ ಕೀರುತಿ ಕೇಳುತ-ಬಂದರು
ಜಂಗಮ ಸತಿಪತಿಗಳಿಬ್ಬರು॥ ೨೧

ಜೋಡಾಗಿ ಸತಿಪತಿ | ಹಾಡಿದರು ಬಲು ಚೆಂದ |
ಜೋಡ ಕಿನ್ನರಿಯು ಮೃದಂಗ-ಶಿವಭಜನೆ
ಹಾಡಿದರೆ ಕಿವಿಗೆ ಬಲು ಇಂಪು || ೩೨

ಭಜನೆಯ ಪದ

ಅಯ್ಯಯ್ಯೋ ಶಿವಶಿವಾ ನಿನ್ನ ಮೈಯೆಲ್ಲ ಬಿಳಿ ಬೂದಿ
ಕೈಯಾಗ ಕಪಾಲ ಹಿಡಿದೆಲ್ಲೋ ||ಪ||

ಏರಲು ಮುದಿ ಎತ್ತು | ಇರಲು ಹಾಳ ಬೆಟ್ಟ |
ಕೊರದ ಚಂದಿರ ಶಿರದ ಮೇಲೆ || ೧

ಜಡೆಯುಲಿ ಶ್ರೀ ಗಂಗೆ | ತೊಡೆ ಮೇಲೆ ಶ್ರೀ ಗೌರಿ |
ಮಡಿ ಮಾಡಿ ಉಟ್ಟೆ ಗಜಚರ್ಮ || ೨

ಕೊರಳಲಿ ರುದ್ರಾಕ್ಷಿಯ | ಸರ ನೀ ಧರಿಸೀದಿ |
ಗರಳ ಕೊರಳ ಅಲಂಕಾರ || ೩

ವಿಷವನು ಕುಡಿದು ನೀ | ಪೋಷಿಸಿದಿ ಜಗವೆಲ್ಲ |
ವಿಷಕಂಠನಾಗಿ ಸುಖಿಸೀದಿ || ೪

ಹೊಳೆವ ಕೆಂಜೆಡೆಯುವನೆ | ಎಳೆಮೊಗದ ಕಳೆಯುವನೆ |
ಸುಳಿಪಲ್ಲ ತ್ರಿಶೂಲ ಹಿಡಿದವನೆ || ೫

ಮೂರು ಕಣ್ಣುಳ್ಳವನೆ | ಮೂರು ಪುರವ ಸುಟ್ಟ |
ಮೀರಿ ನಿಂತಿರುವಿ ಸಕಲಕ್ಕೆ || ೬

ಹೊಳೆಯುವ ನಿನ್ನ ಜಡೆಯು | ಇಳಿದಾವ ಇಳೆಮೇಲೆ |
ಸೆಳೆದಾವ ಶರಣರ ಕಣ್ ಮನ || ೭

ಸಣ್ಣ ತೊತ್ತಗೆಲಸ | ಮಣ್ಣು ಹೊರುವ ಕೆಲಸ |
ಬಾಣನ ಬಾಗಿಲ ಕಾಯ್ದಲ್ಲೊ || ೮

ವಿಶ್ವಾತ್ಮ ಲಿಂಗವನು | ಕೊಟ್ಟು ನೀ ಕೊರಗಿಲ್ಲ |
ಸನ್ನುತ ಭಕ್ತ ರಾವಣನೀಗೆ || ೯

ಭೋಳಾ ಸಾಂಬ ನಿನ್ನ | ಗೋಳ ಅಷ್ಟಿಷ್ಟಲ್ಲ |
ಕೇಳಿದರೆ ಕೊಟ್ಟೆ ಮಡದಿಯ || ೧೦

ಬೇಡಿದ್ದು ಕೊಟ್ಟು ನೀ | ಬರಿದಾಗಿ ನಿಂತಿರುವಿ |
ಕಾಡಿದರು ನೋಡಿ ನಸುನಗುತ || ೧೧

ಬೇಡದಲೆ ಕೊಟ್ಟು ನೀ | ಬೇಕಾಗಿ ಒಯ್ದರೆ |
ಕಿಡಿಗೇಡಿ ಎಂದು ಬಯ್ಯುವರು || ೧೨

ಈರೇಳು ಲೋಕದ | ಹಿರಿತನ ಹೊತ್ತುಕೊಂಡಿ |
ಗಿರಿಏರಿ ನಿಂತಿ ಬರಿದಾಗಿ || ೧೪

ಸಿದ್ಧರಾಮನಿಗಾಗಿ | ಬಂನೀ ಸೊನ್ನಲಗಿಗೆ |
ನೊಂದ ಕೂಸಿಗೆ ಸುಖಿಸೀದಿ || ೧೫

★

ಯೋಗಿರಾಜನ ಮುಂದೆ | ಹೋಗಿ ಹಾಡಲು ಆಗ |
ತೂಗಿದನು ತಲೆಯ ಸಿದ್ಧರಾಜ-ಜನವೆಲ್ಲ
ಹೊಗಳಿತು ಮೆಚ್ಚಿ ಮನವಾರೆ || ೨೩

ಯೋಗಿಯೆ ನಿನ್ನಡಿಗೆ | ಬಾಗಿ ಬಂದಿರುವೆವು |
ಬೇಗ ತಾಣದೋರು ಇರಲಿಕ್ಕೆ-ನಾವಿನ್ನು
ಹೋಗಲಾರೆವು ಹಿಂದಿರುಗಿ || ೨೪

ಭಜನೆಯ ಮಾಡೂತ | ನಿಜತತ್ವ ಅರುಹಿರಿ |
ಸುಜನರೆ ನಿಮಗೆ ಎಲ್ಲೇಶನ-ಹತ್ತಿರ
ಸೃಜಿಸಿ ಕೊಡುವೆನು ಮಠವನು || ೨೫

ಸತಿಪತಿಗಳಿಬ್ಬರು | ಅತಿ ಬಕುತಿಯಿಂದಲಿ |
ನುತಿಸೂತ ಪಾದವ ಹಿಡಿದರು–ಶಿವಸಿದ್ಧ
ಯತಿರಾಜನೆ ಶರಣು ಶರಣು || ೨೬

ಜೋಡಾಗಿ ಸತಿಪತಿಗಳು | ಹಾಡೂವ ಸೇವೆಯನು |
ಒಡೆಯನಿಗರ್ಪಿಸಿ ಇರುತಿರೆ-ದಂಪತಿಯ
ಈಡೇರಿತು ಮನದ ಬಯಕೆಯು || ೨೭

ಮಕ್ಕಳ್ಳಿಲ್ಲಂತ ಬಲು | ಜಕ್ಕನೆ ಜರಿವಳು |
ಇಕ್ಕೀದ ತೊಡಕು ಬಿಡಿಸೆಂದು–ದೇವಗೆ
ಕಕ್ಕುಲಾತಿಲಿ ಬೇಡಿಕೊಳ್ಳುವಳು || ೨೮

ಮಾಸ ತುಂಬಿದವಾಗ | ಹಸುಮಗ ಜನಿಸಿದ |
ಹೊಸ ಭಾಗ್ಯ ಬಾಗಿಲಿಗೆ ಬಂತೆಂದು–ಇಬ್ಬರು
ಲೇಸು ದಿನವೆಂದು ಹರಸಿದರು || ೨೯

ನಾಮ ಕರಣದ ದಿನ। ನೇಮದಂತೆ ಶಿಶುವಿಗೆ।
ಪ್ರೇಮದಿ ಎಲ್ಲೇಶ್ವರನೆಂದು–ಹೆಸರಿಡಲು
ಅಮಮ ಬಲು ಸಂತಸ॥ ೪೦

ಎಲ್ಲೇಶನ ಪಾಲನೆ। ಲಾಲನೆ ಪೋಷಣೆಯ।
ಎಲ್ಲ ಮರೆತು ತಾಯಿ ಮಾಡುವಳು–ಪ್ರೀತಿಯ
ಬಾಲಕನು ಬೆಳೆಯ ತೊಡಗಿದ॥ ೪೧

ಕಳೆದಂತೆ ದಿನಗಳು। ತಿಳವಳಿಕೆ ಬಂದೀತು।
ಎಳೆಯನು ಯುವಕನಾಗೂತ–ಕಂದನ
ಕಳೆ ಮುಖದಿ ಮೂಡಿತ್ತು ಆಗ॥ ೪೨

ಮಗನ ಮದುವೆ ಇನ್ನು। ಸಾಗಿಸಬೇಕೆನುತ।
ಹೋಗಿ ನೋಡಿದರು ಕನ್ಯೆಯನು–ಬಾಲನ
ಸಾಗಲಿ ಸಂಸಾರಲತೆ ಎಂದು॥ ೪೩

ಮಗನ ಸುಖದಿ ತನ್ನ। ಮಗನ ದುಃಖದಿ ಪೂರ್ಣ।
ಭಾಗಿಯಾಗಿ ತಾಯಿ ಇರುವಾಗ–ಒಂದಿನ
ರೋಗಪೀಡಿತನಾದ ಎಲ್ಲೇಶನು॥ ೪೪

ಜ್ವರವೇರಿದಂತೆಲ್ಲ। ನೀರುನೀರು ಎಂದೆನುತ।
ಕೊರಗಿ ಕೇಳುವನು ಎಲ್ಲೇಶ–ಕೇಳುವ
ಸುರಿದವು ತಾಯಿಯ ಕಂಣೀರು॥ ೪೫

ಬರಿ ನೀರು ಎಷ್ಟಂತ। ಕಂದನಿಗೆ ಕೊಡಲೆಪ್ಪ।
ಉರಿವುದು ಎನ್ನೆದೆ ಹೊಟ್ಟೆ-ಮಗನೆ
ಸೆರಗೀಲಿ ಗಾಳಿ ಬೀಸಲೇನೊ॥ ೪೬

ಗಾಳಿಯಿಂದ ನನಗೆ। ಎಳ್ಳಷ್ಟು ಹಿತವಿಲ್ಲ।
ಕೊಳ್ಳು ತಾಯೆನಗೆ ತಂಣೀರು-ನನ್ನಪ್ಪ
ಎಳೆಯುವದು ನಾಲಿಗೆ ಒಳಗಡೆ॥ ೪೭

ಸೋಂಕಿದರೆ ಮೈಯೆಲ್ಲ। ಬೆಂಕಿ ಮುಟ್ಟಿದಂಗ।
ಮಂಕಾಗಿದೆ ಎನ್ನ ಬುದ್ಧಿಯು-ಎನಕೂಸೆ
ಸಂಕಟ ಪಡಬೇಡ ತಾಳುತಾಳು॥ ೪೮

ವೇಳೆ ಕಳೆಯಲು ಬೇಡ। ಏಳು ತಾಯೆ ತಾ ನೀರು।
ಹೇಳಲು ಬಾಯಿ ಬಾರದು-ಎಲ್ಲೇಶನು
ತಳಮಳಿಸುತ್ತ ನುಡಿದನು॥ ೪೯

ಒಳಗಡೆ ಹೋಗಿ ಬೇಗ। ತಿಳಿ ಮಜ್ಜಿಗೆಯ ಮಾಡಿ।
ತಳಮಳಿಸುವ ಮಗನಿಗೆ-ಕುಡಿಸಲು
ಅಳಲುತ್ತ ಬಳಲುತ್ತ ಬಂದಳು॥ ೫೦

ಗಾಳಿ ಹೊರಟ್ಹೊಗಿತ್ತು। ತಳಮಳ ನಿಂತಿತ್ತು।
ಗಳಿಗಳಿಗಿಗೆ ನೀರೆಂಬ ಸೊಲ್ಲು-ಅಡಗಿತ್ತು
ಅಳಿದು ಹೋಗಿತ್ತು ಜೀವ ಆ ಚಣ॥ ೫೧

ಏಳೇಳು ನನ್ನ ಚೆನ್ನ। ತಿಳಿ ಮಜ್ಜಿಗೆ ತಂದೀದ।
ಗಳಗಳನೆ ಕುಡಿದು ತಂಣೀರು-ಹೊಟ್ಟೆ ಕ-
ರಳು ಉಬ್ಯಾವ ಹಸಮಗನೆ॥ ೫೨

ಶಾಂತವಾಗಿದೆ ದಾಹ। ಸಂತಸದ ಮಾತಿಲ್ಲ।
ಅಂತರಾತ್ಮ ಅಲ್ಲಿ ಇರಲಿಲ್ಲ-ತಾಯಿ
ಹಂತೇಲಿ ಹೋಗಿ ನೋಡಿದಳು॥ ೫೩

ಬೆಳಕು ಕಂಡ ಈ ಜೀವ। ಕಾಳ ಕತ್ತಲೆಯೊಳಗೆ।
ಗೋಳಿಡಲು ಬಿಟ್ಟು ಎಲ್ಹೋದಿ-ಎನ ಚಿನ್ನ
ಇಳೆಯೋಳು ನಾನು ಇರಲ್ಹೆಂಗ॥ ೫೪

ಘಾತವಾಯಿತು ಕೂಸೆ। ಪಾತಕಿ ಇರಲ್ಹೆಂಗ।
ಮಾತಾಡಿಸಿ ಮೋರೆ ನೋಡಿದರೆ-ಕೂಸೆ
ಆತುಮ ಹರುಷಗೊಳ್ಳುವದು॥ ೫೫

ಬಂದ್ಯಾಕೆ ಜನಸಿ ನೀ। ಹಿಂತಿರುಗಿ ಎಲ್ಹೋದಿ।
ಚಂದಲ್ಲ ನೀನು ಮಾತಾಡೊ-ಮುದ್ದು ನನ್ನ
ಕಂದನೆ ನಾನು ಬದುಕಲಾರೆ॥ ೫೬

ಅತ್ತಿತ್ತ ಸುಳಿದರೆ। ಮುತ್ತು ಮಾಣಿಕ ಬೆಳಕು।
ಸುತ್ತಿಸುಳಿದ್ಹಂಗ ಹೊಳೆವದು-ಮನಿಯಾನ
ಕತ್ತಲೆ ಹರಿದು ಬೆಳಕಾಗಿ॥ ೫೭

ಬಂಜೆತನದ ನನ್ನ । ಸಂಜ ಹರಿದು ಹೋಗಿತ್ತು ।
ಸಂಜೆಳಿದು ಬೆಳಕವಾಗಿತ್ತು–ಕಂಣ್ಮುಂದೆ
ಮಂಜು ಮುಸುಕಿ ಮತ್ತೆ ಕಾಣದು ॥ ೫೮

ಕರೆಯಲಿನ್ನಾರಿಗೆ । ಎರೆಯಲಿ ನಾನ್ಯಾರಿಗೆ ।
ಒರೆಯಲಿನ್ಯಾರಿಗೆ ಮೊರೆಯಲಿ–ಪ್ರೀತಿಯ
ಕರಳು ಕರಕರನೆ ಕೊಯ್ದಿಲ್ಲೊ ॥ ೫೯

ಮಲಗುವದ್ಯಾಕೊ ನೀ । ಹಲಬುವ ತಾಯಿಃಗೆ ।
ಒಲವಿನ ಮಾತ್ಹೇಳಿ ಸುಮ್ಮನೆ–ಇರಿಸೊ
ಸಲುವೀದ ರಿಣವ ತೀರಿಸೊ ॥ ೬೦

ರಾಜಹಂಸನೆ ಬಾರೊ । ಸೋಜಿಗದ ಗಿಣಿ ಬಾರೊ ।
ಸಜೀವ ಮಾಡುವ ಸಂಜೀವನಿ–ನೀಬಾರೊ
ಭಜನೆಯ ಪದಗಳ ಕೇಳಲು ಬಾ ॥ ೬೧

ಚಿಕ್ಕ ಚಲುವಾದ ಎನ್ನ । ಹಕ್ಕಿ ನೀ ಇರುತಿದ್ದಿ ।
ರೆಕ್ಕೆ ಬಾರದೆ ದೂರದೂರ–ಹಾರಿದಿ
ಸಿಕ್ಕದೆ ತಾಯಿಯ ಕರುಳೀಗೆ ॥ ೬೨

ಶೋಕ ತಾಪವು ತಲೆಗೆ । ಏಕ ಕಾಲಕೆ ಏರಿ ।
ತಾಕಿದಳು ತಲೆ ಭೂಮಿಗೆ–ಕೂಗುವಳು
ಜ್ವಾಕಿ ಮಾಡಿದ ಬಾಲ ನೀನೆಲ್ಲಿ ॥ ೬೩

ಎದೆಎದೆ ಬಡಕೊಂಡು । ಬಿದ್ದಳು ಭೂಮಿಮೇಲೆ ।
ಒದ್ದಾಡುವದು ಕಂಡು ಜನರಾಗ–ಎಂದರು
ಎದ್ದೇಳು ತಾಯಿ ಸುಮ್ಮನಿರು ॥ ೬೪

ಅನುರಾಗದಿಂದ ನೀನು । ಅನುಭಾವಪದ ಹಾಡಿ ।
ಗ್ಯಾನ ತಿಳಿಸುವ ತಾಯವ್ವ–ಅಸ್ಥಿರ
ಮಾನವ ಜನುಮವಿದೆಂದು ॥ ೬೫

ಹಾಡುವದೊಂದು ನೀ । ಮಾಡುವದೊಂದ್ಯಾಕ ।
ಬೇಡಿದ್ದು ಕೊಟ್ಟು ಬೇಕಾಗಿ–ಒಯ್ದರ
ಕಿಡಿಗೇಡಿ ಅನ್ನುವಿ ತಾಯವ್ವ ॥ ೬೬

ಉರಿವಾಗ ಎದೆ ಹೊಟ್ಟಿ । ತೋರ ಮಾತಿನಮಾಲೆ ।
ಯಾರೀಗ ಬೇಕ ನೀವು ನಿಮ್ಮ-ಮನೀಗೆ
ತಿರುಗಿರಿ ಅಕ್ಕ ತಂಗಿಯರೆ ॥ ೬೭

ಸೃಷ್ಟಿಯೊಳಗೆ ಬಲು । ಶ್ರೇಷ್ಠ ಎಂದೆನಿಸುವ ।
ಇಷ್ಟಾರ್ಥ ಸಿದ್ಧಿ ನೀಡುವ-ಸದ್ಗುರು
ದೃಷ್ಟಿಯ ಎದರಿದ್ದು ಮರತೆಲ್ಲ ॥ ೬೮

ಮಾಯದ ಮಬ್ಬಾಗ । ತಾಯಿಯು ಹರಿದಳು ।
ರಾಯ ಸಿದ್ಧರಾಮ ಗತಿ ಎಂದು-ಶೋಕದಿ
ತಾಯಿ ಹೊರಟಳು ಎಲ್ಲೇಶನ ॥ ೬೯

ದಿನದಂತೆ ಸಿದ್ಧೇಶ । ಖನನ ಮಾಡುತ ಕೆರೆಯ ।
ಚೆನ್ನಮಲ್ಲೇಶನ ನೆನೆಯುತ-ಭಕ್ತರ
ಮನದಾಶೆ ಪೂರ್ಣ ಮಾಡುವ ॥ ೭೦

ಜಂಗಮನ ಸತಿಯಳು । ಸಂಗರಹಿತನ ಅಡಿಯ ।
ಅಂಗಲಾಚಿ ಅಳುತ ಹಿಡಿದಳು-ತಂದೆಯೆ
ಹ್ಯಾಂಗಿಡಲಿ ಎನ್ನ ಪ್ರಾಣವನು ॥ ೭೧

ಏಳೇಳು ತಾಯೆ ಹೇಳು । ಹೇಳೆನಗೆ ವೃತ್ತಾಂತ ।
ಕಳವಳಿಸಬೇಡ ತಾಯವ್ವ-ನಾ ನಿನ್ನ
ಅಳಿಲು ಸೇವೆಯ ಮಾಡುವೆನು ॥ ೭೨

ಕಳಕೊಂಡು ಬಂದಿರುವೆ । ಎಳೆಯ ಹಸುಳೆಗೆ ।
ಸುಳಿಯುವ ಉಸಿರು ಬರಿದಾಯ್ತು-ಗುರುವೆ
ಇಳೆಯೊಳು ಪ್ರಾಣ ಇಡಲಾರೆ ॥ ೭೩

ಭವಕೆ ಬಂದಿರುವ । ಜೀವಿಗಳು ಎಲ್ಲವವು ।
ದೇವನ ಅಡಿಯ ಸೇರುವವು-ಈ ಮಾತು
ಅವ್ವ ನೀನರಿಯದಿರಲಾರೆ ॥ ೭೪

ಸೈರಿಸಲಾರೆ ನಾನು । ಗುರುರಾಯ ಈ ದುಃಖ ।
ಚರಣಕ್ಕೆ ಎರಗಿ ಬೇಡುವೆನು-ಕೂಸಿಗೆ
ಅರಗಳಿಗೆ ಬಿಟ್ಟು ಇರಲಾರೆ ॥ ೭೫

ಸುಟ್ಟ ಬೆಕ್ಕಿಗೆ ನೀನು । ಕೊಟ್ಟಿರುವಿ ಪ್ರಾಣವನು ।
ಹೊಟ್ಟೆ ಹೊಕ್ಕು ನಾನು ಬೇಡುವೆ-ಕಂದನು
ಚಟ್ಟನೆ ಏಳಲು ಕರುಣಿಸು ॥ ೭೬

ಕಾಳಸರ್ಪವು ಕಡೆದು । ಕಾಳವ್ವೆಯು ಮಡಿದಾಗ ।
ಕಳುಹಿಸಿ ಕರುಣ ಪ್ರಸಾದವ-ಇತ್ತೀದಿ
ಕಳಕೊಂಡ ಪ್ರಾಣ ಮತ್ತೊಮ್ಮೆ ॥ ೭೭

ಸತ್ತಿರುವ ಏಸೊಂದು । ಎತ್ತುಗಳಿಗೆ ಅಸುವ ।
ಇತ್ತು ಸಲುಹಿದಿ ಶ್ರೀ ಗುರುವೆ-ನಿನ್ನ ಈ
ತೊತ್ತಿನ ಕೂಸಿಗೆ ಸಲುವಯ್ಯ ॥ ೭೮

ಅವರವರ ಭಾವಕ್ಕೆ । ಅವರವರ ಭಕ್ತಿಗೆ ।
ದೇವನೊಲಿವುದು ನೀನರಿಯೆ-ತಾಯಿ
ಭಾವ ಪಕ್ವಾಗ ಬೇಕಮ್ಮ ॥ ೭೯

ತಂದ ಮಜ್ಜಿಗೆಯವನ । ಬೆಂದೊಡಲಕುಣಿಸದೆ ।
ನೊಂದುಕೊಂಡಿರುವೆ ದೇವನೆ-ಅಯ್ಯಯ್ಯೊ
ತಂದೆ ಕುಡಿಸಯ್ಯ ಮಜ್ಜಿಗೆಯ ॥ ೮೦

ತನುಜನಿಗೆ ಮಜ್ಜಿಗೆ । ಚನಮಲ್ಲ ಕುಡಿಸುವ ।
ಮನೆಗ್ಹೋಗಿ ತಾರೆ ತಾಯವ್ವ-ಸೇವಕರು
ಅನುಜನಿಗೆ ಇಲ್ಲಿ ತರುವರು ॥ ೮೧

ಜಾತರಿಗೆ ಬಂದ ಜನ । ಆತುರದಿ ಕೂಡಿತ್ತು ।
ಆತನ ಮಾತು ಅರಿಯೆವು-ಯೋಗಿಯು
ಜಿತಕಾಮಕಲ್ಪದ್ರುಮನು ॥ ೮೨

ಪಾತ್ರೆಯ ತಾ ತರಲು । ಯಾತ್ರಿಕರ ಸಂಗಡ ।
ಸ್ತೋತ್ರ ಮಾಡುತ ಹೊರಟಾಳ-ಜೀವನ
ಸೂತ್ರಧಾರನೆ ಸಲುವೆಂದು ॥ ೮೩

ಜಾತರಿ ಬಲು ಚಂದ । ಉತ್ತಮ ಸಂಕ್ರಾಂತಿ ।
ಅತಿ ದೂರದಿಂದ ಜನವೆಲ್ಲ-ಬಂದಾಗ
ಮತಿವಂತ ಮಗನೆ ಮಲಗೀದಿ ॥ ೮೪

ಹಟಮಾಡಿ ನನ ಮ್ಯಾಲ। ಸೆಟಗೊಂಡು ಹೋದಾಗ।
ತಟ್ಟನೆ ನಿನಗೆ ಕರೆತಂದು-ಹಾಲೀನ
ಬಟ್ಟಲ ಕುಡಿಯಲು ಕೊಡತಿದ್ದೆ॥ ೮೫

ಸೊಸೆ ತಂದು ಈ ಮನೆಗೆ। ಹೊಸ ಬಾಳು ನೋಡುವ।
ಆಶೆ ಬರಿದಾಯ್ತು ಎನಕೂಸೆ-ಈ ಬಾಳು
ಹೇಸಿಗೊಂಡಿತ್ತು ನನ ಗಿಣಿಯೆ॥ ೮೬

ಕೆಮ್ಮನೆ ಕೆಟ್ಟೆನೊ। ನಮ್ಮ ಮನೆ ಹಾಳಾಯ್ತು।
ಮೊಮ್ಮಕ್ಕಳ ಕಂಡು ಸಂತಸದಿ-ದಿನಗಳ
ನೆಮ್ಮದಿಯಿಂದ ಕಳೆಯಲಿಲ್ಲ॥ ೮೭

ಮುಪ್ಪುತನ ಬಂದಾಗ। ಅಪ್ಪ ಅವ್ವನಿಗೆ ನೀನು।
ಜಪ್ಪಸಿ ಜೋಪಾನ ಮಾಡದೆ-ಶೋಕದ
ಅಪ್ಪುವಿನೊಳು ನೂಕಿರುವಿ॥ ೮೮

ಕಂಣೀರು ಕರೆದರೆ। ಸಂಣ ಮುಖವ ಮಾಡಿ।
ಉಂಣೇಳು ಎಂದು ಅಳುತಿದ್ದ-ಕೂಸೆ
ಕಂಣು ಮುಚ್ಚಿ ಸುಮ್ಮನಿರುವೆಲ್ಲೊ॥ ೮೯

ಸೇವಕರು ಹೋದರು। ಶವ ವಿಮಾನದೊಳಿಟ್ಟು।
ಧಾವಿಸಿ ತಂದರು ಪವಾಡ-ನೋಡಲು
ಶಿವಸಿದ್ಧನು ದೇವನ ಅವತಾರ॥ ೯೦

ಮಲಗಿರುವ ಕಂದನೆ। ಚಲುವಿನ ಚಂದಿರನೆ।
ಉಲಿದಳು ತಾಯಿ ಬಳಿ ಬಂದು-ಏಳಯ್ಯ
ಒಲವೀನ ಎನ್ನ ಖಣಿ ಏಳು॥ ೯೧

ವಿಮಾನ ಬಳಿ ಬಂದು। ಸ್ವಾಮಿ ಕರೆದರು ಆಗ।
ಕೋಮಲಾಂಗನೆ ಏಳೇಳು-ನಿನ ದಾಹ
ಶಮನವಾಗಲಿ ಕುಡಿ ಮಜ್ಜಿಗೆ॥ ೯೨

ನಿದ್ದೆಗಣ್ಣಿನಿಂದ। ಎದ್ದಂತೆ ಕಂಣ್ ತೆರೆದು।
ಮುದ್ದು ಎಲ್ಲೇಶನು ನೋಡೂತ-ಗುರುವಿನ
ಸಿದ್ಧ ಹಸ್ತದ ಪ್ರಸಾದವ॥ ೯೩

ಕೈಚಾಚಿ ತಕ್ಕೊಂಡು । ಶುಚಿಯಾದ ಮಜ್ಜಿಗೆಯ ।
ಹಚ್ಚಿದನು ಪಾತ್ರೆ ಬಾಯಿಗೆ-ಕುಡಿದು
ಮುಚ್ಚಿದನು ತೆರೆಯದ ಕಣ್ಗಳ ॥ ೯೪

ತಾಯಿ ನೋಡುತ ದುಃಖದಿ । ಬಾಯಿ ಬಿಡುವಳಾಗ ।
ಸಾಯುವನೆಂದು ಅನಿಸಿಲ್ಲ-ಮಹಾದೇವ
ಮಾಯದ ಮುಸುಕು ಗವಿದೀತು ॥ ೯೫

ಕೊಡು ಎನ್ನ ಕಂದನಿಗೆ । ಬೇಡುವೆ ಸೆರಗೊಡ್ಡಿ ।
ಮಾಡಬೇಡನ್ಯಾಯ ಹೇ ದೇವ-ಎನಮೇಲೆ
ಕಡುಕೋಪ ಯ್ಯಾಕೆ ಹೇಳಯ್ಯ ॥ ೯೬

ಭಕ್ತಿ ಇಲ್ಲದ ಬಡವಿ । ಯುಕ್ತಿ ಇಲ್ಲದೆ ಬಳಲಿ ವಿ- ।
ರಕ್ತ ನಿನ್ನಡಿಗೆ ಬಂದಿರುವೆ-ನೀ ಸರ್ವ-
ಶಕ್ತನಾಗಿರುವಿ ಎನ ತಂದೆ ॥ ೯೭

ಭಾವ ಇದ್ದಂತೆ ನಿಜ । ದೇವ ಕೊಡುವನವ್ವ ।
ಯಾವದಕು ನಾನು ಶಕ್ತನಲ್ಲ-ಮಲ್ಲೇಶ
ದೇವ ಮಾಡುವನು ಎಲ್ಲವನು ॥ ೯೮

ನಾಡಿನ ಜನವೆಲ್ಲ । ಪಾಡುತ ಮಹಾ ಮಹಿಮೆ ।
ರೂಢಿಯೊಳಗೆ ಜನಿಸಿ ಸಿದ್ಧನು-ನೀಡುವನು
ಬೇಡಿದ ಇಷ್ಟಾರ್ಥ ಎಲ್ಲವನು ॥ ೯೯

ಸಂಧಿ ೨೨

ಗುರುತಂದೆ ಸಿದ್ಧರಾಮ । ವರವಾಗಲು ಕೊರತಿಲ್ಲ ।
ಊರೂರ ಕೀರೂತಿ ಹಬ್ಬಿತು-ಕೇಳೂತ
ದರುಶನಕೆ ಜನ ಬರುತಿತ್ತು ॥ ೧

ಭುವಿಜನಗಳಿಗೆಲ್ಲ । ಅವಿಮುಕ್ತಕ್ಷೇತ್ರವದು ।
ಶಿವಸಿದ್ಧರಾಮನ ಸೊನ್ನಲಿಗಿ-ದಿಕ್ಕೆಲ್ಲ
ಶಿವಮಹಿಮೆ ಸಾರೂವ ಮಾಪುರವು ॥ ೨

ಸಿದ್ಧೇಶನ ಕರುಣದಿ । ಗೆದೆಯಲು ರೋಗರುಜೆ ।
ಸಾದರ ಭಕ್ತಿಯ ಜನವೆಲ್ಲ-ಬರುತಿರೆ
ಮೋದದಿ ಸಿದ್ಧರಾಮ ಕರುಣಿಸೆ ॥ ೩

ಕಾಯಕಲ್ಪತರುವೆ । ಮಾಯಾಮರ್ದನ ಗುರುವೆ ।
ಕಾಯೊ ಪಾಮರರ ಕೃಪಾಳು-ದೇವನೆ
ಜಯ ಜಯ ಶುಭ ಮಂಗಲ ॥ ೪

ವೆಸೆ ದಿಕ್ಕು ಕೀರೂತಿ । ಪಸರಿಸಿ ಜನವೆಲ್ಲ ।
ಅಸಮಾಕ್ಷನವತಾರಿಯು ಊರಿಗೆ-ಬಂದರು
ಏಸೇಸೊ ಮನದಾಸೆ ಕಟಕೊಂಡು ॥ ೫

ಪ್ರೇತಗಳಿಗೆ ಹೊತ್ತು । ಆತುರದಿ ತರುವರು ।
ಸತ್ತವರಿಗೆ ಪ್ರಾಣ ನೀಡೆಂದು-ಮಠದ
ಸುತ್ತಲು ತಂದು ಹಾಕುವರು ॥ ೬

ಅಳಿಯನು ಸತ್ತರೆ । ಉಳಿಯಳು ನನ ಮಗಳು ।
ಎಳೆಯ ಜೀವ ಈ ಭುವಿಯೊಳು-ಶಿವಸಿದ್ಧ
ಕಳುಹಿಸು ಪ್ರಾಣವಿತ್ತು ನೀನು ॥ ೭

ಗಂಡನ ಕಳಕೊಂಡು । ರಂಡಿತನದ ಬಾಳು ।
ಕೆಂಡಿನ ಮೇಲೆ ಕಾಲು ಇಟ್ಟಂತೆ-ಯೋಗೀಶ
ಗಂಡನ ಹಿಂದೆ ಬದುಕುವದೆ ॥ ೮

ಅಂಣನು ಇಲ್ಲದಿರೆ । ಕಂಣುಗಳು ಕಳೆದಂತೆ ।
ಬಂಣಿಸಲಾರೆನು ಬವಣೆಯ-ಸಿದ್ಧೇಶ
ಅಂಣನ ಪ್ರಾಣ ಬದುಕಿಸು ॥ ೯

ತಂದೆಯ ಕಳಕೊಂಡರೆ । ಹಿಂದೆ ಯಾರ ಆಧಾರ ।
ಮಂದಿ ಮಕ್ಕಳೊಲವು ನಮಗಿಲ್ಲ-ದೇವನೆ
ನೊಂದ ಮಕ್ಕಳ ತಂದೆ ಕೊಡು ಬೇಗ ॥ ೧೦

ತಾಯಿಯು ನಮಗೆಲ್ಲ । ಹಾಯಾಗಿ ಬೆಳಸಿದಳು ।
ಸಾಯುವೆವು ಆಸರವಿಲ್ಲದಲೆ-ದೇವೇಶ
ತಾಯಮಕ್ಕಳ ಅಗಲಿಸದಿರು ॥ ೧೧

ಶಿಶುವನು ಕಳಕೊಂಡು । ಅಸುಹೆಂಗ ಇಡಲಿನ್ನು ।
ಈಶಾವತಾರಿಯೆ ಸಲುವಯ್ಯ-ಕರುಳಿನ
ಕಸವೀಸಿ ನೀನು ಅರಿಯೇನು ॥ ೧೨

ಮಗನ ಸಂಗಡವೆ । ಹೋಗುವೆನು ಎನ್ನಯ್ಯ ।
ನೀಗಿದ ಪ್ರಾಣವ ನೀಡಿದರೆ-ಬದುಕುವೆ
ಹಗಲಿರುಳು ನಿನ್ನ ನೆನೆಯುತ ॥ ೧೩

ಪರಿಪರಿ ದುಃಖವ। ಗುರುವಿಗೆ ಹೇಳುತ।
ಪರಮಾವತಾರಿಯೆ ಪ್ರಾಣವ-ನೀಡೆಂದು
ತರುವರು ಜನರು ಸತ್ತವರನು॥ ೧೪

ನಿಜಮುಕುಟ ಧರಿಸಿದ। ಸುಜನ ಸಂಭೂತನು।
ಸಜಕುಂಡಲ ಹೊಳೆವವು-ಸಿದ್ಧೇಶ
ಅಜ ಹರಿ ವಂದಿತ ಪಾದವ॥ ೧೫

ಕುಟಿಲ ಸಿದ್ಧನು ಅಲ್ಲ। ಮಾಟ ಮಾಂತ್ರಿಕನಲ್ಲ।
ಸಟ ಸಾಧಿಪ ಸಿದ್ಧನಲ್ಲೀತ-ಸಿದ್ಧರಾಮು
ದಿಟಯೋಗ ಶಿವಸಾಧಕನು॥ ೧೬

ನಾರುಬೇರವ ತಿಂದು। ಸೇರುವರು ಗವಿಯೊಳು।
ತೋರುವರು ಪರಿಪರಿಯ-ವಿದ್ಯೆಗಳ
ಮರುಳ ಮಾಡುವರು ನರರಿಗೆ॥ ೧೭

ಭೂತ ಭವಿಷ್ಯಗಳ। ಮಾತ್ಹೇಳಿ ಒಲಿಸುವರು।
ಧಾತು ಬಂಗಾರ ಮಾಡುವರು-ಕಂಡು
ಸೋತು ಜನ ಬೆನ್ನುಹತ್ತುವರು॥ ೧೮

ಮಾಂತ್ರಿಕರಾಗಿ ತಾ। ಯಂತ್ರ ಕಟ್ಟುತ ಜನಕೆ।
ತಂತ್ರದಿ ವಶ ಮಾಡುವರು-ಜನವೆಲ್ಲ
ಮಂತ್ರಮುಗ್ಧವಾಗಿ ಕುಣಿವುದು॥ ೧೯

ಕಣ್‌ಕಟ್ಟು ಮಾಡೂತ। ಹೆಣ ರಣವನೆ ಮಾಡಿ।
ಕುಣಿಸುವರು ಅಕ್ರಾಳ ವಿಕ್ರಾಳ-ಅಂಜಲು
ಪ್ರಾಣ ತೆಗೆಯಲು ಹಿಂಜರಿಯರು॥ ೨೦

ಭವಚಕ್ರ ಗೆದ್ದಾತನು। ಶಿವಜ್ಞಾನ ಸಂಭೂತನು।
ಭುವಿಯೊಳು ಖ್ಯಾತವಿಖ್ಯಾತನು-ಸಿದ್ಧರಾಮು
ಅವಿಮುಕ್ತಕ್ಷೇತ್ರ ನಿರ್ಮಾತನು॥ ೨೧

ಕಷ್ಟ ಕಾರ್ಪಣ್ಯವನು। ದುಷ್ಟ ದುರ್ಗುಣಗಳ।
ಶ್ರೇಷ್ಠ ಶ್ರೀಗುರು ಕಳೆಯುತ-ಪೊರೆವನು
ಇಷ್ಟಾರ್ಥ ನೀಡೂತ ಭಕ್ತರನು॥ ೨೨

ಪುಣ್ಯಪುಂಜನು ಸಿದ್ಧ । ಗಣ್ಯ ವರೇಣ್ಯನ ।
ಕಂಡಾರೆ ಕಂಡು ಪಾವನ-ಆಗಲು ಅ-
ಗಣಿತ ಜನರು ಬರುವರು ॥ ೨೩

ಕೇಳಿ ಸುವಾರ್ತೆಯ । ಎಳೆಸಿತು ಅಲ್ಲಮನ ।
ತಿಳಿಸಲು ಶಿವತತ್ವವನು-ತುಂಬಿ
ತುಳಕಿಸಲು ನಿಜ ಸಿದ್ಧನಲಿ ॥ ೨೪

ಸೊನ್ನಲಿಗಿಗೆ ಬಂದನು । ತಾನಾಗಿ ಶಿವಯೋಗಿ ।
ತನ್ನದೆ ಆದ ಶಿವತೇಜದಿ-ಬೆಳಗೂತ
ಮುನ್ನೀನ ಕಜ್ಜ ಉಜ್ಜಗಿಸೆ ॥ ೨೫

ಕೀರುತಿಯ ಬೆನ್ಹತ್ತಿ । ಬರಿ ಭ್ರಮೆಗೊಳಗಾದ ।
ನಿರತನಾಗಿಹ ಸಿದ್ಧರಾಮನ-ಈ ಕರ್ಮ
ಪರಿಹರಿಸಬೇಕು ಎಂದನು ॥ ೨೬

ಧರೆಯ ಮೇಲೊಂದು । ಹಿರಿದಾದ ಸಂತೆಯನು ।
ನೆರೆಸಲು ಬಂದವಗೆ ಏನೆಂಬೆ-ಗುಹೇಶ್ವರ
ಪರಿಪರಿ ಭಂಡದ ವ್ಯವಹಾರ ॥ ೨೭

ಯಾರಿಗೂ ಕೊಡಲಿಲ್ಲ । ಯಾರದು ಕೊಳ್ಳಲಿಲ್ಲ ।
ಮರವೆಯ ವಿಲಾಸವಿದೇನು-ಅರಿಮರುಳ
ನೆರೆಮರುಳೆಂಬ ।ಜಗ ಹರ ಹುಟ್ಟಿಸೆ ॥ ೨೮

ಸಾಗರದೊಳಗಿರುವ । ಅಗಣಿತ ಪ್ರಾಣಿಗಳ ।
ತಗೆದು ಬೇರೆ ತಾಣದಿ ಇಟ್ಟರೆ-ಜೀವಿಗಳು
ಹೇಗೆ ಬದುಕುವವು ಹೇಳಿರೊ ॥ ೨೯

ಭವಸಾಗರದೊಳಗಿನ । ಜೀವಿಗಳಿಗೆ ಅದೆ ।
ಥಾವತಿ ಅಲ್ಲದೆ ಬೇರುಂಟೆ-ಜಗನ್ಮಯ
ದೇವನ ಲೀಲೆಗೆ ಬೆರಗಾದೆ ॥ ೩೦

ಕಲ್ಲಿನ ಮನೆ ಕಟ್ಟಿ । ಕಲ್ಲ ದೇವರನಿಟ್ಟು ।
ಕಲ್ಲು ಕಲ್ಲಿನ ಮೇಲೆ ಕೆಡೆದರೆ-ದೇವನು
ಒಲ್ಲೆನೆಂದು ಹೋದನು ಎಲ್ಲಿಗೊ ॥ ೩೧

ದೇಹವೆ ದೇಗುಲ। ಮಹಾಲಿಂಗಕ್ಕಿರುವಾಗ।
ಇಹದಿ ಮತ್ತೆ ದೇಗುಲವೆ-ಮರುಳರೆ
ಗುಹೇಶ್ವರ ಕಲ್ಲಾದರೆ ನಾನೇನೆಂಬೆ॥ ೩೨

ಪ್ರಾಣವೆ ಲಿಂಗವಾಗಿ। ಅಣಿಯಾಗಿ ಇರುವಾಗ।
ದಣಿವುದು ಏಕೆ ಬೇರೊಂದು-ಸ್ಥಾಪಿಸಿ
ಅಣಿಯಾಂಕಧರ ಹೇಳ ಕೇಳಲಿಲ್ಲ॥ ೩೩

ಅನ್ನ ನೀರವನಿಕ್ಕುತ। ನನ್ನಿಯ ನುಡಿಯುತ।
ತನ್ನದೊಂದು ಕೆರೆ ಕಟ್ಟಿದರು-ಶಿವ-
ನನ್ನು ಅರಿಯದೆ ಫಲವಿಲ್ಲ॥ ೩೪

ಅರವಟ್ಟಿಗೆ ಇಟ್ಟರು। ಮರಣದ ನಂತರ।
ಸ್ವರ್ಗ ಸಿಗುವದಲ್ಲದೆ ಶಿವನ-ನಿಜವು
ಅರಿಮರುಳರಿಗೆ ದುಸಾಧ್ಯವು॥ ೩೫

ಕೆರೆಯ ಕಟ್ಟುವ ಪರಿ। ಅರಿತವರನು ಕಾಣೆ।
ಸ್ಥಿರವಾಯಿತೆನ್ನ ಕಟ್ಟಿದ ಕೆರೆ-ದೇವನೆ
ಅರಹುವೆ ನಿಮ್ಮಾಣೆಯನಿಟ್ಟು॥ ೩೬

ತನುವೆಂಬ ಏರಿಗೆ। ಮನವೆಂಬ ಕಟ್ಟೆಯು।
ಘನ ಆಚಾರವೆ ಸೋಪಾನ-ಕೆರೆಯಲಿ
ತನ್ನ ಪರಮಾನಂದದ ಜಲತುಂಬಿ॥ ೩೭

ಕೆರೆಯನು ಕಟ್ಟಿಸುವ। ಹಿರಿ ಒಡ್ಡನ ವೃತ್ತಾಂತ।
ಅರಿತು ನಾನಿಂದು ಬೆರಗಾದೆ-ನೆಲ ಅಗಿದು
ನೀರ ತೆಗೆವೆನೆಂದು ಬಳಲುವ॥ ೩೮

ಕಲ್ಲು ಕಟೆದು ಮತ್ತೆ। ಕಲ್ಲಿಗೆ ಭೋಗವಿಡೆ।
ಹೊಲ್ಲತನವು ಇದೇನು-ಇರುವಿನ
ಸಲ್ಲದೀಪರಿ ನೋಡಿ ಬೆರಗಾದೆ॥ ೩೯

ಕೆರೆದಡದಲಿ ನಿಂತು। ದೊರೆ ಅಲ್ಲಮಪ್ರಭು।
ಕರೆದು ಕೇಳಿದ ಗುಡ್ಡರನು-ನಿಮ್ಮಾತ
ಹಿರಿ ಒಡ್ಡನೆಲ್ಲಿ ಹೇಳಿರೊ॥ ೪೦

ಯೋಗಿಕುಲಕ್ಕೆಲ್ಲ । ಆಗಿರುವ ಚಕ್ರವರ್ತಿ ।
ಹೋಗು ಹೋಗಯ್ಯ ನೀನಾರು–ಬಂದಿದಿ
ಸೋಗ ಹಾಕಿರುವ ಏ ಜೋಗಿ ॥ ೪೧

ಹೇಳಿರೊ ಗುಡ್ಡರಿರಾ । ಒಳಗೆ ತೊಳೆದು ಜಲವ ।
ತಿಳಿ ತುಂಬಲರಿಯದ ಅರೆಮರುಳ–ಎಲ್ಲಿಹನು
ಕೇಳಿರೊ ಸಿದ್ಧರಾಮುನಿಗೆ ॥ ೪೨

ಜಲದ ಸಂಗವನು । ಸಲೆ ತೊಳೆಯಲರಿಯದೆ ।
ಜಲವ ಬಯಸುವನು ಎಂಥವನು–ಹೇಳಿರೊ
ನಿಲವನರಿಯದ ಮರುಳೆಲ್ಲಿ ॥ ೪೩

ನೆಲವನೆ ಹುಡುಕೂತ । ನೆಲೆಯನರಿಯದ ತಾನು ।
ಜಲಕಾಗಿ ಕೆರೆಯ ಕಟ್ಟುವ–ಯೋಗಿಯು
ಎಲ್ಲಿರುವನು ನಿಮ್ಮ ಒಡ್ಡರಾಮ ॥ ೪೪

ಬಿರಿನುಡಿ ಕೇಳೂತ । ವರಪ್ರಭುರಾಯನ ।
ಅರಿತಿಲ್ಲವೇನು ಗುರುಮಹಿಮೆ–ಏ ಜೋಗಿ
ಗರುವಿನ ಮಾತು ಸಾಕಿನ್ನು ॥ ೪೫

ಕೇಳಿ ಗುಡ್ಡರ ಮಾತು । ಗೊಳ್ಳಂತ ನಕ್ಕನು ।
ತಿಳಿಗೇಡಿ ಸಿದ್ಧ ಅವನೆಲ್ಲಿ–ಇಲ್ಲಿಗೆ
ಹೇಳಿರೊ ಅವಗೆ ಬರಲಿಕ್ಕೆ ॥ ೪೬

ಗುರುನಿಂದೆಯನು ಕೇಳಿ । ಉರಿದಿತ್ತು ಎದೆ ಹೊಟ್ಟೆ ।
ತ್ವರದಿಂದ ಗುಡ್ಡರು ಎದ್ದರು–ಪ್ರಭುವಿಗೆ
ಸೆರೆ ಹಿಡಿಯಲು ಹವಣಿಸಿ ॥ ೪೭

ಘಟವಿಲ್ಲದಲ್ಲಮನು । ಬಟಬಯಲೊಳು ತಾನು ।
ದಿಟ ಶಿವಯೋಗಿ ಚಲಿಸೂತ–ಸಿಗವಲ್ಲ
ಸಿಟ್ಟಿನಿಂದ ಬಂದ ಗುಡ್ಡರಿಗೆ ॥ ೪೮

ಪೆಚ್ಚ ಮೋರೆಯ ಮಾಡಿ । ಅಚ್ಚರಿಯಿಂದ ನೋಡಿ ।
ಹುಚ್ಚನಂಥವ ಜೋಗಿ ಕಣ್ಗಳ–ಕಟ್ಟೊತ
ಮುಚ್ಚಿ ಮರೆಯಾಗಿ ಎಲ್ಲಿರುವ ॥ ೪೯

ದೂರ ನಿಂತು ಅಲ್ಲಮು। ವೀರ ನಗುತ ನುಡಿದ।
ಏರಿ ಬಂದರು ನಿಮ್ಮ ಕೈಗಳಿಗೆ–ಸಿಗಲಿಲ್ಲ
ನೀರನಿಃಪತಿ ನಿರುಪಮನು॥ ೫೦

ಕೆಮ್ಮನೆ ಕೆಡಬೇಡೆಲೊ। ಸುಮ್ಮನಿರಲಾರೆವು।
ಹೆಮ್ಮೆಯಿಂದೆದ್ದರು ಗುಡ್ಡರು–ಕಲ್ಲುಗಳ
ಒಮ್ಮೆಲೆ ತೂರಿದರು ಅಲ್ಲಮನಿಗೆ॥ ೫೧

ತೂರಿದ ಕಲ್ಲುಗಳು। ಗಿರಿಯಾಗಿ ಪರಿಣಮಿಸಿ।
ಮೀರಿದ ಅಲ್ಲಮ ಗಿರಿಏರಿ–ನಿಂತನು ಮಾ-
ಮೂರುತಿಗೆ ಪೆಟ್ಟು ತಾಗಿಲ್ಲ॥ ೫೨

ಹಲವರ ಕೈಯಲ್ಲಿ। ಸಲಾಕಿ ಗುದ್ದಲಿಗಳು।
ಅಲ್ಲಮನ ಮೈಮೇಲೆ ಎಸೆಯುತ–ಹೋದರು
ಅಲ್ಲಿಲ್ಲ ಇಲ್ಲಿಲ್ಲ ಎಲ್ಲಿಹನೊ॥ ೫೩

ಗುರು ಎಂದು ಅರಿಯರು। ಹಿರಿಯರೆಂದರಿಯರು।
ಹರನೆಂದು ಅರಿಯರು ಭಕ್ತರೆಂದು–ಅರಿಯರು
ವರಲಿಂಗ ಜಂಗಮರಿವರೆಂದು॥ ೫೪

ಬಂದವರನರಿಯರು। ನಿಂದನಿಲವನರಿಯರು।
ನೊಂದನೋವು ಬರಿದೆಹೋದಿತೆ–ಶರಣರು
ಬೆಂದ ಪಾತಕವು ಬಿಟ್ಟೀತೆ॥ ೫೫

ನುಡಿದರೆ ಸಹಜವ। ನೋಡಿ ಸೇರುವರಿಲ್ಲ।
ದಡ್ಡರು ಸಹಜಕ್ಕೆ ಭಜಿಸರು–ಕಟ್ಟುವನ
ಒಡ್ಡರಾಯನೆಂದರೆ ನೋಯುವರು॥ ೫೬

ಸಿಟ್ಟೇಲಿ ಲಿಂಗತನುವ। ಪೆಟ್ಟಟ್ಟು ನೋಯ್ಸಿದರೆ।
ದಿಟಲಿಂಗ ಜಗದೊಳು ತುಂಬೀದ–ಕಾರಣ
ಪೆಟ್ಟು ಪಾತಕರಿಗೆ ತಾಗದೆ॥ ೫೭

ಹೆತ್ತವ್ವನ ಸುಖದುಃಖ। ಹೊತ್ತಗರ್ಭದ ಕೂಸಿಗೆ।
ಸತ್ಯ ಶರಣರಿಗೆ ತಾಗೀದ-ಸುಖದುಃಖ
ಉತ್ತಮ ಶಿವನಿಗೆ ಮುಟ್ಟುವುದು॥ ೫೮

ಕರಣಂಗಳುಳ್ಳವರು । ಮರಣ ಇಲ್ಲದವರಿಗೆ ।
ಉರಿದೆದ್ದರೆ ಕಾಯಕ್ಕಲ್ಲದೆ–ಮುಟ್ಟುವದೆ
ಬರಿಕಾಯದವಗೆ ಸೋಂಕುವದೆ ॥ ೫೯

ಹರನೆಂಬ ಕೆಂಡವನು । ಗೊರಲಿ ಮುಟ್ಟುವದೇನೊ ।
ಹರನೊಂದ ಪಾತಕ ಬಿಟ್ಟೀತೇನೊ–ಗುಹೇಶ್ವರ
ವರ ಅಲ್ಲಯ್ಯ ನೋಡಿ ನಗುವನು ॥ ೬೦

ಜಗದ ಜನಗಳಿಗೆಲ್ಲ । ಬಗೆಬಗೆಯಿಂದ್ಹಿಡಿದು ।
ಸುಗಮ ಉಪದೇಶ ಮಾಡಿದ–ಗುರುವಿಂಗೆ
ಆಗಹೋಗದ ನಿಜವ ತಿಳಿಲಿಲ್ಲ ॥ ೬೧

ಸುನೇಮ ಅರಿಯದ । ಹೀನ ಸಂಸಾರ ಜೀವಿಗೆ ।
ತಾನು ಮಾಡಿದ ದೋಷ ತನ್ನನು–ನುಂಗೀತು
ಸನ್ನುತ ಗುರುವಿಗೂ ಉಪಹತಿಯು ॥ ೬೨

ತಾನಿಟ್ಟ ಬೇತಾಳವು । ತನ್ನನೆ ನುಂಗಿದರೆ ।
ಮುನಿದು ಬೇಕು ಬೇಡೆನ್ನುವರೆ–ಮರುಳ
ಮಾನವರಿದೆಂತು ಅರಿವರು ॥ ೬೩

ದೇವ ಅಲ್ಲಮುನಿಗೆ । ನೋವು ಮಾಡಿದುದನ್ನು ।
ತಾವೆ ಅನುಭವಿಸಿ ಗುಡ್ಡರು–ಬಳಲೂತ
ಭಾವಿಸಿ ಹೊರಟರು ಗೋಳಿಡುತ ॥ ೬೪

ಎಲ್ಲಿ ನೋಡಿದರಲ್ಲಿ । ಮೆಲ್ಲನೆ ಮೂಡುವನು ।
ಬಲ್ಲಂಗ ಯೋಗಿಗೆ ನುಡಿವನು–ಈ ಮಾತು
ಬಲ್ಲ ಯೋಗಿಗೆ ಹೇಳಲೋಡಿದರು ॥ ೬೫

ನಡೆದರೆ ಹೆಜ್ಜಿಲ್ಲ । ಬಡಿದರೆ ತಾಕಲಿಲ್ಲ ।
ಹಿಡಿದರೆ ಕೈಯಗೆ ಸಿಗಲಿಲ್ಲ–ಮಾಟಗಾರ
ಒಡಲು ಬರಿಯಾಗಿ ಕಂಡಿತ್ತು ॥ ೬೬

ಅಯ್ಯ ಬಂದಿಹನಲ್ಲಿ । ಮಾಯಾ ಇಂದ್ರುಜಾಲನು ।
ಬಾಯಿಗೆ ಬಂದಂತೆ ನಿಂದೆಯ–ಮಾಡಿದ
ಗಾಯಗೊಳಿಸಲು ಕಲ್ಲು ಒಗೆದೆವು ॥ ೬೭

ಗುರುನಿಂದೆ ಕೇಳಲಾಗ। ಭರದಿಂದ ನಾವುಗಳು।
ಸುರಿಸಿದೆವು ಕಲ್ಲು ಗುಂಡುಗಳ-ಆಗಳೆ
ತಿರುಗಿ ಬಂದು ನಮಗೆ ಬಡೆದವು॥ ೬೮

ಗುಡ್ಡರೆಲ್ಲರು ಕೂಡಿ। ಬೇಡಿದರು ಗುರುವಿಗೆ।
ಅಡಿಮೇಲೆ ಉರಳಾಡಿ ಹೊರಳಾಡಿ-ದೇವ
ತಡಮಾಡ ಬೇಡಿರಿ ನಡೆಯಿರಿ॥ ೬೯

ಗಾಬರಿಗೊಳ್ಳದಲೆ। ಅಬ್ಬರಿಸಿ ಕೇಳಿದನು।
ಅಭಯರೆ ನಿಮಗೆ ಭಯವೇನು-ನಾನರಿಯೆ
ಗಾಬರಿಗೊಂಡ ಕಾರಣವ॥ ೭೦

ಕೇಳಿದ ಕಾರಣವ। ಹೇಳಲು ಬಾರದೆಮಗೆ।
ವೇಳೆ ಕಳೆಯದಿರಿ ಮಹಾಯೋಗಿ-ತಮಗೆ
ದಾಳಿ ತಂದಾನ ಗಾಳಿಯಂಥವನು॥ ೭೧

ಏನು ಹುಚ್ಚಿಡಿಯಿತೆ। ಅನುದಿನದಲಿ ನನ್ನ ಈ।
ಘನಸೇವೆ ಮಾಡಿದರು ನಿಮಗಿನ್ನು-ಮರುಳರೆ
ಗ್ಯಾನವಿಲ್ಲವಲ್ಲ ಮಾತಾಡಲು॥ ೭೨

ಗುರುದೇವನೆ ನಾವಿಂದು। ಚರಣ ಸಾಕ್ಷಿಯಾಗಿ।
ಬೆರಗುಗೊಂಡು ಇಲ್ಲಿಗೆ ಬಂದೆವು-ತಮಗಾತ
ತೋರಿರೆಂದು ಕೇಳುತ ನಿಂತಾನ॥ ೭೩

ಅವನ ಪಾಟವ ಕಂಡು। ನೀವೆಲ್ಲ ಬೆರಗಾದಿರಿ।
ಯಾವನವನು ನಾನು ನೋಡುವೆನು-ಆತಗೆ
ಜೀವುಳಿಸಿ ಕೊಂಡು ಹೋಗೆನ್ನಿರೋ॥ ೭೪

ಗುಡ್ಡರ ನೋವುಕಂಡು। ಒಡೆಯ ಸಿದ್ಧರಾಮ।
ಗುಡ್ಡರ ನೋವು ತನ್ನದೆ-ಎನ್ನೂತ
ಕಡುಕೋಪಕ್ಕೆ ಮನ ಒಡ್ಡಿದನು॥ ೭೫

ದೇವ ನಿಮ್ಮ ಸೇವಕರ। ನೋವೆ ಎನ್ನದಾಗಿರೆ।
ಧಾವಿಸಿ ಬಂದು ಹೇಳಲು-ಸೈರಿಸೆ
ಯಾವ ಕಾಲಕ್ಕೂ ಕಪಿಲಸಿದ್ಧ॥ ೭೬

ತಿರ್‍ಕ್ಯಾಟವಾದಾಗ। ಲೆಕ್ಕಿಸದೆ ಇರಲಾರೆ।
ಎಕ್ಕೆವಿಂಡುಗಳು ನಿನ್ನವರೆ-ಗಣಂಗಳು
ಮುಕ್ಕಂಣ ನೀನರಿಯೆ ಈ ಮಾತು ॥ ೭೭

ಅಂಗಾಲ ಕಿಚ್ಚೆದ್ದು । ಮಿಗೆ ನೆತ್ತಿಗೆ ಮುಟ್ಟಲು।
ತೆಗೆದನು ನೊಸಲಗಣ್ಣವ-ಮಲ್ಲೇಶ
ಈಗಾತ ಸುಮ್ಮನಿರಲಾರ॥ ೭೮

ಬಂದರೇನು ಬ್ರಹ್ಮನು। ನಿಂದರೇನು ವಿಷ್ಣು ।
ಇಂದ್ರ ಬಂದರೇನಾಯಿತು-ನೋಯಿಸಲು
ಚಂದ್ರ ಬಂದರೆ ನಮಗೇನು ॥ ೭೯

ನೊಸಲೀನ ಕಣ್ಣಿಗೆ । ಬೆಸನನಿತ್ತರೆ ಅಲ್ಲಿ।
ತುಸು ಹೊತ್ತು ನಿಲ್ಲಬಲ್ಲರೇ-ದೇವನ
ಅಸಮ ಶಕ್ತಿಯ ಉರಿಮುಂದೆ ॥ ೮೦

ತಟ್ಟನೆ ಸಿದ್ಧಪತಿ। ಸಿಟ್ಟೇಲಿ ನಿಂದಿಹನು।
ಸುಟ್ಟಾಕಲವನ ಉರಿಗಣ್ಣ-ಬಿಟ್ಟಿಹನು
ಬಟ್ಟಬಯಲಿನ ಪ್ರಭುವೀಗೆ॥ ೮೧

ನಿಮ್ಮ ಮೂರುತಿಯನು। ಸ್ವಾಮಿ ನೋಡೆನುತ।
ನಮ್ಮ ದೃಷ್ಟಿಗೆ ನಿಲುಕದು-ಮಲ್ಲೇಶ
ನಿಮ್ಮ ತೇಜ ನೋಡಲರಿಯರು ॥ ೮೨

ನಿನ್ನ ತೇಜದ ಮುನ್ನ। ಇನ್ನಾವ ತೇಜವಿಹುದು।
ಮುನಿದು ನೊಸಲಗಣ್ಣ ತೆರೆದರೆ-ದೇವನೆ
ಇನ್ನಾರು ಸಮನಿಸಬಾರದು॥ ೮೩

ಹರ ನಿಮ್ಮ ತೇಜವು। ಮೂರು ಲೋಕವೆಲ್ಲ।
ತ್ವರದಿಂದ ನುಂಗಿದರೆ ಆನು-ನೋಡಿ
ಭರದಿಂದ ಕಂಣು ಮುಚ್ಚಿಕೊಂಬೆ॥ ೮೪

ಧಗಿಭುಗಿಲ ಧಗ್ಗೆಂದು। ಮಿಗೆ ಶಬ್ದ ಮಾಡೂತ।
ಅಗಣಿತ ನಾಲಿಗೆಯ ಚಾಚೂತ-ಅಬ್ಬರದಿ
ಮಿಗೆ ಬ್ರಹ್ಮಾಂಡ ಮಂಡಲ ಮುಸುಕಿತ್ತು॥ ೮೫

ಉರಿವ ಜ್ವಾಲೆಯು ಕಂಡು ಮರುಗಿದ ಅಲ್ಲಮನು ।
ಉರಿಗಣ್ಣಿನ ಸಿದ್ಧರಾಮಂಗೆ–ಅಕಟಕಟ
ಅರುವಿಲ್ಲ ಗರುಪಿನ ತವರಿಗೆ ॥ ೮೫

ಕಾಡುಗಿಚ್ಚು ಎದ್ದರೆ । ಅಡವಿಯೆ ಗುರಿಯಯ್ಯ ।
ಕಡು ನೀರಗಿಚ್ಚೀಗೆ ಸಾಗರವೆ-ಗುರಿಯಯ್ಯ ।
ಒಡಲಗಿಚ್ಚಿಗೆ ತನುವೆ ಗುರಿಯು ॥ ೮೬

ಸನ್ನುತ ಶರಣರ । ಮನದಲ್ಲಿ ಕೋಪಾಗ್ನಿಯು ।
ತಾನೆ ಎದ್ದರೆ ನಿಂದಕರೆ ಗುರಿ–ದೇವನೆ
ನಿನ್ನ ಹೊಡೆಗಿಚ್ಚಿಗೆ ನಾ ಗುರಿಯಲ್ಲ ॥ ೮೭

ಕಾಯ ಗುಣವಳಿದು । ಮಾಯದ ಮದ ಮುರಿದು ।
ರೀಯ ಕಾಮ ಕ್ರೋಧ ಹೆಸಹಿಂಗಲು–ಅಂಗ
ಲೀಯವಾಯಿತ್ತು ಲಿಂಗದಿ ॥ ೮೮

ಅಂಗಳ ಕಳೆಯನೆ । ನುಂಗಿತ್ತು ಬೆಳಗವನು ।
ಲಿಂಗ ವಿರಹದ ಉರಿಯೊಳಗೆ–ಬೆಂದವನ
ಹೆಂಗ ಸುಡುವನು ಮರುಳನು ॥ ೮೯

ತಾಪತ್ರಯದಲಿ ಬೆಂದ । ನೆಸದ ಒಡಲನ್ನಿಡಿದು ।
ಕ್ಷಿಪ್ರದಿ ತಂದು ಜ್ಞಾನವೆಂಬ–ಉರಿಗೆ
ಈ ಪರಿ ಆಹುತಿ ಕೊಟ್ಟವನ ॥ ೯೦

ಜ್ಞಾನವೆಂಬ ಕಾಯುವ । ಜಾಣತನದಿಂದ್ದಿಡಿದು ನಿ- ।
ಶೂನ್ಯವೆಂಬ ತೇಜದಲಿ–ಸುಟ್ಟು ನಿ–
ಶೂನ್ಯ ಶಬ್ದ ಭಸ್ಮಧಾರಿ ಐಕ್ಯನ ॥ ೯೧

ಲೋಕದ ಸ್ಥಿತಿಗತಿಯು । ಏಕಕಾಲಕೆ ಮರೆದು ।
ಜ್ವಾಕಿಲಿ ನಿರ್ವಾಣದಿ ನಿಂದವನ–ಲಿಂಗದಲಿ
ಏಕಾದಲ್ಲಮನ ಸುಡುವನಂತೆ ॥ ೯೨

ಕೋಪದ ಕಿಚ್ಚಿನಲಿ । ಆ ಪರಬ್ರಹ್ಮ ಪ್ರಭುವಿಗೆ ।
ಈ ಪರಿ ಸುಡುವ ಸಿದ್ಧರಾಮನ–ವರ್ತನೆ
ಅಪ್ಪ ಗುಹೇಶ್ವರನೆ ನೋಡಯ್ಯ ॥ ೯೩

ಜಗದೊಳಗಿರುವದು। ಅಗಣಿತ ನಿನ್ನ ಶಕ್ತಿ।
ಜಗದ ಶಕ್ತಿಯು ನಿನ್ನೊಳಗೆ–ಇರಲು
ಮಿಗೆ ಭೇದಿಸಿದಕ್ಕೆ ಬೆರಗಾದೆ ॥ ೯೫

ಅಂದೊಮ್ಮೆ ತ್ರಿಪುರವ। ಇಂದುಧರ ಸುಟ್ಟದ್ದು।
ಅಂದು ನೋಡಿ ನಾಚಿತ್ತೆನ್ನ ಮನ–ಗುಹೇಶ್ವರ
ಇಂದು ಮತ್ತೆ ತೆರೆದಿ ಹಣೆಗಣ್ಣು ॥ ೯೬

ಕಾಮನ ಉರುಹಿಸಿ। ಕಾಮಹರನೆಂಬುವ।
ನಾಮ ಪಡಕೊಂಡಹಂಕಾರ–ನೋಡಿ
ಸೋಮಧರ ಹೇಸತ್ತೆನ್ನ ಮನ ॥ ೯೭

ಸುಟ್ಟು ಕಾಲನನ್ನು। ಬೊಟ್ಟನಿಟ್ಟಿ ಘನವೆ।
ದಿಟಪಿದು ನಗೆಗೆಡೆ ಆಯಿತು ಶಿವ ;
ಹಟದ ಹಣೆಗಣ್ಣಡಗಿತ್ತಂಗಾಲದಿ ॥ ೯೮

ನುಂಗಲು ಬಂದಿರುವ। ಅಂಗವಿಲ್ಲದ ಅಗ್ನಿ।
ಕಂಗೊಳಿಸಿದ ಅಲ್ಲಮನು–ಆ ಚಣ
ಅಂಗಾಲ ಕಂಣು ನುಂಗಿತ್ತು ॥ ೯೯

ಸಂಧಿ ೨೩

ಹರನ ಕಾರುಣ್ಯದ । ವರಸಾಮರ್ಥ್ಯವ ಪಡೆದ ।
ಹಿರಿ ಶಿವಶರಣರ ಸಂಗಡ-ಸೆಣಿಸಿದರೆ
ಮರುಳೆ ನಿನಗದರಿಂದ ಲೇಸುಂಟೆ ॥ ೧

ಅಘಟಿತ ಘಟಿತರಿಗೆ । ಅಘಟಿತರಿರುವರು ।
ತೆಗೆಯಲು ನೊಸಲಗಂಣವನು–ಮತ್ತೊಬ್ಬ
ತೆಗೆವನು ಅಂಗಾಲಗಂಣವನು ॥ ೨

ಈಗನೆ ಪ್ರಭುದೇವ । ತೆಗೆದು ಅಂಗಾಲ ಕಣ್ಣು ।
ಆಗ ಸಿದ್ಧರಾಮನ ಕುರಿತು ನುಡಿದನು–ಶಿವನ
ಅಗಣಿತ ಮಹಿಮರು ಶರಣರು ॥ ೩

ಎರಡು ಕಣ್ಣುಳ್ಳರೆ । ಚರಿಪ ಚತುರ್ಭುಜನು ।
ಮೂರು ಕಣ್ಣುಳ್ಳರೆ ಮಹೇಶ್ವರ–ಎಂಬೆನು ।
ಶರೀರವೆಲ್ಲ ಕಣ್ಣುಳ್ಳರೆ ಸದಾಶಿವನು ॥ ೪

ವೃಷನ ಶರಣಂಗೆ। ಮೂಡಲು ಅಂಗಾಲಗಣ್ಣು।
ಒಡೆಯ ಅಲ್ಲಮನೆಂಬೆನು–ನಿರುಪಮನ
ನೋಡಿರೊ ಅಂಗಾಲಗಣ್ಣಿನ ತೇಜವ ॥ ೪

ಮಿತಿ ಮೀರಿದ ತೇಜವ। ಆತುರದಿ ನೋಡಿದರೆ।
ಶತ ಕೋಟಿ ಸೂರ್ಯರು ಮೂಡಿದಂತೆ–ಕಂಡೆ
ಎತ್ತರ ಮಿಂಚಿನ ಬಳ್ಳಿಯ ಸಂಚವ ॥ ೫

ಎನಗೆ ಸೋಜಿಗವಿದು। ಸನ್ನೂತ ಗುಹೇಶ್ವರ।
ನೀನು ಜ್ಯೋತಿರ್ಲಿಂಗವಾದರೆ–ಉಪಮಿಸಿ
ನಿನ್ನನು ನೋಡ ಬಲ್ಲವರಿಲ್ಲ ॥ ೬

ಸುಡಲು ಕಾಲಾಗ್ನಿಯ। ಕಾಡಗಿಚ್ಚವು ಎದ್ದು।
ಇಡೀ ಲೋಕವ ಸುಟ್ಟಿತೆಂದರೆ–ಶರಣರು
ಕಡು ಭೀತಿಯೊಳಗಾಗರು ॥ ೭

ಶಶಿಧರ ತಾ ಮುನಿದು। ಬಿಸಿಗಣ್ಣು ತೆಗೆದರೆ।
ಅಸಮ ಶರಣರು ಮನಸಿಗೆ–ತಾರರು
ಅಸಮಾಕ್ಷ ಲಿಂಗ ವಶವಾಗಿರಲು ॥ ೮

ಅಸಮಾಕ್ಷ ಲಿಂಗಕ್ಕೆ। ವಶ ಪಡಿಸಿ ಶರಣರು।
ತುಸು ಉರಿಗಣ್ಣು ತೆಗೆದರೆ–ಚತುರ್ದಶ
ವಸುಧಿಯೊಳಗೆ ಆರು ಗುರಿಯಲ್ಲ ॥ ೯

ಅರುವಿನ ಬೆಳಗೆದ್ದು। ಉರಿ ಬಿಸಿಯಾದರೆ।
ವರ ಸಿದ್ಧರಾಮಶಿವಯೋಗಿಯು–ಹೃದಯವೆ
ಗುರಿ ಎಂದು ಬೆಸಸಿದನಲ್ಲಯ್ಯನು ॥ ೧೦

ಬೆಳಗೂತ ತೇಜವ।ಅಳವಡಿಸಿ ದಿಕ್ಕೆಂಟು।
ಇಳೆಯಾಕಾಶವ ತುಂಬಿತ್ತು–ಜೀವರಾಶಿ
ಉಳಿಸದೆ ಉಃಪೆಂದು ಊದುತ ॥ ೧೧

ಏಳು ಸಮುದ್ರಂಗಳು। ಉಳಿಸದೆ ಬ್ರಹ್ಮಾಂಡ।
ತಾಳಿತು ಭುಗಿಭುಗಿಲೆಂಬುವ–ರಭಸವು
ಪ್ರಳಯ ಕಾಲ ಬಂದಿತೆಂದರು ॥ ೧೨

ಹರಿ ಬ್ರಹ್ಮ ಮೊದಲಾದ। ಸುರಮುನಿ ಚರರೆಲ್ಲ।
ಭರದಿಂದ ಕೈಲಾಸಕ್ಕೋಡುವಾಗ–ಸಿದ್ಧರಾಮ
ನರ ತೇಜೋರಾಶಿಯ ಕಂಡಿಹನು ॥ ೧೩

ಅಗಣಿತ ಮುಖಂಗಳು। ಆಗೊಂದೆ ಮುಖವಾಗಿ।
ಮಿಗಲಾದ ಒಮ್ಮುಖ ಅಗಣಿತ–ಆದದ್ದು
ಯೋಗಿಸಿದ್ಧನು ಕಂಡು ಅನುತಾಪಿಸಿ ॥ ೧೪

ಯುಗಜುಗ ಮಡಿವಂದು। ಧಿಗಿಲುಭುಗಿಲೆಂದು।
ಈಗ ಮುಸಿಕೀದ ಮಾಜ್ವಾಲೆ–ಇದೇನೊ
ಬಗೆ ತೋರದೆ ಕೆಟ್ಟೆನು ಓ ತಂದೆ ॥ ೧೫

ಮಂದಮತಿಯು ನಾನು। ಇಂದು ಕಣ್ಣಾರೆ ಕಂಡು।
ಚಂದ್ರಮಂಡಿತನೆಂದರಿಯದೆ-ನಾನೆನ್ನ
ಬೆಂದ ಕಾಯದ ಕಳವಳದಲ್ಲಿರುವೆ ॥ ೧೬

ಆಳುವವನ ಸಂಗಡ। ಆಳು ಮುನಿದರೆ ಹಾಳು।
ಆಳುವನು ಮುನಿದರೆ ಆಳು ತಾ-ಹಾಳಾಗುವ
ಕೇಳಯ್ಯ ನೀ ಮುನಿಸೆ ನಾನೇ ಹಾಳು ॥ ೧೭

ಅರಿಯಬಾರದ ಘನ। ಅರಿದು ಸಾಧಿಸಿ ಗೆದ್ದರು।
ಹಿರಿ ಮಹಿಮ ಶರಣರ ಮುಂದೆನ್ನ- ಪ್ರತಾಪವೆ
ಶರಣರಿರವು ಲಿಂಗ ಪ್ರಭೆಯೊಳು ॥ ೧೮

ನಾನಿರುವೆ ಅಹಂಕಾರದ।ಹೀನ ಪಂಜರದೋಳು।
ಎನ್ನ ನೊಸಲಗಣ್ಣಿನ ಕಿಚ್ಚುಡುಗಿ–ಮರಳಿ ಬಂ-
ದೆನ್ನ ಸುತ್ತ ಮುತ್ತಿತು ನಾಚೂತ ॥ ೨೦

ನಾನು ಶರಣೆಂದರೂ। ನಿನ್ನ ಗುರುವಚನವು।
ಎನ್ನೆದರೆದ್ದು ಕೊಲ್ಲಿದರೆ-ದೇವ ನಾನು
ನಿನ್ನೊಳಗೆ ಅಳಿವೆನು ಉಳಿವನಲ್ಲ ॥ ೨೧

ಯಾಕೆ ಬಾರದು ಕಾಲ। ಇಂದಿನ ಅವಸ್ಥೆಗೆ।
ಲಿಖಿತೇಕೆ ಅಳಕದು ಈ ಪರಿಗೆ-ಮಲ್ಲೇಶ
ಯಾಕೆ ಬಾರದು ಇಂದಿನಿತೀಸು ॥ ೨೨

ಎನ್ನ ದೇವರ ದೇವ। ನಿನ್ನ ಕೂರ್ತವಸ್ಥೆಯೊಳು।
ಎನ್ನ ಲಿಖಿತವ ತೊಡೆಯದು–ಎನ್ನಯ್ಯ
ಪ್ರಾಣ ಬಿಡದು ಇಂತಿರಿಸಿದಿರಿ ॥ ೨೩

ಎನ್ನ ಕಳವಳಗಣ್ಣು। ನೀನೆ ತೆರೆವಂತೆ ಮಾಡಿದೆ।
ಎನ್ನ ವಿಕಾರದಲ್ಲಿ ಗುರಿ ಮಾಡಿದಿ–ಕೋಪದ
ವನ್ಹಿಗೆ ಅಡವಿಯ ಗುರಿ ಮಾಡಿದಿ ॥ ೨೪

ಅನುತಾಪ ಗೊಳ್ಳುತ। ಮನ ಸಂತಸಗೊಂಡು।
ಸನ್ನುತ ಅಲ್ಲಮನ ಶ್ರೀಪಾದ–ಅರಸುತ
ಲೀನವಾಗಿ ಹೊರಟನು ಸಿದ್ಧರಾಮ ॥ ೨೫

ಅಟ್ಟ ಅಡವಿಯೊಳಗೆ। ನಿಟ್ಟೇಸಿ ಹಗಲಿರುಳು।
ನೆಟ್ಟನೆ ಅಪ್ಪ ಅಯ್ಯ ಎಂದು–ಹುಡುಕೂವೆ
ಬಟ್ಟೆ ತೋರಲು ಬಾ ಎನ್ನಯ್ಯ ॥ ೨೬

ನಾನಿಲ್ಲಿರುವೆ ಎಂದು। ದನಿಗೊಟ್ಟು ಕರೆದೆನ್ನ ಕಂ-।
ಬನ್ನಿಯ ತೊಡೆದು ತನ್ನ ನಿಜವ–ತೋರಿದ
ಎನ್ನ ದೇವನ ಪಾದ ಬಂತಿಲ್ಲಿಗೆ ॥ ೨೭

ನಡೆದು ಬಂದರೆ ಅರಿಯದ। ಕಡು ಮರುಳಿವನೆಂದು।
ಒಡೆಯ ಎನ್ನ ಮನದಿ ಎಚ್ಚರ–ಮಾಡಿದನು
ಮೃಡ ಕಪಿಲಸಿದ್ಧ ಮಲ್ಲಿನಾಥ ॥ ೨೮

ಆತನ ಅರಸೂತ। ಸೋತು ಮನದಿ ತಿರುಗಿ।
ಪ್ರೀತನ ಹೃದಯಮಧ್ಯದಿ–ಸ್ಥಲ ಕೊಟ್ಟು
ಓತು ನಾ ಇರಿಸಿ ಕೊಂಬೆನು ॥ ೨೯

ತನ್ನನರಿಸಿ ಬರುವನನು। ತಾನರಿಸಿ ಬರುವನು।
ಎನ್ನ ದೇವನೆಲ್ಲಿದ್ದನಲ್ಲಿಗೆ ಹೊಗಿ–ಬಾ ಎಂದು
ಮನದೋಳು ಅಚ್ಚೊತ್ತಿಕೊಂಬೆನು ॥ ೩೦

ಹುಡುಕೂತ ಹೋಗಾಗ। ಗುಡ್ಡರು ಕೇಳಿದರು।
ಒಡೆಯ ನಿಮಗಾತ ಸಿಗುವನೆ–ಆತನು
ಒಡಲಿದ್ದು ಕೈಗೆ ಸಿಗದವನು ॥ ೩೧

ಅವನಿದ್ದ ಗತಿಯಲ್ಲಿ । ಅವಧರಿಸಿ ನಾನಿರುವೆ ।
ಅವ ಸಿಂದನಿಲುವ ನಿಲುವೆನು-ದೇವನು
ಅವಮಾನಿಸಿ ಬಿಟ್ಟದ್ದು ಬಿಡುವೆನು ॥ ೩೨

ಆತನ ಬೆನ್ಹತ್ತಿ । ಸೋತು ಸಲ್ಲಿಸುವೆನು ।
ಓತು ಪ್ರಾಣ ಅವನ ಮೇಲಿಟ್ಟು-ನೆರೆವೆ
ಗತಿ ಮತಿ ಹಿತ ನೀನೆನ್ನುವೆ ॥ ೩೩

ಸೊಕ್ಕಿದಾನೆಯ ಹಿಡಿಯಲು । ಸೊಕ್ಕಿದಾನೆಯು ಬೇಕು ।
ಚೊಕ್ಕ ರೂಪವನೆ ಹಿಡಿಯಲು-ಅದರಂಥ
ಮಿಕ್ಕೀದ ರೂಪಾಗಿ ಹಿಡಿಬೇಕು ॥ ೩೪

ರೂಪಿಲ್ಲದಾತನಿಗೆ । ರೂಪೀಸಿ ಹಿಡೆಯುವೆನು ।
ಕಪಿಲಸಿದ್ಧ ಮಲ್ಲಿನಾಥನ-ನಿಲುವನು
ರೂಪಿಸಿ ಪಾದ ಹಿಡಿಯುವೆ ॥ ೩೫

ಹಿಡಿದು ಹತ್ತುವೆನು । ಹಿಡಿವೆ ಹತ್ತಿ ಮನಮುಟ್ಟಿ ।
ಹಿಡಿಯುವೆ ಮಹಾಪ್ರಂಚಡ-ಮನದಿಂದ
ಒಡೆಯ ಕಪಿಲಸಿದ್ಧ ಮಲ್ಲಯ್ಯನ ॥ ೩೬

ಗುಡ್ಡರು ಕೇಳಿದರು । ಒಡೆಯ ಸಿದ್ಧರಾಮನಿಗೆ ।
ಸುಡುವ ಅಂಗಾಲಗಣ್ಣಿನ-ಮಾಜ್ವಾಲೆಯ
ಒಡನೆ ನಿಲ್ಲಿಸುವ ಪರಿ ಎಂತು ॥ ೩೭

ತನ್ನ ಅಂಗಾಲ ಕೋಪವ । ಮನಕೆ ತಂದಿಟ್ಟವನ ।
ಮನದ ಕೋಪವ ಹೃದಯದಿ-ಇಟ್ಟವನ
ಘನ ಪಾದಕೆ ನೊಸಲವೃತ ತೀಡುವೆ ॥ ೩೮

ತಂಪೆಯ ಪಾದಕ್ಕೆನ್ನ । ತಂದು ನೊಸಲ ತಂಪು ತೀಡಿ ।
ಅಂದಾದ ನೊಸಲಾವೃತದಿ ಅವನ-ಮನವ
ಹೊಂದಿಸುವೆನು ಕಪಿಲಸಿದ್ಧನಲಿ ॥ ೩೯

ಗುಡ್ಡರಿಗೆ ಹೇಳುವಾಗ । ಒಡೆಯ ಪ್ರಭುವಿಗೆ ಕಂಡು ।
ನಡೆ ನೋಡುತ ಹರುಷಗೊಂಡನು-ಸಿದ್ಧರಾಮ
ಅಡಿ ಹಿಡಿದನು ಹೃದಯ ಉಕ್ಕೇರಿ ॥ ೪೦

ಅರಲುಗೊಂಡ ಕೆರೆಗೆ। ತೆರೆ ಬಂದು ಹಾಯ್ದಂತೆ।
ತೋರಿದ ನಿಮ್ಮ ರೂಪವ ಕಂಡು-ಕಂಗಳು
ಧಾರೆಗರೆದವು ದೇವ ತನ್ನ ತಾನೆ॥ ೪೧

ಮನಕೆ ಮನ ವೇದ್ಯವು। ಎನ ಕೈಯು ಮರೆವೆನೆಲೆ।
ನಿನ್ನ ಕಂಡ ಸುಖವು ಆರಾರಿಗು–ಇಲ್ಲವಯ್ಯ
ಎನ್ನ ಕಪಿಲಸಿದ್ಧ ಮಲ್ಲಿನಾಥ॥ ೪೨

ನಿಮ್ಮ ಕಂಡು ಕಂಗಳು। ಅಮ್ಮದೆ ಬೆದರಿದವು।
ಸ್ವಾಮಿ ಕೋಟಿಸೂರ್ಯತೇಜಕ್ಕೆ-ಅತೀತನು
ಕರ್ಮ ಉಂಟೆ ನಿನ್ನ ಕಂಡ ಬಳಿಕ॥ ೪೩

ಶಿರ ನಿಮ್ಮ ಚರಣಕ್ಕೆ।ಸ್ಪರ್ಶವಾದ ಬಳಿಕ।
ಅರಿಸುವರೆ ಗುಣ ದೋಷವೆನ್ನ-ಎನ್ನಯ್ಯ
ಪರಶಿವನೆ ತ್ರಾಹಿ ತ್ರಾಹಿ ಮಾಮ್॥ ೪೪

ಹರ ನಿಮ್ಮ ನಿಜದಂತವ। ಯಾರು ಬಲ್ಲರಯ್ಯ।
ಈರೇಳು ಭುವನಂಗಳೆಲ್ಲವು–ನಿಮ್ಮಯ
ಕರಸ್ಥಲದೊಳು ಅಡಗಿರುವವು॥ ೪೫

ನಿಮ್ಮ ಸಮ ಎನಿಸುವ। ಸ್ವಾಮಿಯು ದೇವರುಂಟೆ।
ನಿಮ್ಮ ಅಡಿಗೆ ಅನಂತ ದೇವರು–ಬಾಗಿ
ನಮಿಸುವರು ಭಯಬಕುತಿಯಲಿ॥ ೪೬

ಒಂದಿಪರ ಮುಕುಟಗಳು।ಒಂದಕ್ಕೊಂದು ಸಂಗಟ್ಟಿಸಿ।
ಅಂದಾದ ರಜತಗಿರಿಗೂಡಿತ್ತು-ದೇವರ ದೇವ
ತಂದೆ ನಿಮ್ಮ ಶ್ರೀ ಪಾದದ ಮುಂದೆ॥ ೪೭

ಹರಿಯು ನಿಮ್ಮಯ। ಚರಣವನರಿಯನು।
ವರ ಬ್ರಹ್ಮ ನಿಮ್ಮ ಮುಕುಟವ–ಅರಿಯನು
ಹಿರಿ ಯತಿ ಪ್ರತಿ ಋಷಿಗಳೆಲ್ಲರು॥ ೪೮

ಸಮಸ್ತ ದೇವತೆಗಳು। ನಿಮ್ಮ ರೋಮ ರೋಮಂಗಳ।
ಪ್ರಮಾಣವನ್ನರಿಯಲಾಗದು–ಕೋಟಿಸೂರ್ಯ
ನಿಮ್ಮ ಬೆಳಗ ಕಾಣಲರಿಯರು॥ ೪೯

ನೆನೆಸೂವೆ ಮರೆಸೂವೆ । ಗುಣ ದೋಷ ನಿಮ್ಮದೆ ।
ಎನ್ನ ಬಿನ್ನಪವ ಕೇಳಯ್ಯ–ನಿನ್ನ ನೆನೆವ
ನಾನಲ್ಲ ನಿಮ್ಮಿಂದ ನಿಮ್ಮ ನೆನೆಯುವೆ ॥ ೫೦

ಎನ್ನ ಕೈಗಳ ಬಿಚ್ಚಿ । ಮುನಿದು ಬೀಸಾಡಿದರೆ ।
ನಿನ್ನ ಪಾದವನು ಬಿಡಲಾರೆ-ಬಿಡಲಾರೆ
ಎನ್ನ ಮೈಗಳ ಕಡೆದು ಹರವಿದರೆ ॥ ೫೧

ಎನ್ನ ತನುವಳಿದರೆ । ನಿನ್ನಜ್ಞಾನ ತನುವಿಂದ ।
ಆನು ಹೊದ್ದುವೆ ಎನ್ನಯ್ಯ-ಕಪಿಲಸಿದ್ಧ
ಚೆನ್ನ ಮಲ್ಲಿಕಾರ್ಜುನ ತಂದೆ ॥ ೫೨

ಮಾಯಾ ಕೋಲಾಹಲನು । ರಾಮುನಿಗೆ ಹೇಳಿದನು ।
ಕಾಯಗೊಂಡ ಮಾನವರಂತೆ-ಕೈಗಳಿಗೆ
ಮಾಯಾತೀತನು ನಿಲುಕನು ॥ ೫೩

ಪ್ರಾಣಹಿಡಿದ ಜೀವರಂತೆ । ತಾಣಕ್ಕೆ ಎಳಸಿಲ್ಲ ।
ಕಾಣೆನೆಂಬರೆ ಕಂಣಳತೆಯಲ್ಲ-ಕೇಳೆನೆಂಬರೆ
ಸಂಣ ಕಿವಿಗಳ ಅಳವಲ್ಲ ॥ ೫೪

ಬರಿಯ ಸ್ತೋತ್ರಕ್ಕೆ । ಹರನ ನಿಲವು ಸಿಗುವದೆ ।
ತೋರ ಕಣ್ಣಿಗೆ ಕಾಣುವನನಲ್ಲ–ಗುಹೇಶ್ವರ
ಕರ್ಗಳಿಗೆ ಸಿಗಲು ದೇಹಿಯಲ್ಲ ॥ ೫೫

ನಡೆದರೆ ಗಮನಿಯಲ್ಲ । ನುಡಿದರೆ ವಾಚಾಳನಲ್ಲ ।
ಕಡು ನಿಂದಕರಿಗೆ ಹಗೆಯಲ್ಲ–ಗುಹೇಶ್ವರ
ಬಿಡದೆ ಹೊಗಳಲು ಕೆಳೆಯಲ್ಲ ॥ ೫೬

ಮಾರಹರನ ನಿಲವು । ಬರಿ ಮಾತಿನ ಮಾಲಿಂಗೆ ॥
ಮರುಳೆ ಸಿದ್ಧರಾಮ ಸಿಗುವುದೆ-ಹೇಳಯ್ಯ
ವರ ಗುಹೇಶ್ವರನ ನಿಲವ ನಿನ್ನ ॥ ೫೭

ಮೂರ್ತಿಯೆಂಬುದು ನಿನ್ನ । ಆರ್ತಿಲಿ ನೆನೆಯಲಾಯ್ತು ।
ಮೂರ್ತಿ ಎಂಬುದು ನಿನ್ನ ಸ್ವಭಾವ-ಹೇ ಪ್ರಭೊ
ಸ್ತೋತ್ರವು ನೀ ಮಾಡಲಾದವು ॥ ೫೮

ಹೃದಯಕಮಲದಿ ಎನ್ನ । ಉದಿಸುವ ಸ್ಮರಣೆಯ ।
ಅನುವೆ ನಿನ್ನ ಗತಿನೋಡಯ್ಯ-ಎಂತೊಲಿದೆ
ಮುದದಿ ಬಾಣ ಮಯೂರ ಹಲಾಯುಧರ ॥ ೫೯

ಸಿದ್ಧರಾಮನು ಹೇಳಿದ । ಬುದ್ಧಿವಾದವ ಕೇಳಿ ।
ವೃದು ವಚನ ರಚನೆ ಮಾತಿನ-ಬಂಣದ
ಸದ್ದುಗಾರಿಕೆ ಅಲ್ಲೆಂದು ಪ್ರಭು ಎಂದ ॥ ೬೦

ಹೊಗಳಿ ಕಂಡವರೆಲ್ಲ । ಮಿಗೆ ಮೂರ್ತಿಗೊಳಗಾದರು ।
ಸಾಗಿ ವೇದ ಶಾಸ್ತ್ರ ಮಾರ್ಗವೆಲ್ಲ-ಹೊಗಳಲು
ಸಿಗವೆಂಬುದು ತ್ರಿಲೋಕ ಬಲ್ಲದು ॥ ೬೧

ಬಿದ್ದು ಹೋಗಲು ಮಾತು । ಸಿದ್ಧೇಶ ನುಡಿದನು ।
ವೇದಪ್ರಿಯನಲ್ಲ ಎನದೇವ-ಶಾಸ್ತ್ರಪ್ರಿಯ
ನಾದಪ್ರಿಯ ಸ್ತೋತ್ರಪ್ರಿಯನಲ್ಲ ॥ ೬೨

ಯುಕ್ತಿ ಪ್ರಿಯನು ಅಲ್ಲ । ಮುಕ್ತಿಪ್ರಿಯನು ಅಲ್ಲ ।
ಶಕ್ತನೆಂದರೆ ನೀ ಅಸಾಧ್ಯ—ಮೊರೆಹೊಕ್ಕೆ
ಭಕ್ತಿಪ್ರಿಯನೆ ನೀ ಕಾಪಾಡು ॥ ೬೩

ಭಕ್ತಿಪ್ರಿಯನಾದರೆ । ಭಕ್ತ ನೀನಾದೆ ಅಯ್ಯ ।
ಭಕ್ತನ ಆಚಾರ ಬಲ್ಲಿಯಾ-ಎಂದನು
ಮುಕ್ತಾತೀತ ಅಲ್ಲಮ ಪ್ರಭು ॥ ೬೪

ನಿಜಭಕ್ತಿ ಬಲ್ಲವರು । ನಿಜಯುಕ್ತಿ ಬಲ್ಲವರು ।
ಸುಜನರಾರನು ನಾ ಕಾಣೆ-ತನ್ನ ಮರೆದು
ನಿಜವರಿದು ಇದಿರು ಹರಿದಡೆ ಭಕ್ತ ॥ ೬೫

ನುಡಿಯಲ್ಲಿ ಭಕ್ತಿಯು । ನಡೆಯಿಲ್ಲದಿದ್ದರೆ ।
ಕಡೆಮುಟ್ಟದು ಶಿವನೊಲಿವುದು-ಸಟೆಯು
ನುಡಿ ಗಡಣವೇಕೆ ಸಿದ್ಧರಾಮ ॥ ೬೬

ಮರೆದು ಅತಿ ಕೋಪದಿ । ಉರಿಯನೆ ಉಗುಳುತ ।
ಅರಿದು ಬಂದೆರಗಿದನೆಂಬ ಮಾತಿಗೆ-ಒಲಿವನೆ
ಪರಮ ಗುಹೇಶ್ವರ ಲಿಂಗವು ॥ ೬೭

ಪಾಹಿಮಾಮ್ ಪತಿತನೆ। ತ್ರಾಹಿ ಪ್ರಭುದೇವನೆ।
ಮಹಿಮನೆ ಎನ್ನ ಕೋಪವೆಂಬುದು-ನಿಮ ಕಂಡು
ಊಹಿಸದಿರಿ ನಾ ಏತರೊಳಗೇನು॥ ೬೮

ಜ್ಞಾನ ತೇಜದ ಮುಂದೆ। ನನ್ನಿರವು ಯಾತರದು।
ಎನ್ನ ದಿಟದ ಭಕ್ತಿ ನಿಮ್ಮರೂಪು-ಕಂಡಯ್ಯ
ಎನ್ನ ಸಟೆಯು ಭಕ್ತಿ ನಿಮ್ಮ ರೂಪು॥ ೬೯

ಬೇರೆ ಸ್ವತಂತ್ರವೆನಗೆ। ಇರುವದೆ ಎನ್ನಯ್ಯ।
ಕರುಣಿಸು ದೇವರ ದೇವನೆ–ಓ ತಂದೆ
ಪರಮ ಪಾವನ ಪ್ರಭುದೇವ॥ ೭೦

ಅರುವಿನೊಳಗೆ ಇಹುದು। ಹಿರಿಕೋಪ ತಾಪವು।
ವರ ಭಕ್ತಿ ಯುಕ್ತಿಯೆಂಬುದು–ನಿತ್ಯನೊಳಗೆ
ಅರಿಯಬೇಕು ಸಿದ್ಧರಾಮಯ್ಯ॥ ೭೧

ತನ್ನ ಭಾವದ ಬಗೆಗೆ। ಬಂಣವಿಟ್ಟುಕೊಂಡರೆ।
ಆ ನಿರ್ಭಾವಿಕಂಗೆ ಸಹಜವೆ–ಬಂದವರ
ಅನುವರಿಯಬೇಕು ವರಯೋಗಿ॥ ೭೨

ಶರಣರ ನಿಲವನು। ಅರಿಯದೆ ಸಂಶಯವ।
ಹರಿದು ನಂಬದೆ ಹೋದರೆ–ಹೋಗುವನು
ವರ ಗುಹೇಶ್ವರ ಹಿಂದುಮುಂದಾಗಿ॥ ೭೩

ಬಂದ ಪ್ರಭುದೇವರು। ಹಿಂದಿರುಗುವದು ಕೇಳಿ।
ನೊಂದುಕೊಂಡನು ಸಿದ್ಧರಾಮ–ಪ್ರಭುವಿನ
ಮುಂದೆ ಸಾಷ್ಟಾಂಗವೆರಗಿದನು। ೭೪

ಹಿರಿದು ಆಗ್ರಹದಿಂದ। ಹಗನೆ ಎನ ಮೇಲಿಟ್ಟು।
ಹೊರಟಿರುವಿ ಒಲ್ಲೆಂದು ಸಾರುತ–ಎನ್ನಯ್ಯ
ಗುರು ಅಲ್ಲಮ ಪ್ರಭುದೇವನೆ॥ ೭೫

ಹಿಡಿದರೆ ಕೈಗಳು। ಬಿಡಿಸಿ ಹೋಗುವಿಯೇನು।
ಬಡಹೃದಯದಿ ಅಪ್ಪಿಕೊಂಡಾನು–ಹಿಡಿದರೆ
ಒಡೆಯನೆ ಹಿಂದಿರುಗಿ ಹೋಗುವಿಯಾ॥ ೭೬

ಹೋಗುವ ಪರಿಯನು । ಸಾಗಿ ನಿಲಿಸುವೆನಯ್ಯ ।
ಬೇಗ ಸೂಕ್ಷ್ಮ ತನುವಿನಲ್ಲಿ–ಹಿಡಿದರೆ
ಹೋಗುವದೆಂತು ಮಲ್ಲೇಶನೆ ॥ ೨೭

ಸಿದ್ಧರಾಮುನಿಗಾಗ । ಮೋದದಿ ಪ್ರಭು ಎಂದನು ।
ಸಾಧಿಸಿ ಅಂಗದಲಪ್ಪಿದೆನೆನಲು–ಸಿಲುಕದು
ಅದು ಪ್ರಾಣದಲಪ್ಪುವದೆಂತು ॥ ೨೮

ಭಾವದಲಪ್ಪಿದೆನೆನಲು । ದೇವನು ಸಿಗಲಾರ ।
ಆವ ಸೂಕ್ಷ್ಮ ತನುವಿನ ಮನದ-ಕೊನೆಗೆ
ಭಾವಾತೀತನು ಅಲ್ಲಿ ಸಿಗಲಾರ ॥ ೨೯

ನಿರಾಕಾರದ ಘನವು । ಅರಿದು ಸುಜ್ಞಾನ ಮುಖಕೆ ।
ದೊರೆಯುವದು ಅಸಾಧ್ಯ ನೋಡಯ್ಯ–ನೀನಾವ
ಪರಿಯಿಂದ ತಡೆದು ನಿಲಿಸುವೆ ॥ ೩೦

ಗುರು ಪ್ರಭುರಾಯಗೆ । ನುರುಮಾತು ಹೇಳಿದನು ।
ಹರ ನೀನು ಎನ್ನಾಗಳೆ ಬಂದಿವಿಡದೆ–ನಿಮ್ಮನು
ಶರಣರು ಹಿಡಿದರೆ ಹಿಡಿವರಯ್ಯ ॥ ೩೧

ತನುವಿದ್ದು ತನು ಬೇರೆ । ಮನವಿದ್ದು ಮನ ಬೇರೆ ।
ತನ್ನ ಕೈಯಿದ್ದು ಕೈ ಬೇರೆಯಾದವರು–ಹಿಡಿವರು
ಕಣ್ಣಿದ್ದು ಕಣ್ಣು ಬೇರೆ ಆದವರು ॥ ೩೨

ಇಷ್ಟೆಲ್ಲ ಉಳ್ಳವರು । ಶ್ರೇಷ್ಠನೆ ನಿನ್ನ ಹಿಡಿಯರು ।
ಇಷ್ಟದೇವನೆ ನಿನ್ನ ತಡೆಯಲು–ಸಾಧ್ಯವೆ
ಸೃಷ್ಟಿಗೀಶನೆ ಕರುಣಿಸಿ ಬಾರಯ್ಯ ॥ ೩೩

ಬಡವನ ಮನೆಗೆ । ಒಡೆಯನೆ ನೀ ಬಾರಯ್ಯ ।
ಬೇಡುವೆನು ನಾನು ಸೆರಗೊಡ್ಡಿ–ಓ ತಂದೆ
ಅಡಿಯಿಡಬಾರಯ್ಯ ಮಠದೊಳು ॥ ೩೪

ಮಠನಾನ್ಯೆಯೆಂಬುವ । ಕೋಟಲೆಯೊಳಗಾಗಿ ।
ಹಠಯೋಗಿ ಬಳಲಬೇಡಿನ್ನು–ನಡೆ ಮುಂದೆ
ಮಠಮಾನ್ಯೆಗಳಾಚೆ ಕಲ್ಯಾಣ ॥ ೩೫

ಆಶೆಯು ಬಿಟ್ಟಿಲ್ಲ । ಪಾಶೆಯಿನ್ನು ಹರಿದಿಲ್ಲ ।
ಹೇಸಿ ಸಂಸಾರ ಬೆಳೆಯಿತು–ಸಿದ್ಧರಾಮ
ಕಾಸಿ ಪುಟಕಿಟ್ಟಿಲ್ಲ ಹೊನ್ನವ ॥ ೫೬

ಕರೆದರೆ ಸಿದ್ಧರಾಮು । ಬರಲಾರೆಂದನು ಪ್ರಭು ।
ಹರನಿಗ್ಧಠಾವಿನಲಿ ಭಕ್ತಿಲಿ–ಉಪಚರಿಸಿ
ಪರಿಣಾಮಿಸುವದು ನೀನರಿಯೆ ॥ ೫೭

ಮನೆ ಬಿಟ್ಟು ಊರದೂರ । ನೀನೊಂದು ಮಠ ಕಟ್ಟಿ ।
ಅಣಿಮಾದಿ ಸಿದ್ಧಿಗಳಕೈವಶ–ಮಾಡಿರುವಿ
ಕುಣಿಸುವಿ ಲೋಕದ ಜನಕೆಲ್ಲ ॥ ೫೮

ಗತಿಗೆಟ್ಟವ ನಾನಯ್ಯ । ಧೃತಿಗೆಟ್ಟವ ನಾನಯ್ಯ ।
ಮತಿಗೆಟ್ಟೆನು ಸಿದ್ಧರಾಮಯ್ಯ–ನಾನಿಂದು
ಸೋತಿಹೆನು ಅಲ್ಲಿಗೆ ಬರಲಾರೆ ॥ ೫೯

ನಡೆಯಲು ಶಕ್ತಿಯಿಲ್ಲ । ನುಡಿಯಲು ನಾಲಿಗಿಲ್ಲ ।
ನೋಡಯ್ಯ ಇನ್ನೊಬ್ಬರ ಉಪಚಾರ–ಸೇರದು
ಬಿಡು ಮಠಮಾನ್ಯೆಂಬ ಭ್ರಾಂತಿಯ ॥ ೬೦

ಬಂದ ಬರವನರಿದು । ನಿಂದ ನಿಲವನರಿದು ।
ಸಂದಿಲ್ಲವೆ ಕೂಡಬಲ್ಲರೆ–ಏಕಾಂತದ
ಸಂದೇಹ ಉಂಟೆ ಶರಣಂಗೆ ॥ ೬೧

ತೆರಹಿಲ್ಲದ ಘನವ । ವರವನೊಳಗೊಂಡೊಡೆ ।
ಬರಲೆಡೆ ಉಂಟೆ ಲಿಂಗಕ್ಕೆ–ಸಿದ್ಧರಾಮ
ಶರಣರ ಮಾರ್ಗವು ಒದಗಿಲ್ಲ ॥ ೬೨

ಇಂದು ಇಲ್ಲಿಗೆ ಬಂದು । ಮುಂದೆ ಬಾರದ ಕಂಡು ।
ನೊಂದು ಸಿದ್ಧರಾಮ ನುಡಿದನು–ಹೇ ಪ್ರಭೊ
ತಂದೆ ಕಾರಣ ತಿಳಿಯದು ॥ ೬೩

ತೆರಹಿಲ್ಲದ ಘನವು । ಕುರುಹಿಂಗೆ ಬಂದದ್ದು ।
ಕಾರಣ ಹೇಳೆನಗೆ ಓ ದೇವನೆ–ಕರುಣಿ
ತೆರಹುಂಟೆ ಬೇರೆ ಉಪಚಾರ ಕ್ರಮಕೆ ॥ ೬೪

ಅಂದು ಸಿದ್ಧರಾಮನಿಗೆ। ಅಂದನು ಪ್ರಭುದೇವ।
ಇಂದುಧರನು ಭಕ್ತನಿದ್ದಲ್ಲಿಗೆ-ಬಂದರೆ
ವಂದಿಸಿ ನಂಬಬೇಕು ನೋಡಯ್ಯ॥ ೯೦

ಕರ್ತನ ಕಂಡು ತಾ। ಭೃತ್ಯನು ಉಗುಳಿದರೆ।
ಕರ್ತನ ಕರ್ತೃತನ ಎಲ್ಲಿಹುದು-ಸಿದ್ಧರಾಮ
ಭೃತ್ಯ ಭಾವಕೆ ಸಂಬಂಧವೆಲ್ಲಿ॥ ೯೧

ತಪ್ಪಿತ ತಪ್ಪೂತ। ಒಪ್ಪಿ ತಿದ್ದಿದೆನೆಂದರೆ।
ತಪ್ಪು ಹಸನಾಗಬಲ್ಲದೆ-ಏ ಮರುಳೆ
ಒಪ್ಪುಳ್ಳ ಶರಣರನೆತ್ತ ಬಲ್ಲೆ॥ ೯೨

ನಡೆಯುವ ನಂದಿಯು। ನಡೆಯಲಿ ಕುಂಟುದುಂಟು।
ಒಡೆಯ ಪ್ರಭುದೇವ ನನ ತಪ್ಪು-ಮನ್ನಿಸು
ಬಡಕೂಸಿಗೆ ಇನ್ನು ರಕ್ಷಿಸು॥ ೯೩

ಭಯದಿಂದ ನಡುಗುತ। ನಯದಿಂದ ನುಡಿದನು।
ಜೀಯ ಪ್ರಭುದೇವ ಕೃಪೆ ಮಾಡು-ಎನ್ನುತ
ರಾಯ ಸಿದ್ಧರಾಮ ಪಾದ ಹಿಡಿದನು॥ ೯೪

ಸಂಧಿ ೨೪

ಎನ್ನಂತಸಂಗವನೊತ್ತಿ । ಸನ್ನುತನೆ ನೋಡುವಿ ।
ಎನ್ನಲೇನಿದೆ ನುಡಿಯಿಲ್ಲದಭವ-ನೀನು
ನಿನ್ನ ಒಪ್ಪಿಸಲಾನು ಸಮರ್ಥನೆ ॥ ೧

ವೇದಂಗಳೆಲ್ಲವು ನಿಮ್ಮ । ಮುಂನೆ ಉಸಿರು ಹಾಕಿ ।
ಒಂದರಿಯದೆ ಮೂಕಗೊಂಡಿಹವು-ನಿಮ್ಮನು
ಮಂದಮತಿ ಆನು ಉತ್ತರಿಸೆನು ॥ ೨

ಎನ್ನ ಕೆಟ್ಟ ಕೇಡಿಂಗೆ । ಏನೆಂಬೆ ಎಲೆಯಯ್ಯಾ ।
ನಾನು ಉಭಯ ಭ್ರಷ್ಟನೆಂಬುದು–ಬಲ್ಲಿರಿ
ಎನ್ನ ಕಪಿಲಸಿದ್ಧಮಲ್ಲಿನಾಥ ॥ ೩

ದರುಶನವಾದಾಗ । ಹರುಷದಿ ನಂಬಿ ನಚ್ಚಿ
ಶರಣು ಹೋಗಲು ಅರಿಯದೆ–ಕೆಟ್ಟೆನು
ಮರುವೆ ಅಹಂಕಾರ ಹೊತ್ತುಕೊಂಡು ॥ ೪

ನಿಮ್ಮ ಕೆಡಿಸಿ ಮರುಗಿ। ಕೆವ್ಮನೆ ಕೆಟ್ಟೆನು ದೇವ।
ನಿಮ್ಮ ಹುಡುಕೂತ ಕೊರಗೂವ-ಮರುಳನ
ಸ್ವಾಮಿ ಹಾಲಲದ್ದು ನೀರಲದ್ದು॥ ೫

ಎನ್ನ ಭರಭಾರ ನಿಮ್ಮದು। ಹಾನಿ ವೃದ್ಧಿಯು ನಿಮ್ಮದು
ಇನ್ನು ತರತರ ಕಾಡದಿರೆನ್ನ-ಓ ತಂದೆ
ನಿನ್ನ ಕಾಟ ಎನ್ನ ಪ್ರಾಣದೋಟ॥ ೬

ಗತಿ ನೀನೆ ಎನ್ನಯ್ಯ। ಮತಿ ನೀನೆ ಎನ್ನಯ್ಯ।
ಮತಿಗೇಡಿಗೆ ಕಾಯು ಕೊಲ್ಲು ನೀ-ನಿಮ್ಮ
ಸುತ ನಾನಯ್ಯ ನಿಮ್ಮ ಧರ್ಮ॥ ೭

ಕಡು ಶೋಕದಿ ಸಿದ್ಧೇಶ। ಅಡಿಹಿಡಿದು ಅಳುವಾಗ।
ಹಿಡಿದೆತ್ತಿದನು ಶಿರವ ಮೇಲಕ್ಕೆ-ಪ್ರೀತಿಯಲಿ
ಒಡೆಯ ಪ್ರಭುದೇವ ತಲೆದಡವಿ॥ ೮

ಹೊರಗಾಡಿ ಬಂದನೆಂದು। ಬಿರಿನುಡಿಯನೆ ಸುಮ್ಮನಾದೆ।
ಶರನ ಮನನೊಂದು ತಾಗಿದರೆ-ನಿಮ್ಮತ್ತ
ಚರಿಸುತ್ತ ಮುಂದೆ ಮುಂದಾದೆ॥ ೯

ಬಿಕ್ಕೂತ ಬೆದರೂತ। ಚಕ್ಕನೆ ಕಾಲ ಬಿದ್ದರೆ।
ಉಕ್ಕೂವ ಕಂಗಳ ಧಾರೆಯು-ಎರೆದರೆ
ಗಕ್ಕನೆ ಗುಹೇಶ್ವರ ಮೇಲೆತ್ತಿದನು॥ ೧೦

ಎನ್ನ ತನುನ ಕರಗಿ। ಮನ ಕೊರಗಿದ ದುಃಖವ।
ಎನ್ನ ಅಳುವ ದುಃಖ ಇದು ಯಾರದು-ಎಂದು
ಬಿನ್ನವಿಸಿದ ಶೋಕದಿ ಸಿದ್ಧರಾಮ॥ ೧೧

ದೇವ ದೇವನೆ ಎಂದು। ತವೆ ಅಳುವ ದುಃಖವು।
ದೇವ ನಿನ್ನದಲ್ಲದೆ ಯಾರದು-ಮರುವೆಂಬ
ಭವ ಕೂರಸಿಗೆ ಗುರಿ ಯಾರು ಗೈದರು॥ ೧೨

ಹಾ ಹಾ ಎಂಬ ಧ್ವನಿಯ। ಮಹಾಪ್ರಭು ಕೇಳಲಾರದೆ।
ಅಹಾ ಎನ್ನ ಕರುಣದಿ ಶಿರವಿಡಿದು-ಎತ್ತೂತ
ಮಹಾದೇವ ಕಣ್ಣೀರು ತೊಡೆದನು॥ ೧೩

ಬಿಂಕವು ಅಡಗಿದ । ಕಿಂಕುರವಾಣವ ಕಂಡು ।
ಅಂಕಿತ ಸಿದ್ಧರಾಮನ ಕಂಣೀರು–ತೊಡೆದು
ಶಂಕರ ಪ್ರಭುದೇವ ಬಣ್ಣಿಸುವ ॥ ೧೪

ಪರಮಯೋಗಿಯು ನೀನು । ಪರಮಾನಂದ ಯೋಗಿ ।
ಪರಿಪೂರ್ಣ ಸಚ್ಚಿದಾನಂದಯೋಗಿ–ಸಿದ್ಧರಾಮ
ನಿರಂಜನ ಶುದ್ಧ ಸಾತ್ವಿಕಯೋಗಿ ॥ ೧೫

ಶಿವಯೋಗಾಮೃತವ । ಸೇವ್ಯಸಂತುಷ್ಟ ಯೋಗಿ ।
ಸರ್ವೇಂದ್ರಿಯಸುಖ ನಿರ್ಮೂಲ-ಯೋಗೀಶ
ಭವನಾಶ ಸುಜ್ಞಾನ ಪ್ರಭಾಮಯನೆ ॥ ೧೬

ಮಾಯಾಹರ ಯೋಗೀಶ । ಮಾಯಾಮದ ದೂರನೆ ।
ಮಾಯಾಮದಮಥನ ಯೋಗೀಶ–ಸಿದ್ಧರಾಮ
ಕಾಯ ಗುಣ ಧರ್ಮ ಕರ್ಮ ಸಂಹಾರಿ ॥ ೧೭

ಸಗುಣ ಸನ್ನಿಧಾನನೆ । ನಿರ್ಗುಣ ನಿರವಯನೆ ।
ತ್ರಿಗುಣರಹಿತ ಸಕಲಕರಣಂಗಳ-ರಹಿತ
ಅಗಣಿತ ಸಿದ್ಧಿಗಳ ಯೋಗಿಯೆ ॥ ೧೮

ಅಪ್ರಮಾಣ ಗುಣಭರಿತ । ಅಪ್ರತರ್ಕ್ಯ ಚರಿತನೆ ।
ಸುಪ್ರಸಿದ್ಧ ಯೋಗಿಕುಲಕ್ಕೆ–ಚಕ್ರವರ್ತಿ
ಸುಪ್ರಭಾಮಯ ಮಾಯೋಗಿಯೆ ॥ ೧೯

ಅರುಹವೆ ಅಳವಟ್ಟು । ವರಕಳೆ ತುಂಬಿ ಬ್ರಹ್ಮಾಂಡ ।
ಈರೇಳು ಲೋಕ ಗತಿರಹಿತ-ಸಿದ್ಧರಾಮ
ವರ ನಿಷ್ಕಲತತ್ವ ಮಣಿಮುಕುಟ ॥ ೨೦

ಸನ್ನಹಿತ ನಿಮ್ಮಲ್ಲಿ । ಅನ್ಯವಿಲ್ಲದ ನಿಜವರಿತು ।
ನಿನ್ನ ಬೆರಸಿದ ಶಿವಯೋಗಿಯ-ಕಂಡರೆ
ಎನ್ನ ಮನ ಅಗಲಿ ಇರಲಾರದು ॥ ೨೧

ಎನ್ನ ತನು ಒಪ್ಪಿದೆ । ಭಿನ್ನವಾಗಿರಲಾರದು ।
ಎನ್ನ ಶಬುದ ಹೊಗಳದಲ್ಲದೆ–ಸ್ವೈರಿಸದು
ನಿನ್ನ ಶರಣ ಶಿವಯೋಗಿಗೆ ನಮೊ ॥ ೨೨

ಅಪ್ಪಿ ಸಿದ್ಧರಾಮನ। ಸೊಪ್ಪಳಿದು ನಮೊ ನಮೊ।
ಒಪ್ಪಾತ ನಾನು ಶರಣಾದೆ-ಗುಹೇಶ್ವರ
ಅಪ್ಪ ಸಿದ್ಧನ ಕಂಡು ಬದುಕಿದೆನು॥ ೨೩

ತನುವಿನೊಳು ಕರಣಿಲ್ಲ। ಪ್ರಾಣದೊಳು ಭಾವವಿಲ್ಲ।
ಅನ್ಯ ಭ್ರಮೆ ಭಾವದೊಳಗಿಲ್ಲ–ಸಿದ್ಧನಲಿ
ಮುನ್ನಿಲ್ಲ ನವನಾಳದೊಳು ಸುಳುಹು॥ ೨೪

ವರ ಬ್ರಹ್ಮರಂಧ್ರದಲಿ। ಅರಿವರತ ಶಿವಯೋಗಿ।
ಪರಮಯೋಗಿ ಸಿದ್ಧರಾಮನ–ಕಂಡೆನ್ನ
ಪರಿಹಾರವಾಯಿತು ಭವವೆಲ್ಲ॥ ೨೫

ಯೋಗ ಶಿವಯೋಗವೆಂಬರು। ಯೋಗದ ಹೊಲಬ।
ಹೇಗೆ ಬಲ್ಲರು ಹೃದಯಕಮಲ–ಪತ್ರದಿ
ಈಗ ಭ್ರಮಿಸುವನ ಕಳೆದಲ್ಲದೆ॥ ೨೬

ಐವತ್ತೆರಡಕ್ಷರದ। ತನೆ ಲಿಪಿ ನೋಡಿ ನೋಡಿ।
ಆರ ಆರು ನೆಲೆಯು ಮೇಲಿಪ್ಪ–ಮಣಿಮಾಡದಿ
ಸುವಿಶ್ರಮಿಸುವದೆ ಯೋಗವು॥ ೨೭

ಸೋಹಂವೆಂಬಲ್ಲಿ ಸು-। ಳುಹು ಮನ ನಾಶಿಸಿ।
ಗುಹೇಶ್ವರ ಲಿಂಗದಿ ಸ್ವತಂತ್ರನು–ಕಂಡು ನಿನ್ನ
ಅಹುದಹುದೆಂದೆನು ಸಿದ್ಧರಾಮು॥ ೨೮

ಹೀಗೆ ಪ್ರಭುದೇವರೆನಲು। ಯೋಗಿ ಸಿದ್ಧರಾಮನೆಂದ।
ಯೋಗದ ಹೊಲಬ ನಾನೆತ್ತ–ಬಲ್ಲೆನಯ್ಯ
ಯೋಗ ಶಿವ ಶಕ್ತಿ ಸಂಪುಟವಾಗದಿರೆ॥ ೨೯

ಶಿವ ಶಕ್ತಿ ವಿಯೋಗ। ಆವ ಯೋಗವು ಇಲ್ಲ।
ತವೆ ಹೃದಯಕಮಲದಿ ಭ್ರಮಿಸದೆ–ಇರುವ
ನೀವಲ್ಲದೆ ಬೇರೆ ಸ್ವತಂತ್ರವಿಲ್ಲ॥ ೩೦

ಅಯ್ಯಾ ನೀ ಉತ್ಪತ್ತಿ ಸ್ಥಿತಿ। ಲಯವಿಲ್ಲದಭವನು।
ಜೀಯಾ ಎನಗೆ ಬೇರೆ ಸ್ವತಂತ್ರವೆ- ನಾನಿಪ್ಪೆ
ಅಯ್ಯಾ ನಿಮ್ಮ ಇಚ್ಛಾಮಾತ್ರದಲ್ಲಿ॥ ೩೧

ಹಿರಿಯ ನೀನೆ ದೇವ। ಅರಿತನ ನೀ ಎನ್ನಯ್ಯ।
ಗುರುವೆ ನಾನೇತರೊಳಿರುವೆನು-ಹೇಳಾ
ಹರ ಕಪಿಲಸಿದ್ಧಮಲ್ಲಿನಾಥ॥ ೩೨

ಮನ ಸೋತು ಎಂದರು। ಘನ ಪ್ರಭುದೇವರು।
ಮನ ಮನ ಬೆರೆಸಿದವರ ಪರಿ-ಹಾಗೆಹೀಗೆ
ಅನಲಾಗದು ಕೇಳಾ ಸಿದ್ಧರಾಮ॥ ೩೩

ತನ್ನಿದಿರು ಇಚ್ಛೆಯನರಿಯರು। ತನ್ನೊಳಗೆ ನೋಡಲು।
ಭಿನ್ನವಳಿದು ಬಯಲೊಳಗಿಪ್ಪಗು-ಶರಣರು
ತಾನಿಲ್ಲವೆಂಬುದ ನಿನ್ನಿಂದರಿದೆ॥ ೩೪

ಅಪ್ಪಾ ಪ್ರಭುವೆ ಕೇಳು। ಅಪ್ಪುದನಲ್ಲದುದ।
ನೊಪ್ಪುವ ಮಾಡುವಿರಿ ನಿನ್ನೊಲವು-ಚೆಲುವು
ಅಪ್ಪಿದರೆ ನಿನಗಲ್ಲವೆಂಬುವರಿಲ್ಲ॥ ೩೫

ಪರತಂತ್ರ ಸ್ವತಂತ್ರದ। ಗುರುತ್ಹೇಳು ಸಿದ್ಧರಾಮ।
ಹರಿದು ತಾನೆಂಬುದು ಇದಿರು ಮರೆದು-ಭಾವ
ಕರಿಗೊಂಡಾಗಲೆ ಅದು ಸ್ವತಂತ್ರ॥ ೩೬

ನೀನೆಂಬುದು ಧಿಃಕ್ಕರಿಸಿ। ತಾನೆಂಬುದು ನಿಃಕರಿಸಿ।
ನಾನೀನೆಂಬ ಉಭಯ ಭಾವದಿ-ಪರತಂತ್ರ
ಸನ್ನಿಹಿತವಾಗಿರಬಲ್ಲರೆ॥ ೩೭

ವಿವರಿಸದೆ ಎರಡನ್ನು। ಅವು ಮರೆದು ಇರುವವ।
ಶಿವಶರಣ ದೇಹವಿಲ್ಲದ ನಿರ್ದೇಹಿ-ಎಂಬುವದು
ದೇವ ಸಿದ್ಧರಾಮ ನಾನಿಂದು ಕಂಡೆ॥ ೩೮

ಚಿತ್ತೈಸಿರೆಂದ ಸಿದ್ಧೇಶ। ಭಕ್ತಿಯಿಂದ ಪ್ರಭುವಿಗೆ।
ಮಾತುಳ್ಳನಕ್ಕರ ದೇಹ ಹಿಂಗದು-ಪ್ರಾಣ
ಸೂತಕ ಬಿಡದು ನೆನಪಿರುವತನಕ॥ ೩೯

ಕರು ಜೀವದ ಹೊಲಿಗೆ। ಜೀವು ಬಿಕ್ಕಲಾಯಿತೆನು।
ಅಯ್ಯಾ ಆನು ನೀರ್ದೇಹಿ ಎಂದರೆ-ನಗುವರು
ಕಾಯಾತೀತ ನಿಮ್ಮ ಶರಣರು॥ ೪೦

ಎನ್ನ ಅಂತರಂಗದ। ಹೀನ ಗುಣವ ಹಿಂಗಿಸಿ।
ನಿನ್ನಂತೆ ಮಾಡಿದರಾನು ಉಳಿವೆ-ಬೇರೆ ಗತಿ
ಕಾಣೆನು ಕಪಿಲಸಿದ್ಧಮಲ್ಲಿನಾಥ॥ ೪೧

ಬಿನ್ನಹಕೆ ಪ್ರಭುದೇವ। ಮನವಾರೆ ಮೆಚ್ಚಿದನು।
ತಾನು ಕೈವಿಡಿದು ಹೊರಟನು-ಸಿದ್ಧೇಶ
ಘನ ಏಕಾಂತ ಸಮಾಧಿಸ್ಥಲಕೆ॥ ೪೨

ಇಂತಿಹುದು ಭಕ್ತಿ ಭಜನೆ। ಅಂತರಂಗದರುವಿಂಗೆ।
ಸ್ವಂತ ಆಚಾರವೆ ಕಾಯನೋಡ-ಇಲ್ಲದಿರೆ
ಎಂತಿಹುದು ಅರುವಿಂಗೆ ಆಶ್ರಯವು॥ ೪೩

ಅರಿವು ಆಚಾರದಲಿ। ವರ ಸಮವೇಧಿಸಿದ।
ಪರಮ ಲಿಂಗೈಕ್ಯಂಗೆ ಕ್ರಿಯಾಬದ್ಧ-ನೆಂದರೆ
ಬಾರದೆ ಪಂಚ ಮಹಾಪಾತಕ॥ ೪೪

ನಿನ್ನರುವಿಂಗೆ ಅಚ್ಚಾಗಿ। ನಿನ್ನ ಆಚಾರಕೆ ಆಳಾಗಿ।
ನಿನ್ನ ಕೈವಶಕೆ ಗುಹೇಶ್ವರನು-ಒಳಗಾದ
ನಿನ್ನ ಸುಖಸಮಾಧಿ ತೋರು ಸಿದ್ಧೇಶ॥ ೪೫

ಹರುಷಗೊಂಡು ಪ್ರಭು। ಕರವಿಡಿದು ನಡೆದಾಗ।
ಪರಮಾನಂದದಿ ಯೋಗಿ ನುಡಿದನು-ನನ ನಲ್ಲ
ವರಿಸಲು ಒಲಿದು ಒಲಿಸಿ ಬಂದನು॥ ೪೬

ಬಾರೊ ಬಾರೆಂದು ಎನ್ನ। ಕರಣ ಹರಣ ತೊರಲು।
ವರನು ಒಲಿದು ಬಂದು ಶಿರವಿಡಿದು-ಮೇಲೆತ್ತಿ
ಹರನು ಎನ್ನ ಮನೆಗೆ ಬಂದನು॥ ೪೭

ಕೃಪೆಮಾಡಿ ಬಂದೆಲ್ಲೊ। ರೂಪವಿಡುದು ಮಠಕೆ।
ಉಪಮಿಸಬಾರದ ನಿನ್ನೊಲುಮೆ-ಎಂದನು
ಅಪ್ಪ ಸಿದ್ಧರಾಮ ಪ್ರಭುದೇವಂಗೆ॥ ೪೮

ಬಂದು ಅಂಗವಳಿದು। ನಿಂದವನ ನಾನರಿಯೆ।
ಸಂದವಸೆಂದು ಘನಲಿಂಗದಲಿ-ಅರಿಯೆ
ಬಂದ ವೇಷವ ನಿಂದ ಠಾವವ॥ ೪೯

ಕ್ರೋಧವೆಂಬ ಸಂಸಾರದ । ಅದು ಸಾಗರದಲ್ಲಿ ಸಾಧನೆ ।
ವಿಧ ವಿಧದಿಂದ ಮಾಡಲು–ಪ್ರಭುವಿನ
ಸಾಧಿಪ ಸುಳುಹು ಅಘಟಿತವಾಗಿ ॥ ೫೦

ಸಿದ್ಧರಾಮನು ತನ್ನ । ಹೃದಯಕಮಲದ ।
ಮಧ್ಯದಿ ಸಿಂಹಾಸನ ಹಾಕಿ–ಮಾಡಿದನು
ಮೋದದಿ ಪ್ರಭುವಿನ ಪಾದಪೂಜೆ ॥ ೫೧

ನೀನು ಬಾರದಿದ್ದರೆ । ನಾನ್ಹಂಬಲಿಸುತಿದ್ದೆ ।
ನೀನೆನ್ನಂಬಲ ಕೇಳಿ ಕರುಣದಿ–ಬಂದರೆ
ಆನು ತಳವೆಳಗಾಗಿ ಇರುವೆನು ॥ ೫೨

ಅವಗುಣವೆಂಬುವ । ತವೆ ರಜವನೆ ಕಳೆದು ।
ದೇವನಿಗೆ ಕಂಬಳಿಯ ಪೀಠವ–ಹಾಸದೆ
ಭಾವದಿ ಹಾಸಿದೆ ಹೃದಯಪೀಠ ॥ ೫೩

ಮೇಲ ಉಪ್ಪರಿಗೆಯು । ಸಲೆ ಒರತೆಯನು ತಂದು ।
ಮಾಲಿಂಗನ ಪಾದ ಪೂಜೆಗೆ–ಕಮಳದ
ಚಲುವ ಎರಡೆಸಳು ಪಾದಕ್ಕೆ ॥ ೫೪

ಕಂಗಳ ತಿರುಳ ತಗೆದು । ಮಂಗಳಾರತಿ ಯನೆತ್ತಿ ।
ಪಿಂಗದೆ ಉಸಿರು ನುಂಗಿದ ಪರಿಮಳ-ಧೂಪವ
ಮಂಗಳ ಪ್ರಭುವಿಗೆ ಬೀಸಿದೆನು ॥ ೫೫

ನೆತ್ತಿ ಪರಿಯಾಣದೊಳಿಟ್ಟು । ಉತ್ತಮ ಬೋನವನು ।
ಎತ್ತಿ ಸಮೂಹಿಸಿದರೆ ಸಯದಾನ-ಸವೆಯದೆ
ಸತ್ಯ ಮೂರುತಿಗೆ ಆರೋಗಣೆ ಮಾಡಿದೆ ॥ ೫೬

ಉಂಡ ಬಾಯ ತೊಳೆದರೆ । ಕಂಡು ಸಂದೇಹವಾದಿತೆಂದು ।
ಕೊಂಡು ಮೇಲ್ಸೆರಗಿನೊಳು ತೊಡೆದು-ಬಾಯಿಮುಚ್ಚಳ
ಗಂಡ ತಗೆಯದೆ ತ್ರಿಕರಣ ತಾಂಬೂಲಸೇವಿಸಿ ॥ ೫೭

ಭಾವದ ಕನ್ನಡವ । ತವೆ ಹರಿದು ಹಾ ಇಕ್ಕದ ।
ದೇವನ ಪಾದಕೆ ಶರಣೆಂದು–ಪಾದೋದಕ
ಸೇವಿಸಿ ಆನು ಬದುಕಿದೆನು ॥ ೫೮

ಆತನ ಪ್ರಸಾದಕೆ । ಓತು ಸೆರಗನ ಹಾಸಿ ।
ಪ್ರೀತನ ಆರೋಗಿಸಿ ಸುಖಿಯಾದೆ–ಪ್ರಭು
ಎತ್ತಿಡಿದ ಕರುಣೆಯ ಬಣ್ಣಿಸೆನು ॥ ೫೯

ಆದಿಯಿಂದ ನಿಮ್ಮಿಂದ । ಆನೆನಯ್ಯ ಪ್ರಭುವೆ ಅ- ।
ನಾದಿಯಲ್ಲಿ ನಿನ್ನಲ್ಲಿ ತದಗತ–ಆಗಿರುವೆ
ಬೋಧಿಸಿ ಸಲುಪಯ್ಯ ಕಂದನನು ॥ ೬೦

ನಿಮ್ಮ ಹಸ್ತ ಮುಟ್ಟಿದಲ್ಲಿ । ನಿಮ್ಮನೆನ್ನ ಮನದೊಳು ।
ಒಮ್ಮನದಿ ಇಟ್ಟುಕೊಂಬೆನು–ಕಾಯವೆಂಬ
ಹಮ್ಮಿನ ಕಪಟವನೊಡ್ಡುತ ॥ ೬೧

ನಿನ್ನ ಮರುವೆಯಾಗಲು । ನಿನ್ನ ಬೆಂಬಳಿಯ ಸಂದು ।
ನಿನ್ನ ಕಂಡೆನಯ್ಯ ಅಂತರಂಗನ–ಶುದ್ಧವಿಸಿ
ಎನಗೆ ತಿಳಿಸು ದೇವ ನಿಮ್ಮ ಧರ್ಮ ॥ ೬೨

ಸಿದ್ಧರಸ ಕೇಳಲಾಗ । ಬೋಧಿಸಿದನು ಪ್ರಭು ।
ಆದಿಯಲ್ಲಿ ಗುರು ಬೀಜವಾದ–ಪಿಂಡಕ್ಕೆ ಅ-
ನಾದಿಯೆಂಬುವನೊಬ್ಬ ತಿಳುಹಲುಂಟೆ ॥ ೬೩

ಆದಿಕಾಯವನು ಅ- । ನಾದಿ ಪ್ರಾಣವಾಗಿಪ್ಪ ।
ಭೇದಿಸಿ ಯೋಗನ ತನ್ನೊಳು ತಾನೆ–ನೋಡಲು
ಸಾಧಿಸಿ ತಿಳಿಯಲು ಕೋಹಂ ತಾ ಸತ್ಯ ॥ ೬೪

ತಿಳಿದು ಲಿಂಗದ ನಿಲವು । ಹೇಳಿಕಂಡಿಹೆನೆಂದರೆ ।
ಕೇಳಾ ಅಸಾಧ್ಯವದು ಸಿದ್ಧರಾಮ–ಎನ್ನಲು
ಕೇಳಿದನು ಸಿದ್ಧರಾಮ ಪ್ರಭುವಿಂಗೆ ॥ ೬೫

ನಿನ್ನ ಬೆಳಗಿನ ಪರಿಯ । ಆನು ಹೇಳುವೆ ಕೇಳು ।
ನಾನಾರೆಂಬುದು ತಿಳಿದು ಕಂಡು–ಬೆಳಗು
ತಾನು ಕಾಣುವ ಪರಿ ಎಂತು ಹೇಳು ॥ ೬೬

ಅಯ್ಯ ಕಂಡುದು ಕಂಡು । ಕಾಯಮೊಳು ಸಂತವಿಡುವ ।
ಅಯ್ಯ ಪರಿ ಎಂತು ನೀನೆನ್ನ ಮನವ–ತಿಳಿದರೆ
ಜೀಯ ಅಸಾಧ್ಯವೆ ದೇವರ ದೇವ ॥ ೬೭

ಸಿದ್ಧರಾಮನಿಗಾಗ । ಬೋಧಿಸಿದ ಪ್ರಭುದೇವ ।
ಸಾಧಿಸಿ ತಿಳಿಲಿಲ್ಲ ಎಂಬುದು-ನಿನ್ನ ನೀ
ಸಿದ್ಧರಾಮ ತಿಳಿದು ನೋಡಯ್ಯ ॥ ೬೮

ತನ್ನನರಿಯೆನೆಂಬುದು । ಮುನ್ನಿನ ಅಜ್ಞಾನ ನೋಡಾ ।
ತನ್ನನರಿಯದ ಅಜ್ಞಾನ ಅತಿಗಳೆದು-ಜ್ಞಾನವ
ಕಾಣೆನೆಂಬುದು ವಿಪರೀತ ಭಾವ ॥ ೬೯

ಎಲ್ಲವನು ತೋರುವ । ಬಲ್ಲಹನ ಘನವನು ।
ಎಲ್ಲಿಯು ಕಾಣಬಾರದು-ಕಾಣದಿರುವ
ಒಲುವಿನ ನಿಜ ತೋರಬಾರದು ॥ ೭೦

ತೋರಬಾರದ ಮಹವ । ಯಾರು ತಿಳಿಯಲು ಸಾಧ್ಯ ।
ವರಲಿಂಗದಿ ಬಯಕೆ ಇರುವನಕ-ತವಕದ
ಕಾರಣ ತಿಳಿಸದ ನಿನ್ನ ನೀ ತಿಳಿಯೊ ॥ ೭೧

ಒಡೆಯ ಪ್ರಭುದೇವಂಗೆ । ನುಡಿದನು ಸಿದ್ಧರಾಮ ।
ಕಂಡ ಕನಸು ದಿಟವಾಗಿ ಕಾಣಲು-ಕಂಡೆನೆಂಬುದು
ಬಿಡದೆ ಬೆನ್ನಹತ್ತುವದು ನೋಡಯ್ಯ ॥ ೭೨

ಕಂಡುದ ಕಾಣೆನೆಂಬುದ । ಬಿಡದೆಡನು ಅರಿಯದೆ ।
ಎಡೆಯಾದೆನು ತವಕ ತಲ್ಲಣಕೆ-ನಿಮ್ಮಲ್ಲಿ
ಗಡ ಕೂಟ ತದುಗತವಾದೆನು ॥ ೭೩

ಕೂಡಿದೆನೆನ್ನಲು ಸಿದ್ಧೇಶ । ನುಡಿದನು ಪ್ರಭುದೇವ ।
ಕಡು ಬಯಕೆಯದು ದೂರದ-ಕೂಟ-ಬಯಸಿದ್ದು
ಕೂಡುವ ಕೂಟದ ಸಂದು ನೋಡಯ್ಯ ॥ ೭೪

ಭಿನ್ನಭಯ ಕಪಟದ । ಕನ್ನಡಲ್ಲದೆ ಸಹಜಲ್ಲ ।
ಇನ್ನೆಲ್ಲಿವುದು ಕೂಡಿ ಕಂಡ ಪರಿ-ಹೇಳಾ
ಇನ್ನು ಲಿಂಗೈಕ್ಯವದು ಎಲ್ಲಿಹುದು ॥ ೭೫

ನಲ್ಲತನ ಠಾವಿನಲ್ಲಿ । ಅಲ್ಲಿಯೆ ಪರವಶವಾದೆಂಬ ।
ಮೆಲ್ಲನೆ ನುಡಿದರೆ ಗುಹೇಶ್ವರ-ಮೆಚ್ಚುವನೆ
ಬಲ್ಲ ಸಿದ್ಧರಾಮನೆ ತಿಳಿದು ನೋಡು ॥ ೭೬

ಅಲ್ಲಮಪ್ರಭುವಿಂಗೆ । ಒಲಿದು ಸಿದ್ಧರಾಮನೆಂದನು ।
ನಲ್ಲ ನೀನಾದಲ್ಲಿ ನಲ್ಲನೆ ನೋಡಾ–ದೇವ ನೀ
ಒಲ್ಲದಿದ್ದರೆ ಆನು ಒಲ್ಲೆನಯ್ಯ ॥ ೨೭

ಅರಿವು ಎನ್ನ ಮರವು । ಸರಿಸಮ ನಮ್ಮಿಬ್ಬರಿಗು ।
ಇರುವ ಬಯಕೆಯಲ್ಲಿಯ ಬಯಕೆಯ–ನಿಧಾನವ
ಅರಿತೆನು ಬಯಸುವಾತನು ನೀನೆಂದು ॥ ೨೮

ಮಾಯಾ ಕೋಲಾಹಲನು । ರಾಯ ಸಿದ್ಧ ಕೇಳೆಂದ ।
ಬಯಸುವ ಬಯಕೆ ನೀನಾದ–ಪರಿ ಎಂತು
ಅಯ್ಯ ಅರಿಸುವ ಅರಿಕೆ ನೀನೆಂತು ॥ ೨೯

ತನ್ನ ಕಾಯವೆ ಲಿಂಗ । ಪ್ರಾಣವೆ ಶರಣನಾದ ।
ಉನ್ನತ ಶರಣಂಗೆ ದೇವಾಲಯ–ಮಾಡಿಪುದೆ
ಭಿನ್ನತ್ವ ಉಂಟೆ ಶರಣನಲ್ಲಿ ॥ ೩೦

ಲಿಂಗ ಸಾಧ್ಯವಾದದ್ದು । ಪಿಂಗವೆ ನಿನ್ನ ಮಾತಿನ ।
ಸಂಗತಿ ಕಂಡೆನಲ್ಲವೆ ಕಾರ್ಯದಲಿ–ಕಾಣೆನು
ತುಂಗ ಯೋಗಿ ಸಿದ್ಧರಾಮಯ್ಯ ॥ ೩೧

ಸಿದ್ಧರಾಮದೇವನು । ಎಂದನು ಹೇ ಪ್ರಭುವೆ ।
ಸಂದಿಲ್ಲ ಅಣುವಿನೊಳು ಅಣುವಾಗಿ–ಇರುವಿ
ಅಂದಾದ ಮನದೊಳು ಘನವಾಗಿ ॥ ೩೨

ಜಗದೊಳಗಲ್ಲೆಲ್ಲಿಯು । ಅಗಣಿತವಾಗಿರುವಿ ನೀ ।
ಮಿಗೆ ಎಂಭತ್ತುನಾಲ್ಕು ಲಕ್ಷದೇಗುಲ ಮಾಡಿ
ದೇಗುಲದೊಳಗಿಪ್ಪುದು ನೋಡಿ ಮಾಡಿದೆ ॥ ೩೩

ಎಳ್ಳಿನ ಮೊನೆಯೊಳಗೆ । ಮುಳ್ಳಿನ ಕೊನೆ ಮೇಲೆ ।
ಪಳ್ಳ ತುಂಬೆಲ್ಲ ಒಳಹೊರಗೆ–ನಿಮ್ಮಿರವು
ಸುಳ್ಳೇನು ಪ್ರಭುವೆ ಅರುಹಿರಿ ॥ ೩೪

ನುಡಿ ಕೇಳಿ ಸಿದ್ಧೇಶನ । ಒಡೆಯ ಪ್ರಭು ಎಂದನು ।
ಕಡೆನಾಡ ಲಿಂಗವ ನಡುನಾಡಿಗೆ–ತಂದೆಂಬ
ಕಡು ಅಹಂಕಾರ ಮುಂದುಗೊಂಡಿತ್ತು ॥ ೩೫

ಎಂಬತ್ತು ನಾಲ್ಕು ಲಕ್ಷ । ಇಂಬು ಶಿವಾಲಯವೆಂಬ ।
ತುಂಬಿವೆ ಬಯಲಭ್ರಮೆ ಇವೇನೊ–ಮಾಘನ
ಸಾಂಬಗೇ ಜೀವರಾಶಿ ದೇವಾಲಯವೆ ॥ ೮೬

ನಿನ್ನ ಲಕ್ಷದ ಮೇಲೆ । ಇನ್ನು ತೊಂಭತ್ತಾರು ಸಾಸಿರ ।
ಸನ್ನುತ ಲಿಂಗ ನಿನ್ನ ಎದೆಯಲ್ಲಿ-ಇರಿಸಿಕೊ
ನಿನ್ನ ತಪ್ಪಿಸಿ ಹೋದುದು ಮರತೆಯಲ್ಲ ॥ ೮೭

ಏಕೊಭಾವದಿ ಸಿದ್ಧೇಶನು । ಲೋಕೇಶನಿಗೆಂದನು ।
ಸಕಲ ಲಿಂಗವ ಹಿಡಿದು ಅಗಲದೆ-ನಡೆಯನಲು
ಜಪ್ಪಕಿಲಿ ನಡೆಯುತ್ತಿರುವೆನು ದೇವಾ ॥ ೮೮

ಲಿಂಗ ಪ್ರತಿಷ್ಠೆಯನು । ಪಿಂಗದಲೆ ಮಾಡೆಂದು ।
ಜಂಗಮ ನಿರುಪಿಸಿದ ಕಾರಣ–ಮಾಡಿದೆ
ಮಂಗಳಮಯ ಎನಗೆ ಸ್ವತಂತ್ರವೆ ॥ ೮೯

ದೇಗುಲ ಕಟ್ಟಿಸುತ । ಸಾಗಿಸು ವ್ರತಗಳನು ।
ಯೋಗಾಭ್ಯಾಸವ ಮಾಡೆಂನು–ಅರುಹಿದಿ
ಆಗ ಮಲ್ಲಯ್ಯನ ರೂಪದಲಿ ॥ ೯೦

ಸಕಲ ಲಿಂಗದೊಳು । ಏಕೊಭಾವದಿ ಇರು ಎಂದು ।
ಯಾಕೆ ತಿಳಿಸಿರುವಿ ದೇವನೆ-ಇನ್ನು ಮುಂದೆ
ಸಾಕೆಂದರೆ ನಡೆಸು ಕೈ ಹಿಡಿದು ॥ ೯೧

ಹಿಂದೆ ಕೊಟ್ಟ ನಿರೂಪ । ಇಂದು ಹುಸಿಯಾದರೆ ।
ಮುಂದೆ ನಿಮ್ಮನು ಸ್ವಯವಪ್ಪಂತೆ-ನಡೆಸು
ಇಂದುಧರ ಕಪಿಲಸಿದ್ಧ ಮಲ್ಲಯ್ಯ ॥ ೯೨

ಪರಮ ಪ್ರಭುದೇವ । ಅರುಹಿದ ಸಿದ್ಧರಾಮಗೆ ।
ಕೆರೆ ದೇಗುಲಂಗಳು ಹಿಂದಣ–ಅಜ್ಞಿವಜ್ಜೆಗೆ
ತೋರಿಕೆಯ ರೂಪು ಕಾಣಯ್ಯ ॥ ೯೩

ಈ ಕರ್ಮಕಾಂಡ ಯೋಗ। ನೂಕುವದು ಭವದೊಳು ।
ಜಪ್ಪಕೀಲಿ ಹಿಂದಣ ಮುಂದಣ-ಸಂದಳಿದು
ಏಕ ಆಗಬೇಕು ಮಹಾಲಿಂಗದೊಳು ॥ ೯೪

ಹಸನಮಾಡದನ ಹೊಲನೆಲ । ಹಸಿರು ಬೆಳೆ ಬೆಳೆವುದೆ ।
ಅಶನವ ಬೇಯಿಸನೆ ಉಂಣಲು–ಸಾಧ್ಯವೆ
ಆಸರವಾವುದು ಮಾಲಿಂಗಕ್ಕೆ ॥ ೯೫

ಕರ್ಮಯೋಗ ಮಾಡದೆ । ನಿರ್ಮಲವಾಗದು ಚಿತ್ತ ।
ಮರ್ಮವ ಅರಿಯುವ ಪರಿಹೇಳಾ–ಹೇ ಪ್ರಭೊ
ಧರ್ಮದ ಮಗನಾನು ನಿಮ್ಮವ ॥ ೯೬

ನುಡಿದರು ಪ್ರಭುದೇವ । ಬಿಡು ಕರ್ಮಕಾಂಡವನು ।
ಮಾಡುತ ಕರ್ಮವೆ ಪ್ರಾಣವೆಂದು–ಜ್ಞಾನನರಿವ
ಕಡು ನೆಲೆ ಶುದ್ಧ ಇನ್ನಾವುದು ॥ ೯೭

ಸಾಯುವನಕ ಯೋಗ । ಕಾಯ ಸಾಧನೆ ಮಾಡಿ ।
ಜೀಯನ ಕಾಣುವ ಠಾವಾವುದು–ಸಿದ್ಧರಾ-
ಮಯ್ಯ ಅರಿದುದನೇತಿಗಳಿಬೇಕು ॥ ೯೮

ಮೊಟ್ಟ ಮೇಲರಿವುದ । ಸುಟ್ಟು ಕರಿಗೊಳುತ್ತ ।
ಹೊಟ್ಟು ಕಳೆದ ಅಕ್ಕಿಯಾದಂತೆ–ಕಾಯದ
ಬಿಟ್ಟು ಅವಗುಣ ಶುದ್ಧಗೊಳಬೇಕು ॥ ೯೯

—

ಸಂಧಿ ೨೫

ಪರಮ ಪ್ರಭುದೇವನೆ। ನಿರುಪಿಸುವುದು ಎನಗೆ।
ಕರದೋಳು ಲಿಂಗವ ಪಿಡಿದು–ಲಿಂಗವ
ನಿರೀಕ್ಷಿಸುವುದು ಕರ್ಮಪೂಜೆಯಲ್ಲವೆ॥ ೧

ಕರದಲ್ಲಿ ಲಿಂಗ ಹಿಡಿದು। ಹರನ ಮನದಲ್ಲಿ ನೆನೆದು।
ವರಪೂಜೆ ಕಾಯದ ಕರ್ಮವಲ್ಲವೆ–ಭಾವಶುದ್ಧ
ಅರಿವ ಪರಿ ಇನ್ನಾವುದು ಹೇಳಯ್ಯಾ॥ ೨

ಚಿನ್ನವರಿಗ್ಗಚ್ಚುವರು। ಬಣ್ಣಕ್ಕೊರೆಗ್ಗಚ್ಚುವರೆ।
ಚಿನ್ನ ಹೂ ಮುಡಿಬಹುದಲ್ಲದೆ–ಗಂಧಕ್ಕೆ
ಇನ್ನ್ಯಾರು ಮುಡಿವರು ಸಿದ್ಧರಾಮ॥ ೩

ಮಾತಬಹುದು ಕರ್ಮ। ನೋಡಿ ಅರಿವುದೆ ವಸ್ತು।
ಮೃಡನೆನಬಹುದಲ್ಲವೇ–ಸಿದ್ಧರಾಮ
ನೋಡಯ್ಯ ಲಿಂಗ ತಾನಾಗಬಾರದು॥ ೪

ಉತ್ತರಿಸಿದ ಸಿದ್ಧರಾಮ । ಚಿತ್ತದ ಒಡೆಯನಿಗೆ ॥
ಉತ್ತಮ ಬಣ್ಣವು ಇಲ್ಲದಿರೆ–ಚಿನ್ನಕ್ಕೆ
ಇತ್ತವರಾರು ಆ ಹೆಸರನ್ನ ॥ ೫

ಕುಸುಮವು ಒಣಗಲು । ವಾಸನೆ ಮುಡಿದಲ್ಲಿ ।
ಮೂಸಲು ತಿಳಿವಂತೆ ಕ್ರೀಶುದ್ಧ–ಆದಲ್ಲಿ
ವಸುಧೀಶ ಭಾವ ಶುದ್ಧವಾಗಿರ್ಪನು ॥ ೬

ಯೋಗಿ ಸಿದ್ಧರಾಮಯ್ಯ । ರಾಗೆಹೋಗಿ ತಾಮಸ ನಿಂದು ।
ಬೇಗ ಅಹಂಕಾರದ ಗಿರಿಯುಡುಗಿ–ಮಾತಿನ
ವೇಗದ ಬಣವೆಯ ಮೆದೆ ಸುಟ್ಟು ॥ ೭

ಕರ್ಮದಲ್ಲಿ ಕಾಯುವನು । ಮರ್ಮ ತಿಳಿಯದೆ ಸವಿದು ।
ಕಾರ್ಮಿಕ ಜೀವ ಸಕಲ ಸಂಸಾರದಿ–ನೋಯುತ್ತ
ಕರ್ಮಕಾಂಡಿಯ ಭಾವ ಶುದ್ಧವುಂಟೆ ॥ ೮

ಒಡೆಯ ಪ್ರಭುದೇವನೆ । ನುಡಿಯುವೆ ಕೇಳಯ್ಯ ।
ನುಡಿದಿಹೆನೆಂಬ ಉಲುಹಿನ–ಬಿಡದು
ನೋಡಯ್ಯ ಗಲಭೆಯ ಜಗಳ ॥ ೯

ಉತ್ತಮ ಮಧ್ಯಮನೆಂಬ । ಈತ ಕನಿಷ್ಠನೆಂಬ ।
ಮಾತು ತಿರುಗಿ ಕಂಡೆಂಬ ಕಾಲಿನ–ಎಡೆಯಾಟ
ಯಾತಕ್ಕೂ ಬಾರದು ಹೇ ಪ್ರಭುವೆ ॥ ೧೦

ಗರ್ವವೆನಗೆ ಮೊದಲಾಯ್ತು । ಗರ್ವವೆಗ್ಗಳ ನಿಮಗಾಯ್ತು ।
ಈರ್ವರ ಜಗಳ ನಾನು ಯಾರಿಗೆ–ಹೇಳಲನ್ನು
ಸರ್ವೇಶ ಕಪಿಲಸಿದ್ಧಮಲ್ಲಿನಾಥ ॥ ೧೧

ಪರಮ ಪ್ರಭುದೇವನು । ನಿರುಪಿಸಿದ ಸಿದ್ಧರಾಮಗೆ ।
ಕ್ಷೀರಕ್ಕೆ ಸಕ್ಕರೆ ಬೆರೆಸಲು ಬೇರೆ–ಲೇಸು ಕಷ್ಟ
ಅರಸುವರುಂಟೆ ಸಿದ್ಧರಾಮ ॥ ೧೨

ಅಂಗಕ್ಕೆ ತಿಮಿರಾದಲ್ಲಿ । ಅಂಗುಲ ಮುಟ್ಟೆ ತಿಮಿರದ ।
ಅಂಗವ ಕೆಡಿಸಿದರೆ ಅಂಗಕ್ಕೆ–ಸಟೆಯುಂಟೆ
ಅಂಗವೆನ್ನ ಲಿಂಗವಾಗಲು ನಾಮ ಬೇರಿಲ್ಲ ॥ ೧೩

ಕರ ಚರಣಾದಿ ಇಂದ್ರಿಯ । ಬೇರಾಗಿ ಕಂಡರು ನಿಜ ।
ಅರಿದು ಮುಟ್ಟುವದು ಒಂವೆ ಆತ್ನ–ಬಿಂದುವಿನೊಂದು
ಸಾರದಿ ಸಸಿ ಹಲವು ನಾಮ ಬೆಳೆವಂತೆ ॥ ೧೪

ಎನ್ನಂಗವು ನೀನಾದೆ । ನೀನೆಂಬ ನಾಮ ಅಳಿದು ।
ನಾನೀನೆಂಬುಭಯ ಭಾವವಿಲ್ಲ–ಅಂಗವು
ನೀನಾದ ಕಾರಣ ಸಿದ್ಧರಾಮ ॥ ೧೫

ಎಲೊ ದೇವನೆ ಕೇಳಯ್ಯ । ನೆಲ ಒಂದಾದರೂ ಅಲ್ಲಿ ।
ಹಲವು ಜಾತಿಯ ವೃಕ್ಷ ಬೆಳೆವಂತೆ–ಉದಕ
ಸಲೆ ಒಂದಾದರೆ ಸವಿ ಸಂಪದ ಬೇರೆ ॥ ೧೬

ನಿನ್ನೊಳಗು ನಾನಾದರೆ । ಎನ್ನ ತಾನುಸ ರಾಗವು ।
ಭಿನ್ನವಾಗದದು ವಿರಾಗ–ಲಿಂಗವೆಂಬ
ಚೆನ್ನ ಪುರುಷರತಿ ಕೂಟಸ್ಥವಿಲ್ಲ ॥ ೧೭

ಚೆನ್ನಿಗನೆ ಸಿದ್ಧರಾಮ । ಮನ್ನೀಸು ಅನುಭಾವ ।
ನಿನ್ನ ಕಂಗಳಲ್ಲಿ ಜ್ಯೋತಿರ್ಲಿಂಗ–ಕೈಯಲ್ಲಿ
ಉನ್ನತ ಉಭಯ ಪ್ರತಿಷ್ಠೆ ಲಿಂಗ ॥ ೧೮

ತನ್ನ ಬ್ರಹ್ಮರಂಧ್ರದಲ್ಲಿ । ಸನ್ನುತ ಅನ್ಮೃತ ಲಿಂಗ ।
ಭಿನ್ನ ತ್ರಿವಿಧದ ಸಂದನಳಿಯ–ಬೇಕಯ್ಯ
ನೀನು ಲಿಂಗವನರಿಯೊ ಸಿದ್ಧರಾಮ ॥ ೧೯

ರಾಯ ಸಿದ್ಧರಾಮಣ್ಣ । ಮಾಯ ಮರ್ದನಿಗೆಂದನು ।
ಕಾಯ ರಸ ಅರಿಯದೆ ಹಣ್ಣಿನ ರಸ–ಚಿಹ್ನ ದೋರದು
ಕಾಯ ಕರ್ಮವು ಮಾಡದೆ ದೊರೆಯದು ॥ ೨೦

ಜೀವ ಜ್ಞಾನವರಿತು । ತ್ರಿವಿಧ ಭಾವವದು ।
ತವೆ ಶುದ್ಧವಾಗನೆ ಮೇಲ ಕಾಣದು-ಲಿಂಗವ
ದೇವ ಪ್ರಭುವೆ ನೀನರಿಯೇನು ॥ ೨೧

ಕೇಳಯ್ಯ ಸಿದ್ಧರಾಮ । ಕಳೆಯುವೆ ಸಂದೇಹ ।
ಕೀಳು ಮೇಲಿರುವದು ಕಬ್ಬಿಗೆ-ನೀನರಿಯೆ
ಹೇಳು ಸಕ್ಕರೆ ಕೋಲಿಗೆ ಹಿರಿಕಿರಿದೆ ॥ ೨೨

ಪರುಷ ಪಾಷಾಣಕ್ಕೆ । ಹಿರಿಕಿರಿಯದಲ್ಲನೆ ।
ಒರೆಗಲ್ಲು ಉಂಟೆ ಕಡೆಯಾಣೆಗೆ–ಸಂದೇಹ
ಬರಿದಾಗಲು ಲಿಂಗವು ತಾನೆ ನೋಡಾ ॥ ೨೩

ಬಿನ್ನವಿಸಿದ ಸಿದ್ಧೇಶ । ಮಾನ್ಯ ಪ್ರಭುದೇವನಿಗೆ ।
ನಾನೇನು ಮಾಡುವುದೆಲ್ಲವನು–ನೀನೆಂದು
ನಾನಿರುವೆ ಅಲ್ಲನು ಪ್ರಭುದೇವ ॥ ೨೪

ನಾನು ಮಾಡುವದೆಲ್ಲವು । ನೀನೆಯಲ್ಲವೆಂದರೆ ।
ತಾನೆ ಅದು ಬಿಟ್ಟುಬಿಡಲಿ–ಓ ದೇವ
ನಿನ್ನಾಣತಿಯಂತೆ ನಡೆಯಲಿ ॥ ೨೫

ಕಾಣಬಾರದ ಘನವ । ತನುವಿನಲ್ಲಿ ಧರಿಸಿ ।
ಏನು ಹೇಳಬಾರದ ನಿಜವ–ಮನದಲ್ಲಿ
ನೀನೆ ನೆಲೆಗೊಳಿಸಿ ಸಲುವಯ್ಯ ॥ ೨೬

ತೋರಬಾರದ ಕುರುಹು । ಅರುವಿನಲ್ಲಿ ಇರಿಸಿ ।
ಪರಮನೆ ನಿಮ್ಮ ಕಾಂಬಂತೆ–ಮಾಡು
ವರಕಪಿಲಸಿದ್ಧಮಲ್ಲಿನಾಥ ॥ ೨೭

ಪರಮ ಪಾವನ ಪ್ರಭು । ನಿರುಪಿಸಿದನು ಆಗ ।
ತೋರ ಬಾರದ ಘನ ಹೇಳಲರಿಯೆ–ಹೇಳದ
ವರ ಘನವ ತೋರಲೆಂದೇನಯ್ಯ ॥ ೨೮

ಶರ ಸಂಧಾನದ । ಪರಿಯಲ್ಲ ಸಿದ್ಧರಾಮನೆ ।
ಉರುತರ ಲಿಂಗ ಕಲ್ಪಿತವಲ್ಲ–ನೊಡಾ
ಪರಬ್ರಹ್ಮ ಕಲ್ಪಿಸಿ ಹೇಳಬಾರದು ॥ ೨೯

ವರ ಪ್ರಭುವೆ ಕಂಡೇನು । ಬೆರಸಿ ಬೆಚ್ಚ್ಯಾತನ ।
ಅರಿತಿಲ್ಲ ಆತನ ಬಟ್ಟೆಯ–ಭೇದನರಿಯೆ
ಶರೀರವಿಡಿದ ಶತಕೋಟಿ ಜೀವರ ॥ ೩೦

ನಿನ್ನ ನಾನೆತ್ತ ಬಲ್ಲೆ । ಅನುಸರಿಸುವಲ್ಲಿ ನಿನ್ನ ।
ಆನು ಹೊರೆಗಾಣದಿಪ್ಪೆನಲ್ಲದೆ–ಬೇರೆ
ಕಾಣುವುದು ಹುಸಿ ನೀನೆ ತೋರಯ್ಯ ॥ ೩೧

ಪ್ರಭುದೇವ ನುಡಿದನು । ಅಭವ ಸಿದ್ಧರಾಮನೆ ।
ಅಭ್ಯಾಸದ ಮಾತಲ್ಲ ಶ್ರೋತ್ರದ–ಸುಖವಲ್ಲ
ನೀ ಬೋಧಿಸುವ ಶಾಸ್ತ್ರನುಭವವಲ್ಲ ॥ ೩೨

ಒಳಗಿನ ಮಾತಲ್ಲ । ಹೇಳುವ ಹೊರಗಿನದಲ್ಲ ।
ತಿಳಿಯದೆ ಇದರಂಗವನು–ಅನುಭವ
ಹೇಳಿ ಕೇಳಿ ಫಲವೇನು ಸಿದ್ಧರಾಮ ॥ ೩೩

ನಿರ್ವ್ಯಾಧಿನ ದೇವನೆ । ಉಪಮೆ ಅನುಪಮೆಯಲ್ಲ ।
ನಿರ್ಮ್ಮಾಧಿನ ಹೇಳುವದು ಕೇಳುವದು–ಪ್ರಭೊ
ನಿಮ್ಮ ನಿಜವ ಹೇಳದಿರೆ ಎಂತುಳಿವೆನು ॥ ೩೪

ನೀನೆ ಎನ್ನಂತರಂಗಕ್ಕೆ । ನೀನೆ ಎನ್ನ ಬಹಿರಂಗಕ್ಕೆ ।
ನೀನೆ ಕರ್ತೃವಾದ ಕಾರಣ–ಹೇ ದೇವ
ನೀನೆ ಹೇಳಿ ಎನ್ನನು ಸಲುಹಯ್ಯ ॥ ೩೫

ಕಾಯ ಇರುವ ತನಕ । ಹೇಯ ಕಾಮವೆ ಮೂಲ ।
ಅಯ್ಯ ಜೀವವಿರಲು ಕ್ರೋಧಮೂಲ–ವ್ಯಾಪ್ತಿಯಿರೆ
ಮಾಯಾ ವಿಷಯಕೆ ಆಶೆಯೆ ಮೂಲ ॥ ೩೬

ಆಶೆಯ ಪಾಶ ಎನ್ನಯ । ಘಾಸಿ ಮಾಡುತ್ತಿದೆ ।
ಲೇಸಾದ ಶಿವಯೋಗದ ಠಾವವ–ತೋರು
ಶಿಶುವಿಗೆ ಕಪಿಲಸಿದ್ಧಮಲ್ಲಿನಾಥ ॥ ೩೭

ಸದಮಲ ಪ್ರಭುದೇವ । ಬೋಧಿಸಿದನು ಭೇದವ ।
ಸಾಧಿಸಿ ದೇಹಭಾವವಳಿದಲ್ಲದೆ–ಜೀವಭಾವ
ಅದು ಅಳಿಯದೆ ಭಕ್ತಿ ಭಾವವಳವಡದು ॥ ೩೮

ಅಳವಡದೆ ಭಕ್ತಿಭಾವ । ತಲೆದೋರದು ಅರಿವು ।
ತಲೆದೋರದೆ ಕುರುಹು ನಾಶಿಸದು–ಕುರುಹು
ಅಳಿಯದೆ ಮಾಯೆ ಯು ಹಿಂಗದು ॥ ೩೯

ಕಯಜೀವದ ಹೊಲಿಗೆ । ಮಾಯೆಯಳಿದ ಭೇದ ।
ಅಯ್ಯ ನೀ ತಿಳಿಯಬಲ್ಲರೆ ಲಿಂಗದ–ಅರಿವು
ಸ್ವಯ ಸಾಧ್ಯವಪ್ಪುದು ಸಿದ್ಧರಾಮ ॥ ೪೦

ಪವನು ಪ್ರಭುವೆ ಕೇಳು । ನೀರು ಕ್ಷೀರದ ಸಂದು ।
ತ್ವರದಿ ಹಂಸೆ ಬಿಚ್ಚಬಲ್ಲುದು–ನೀವೆನ್ನ
ಶರೀರ ಜೀವದ ಸಂದು ಬಿಚ್ಚುವುದು ॥ ೪೦

ತೊಡಕು ನೀನಿಕ್ಕಿದ । ಬಿಡಿಸಬಾರದು ನೋಡಾ ।
ಬಿಡಿಸಿದ ತೊಡಕನಿಕ್ಕಬಾರದು–ಪ್ರಭೊ
ಬಿಡಿಸು ಎನ್ನ ಕಾಯಜೀವದ ಹೊಲಿಗೆ ॥ ೪೧

ರಾಯ ಸಿದ್ಧರಾಮ ಕೇಳು । ಕಾಯದ ಕಳವಳವ ।
ಅಯ್ಯ ಕಾಣೆನೆಂದಲಿ ಹೋಯಿತ್ತು–ಜೀವದ
ಹೇಯ ಕೃತ್ಯದೂರವೆಂದಲ್ಲಿ ತಪ್ಪಿತು ॥ ೪೨

ಕಾಯ ಜೀವವೆಂಬುವ । ಮಾಯಾ ಸೂತಕ ಮನವ ।
ಅಯ್ಯ ನಿರ್ಮಲವಾದಲ್ಲಿ ಅಳಿಯಿತು–ಲಿಂಗವ ನ-
ರಿಯಲು-ನಿನ್ನೊಳಗೆ ತಿಳಿದು ನೋಡಾ ॥ ೪೩

ವಿನಯದಿ ಹೇಳುವೆನು । ಎನ್ನಯ್ಯ ಪ್ರಭುದೇವ ।
ಮನವ ರಜದ ಮಣ್ಣ ಕಳೆದು–ದಯಶಾಂತಿಯ
ಉನ್ನತ ಉದಕದಲ್ಲಿ ತೆಗೆವೆನು ॥ ೪೪

ಬೇಗ ಜಳಕವ ಮಾಡಿ । ಯೋಗ ಕಂಪವನಿಕ್ಕಿ ।
ಬಾಗಿ ಹೊದ್ದುವೆ ಅದನೊಂನು-ಎಡೆಗೆ ತಂದು
ಈಗ ಗಾಣದಲ್ಲಿಕ್ಕಿ ಹಿಂಡುವೆ ॥ ೪೫

ಹಿಂಡಿದ ರಸದ ಕಂಪು । ಕೊಡುವವನು ನೀನಯ್ಯ ।
ಒಡೆಯ ಪ್ರಭುದೇವ ನೀನಲ್ಲದೆ–ಮತ್ತಾರು
ನೀಡಲು ಸಮರ್ಥರು ಹೇಳಯ್ಯ ॥ ೪೬

ಬಿನ್ನೈಸಲು ಸಿದ್ಧರಾಮ । ಸನ್ನುತ ಪ್ರಭು ಎಂದನು ।
ಮನತೊಳೆದು ನಿರ್ಮಲ ಮಾಡಿದೆ–ಎಂಬುದು
ನಾನರಿಯೆ ಯೋಗವೆಂತೆಂಟು ॥ ೪೭

ಹಿಡಿದು ಮನವನು । ತಡೆದಿಹೆನೆಂಬವರ ।
ಕಾಡಿತ್ತು ಮನವು ಮರುಳಾಗಿ–ಸಿದ್ಧೇಶ
ಮನವು ಬರಿದಾಗಿ ಇರಬೇಕು ॥ ೪೮

ಮನವಿಕಲ್ಪ ಜ್ಞಾನದಿಂದ । ಆನು ಅರಿದು ಅದು ಶುದ್ಧ ।
ನಾನು ಮಾಡಿದೆನೆಂಬುದು ತಾನೆ ಮನ-ಲಿಂಗದ
ಅನುವರಿಯಲು ಮನವಿಲ್ಲದಿರಬೇಕು ॥ ೫೦

ಆನು ಹೇಳುವೆ ಎನ್ನ । ಅನುಭಾವ ಪ್ರಭುದೇವ ।
ಮನವೆಂಬ ಸಂಕಲ್ಪವನರಿಯೆನು-ಸಂಕಲ್ಪ
ಎನಗೆ ಸಿದ್ಧಿಸಿತು ನೋಡಯ್ಯ ॥ ೫೧

ಪ್ರಭುವೆ ಸಂಕಲ್ಪವೆಂಬ । ಸಂಬಂಧವನರಿಯೆನು ।
ಅಭವ ನಿನ್ನ ವಿಚಾರವೆಡೆಗೊಂಡಿತ್ತು-ಅದು
ತುಂಬಿತ್ತು ಎನ್ನಂತರಂಗದೊಳು ॥ ೫೨

ಎನ್ನ ಮನದ ಮುಂದೆಲ್ಲ । ನೀನೆ ಆಗಿದ್ದೆ ಎಂದು ।
ಘನ ಯೋಗಿ ಸಿದ್ಧರಾಮ ನುಡಿದ-ಪ್ರಭೊ
ಮನ ವಿಚಾರದ ತೊಡಕು ಬಿಡಿಸಯ್ಯ ॥ ೫೩

ವಿಚಾರವೆಂಬುವದು । ನಿಚ್ಚ ಸಂದೇಹಕ್ಕೊಳಗು ।
ವಿಚಾರಿಸುವನಕ್ಕರ ನೀ-ನಾನೆಂಬುದ
ಹುಚ್ಚತನ ನೀನೆತ್ತ ಬಲ್ಲೆಯಾ ॥ ೫೪

ಮನ ವಾಚಾತೀತವಾದ । ಘನವು ವಿಚಾರಕ್ಕೆ ಸಿಗದು ।
ಚೆನ್ನಿಗನ ಲಿಂಗ ತಿಳಿದುನೋಡಿದೆ-ಎಂಬವರ
ತನ್ನ ವಿಚಾರ ಬಲೆಯಲ್ಲಿ ಕೆಡಹಿದನು ॥ ೫೫

ದೇವ ಪ್ರಭುವೆ ಕೇಳು । ವಿವೇಕವೆಂಬುವದು ।
ಯಾವಾಗಲೂ ಬೇರಿಲ್ಲ ಕಂಡಯ್ಯ-ವಿವೇಕ
ನವನಾಳದ ಸುಳುಹು ತೊಡೆದು ॥ ೫೬

ಸುನಾಳ ಶುದ್ಧ ಮಾಡುವೆ । ಚೆನ್ನ ಅಷ್ಟದಳ ಕಮಳ ।
ವನು ಊರ್ಧ್ವ ಮುಖವ ಮಾಡಿ-ನಿಜಪದದಿ
ಆನು ನೆಲೆಸಿದೆನು ಹೇ ಪ್ರಭುವೆ ॥ ೫೭

ಐವತ್ತೆರಡಕ್ಷರದ । ಹವಣ ತಿಳಿದು ನೋಡಿ ।
ಶಿವ ಏಕಾಕ್ಷರದಲ್ಲಿಯೆ-ನಿಲಿಸುವೆ
ದೇವ ವಿಚಾರದ ಹವಣ ನೀನೆ ಬಲ್ಲೆ ॥ ೫೮

ಬಲ್ಲ ಸಿದ್ಧರಾಮ ಕೇಳು । ಸಲೆ ಯೋಗ ವಿಯೋಗದ ।
ಹೊಲಬ ಬಲ್ಲವರಾರನು ಕಾಣೆ–ನವನಾಳದ
ಸುಳುಹ ತಿಳಿದೆನೆನಲು ಯೋಗವಲ್ಲ ॥ ೫೯

ಐವತ್ತೆರಡಕ್ಷರದ । ನವ ಶಾಸನ ತೀದು ನೋಡಿ ।
ದೇವ ಹೃದಯಕಮಲಕರ್ಣಿಕೆಯಲ್ಲಿಹೆ–ಎಂಬುದು
ಯಾವ ಯೋಗವು ಅಲ್ಲ ಸಿದ್ಧರಾಮ ॥ ೬೦

ಅಯ್ಯ ಬಹಿರಂಗವೆಂದರೆ । ಕ್ರಿಯಾರಹಿತ ನೋಡಾ ।
ಸ್ವಯ ಅಂತರಂಗವೆಂದರೆ ಮನ–ವಾಚಾತೀತ
ಜೀಯ ಲಿಂಗವು ಷಡಚಕ್ರದ ಮೇಲಿಲ್ಲ ॥ ೬೧

ಒಡೆಯ ಅಂತರಂಗದಿ । ನೋಡುವನಲ್ಲ ನಿಮ್ಮನು ।
ಬಿಡದೆ ಬಹಿರಂಗದಿ ಬಳಸುವನು–ಅಲ್ಲ
ನೋಡಾ ಕಪಿಲ ಸಿದ್ಧ ಮಲ್ಲಿನಾಥ ॥ ೬೨

ದಟ್ಟಾದ ಸುಷುಮ್ನದ । ಬಟ್ಟೆಯ ತುದಿಯನೇರಿ ।
ಮಂಟಪದಿ ಸಾವಿರದಳದ–ನಿಮ್ಮನು
ದಿಟವೆಂದು ನೆಲೆಗೊಂಡಿಪ್ಪೆನಯ್ಯ ॥ ೬೩

ನಿರುಪಿಸಿದನು ಪ್ರಭು । ಮಾರಹರನ ಇರುಹು ।
ಸ್ಥಿರ ಪದ್ಮಾಸನದಿ ಕುಳ್ಳಿರ್ದು–ನೆಟ್ಟೆಲುವ
ಮುರಿದು ನಿಷ್ಠೆಲಿ ಹಿಂದಣ ದಾರಿ ತೆಗೆದು ॥ ೬೪

ಉಂಡೆನೆನಲು ಅಮೃತ । ಕೇಡಿಂಗೆ ಕಡೆಯಿಲ್ಲ ।
ನೋಡಾ ಅತ್ಯತಿಷ್ಠದಶಾಂಗುಲ–ಶೃತಿಯ
ನೋಡಲು ಮುಟ್ಟ ನೆಲೆಸುವ ಠಾವುಂಟೆ ॥ ೬೫

ಸ್ಥಾನಮಾನವೆಂಬುವ । ಭಿನ್ನ ಮಾಂತಿಗೆ ದೂರಾದ ।
ಘನವ ಬ್ರಹ್ಮರಂಧ್ರದಿ ಕಂಡೆನೆನಲು–ಕಾಂಬುವದೆ
ಚೆನ್ನಿಗಲಿಂಗವು ಕಲ್ಪಿತಕ್ಕೆ ದೂರನು ॥ ೬೬

ಮನ್ನಿಸು ಪ್ರಭುವೆ ಎನ್ನ । ನಿನ್ನ ರೂಪ ವಿಚಾರಿಸೆ ।
ನಿನ್ನ ಧ್ಯಾನ ಇದೆ ಅತ್ಯತಿಷ್ಠ–ದಶಾಂಗುಲದಿ
ನಿನ್ನ ನಿಲಿಸಿ ಒಂದೆಡೆಯಲ್ಲಿ ಇರುವವನಲ್ಲ ॥ ೬೭

ಓಂಕಾರ ಪೀಠಕ್ಕೆ ನಾನಾಗಿ । ಮೂಕಲಿಂಗ ನೆಲೆಗೊಳಿಸಿ ।
ಏಕಾಗಿ ಬೇರಿಲ್ಲವೆ ಇಪ್ಪೆಡೆಯ–ನೋಡಯ್ಯ
ಲೋಕೇಶ ನೀನು ಪ್ರಣವ ರೂಪಾಗಿ ॥ ೬೮

ಅದಕೆ ಪ್ರಭು ಹೇಳಿದನು । ಬಿಂದುವೆ ಪೀಠವಾಗಿ ।
ನಾದವೆ ಲಿಂಗವಾದರೆ ಅದು–ಭಿನ್ನ ಲಿಂಗ–
ವಾದಲ್ಲಿ ಕಳೆಯ ಪೂಜೆ ನಿರ್ಮಾಲ್ಯ ॥ ೬೯

ಸಲೆ ಮಾಘನ ಲಿಂಗೈಕ್ಯವು । ಅಲ್ಲಿ ಇಲ್ಲಿ ನಿಲುಕದು ।
ಚಲಿಸದ ನಿರಾಳ ಪ್ರಣವರೂಪೆಂದು–ನಿನ್ನ
ನಿಲುವಿಂಗೆ ಹೆಸರಿಡಬಹುದೇನು ॥ ೭೦

ಸಾಧನದನುಭಾವನ । ಸಿದ್ಧರಾಮ ಅರುಹಿದನು ।
ನಾದ ಬಿಂದುವೆಂಬಲ್ಲಿ ಅಂಗಲಿಂಗ–ಸಂಬಂಧ
ನಾದ ಪ್ರಾಣ ಬಿಂದು ಕಾಯವಾದ ಕಾರಣ ॥ ೭೧

ನಾದ ಸ್ವರವಲ್ಲ ದೇವ । ಬಿಂದು ಕಾಯವಲ್ಲವಯ್ಯ ।
ಅದು ಉಭಯಸೂತಕವಲ್ಲ ನೋಡಾ–ನೀ ಬಲ್ಲೆ
ನಾದಬಿಂದುವಿನ ಹಿರಿಮೆ ಮನಮುಗ್ನದ ನಿಲವ ॥ ೭೨

ನಿರುಪಿಸಿದನು ಪ್ರಭು । ಅರಿವನೆ ಅರಿದು ತಾ ।
ಮರುವೆಯು ಮರೆದು ಸಂಕಲ್ಪ–ಸಂಶಯ
ಹರಿವ ನಿಲವನರಿದ ಪರಿ ಹೇಳಾ ॥ ೭೩

ಅರಿದೆನೆನಲು ತಾನೆ । ದೂರ ನೋಡಾ ಜ್ಞಾನಕ್ಕೆ ।
ಮರಿದೆನೆನಲು ಮನಕ್ಕೆ ದೂರನು–ಅರಿದು
ಮರಿದೆನೆನಲು ಉಪಮೆಗೆ ದೂರ ॥ ೭೪

ಭಾವರಹಿತ ಹೊಲಿಗೆಯಲ್ಲ । ಭಾವ ಸಂಕಲ್ಪ ಬಿಡದು ।
ಶಿವಲಿಂಗದಲಿ ಮನಮುಗ್ನ ಯೋಗ–ನಿನಗೆ
ಯಾವ ಪರಿಯಿಂದ ಸಾಧ್ಯವಾಯಿತು ॥ ೭೫

ಎನ್ನ ಮನದಿ ಮತ್ತೊಂದಕ್ಕೆ । ಸ್ಥಾನವಿಲ್ಲ ಹೇ ಪ್ರಭೋ ।
ನಿನ್ನ ನೆನೆವೆ ನಾನು, ನೀ ನೆನ್ನನು–ನೆನೆವೆ
ನಿನಗೆ ಎನಗೆ ಒಂದೆ ಮನ ನೋಡಾ ॥ ೭೬

ಮನಮುಕ್ತ ನೀನಾದರೆ । ನಿನ್ನೊಡನೆ ನನ್ನದು ।
ಮನಮುಕ್ತ ನೋಡಾ ಕಪಿಲಸಿದ್ಧ–ದೇವ
ನಿನಗೆ ಎನಗೆ ಭಿನ್ನಭೇದವುಂಟೆ ॥ ೭೭

ಮನಮುಕ್ತವಾದ ತನ್ನ । ಅನುಭಾವ ಹೇಳಲು ।
ಘನ ಪ್ರಭುದೇವ ನುಡಿದನು–ಮರುಳೆ
ಮನ ಉಂಟೆ ಶಿವಯೋಗಿಗೆ ॥ ೭೮

ಮನಮಗ್ನ ಉಂಟೆ ಮತ್ತೆ । ಏನಿಲ್ಲನ ಮನವುಂಟೆಂದು ।
ಮನ ಅಡಗಿಸಿದೆನೆಂಬ ಮಾತು–ತೋರುತ್ತದೆ
ಮನವ ನೆಲೆಮಾಡಿ ಸಿದ್ಧರಾಮ ॥ ೭೯

ಪರಶಿವನರಿತ ಶಿವ । ಶರಣಂಗೆ ಮನ ಬೇರೆ ।
ತೋರಲಿಲ್ಲ ಮತ್ತೆ ಅಡಗಲಿಲ್ಲ-ಸಿದ್ಧೇಶ
ಪರಮ ಶಿವಯೋಗ ತಿಳಕೋಳೊ ॥ ೮೦

ಸನ್ನುತಗುರು ಪ್ರಭುವೆ । ಮನಮಗ್ನಯೋಗವೆನಲು ।
ಘನಕೆ ಯಾವ ಕೊರತೆ ಹೇಳಾ–ಹೆಚ್ಚೇನು
ಮನವಿಲ್ಲದ ಬರಿ ಬೊಮ್ಮವೆನಲು ॥ ೮೧

ನುಡಿದ ಮಾತಿನಲ್ಲಿ । ಕಡು ವಿವರ ತೋರುತ್ತದೆ ।
ಒಡೆಯನೆ ತಾತ್ಪರ್ಯವೆಂತಪ್ಪದೆ-ಹೇಳಾ
ಮೃಡ ಕಪಿಲಸಿದ್ಧ ಮಲ್ಲಿನಾಥಾ ॥ ೮೨

ಅನುಭಾವ ತಿಳಿಸಲು । ಘನ ಪ್ರಭು ನುಡಿದನು ।
ಮನಮಗ್ನನೇ ಇರಬೇಕಲ್ಲಸಿ–ಮತ್ತೊಂದು
ಮನವೆಂಬುದುಂಟೆ ಹೇಳಯ್ಯ ॥ ೮೩

ಅರಿದು ಮರೆದುದು । ಅರಿದು ನುಡಿದು ಮತ್ತೆ ।
ಮರೆದೆನೆಂಬ ಜ್ಞಾನ ಉಂಟೇನು-ಲಿಂಗವು ನೆರೆ-
ಅರಿದೆನೆನಲು ಮನವಡಗಿ ಕಾಡುವನು ॥ ೮೪

ಜಂಗಮ ಪ್ರಭುವೆ ಕೇಳಾ । ಅಂಗದಂತೆ ಲಿಂಗವ ।
ಲಿಂಗದಂತೆ ಅಂಗವಾದ ಬಳಿಕ–ಅಂಗದಂತೆ ।
ಲಿಂಗೈಕ್ಯ ಲಿಂಗದಂತೆ ಅಂಗೈಕ್ಯನು ॥ ೮೫

ಸಂಗದಿ ಮನವೆಲಿಂಗ । ಲಿಂಗವೆ ಮನವಾದ ಮೇಲೆ ।
ಪಿಂಗನೆ ಮಾತುಗಳ ಹೊಳ್ಳಾಗಲು–ಮಾತನೆ
ಲಿಂಗೈಕ್ಯ, ಲಿಂಗೈಕ್ಯವೆ ಸ್ವರ ॥ ೭೬

ತೆರಹುಂಟೆ ಶಬ್ದಸಮೂಹಕೆ । ಪರನೆ ನಿಮ್ಮ ದೇವರೆಂದು ।
ಅರಸಲುಂಟೊ ಇಲ್ಲವೊ ಎಂಬೂದು–ನೀನೆ
ಪರಮ ಪ್ರಭುವೆ ತಿಳಿಸಿಕೊಡು ॥ ೭೭

ವರ ಸಿದ್ಧರಾಮ ಕೇಳು । ತೋರುವ ಕರ್ಪೂರಗಿರಿಯು ।
ಉರಿ ಹಿಡಿದ ಮೇಲೆ ಇದ್ದಿಲುಂಟೆ–ಮಂಜಿನ
ಪರದೇಗುಲಕ್ಕೆ ಬಿಸಿಲ ಕಳಸವುಂಟೆ ॥ ೭೮

ಉರಿಯ ಪರವುತಕ್ಕೆ । ಅರಗಿನ ಬಾಣ ಎಸೆದರೆ ।
ಮರಳಿ ಬಾಣವನರಸಲುಂಟೆ–ಲಿಂಗವರಿತು
ಅರಸಲುಂಟೆ ಮತ್ತೆ ದೇವರೆಂದು ॥ ೭೯

ಮನ ಮೂರುತಿ ಪ್ರಭುವೆ । ನಿನ್ನನೆ ದೇವನೆಂದು ।
ಅನು ಭಾವಿಸಲರಿಯೆನು–ಎನ್ನ ಮನವ
ನೀನೆ ನುಂಗಿದೆ ಎಂದು ಹಿಂದೆ ಹೇಳಿದೆ ॥ ೮೦

ಎನ್ನ ಒಳಹೊರಗೆಲ್ಲ । ನೀನೆ ಇರುವೆ ದೇವ ।
ನಿನ್ನೊಳಗಡಗಿದ ನುಡಿಯೊಳಗೊಂದೆ–ಅರಿವು
ನಿನ್ನರಿದರಿದು ಮರೆದ ಪರಿ ಎಂತಯ್ಯ ॥ ೮೧

ನಿರುಪಿಸಿದನು ಪ್ರಭು । ಅರಿದೆನೆಂಬುದು ಬಯಲು ।
ಅರಿಯೆನೆಂಬುದು ತಾ ಬಯಲು–ನೋಡಯ್ಯ
ಮರೆದೆನೆಂಬುದು ತಾ ಬಯಲು ॥ ೮೨

ಅರುಹಿನ ಕುರುಹಿನ । ಮರುಹಿನೊಳಗೆ ದೇವನು ।
ಇರುವನೆಂಬುದು ತಾ ಬಯಲು–ಸಿದ್ಧೇಶ
ಅರಿ ಸರ್ವಶೂನ್ಯ ಸಮಾಧಿಯ ನಿಲವ ॥ ೮೩

ಕಬ್ಬಿನ ನೀರನೊಳಕೊಂಡಂತೆ । ಶಬ್ದನಿರಾಳನೊಳಕೊಂಡಂತೆ ।
ಕಾಂಬುವ ಮರೀಚಿ ಬಯಲೊಳಕೊಂಡಂತೆ–ಎನಗೆ
ಪ್ರಭುವೆ ಬೊಮ್ಮನೊಳು ನಿರ್ವಾಣವೆಂಬಪ್ಪುದು ॥ ೮೪

ಅರುಹುವೆ ಸಿದ್ಧರಾಮ। ತೆರಹಿಲ್ಲದ ಘನವ।
ಸಾರಿ ಮನವನೊಳಕೊಂಡು-ತಲೆಯಿಲ್ಲದ
ಕಿರಿ ಮನವ ಘನವನೊಳಕೊಂಡು ॥ ೯೫

ಸೈರಿಸಲು ತನ್ನ ತಾನೆ। ಮರಳಿ ಇಂಬುಗೊಡಲುಂಟೆ।
ಪರಮನ ಲೀಲೆ ಮಾಬನಕ್ಕರ ಉರಿಯಲ್ಲಿಯ
ಕರಪುರದಂತಿರಬೇಕು ಶಿವಯೋಗಿಯು ॥ ೯೬

ದೇವ ಪ್ರಭುರಾಯನು। ನಿರ್ವಾಣದ ನಿಲುಕಡೆಯ।
ಶಿವ ಸಿದ್ಧರಾಮಂಗೆ ಅರುಹಲು—ಆತನೆಂದ
ದೇವ ಕರ್ಮಕ್ರಿಯಿಂದ ನಿನ್ನ ಕಂಡೆ ॥ ೯೭

ಕೆರೆ ತೊರೆ ಕಟ್ಟುವಾಗ। ವರ ದೇಗುಲ ನಿರ್ಮಿಸುತ।
ಹರ ನಿಮ್ಮನು ಕಂಡೆ ಎಡಹುವ—ಕಲ್ಲತೆಗೆವ
ಮರೆಯಲ್ಲಿ ನಿಧಾನವ ಕಂಡಂತೆ ॥ ೯೮

ಎನ್ನ ಮನದ ಮರವೆಯ। ಎನ್ನ ಕತ್ತಲೆ ಬೆಟ್ಟಕ್ಕೆ।
ದಿನಮಣಿ ಮೂಡಿದಂತೆ ಲಿಂಗಭ್ರಾಂತು-ಸ್ವಯವಾಯ್ತು
ಸನ್ನೂತ ಪ್ರಭು ನಿನ್ನ ಕಾರುಣ್ಯದಿ ॥ ೯೯

ಸಂಧಿ ೨೬

ತಮ ಹರಿದು ಹೋಗಿ ನಿಜ। ಸಮರಸದನುಭಾವವ।
ರಾಮ ಹೇಳಿದು ಕೇಳಿ ಪ್ರಭುವೆಂದ-ಶಿವಯೋಗಿ
ಆಮನುಮ ಸಿದ್ಧರಾಮನ ಘನವು॥ ೧

ಉರ್ವಿಯೊಳು ಸಿದ್ಧರಾಮನ। ನಿರ್ವಿಕಲ್ಪದ ಅದ್ವೈತ।
ದಿವ್ಯ ಬೆಳಗಿನೊಳು ಬೆಳಗಡಗಿತ್ತು-ನೋಡಿರಿ
ಸರ್ವೇಶನಲಿ ಬೆರತ ಸಿದ್ಧರಾಮ॥ ೨

ವರ ಚಂದ್ರ ಸೂರ್ಯರು। ತೋರುವರೆ ಒಂದೆಡೆಯಲಿ।
ವರಜ್ಯೋತಿ ಇಲ್ಲದ ಬೆಳಗಿನ-ಪ್ರಭೆಯು
ವರ ಲಿಂಗದಿ ಸಿದ್ಧರಾಮನ ಮಾಘನವು॥ ೩

ಪರಮ ಪ್ರಭುವಿನ। ಕರದಿಷ್ಟ ಲಿಂಗವ ಕಂಡು।
ಕುರಹಿನ ಕಾರಣವ ಅರುಹೆಂದು-ಕೇಳಿದವು
ಹರುಷಗೊಂಡು ಸಿದ್ಧರಾಮಯ್ಯ॥ ೪

ನಿನ್ನ ಸರ ಉಂಡ ಶಬ್ದ । ಎನ್ನ ಮನಕೆ ವೇದ್ಯವಾಯ್ತು ।
ನಿನ್ನ ನಿಜ ಉಂಡ ನಿಲವೆನ್ನ ಮತಿಗೆ–ವೇದ್ಯವು
ನಿನ್ನ ಕರುಣಪ್ರಸಾದ ಸರ್ವಾಂಗಕೆ ॥ ೫

ಗುರುವೆ ನಿಮ್ಮ ಕಾಯವಿಡಿದ । ಕರಸ್ಥಲದ ಕಾರಣವ ।
ನಿರುಪಿಸು ಎನ್ನನು ಪ್ರಭುದೇವ–ನಾ ನಿಮ್ಮ
ಕರುಣೆಯ ಕಂದನು ನೋಡಯ್ಯ ॥ ೬

ಸಿದ್ಧರಾಮನೆ ಕೇಳು ಅ– । ನಾದಿ ಗಣನಾಥನ ಶಿಷ್ಯ ।
ಆದಿ ಗಣನಾಥನೆಂಬುವನು–ಆತನಿಗೆ
ಅಧ್ಯಾತ್ಮಗಣನಾಥ ಶಿಷ್ಯನು ॥ ೭

ಅಧ್ಯಾತ್ಮಗಣನ ಶಿಷ್ಯ । ಅದೊ ಆತ್ಮಗಣನಾಥ ।
ಸಿದ್ಧರಾಮ ನೋಡಾ ಆತನ ಶಿಷ್ಯ–ವ್ಯೋಮಸಿದ್ಧ
ಅದೊ ಆತನ ಶಿಷ್ಯ ಬಸವಗಣನಾಥ ॥ ೮

ಗಣನಾಥ ಬಸವನ ಶಿಷ್ಯ । ಅನುಮಿಷ ಗಣನಾಥ ।
ಅನುಮಿಷಗಣನ ಶಿಷ್ಯ ಅಲ್ಲಮಪ್ರಭು–ಗಣನು ಹೀಗೆ
ಅನಾದಿವಿಡಿದು ಬಂದ ಅನುಪಮ ಲಿಂಗ ॥ ೯

ಅನುಪಮ ಲಿಂಗವು । ಎನ್ನ ಗುಹೇಶ್ವರನೆಂಬ ।
ಘನನಾಮನೊಳಕೊಂಡು ಕರಸ್ಥಲಕೆ–ಬಂದನು
ಕಾಣಾ ಸಿದ್ಧರಾಮ ದೇವಯ್ಯ ॥ ೧೦

ಕರಸ್ಥಲ ಲಿಂಗಯ್ಯನ । ಪರಂಪರೆ ಹೇಳಿದಿರಿ ।
ಕರದಿ ಇಷ್ಟಲಿಂಗ ಹಿಡಿದು–ನೋಡುತ
ಪರಲಿಂಗೈಕ್ಯವ ಕಾಂಬುವದೆಂತು ಪ್ರಭೊ ॥ ೧೧

ತನುವೆ ಪೀಠವಾಗಿ । ಪ್ರಾಣವೆ ಲಿಂಗವಾಗಿರಲು ।
ಕಾಣಲು ಬೇರೆ ಕುರುಹು ಏಕೆ– ಕುರುಹು
ಕಾಣಿ ಕೂಡುವ ನಿರವಯಲುಂಟೆ ॥ ೧೨

ಜಗದೊಳಗೆ ನಷ್ಟವಹ । ತೆಗೆದು ಕೈಯಲ್ಲಿ ಹಿಡಿದು ।
ಲಿಂಗ ದೃಷ್ಟವ ಕಂಡೆನೆನಲು ಜೀವನು–ಸಾಧ್ಯವಹ
ಬಗೆಯ ಹೇಳಯ್ಯ ಪ್ರಭುದೇವ ॥ ೧೩

ಬಿನ್ನವಿಸಲು ಯೋಗಿ। ಪ್ರಸನ್ನನಾಗಿ ಪ್ರಭು ಎಂದ।
ತನ್ನಿಷ್ಟಲಿಂಗದ ಪ್ರಾಣಲಿಂಗದ–ಭೇದವ
ಇನ್ನಾರು ಬಲ್ಲರು ಸಿದ್ಧರಾಮ ॥ ೧೪

ಅಂತರಂಗದ ಶಬ್ದಕ್ಕೆ। ಹಂತ ಬಹಿರಂಗದ ಮುಂದಾಗಿ।
ಸ್ವಂತ ಮನನೆಡೆಗೊಂಡ ಲಿಂಗದರಿವು–ವಿಚಾರ
ಚಿಂತೆ ವ್ಯಾಕುಳಕ್ಕೊಳಗಾಗಬಾರದು ॥ ೧೫

ಮನ ಭಾವ ಜ್ಞಾನ ನೋಟ। ಕಾಣುತ ತಂದು ಕರದಿಹೂಳೆ।
ತನ್ನಂತರಂಗ ಬಹಿರಂಗವೆಂದು–ಅರಿಯದೆ
ಅನುಮಿಷನಾಗಿಪ್ಪನಾ ಶರಣನು ॥ ೧೬

ಪ್ರಾಣಲಿಂಗದ ಮಹಾ। ಪ್ರಸನ್ನ ಮುಖವ ನೋಡಿ।
ತಾನೆ ಪರಿಣಾಮಿಸಲೋಸುಗ–ತೇಜವೆಂಬ ದ-
ರ್ಪಣವ ಹಿಡಿದು ಇರ್ಪನು ನೋಡಾ ॥ ೧೭

ಕರಲಿಂಗದಲಿ ನಿಜವ। ನೆರೆವಿಹೆನೆಂದರೆ ತನ್ನ।
ಕುರುಹು ಹಿಡಿದು ಕುರುಹುಗೆಡಬೇಕು–ಸಿದ್ಧೇಶ
ಕುರುಹು ಅರಿವಿನಾಚೆ ಬೆರಿಬೇಕು ॥ ೧೮

ಕರದಿಷ್ಟ ಲಿಂಗದ। ವರಸಂಬಂಧದ ಘನವ।
ವರ ಪ್ರಭು ವಿವೇಕದಿ ತೋರಲು–ಸಿದ್ಧರಾಮ
ಹರುಷಿತನಾಗಿ ಮತ್ತೆ ಕೇಳಿದನು ॥ ೧೯

ನಿನ್ನ ಕರಸ್ಥಲದ। ಘನವನು ಉಪಮಿಸಲು।
ಇನ್ನಾರು ಇಲ್ಲ ಪ್ರಭುವೆ ನಿಮ್ಮ–ಮಹಿಮೆ-
ಯನು ಅರಿಯಲು ನಾನೇತರೊಳಗೇನು ॥ ೨೦

ಇಷ್ಟಲಿಂಗದೊಳಗೆ। ಮುಟ್ಟಿದ ಶರಣನೊಳಗೆ।
ಹುಟ್ಟಿದ ಕರಸ್ಥಲವೆಷ್ಟೆಂಬುದು–ತಿಳುಹಿ
ಶ್ರೇಷ್ಠನೆ ಎನ್ನನು ಸಲುಹಯ್ಯ ॥ ೨೧

ಎಲೊ ಸಿದ್ಧರಾಮ ಕೇಳು। ಬಲ್ಲನು ಸಂಗನಬಸವ।
ಅಲ್ಲಿ ಇಷ್ಟಲಿಂಗದ ಸೂಕ್ಷ್ಮಾನಂದ–ಸ್ಥಿತಿಯನು
ಸೊಲ್ಲಗೊಳಿಸುವನು ನಡೆಯಲ್ಲಿಗೆ ॥ ೨೨

ತೋರಿ ಕೆಡುವ ಜಡ । ಸಾರ ಸಂಸಾರವೆಲ್ಲ ।
ದೂರಿಕರಿಸಿ ನೀ ನಡೆ ಬೇಗ–ಸಿದ್ಧರಾಮ
ಸಾರಿ ಬಸವಣ್ಣನ ಕಲ್ಯಾಣಕ್ಕೆ ॥ ೨೩

ಆಯತಲಿಂಗವಿಡಿದು । ಸ್ವಾಯತಲಿಂಗ ಕಾಣಬೇಕು ।
ಸ್ವಾಯತಲಿಂಗವಿಡಿದು ಜಂಗಮಲಿಂಗ–ಕಾಣಬೇಕು ।
ಅಯ್ಯ ಜಂಗಮಲಿಂಗದಿ ಗುರುಲಿಂಗವ ॥ ೨೪

ಗುರುಲಿಂಗವ ಹಿಡಿದು । ವರ ಶಿವಲಿಂಗ ಕಾಣಬೇಕು ।
ವರ ಶಿವಲಿಂಗವಿಡಿದು ಪ್ರಸಾದ–ಲಿಂಗವ
ಅರಿಯಬೇಕು ಸಿದ್ಧರಾಮಯ್ಯ ॥ ೨೫

ಷಡ್‌ಸ್ಥಲದಂತವ । ಬಿಡದೆ ಸಂಧಿಸಿ ಒಂದು ।
ಮಾಡಿಕೊಂಡಿಪ್ಪ ಕರಸ್ಥಲದನುವ–ಶರಣ
ಒಡೆಯ ಬಸವಣ್ಣ ಬಲ್ಲ ಬೆಸಗೊಂಬ ಬಾ ॥ ೨೬

ಪರುಶನವಾಗುವದೆಂದು । ಹರುಷ ಸಿದ್ಧರಾಮಂಗೆ ।
ಪರಮ ಪ್ರಭುವೆ ನಿಮ್ಮ ಕರಸ್ಥಲದ–ಘನವ
ಇರಲಿ ದೇವ ಅದು ನಿಮ್ಮಲ್ಲಿಯೆ ॥ ೨೭

ಕರಸ್ಥಲದ ಘನವ । ಪರಸ್ಥಲದ ಘನವನೊಲ್ಲೆ ।
ಕರಸ್ಥಲ ಪರಸ್ಥಲನೊಲ್ಲೆ ದೇವ–ಬಸವಣ್ಣನ
ತೊರುವೆನೆಂಬ ಮಾತಿಗೆ ಮಾರು ಹೋದೆ ॥ ೨೮

ನೀನೊಲಿದು ತೋರಯ್ಯ । ಘನ ಬಸವನ ಶ್ರೀ ಪಾದ ।
ಎನ್ನನುಳಿಹಿಸಿಕೊಳ್ಳಾ ದೇವರ ದೇವ–ನಾ ನಿನ್ನ
ಬೆನ್ನತ್ತಿ ಬರುವೆನು ಕಲ್ಯಾಣಕೆ ॥ ೨೯

ನಡೆ ಸಿದ್ಧರಾಮಯ್ಯ । ಒಡೆಯ ಸಂಗನಬಸವನ ।
ಧೃಢಭಕ್ತಿ ಸಾಮ್ರಾಜ್ಯವ ನೋಡೋಣ–ಇನ್ನೂ
ನಡೆ ಕಲ್ಯಾಣವತ್ತಲಭಿಮುಖವಾಗಿ ॥ ೩೦

ಆಯಾ ಅಂಗದಿ ಆಚಾರ । ಸ್ವಾಯತ ಮಾಡಿಕೊಂಡನು ।
ಆಯ್ಯಾ ಆಚರದಲ್ಲಿ ಪ್ರಾಣವ ಸ್ವಾಯುತ–ಮಾಡಿದನು
ಸ್ವಾಯತ ಪ್ರಾಣದಲ್ಲಿ ಲಿಂಗವನು ॥ ೩೧

ಲಿಂಗದಲ್ಲಿ ಮಾಡಿಕೊಂಡನು । ಜಂಗಮುವ ಸ್ವಾಯತ ।
ಜಂಗಮದಲ್ಲಿ ಪ್ರಸಾದ ಸ್ವಾಯತವ–ಮಾಡಿದನು
ಸಂಗನಬಸವ ಪ್ರಸಾದದಿ ನಿತ್ಯವ ಸ್ವಾಯತ ॥ ೩೨

ಬಸವಣ್ಣನು ನಿತ್ಯದಲಿ । ದಾಸೋಹ ಸ್ವಾಯತಗೈದು ।
ದಾಸೋಹದಲ್ಲಿ ತನ್ನ ಮರೆದು–ನಿಶ್ಚಿಂತ ನಿ-
ವಾಸಿಯಾಗಿ ಇರುವ ಕಲ್ಯಾಣದಿ ॥ ೩೩

ಲಿಂಗದಲ್ಲಿ ನಮ್ಮಯ । ಸಂಗನಬಸವನ ಪಾದ ।
ಪಿಂಗದಲೆ ಕಂಡು ಶರಣೆಂದು–ಶರಣರ
ಸಂಗದಲಿ ಧನ್ಯರಾಗಬೇಕು ॥ ೩೪

ಪರಮನ ದರುಶನಕೆ । ತ್ವರದಿಂದ ಹೊರಟರು ।
ವರ ಪ್ರಭುದೇವ ಸಿದ್ಧರಾಮ–ಕಲ್ಯಾಣಕೆ
ಕಾರಣಿಕ ಬಸವನಿಗೆ ಶರಣೆಂದು ॥ ೩೫

ಇತ್ತ ಕಲ್ಯಾಣದೊಳು । ಸತ್ಯ ಶಿವಶರಣರಿಗೆ ।
ಸತ್ವ ಆಗಿರುವನು ಬಸವಣ್ಣ–ಶಿವ-
ತತ್ವವವನರಹುತ ಸರ್ವರಿಗೆ ॥ ೩೬

ಮರ್ತ್ಯಲೋಕಕ್ಕೆ ಬಂದನು । ಕರ್ತೃ ಬಸವಣ್ಣನು ।
ನಿತ್ಯ ನಿರವಯ ನಿಃಶೂನ್ಯವಪ್ಪ–ನಿಷ್ಕಲ
ಸತ್ಯ ಪರಶಿವನ ಸ್ಥೂಲತತ್ವವೆ ॥ ೩೭

ಷಡ್ದರ್ಶನಕ್ಕೆ ಬಸವ । ಷಡ್ಸಮಯಂಗಳಿಗೆ ।
ಬಿಡದೆ ಸರ್ವಾಚಾರಕೆ ಪ್ರಾಣವಾಗಿ–ಕಲ್ಯಾಣದಿ
ಒಡೆಯ ಪವಾಡಂಗಳ ಜಯಿಸುತ ॥ ೩೮

ಲಿಂಗಾರ್ಚನೆ ಮಾಡುತ । ಲಿಂಗದೊಳಗೆ ತಿಳಿದು ।
ಲಿಂಗದ ಕಳೆಯು ಏಕವಾಗಿ–ರತ್ನದೋಳು
ಪಿಂಗದೆ ಕಳೆ ಬೆರೆಸಿರುವಂತೆ ॥ ೩೯

ಜ್ಞಾನಕ್ರಿಯೆ ಒಂದಾಗಿ । ಘನಲಿಂಗದ ಕಳೆಯ ।
ಪ್ರಾಣಕ್ಕೆ ವೇಧಿಸಿ ಪ್ರಾಣಲಿಂಗ–ಸಂಬಂಧದ
ಭಿನ್ನಭೇಧವ ಶರಣಸಂಗದಿ ದೊರೆವುದು ॥ ೪೦

ಘನನಿಷ್ಕಲ ಪರಶಿವನ । ತಾನೆ ಸೂಕ್ಷ್ಮ ತತ್ವವ ।
ಚೆನ್ನಬಸವನೆಂಬ ನಾಮದಿಂದ-ಲೋಕದಿ
ಮಾನವರ ಕಲ್ಯಾಣಕೆ ಅವತಾರ ॥ ೪೧

ಶಿವಶರಣರಿಗೆಲ್ಲ । ತವೆ ಷಟಸ್ಥಲ ಅರುಹಲು ।
ದೇವ ಚೆನ್ನಬಸವ ಕಾರಣಿಕನು–ಕಲ್ಯಾಣದಿ
ಮಾವ ಬಸವಣ್ಣನ ಬಲಗೈಯು ॥ ೪೨

ಅಲ್ಲಮ ಪ್ರಭುವಿನ । ಬಲ್ಲಹ ಸಿದ್ಧರಾಮನ ।
ಕಲ್ಯಾಣದಾಗಮಕೆ ಮೂಲಿಗನು–ಚೆನ್ನಣ್ಣ
ಸಲ್ಲಲಿತ ಜ್ಞಾನಮೂರ್ತಿಯು ॥ ೪೩

ಚೆನ್ನಬಸವದೇವ । ಅನುಗ್ರಹ ಮಾಡೆಂದು ।
ಸನ್ನುತ ಬಸವಣ್ಣನ ಸ್ತೋತ್ರವ-ಪಾಡೂತ
ಎನ್ನನು ಉದ್ಧರಿಸೆಂದನು ॥ ೪೪

ಚಿಕ್ಕದಂಡನಾಯಕನು । ಮುಕ್ಕಣ್ಣ ಬಸವಂಗೆ ।
ಮಿಕ್ಕೀದ ಅನುಗ್ರಹ ಮಾಡೆಂದು-ಕೋರುತ
ಗಕ್ಕನೆ ತನ್ನನುಭಾವ ಪೇಳಿದನು ॥ ೪೫

ಮೀನಜ ರೋಮಜ ಋುಷಿ । ಮುನ್ನ ಕೋಟಿ ಸುರರ ।
ನೀನೆಕೋಲಿಂಗ ಅಲ್ಲಿಂದತ್ತತ್ತ-ಒಬ್ಬನೆ ಶರಣ
ನೀನೆ ಗತಿ ಗುರುವೆ ಪರಮ ಗುರುವೆ ॥ ೪೬

ಗುರು ಆದಿ ಕುಳಕ್ಕೆ ಮೂಲಿಗ । ನಿರುತ ಸುಳುಹುದೋರಿ ।
ಗುರುವೆ ಪಾವನ ಮಾಡ ಬಂದಿರಿ-ಬಹುಮುಖ
ಚರಾಚರಕೆ ಬಹುಮುಖ ಪ್ರಸಾದ ತೋರಿದಿರಿ ॥ ೪೭

ಭುವನಂಗಳ ಸಲುಹಲು । ದೇವ ಅವತರಿಸಿದಿರಿ ।
ದೇವ ಆದಿಲಿಂಗ ಅನಾದಿ ಶರಣ-ಎಂಬುದು
ಯಾವ ಕಾಲಕ್ಕೂ ತಪ್ಪದದು ॥ ೪೮

ನೀವು ಹುಟ್ಟಿಸಿದ ಘಟಕ್ಕೆ । ನೀವೆ ಕಾರುಣ್ಯ ತೋರಿ ।
ದೇವ ಸಲುಹಯ್ಯ ಕೂಡಲಚೆನ್ನ-ಸಂಗಯ್ಯ
ಅವಿರತ ನಿಮ್ಮ ದಯೆ ನೀಡುತ ॥ ೪೯

ಚೆನ್ನಬಸವನ ನುಡಿಗೆ । ಸನ್ನೂತ ಬಸವನೆಂದನು ।
ನಾನೊಬ್ಬರಿಗೆಯೂ ಉಪದೇಶ–ಮಾಡಲಾರೆ
ಮುನ್ನಿನವರು ತಮ್ಮಿಂದ ತಾವಾದರು ॥ ೫೦

ತತ್ವ ಹಿಡಿದವರಿಗೆ । ತೊತ್ತಾಗಿ ನಡೆಯುವೆ ।
ನಿತ್ಯ ನಿಜಲಿಂಗೈಕ್ಯ ಅಮರರ–ಗಣಸಾಕ್ಷಿ
ಕರ್ತೃನ ಮುಂದೆ ಭಾಷೆ ಪ್ರಸಾದನಿಕ್ಕಲಾರೆ ॥ ೫೧

ಬಿಡಲಾರೆ ಬಸವಣ್ಣ । ಪಡೆವೆನನುಗ್ರಹವನು ।
ಒಡೆಯನೆ ಅನಾದಿಯಿಂದ ನಾ-ಶಿಷ್ಯೆಂಬುದು
ಒಡಂಬಡಿಸುವೆ ನಿನ್ನ ಬಸವಯ್ಯ ॥ ೫೨

ಬಸವೇಶ ಅಂಜದಿರಿ । ಅಸಮ ಪ್ರಮಥರ ಮುಂದೆ ।
ವಸುಧೀಶನೆ ನಿಮಗಹುದಹುದು-ಎನಿಸಲು
ಶಿಶು ಆನು ನಿಮಗನಾದಿಯಿಂದ ॥ ೫೩

ಜಲಗರ ಬೆಳೆಯಿತ್ತೆಂದು । ಸಲೆ ಅಂಜನೆ ಹೇಮರಸವ ।
ಸಲ್ಲಿಸಲು ಒಳಗಿದ್ದ ಕಪಿಸ್ರುಂಗಾರ–ಮಾಡಿತ್ತು
ಎಲವೊ ಕೆಡುವುದೇ ಗುರುವಿನುಪದೇಶ ॥ ೫೪

ಪಿಂಡವ ಮರೆವುದೆ । ಚಂಡೇಶನ ಜ್ಞಾನವು ।
ಮಂಡೋದರಿಯ ಗರ್ಭದಿ ಏಳುನೂರು–ವರ್ಷ
ಪಿಂಡವಿದ್ದು ಜನಿಸಿಲ್ಲವೆ ಇಂದ್ರಜಿತು ॥ ೫೫

ಗರ್ಭದಿ ನಾನಿರುವಾಗಲೆ । ವಿಭೂತಿ ಪಟ್ಟವ ಕಟ್ಟಿ ।
ಅಭವನೆ ಅನುಗ್ರಹ ಮಾಡಿದಿರಿ-ನಾ ನಿಮ್ಮ
ನಿರ್ಭೀತ ತೊತ್ತಿನ ತೊತ್ತು ಚೆನ್ನಬಸವ ॥ ೫೬

ಚೆನ್ನ ಬಸವನೆ ಕೇಳು । ಸನ್ನೂತ ಶಿವಭಕ್ತರಿಗೆ ।
ಆನು ಶಿಶುವಾದೆ ಆದಿ ಅನಾದಿಯ–ಅತ್ತತ್ತ
ಮುನ್ನ ಲಿಂಗಜಂಗಮನಾರು ಅರಿಯರು । ೫೭

ಹರ ಶಶಿಧರನು ಎನ್ನ । ಮರ್ತ್ಯಕ್ಕೆ ಕಳುಹಿದನು ।
ಪರ ಸಕೀಲ ಸಂಬಂಧ ತಿಳಿಸಲು–ಅಂಗದ ಮೇಲೆ
ವರ ಲಿಂಗವುಳ್ಳವರೇ ಸಂಗಮನಾಥ ॥ ೫೮

ಗುರು ಶಿಷ್ಯನಿಗುಪದೇಶ । ಅರುಹಬೇಕಲ್ಲದೆ ।
ಗುರುವಿಂಗೆ ಶಿಷ್ಯನುಗ್ರಹವ–ಮಾಡುವ
ಪರಿ ಉಂಟೇ ಚೆನ್ನಬಸವೇಶ ॥ ೨೯

ಆದಿ ಲಿಂಗವ ಅ- । ನಾದಿ ಶರಣನೆಂಬುವದು ।
ಆದಿಗುರು ಅನಾದಿ ಶಿಷ್ಯನೆಂಬುದು–ತಪ್ಪದು
ಸದ್‌ಗುರು ಶಿಷ್ಯಂಗೆ ಭೇದವೆ ಬಸವಣ್ಣ ॥ ೩೦

ಎನ್ನೊಳಗೆ ಬೆಳಗೂವ । ಜ್ಞಾನವನು ನಿಮ್ಮಯ ।
ಘನವಾದ ಹೃದಯಕಮಲ–ದೊಳಗಣ
ಚಿನ್ಮಯ ಅವ್ಯಕ್ತ ಲಿಂಗವದು ॥ ೩೧

ನಿನ್ನೊಳು ತೊಳಗೂವ । ನಿನ್ನೊಳು ಬೆಳಗೂವ ।
ಘನ ಜ್ಯೋತಿರ್ಲಿಂಗ ಎನ್ನ ಸುಜ್ಞಾನ–ಲಿಂಗವು
ಭಿನ್ನಿಲ್ಲದೆ ಒಂದರಲ್ಲಿ ಒಂದಿಹುದು ॥ ೩೨

ಪ್ರಾಣಲಿಂಗವು ಒಂದೆ । ನಿನ್ನ ಉಪದೇಶ ಒಂದೆ ।
ತನ್ನ ಕ್ರಿಯಾ ಕರ್ಮವು ಒಂದೆ-ನೀವಿನ್ನು
ಭಿನ್ನ ಮಾಡಿ ನುಡಿವುದಾವುದು ॥ ೩೩

ಗುರುವಾಗಿ ಕಾರ್ಯದಲ್ಲಿ । ಅರುಹಿದಿರಿ ಅಂತರಂಗಕೆ ।
ವರ ಜ್ಞಾನೋಪದೇಶದ ಮುನ್ನವೆ–ದೇವನೆ
ಬರಿದು ಕ್ರೀಯಿಂದ ಮಾಡಲು ಹೋಹುದೆ ॥ ೩೪

ದೇವರ ಸಾಕ್ಷಿಯಾಗಿ । ನೀವು ಉಪದೇಶ ಮಾಡಲು ।
ಅವಿರತ ಮರ್ತ್ಯದ ಗಣಂಗಳ-ಕಡೆಯಿಂದ
ದೇವನೆ ಅಹುದಹುದೆನಿಸುವೆನು ॥ ೩೫

ಚೆನ್ನಬಸವನೆ ಕೇಳು । ನೀನೆ ಗುರುವಿಂಗೆ ಕರ್ತ ।
ನೀನೆ ಲಿಂಗಕ್ಕೆ ಜಂಗಮಕ್ಕೆ–ಪ್ರಸಾದಕ್ಕೆ
ನೀನೆ ಕರ್ತನು ಉಪದೇಶಕ್ಕೆ ॥ ೩೬

ಎನ್ನ ದೇವರ ಸಾಕ್ಷಿ । ಎನಗೆ ನೀನೆ ಕರ್ತನು ।
ನಾನು ಬೇಕು ಬೇಡ ಎನ್ನಲಾರೆ-ಕಾಣಾ
ಎನ್ನಯ್ಯ ಚೆನ್ನಬಸವಣ್ಣ ॥ ೩೭

ಎನ್ನಯ್ಯ ಮಾಪ್ರಸಾದ । ತನ್ನ ರೂಪ ತಿಳಿಯಲು ।
ಕನ್ನಡಿಘನು ಉಪಾವಸ್ಥೆಯ-ಮಾಡಲು
ಎನ್ನುವದೆ ಕನ್ನಡಿ ಬೇಕು ಬೇಡ ॥ ೧೮

ನೀವೆ ಮಾಡಿದುದೆಲ್ಲ । ನೀವೆ ಮಾಡಿರುವಿರಿ ।
ದೇವಾ ನಾ ಮಾಪ್ರಸಾದವ-ಸ್ವೀಕರಿಸಲು
ನೀವೆ ಮಾಡಿದುದು ನೋಡಯ್ಯ ॥ ೧೯

ಅಂಗಯ್ಯ ಲಿಂಗದ । ಪಿಂಗದ ಲಕ್ಷಣ ನೋಡೆಂದು ।
ಅಂಗದ ಕೈಯಲ್ಲಿ ಕೊಟ್ಟರೆ ಲಿಂಗದಿ-ಲಕ್ಷಣವ
ಭಂಗೀಕರಿಸಿ ನೋಡಲಾಗದೆಂದು ॥ ೨೦

ಚೆನ್ನಸಂಗಮನಾಥನು । ಎನ್ನ ಕೋ ಎಂದು ಕೊಟ್ಟರೆ ।
ಮಾನ್ಯನೆ ಮಾಪ್ರಸಾದವೆಂದು-ಕೈ ಕೊಂಡೆನು
ಎನ್ನ ಗುರು ಬೆದರಿ ಅಂಜಿವರೆ ॥ ೨೧

ಮನ ಸಂತೈಸಿ ಏಕಾರ್ಥದ । ಘನ ಭೇದವ ತೋರಿ ।
ಬಿನ್ನಹವ ಮಾಡಲು ದೇವರ-ಮಾಮನೆಯ
ಗಣಂಗಳು ಮೆಚ್ಚಲು ನಾ ಶಿಶುವಾದೆ ॥ ೨೨

ವರ ಸಂಗನಬಸವನ । ಕಾರುಣ್ಯದ ಶಿಶುವೆಂದು ।
ಮೂರು ಲೋಕವೆಲ್ಲವೂ ಅರಿದು-ಜಯ ಜಯ
ಗುರು ಬಸವ ಜಯವೆಂದಿತು ॥ ೨೩

ಕೃತಯುಗವಿಲ್ಲದಂದು । ತ್ರೇತಾಯುಗ ದ್ವಾಪಾರದ ।
ಅತ್ತತ್ತ ಕಲಿಯುಗವಿಲ್ಲದಂನು-ಬಸವಾ ಮ-
ಹತ್ ಪ್ರಸಾದವ ಕರುಣಿಸಿದಿರಿ ॥ ೨೪

ಧರೆಯು ಬ್ರಹ್ಮಾಂಡವು । ಮೂರ್ತಿಗೊಳ್ಳದ ಆಚೆ ।
ವರ ಪ್ರಸಾದ ಸಾಧಿಸಿ ತಂದು ಎನ್ನ-ಕೈಯಲ್ಲಿ
ಗುರು ಲಿಂಗವೆ ಬಸವನಾಗಿ ಕೊಟ್ಟೆಯಯ್ಯಾ ॥ ೨೫

ಒಡೆಯ ಬಸವಣ್ಣನಿಂದ । ಪಡೆದು ಲಿಂಗಾನುಗ್ರಹವ ।
ಬಿಡನೆ ಲಿಂಗಸ್ವಾಯತ ಸಂಬಂಧ-ಸಯವಾದುದು
ಬಿಡಿಸಿ ಹೇಳಿದನು ತನ್ನನುಭಾವವ ॥ ೨೬

ಭಾವದಲ್ಲಿ ಗಮನ। ತವೆ ಪ್ರಾಣದಲ್ಲಿ ಲೋಭ।
ಜಿಹ್ವೆಯಲ್ಲಿ ರುಚಿ ಸ್ತ್ರೋತ್ರದಲ್ಲಿ-ಕುಶಬ್ದ
ತವೆ ನಾಶಿಕದಲ್ಲಿ ದುರ್ಗಂಧ॥ ೩೭

ನೋಡುವಲ್ಲಿ ಕಾಮ। ನುಡಿಯಲ್ಲಿ ವಿರೋಧ।
ಇಡಿ ಭವಿಯ ಕಳೆದು ಭಕ್ತನ-ಮಾಡಿದ
ಒಡೆಯ ಸಂಗನಬಸವಣ್ಣ॥ ೩೮

ಆಕಾರ ನಿರಾಕಾರವ। ಲೋಕದಿ ಇಲ್ಲದಂದು।
ಮುಕ್ಕಣ ಕಾಮನ ಸುಟ್ಟ ಭಸ್ಮ-ಮಾಡಿದ ಮುನ್ನ
ಲೋಕೇಶ ತ್ರಿಪುರ ಭಸ್ಮವ ಮಾಡಿದ॥ ೩೯

ಕಾಲನ ಸುಟ್ಟಭಸ್ಮದ ಮುನ್ನ। ಸಲೆ ಆದಿಆಧಾರದ ಮುನ್ನ।
ಒಲಿದು ಚಿದ್ವಿಭೂತಿಯ ತಂದು-ಪಟ್ಟ ಕಟ್ಟಲು
ಮೂಲ ಭಾವಕ್ಕದು ಗುರುವಾಯಿತ್ತು॥ ೪೦

ಸಲೆ ಪ್ರಾಣಕ್ಕೆ ಲಿಂಗವಾಯ್ತು। ನಾಲಿಗೆಗೆ ಪ್ರಸಾದವಾಯ್ತು।
ಮೂಲ ಮಂತ್ರವಾಯ್ತು ಶ್ರೋತ್ರಕ್ಕೆ-ನಾಶಿಕಕೆ
ಮೇಲಾದ ಸುಗಂಧವಾಯಿತ್ತು॥ ೪೧

ನೋಟಕ್ಕೆ ಜಂಗಮವಾಯ್ತು। ದಿಟ ಶಬ್ದಕ್ಕೆ ಸಂಭಾಷಣೆ।
ಸಟೆಯಾದ ಪೂರ್ವ ಗುಣವ ಕಳೆದು-ಪುನರ್ಜಾತ
ದಿಟ ಬಸವನಿಂ ಸರ್ವಾಂಗ ಲಿಂಗಿಯಾದೆ॥ ೪೨

ಅಯ್ಯಾ ಪೃಥ್ವಿ ಅಪ್ಪು ತೇಜ। ವಾಯು ಆಕಾಶವೆಂಬ।
ಅಯ್ಯಾ ಪಂಚಭೂತಂಗಳಲ್ಲಿ-ಪಂಚಲಿಂಗ
ಜೀಯ ಬಸವ ಪ್ರತಿಷ್ಠೆ ಮಾಡಿದನು॥ ೪೩

ಮನ ಬುದ್ಧಿ ಚಿತ್ತಂಗಳ। ಹೀನ ಅಹಂಕಾರವ।
ಎನ್ನಂತಃಕರಣ ಚತುಷ್ಟಯ-ಅದರಲ್ಲಿ
ಚೆನ್ನ ಚತುರ್ಮುಖಲಿಂಗ ಸ್ಥಾಪಿಸಿ॥ ೪೪

ತ್ವಕು ಸ್ತ್ರೋತ್ರ ನೇತ್ರ ಪ್ರಾಣ। ವಾಕು ಜಿಹ್ವೆ ಪಾಣಿ ಪಾದ
ಮಿಕ್ಕ ಪಾಯು ಗುಹ್ಯ ದಶೇಂದ್ರಿಯಕೆ-ಮಾಡಿದ
ಮಿಕ್ಕೀದ ದಶಮುಖಲಿಂಗ ಪ್ರತಿಷ್ಠೆ॥ ೪೫

ಅಂತರಂಗ, ಬಹಿರಂಗ। ಹತವ ಮಾಡಿದನಯ್ಯಾ।
ಶಾಂತ ಶ್ರೀಗುರು ಬಸವಣ್ಣ–ಅರುಹಿದ
ಹಂತ ಕೂಡಲಚೆನ್ನ ಸಂಗಮನ॥ ೮೬

ಜೀಯನ ಹಸ್ತ ಮಸ್ತಕ। ಸಂಯೋಗದ ಮುನ್ನವೆ।
ಅಯ್ಯಾ ಯೌವನ ಮಥನವಾಯಿತ್ತು–ಆವುದಕೆ
ಸ್ವಯ ಅಂತರಂಗ ಬಹಿರಂಗವೆಂಬೆ॥ ೮೭

ಎನ್ನಾತ್ಮ ಸಂಗವೆಂದು। ಎನಲಿನ್ನು ಆವುದಕೆ।
ನಿನ್ನ ಹಸ್ತಮಸ್ತಕ ಸಂಯೋಗ–ಬಹಿರಂಗ
ಮನ ಸಂಯೋಗವೆ ಅಂತರಂಗವು॥ ೮೮

ಕೃತ ನಿಶ್ಚಯಿಸಿ ತನ್ನ। ಸ್ಥಿತಿಯ ಅರುಹಿದ ಚೆನ್ನಣ್ಣ।
ಪ್ರಥಮ ಗುರು ಕಾಣಲು ಕರ್ಮಂಗಳು–ಬೆದರಿ
ಗತಿಗಾಣದೆ ಹೋದವು ನಿಮ್ಮಿಂದ॥ ೮೯

ಹುಸಿ ಯಾಮಿಷ ತಾಮಸ। ಮೋಸ ಕುಟಿಲತನ।
ತುಸು ನಿಲ್ಲಲು ಠಾವಿಲ್ಲ ಎನ್ನುತ–ಹೋದವು
ಬಸವೇಶ ನಿಮ್ಮಯ ಕರುಣದಿ॥ ೯೦

ಗುರುವಿನ ಹಸ್ತಮಸ್ತಕ। ವರ ಸಂಯೋಗದಿ ಎನ್ನ।
ಹರಿದು ಪೂರ್ವಗುಣ ಪುನರ್ಜಾತ–ಆದೆನು
ಕರಣಾದಿ ಗುಣಂಗಳು ಕಳೆದವು॥ ೯೧

ಅಳಿದು ಕರಣಂಗಳು। ಉಳಿದು ಶಿವಲಿಂಗದಿ।
ಬೆಳೆದ ಸುಖಸಾರಾಯ ಶರಣನು-ಎಂಬುದು
ತಿಳಿದು ಲಿಂಗದಿ ತದುಗತನಾದೆ॥ ೯೨

ಪಡೆದು ಜಂಗಮ ಕರುಣ। ಬೇಡ ಭವಿಸಂಗವೆಂದು ।
ಧೃಢದಿ ಬೇರೆ ನಿಂದ ಕಾರಣ-ಶರಣಬಸವ
ಬಿಡದೆ ಕಳೆದನು ಭಾವಕಲ್ಪಿತವ॥ ೯೩

ಚರಣ ಹಿಡಿದವಂಗೆ। ಕರುಣಿ ಕಣ್ತೆರೆವಂತೆ।
ಮರಹಿಂದ ಬಂದ ಕಾಯದಕರ್ಮ-ತಳೆದು
ಕರುಣಿ ಕಣ್ತೆರೆವಂತೆ ಮಾಡಿದನು॥ ೯೪

ಸಲೆ ಪ್ರಾಣಲಿಂಗದ। ಸುಲಭ ಸಂಬಂಧ ಇಂತಿದೆ।
ಆಲಿಯ ನುಂಗಿದ ನೋಟದಂತೆ-ಕೇಳಣ್ಣ ಬ-
ಯಲು ನುಂಗಿದ ಬ್ರಹ್ಮಾಂಡದಂತೆ ॥ ೯೫

ಅಪ್ಪು ನುಂಗಿದ ಮುತ್ತಿನಂತೆ। ಪುಷ್ಪ ನುಂಗಿದ ಪರಿಮಳ।
ಇಪ್ಪ ಮಹಾನುಭಾವಿಗಳಿಗೆನ್ನ-ಒಡಲನೆ ಗುರಿ
ಒಪ್ಪಿ ಮಾಡಲು ಒಡಲಪರಿ ಕೆಟ್ಟಿತ್ತು ॥ ೯೬

ಹರ ತನ್ನ ರೂಪ ತೋರಲು। ಗುರುವಾಗಿ ಬಂದನು।
ವರ ಮಂತ್ರವಾದನು ಮನಸ್ಥಲಕೆ-ತನುತಲಕೆ
ಮೀರಿದ ಪ್ರಸಾದವಾದನು ತಾನೆ ॥ ೯೭

ಲಿಂಗವಾಗಿ ಕರಸ್ಥಲಕೆ। ಜಂಗಮನಾಗಿ ಪ್ರಾಣಸ್ಥಲಕೆ।
ಸಂಗನಬಸವ ಚತುರ್ವಿಧಸ್ವಾಯತ-ಆದನು
ಲಿಂಗ ಕೂಡಲಚೆನ್ನಸಂಗನಲ್ಲಿ ॥ ೯೮

ಎನಿಸಿದನು ಮಂತ್ರಪಿಂಡ। ಎನಿಸದೆ ಮಾಂಸಪಿಂಡ।
ಎನಿಸದೆ ವಾಯುಪ್ರಾಣಿ ಎಂದು-ಬಸವಣ್ಣ
ಎನಿಸಿದನು ಲಿಂಗಪ್ರಾಣಿ ಎಂದು ॥ ೯೯

ಸಂಧಿ ೧೭

ಜಗಭರಿತೆಂಬ ಶಬ್ದಕ್ಕೆ । ಅಂಗವಿಸದೆ ಶರಣಭರಿತ ।
ಲಿಂಗವೆಂದೆನಿಸಿದನು ಸಂಗನಲ್ಲಿ-ಗುರು ಎನ್ನ
ಸಂಗನಬಸವಣ್ಣ ದಯೆ ತೋರಿ ॥ ೦

ಆದಿ ಬಸವಣ್ಣನು ಅ- । ನಾದಿ ಲಿಂಗವೆಂಬುವರು ।
ಸಾಧಿಸಿ ನುಡಿವ ಹುಸಿ ಕೇಳಲಾರೆ-ಕೇಳಿರೊ
ಆದಿ ಲಿಂಗ ಅನಾದಿ ಬಸವಣ್ಣನು ॥ ೧

ಬಸವಣ್ಣನ ಉದರದಿ । ಅಸಮ ಲಿಂಗವು ಹುಟ್ಟಿತು ।
ಬಸವನುದರದಿ ಜಂಗಮ ಹುಟ್ಟಿತು-ಪ್ರಸಾದ
ಬಸವಣ್ಣನನುಕರಿಸಲಾಯಿತ್ತು ॥ ೨

ಕಳೆಯಲು ಲಿಂಗದ । ಅಳಿವ ಪೂರ್ವಾಶ್ರಯವ ।
ಹೊಳೆವ ಪ್ರಾಣಲಿಂಗವ ತೋರಲು-ಬಂದನು
ಇಳೆಗೆ ಎನ್ನ ಶ್ರೀಗುರು ಬಸವಣ್ಣ ॥ ೩

ಕಳೆದು ಲಾಂಛನದ। ಅಳಿವ ಪೂರ್ವಾಶ್ರಯವ।
ಬೆಳಗೂವ ಲಿಂಗಜಂಗಮವೆಂದು-ತೋರಲು
ಇಳಿದು ಮರ್ತ್ಯಕ್ಕೆ ಬಂದ ಬಸವಣ್ಣ ॥ ೫

ಕಳೆದು ಪ್ರಸಾದದ। ಹಳೆಯ ಪೂರ್ವಾಶ್ರಯವ।
ತಿಳುಹಿ ಮಾಪ್ರಸಾದ ಸ್ವಯವೆಂದು-ತೋರಲು
ಕಳಾತೀತ ಬಂದನು ಬಸವಣ್ಣ ॥ ೬

ನಮ್ಮ ಶ್ರೀಗುರುವಿನ। ನಿರ್ಮಲ ಶ್ರೀ ಚರಣವ।
ಒಮ್ಮೆ ನೆನೆದರೆ ಭವಪಾಶವ-ಹರಿವುದು
ನಮ್ಮ ಗುರು ಬಸವಂಗೆ ಶರಣು ॥ ೭

ಗುರು ಬಸವ ಶರಣು। ಗುರು ಲಿಂಗವೆ ಶರಣು।
ಹರಿ ಬ್ರಹ್ಮಾದ್ರಿಗಳಿಗಗೋಚರ-ಆದಂಥ
ವರ ಲಿಂಗ ತೋರಿದ ಬಸವ ಶರಣು ॥ ೮

ನಮಃಶಿವಾಯ ಲಿಂಗ ಓಂ-। ನಮಃಶಿವಾಯ ಬಸವ।
ನಮಃಶಿವಾಯ ಲಿಂಗ ಓಂನಮಃಶಿವಾಯ-ಬಸವ
ನಮ್ಮ ಮನತಲದಿ ಬೆಳಗಿ ತೋರಿದನು ॥ ೯

ಇದು ಕಾರಣ ದೇವನು। ಆದಿ ಆಧಾರವಿಲ್ಲದಂದು।
ಮೊದಲಾಗಿ ಓಂನಮಃಶಿವಾಯ-ಎನ್ನೂತ
ಬಂಧನ ಹರಿದನು ಬಸವದೇವ ॥ ೧೦

ಬಸವಣ್ಣ ಓಂಕಾರದ। ಆ ಸೀಮೆಯಿಂದತ್ತತ್ತ।
ಬಸವ ನಾದ ಬಿಂದು ಕಳೆಗಳಿಂದ-ಅತ್ತತ್ತ
ವಸುಧೀಶ ಪ್ರಥಮಾಚಾರಿ ನೀನೆ ॥ ೧೧

ಲಿಂಗಾಚಾರಿ ನೀನೆ ದೇವ। ಜಂಗಮಾಚಾರಿ ನೀನಯ್ಯ।
ಸಂಗಿ ಪ್ರಸಾದಾಚಾರಿ ನೀನಯ್ಯ-ಎನಗೆ
ಪಿಂಗದೆ ಸರ್ವಾಚಾರಿ ನೀನೆ ಬಸವ ॥ ೧೨

ಎನ್ನ ಗತಿಮತಿಯಾಗಿ। ಎನ್ನನುಳುಹಿದ ಕಾರಣ।
ನಿರ್ಣಯವಿಲ್ಲದೆ ಓಂನಮಃಶಿವಾಯ-ಎನ್ನುವೆ
ಎನ್ನ ಕೂಡಲಚೆನ್ನಸಂಗಮದೇವ ॥ ೧೩

ಅನುಗ್ರಹವ ಪಡೆದ । ಚೆನ್ನಣ್ಣನ ಸಮರಸದ ।
ಅನುಭಾವ ಕೇಳಿ ಸಂತಸದಿಂದ–ಬಸವಣ್ಣ
ಚೆನ್ನಬಸವಗಾಗ ನುತಿಸಿದನು ॥ ೧೪

ಬಿತ್ತದೆ ಬೆಳೆಯದೆ । ಎತ್ತಣ ಹೆಬ್ಬೆಳಸಿನ ।
ಇತ್ತ ರಾಶಿಯ ನೋಡಯ್ಯ–ಸುಗಂಧ
ಅತಿ ಬಂಧುರ ಹುಟ್ಟುವದು ಪರಿಮಳ ॥ ೧೫

ಆದಿ ಅನಾದಿ ಇಲ್ಲದ । ಮೋದದಿ ತನ್ನಿಂದ ತಾನಾದ ।
ಇದು ಕಾರಣ ಮುಟ್ಟದೆ ತಟ್ಟದೆ–ಗುರುವಿನ
ಬೋಧೆ ಪಡೆದು ಲಿಂಗಸಯವಾಗಿ ॥ ೧೬

ಎನಗೆ ಗತಿ ಪಥವನು । ತಾನೆ ತೋರಬೇಕೆಂದು
ಎನ್ನ ಕೂಡಲಸಂಗಮದೇವನಲ್ಲಿ–ಆಗಾದನು
ಚೆನ್ನಬಸವಣ್ಣನು ಕೇಳಿರಣ್ಣ ॥ ೧೭

ವಿಧ ವಿಧ ತಾಣದಲಿ । ಬಂದು ತೊಳಲೂತ ।
ಅಂದು ಬಳಲಿ ಅಳಿದುಳಿದು–ಅಲ್ಲಿ
ನಿಂದ ನಿಲದವನಲ್ಲ ನೋಡಯ ॥ ೧೮

ಮರ್ತಲೋಕದೋಳಗೆ । ಸತ್ಯ ಶಿವಾಚಾರದ ಘನ ।
ವ್ಯರ್ಥ ಹೊಳಿ ಹೋಯಿತ್ತೆಂದು–ಪ್ರಸಾದಿಯಾಗಿ
ಕರ್ತನು ತಾನೆ ಉದಯವಾದನು ॥ ೧೯

ಕರಮಸ್ತಕ ಸಂಯೋಗ । ಅರಿಯದ ಮುನ್ನವೆ ಆದಿ ।
ಗುರು ಅನಾದಿ ಶಿಷ್ಯನಿಗೆ ನೆಲೆಮಾಡಿ–ಸಂಗಮವೆಂಬ
ವರ ಲಿಂಗ ಎನ್ನ ಕೈಯಲ್ಲಿ ಕೊಟ್ಟನು ॥ ೨೦

ಎನ್ನನು ಸಾಮದಿಂದ । ಅನುಗ್ರಹಿಸಿಕೊಂಡು ।
ಎನ್ನ ಪೂರ್ವ ಪರವನೆತ್ತಿ–ತೋರುತ
ತನ್ನತ್ತ ತೆಗೆದುಕೊಂಡನು ಚೆನ್ನಣ್ಣ ॥ ೨೧

ನಿನ್ನ ಶರಣನು ಮರ್ತ್ಯದ । ಘನ ತಂದೆ ಎನ್ನೂತ ।
ನೆನೆದು ಸುಖಿಯಾಗಿ ಬದುಕಿದೆ–ಓ ದೇವ
ಎನ್ನ ಕಾರಣ ತಂದೆ ಎಂದರಿದು ॥ ೨೨

ಅರಿದರಿದು ನಿಮ್ಮಯ । ಶರಣನಾಚರಿಸುವ ।
ವರ ಆಚರಣೆಯ ಕಂಡೆನ್ನ–ಕಂಗಳು
ತೆರೆದವು ಕೂಡಲಸಂಗಮದೇವ ॥ ೨೩

ಇಂದು ಹುಟ್ಟಿದ ಕೂಸಿಂಗೆ । ಇಂದೇ ಜನ್ಮನವಾಯ್ತು ।
ಬೀದಿಯಲ್ಲಿ ಆ ಕೂಸು ಒತ್ತೆಗೊಳಲು–ನಿಂದಿತ್ತು
ಇದರ ಸಂಗಸುಖದನುಭವ ತಾ ಬಲ್ಲ ॥ ೨೪

ಇಂತು ಬಸವನೆನಲು । ಸಂತಸದಿ ಚೆನ್ನನೆಂದನು ।
ಪ್ರಥಮಕಾಲದಿ ನಿರಾಲಂಬಿಯಾಗಿ–ಇದ್ದಿರಿ
ದ್ವಿತಿಯಕಾಲದಿ ತೇಜೋಮೂರ್ತಿಯಾಗಿ ॥ ೨೫

ತ್ರಿತಿಯಕಾಲದಿ ನಾದ । ಮೂರ್ತಿಯಾಗಿದ್ದಿರಿ ।
ಚತುರ್ಥಕಾಲದಿ ಚೈತನ್ಯರೂಪ–ಪಂಚಮದಿ
ಮೂರ್ತಿಯಾಗಿದ್ದಿರಿ ಧರ್ಮದ ॥ ೨೬

ಪರನೆ ಷಷ್ಠಮದಿ ಪರ- । ಪುರುಷಾರ್ಥ ಸಾಧನಕೆ ।
ಕಾರಣರಾಗಿ ತ್ರಿವಿಧ ಭಕ್ತಿಗೆ–ಬಂದಿರುವ
ಗುರು ಬಸವಣ್ಣಗೆ ನಮೋ ನಮೋ ॥ ೨೭

ವರ ಪ್ರಮಥರ ಸಹಿತ । ಗುರುವೆ ನೀವು ಮುಟ್ಟಿದಿರಿ ।
ತೋರಲು ಪ್ರಾಣಲಿಂಗದ ಹರಿವ–ಅಪ್ಪಣೆಯಿಂದ
ಕರುಣೆಯ ಶಿಶುವಾದೆ ನಾ ನಿಮ್ಮ ॥ ೨೮

ಕರಕಮಲದಿ ಹುಟ್ಟಿ । ಕರುಣೆಯ ಕೂಸಾದೆ ।
ಗುರು ನಿನ್ನ ಮಹಿಮೆಗೆ ಶರಣು–ಎನ್ನುತ
ಹರಣ ಲಿಂಗವಾಯ್ತು ಬಸವಣ್ಣ ॥ ೨೯

ಚೆನ್ನಣ್ಣನು ಬಸವಂಗೆ । ಬಿನ್ನವಿಸಲು ಈ ಪರಿ ।
ಘನಲಿಂಗದ ಪ್ರಾಣದ ಸಕೀಲ–ಸಂಬಂಧ
ನಾನೇನರಿಯೆನು ಎಂದ ಬಸವಣ್ಣ ॥ ೩೦

ಪ್ರಾಣಲಿಂಗದ ಸಕೀಲ । ನಾನರಿಯೆ ಸಂಬಂಧವ ।
ನಾನು ಹುಸಿಹುಂಡನ ಮಾಡಿ ಹೊರಗೆ–ಪೂಜಿಸಿ
ದಿನಗಳು ಹಾಳು ನಾ ಕಳೆದೆನು ॥ ೩೧

ಚೆನ್ನಬಸವಣ್ಣನೆ। ಎನ್ನ ಪ್ರಾಣ ನಿಕ್ಷೇಪವಾದ।
ಭಿನ್ನಭೇದವ ತೋರಯ್ಯ–ನಾನರಿಯೆ
ಪ್ರಾಣಲಿಂಗ ಲಿಂಗಪ್ರಾಣ ಎಂಬುದು॥ ೩೨

ಶ್ರೀ ಗುರುವಿನ ಕರಕಮಲದಿ। ಆಗ ಉದಯಿಸಿ ನಾನು।
ಅಂಗದ ಮೇಲೆ ಲಿಂಗವ ಧರಿಸಿಕೊಂಡು–ಲಿಂಗದಿ
ಆಗಾಗಿ ಪ್ರಾಣಲಿಂಗ, ಲಿಂಗಪ್ರಾಣ ಕಂಡೆ॥ ೩೩

ಆಚಾರ ಅಂಗದ ಮೇಲೆ। ನಿಶ್ಚಲ ನೆಲೆಗೊಳ್ಳಲು ಆ।
ಅಚಲ ದೃಷ್ಟಿನಟ್ಟು ಇಷ್ಟಲಿಂಗದಿ–ಭಾವಸಂಪನ್ನ
ಅಚ್ಚಳಿಯದ ಘನವ ನಾನೆತ್ತಬಲ್ಲೆ॥ ೩೪

ಅನುಭಾವ ಅಂತರಂಗದಿ। ತಾನೆ ಎಡೆಗೊಂಡಿತ್ತು।
ಪ್ರಾಣಲಿಂಗದಿ ನಿಕ್ಷೇಪಿತವಾಗಿ–ಲಿಂಗೈಕ್ಯದ ಸಂ-
ಪನ್ನತೆ ನಾನೆತ್ತ ಬಲ್ಲೆನಯ್ಯ॥ ೩೫

ಜ್ಞಾನ ಸಮಾಧಿಯೊಳಗೆ। ನಾನಾ ಬಯಕೆಯಡಗಿ।
ಘನ ಪರಿಣಾಮಲಿಂಗದಿ ಮನವಡಗಿ–ಲಿಂಗ
ಸ್ಥಾನದಿ ತೃಪ್ತರಾಗಿರುವಿರಿ ನೀವು॥ ೩೬

ಅಂಗದ ಮೇಲೆ, ಇಷ್ಟ-। ಲಿಂಗವುಳ್ಳುದೆಲ್ಲ ಘನ।
ಸಂಗಮನಾಥನೆಂದಲ್ಲಿ ಜಂಗಮ–ಲಿಂಗಪ್ರಾಣಿ
ಸಂಗನಬಸವಣ್ಣ ಆಗಿರುವಿರಿ॥ ೩೭

ಲಿಂಗಕ್ಕೆ ಬಂದುದಲ್ಲದೆ। ಅಂಗಕ್ಕೆ ಸಲ್ಲದೆಂದು॥
ಭಂಗಿಸದೆ ತನು ಮನ ಮೀಸಲ–ಅರ್ಪಿತ ಸ-
ರ್ವಾಂಗ ಸುಖ ಪ್ರಾಣ ಲಿಂಗದಲ್ಲಿ॥ ೩೮

ಬಸವನೆ ನೀವು ತೊಲಗಿ। ಅಸಮ ನಿರಾಭಾರಿಯಾಗಿ।
ಪ್ರಸಾದ ಲಿಂಗಪ್ರಾಣಿಯಾಗಿರುವಿರಿ–ದೇವನೆ
ಉಸುರೆನ್ನಳವಲ್ಲ ನಿಮ್ಮ ಘನವ॥ ೩೯

ಅನಾದಿಯಾದ ಶಿವನಿಗೆ। ಏನು ಆಧಾರವಿಲ್ಲೆಂದು।
ಭಿನ್ನವಿಲ್ಲದ ರೋಮದ ಕೊನೆಯಲ್ಲಿ–ಧರಿಸಿ
ಘನಲಿಂಗ ಪ್ರಾಣಿಯಾಗಿಪ್ಪಿರಿ ದೇವ॥ ೪೦

ಕೂಡಲಚೆನ್ನಸಂಗಮಯ್ಯನ। ಅಡಿಗಳ ಸಾಕ್ಷಿಯಾಗಿ।
ಒಡೆಯ ಪ್ರಾಣಲಿಂಗಸಂಬಂಧ ಸೆರಗು–ಸೋಂಕಿನ
ಒಡವೆರಸಿದ ಬಿಡದೆ ಒಕ್ಕ ಮಿಕ್ಕ ಪ್ರಸಾದಿ॥ ೪೧

ಚೆನ್ನಬಸವದೇವನು। ಪ್ರಾಣಲಿಂಗ ಸಂಬಂಧದ।
ನಿರ್ಣಯ ಹೇಳಿ ತೋರಲು–ಬಸವಣ್ಣ
ಮನ ತುಂಬಿ ಕೊಂಡಾಡಿದರಾಗ॥ ೪೨

ಮರದೊಳಗೆ ಅಗ್ನಿಯು। ಇರುವದು ಸಹಜವದು।
ತೋರುವದೆ ಕಣ್ಣಿಗೆ ಮಥನಿಸದೆ–ಜಗದೊಳು
ಪರಿಪೂರ್ಣ ಹರನೆನಲು ತನ್ನೊಳು ಕಾಂಬುದೆ॥ ೪೩

ಆದಿಲಿಂಗವ ಅನಾದಿ। ಸದ್‌ಶರಣರನ ಭೇದ ತಿಳುಹಿ।
ಅದೊ ನಿಜ ಪ್ರಾಣದೊಳಿಪ್ಪ ಸುಜ್ಞಾನ–ಲಿಂಗವ
ತಂದು ಕರಸ್ಥಲಕೆ ಕೊಟ್ಟಿರುವನು॥ ೪೪

ಕರಸ್ಥಲದ ಲಿಂಗವೆನ್ನ। ವರ ಸರ್ವಾಂಗದಿ ಪ್ರತಿಷ್ಠಿಸಿ।
ತೋರಿ ನಿತ್ಯ ನಿಜ ಲಿಂಗೈಕ್ಯವಾದ–ಹೊಲಬಿನ
ಹರಿವ ತೋರಿದ ಚೆನ್ನಬಸವಣ್ಣನು॥ ೪೫

ಮರ್ತ್ಯಲೋಕದೊಳಗೆ। ಕರ್ತನು ಮೊದಲಾಗಿ।
ಪೂರ್ತಿ ಪ್ರಾಣಲಿಂಗದ ಘನವ–ಹರಹಿ
ಪ್ರೀತಿಯಲಿ ಶಿವಭಕ್ತಿಯನುದ್ಧರಿಸಿ॥ ೪೬

ಚೆನ್ನಣ್ಣನು ದೇವನಲ್ಲಿ। ಎನ್ನನಾಗು ಮಾಡಿ ಉಳುಹಿ।
ಇನ್ನು ಮರ್ತ್ಯಲೋಕಕ್ಕೆ ಬಂದರೆ–ಶ್ರೀ ಗುರು
ಚೆನ್ನಬಸವನ ಶ್ರೀ ಪಾದದಾಣೆ॥ ೪೭

ಪ್ರಾಣಲಿಂಗ ಸಂಬಂಧಿಸಿ। ಎನ್ನನುಳುಹಿದಿರೆಂದು।
ಸನ್ನೂತ ಬಸವಣ್ಣ ನುಡಿಯಲು–ಚೆನ್ನಣ್ಣ
ಬಣ್ಣಿಸಿದನು ಬಸವನ ಘನತೆಯನು॥ ೪೮

ದೇವನೆ ಈ ಮರ್ತ್ಯಲೋಕ। ಶಿವಲೋಕವೆಂಬುವದು।
ಅವಿಭಿನ್ನ ನಿಚ್ಚಣಿಗೆ ಯಾದವು–ಕಲ್ಯಾಣಕೆ
ನೀವು ಬಂದು ಅವತರಿಸಿದಿರಾಗಿ॥ ೪೯

ಸತ್ಯ ಶರಣರಿಂಗೆಲ್ಲ । ನಿತ್ಯ ಪಾವನ ಗೈಯ್ಯಲು ।
ಮರ್ತ್ಯಕ್ಕೆ ಬಂದರೆ ಜನಿಸಿ ನಾ–ಬಂದೆನೆಂದು
ಕರ್ತನೆ ನೀವು ನುಡಿಯಬಹುದೆ ॥ ೫೦

ಕರ್ತನ ರೂಪವದು । ಭೃತ್ಯನಿಗೆ ಬಂದಲ್ಲಿ ಆ ।
ಭೃತ್ಯಾ ಕರ್ತನನರಸಿ ಬಂದನಲ್ಲ–ಸದಾಚಾರ
ಮರ್ತ್ಯದಿ ಹರಹಿ ಪಾವನ್ನಮಾಡಲು ॥ ೫೧

ನಿಜಲಿಂಗ ಸಮಾಧಿಯೊಳು । ಸಜ ನಿಲ್ಲುವರಾರು ।
ಅಜಾತನ ಸಾಕ್ಷಿಯಾಗಿ ಪೇಳುವೆ–ಈ ಭವ–
ಬೀಜ ನಿಮಗುಂಟೆಂದರೆ ಪಾದದಾಣೆ ॥ ೫೨

ನೀವು ಇಹಕ್ಕೆ ಬಂದರೇನು । ಶಿವಲೋಕದಿ ಇದ್ದರೇನು ।
ಭವಂಗಳಿಲ್ಲವೆಂದು ಚೆನ್ನಬಸವ–ಪೇಳಲು
ಶಿವಲಿಂಗದಿ ಬೆರೆವುದೆಂತೆಂದ ಬಸವ ॥ ೫೩

ಮಂಗಳಮಯ ಶಿವ– । ಲಿಂಗ ಪೂಜಿಸಿ ಫಲವೇನು ।
ತುಂಗ ಸಮರಸ ಸಮುಕಳೆನರಿಯದೆ–ಫಲವೇನು
ಸಂಗಮವಾಗದಿರೆ ನದಿಗಳು ॥ ೫೪

ಚೆನ್ನಬಸವದೇವನು । ಜ್ಞಾನದ ದಿಟ್ಟಿಯಿಂದ ।
ಸನ್ನೂತ ಅಲ್ಲಮನ ಬರುವನು–ಕಂಡು
ಬಿನ್ನವಿಸಿದನು ಬಸವಣ್ಣನಿಗೆ ॥ ೫೫

ಲಿಂಗವೆ ಜಂಗಮ ನೋಡಾ । ಜಂಗಮನೆ ಲಿಂಗದ ಮುಖ ।
ಸಂಗನಬಸವಣ್ಣನೆ ನೀವಲ್ಲದೆ–ಬಲ್ಲವರಾರು
ಜಂಗಮ ಪ್ರಾಣಿ ಬಸವರಸನೆ ॥ ೫೬

ಅಂಗದ ಮೇಲೆ ಇಷ್ಟ– । ಲಿಂಗವುಳ್ಳವರೆಲ್ಲ ।
ಸಂಗಮನಾಥನಿವನೆಂದಲ್ಲಿ–ಬಿಜ್ಜಳ
ಪಿಂಗದೆ ಒರೆಗ್ಹಚ್ಚಿ ನೋಡಿದನು ॥ ೫೭

ಹಗಣಿಗರಾಗಿ ಬರಲು । ಜಂಗಮ ಮುಖದಲ್ಲಿ ।
ಲಿಂಗವ ಮಾಡಿದವರಾರು ಹೇಳಾ–ಬಸವೇಶ
ಅಗಾಧ ನಿನ್ನ ಘನಮಹಿಮೆ ॥ ೫೮

ಮರದ ಮನುಷ್ಯನಿಗೆ । ಕರೆದು ಓ ಎನಿಸಿದಿರಿ ।
ವರ ಪ್ರಸಾದ ಉಣಿಸಿ ತಡಿಸಿ–ಧ್ವಜವೆತ್ತಿ
ಮೆರೆದವರಾರು ಈ ಲೋಕದಿ ॥ ೫೯

ಜಂಗಮ ಲಿಂಗಪ್ರಾಣಿ । ಸಂಗನಬಸವಣ್ಣನೆಂದು ।
ಹಿಂಗದೆ ಕಲ್ಯಾಣದಿ ಮಹಿಮೆಯ–ತೋರುತ
ಮಂಗಳಮಯ ತತ್ವಬೀರಿದಿರಿ ॥ ೬೦

ಜಂಗಮ ಮುಖದಿಂದಲೆ । ಲಿಂಗವನರಿಯೆನೆಂದು ।
ಸಂಗನಬಸವ ಎನ್ನ ಮನಕ್ಕೆ–ಸಂದೇಹನೊಡ್ಡಿ
ಭಂಗಿಸಿ ಜಾರಿದರೆ ಸೈರಿಸಲಾರೆ ॥ ೬೧

ಜಂಗಮ ಮುಖ ಬಸವ । ಲಿಂಗಸಂಬಂಧಿ ಎಂದು ।
ಸಂಗರಹಿತ ಆದಿಗಣನಾಥನು–ಅಲ್ಲಮಪ್ರಭು
ಹಿಂಗದ ನಾಮವ ಧರಿಸಿ ಬರುತಿಹನು ॥ ೬೨

ಎನ್ನ ದೇವ ಸಾಕ್ಷಿಯಾಗಿ । ನೀನೆ ಜಂಗಮಪ್ರಾಣಿ ಎಂದು ।
ನಾನು ನಂಬಿರುವೆನು ಬಸವಣ್ಣ–ನಿಮಗೆ
ತಾನೆ ಅರಸುತ ಪ್ರಭು ಬರುತಿಹನು ॥ ೬೩

ಪರಮ ಪ್ರಭುದೇವ । ಅರಸೂತ ಹೊರಟದ್ದು ।
ಅರುಹಲು ಚೆನ್ನಬಸವಣ್ಣ–ಮನತುಂಬಿ
ಹರುಷಗೊಂಡು ನುಡಿದರು ಬಸವಣ್ಣ ॥ ೬೪

ಚೆನ್ನಬಸವ ದೇವರೆ । ಘನ ಜಂಗಮ ಲಿಂಗವೆಂಬ ।
ಎನ್ನ ಭಾವ ಫಲಿಸಲು ಇಂದಿನ–ಎನ್ನ
ಪುಣ್ಯಕ್ಕೆ ಸರಿಯುಂಟೆ ಹೇಳಯ್ಯ ॥ ೬೫

ಲಿಂಗದೊಡಲ ಮನೆಯಾಗಿ । ಜಂಗಮವೆನ್ನ ಕಣ್ಣಮುಂದೆ ।
ಹಿಂಗದೆ ತೋರಿದರೆನ್ನ ಭಾಗ್ಯಕ್ಕೆ–ಕಡೆಯಿಲ್ಲ
ಜಂಗಮವೆ ದಿಟಕ್ಕೆನ್ನ ಮನೆಗೆ ಬರಲು ॥ ೬೬

ಕೂಡಲಸಂಗಮನಲ್ಲಿ । ಬೇಡುವೆ ಸಲುಗೆಯಿಂದ ।
ಪಡೆಯುವೆ ಅವನಿಂದ ವರವ–ಚೆನ್ನಣ್ಣ
ಬಿಡಲಾರೆ ಶಿವಯೋಗಿ ಅಡಿಗಳ ॥ ೬೭

ಪರಮ ಪ್ರಭು ಸಿದ್ಧರಾಮನ। ಬರುವಿನ ಕುರುಹನು।
ಅರಿದು ಸುಜ್ಞಾನ ದೃಷ್ಟಿಯಿಂದ–ಈರ್ವರು
ಪರಮ ಸಂತೈಸಿ ನಲಿಯುತ್ತಿಹರು॥ ೬೮

ಇತ್ತ ಪ್ರಭುದೇವರು। ಚಿತ್ತೊಲಿಸಿ ಸಿದ್ಧೇಶನ।
ತತ್ವ ಬೋಧಿಸೂತ ಶರಣರ–ಹೊರಟಾರ
ಸತ್ಯದಾಗರ ನಿತ್ಯ ಕಲ್ಯಾಣದತ್ತ॥ ೬೯

ಜಗದಣ್ಣನ ಕಾಣಲು ಶಿವ-। ಯೋಗಿಗಳು ಹೊರಟಾಗ।
ಬೇಗ ಊರೂರ ಜನಗಳಕೂಡಿ–ಭಕ್ತಿಯಲಿ
ಉಘೆ ಚಾಂಗುಭಲ ಊಘೆ ಎನ್ನೂತ॥ ೭೦

ಎಲ್ಲರ ಕಣ್ಣಮನ। ಕಲ್ಯಾಣದತ್ತ ಸೆಳೆದಿಹರು।
ಬಲ್ಲಹ ಪ್ರಭುದೇವ ಶಿವಯೋಗಿ–ಸಿದ್ಧರಾಮ
ಉಲ್ಹಾಸದಿ ಸೊನ್ನಲಿಗಿ ಬಿಟ್ಟಿಹರು॥ ೭೧

ಯೋಗಿಗಳ ಬರುವ ಸುದ್ದಿ। ವೇಗದಿ ಹರಡಿತ್ತು।
ಬೇಗ ಊರೂರ ಸಿಂಗರಿಸಿ–ಭಕ್ತಜನ
ಆಗಮನ ಕಾಯುತ್ತಲಿದ್ದರು॥ ೭೨

ಯೋಗಿಗಳು ಇಳಿದಲ್ಲಿ। ಮಿಗಿಲಾದ ಐಸಿರಿ।
ಸಾಗಿ ಇಳಿದಂತೆ ಭುವಿಗೆ–ಕೈಲಾಸ ಶಿವ-
ಯೋಗಿ ಬರುವಿಲಿ ಕಂಡಿತ್ತು॥ ೭೩

ಶಿವಯೋಗಿ ಬಂದಿಹರು। ಶಿವತತ್ವ ಅರಹುವರು।
ಶಿವಲಿಂಗ ಪೂಜೆ ಕಲಿಸುವರು–ನಡೆಯಿರಿ
ದೇವಾಧಿ ದೇವರ ದರುಶನಕ್ಕೆ॥ ೭೪

ಊರೂರ ಜನಕ್ಕೆಲ್ಲ। ಸಾರೂತ ಶಿವತತ್ವವ।
ಬೀರೂತ ಬಸವನ ಕೀರುತಿಯ–ಕಲ್ಯಾಣ-
ಪುರವಲ್ಲ ಹರನ ಕೈಲಾಸವದು॥ ೭೫

ಕಲ್ಯಾಣಪುರ ಕಂಡು। ಅಲ್ಲಮನತಿ ಭಕ್ತಿಯಲಿ।
ಮೆಲ್ಲನೆ ನುಡಿದರು ಕಂಠತುಂಬಿ–ಸಿದ್ಧರಾಮ
ಕಲ್ಯಾಣವಿದು ಜೀವರ ಕಲ್ಯಾಣ॥ ೭೬

ಭಕ್ತಿಗೆ ತವರಾಗಿ । ಮುಕ್ತಿಗೆಮುಖಿ ಸರ್ವ- ।
ಶಕ್ತಿಯಾಗಿರುವನು ಬಸವಣ್ಣ–ಮರ್ತ್ಯದ
ಭಕ್ತಿ ಸಾಮ್ರಾಜ್ಯದ ಒಡೆಯನು ॥ ೭೭

ಅಭಿನವ ಕೈಲಾಸ । ಶೋಭಿಸುವದು ಕಲ್ಯಾಣ ।
ಶುಭವನ್ನೆ ಕೋರುತ ಸಕಲಕ್ಕೆ–ಬಸವಣ್ಣ
ಅಭಯ ನೀಡೂತ ನೆಲೆಸಿದನು ॥ ೭೮

ಬಸವದೇವರು ಚೆನ್ನ- । ಬಸವಣ್ಣ ಮೊದಲಾದ ।
ಅಸಮ ಶಿವಶರಣರ ದರುಶನ–ಆಗುವದು
ಮೀಸಲಿದ್ದ ತನು ಮನ ತುಂಬುವದು ॥ ೭೯

ಕಲ್ಯಾಣ ಪ್ರಣತಿಯಲ್ಲಿ । ತೈಲವೆರೆದು ಭಕ್ತಿರಸದ ।
ಬಲ್ಲ ಆಚಾರವೆಂಬ ಬತ್ತಿಗೆ–ಬಸವನೆಂಬ
ಸಲೆ ಜ್ಯೋತಿ ಮುಟ್ಟಿಸಲಾಯಿತು ॥ ೮೦

ತೊಳಗಿ ಬೆಳಗುವದಲ್ಲಿ । ಹೊಳೆಯೂವ ಶಿವತೇಜ ಆ- ।
ಬೆಳಗಿನೊಳಗೆ ಒಪ್ಪುವ ಶರಣರು–ಕಲ್ಯಾಣದಿ
ಸುಳಿಯುತ್ತಿರುವರು ಶಿವಸಿರಿಯಲ್ಲಿ ॥ ೮೧

ಶಿವಭಕ್ತನವಾಸವು । ಅವಿಮುಕ್ತ ಕ್ಷೇತ್ರವದು ।
ಶಿವಭಕ್ತನ ದೇಶವು ಪಾವನ–ಬಸವ
ದೇವರು ಪರಮಾರಾಧ್ಯರೆನಗೆ ॥ ೮೨

ಲಿಂಗದಲ್ಲಿ ಕಾಣುವೆ । ಸಂಗನಬಸವಣ್ಣನ ।
ಮಂಗಳ ಮಹಾಮಹಿಮನ–ಕಲ್ಯಾಣವು
ಕಂಗೊಳಿಸುವದು ಸಿದ್ಧರಾಮ ॥ ೮೩

ಬಸವರಾಜೇಂದ್ರನು । ವಾಸಿಪ ಕಲ್ಯಾಣ ಮಹತಿ ।
ಲೇಸ ಕಲ್ಯಾಣಬಾಗಿಲ ಮುಂದೆ ನಿಂತು–ಪ್ರಭು
ಶಾಸನದಿ ಬರೆದದ್ದು ನೋಡುವರು ॥ ೮೪

ಚಿಕ್ಕದಂಡನಾಯಕರು । ಲೆಕ್ಕಹಾಕಿ ವಿಸ್ತಾರದ ।
ಚೊಕ್ಕ ಕಲ್ಯಾಣದ ಮಹಿಮೆಯ–ಬರೆದದ್ದು
ಮಿಕ್ಕೀದ ಹರುಷದಿ ಓದುವರು ॥ ೮೫

ಹದಿನಾಲ್ಕು ಲೋಕಕ್ಕೆ । ಉದಿಸಿತ್ತು ಕಳಸಾಗಿ ।
ರುದ್ರಲೋಕವು ಇಳಿ ತಂದಂತೆ–ಮರ್ತ್ಯಕ್ಕೆ
ರುದ್ರಕನ್ನಿಕೆಯರ ಸಮವೇತ ॥ ೮೬

ಸತ್ಯವಂತರು ಶುದ್ಧರು । ನಿತ್ಯರು ನಿಜೈಕ್ಯರು ।
ಸಾತ್ವಿಕರು ಮಹಾಜ್ಞಾನಿಗಳು–ವಾಸಿಪರು
ಮರ್ತ್ಯದ ಕೈಲಾಸ ಕಲ್ಯಾಣದಿ ॥ ೮೭

ಶಿವಾನುಭಾವಿಗಳು । ಶಿವಜ್ಞಾನ ಸಂಪನ್ನರು ।
ಶಿವಲಿಂಗಪ್ರಾಣಿ ಶರಣರು–ಪರಮ
ಶಿವಯೋಗಿಗಳಲ್ಲಿ ಹಲವರು ॥ ೮೮

ಶಿವಾಚಾರ ವೇದ್ಯರು । ಶಿವಾಗಮ ಸಾಧ್ಯರು ।
ಶಿವಪ್ರಸಾದ ಪಾದೋದಕ–ಸಂಬಂಧಿಗಳು
ಶಿವಸಮಯಾಚಾರಿ ವಾಸಿಪರು ॥ ೮೯

ಪಾಪಿಗಳಿಗೆ ಸ್ಥಲವಿಲ್ಲ । ಕೋಪಿಗಳಿಗೆ ತಾಣವಿಲ್ಲ ।
ತಾಪತ್ರಯದಿ ಬಳಲುವವರು–ಪೊಕ್ಕೆನೆನಲು
ವಿಪರೀತ ಬಾಳಬಾಯಿಧಾರಿ ನೋಡಾ ॥ ೯೦

ಕಲ್ಯಾಣದ ವಿಸ್ತೀರ್ಣ । ಸಲೆ ಹನ್ನೆರಡು ಯೋಜನೆ ।
ಕಲ್ಯಾಣ ಪರಿಪ್ರಮಾಣದಗಲ–ವೈಶಾಲದಿ
ಕುಲಕೋಟಿ ಉದ್ಧರಿಸಲು ಅಣಿಯಾಗಿ ॥ ೯೧

ಮುನ್ನೂರಾಅರವತ್ತು । ಚೆನ್ನ ಮಹಾದ್ವಾರಗಳು ।
ಇನ್ನವಕೆ ಶೋಭಿಪವು ನೂರೈವತ್ತೈದು–ಕದಗಳು
ಕಾಣಿರೊ ವಜ್ರಾಯುಧದ ಅಲಗ ॥ ೯೨

ಎರಡುನೂರಿಪ್ಪತ್ತೈದು । ದ್ವಾರಂಗಳು ಕಲ್ಲಿನವು ।
ದ್ವಾರವಟಕ್ಕೆ ನಾನೂರೈವತ್ತು–ಬಂಗಾರ ಕು–
ಸುರಿನ ಕೆಲಸದ ಕದಂಗಳು ॥ ೯೩

ನೂರಹದಿನೈದು ಅಲ್ಲಿ । ಚೋರಗಂಡಿಗಳಿಗೆಲ್ಲ ।
ನೂರಹದಿನೈದುಮೊಳೆಯು–ಕದಗಳು ಅ–
ವಾರಿ ಇಪತ್ತು ದ್ವಾರಕ್ಕೆ ಕದಗಳಿಲ್ಲ ॥ ೯೪

ಪಟ್ಟಣಕೆ ಬಳಸಿ ಬಂದ। ಕೋಟಿ ನಲವತ್ತೆಂಟು ಯೋಜನೆ।
ಪಟ್ಟಣ ಪ್ರಮಾಣ ಬಾಹತ್ತರ ಮನೆ–ಲಕ್ಷ
ದಿಟವಿದು ಮಂಡಲೀಕರ ಮನೆ ಲಕ್ಷ॥ ೯೫

ಸಾವಂತರ ಮನೆ ಲಕ್ಷ। ರಾವುತ ರಾಯರ।
ತವೆ ಮನೆಯೊಳಗೆ ಅಡಗಿದ–ಮನೆಗಳ
ಯಾವ ಲೆಕ್ಕವಿಲ್ಲ ನೋಡಿರಣ್ಣ॥ ೯೬

ಹನ್ನೆರಡು ಯೋಜನದ ವಿ–। ಸ್ತೀರ್ಣ ಸೂರ್ಯವೀಧಿಯ।
ಎಣಿಕೆ ನೂರಿಪ್ಪತ್ತುದ್ವಾದಶ ಯೋಜನ–ಸೋಮವೀಧಿ
ಕಾಣಿರಣ್ಣಾ ನೂರಾಇಪ್ಪತ್ತೈದು॥ ೯೭

ಒಳಗಿನ ಕೇರಿಗಳು। ಸಲೆ ಹೊರಗಿನ ಕೇರಿಗೆ।
ಅಳತೆ ಇಲ್ಲ ಆ ಪಟ್ಟಣದೊಳು–ಲಕ್ಷದ
ಮೇಲೆ ತೊಂಬತ್ತಾರು ಸಾವಿರ ದೇಗುಲ॥ ೯೮

ಶಿವಾಲಯಂಗಳಲ್ಲಿ। ತವೆ ತ್ರಿಪುರಾಂತಕದೇವರ।
ದೇವಾಲಯವೆ ಗಣ್ಯವಾದದ್ದು–ತುಂಬಿದ
ತಾವರೆಯ ಸರೋವರ ಮುನ್ನೂರೈವತ್ತು॥ ೯೯

ಸಂಧಿ ೨೮

ದಾಸೋಹದ ಮಠಗಳ । ವಾಸ ಎರಡು ಲಕ್ಷೆಂಬತ್ತೈದು- ।
ಸಾಸಿರದ ಏಳನೂರಇಪ್ಪತ್ತು–ಅವುಗಳಿಗೆ
ಬಸವಣ್ಣನ ದಾಸೋಹಮಠವೆ ಮುಖ್ಯ ॥ ೧

ದಾಸೋಹದ ಮಠಗಳಲ್ಲಿ । ಬಸವರಾಜೇಂದ್ರನ।
ದಾಸೋಹದ ಮಠವೆ ಮೇಲಾದದು–ವಿಸ್ತೀರ್ಣ
ವಸುಧೀಯ ಜನಕೆಲ್ಲ ಅರಹುವೆ ॥ ೨

ಕೌಶಲ್ಯದ ಕಲ್ಲು ಪವಳಿ । ಕುಸುರಿನ ಮಾಡ್ವಾರೈದು ।
ಶಾಸನ ಪಂಚಾಕ್ಷರಿ ಮಂತ್ರದ–ಒಪ್ಪುವದು
ಮಿಸುನಿಯಕಂಭಕೆ ತೋರಣ ರುದ್ರಾಕ್ಷಿ ॥ ೩

ಒಪ್ಪಿತು ನಂದಿಯ ಧ್ವಜ । ಉಪ್ಪರ ಗುಡಿ ಪತಾಕೆ ।
ಒಪ್ಪಿತು ವ್ಯಾಸಧ್ವಜ ಬಸವಣ್ಣನ–ಸಿಂಹಾಸನ
ಅಪ್ರತಿಮ ಮಧ್ಯವಿಸ್ತಾರ ವೈಭವ ॥ ೪

ಸಾವಿರ ಕಂಭಗಳ । ಸುವರ್ಣದ ಉಪ್ಪರಿಗೆ ।
ಸಾವಿರ ಮನೆಗೆತ್ತಿದ ಹೊನ್ನ ಕಳಸ-ಅಲ್ಲಿ
ತ್ರಿವಿಧಮೂರ್ತಿಯ ಪೂಜೆಗೆ ಪುಷ್ಕರಿಣಿ ॥ ೫

ತುಂಬಿದ ಪಾದೋದಕದ । ತುಂಬ ನಿಚ್ಚಲು ಬೆಳೆವ ।
ಕಾಂಬುವವು ರಾಜಶಾಲಿಯ ಗದ್ದೆ–ಕೇಳರಣ್ಣ
ತುಂಬ ಹನ್ನೆರಡುಸಾವಿರ ಕಂಡುಗ ॥ ೬

ಬಿನ್ನಾಣದರಮನೆಯ ವಿ- । ಸ್ತೀರ್ಣದೊಳಭಾಗದಿ ।
ಘನ ಲಿಂಗಾರ್ಚನೆ ಮಾಡುವ ಮಠದ-ಕಟ್ಟಳೆ
ಕಾಣಾ ಲಕ್ಷದ ಮೇಲೆ ತೊಂಬತ್ತಾರುಸಾವಿರ ॥ ೭

ಬಸವಣ್ಣ ಮೊದಲಾದ । ಅಸಂಖ್ಯಾತರ ಮಠಗಳು ।
ಅಸಮ ಕಲ್ಯಾಣದೊಳಗೆ ಎಷ್ಟೆಂಬುದು–ಗಣತಿ
ಉಸುರುವೆನು ಮಹಾಜನರಿಗೆ ॥ ೮

ಹನ್ನೆರಡು ಸಾವಿರ । ಸನ್ನುತ ಕಟ್ಟಳೆನೇಮದ ।
ಮಾನ್ನ ಮಠವಲ್ಲದೆ ಇಪ್ಪತ್ತೆಂಟು–ಸಾವಿರ
ಮನೆಯಲ್ಲ ಮಹಾಮನೆ ಶೋಭಿಸವು ॥ ೯

ಹತ್ತು ಸಾವಿರ ನಿಜ । ನಿತ್ಯ ನೇಮಿಗಳ ಮಠಗಳು
ಅತ್ತ ಹದಿನೈದುಸಾವಿರ ಚಿಲುಮೆಯ–ಅಗ್ಗವಣಿ
ವ್ರತಸ್ಥರ ಮಠಗಳು ರಾಜಿಸುವವು ॥ ೧೦

ಐದುಸಾವಿರ ವೀರವ್ರತ । ಸಾಧ್ಯರ ಮಠಗಳು ।
ಅದೊ ಹನ್ನೆರಡುಸಾವಿರ ಅಚ್ಚ–ಪ್ರಸಾದಿ
ಸದಮಲರ ಮಠಗಳು ಕಂಗೊಳಿಸೆ ॥ ೧೧

ಸಾವಿರದ ಅರವತ್ತುನಾಲ್ಕು । ಅವು ಶೀಲವಂತರಮಠ ।
ಸಾವಿರ ಜಂಗಮಕೆ ಆರೋಗಣೆ–ಮಾಡೂವ
ಮೂವತ್ತೆರಡುಸಾವಿರ ದಾಸೋಹಮಠ ॥ ೧೨

ನಿತ್ಯದಲಿ ಐದುನೂರು । ಸತ್ಯ ಜಂಗಮಕ್ಕೊಲಿದು ।
ನಿತ್ಯ ದಾಸೋಹದ ಐವತ್ತೆಂಟು–ಸಾವಿರ
ಸತ್ಯ ಸದಾಚಾರಿಗಳ ಮಠ ಇಹವು ॥ ೧೩

ನಿತ್ಯ ಸಾವಿರದನೂರು। ಕರ್ತೃ ಜಂಗಮಕ್ಕೊಲಿದು।
ನಿತ್ಯ ದಾಸೋಹವ ಮಾಡೂವ-ಮಠಗಳು
ಇತ್ತ ಇರುವವು ಹನ್ನೊಂದುಸಾವಿರ॥ ೧೪

ಆವಾರಿಯಿಂದ ಮಾಡುವ। ತವೆ ಮಾಟಕೂಟದ।
ಸವಿನಯ ಭಕ್ತರ ಮಠಗಳು–ಒಂದು ಲಕ್ಷ
ನವ್ಯ ಕಲ್ಯಾಣದಿ ಶೋಭಿಪವು॥ ೧೫

ಜಂಗಮ ಸಮವೇತ। ಪಿಂಗದೆ ಸಮಯಾಚಾರದಿ।
ಲಿಂಗಪೂಜೆ ಮಾಡೂವ ಜಂಗಮ–ಭಕ್ತರಮಠ
ಕಂಗೊಳಿಸೆ ಎರಡುಸಾವಿರ ಏಳನೂರಿಪ್ಪತ್ತು॥ ೧೬

ಅಸಂಖ್ಯಾತರಿಗೆ ಮುಖ್ಯ। ಅಸಮ ರುದ್ರಲೋಕದಿಂ।
ವಸುಧೀಗೆ ಇಳಿತಂದ ಪ್ರಮಥರ-ಮಠಗಳು
ವಾಸಿಪವು ಏಳನೂರು ಇಪ್ಪತ್ತು॥ ೧೭

ಮಹಾಪ್ರಮಥರಿಗೆ। ಮಹಿಮ ಪುರಾತರಿಗೆ।
ಮಹಾಗಣ ಅಸಂಖ್ಯಾತರಿಗೆ-ಒಡೆಯ
ಮಹಾನುಭಾವಿ ಸಂಗನ ಬಸವಣ್ಣ॥ ೧೮

ಏಕಮುಖ ದಶಮುಖ। ಲೋಕೇಶನು ಶತಮುಖ।
ಲೋಕದಿ ಸಹಸ್ರ ಲಕ್ಷಮುಖ-ಕೋಟಿಮುಖ
ಲೋಕೈಕ ಅನಂತದಿ ಒಡನಾಡುವ॥ ೧೯

ಏಕಮುಖ ಅನಂತಮುಖ। ಲೋಕಕ್ಕೆ ಮುಖವಾಗಿ।
ಏಕದೇವ ಸಂಗನಬಸವಣ್ಣನು-ಕಲ್ಯಾಣದಿ
ಲೌಕಿಕ ಪಾರಮಾರ್ಥದ ಕುರುಹಾಗಿ॥ ೨೦

ಗುರುಸಂಗನಬಸವಣ್ಣ। ಶರಣ ಸನ್ನಹಿತ ಬಸವ।
ಪರಮ ಜಗದಾರಾಧ್ಯ ಬಸವಣ್ಣ-ಪ್ರಮಥ
ಗುರುವಿನ ಗುರು ಶ್ರೀ ಬಸವಣ್ಣ॥ ೨೧

ನಿತ್ಯ ನಿಜೈಕ್ಯ ಬಸವ। ಸತ್ಯ ಪರಿಪೂರ್ಣನು।
ಮರ್ತ್ಯವ ಕೈಲಾಸ ಮಾಡಿರುವ-ಬಸವಣ್ಣ
ಕರ್ತಾರನ ಕಟಮ್ಮಟದಿ ಒಂದಾಗಿ॥ ೨೨

ಸತ್ಯ ಸಾತ್ವಿಕ ಬಸವ । ಭೃತ್ಯಾಚಾರವೆ ತನ್ನ ।
ನಿತ್ಯ ನೇಮದಲ್ಲಿ ಒಂದೆಂದು-ಪಾಲಿಸುವ
ನಿತ್ಯ ಪ್ರಸಾದಿ ಬಸವಣ್ಣದೇವ ॥ ೨೩

ಶಿವಾಚಾರದ ಘನತೆ । ಭುವಿ ಜೀವಿಗಳಿಗರುಹಿ ।
ದೇವಲೋಕವು ಅನ್ಯವಿಲ್ಲೆಂದು-ತೋರುವ
ದೇವರ ದೇವ ಸಂಗನಬಸವಣ್ಣ ॥ ೨೪

ಸರ್ವಾಚಾರ ಸಂಪನ್ನ । ಸರ್ವಾಂಗಲಿಂಗಿ ಬಸವ ।
ಸರ್ವಶಕ್ತನಾಗಿ ಅಸಂಖ್ಯಾತರಲಿ-ಕೂಡಿಕೊಂಡ
ಸರ್ವಕ್ಕೆ ಕಾರಣಕರ್ತನು ಬಸವ ॥ ೨೫

ಆರುಸ್ಥಲ ಸಂಪನ್ನನು । ಏರಿದನು ಎತ್ತರಕೆ ।
ಸಾರುವನು ಸತ್ಯ ಕಾಯಕವ-ಬಸವೇಶ
ಮೀರಿದನು ಮೇರೆ ವೇದಾಗಮದ ॥ ೨೬

ಅಕಾಯ ಚಾರಿತ್ರನು । ಅಖಂಡ ಪರಿಪೂರ್ಣನು ।
ಲೋಕೇಶ ಸಚ್ಚಿದಾನಂದಮೂರ್ತಿ-ದೇವ
ಲೋಕ ರಕ್ಷಿಪ ಸಂಗನಬಸವಣ್ಣ ॥ ೨೭

ಸದ್ಯೋನ್ಮುಕ್ತಿ ಬಸವ । ಅಭೇದ್ಯ ಭೇದಕನು ।
ರುದ್ರಲೋಕವೆ ಮರ್ತ್ಯಕ್ಕೆತಂದಾತ-ಬಸವ
ಮೋದದಿ ಶಿವಾಚಾರದಿ ಮೆರೆದನು ॥ ೨೮

ಪರಮ ಬಸವನ ಭಕ್ತಿ । ನರಪತಿ ಬಿಜ್ಜಳರಾಯ ।
ಒರೆದೊರೆದು ನೋಡಿ ಪ್ರಬಲಿತ-ಮಾಡೂವ
ಪುರ ಕಲ್ಯಾಣದ ಅರಸನು ॥ ೨೯

ಲೋಕನಾಯಕ ಬಸವ । ಸಕಲಕ್ಕೆ ಸಮನೋಡಿ ।
ಲೋಕ ಕಲ್ಯಾಣಕ್ಕೆ ರಾಜ್ಯವಾಳಲು-ಕಲ್ಯಾಣ
ಲೋಕದವರು ಮದುವೆಗೆ ಹೆಸರಿಟ್ಟರು ॥ ೩೦

ಕಲ್ಯಾಣದ ಮಹಾ ದರುಶನ । ಕಲ್ಯಾಣವ ನೆನೆದರೆ ।
ಕಲ್ಯಾಣದ ಮಹಾತ್ಮೆ ಕೇಳಿದರೆ-ಕರ್ಮಕ್ಷಯ
ಕಲ್ಯಾಣವೆ ಕೈಲಾಸವಾಗಿಹುದು ॥ ೩೧

ಕೂಡಲಚೆನ್ನಸಂಗನ। ಧೃಢಭಕ್ತ ಬಸವಣ್ಣನ।
ಅಡಿ ಇಟ್ಟತಾವೆ ಮಾಕಲ್ಯಾಣ-ಅರಿದು ನಾ
ಬಿಡದೆ ಶಾಸನ ಬರೆದೋದಿ ಭವಗೆದ್ದೆ॥ ೩೨

ಬರೆದ ಶಾಸನವದು। ಪರಮ ಅಲ್ಲಮನೋದಿ।
ಹರುಷ ಗೊಂಡರು ಮನದುಂಬಿ-ಮಹಿಮೆ
ಅರಿತೇನೊ ಸಿದ್ಧರಾಮ ಬಸವಯ್ಯನ॥ ೩೩

ಆದಿ ಆಧಾರವಿಲ್ಲದ। ಅದೊ ಆಗಮ ನಾಸ್ತಿಯಾದ।
ಸಾಧಿಸಿ ಸಾಗರ ವಿರಹಿತ-ಆದವನ
ಈ ಧರೆಯೊಳು ಯಾರೂ ತಿಳಿಯರು॥ ೩೪

ದಶಮುಖ ಮಾಣಿಕದ। ಎಸಳ ಕಂಗಳು ಪರ್ಬಿ।
ಪಸರಿಸಿದುದ ಯಾರರಿಯರು-ನಮ್ಮಯ
ಬಸವೇಶನ ನಿಲವು ಉಪಮಾತೀತ॥ ೩೫

ಹಿರಿದೊಂದು ವೃಕ್ಷವು। ಪಿರಿದು ರೂಪವ ತಾಳಿ।
ಇರುವದು ಪೃಥ್ವಿಗೆ ಇಂಬಾಗಿ-ಅದು
ಅರಿಯಲು ಸಮರ್ಥರಾರಿಲ್ಲ॥ ೩೬

ಅಂತರಂಗ ಭುವನವ। ಸಂತತ ಮೆಚ್ಚಿನೋಡುತ।
ಹಂತ ಬೆಡಗಿನ ತಾವರೆಯ-ಮಧ್ಯದ
ಆ ತಾರಕಿಯನಾರು ಅರಿಯರು॥ ೩೭

ಇನ ಶಶಿಗಳಿಬ್ಬರು ನ-। ಯನ ನೋಟದ ಪುಷ್ಪ।
ತಾನೆ ಪರಿಮಳವಾಗಿರುವುದು-ಮರ್ತ್ಯದ
ಮಾನವರರಿಯರು ಸಿದ್ಧರಾಮ॥ ೩೮

ಇಂಬು ನಯನದಲ್ಲಿ। ಸಂಭ್ರಮವಿಲ್ಲದ ರೂಪು।
ಸಾಂಬ ಮಹತ್ತಾಗಿರುವುದು-ಅರಿಯರು
ದಂಭಕ್ಕೆ ಒಳಗಾದ ಮನುಜರು॥ ೩೯

ಸಾಗರದೊಳಗಿನ। ಅಗೋಚರ ಜ್ಯೋತಿಯಂತೆ।
ಲಿಂಗದೊಳಗೆ ಪರಮಾರಾಧ್ಯನ-ನಿಂದ ನಿಲವ
ಹೇಗೆ ಉಪಮಿಸಲಿ ಸಿದ್ಧರಾಮ॥ ೪೦

ಬಸವದೇವನ ಮಹಿಮೆ । ಉಸುರಲು ಪ್ರಭುದೇವ ।
ಹಸನ್ಮುಖರಾಗಿ ಸಿದ್ಧರಾಮ-ನುಡಿದರು
ಅಸಮರು ಮೆಟ್ಟಿದ ಧರೆ ಪಾವನ ॥ ೪೧

ಶರಣರು ವಾಸಿಪ । ಧರೆಯೆ ಶಿವಲೋಕವದು ।
ಹರ ನಿನ್ನ ವಚನ ತಪ್ಪುವದೆ-ಇಂದೆನಗೆ
ಅರಿವು ಬಂದಿತು ಶರಣರ ಹಿರಿಮೆ ॥ ೪೨

ಜಲದೊಳು ಉದಯಿಸಿ । ಜಲವು ಮತ್ತೆ ತಾನಲ್ಲ ।
ಜಲವೆಂದಿಪ್ಪರು ಲೋಕದ ಜನ-ತಮ್ಮಂತೆ
ಭೂಲೋಕದ ಜಡರೆನ್ನುವರು ನರರು ॥ ೪೩

ಪರಮಗುರು ಬಸವಣ್ಣ । ಪೊರೆಯಲು ಬಂದ ಜಗವ ।
ಹರಿಯಿತು ಎನ್ನ ಪರಿಭವದ-ದಂದುಗ
ಹರ ಬಸವನಿಂದ ಬದುಕಿದೆನು ॥ ೪೪

ಸುದ್ದಿಯನರಿಯದೆ । ಬುದ್ಧಿಗೇಡಿ ಜಡರೆಲ್ಲರು ।
ಹದ್ದುಮೀರಿ ಮಾತನಾಡುವರು-ಮರ್ತ್ಯದ
ಬದ್ಧಜೀವಿಗಳು ಬಡಬಡಿಸಿ ॥ ೪೫

ಸತ್ತವರಿಗೆ ಪ್ರಾಣ । ಇತ್ತು ಮೆರೆದರು ಬಸವ ।
ಮರ್ತ್ಯದವರಿಗುಂಟೆ ಈ ಶಕ್ತಿಯು-ಶಿವನ
ಸತ್ಯ ಶರಣರಿಗಲ್ಲದೆ ಇನ್ನಾರಿಗೆ ॥ ೪೬

ಶಿವ ಗುರು ಬಸವಣ್ಣ । ಶಿವನಾಗಿ ಬಸವ ಗುರು ।
ದೇವ ತಾ ಪಶುಗಳಿಗೆ ಪತಿಯಾದ-ಬಸವನ
ಸವಿ ನೆನಹು ಸುಖಸಮುದ್ರವಯ್ಯ ॥ ೪೭

ನಿನ್ನಿಂದ ಕಂಡೆನು । ಸನ್ನುತ ಬಸವಣ್ಣನ ।
ಧನ್ಯ ಧನ್ಯನಾದೆ ಅಲ್ಲಮ-ಗುರುದೇವ
ನೀ ನನಗೆ ಅರುಹಿಸಿ ಬದುಕಿಸಿದೆ ॥ ೪೮

ಸದಮಲ ಬಸವಣ್ಣನ । ಪಾದ ತೋರಿದಿರಾಗಿ ।
ಬದುಕಿದೆನೆನಲು ಸಿದ್ಧರಾಮ-ಈರ್ವರು
ಬಂದರು ಬಸವನ ಮಹಾದ್ವಾರಕ್ಕೆ ॥ ೪೯

ನುತಿಸಲು ಸಿದ್ಧರಾಮ । ಅತಿ ಹರುಷದಿ ಪ್ರಭು ।
ಮಿಥ್ಯ ಕರ್ಮದ ಕಾಯಕರಣ-ವಿಲ್ಲದ
ಸತ್‌ಪ್ರಾಣ ಮಥನವಿಲ್ಲದ ಶಬ್ದ ॥ ೫೦

ಗಮನವಿಲ್ಲದ ಗಮನ । ಸ್ವಾಮಿ ದೇವನ ಬರವು ।
ಅಮಮ ಬಸವನ ಅಂಗಳ ಕಂಡು-ತರಹರ
ನಮಗೆ ಆಯಿತ್ತು ಸಿದ್ಧರಾಮಯ್ಯ ॥ ೫೧

ಉಪಪಾತಕ ಮಾಪಾತಕ । ಅಪರಾಧ ಕೋಟಿಗಳು ।
ಉಪಮಾತೀತ ಶರಣನ ಅಂಗಳ-ಕಂಡಲ್ಲಿ
ಪಾಪಕರ್ಮಂಗಳು ಅಳಿವವು ॥ ೫೨

ಶರಣನ ಅಂತರಂಗದಿ । ಪರಶಿವನಿರುವನು ।
ಪರಶಿವನಿದ್ದಲ್ಲಿ ಕೈಲಾಸಿಹುದು-ಅಲ್ಲಿ
ಇರುವರು ಸಮಸ್ತ ರುದ್ರಗಣರು ॥ ೫೩

ಶರಣನ ಅಂಗಳದಿ । ಅರವತ್ತೆಂಟು ತೀರ್ಥಗಳು ।
ಬರಮಾಡಿ ನೆಲೆಸಿರುವವು-ಸಿದ್ಧರಾಮ
ಶರಣ ಸಂಗನಬಸವನ ಅಂಗಳದಿ ॥ ೫೪

ಸಂಗನಬಸವಣ್ಣನ । ಅಂಗಳವ ಕಂಡೆನ್ನ ।
ಕಂಗಳು ತೃಪ್ತಿಗೊಂಡವು-ಸಿದ್ಧರಾಮ
ಮಂಗಳಮಯನಿರುವ ಕೈಲಾಸ ॥ ೫೫

ಬಸವನ ಮಾಮನೆ ಕಂಡು । ಉಸುರಲು ಪ್ರಭುದೇವ ।
ಅಸಮ ಸಿದ್ಧರಾಮ ನುಡಿದರು-ಹೇ ದೇವ
ವಸುಧಿಯಲಿ ಬಸವನ ಮನೆ ಕೈಲಾಸ ॥ ೫೬

ನಿಶ್ಚಲ ಶರಣರ ಮನೆಯ । ಶಾಶ್ವತ ಅಂಗಳದಲ್ಲಿ ।
ಅಷ್ಟಾಷಷ್ಟಿ ತೀರ್ಥ ನೆಲೆಸಿರುವವು-ದೇವ
ನಿಶ್ಚಿತ ನೀನಿನಿತು ಒಲಿದಲ್ಲಿ ॥ ೫೭

ದೇವ ಬಸವನ ಮನೆಯ । ಶಿವಗಣಂಗಳ ಕಂಡು ।
ಭಾವ ಮನ ಉಬ್ಬಿಕೊಬ್ಬಿತು-ಸಿದ್ಧರಾಮ
ದೇವನ ದಾಸೋಹ ನೋಡಯ್ಯ ॥ ೫೮

ಮರ್ತ್ಯಲೋಕದ ಮಾಮನೆ। ವ್ಯರ್ಥ ಹಾಳಾದಿತೆಂದು।
ಕರ್ತ ಕಳುಹಿದನು ಮಹಾಶರಣನ-ಮಾಡಿದನು
ಮರ್ತ್ಯದಿ ಕಲ್ಯಾಣ ಕೈಲಾಸ॥ ೫೯

ಪ್ರಮಥರು ರುದ್ರಗಣಕ್ಕೆ। ಸಮ ಕಾಣಲು ಕರೆತಂದು।
ನಮ್ಮ ಅಸಂಖ್ಯಾತರೆಂದು ಹೆಸರಿಟ್ಟು-ಬಸವಣ್ಣ
ಸ್ವಾಮಿಯಾದನು ಮಹಾಲೋಕಕ್ಕೆ॥ ೬೦

ಭಕ್ತಿಯ ಕುಳಸ್ಥಳವ। ಶೃತದೃಷ್ಟ ಪವಾಡದಿಂದ।
ಮುಕ್ತಕ್ಷೇತ್ರ ಮಾಡಿ ತೋರಿದನು-ಜಗವರಿಯೆ
ಯುಕ್ತ ಶಿವಾಚಾರದ ಧ್ವಜವನೆ॥ ೬೧

ನೋಡಯ್ಯ ಮರ್ತ್ಯಲೋಕ। ಸಡಗರ ಶಿವಲೋಕಕ್ಕೆ।
ಒಡೆಯ ತಾ ನಿಚ್ಚಣಿಗೆಯಾದನು-ಮನುಜರ
ಬೇಡಾದ ಜೀವನ ಬೇಕೆನಿಸೆ॥ ೬೨

ಶಿವಶರಣರ ಮನೆಯ। ಶಿವಗಣ ಸಮೂಹವು।
ತವೆ ಕಂಡು ಮನವು ಹಿಗ್ಗೀತು-ಸಿದ್ಧರಾಮ
ದೇವನ ದಾಸೋಹದ ಘನವನೋಡಾ॥ ೬೩

ಆದಿಯ ಲಿಂಗವನು। ಮೇದಿನಿಗೆ ತಂದು ತಾ।
ಮೋದದಿ ಮರ್ತ್ಯದಿ ಮಾಮನೆ-ಕಟ್ಟಿದ
ಸದಮಲ ಸಂಗನಬಸವಣ್ಣನು॥ ೬೪

ಮನೆಯ ನೋಡಬೇಕೆಂದು। ನಾನ್ಹೋದೆ ಸಿದ್ಧರಾಮ।
ಮನೆಯು ಹೊಗದ ಮುನ್ನವೆ-ಎನ್ನನು
ನುಂಗಿತ್ತು ಏನು ಬಣ್ಣಿಸಲಿ ಹಿರಿಮೆಯ॥ ೬೫

ಅಂಥ ಮನೆಗೊಂದು ಕಂಬ। ಇಂತು ತೊಲೆಗಳು ಆರು।
ಜಂತೆ ಒಲೆಗೆ ಮೂವತ್ತಾರು-ಧರೆಯಾಕಾಶ
ಇಂತು ಹೊದ್ದದ ಕೆಸರುಗಲ್ಲು॥ ೬೬

ಬಾಗಿಲು ಒಂಭತ್ತಕ್ಕೆ। ಬೀಗ ಹಾಕಿರುವುದಯ್ಯ।
ಸಾಗಿ ನೋಡಲು ಗವಿ ಇಕ್ಕಿಹವು-ಬೇರೊಂದು
ಬಾಗಿಲು ಉರಿಯ ಉಗುಳುವದು॥ ೬೭

ಮುತ್ತಿನ ಕಂಭ ಮೇಲ್ಕಟ್ಟಿನ । ಅತ್ತ ಮೇಲೆ ಮಾಣ್ಯಿಕಶಿಖರಿ ।
ಉತ್ತಮ ಶಿಖರಿಯ ತುದಿಯಲ್ಲಿ-ಬಿಳಿಯ
ಎತ್ತರ ಹೊಂಗಳಸು ಇರುವದು ॥ ೬೮

ಕಾಣವರಿಗೆ ಅದು । ಕಾಣಬಾರದು ನೋಡಾ ।
ಕಾಣದವರಿಗೆ ಕಾಣುವದು-ಅಲ್ಲಿ-ಹತ್ತು
ಗಣಪರಿಚಾರಕರು ಚಲಿಸುವರು ॥ ೬೯

ಇಬ್ಬರು ದಡಿಕಾರರು । ಆ ಬಾಗಿಲ ಕಾಯ್ವರು ।
ಒಬ್ಬಾಕೆ ಎಡೆಯಾಡುತಿರ್ಪಳು-ನೀಡುವಳು
ಒಬ್ಬಾಕೆ ಲಿಂಗಾರ್ಚನೆಗೆ ನೋಡಾ ॥ ೭೦

ಒಬ್ಬಾಕೆ ಸುಯಿಧಾನವ । ಉಬ್ಬಿ ಶೋಧಿಸಿ ಕೊಡುವಳು ।
ಒಬ್ಬಾಕೆ ಉರಿಯಿಲ್ಲದ ಅಗ್ನಿಯಲ್ಲಿ-ಮಾಡುವಳು
ಶಂಭು ಶಂಕರನಿಗೆ ಅಡಗಿಯ ॥ ೭೧

ಅಡಗಿಗೆ ಒಬ್ಬಾಕೆ । ನೀಡುತಿಹಳು ಇನ್ನೊಬ್ಬಾಕೆ ।
ಮಾಡುವಳು ತೃಪ್ತಿ ಲಿಂಗಜಂಗಮಕ್ಕೆ-ಸಿದ್ಧರಾಮ
ನೋಡು ನೋಡುತ ನಾ ಬೆರಗಾದೆ ॥ ೭೨

ಒಂದಡ್ಡಣಗೆಯ ಮೇಲೆ । ಐದು ಅಗತೊಳಗೆ ಇಟ್ಟ ।
ಅದು ಬೋನ ಒಬ್ಬನುಂಡರೆ-ಪ್ರಮಥರು
ಬಂದರು ಆಸಿತನ ಒಕ್ಕೂದ ಕೊಳ್ಳಲು ॥ ೭೩

ಮನೆಯ ಹೊಕ್ಕವರೆಲ್ಲ । ತಾನೆ ನಿಶ್ಚಿಂತರಾದರು ।
ಘನ ಶರಣ ಸಂಗನಬಸವನ-ಮನೆಕಂಡು
ಧನ್ಯ ಧನ್ಯನಾದೆ ಸಿದ್ಧರಾಮಾ ॥ ೭೪

ಶರಣನ ಮನೆಕಂಡು । ಪರಮ ಹರುಷಗೊಂಡು ।
ವರ ಪ್ರಭುದೇವ ನುಡಿದದ್ದು-ಕೇಳಿ ತಾ
ಅರುಹಿದರು ಸಿದ್ಧರಾಮಯ್ಯ ॥ ೭೫

ನಿಮ್ಮವರಲ್ಲದ ಮನೆ । ಕೆಮ್ಮನೆ ಕೆಟ್ಟಿಕಂಡು ।
ನಿಮ್ಮವರ ಮನೆಯೆ ನೆಲೆವನೆ-ನೋಡಾ
ಒಮ್ಮನದಿ ನೋಡಿ ಸುಖಿಸೂವೆ ॥ ೭೬

ಸಿರಿಯಾಳ ಮನೆ ಕಟ್ಟಿ । ಬೇರೂರಿಗೆ ಒಕ್ಕಲು ಹೋದ ।
ಹಿರಿದಾಸಮಯ್ಯ ಮನೆ ಕಟ್ಟಿ-ವ್ಯವಹಾರ
ಹರ ನಿನ್ನ ಕೂಡ ಮಾಡಿ ಹೋದನು ॥ ೭೭

ಸಿಂಧುಬಲ್ಲಾಳನು । ಅಂದೊಂದು ಮನೆ ಕಟ್ಟಿ ।
ಇಂದುಧರನೆ ಆತ ನಿಮ್ಮಿಂದ-ಕೈಕೂಲಿ
ಅಂದೆ ಪಡಕೊಂಡು ಹೋದನು ॥ ೭೮

ಗಂಗೆವಾಳುಕರಂದು । ಪಿಂಗದಲೆ ಮನೆ ಕಟ್ಟಿ ।
ಲಿಂಗದ ಹೊಲಬು ಅರಿಯದೆ-ಹೋದರು
ಸಂಗನಬಸವನ ಮನೆ ಮಾಮನೆ ॥ ೭೯

ಇವರೆಲ್ಲರು ಮನೆ ಮಾಡಿ । ತವೆ ಮಹವನರಿಯದೆ ।
ದೇವ ಸಾಲೂಕ್ಯ ಸಾಮಿಪ್ಯ ಸಾರೂಪ್ಯ-ಸಾಯುಜ್ಯ
ಇವುಗಳಿಗೆ ಒಳಗಾಗಿ ಹೋದರು ॥ ೮೦

ಸಂಗನಬಸವಣ್ಣನು । ಮಂಗಳ ಮಹಾಮನೆ ।
ಸಿಂಗರಿಸಿ ಕಲ್ಯಾಣದಿ ಕಟ್ಟಿದರೆ-ಲೋಕದಿ
ತುಂಗಭಕ್ತಿ ಸಾಮ್ರಾಜ್ಯವಾಯಿತ್ತು ॥ ೮೧

ಬಸವನ ಮಾಮನೆ । ಲೇಸ ಬಯಸುವ ಆಲಯ ।
ಹಸನಾದ ಮನದಿಂದ ತಲೆವಾಗಿ-ಪೊಕ್ಕರೆ
ಅಸಮ ನಿಜಲಿಂಗ ಪದವ ಪಡೆದರು ॥ ೮೨

ಸಂಗನಬಸವನ । ಮಂಗಳ ಮಹಾಮನೆಯು ।
ಪಿಂಗದಲೆ ಕಾಣಲು ಹಲ ಕಾಲ-ತಪಸ್ಸಿದ್ದೆ
ಸಂಗನಬಸವನ ಮನೆಗೆ ನಮೊನಮೋ ॥ ೮೩

ದ್ವಾರವಟ್ಟದ ಮುಂದೆ ನಿಂತ । ವರ ಪ್ರಭು ಸಿದ್ಧರಾಮರ ।
ಬರವ ಕಂಡು ಹಡಪದ್ದಪ್ಪಣ್ಣ-ಬಸವನು
ವರ ಲಿಂಗಾರ್ಚಿಸುವಾಗ ಹೇಳಿದನು ॥ ೮೪

ಕಂಗಳಲ್ಲಿ ಕರುಳಿಲ್ಲ । ತುಂಗಕಾಯದಿ ಹೊರೆಯಿಲ್ಲ ।
ಜಂಗಮ ನಿಲವು ತಿಳಿಯದು—ಹೇ ದೇವ
ಸಂಗನಬಸವೇಶನೆ ಚಿತ್ತೈಸಿರಿ ॥ ೮೫

ನುಡಿಯಲ್ಲಿ ಕಡೆಯಿಲ್ಲ। ನಡೆಯಲ್ಲಿ ಗತಿ ಇಲ್ಲ।
ಜಡಕಾಯನಲ್ಲಿ ಇದೆಂತಹ-ಸುಳುಹು
ಒಡೆಯನೆ ನಾನೆಂತು ಅರಿಯೆನು ॥ ೮೬

ಮರುಳಿಲ್ಲದ ಮರುಳು। ಅರಿವಿಲ್ಲದ ಅರಿವು।
ಚರಿಸುತ್ತ ಬಂದ ಆ ಮಹಿಮರ-ಕಂಡೆ
ಬರವು ಕೌತುಕವಾಯ್ತು ಬಸವಣ್ಣ ॥ ೮೭

ಹಡಪದ ಅಪ್ಪಣ್ಣನು। ಕಡುಹರುಷದಿ ಪೇಳಿದನು।
ಒಡೆಯ ಪ್ರಭು ಸಿದ್ಧರಾಮನ ಬರುವ-ಪೇಳಿದಾಗ
ಎಡಗೈಯಲ್ಲಿ ಬಸವಣ್ಣನ ಇಷ್ಟಲಿಂಗ ॥ ೮೮

ಷೋಡಶೋಪಚಾರದಿ। ಬಿಡದೆ ಲಿಂಗ ಪೂಜಿಸುತ।
ಧೃಡವಾದ ಆಸನದಿ ಕೂತಲ್ಲಿ-ಹೇಳಿದನು
ಒಡೆಯರು ಒಳಗೆ ಬರಮಾಡಲಿ ॥ ೮೯

ಕಾಯದ ಈ ಕೈಯಲ್ಲಿ। ಅಯ್ಯ ಕರಸ್ಥಲ ಪ್ರಾಣದ।
ಕೈಯಲ್ಲಿ ಜಂಗಮ ಸ್ಥಲ ಇಹುದು-ನೋಡಾ ಉ-
ಭಯ ಭಾವ ಲಿಂಗಾರ್ಚನೆ ವರ ಸುಖಸ್ಥಲ ॥ ೯೦

ಕಾಯವೆ ಭಕ್ತನಾಗಿ। ಪ್ರಾಣವೆ ಜಂಗಮವಾಯ್ತು।
ಘನ ಕಿರಿದೆಂಬುದು ನಾನರಿಯೆ-ಬರಹೇಳಾ
ಭಿನ್ನ ಉಪಚಾರಕ್ಕೆ ಇಂಬಿಲ್ಲ ॥ ೯೧

ಅಪ್ಪಣ್ಣ ಬೇಗ ಬಂದು। ಒಪ್ಪೂತ ಕರೆವನು।
ಅಪ್ಪ ಪ್ರಭು ಸಿದ್ಧರಾಮ ನಡೆಯಿರಿ-ಅನ್ಯ
ಉಪಚಾರಕ್ಕೆ ಇಂಬಿಲ್ಲ ಕೇಳಿರಿ ॥ ೯೨

ಮನ ಮನ ಒಂದಾಗಿ। ತನು ತನು ಸಂಬಂಧವಾಗಿ।
ಪ್ರಾಣಕ್ಕೆ ಪ್ರಾಣ ಸಮದರುಶನ-ವಾದವರಲ್ಲಿ
ಭಿನ್ನ ತೆರೆ ಮರೆ ಎಂಬುವದಿಲ್ಲ ನೋಡಾ ॥ ೯೩

ಸಂಗ ನಿಃಸಂಗವಾದಲ್ಲಿ। ಹೇಗೆ ಉಪಚಾರ ಬಯಸುದು।
ಸಂಗನಬಸವಣ್ಣ ಕರೆಯಲು-ಕಳಿಸಿರುವರು
ಶ್ರೀ ಗುರು ಪ್ರಭುವೆ ಕೃಪೆ ಮಾಡು ॥ ೯೪

ಹಡಪದ್ದಣ್ಣನವರು । ಒಡೆಯ ಪ್ರಭುದೇವರಿಗೆ ।
ಕಡು ಹರುಷಗೊಂಡು ಕರೆದರು–ಶರಣರೆ
ನಡೆಯಿರಿ ಬಸವನ ಮಹಾಮನೆಯೊಳು ॥ ೯೫

ಬರಲು ಹೇಳಿದ ಮಾತು । ಅರುಹಲು ಅಪ್ಪಣ್ಣ ।
ವರ ಪ್ರಭುದೇವ ನುಡಿದರು–ಮನೆಯೊಳಗೆ
ಬರಲಾರೆವು ಅಡಿ ಇಡಲಾರೆವು ॥ ೯೬

ಮನ ಮನ ಒಂದಾಗಿ । ತನು ತನು ಬೆರೆಸಿದ ಮೇಲೆ ।
ತಾನು ಕರೆಲಿಲ್ಲ ಕಾಲು ಇಡಲಿಲ್ಲ–ಉಪಚರಿಸಿ
ನನಗೆ ಬರ ಹೇಳಿದರೆ ಅದುವೆ ಕೊರತೆ ॥ ೯೭

ತನುವಿನ ಕೈಯಲ್ಲಿ । ತಾನೆ ಪೂಜೆ ಮಾಡುವಾಗ ।
ನಾನರಿಯೆ ಮಾತಿನ ಅದ್ವೈತ–ಬಸವಣ್ಣ
ಆನಾಗದ ಮುನ್ನವೆ ತಾನಾದನೆ ॥ ೯೮

ಮರು ಉತ್ತರ ಕೇಳಿ ತಾ । ವರ ಬಸವದೇವರಿಗೆ ।
ಅರುಹಿದನು ಹಡಪದ ಅಪ್ಪಣ್ಣ–ಪ್ರಭು ನಿಮ್ಮ
ಅರಮನೆಯೊಳಗೆ ಬರಲಾರೆವು ॥ ೯೯

—

ಸಂಧಿ ೨೯

ಅಂಗದ ಕಳೆ ಲಿಂಗದಿ। ಲಿಂಗದ ಕಳೆ ಅಂಗದಿ।
ಸಂಗವಾಗಿ ಲೀಯವಾಗಲು-ಮಾತಿನ
ಭಂಗವಾಗಲು ಬೊಮ್ಮವೇತರದು ॥ ೧

ತನು ಭಕ್ತವಾದರೆ। ತಾನು ಭೃತ್ಯಾಚಾರಿಯಾಗಿ।
ಪ್ರಾಣ ಜಂಗಮವಾದರೆ ಅರಿಬೇಕು-ಭಕ್ತಿ
ಜ್ಞಾನವುಳ್ಳವರಲ್ಲದೆ ಭಕ್ತರಲ್ಲ ॥ ೨

ಹಿರಿಯರು ಬಂದರೆ। ಕರೆಯರು ಇದಿರೆದ್ದು।
ಬರಲಾರೆವು ಮನೆಯೊಳಗೆಂದರು-ಬಸವಣ್ಣ
ಶರಣರು ಕಾಡಿಹರು ಕೇಳಯ್ಯ ॥ ೩

ಪೇಳಲು ಅಪ್ಪಣ್ಣನು। ಕೇಳಿ ಬಸವನು ಮತ್ತೆ।
ಕಳುಹಿದನು ಮರಳಿ ಕರೆಯಲು-ಜಂಗಮ
ಒಳಗಡೆ ಬರಲು ಮುನಿಸೇಕೆ ॥ ೪

ಪಿಂಗವೆ ಭಕ್ತನ ಕಾಯವ। ಜಂಗಮು ಧರಿಸಿರುವನು।
ಜಂಗಮುದ ಪ್ರಾಣವ ಭಕ್ತನು–ಧರಿಸೂವ
ಹೀಗೆ ಭಕ್ತನಲ್ಲೆರಡು ಸನ್ನಹಿತ॥ ೫

ತನ್ನ ಭಕ್ತನ ಅರ್ಥ। ಪ್ರಾಣಾಭಿಮಾನಕ್ಕೆ ಜಂಗಮು।
ತಾನೆ ಕರ್ತನೆಂದು ಬಂದಲ್ಲಿ–ಸದ್ಭಕ್ತನ
ಮನೆಗೆ ಕರ್ತನಾಗಿ ಹೊಗಬೇಕು॥ ೬

ತನು ಮನ ಧನವೆಲ್ಲ। ತನ್ನಲ್ಲಿಯೇ ಒಳಕೊಂಡು।
ತನ್ನ ಭಕ್ತರ ಪಾವನ ಮಾಡಲು-ಬಲ್ಲರೆ
ಆನು ಎಂಬೆನು ಆತನೆ ಜಂಗಮು॥ ೭

ಆ ಜಂಗಮುಯ್ಯನವರ। ಗರ್ಜನೆಗೆ ಸೈರಿಸಿ ತಾ।
ಭುಜಕೆ ಮುನ್ನೂರು ಪಟ್ಟವ ಕಟ್ಟಲು-ಆತ
ನಿಜ ಭಕ್ತನೆನ್ನುವೆ ಅಪ್ಪಣ್ಣ॥ ೮

ತನ್ನ ಮಠಕೆ ತಾ ಬರಲು। ಮುನಿಸುಂಟೆ ಶರಣರ।
ಮನೆಯ ಬಾಗಿಲುಗಾಹಿ ನಾನಿರುವೆ–ಕರ್ತರು
ತಾನೆ ಬಂದರೆ ಬೇಕು ಬೇಡೆನ್ನೆನು॥ ೯

ಬಸವನ ಮಾತು ಕೇಳಿ। ಅಸಮುನಿಗರುಹಲು।
ತುಸು ತಡ ಮಾಡದೆ ಅಪ್ಪಣ್ಣ–ಪ್ರಭುವಿಗೆ
ಬೆಸಗೊಂಡನಿಂತು ವಿನಯದಿ॥ ೧೦

ತನು ನಿಮ್ಮದಾಗಿರಲು। ಮನ ನಿಮ್ಮದಾಗಿರಲು।
ಧನ ನಿಮ್ಮದಾಗಿರಲು ಬಸವನ–ಅಣುಮಾತ್ರ
ಅನ್ಯಕ್ಕೆ ತಾವುಂಟೆ ಹೇಳಯ್ಯ॥ ೧೧

ಮುನ್ನವೆ ಅರಿದರಿದು। ನಿನ್ನ ಭಕ್ತನಲ್ಲಿಗೆ ಬಂದು।
ಅನ್ಯ ಭಾವಿಸದಿರು ಹೇ ಪ್ರಭುವೆ-ಬಸವಂಗೆ
ನಿನ್ನ ಪಾದದಾಣೆ ಸ್ವತಂತ್ರವಿಲ್ಲ॥ ೧೨

ಅಪ್ಪಣ್ಣನು ಬಿನ್ನವಿಸಲು। ಒಪ್ಪದೆ ಪ್ರಭುದೇವರು।
ಅಪ್ಪಣ್ಣನೆ ಭಕ್ತ ಜಂಗಮುದ–ಸಕೀಲ
ಒಪ್ಪುಳ್ಳ ಸಂಬಂಧವ ಬಲ್ಲವರಾರು॥ ೧೩

ಧನವ ಒಪ್ಪಿಸಿದಾತ । ಪ್ರಾಣವ ಒಪ್ಪಿಸಿದಾತ ।
ಮಾನಾಭಿಮಾನ ಒಪ್ಪಿಸಿದಾತ-ಭಕ್ತನಲ್ಲ
ಭಿನ್ನ ಸತ್ಯಸದಾಚಾರಕ್ಕೆ ಸಲ್ಲನು ॥ ೧೪

ಮನೆ ಹೊಕ್ಕು ಭಕ್ತನ । ತನ್ನ ಪಾದಪೂಜೆಗೊಂಡು ।
ತನ್ನ ಒಡಲಿನ ಕಕ್ಕುಲತೆಗೆ–ಅಶನವ
ಮನ ಬಂದಂತೆ ಉಣ್ಣಲಾಗದು ॥ ೧೫

ವ್ಯಸನಕ್ಕೆ ಒಳಗಾಗಿ । ಹೇಸದೆ ಹಣ ಬೇಡುತ ।
ಬೇಸರಿಸದೆ ಕೊಟ್ಟರೆ ಕೊಂಡಾಡಿ–ಕೊಡದಿರೆ
ಬಿಸಿ ಮಾತನಾಡುವ ಜಂಗಮನಲ್ಲ ॥ ೧೬

ಆದಿಯ ಅನಾದಿಯ । ಅದರತ್ತತ್ತ ಮುನ್ನಲಾದ ।
ಭೇದಿಸಿ ಮಾಘನವ ಕಂಡರಿದು–ಕಾಯದ ಜೀ-
ವದ ಹೊಲಿಗೆ ಬಿಚ್ಚಿ ಬೀಸಾಡಿ ॥ ೧೭

ಬಿಚ್ಚಿ ಬೀಸಾಡಿ ತನ್ನ । ಅಚ್ಚಳಿಯದೆ ಅರ್ಪಿಸಿ ।
ನಚ್ಚಿ ನಲಿವಾತನೆ ಸದ್‌ಭಕ್ತ–ಕಾಣಿರೊ
ಸಚ್ಚಿದಾನಂದನ ಹಸಗೂಸು ॥ ೧೮

ಸುಳುಹಿನ ಸೂತಕವ । ಕಳೆದು ಮೈದೋರದೆ ।
ಕಳವಳದ ರುಚಿಗೆ ಒಡಲಿನ–ಹಾರೈಸದೆ
ತಿಳಿವಳಿಕೆ ಅಂಗವಾಗಿರಬೇಕು ॥ ೧೯

ಆಪ್ಯಾಯನ ಭಕ್ತಿಯಾಗಿ । ಇಪ್ಪ ವಿನಯ ಮಂತ್ರವಾಗಲು ।
ಒಪ್ಪಿ ನಮೊ ನಮೋ ಎನ್ನಬಲ್ಲರೆ–ಕೇಳಾ
ಅಪ್ಪಣ್ಣನೆ ಆತ ಜಂಗಮನು ॥ ೨೦

ಅಂತಹ ಸಮ್ಮೇಳವೆ । ಸಂತಸದ ಸಮ್ಮೇಳನ ।
ಮಿಥ್ಯ ಅರೆ ಭಕ್ತರೊಡತಣ–ಸಂಗ ನಮ್ಮ
ಸತ್ಯ ಶುದ್ಧ ಲಿಂಗಕ್ಕೆ ಸೊಗಸದು ॥ ೨೧

ನುಡಿದನು ವಿನಯದಿ । ಹಡಪದ ಅಪ್ಪಣ್ಣ ।
ಒಡೆಯನೆ ಲಿಂಗ ಜಂಗಮ–ಉಭಯದ
ತೊಡಕು ಬಲ್ಲವರಾರಯ್ಯ ॥ ೨೨

ಮರ್ತ್ಯದಿ ಶಿವಲೋಕದಿ। ಕರ್ತೃಬಸವನಲ್ಲದೆ।
ಸತ್ಯ ಲಿಂಗಕ್ಕಾಧಾರವಿಲ್ಲೆಂದು-ಮರ್ತ್ಯದಿ
ಸತ್ಯ ಬಸವನು ಬಂದವತರಿಸಿದನು॥ ೨೩

ಜಂಗಮದ ಮುಖವೆ। ಲಿಂಗವೆಂಬುದನರಿದು।
ಸಂಗನಬಸವ ತನ್ನ ಅರ್ಪಿಸಿ-ಇದಿರ
ಭಂಗಗೊಳಿಸಿ ಇರಬಲ್ಲಾತ ಬಸವ॥ ೨೪

ಅಂಗ ಮುಖವೆಲ್ಲವು। ಪಿಂಗದಲೆ ನಷ್ಟಮಾಡಿ।
ಭಂಗ ಬಾರದೆ ಭೃತ್ಯಾಚಾರವೆ-ತನುವಾಗಿ
ಸಂಗನಬಸವ ಇರಬಲ್ಲನು॥ ೨೫

ಪ್ರಾಣಕಳೆಯರತು ಅಂತು। ಪ್ರಾಣವಾಗಿ ಜಂಗಮವೆ।
ಏನೂ ಹಂಗಹರಿ ಇಲ್ಲದಿರಬಲ್ಲನು-ಲೋಕದಿ
ಘನ ಗುರು ನಮ್ಮ ಸಂಗನಬಸವ॥ ೨೬

ಮಿಥ್ಯ ಉಪಾಧಿ ಎಂಬ। ಕೀರ್ತಿ ವಾರ್ತೆಯ ಜರಿದು।
ಅತಿತನಾಗಿ ನಿರುಪಾಧಿಕಕೆ ಆತ-ಸಹಜ
ನಿತ್ಯ ದಾಸೋಹಿಯಾಗಿ ಇರುವನು॥ ೨೭

ಶರಣ ಬಸವೇಶನೆ। ಪರಮ ಭಕ್ತನಲ್ಲದೆ।
ಮರತ್ಯದಿ ಮತ್ತಾರನು ಕಾಣೆ-ಪ್ರಭೊ
ಬರಮಾಡಿರಿ ಮಾಮನೆಯೊಳಗೆ॥ ೨೮

ಸುಮ್ಮನೆ ಅಪ್ಪಣ್ಣ ನೀನು। ಹೆಮ್ಮೆಯಿಂದ ಹೇಳುವಿ।
ನಿಮ್ಮಲ್ಲಿ ತಮ್ಮಲ್ಲಿ ಭಕ್ತಿಯುಂಟು-ಎಂದರೆ
ಒಮ್ಮಾದರು ಮೆಚ್ಚುವರೆ ಶರಣರು॥ ೨೯

ಹುಸಿ ಹುಂಡನೆ ಮಾಡಿ। ಹುಸಿ ಬಾಯ ಸವಿಯ ನುಡಿವ।
ಏಸೊಂದು ಅದ್ವೈತದ ಮಾತು ಕಲಿತು-ಮಾರುಗೋಲ
ಬೀಸಿ ಬಿಡುವವರೆಲ್ಲ ಭಕ್ತರೆ॥ ೩೦

ಬೆಳ್ಳಿಗೆಯ ಮಕ್ಕಳಿಲ್ಲ। ಬಳ್ಳವಾಲ ಕರಿವರೆ।
ಹೇಳಾ ಸಂಗನಬಸವನೆಂದರೆ-ಮಾತಿನ
ಪೊಳ್ಳ ಮಾತಿಂಗೆಲ್ಲ ಭಕ್ತಿಯುಂಟೆ॥ ೩೧

ಜಂಗಮ ಬಂದರೆ | ಹಿಂಗಿ ತಾಕಾರವನರಿತು |
ಜಂಗಮಕ್ಕೆ ಕೈಮುಗಿದು ಇದಿರೆದ್ದು-ಕರೆವುದು
ಸಂಗನಬಸವಣ್ಣನು ಅರಿಯನೆ || ೩೨

ಬಕುತಿಲಿ ನಡಗೂತ | ಕಿಂಕಿಲನಾಗಿ ಭಯ ಭೀತ |
ಶಂಕಿಸದೆ ಭೃತ್ಯಾಚಾರದಿ ಇರಲು-ಅದು ಭಕ್ತಿ
ಲೆಂಕನಾಗಿರಲು ಅದುವೆ ವರ್ಮ || ೩೩

ಬಂದವನರಿಯದೆ | ನಿಂದ ನಿಲವನರಿಯದೆ |
ಮಂದಮತಿ ಅಹಂಕಾರ ಹೊತ್ತು-ಇದ್ದರೆ
ಕಂದಗೊರಳ ನಮ್ಮ ಲಿಂಗನೊಲ್ಲ || ೩೪

ಬರಲಾರೆವೆಂದಾಗ | ಮರಳಿ ಬಂದ ಅಪ್ಪಣ್ಣ |
ಕರುಣಿಸು ದೇವಾ ಮಾಪ್ರಸಾದ-ನಿಮ್ಮ
ಶರಣರ ಮನೆಯ ಬಂಟ ನಾನಲ್ಲ || ೩೫

ತನು ಮನ ಧನವೆಲ್ಲ | ಆನು ಹಿಂದಿಟ್ಟ ವಂಚಕ |
ಎನ್ನಿಚ್ಛೆಗೆ ಬರುವರೆ ಶರಣರು-ಎನ್ನ ಮಾತು
ನಿಮ್ಮ ಶರಣರು ಕೇಳುವರೆ || ೩೬

ಹಣೆಯ ಹೊಣೆಯ ತೋರಿ | ಸಣ್ಣ ಉದರವ ಹೊತ್ತು |
ನಿನ್ನ ಮರೆಯಲಡಗಿದ ಹಡಪಿಗ-ನಾನಯ್ಯ
ಅಣ್ಣಾ ನಾ ಕರೆದರೆ ಶರಣರು ಬಾರರು || ೩೭

ನಿನ್ನದು ಅಳವಲ್ಲ | ಎನ್ನದು ಅಳವಲ್ಲ |
ಇನ್ನಾರಳವಲ್ಲದ ಮಾಘನವ-ಬಸವ
ನೀನೆ ಕರೆಯಲು ಹೋಗಯ್ಯ || ೩೮

ಕಾಣಬೇಕೆಂದರೆ | ಕಣ್ಣುಗಳಿಗೆ ಅಸಾಧ್ಯ |
ಗುಣ ಗಂಭೀರನ ಮುಟ್ಟಲು-ಸೊಂಕಿಗೆ
ಕಾಣಾ ಬಸವಣ್ಣ ಅಸಾಧ್ಯನು || ೩೯

ದಿಟ್ಟಿ ಇಟ್ಟರೆ ಕಾಣನು | ಮುಟ್ಟಿದರೆ ಸೋಂಕಿಲ್ಲ |
ಬಟ್ಟ ಬಯಲೊಳು ಚರಿಸುವ-ಪ್ರಭುವೀಗೆ
ಮಾಟಗಾರಂಗೆ ನೀವೆ ಕರೆ ಬರ್‍ರಿ || ೪೦

ಮಾತನಾಡಿಸಿದರೆ । ಮಾತು ಮನಕ್ಕತೀತನು ।
ಆತ ನಿಂದರೆ ಅಲ್ಲಿ ನೆಳಲಿಲ್ಲ-ಪ್ರಭು ಅ-
ಜಾತನು ಸುಳಿದರೆ ಹೆಜ್ಜೆ ಇಲ್ಲ ॥ ೪೧

ಪ್ರಭುದೇವರೆಂಬ ಭಾವ । ಅಭವನೆ ತೋರುತ್ತದೆ ।
ಶುಭಾಗಮನ ಇಂದು ಆಗಿದೆ–ಬಸವೇಶ
ಅಭಯರ ಚರಣ ಪಿಡಿಯೇಳು ॥ ೪೨

ಹಡಪದ ಅಪ್ಪಣ್ಣನು । ನುಡಿವಾಗ ಈ ವಚನ ।
ಒಡೆಯ ಪ್ರಭುದೇವ ಸಿದ್ಧರಾಮ–ಬಂದದ್ದು
ಗಡನೆ ಚೆನ್ನಬಸವಣ್ಣ ಹೇಳಿದರು ॥ ೪೩

ಲಿಂಗವೆ ಜಂಗಮವೆಂದು । ಜಂಗಮವೆ ಲಿಂಗವೆಂದು ।
ಸಂಗರಹಿತರು ನಂಬಿ ಬಂದಲ್ಲಿ–ಹೋರಿ ಹುಟ್ಟಿ
ಆಗುವದು ಹಾಲಹರವಿಗೆ ಹುಳಿ ಇಟ್ಟಂತೆ ॥ ೪೪

ಅಂಗದ ಮೇಲೆ ಇಷ್ಟ । ಲಿಂಗವುಳ್ಳವುದೆಲ್ಲವು ।
ಸಂಗಮನಾಥನೆಂದು ನಂಬಿದ–ನಂಬುಗೆ
ಭಂಗವಾಗುವದು ನಿಲವನರಿಯದೆ ॥ ೪೫

ಸಂಗಮನಾಥನು ಮನೆಗೆ । ಅಂಗವಿಡಿದು ಬಂದರೆ ।
ಬೇಗ ಇದಿರೆದ್ದು ಒಂದಿಸಬೇಕು–ಗುರುವೆ
ಸಂಗನಬಸವ ತಪ್ಪಿತು ನೋಡಾ ॥ ೪೬

ಕಣ್ಣರಿಯದಿದ್ದರು । ಮೋಕ್ಷಕರುಳರಿಯಲಿಲ್ಲವೆ ।
ಸನ್ನುತ ಪ್ರಭುದೇವ ಸಿದ್ಧರಾಮ-ಬಾಗಿಲಲ್ಲಿ
ತಾನಾಗಿ ಬಂದು ನಿಂತಿರುವರು ॥ ೪೭

ಚೆನ್ನಬಸವಣ್ಣನು ಆಗ । ಬಿನ್ನಯಿಸಲು ಜಂಗಮರ ।
ಮುನಿಸಿನ ಪರಿ ಹೇಳಿಂದನು–ಭಯದಿಂದ
ಚೆನ್ನಬಸವನಿಗೆ ಬಸವಣ್ಣನು ॥ ೪೮

ಬಂದಿಹವು ಕಣ್ಣುತುಂಬಿ । ಮುಂದುಗಾಣದೆ ಆಗ ।
ಗದಗದ ನಡಗೂತ ಬಸವಣ್ಣ–ಬಿದ್ದನು
ಪಾದದ ಮೇಲೆ ಚೆನ್ನಬಸವನ ॥ ೪೯

ಕೆಮ್ಮನೆ ಕೆಟ್ಟನು ದೇವ। ಕೆಮ್ಮನೆಕೆಟ್ಟ ಇನ್ನಿವೆ।
ನಿಮ್ಮ ಶರಣರು ಬಾಗಿಲೊಳಿರೆ-ಚೆನ್ನಂಣ
ದಿಮ್ಮನೆ ಎದುರೆದ್ದು ವಂದಿಸದೆ॥ ೫೦

ಕೇಡನೆಂತುಪಮಿಸಲಿ। ಕೂಡಲ ಸಂಗಮದೇವ।
ಕಡು ಭಯಭ್ರಷ್ಟ ನಾನಾದೆ-ಎನಗೆ
ಕೂಡಲೆ ತಿಳಿದು ಬಂದೀತು॥ ೫೧

ಮತಿಗೆಟ್ಟ ಧೃತಗೇಡಿ। ಗತಿಗೆಟ್ಟ ವ್ರತಗೇಡಿ।
ಧಾತುಗೆಟ್ಟ ಬಾಹಿರ ನಾನಯ್ಯ-ಶಿವಶಿವ
ಗತಿ ನೀನೆ ಚೆನ್ನಬಸವಯ್ಯ॥ ೫೨

ಕಹಿಕುಂಬಳ ಬೆಳೆದಂತೆ। ಇಹದಿ ಆಯಿತು ಭಕ್ತಿ।
ಮಹಾದೇವರು ಮನೆಗೆ ಬಂದರೆ-ಅರಿಯದೆ
ಹೊ ಹೋ ಕೆಟ್ಟೆನು ದೇವಾ ಕೆಟ್ಟೆನು॥ ೫೩

ಲಿಂಗ ಜಂಗಮು ಬರವ। ಮಂಗಳವನರಿಯದೆ।
ಮಂಗನ ಕೈಯಲ್ಲಿ ನವರತ್ನವ-ಇತ್ತರೆ
ಮಂಗ ಮಡವಿನೊಳು ಎಸೆದಂತೆ॥ ೫೪

ನಮ್ಮವರ ಕರೆ ತಾರೊ। ಚೆಮ್ಮಾವುಗೆ ಹೊರುವೇನು।
ನಿಮ್ಮೆಲ್ಲರ ಮುಂದೆ ಕುಣಿದಾಡುವೆ-ಚೆನ್ನಣ್ಣ
ಒಮ್ಮನದ ಭಕ್ತಿ ಎನ್ನೊಳಿಲ್ಲ॥ ೫೫

ಚಿಕ್ಕದಂಡನಾಯಕರು। ಗಕ್ಕನೆ ಬಸವೇಶನ।
ಮಿಕ್ಕೀದ ಪಾದಕ್ಕೆ ಒಂದಿಸಿ-ಎಂದರು
ಯಾಕೆ ಭಯಗೊಂಡಿರಿ ಹೇ ಗುರುವೆ ॥ ೫೬

ಗುರು ಸಂಗನಬಸವನೆ। ಹರ ನಿಮ್ಮ ಮನ ನೋಡಲು।
ಹೊರ ಬಾಗಿಲಲ್ಲಿ ನಿಂದಿರೆ-ನೀವದಕೆ
ಥರ ಥರ ನಡುಗಿ ಅಂಜುವದೆ॥ ೫೭

ಮಂಜಿನ ಮೋಹರವ। ಸಜ ಹರಿವುದು ರವಿಕಿರಣಕೆ।
ಸಂಜೆ ಮುಂಜಾವ ನಿಮ್ಮ ನೆನೆವರೆ-ಭವದ
ಅಂಜಿಕೆ ಇಲ್ಲೆಂದು ಶೃತಿ ಸಾರುವದು॥ ೫೮

ನಿಮ್ಮ ಚಿಮ್ಮಾವುಗೆಯ । ಹೆಮ್ಮೆಯ ಬಂಟ ನಾನು ।
ನಮ್ಮ ಮನವೆಂಬ ಚಿಮ್ಮಾವುಗೆ-ಮೆಟ್ಟಿ
ಎಮ್ಮ ಶರಣರ ಕರೆಯಲು ನಡೆಯಯ್ಯ ॥ ೫೯

ಅನಾಮಯನೆ ನಿಮ್ಮನು । ನೆನೆದರೆ ಕೇಡಿಲ್ಲ ।
ಅನುದಿನ ಅರುವಿನ ಆಗರವೆ-ಪ್ರಭು ನಿನ್ನ
ಮನ ನೋಡಲು ಬಂದರೆ ಅಳಕುವರೆ ॥ ೬೦

ಚೆನ್ನಬಸವಣ್ಣನ । ಬಿನ್ನಾಣದ ವಚನವು ।
ಬೆನ್ನಿಗೆ ಬಲವ ನೀಡಿತಾಗ-ಬಸವನ
ಖಿನ್ನಮುಖವು ತಾ ಅರಳಿತ್ತು ॥ ೬೧

ಹಾಳು ಕುಳಿಯಲ್ಲಿ ಬಿದ್ದ । ಎಳೆ ತರುವಿಗೆ ತೆಗೆದು ।
ಬೆಳ್ಳಿಗೆಯ ಮುಖವ ತೋರುವಂತೆ-ಎನ್ನನು
ಬಳಿ ಬಂದ ಶರಣರನು ತೋರುವಿರಿ ॥ ೬೨

ಏನೇನು ಅರಿಯದ । ಮನಕ್ಕೆ ಧೀರವ ನೀಡಿ ।
ತನ್ನ ಕರುಣೆಂಬ ಮರುಜವಣಿ-ಹಿಂಡೆನ್ನ
ಚೆನ್ನಬಸವದೇವ ಬದುಕಿಸಿದನು ॥ ೬೩

ನುಡಿವಾಗ ಬಸವೇಶ । ಸೊಡ್ಡಳ ಬಾಚರಸರು ।
ಒಡನೆ ಬಂದು ಬಸವಗೆ ಹೇಳಿದರು-ದೇವಾ
ಬಿಡು ನಿನ್ನ ಮನದ ಭಯವನು ॥ ೬೪

ತೆರಹು ಮರಹು ಎಂಬ । ಕಿರಿ ಗುಣ ನಿಮದಲ್ಲ ।
ಹಿರಿದಾದ ಅಮೃತ ಸಾಗರದಿ-ಬೇವಿನ
ಕಿರಿದೊಂದು ಬಿಂದು ಇರುವದೆ ॥ ೬೫

ಮನವ ನೋಡಲು ಬಂದು । ತನ್ನದೊಂದು ನಾಟಕವ ।
ಘನ ಪ್ರಭು ಒಡ್ಡಿದರೆ ಹೆದರಿಕೆ-ಬೇಡಯ್ಯ
ಮನನೊಂದಿತೆಂದು ಮಹಾದಾನಿಯ ॥ ೬೬

ಕೂಡಲಸಂಗನ ಶರಣ । ಸೊಡ್ಡಳ ಬಾಚರಸರು ।
ನೀಡಲು ಬಂದಾಗ ರಕ್ಷಣೆ-ಚೆನ್ನಬಸವ
ಈಡಾಡುವೆ ಭಯ ಭೀತಿಯನು ॥ ೬೭

ಪ್ರತಿಭಟನಿರುವಲ್ಲಿ । ಅತಿ ಘಾಯಕಂಡಿಯ ।
ತೆತ್ತಿಗನು ತೋರಿದಾತನೆ-ಆಯುಧ
ಎತ್ತಿಕೊಟ್ಟಾತನೆ ಹಿತಬಂಧು ॥ ೬೮

ವಿಭೂತಿಯು ಮೈತುಂಬ । ಆಭರಣ ರುದ್ರಾಕ್ಷಿಯ ।
ಶೋಭಿಸವು ಹನ್ನೆರಡು ಸಾವಿರ–ಕರಸ್ಥಲದಿ
ಅಭವ ಲಿಂಗಯ್ಯ ಹೊಳೆವನು ॥ ೬೯

ಭಕ್ತವತ್ಸಲ ಬಸವ । ಮುಕ್ತಿಯ ಮುಖದರ್ಪಣ ।
ಭಕ್ತಜನ ಹೃತ್ಕಮಲಾರ್ಕನು-ಬಸವ
ಯುಕ್ತ ಕರುಣಾರಸ ಸಾಗರನು ॥ ೭೦

ಭವವಿಪಿನದಾವಾನಲ । ಭವ ಸಿಂಧುವಡವಾಗ್ನಿ ।
ತವೆ ಷಡಸ್ಥಲ ಸಂಧಾನ ನಿವಾಸ-ಬಸವ-
ದೇವಾ ನೂರೊಂದು ಸ್ಥಲಕೆ ಮೂಲಿಗ ॥ ೭೧

ಶರಣರಿಗೆ ಬಸವಣ್ಣ । ಅರುಹಿದನು ವಿನಯದಿ ।
ಕರಲಿಂಗದಲ್ಲಿ ಪದ ಫಲ ಭವ-ಉಂಟಯ್ಯ
ಪರಮ ಜಂಗಮರಲ್ಲಿ ಆವುದಿಲ್ಲ ॥ ೭೨

ಲಿಂಗಾರ್ಚನೆ ಮಾಡುವೆ । ಜಂಗಮನು ಬರಲೆಂದು ।
ಜಂಗಮ ಬರಲು ಲಿಂಗಾರ್ಚನೆಯ-ಬಿಟ್ಟು
ಜಂಗಮಾರ್ಚನೆಯ ಮಾಡುವೆನು ॥ ೭೩

ಎನ್ನ ತನುವಿಡಿದವರ । ತನುವ ಬೆರಸುವೆನಯ್ಯ ।
ಎನ್ನ ಮನವಿಡಿದವರ ಮನ ಬೆರಸಿ-ಮಾಡುವೆ
ಎನ್ನ ಶಿರದಿಂದ ಪಾದಪೂಜೆಯ ॥ ೭೪

ಲಿಂಗಪೂಜೆಯ ಮುಗಿಸಿ । ಸಿಂಗರಿಸಿ ವಿಧವಿಧದಿ ।
ಜಂಗಮ ಪ್ರಭು ಸಿದ್ಧರಾಮಗೆ-ಕರೆಯಲು
ಮಂಗಳ ಮಹಾಗಣರ ಕರೆಯಿಸಿ ॥ ೭೫

ವೈಭವದಿಂದವರು । ಪ್ರಭು ಸಿದ್ಧಗೆ ಕರೆಯಲು ।
ವಿಭೂತಿ ವೀಳ್ಯೆಯ ಕಾಣಿಕೆ-ತಕ್ಕೊಂಡು
ಅಭವ ಶರಣರು ಸಿದ್ಧರಾಗಿ ॥ ೭೬

ನವರತ್ನ ಖಚಿತ। ದಿವ್ಯಾಂಬರ ಗುಡಿತೋರಣ।
ದೇವಾಂಗ ಮುತ್ತಿನ ಸೆರಗಿನ-ಸೀರೆಯು
ದೇವರಿಗೆ ನಡೆಯಲು ಮಡಿಹಾಸಿ॥ ೭೭

ನವ್ಯ ರೇಶಿಮೆಯ ಬಟ್ಟೆಗೆ। ಪವಳದ ಝುಲ್ಲರಿ।
ನವರತ್ನ ಝುಲ್ಲರಿಯ ಮೇಲುಕಟ್ಟ-ಕಟ್ಟಿ
ದೇವರ ಆಗಮನಕೆ ಅಣಿಮಾಡಿ॥ ೭೮

ಕಳಸ ಕನ್ನಡಿಗಳು। ಹೊಳೆಯುವವು ಅಲ್ಲಲ್ಲಿ।
ಮೊಳಗಿದವು ಪಂಚವಾದ್ಯಗಳು-ಧೂಪಾರತಿ
ಬೆಳಗಲು ಆರತಿ ಘಂಟೆಗಳು॥ ೭೯

ವೇಳೆ ಕಳೆದಂತೆಲ್ಲ। ಬಲು ಕೋಪ ಬಂದಿತು।
ಅಲ್ಲಮನು ಸಿದ್ಧೇಶಗೆ ಇಂತೆಂದ-ಬಸವಗೆ
ಸಲ್ಲದು ಈ ಪರಿ ಅಹಂಕಾರ॥ ೮೦

ಭೃತ್ಯನಿದ್ದ ಠಾವಿಂಗೆ। ಕರ್ತನು ಬಂದರೆ ಆತ।
ವರ್ತಿಸುವನು ಮರವೆಯಿಂದ-ಉಳಿದ
ಮರ್ತ್ಯದ ಭಕ್ತರ ಪಾಡೇನಯ್ಯ॥ ೮೧

ನೋಡು ಭಕ್ತಿರತಿಯಿಂದ। ಮಾಡಿದರೆ ಮನಮುಟ್ಟಿ।
ಬಡವನಿದ್ದರೂ ಭಕ್ತಿ ಸಲ್ಲುವದು-ಬೇಡ
ಬೇಡಯ್ಯ ಹೋಗುವದು ಅರಮನೆಗೆ॥ ೮೨

ಬಸವೇಶನ ಶಕ್ತಿಯು। ವಸುಧೀಶನೆ ನಿಮ್ಮದು।
ಅಸು ಆತನದು ನಿಮ್ಮಲ್ಲಿಯೆ-ಇರುವದು
ಅಸಮಪ್ರಭು ನಿಮ್ಮ ತಮ್ಮ ಭೇದವೆಲ್ಲಿ॥ ೮೩

ಘನ ಶರಣ ಬಸವನ। ಅನುವ ನೀವೆ ಬಲ್ಲಿರಿ।
ನಾನೇನು ಬಲ್ಲೆನೆನುವಾಗ-ವಾದ್ಯಗಳ
ಸುನಾದ ಕೇಳಿಸಿತು ಈರ್ವರಿಗೆ॥ ೮೪

ಸಿದ್ಧರಾಮ ದೇವರು। ಇದ್ದ ಸಂಗತಿಯನು।
ಇದ್ದಂತೆ ಪ್ರಭುವಿಗೆ ಹೇಳಾಗ-ಬಸವ
ಎದುರಿಗೆ ಬಂದನು ಗಣಸಹಿತ॥ ೮೫

ಒಂದಿಸುವೆನು ಪಾದಕ್ಕೆ। ಬಂಧನ ಬಿಡಿಸಯ್ಯ।
ಮಂದಮತಿಗೆ ಕರುಣಿಸಯ್ಯ-ದೇವನೆ
ದಂದುಗ ಬಿಡಿಸಿ ಸಲುಹಯ್ಯ॥ ೮೬

ಭವರೋಗ ವೈದ್ಯನೆ। ತವೆ ನಂಬಿರುವೆ ನಾನು।
ದೇವನೆ ಭಕ್ತಿಫಲದಾಯಕ-ನಿನಗೆ
ದೇವ ಮಹಾದೇವ ಜಯಜಯ॥ ೮೭

ಕಾಣುವದೆ ಕಡುಸುಖ। ಕಾಣದಿರೆ ಅವಸ್ಥೆಯ।
ಎನ್ನ ತವಕದ ಸ್ನೇಹ ದರುಶನದಿ-ಶಾಂತಿ
ಧನ್ಯನಾದೆನು ಶ್ರೀಪಾದವ ಕಂಡು॥ ೮೮

ಕಂಡಿಹೆನು ನಿಮ್ಮಡಿಯ। ಕಡುಸುಖವನೇನೆಂಬೆ।
ನೀಡಿದರೆ ಸಾಲೋಕ್ಯ ಸಾಮೀಪ್ಯ-ಸಾರೋಪ್ಯ
ಬೇಡಯ್ಯ ಸಾಯುಜ್ಯ ಪದಗಳು॥ ೮೯

ಮನ ಮನ ಮುಟ್ಟದ ಭಕ್ತಿಗೆ। ತನು ಅರ್ಪಿತವಾಯ್ತು।
ತನು ಮುಟ್ಟದ ಭಕ್ತಿಗೆ ಮನವು-ಅರ್ಪಿತ
ತನುಮನವೆರಡು ನಿಮ್ಮಡಿಗೆ ವೇದ್ಯ॥ ೯೦

ಶಿರ ನಿಮ್ಮ ಚರಣವ। ವರಸಿ ಬೆರಸಿದ ಅಭೇದ್ಯ।
ಕರ ನಿಮ್ಮಪೂಜೆಗೆ ಮುಡುಪಾಗಿ-ಇರುವದು
ಶರಣು ಶರಣಾರ್ಥಿ ಎನ್ನ ದೇವ॥ ೯೧

ಎನ್ನ ಕಾಯದ ಕಪಟ। ಎನ್ನ ಮನದವಿಕಾರ।
ನಿನ್ನಂಗುಷ್ಟದ ಮೊನೆಯು-ಸೋಂಕಲು
ವನ್ಹಿಹಚ್ಚಿದಂತಾಯಿತ್ತಯ್ಯ॥ ೯೨

ನಿನ್ನ ಪಾದ ಬೆಳಗ ಕಂಡು। ಎನ್ನ ಅಂತರಂಗದ।
ಹೀನ ಕತ್ತಲೆ ಓಡಿ ಹೋಯಿತ್ತು-ಓ ತಂದೆ
ಜ್ಞಾನೋದಯವಾಯಿತ್ತು ನಿಮ್ಮಿಂದ॥ ೯೩

ಪರಮ ಜಂಗಮನೆಂದು। ಎರಗಲು ಚರಣಕ್ಕೆ।
ಸೂರೆಗೊಂಡರೂ ತನುಮನ-ಬಸವಂಗೆ
ನಿರಾಕಾರ ಅಲ್ಲಮನು ದೊರೆಯಲಿಲ್ಲ॥ ೯೪

ರೂಪ ರೂಪಿನಲ್ಲಿ ಅ- । ರೂಪ ನಿಜರೂಪನವಗ್ರಹಿಸಿ ।
ಆ ಪರ ನಿಜರೂಪ ನಿರ್ಣಯದಲ್ಲಿ–ನಿಷ್ಪತಿ
ಅಪಾರ ನಿಲವು ಕಾಯದಿ ಕಾಣುವದೆ ॥ ೯೫

ಕಾಯುವಿಡಿದು ಆನು । ಬಯಲು ಕಾಣಹೋದರೆ ।
ಅಯ್ಯ ಶರಣರ ನಿಲವು ಎನಗೆ–ಅಸಾಧ್ಯ
ಕಾಯಾತೀತರು ಅನುಪಮರು ॥ ೯೬

ಹುಡಕುವ ಅಡಗುವ ಆಟ । ಬಿಡದಲೆ ಆಡುವನು ।
ಒಡಲು ಹಿಡಿದು ಕಣ್ಮುಂದೆ ಕಂಡು–ಶಿವನು
ಕಾಡುವನು ಮನಸಿಗೆ ಕನಸಾಗಿ ॥ ೯೭

ಇರುವದು ಒಂದೆಡೆ । ತೋರುವನು ಹಲವೆಡೆ ।
ಪರಿಪರಿ ಎಡೆಯಲ್ಲಿ ಇದ್ದು ತಾ–ಒಂದೆಡೆಯಲಿ
ವರ ರೂಪ ಚಿನ್ಮಯ ಅಸಾಧ್ಯನು ॥ ೯೮

ನಿಟ್ಟಿಸುವರೆಂದು ತಾ । ದಿಟ್ಟೇಗೆ ಮರೆಯಾದ ।
ದಿಟ ಕೇಳಿಹರೆಂದು ಕಿವಿಗಳಿಗೆ–ಮರೆಮಾಡಿ
ಮುಟ್ಟಿಹೆರೆಂದು ಕೈಗೆ ಸಿಲುಕನು ॥ ೯೯

ಸಂಧಿ ೩೦

ಸ್ಪರಿಶಿಸುವರೆಂದು ತನುವಿಗೆ। ಸ್ಮರಿಸುವರೆಂದು ಮನಕೆ।
ಅರಿದಿಹರೆಂದು ಅಂತರಂಗಕ್ಕೆ–ಕ್ರಿಯೆಗೆ
ಮರೆಮಾಡಿದ ಪೂಜಿಸಿಹರೆಂದು॥ ೧

ತ್ವರದಿಂದ ಶ್ರೀಪಾದ। ಶರಣೆಂದು ಹಿಡಿಯಲು।
ಚರಣದ ನಿಲವು ನಾನರಿಯೆ–ದೇವನ
ಕುರುಹು ಎನ್ನ ಕೈಗೆ ಸಿಲುಕದು॥ ೨

ಮುದದಿಂದ ಕೂಡುವದು। ಮೊದಲೆ ಅಸಾಧ್ಯವದು।
ಮದವೇರಿ ಕೆಟ್ಟೆ ಅಕಟಕಟ–ಗುರುವೆ
ಸದ್‌ಗುರು ಕೂಡಲಸಂಗಮದೇವ॥ ೩

ಗುರುವೆ ನೀ ಬಾರಯ್ಯ। ಪರಮ ಗುರು ಬಾರಯ್ಯ।
ಅರಿಯದ ತರುಳನ ಗುಣದೋಷ–ಎಣಿಸದೆ
ಕರುಣೆಯ ಕಣ್ಣು ತೆರೆಯಯ್ಯಾ॥ ೪

ಮೂರು ಮೂರು ವಿಧದಿಂ | ಅರಿಯದೆ ತಪ್ಪಿದೆನಯ್ಯ |
ಕರುಣಿಸಯ್ಯಾ ಇದು ಒಂದೆ ಬಾರಿ | ಇನ್ನೊಮ್ಮೆ
ಮರೆದು ತಪ್ಪಲು ಶಿಕ್ಷಿಪುದಯ್ಯ || ೫

ಡಂಬು ಡಳಹು ಎನ್ನದು | ಡಂಬಕ ಮನದವ |
ನಂಬಿ ನಂಬದ ಡಂಬಕ ನಾನು-ಮಾಣಿಸು
ಇಂಬಿಲ್ಲ ಎನ್ನಲ್ಲಿ ನಿಜ ಭಕ್ತಿಗೆ || ೬

ಮಸಿ ತಂದು ನೀರಿನಿಂದ | ಏಸೊ ಕಾಲ ತೊಳೆದರು |
ತುಸು ಬಿಳಿಯ ಬಣ್ಣ ಬರುವದೆ–ಕರ್ಮವು
ಹಸನಾಗದೆ ಬೆನ್ನ ಬಿಡದದು || ೭

ಅನಂತಕೋಟಿ ವೇಳೆ | ಸನ್ಮಾನ ಮಾಡಿದರೇನು |
ವಿನಯವಿಲ್ಲದ ಉದಾಸೀನವು-ಒಂದು
ಕ್ಷಣ ಮಾತ್ರದೊಳು ಕೆಡಸಿತ್ತು || ೮

ಸ್ಥಾವರ ಜಂಗಮದಲ್ಲಿ | ಯಾವ ಭೇದವಿಲ್ಲೆಂದು |
ಸಾವಧಾನದಿ ನುಡಿಯುವೆ-ಮಾತಿನ
ಭಾವ ಬರಿದಾಗಿ ಎಡುಹಿದೆ || ೯

ನಾನು ಸಹಜನಲ್ಲ | ಅನುಭಯ ಲಿಂಗಸಂಬಂಧಿ |
ಎನ್ನೂವದೆನ್ನ ಮಾತು ಸುಡುವುದು–ದೇವನೆ
ಬೆನ್ನೀಗೆ ಬಿದ್ದವನ ಸಲುಹಯ್ಯ || ೧೦

ತಂದೆ ತಾಯಿ ನೀವೆ | ಬಂಧು ಬಳಗವು ನೀವೆ |
ಮಂದಮತಿಗೆ ಇನ್ನ್ಯಾರು-ಇಲ್ಲವಯ್ಯಾ
ಕಂದನಿಗೆ ಹಾಲಲೆದ್ದು ನೀರಲೆದ್ದು || ೧೧

ಎನ್ನವರು ಹೊಗಳೆನ್ನ | ಹೊನ್ನ ಶೂಲದಲ್ಲಿಕ್ಕಿದರು |
ಎನ್ನ ಹಂಕಾರ ಘಾಯದಲ್ಲಿ-ಅಕಟಕಟ
ಇನ್ನು ಜೀವಿಸದಂತಾಯಿತಯ್ಯ || ೧೨

ಬದುಕಲಾರೆನು ದೇವ | ಸದ್‍ಗುರು ಜಂಗಮನಾಗಿ |
ಬಂದು ಶೂಲದಿಂದುಳುಹಯ್ಯಾ–ಪ್ರಸಾದದ
ಮದ್ದನಿಕ್ಕಿ ಎನ್ನನು ಪೊರೆಯ್ಯಯ್ಯಾ || ೧೩

ಕೊರಗಿದೆ ಮರುಗಿದೆ । ಪರಮ ಜಂಗಮವರ್ಯನೆ ।
ಪೊರೆ ಎಂದು ಕಿಂಕರದಿ ಕೇಳಲು-ಬಸವಗೆ
ನಿರೂಪಿಸಿದ ಪ್ರಭುದೇವ ಈ ಪರಿ ॥ ೧೪

ಲಿಂಗದೊಳಗೆ ಜಂಗಮ । ಜಂಗಮದೊಳು ಲಿಂಗವ ।
ಹೀಗರಿದು ಮರೆದು ಬರುದೋರಿ–ಓದವರು
ಜಂಗಮದೊಳು ಬೆರಸಲೇತಕ್ಕೆ ॥ ೧೫

ಧೃಢದಿಂದ ಲಿಂಗದೊಳು । ಹುಡುಕಬೇಕು ಜಂಗಮ ।
ಮಾಡುವಾಗ ಲಿಂಗಪೂಜೆಯ–ಸಮಯದಿ
ಒಡೆಯ ಜಂಗಮ ಮನೆಗೆ ಬಂದರೆ ॥ ೧೬

ಲಿಂಗಪೂಜೆಯ ಬಿಟ್ಟು । ಜಂಗಮಕೆ ಇದಿರೆದ್ದು ।
ಜಂಗಮನ ಪಾದಕ್ಕೆ ಒಂದಿಸಿ-ಭಕ್ತಿಯ
ಇಂಗಿತವರಿತು ಮಾಡುವನೆ ಭಕ್ತ ॥ ೧೭

ಜಂಗಮ ಹೊರಗಿರಲು । ಲಿಂಗಪೂಜೆ ಮಾಡುವಾತ ।
ಹೇಗಾಗುವನು ಆತನು ಭಕ್ತ–ಕೈಯಲ್ಲಿ
ಜಂಗಮದ ಮುಂದೆ ಲಿಂಗಹಿಡಿದವ ॥ ೧೮

ಸಹ ಪಂಕ್ತಿಯಲಿ ಕೂತು । ಮಹಾಲಿಂಗಪೂಜಿಸುವ ।
ದ್ರೋಹಿಯು ಭೃತ್ಯಾಚಾರಕ್ಕೆ-ಆ ಮನೆಗೆ
ಮಹಾ ಅಜ್ಞಾನಿ ಜಂಗಮ ಹೋಗುವ । ೧೯

ಕರ್ತಮನೆಗೆ ಬಂದಾಗ । ಭೃತ್ಯಾಚಾರದಿ ಕರೆದು ।
ಅರ್ತಿಯಿಂದಲಿ ಪೂಜಿಸುವನ–ಭಕ್ತಿಯು
ಹೊರ್ತು ಅಹಂಕಾರವನೊಲ್ಲೆನಯ್ಯ ॥ ೨೦

ಪೂಜೆ ಮಾಡುವಾತನ । ಸೋಜಿಗ ನಾನರಿಯೆ ।
ಮೂಜಗದೊಡೆಯನು ಹೊರಗಡೆ-ನಿಂದಿರೆ
ಭಜಿಸಿ ಪೂಜಿಸುವೆ ಇನ್ನಾರಿಗೆ ॥ ೨೧

ಅಸುವಿಗೆ ಹೊರಗಿರಿಸಿ । ವಾಸಿಪುದೆ ದೇಹವು ।
ಅಸಮ ಶರಣರು ಬಾಗಿಲಲ್ಲಿ–ನಿಂದಿರಲು
ತುಸು ಅರುವಿಲ್ಲ ಸಂಗನಬಸವನೆ ॥ ೨೨

ಮರವೆಯು ಆದದ್ದು । ಅರುಹಲು ಪ್ರಭುದೇವ ।
ಜರಿದು ತನ್ನ ಲಿಂಗಪೂಜೆಯು-ಬಸವಣ್ಣ
ಕೊರಗೂತ ಅಲ್ಲಮನಿಗೆ ನುಡಿದನು ॥ ೨೩

ಮುನ್ನೂರಾ ಅರವತ್ತು । ದಿನ ಶ್ರವವ ಮಾಡಿ ।
ದಿನ ಒಂದು ಕಳನೇರಿ ಕೈಮರೆದಂತೆ-ಆಯ್ತು
ಎನಿಸು ಕಾಲ ಲಿಂಗಾರ್ಚನೆ ಮಾಡಿ ॥ ೨೪

ಮನದೃಢವಿಲ್ಲದಲೆ । ಅನುದಿನ ಲಿಂಗಪೂಜೆಯು ।
ನಾನಾವಿಧದಿ ಮಾಡಲೇನಾಯಿತು–ಹಾಲಿನಲಿ
ಹನಿ ಹೆಪ್ಪು ಬೆರಸಿದಂತಾಯಿತು ॥ ೨೫

ಕಲ್ಲು ನೀರೊಳಗಿಟ್ಟು । ಹಲಕಾಲ ಗತಿಸಿದರು ।
ಸ್ವಲ್ಪ ಮೆತ್ತಗಾಗಬಹುದೆ–ಪೂಜಿಸಿ
ಕಾಲ ಕಳೆಯಿತು ದೃಢವಿಲ್ಲದಲೆ ॥ ೨೬

ಅಷ್ಟವಿಧಾರ್ಚನೆಯ । ಮಾಟ ಷೋಡಶೋಪಚಾರದ ।
ಬಟ್ಟೆಯ ಮಾಡುವೆ ಅರಸರಿಯದ–ತಾಗಿದ ಸುಖ
ಮುಟ್ಟಿಸಲರಿಯದೆ ಜಂಗಮಕ್ಕೆ ॥ ೨೭

ಸ್ಥಾವರ ಜಂಗಮದ । ಆವ ಭೇದವನರಿಯದ ।
ತವೆ ಪೂಜಕ ನಾನಯ್ಯ ನಾಚದೆ-ಎನ್ನ
ದೇವ ಪ್ರಾಣಲಿಂಗವೆಂಬ ಡಂಬಕ ॥ ೨೮

ನೋಡುವರುಳ್ಳರೆ ನಾನು । ಮಾಡುವೆ ದೇಹಾರವ ।
ನೋಡಯ್ಯ ಎನಗೊಂದು ನಿಜವಿಲ್ಲ-ಎನ್ನಲ್ಲಿ
ದೃಢ ನಿಷ್ಪತಿಯಿಲ್ಲ ಹೇ ಪ್ರಭುವೆ ॥ ೨೯

ತೋರೂತ ಲಿಂಗವನ । ಹೊರೆವೆನು ಉದರವ ।
ಅರಿಯದ ಭಂಗಗಾರ ನಾನಯ್ಯ-ಎನ್ನ
ವರ ಕೂಡಲಸಂಗನು ದೇವಯ್ಯ ॥ ೩೦

ಲಿಂಗವೆಂತಿರುವುದು । ಲಿಂಗದ ನಿಲವನು ನಾನು ।
ಹೇಗಿರುವದೆಂಬ ಹೋದ ಹೊಲಬ–ಅರಿಯೆ
ಲಿಂಗಪೂಜೆಯ ಮಾತು ಎನಗೇಕೆ ॥ ೩೧

ನೀವಿರಲು ಜಂಗಮಲಿಂಗ। ಸ್ಥಾವರಕೆ ಮೆಚ್ಚೂತ।
ಭವಹರನೆ ಮರುಳಾದೆ ಎನ್ನ ತಪ್ಪು–ದೇವ
ಯಾವ ಎಣಿಕೆಗೂ ಕಡೆ ಇಲ್ಲ॥ ೩೨

ಎನ್ನ ತಪ್ಪು ಅನಂತಕೋಟಿ। ನಿನ್ನ ಸೈರಣೆಗೆಣೆ ಇಲ್ಲ।
ಇನ್ನು ತಪ್ಪಿದೆನಾದರೆ ನಿನ್ನ–ಪಾದವೆ ದಿವ್ಯ
ಕಿನ್ನರ ಬೊಮ್ಮನ ಪಾದವೆ ಸಾಕ್ಷಿ॥ ೩೩

ಮುನ್ನ ತಪ್ಪಿದೆ ಆನು। ಇನ್ನು ತಪ್ಪಲಾರೆನೆಂದು।
ಬಿನ್ನವಿಸಲು ಬಸವದೇವನು-ಆಗಲ್ಲಿ
ಕಿನ್ನರ ಬೊಮ್ಮಯ್ಯ ಇಂತೆಂದನು॥ ೩೪

ತನು ಸಜ್ಜೆವಾಯಿತು। ಮನ ಲಿಂಗವಾದ ಬಳಿಕ।
ಅನುವ ಬೇರೆ ಮತ್ತೆ ಅರಸುವರೆ–ಪ್ರಭುವೆ
ಮನೆಯೊಳಗೆ ಬಿಜಯಂಗೈಯುವುದು॥ ೩೫

ತನುವೆ ಬಸವಣ್ಣನು। ಮನವೆ ಪ್ರಭು ದೇವರೆಂಬ।
ಘನವಳಕೊಂಡ ಬಳಿಕ ಗುಣದೋಷ–ನೋಡುವರೆ
ನಿನ್ನಡಿಯಲ್ಲಿ ಸಂದು ಸಂಶಯ ಉಂಟೆ॥ ೩೬

ಜಂಗಮದಿಂಗಿತ ನೋಡಿ। ಲಿಂಗವೆಂದರಿದ ಭಕ್ತ।
ಸಂಗ ಸ್ನೇಹ ಆವಿಯ ಶಿಶುವಿನ-ಪರಿಯಾತ
ಅಂಗ ಮನ ಬೆರಸಿ ಇರಬೇಕು॥ ೩೭

ಬಂದ ಬರವ ನೋಡದೆ। ನಿಂದವರನರಿಯದೆ।
ಇಂದೆನ್ನ ಮುಂದೆ ಯಾರಿಲ್ಲೆಂಬ-ಗರುವಿಕೆ
ಚೆಂದೇನು ಬಸವಂಗೆ ಕಿನ್ನರಯ್ಯ॥ ೩೮

ಸತ್ಯ ಸದಾಚಾರವು। ಭೃತ್ಯಾಚಾರವು ಎನಗಿಲ್ಲ।
ಕರ್ತನ ಸ್ಮರಿಸಲು ಭಕ್ತಿ ಇಲ್ಲೆಂದು-ಬಸವನು
ನಿತ್ಯ ಪ್ರಭುವೆ ಕರುಣಿಸೆಂದನು॥ ೩೯

ಕರಗಿಸಿ ಎನ್ನ ಮನದ। ಪರಿಹರಿಸು ಕಾಳಿಕೆಯ।
ಒರಿಗ್ಹಚ್ಚಿ ಬಣ್ಣಕ್ಕೆ ತಂದೆನ್ನ-ಪುಟವಿಕ್ಕಿ
ಉರಿಯಲ್ಲಿ ಕಾಸಿ ಸೋಸಯ್ಯ॥ ೪೦

ಕಡಿದು ಕಡಿದು ಮತ್ತೆ | ಬಡಿದು ಬಡಿದು ಎನ್ನ |
ಕಡೆಯಾಣಿಯ ಮಾಡಿ ಶರಣರ-ಪಾದಕ್ಕೆ
ತೊಡಗೆಯ ಮಾಡಿ ಸಲುಹೆಂದ || ೪೧

ತನುವಿನಲ್ಲಿ ತನುವ | ಮನದಲ್ಲಿ ಮನವನು |
ಧನದಲ್ಲಿ ಧನವ ಸವಿಯದು–ಪ್ರಭು ಎಂದ
ಅನುಮೀರಿ ಮಾತಾಡುವಿ ಬಸವ || ೪೨

ಮಾಟ ಕೂಟವೆಂಬುವ | ಸಟೆ ಕೀರ್ತಿಗೆ ಬೆನ್ನಟ್ಟುತ್ತಿ |
ನೆಟ್ಟನೆ ಜಂಗಮವೆ ಲಿಂಗವೆಂದು-ಅರಿಯದೆ
ದಿಟ ತ್ರಿಕರ್ಣನೊಪ್ಪಿಸದೆ ಭಕ್ತನಲ್ಲ || ೪೩

ವರ ಬಸವನೆಂದರು | ಒರೆದ ಹೊನ್ನಿಂದೊಂದೊರೆ |
ಸೀರೆಯೊಳಗೊಂದೆಳೆಯ ಇಂದು ನಾಳೆ-ಎಂದರೆ
ವರ ಪ್ರಭು ನಿಮ್ಮಾಣೆ ಪ್ರಮಥರಾಣೆ || ೪೪

ಶರಣರಿಗಲ್ಲದಲೆ | ಬೇರೆ ನಾನರಿಯೆನು |
ವರ ಕೂಡಲಸಂಗಮದೇವಯ್ಯ-ನಿಮ್ಮಾಣೆ
ಬರಮಾಡಬೇಕು ಓ ತಂದೆ || ೪೫

ತನುವ ಬೇಡಿದಡೀವೆ | ಮನವ ಬೇಡಿದಡೀವೆ |
ಧನವ ಬೇಡಿದರೆ ನೀಡುವೆ-ಶರಣರಿಗೆ
ಅನುಮಾನ ಎನ್ನಲ್ಲಿ ಎನಿತಿಲ್ಲ || ೪೬

ಎನಗೆ ಬೇಕೆಂಬ ಭಾವ | ಮನದಲ್ಲಿ ಮೂಡಿದಡೆ |
ಘನ ಮಹಿಮ ಪ್ರಭುವೆ ನಿಮ್ಮಾಣೆ-ಎನ್ನ
ಮನ ವಚನ ಕಾಯದಲ್ಲಿ ನೀವಯ್ಯ || ೪೭

ಮೇರು ಗಿರಿಗಳೆಲ್ಲವು | ವರ ಪ್ರಮಥರೊಡವೆ |
ಪುರಾತನರೊಡವೆ ರಜತ ಗಿರಿ-ಬಸವಣ್ಣ
ಈರೇಳು ಲೋಕಗಳು ಲಿಂಗದೊಡವೆ || ೪೮

ಮರ್ತ್ಯವೆಂಬುವದು | ಕರ್ತಾರನ ಕಮ್ಮಟವು |
ಮತ್ತೆ ಅಚ್ಚಿನ ಮೊಳೆ ಬಾಣಸಮನೆ–ದೇವನ
ಸೊತ್ತಿಹುದು ನೀನೇನು ಕೊಟ್ಟೆ ಬಸವ || ೪೯

ತನು ಅರ್ಪಿತವೆಂದರೆ । ತಾನಹುದು ಗುರುದ್ರೋಹಿ ।
ಮನ ಅರ್ಪಿತವೆಂದರೆ ಲಿಂಗದ್ರೋಹಿ–ಜಂಗಮಕೆ
ಧನ ಅರ್ಪಿತವೆನ್ನಲು ದ್ರೋಹಿ ನೋಡಾ ॥ ೫೦

ಅನಿತ್ಯವಾದವುಗಳು । ಆ ನಿತ್ಯನಿಗರ್ಪಿಸಿ ।
ಆನು ಭಕ್ತನೆಂಬ ನುಡಿಯುವ-ಮಾತು
ಜ್ಞಾನಹೀನರಂತೆ ತೋರುವದು ॥ ೫೧

ಒಡೆಯರಿಗೆ ಉಣ್ಣಲು । ಉಂಡೆಯನು ಮುರಿದಿಕ್ಕಿ ।
ದೃಢ ಭಕ್ತನೆಂಬುದ ಸಮ್ಯಕ್‌ಶರಣರು–ಮೆಚ್ಚರು
ಮೃಡನ ನೀನಾವುದು ಅರ್ಪಿಸುವೆ ಬಸವ ॥ ೫೨

ಬರಿ ಗಾಣವನಾಡಿದ । ಹೋರಿಯಂತಾಯಿತು ಭಕ್ತಿ ।
ನೀರಿನಲ್ಲಿ ಉಪ್ಪದ್ದಿ ಮೆಲಿದಂತೆ–ಎನ ಭಕ್ತಿ
ಉರಿಯಾಗಿ ಸುಟ್ಟಿತ್ತು ಹೇ ಪ್ರಭುವೆ ॥ ೫೩

ತನು ಕೊಟ್ಟೆನೆಂದು ನುಡಿದು । ಎನ್ನ ಗುರು ವಚನಕ್ಕೆ ದೂರ ।
ಮನ ಕೊಟ್ಟೆನೆಂದು ಲಿಂಗಮುಖಕ್ಕೆ–ದೂರಾದೆ
ಧನವ ಕೊಟ್ಟೆನೆಂದು ಜಂಗಮ ಮುಖಕ್ಕೆ ॥ ೫೪

ನಾನು ಭಕ್ತನು ಅಲ್ಲ । ನಾನು ಯುಕ್ತನಲ್ಲಯ್ಯ ।
ನಾನು ಮುಕ್ತನಲ್ಲ ಕಪಟವೇಶಿ–ಪ್ರಭುವೆ
ಎನ್ನ ಭಕ್ತಿ ಒಳಲೊಟ್ಟೆ ತೋರಿದಿರಿ ॥ ೫೫

ಸಜ್ಜನ ಸನ್ನಹಿತವಾದ । ನಿಜ ಭಕ್ತಿ ಇಲ್ಲದಲೆ ।
ಸಜ ಭಕ್ತಿಗೊಂದು ಪರಿಹಂಕಾರ–ಒಮ್ಮೆ
ಅಂಜೂತ ಕಿಂಕಿಲವೆ ಬಸವಣ್ಣ ॥ ೫೬

ಮನಕ್ಕೆ ಮನ ಸಾಕ್ಷಿಯಾಗಿ । ತಾನು ಮಾಡುವ ಭಕ್ತನಲ್ಲ ।
ಎನ್ನ ಗುಹೇಶ್ವರನಿರುವನಲ್ಲದೆ–ಪ್ರಪಂಚದಿ
ಏನು ಕಾಣಲಾರ ಸಂಗನಬಸವ ॥ ೫೭

ಒಂದೆಂದು ಜಂಗಮಲಿಂಗ । ಸಂದೇಹವಳಿದು ಇರಬೇಕು ।
ಸಂದು ಸಂಶಯವಳಿದು ಸಯವಾದ–ಭಕ್ತಿ
ಹಿಂದೆ ಮೆಟ್ಟಿ ಹೋಯಿತ್ತಲ್ಲಾ ಬಸವಣ್ಣ ॥ ೫೮

ಒಪ್ಪಚ್ಚಿ ಕಿಂಕಿಲನಾಗಿ । ಒಪ್ಪಚಿ ಅಹಂಕಾರಿಯಾಗಲು ।
ಒಪ್ಪದೆ ಗುಹೇಶ್ವರ ಹೊರನೂಕುವ-ನೋಡಾ
ಅಪ್ಪ ಸಂಗನಬಸವ ದೇವಯ್ಯ ॥ ೫೯

ಹುಡುಕದಿರು ಹೇ ಪ್ರಭುವೆ । ಹುಡುಕಲು ಹುರುಳಿಲ್ಲ ।
ನೋಡಯ್ಯ ಚಿತ್ತರಟ್ಟೆ ಕಾಯಲ್ಲಿ-ಮತ್ತೇನು
ಹುಡುಕಲು ಸಿಗುವದೆ ಉತ್ತುಮನೆ ॥ ೬೦

ಚಿತ್ತ ಅತ್ತಿಯ ಹಣ್ಣು । ಒತ್ತಿ ನೋಡಲು ಹುರುಳಿಲ್ಲ ।
ಇತ್ತಿದಿರಿ ಪ್ರಪಂಚಿನ ಡಂಬಿನಲ್ಲಿ-ಎನ್ನಯ್ಯ
ಚಿತ್ತರದ ರೂಪು ಮಾಡಿರಿಸಿದಿರಿ ॥ ೬೧

ಕೈಯಲ್ಲಿ ದೊಣ್ಣೆ ಇರೆ । ಅಯ್ಯಾ ಮನದಲಿ ಕ್ರೋಧ ।
ಬಾಯಲ್ಲಿ ಕಿಂಕಿಲ ಮಾತುಗಳು—ಲಿಂಗವಾರ್ತೆ
ಅಯ್ಯ ನಿನಗೇಕೆ ಬಸವಣ್ಣಾ ॥ ೬೨

ಈತ ಜಂಗಮ ಲಿಂಗವೆಂಬ । ಮಾತು ಸೂತಕವಲ್ಲದೆ ।
ಏತಕ್ಕೆ ಆಡುವಿ ಭಕ್ತಿಯ ಮಾತು-ಬಸವಣ್ಣ
ಓತು ಮಾಡಯ್ಯ ನಿಜಭಕ್ತಿಯ ॥ ೬೩

ಇರುವ ಕಬ್ಬಿಣ ರೂಪು । ಪರುಷ ಮುಟ್ಟಿದಾಗಲೆ ।
ಒರೆಯ ಚಿನ್ನವಾಗುವದು ಪರುಷ-ಮುಟ್ಟಿ
ಪರುಷವಾಗ ಬಲ್ಲದೆ ಬಸವಣ್ಣಾ ॥ ೬೪

ನಾನೆತ್ತ ಬಲ್ಲೆನಯ್ಯಾ । ನಿನ್ನ ಭಕ್ತಿಯ ಘನತೆ ।
ನಾನೆತ್ತ ಬಲ್ಲೆ ಪಾದದ ನಿಲವ-ಪ್ರಭುವೆ ॥
ತನು ಕಳವಳದ ಮರೆಯಲ್ಲಿರುವೆ ॥ ೬೫

ಆವಿಯ ಶಿಶುವಿನಂತೆ । ಭಾವ ಸ್ನೇಹ ಇರಬೇಕು ।
ಆವ ಕಾಗೆ ಕೋಕಿಲೆ ಸಂಧಾನದಂತೆ-ಬಸವ
ಠಾವ ತಪ್ಪದೆ ಹಾರುವ ಮಂಗನಂತೆ ॥ ೬೬

ನೀರು ಹಾಲನು ಭೇಧಿಸಿ । ತೋರುವ ಹಂಸದಂತೆ ।
ಇರದೆ ಲಿಂಗದಿ ಅವಧಾನವ-ತಪ್ಪಿದರೆ
ಮರಳಿ ಅರಿಸಿದರುಂಟೆ ಬಸವಣ್ಣ ॥ ೬೭

ಎನ್ನ ತನುವಿಗೆ ನೀನೆ । ಎನ್ನ ಮನಕ್ಕೆ ನೀನೆ ।
ಎನ್ನ ಧನಕ್ಕೆ ನೀನೆ ಒಡೆಯನು-ಪ್ರಭೊ
ಇನ್ನೇನು ಎನ್ನಲ್ಲಿ ಇರುವುದು ॥ ೬೮

ಎನ್ನರಿವು ನಿನ್ನದು । ಎನ್ನ ಮರಹು ನಿನ್ನದು ।
ಮನ್ನಿಸು ಅಪರಾಧ ಹೇ ಪ್ರಭೊ-ನಿನ್ನ
ಮುನಿಸು ಬಿಟ್ಟು ವಿಚಾರಿಪುದಯ್ಯ ॥ ೬೯

ಬಾಳಲಾರದೆ ತಾನು । ಗೋಳಿಕ್ಕುವರು ವಿಧಿಗೆ ।
ಹೇಳುವ ನಾಣ್ನುಡಿ ದಿಟವಾಯ್ತು-ಬಸವಾ
ಕೇಳಾ ನಿನ್ನ ನುಡಿಯು ಏತರದು ॥ ೭೦

ಅವಧಾನ ತಪ್ಪಿ ನಡೆದು । ಶಿವಾಧೀನವೆಂದರೆ ।
ಶಿವ ಅರಿಯನೆ ಬಣ್ಣದ ಮಾತು-ಬಸವೇಶ
ಸುವಿಚಾರ ತಪ್ಪಿ ನಡೆದರೆ ॥ ೭೧

ಭೃತ್ಯಾಚಾರವ ಹಿಡಿದು । ಸತ್ಯ ಸದಾಚಾರದಿ ।
ನಿತ್ಯ ಲಿಂಗಜಂಗಮ ಪೂಜಿಸುವ-ನಿಷ್ಠೆಯು
ಅತ್ಯಧಿಕ ಭಕ್ತಿಗೆ ಮೋಸವಿಲ್ಲ ॥ ೭೨

ನಾನೆ ಅಧಿಕನೆಂಬ । ಹೀನ ಅಲಗ ಹಿಡಿದು ।
ಅನುದಿನದಿ ಮಾಡುವಭಕ್ತಿಯು-ಫಲಿಸದೆ
ತನ್ನನೆ ಇರಿವೂದು ಬಸವಯ್ಯ ॥ ೭೩

ದೇವನು ಎಂಬ ಹಗೆಯ । ಸಾವಧಾನದಿ ಗೆಲಲು ।
ಭಾವ ಬತ್ತಲೆ ಎಂಬ ಅಲಗವ-ಹಿಡಿಬೇಕು
ಅವಧಾನ ತಪ್ಪದೆ ಬಸವಣ್ಣಾ ॥ ೭೪

ಧ್ಯಾನ ಮೌನಗಳೆಂಬ । ಅನುವಾದ ಶಸ್ತ್ರವನು ।
ಆನು ಹಿಡಿಯಲರಿಯದೆ ಕೆಟ್ಟನು-ಹೇ ಪ್ರಭೊ
ಹೀನ ಅಹಂಕಾರ ಅಳವಟ್ಟು ॥ ೭೫

ಹಂಕಾರ ಧಾರೆಯ । ಬಿಂಕಿನ ಮೊನೆ ಅಲಗವ ।
ಅಂಕಿತನಾಗಿ ಹಿಡಿದೆನು-ಪ್ರಭುವೆ
ಲೆಂಕ ನಾ ಅಂಜುವೆ ಅಂಜುವೆ ॥ ೭೬

ವರ ಜಂಗಮ ಲಿಂಗವೆಂಬ। ತಿರುವು ಮುರುವಾಯ್ತು ಭಾಷೆ।
ಪರಮ ಜಂಗಮವೆಂಬ' ಶಿಕ್ಷಾ ಶಸ್ತ್ರದಿ-ಎನ್ನ
ಪೊರೆಯುವದು ಪ್ರಭೊ ಹೊಯ್ದು ಬೈದು॥ ೭೭

ಮನಕ್ಕೆ ಮನ ಒಂದಾಗಿ। ತನುವಿಗೆ ತನು ಸಮದರ್ಶನ
ಪ್ರಾಣಕೆ ಪ್ರಾಣ ಸಮದರ್ಶನವಾಗಿ-ಬಸವನೆ
ಮನ ವಾಚಾ ಕಾಯದ ಶಬ್ದ ಸೈರಿಸೆನು॥ ೭೮

ದೇವ ಗುಹೇಶ್ವರನಲ್ಲಿ। ಶಿವ ಭಕ್ತನಾದ ಕಾರಣ।
ತವೆ ಮುನಿಸು ಮೊಳೆದೋರಿತ್ತು-ನೋಡಾ
ಶಿವಶರಣ ಸಂಗನಬಸವಣ್ಣ॥ ೭೯

ಸೂಳೆಯನು ಹಲವರು। ಹಳಿದಿರುವಳು ಕೆಲರನು।
ಕೇಳಿ ನಿಂದಿಪರೆ ಲೋಕದಿ-ಸತಿಯಳು
ಕೀಳಕ್ಕಿಳಿದರೆ ಸೈರಿಪುದೆ ಲೋಕ॥ ೮೦

ಕೀರ್ತಿ ಪಾರ್ತಿಗೆ ಮಾಡುವ। ಮತಿಗೇಡಿ ತಪ್ಪಿದರೆ।
ಆತನ ಭಕ್ತಿ ಮನಕ್ಕೆ ತರಲಿಲ್ಲ-ಸದ್‌ಭಕ್ತ
ರೀತಿ ನೆಡಹಿದರೆ ಸೈರಿಸಲಾಗದು॥ ೮೧

ಆದಿಯಿಂದ ಅತ್ತತ್ತ। ಸದಮಲ ಲಿಂಗಕ್ಕೆ ನೀನೆ।
ಸದ ಭಕ್ತನಾದ ಕಾರಣವೆ-ಬಸವಣ್ಣ
ನೊಂದಿತ್ತು ಎನ್ನ ಮನ ನೋಡ॥ ೮೨

ಎನ್ನ ನುಡಿಗಳು ಎನಗೆ। ಅನುತಾಪಕ್ಕೀಡು ಮಾಡಿ।
ಎನ್ನ ಅಲಗೆ ಎನ್ನನು ಕೊಂದಿತ್ತು-ಹೇ ಪ್ರಭೊ
ನೀನು ಮುನಿದರೆ ನಾನೆ ಕೆಡುವೆನು॥ ೮೩

ನಾನು ಪಾಪಿ ಪ್ರಭುವೆ। ನಾನು ಕೋಪಿ ಓ ದೇವ।
ಅನು ತರಳತನದಿ ಕೆಟ್ಟೆನು-ಭಕ್ತಿಯುಕ್ತಿಯ
ಏನು ಹಲಬನರಿಯದೆ ಮರುಳಾದೆ॥ ೮೪

ಆಳ ಮುನಿದರೆ ಆಳೆ। ಹಾಳಾಗುವನು ಪ್ರಭುವೆ।
ಆಳುವನು ಮುನಿದರೆ ಆಳೇ ತಾ-ಕೆಡುವನು
ಕೇಳು ನೀ ಮುನಿದರೆ ನಾನೆ ಹಾಳು॥ ೮೫

ಒಲೆ ಹೊತ್ತಿ ಉರಿದರೆ। ನಿಲಬಹುದು ಅಲ್ಲದೆ ದೇವ।
ನೆಲ ಹೊತ್ತಿ ಉರಿದರೆ ನಿಲಬಹುದೆ ?–ತಾಯಿಯ
ಮೊಲೆ ಹಾಲು ನಂಜಾಗಿ ಕೊಲ್ಲುವದೆ ? ॥ ೮೬

ಏರಿ ನೀರುಂಡರೆ। ಆ ರೈತನ ಬೇಲಿ ಮೇಯ್ದರೆ।
ನಾರಿ ತನ್ನ ಮನೆಯಲ್ಲಿ ಕಳುವರೆ-ಯಾರಿಗೆ
ದೂರು ಹೇಳುವದು ಹೇ ಪ್ರಭುವೆ ॥ ೮೭

ಎನ್ನ ಗುಣ ಅವಗುಣವ। ಆನು ಸಂಪಾದಿಸುವೆ।
ನಿನಗಾನು ಸರಿಯೆ ಅಪ್ರತಿಮ ಮಹಿಮ-ಪ್ರಭೊ
ಎನ್ನೊಡನೆ ಮುನಿವರೆ ಓ ತಂದೆ॥ ೮೮

ಕಣ್ಣ ಕೋಪಕೆ ಮುನ್ನ। ಏನೂ ಅರಿಯದೆ ನುಡಿದೆ।
ಮನ ನಿವೃತ್ತ ನುಂದಾಗಿ ಕಂಡೆನು-ಬಾ ಪ್ರಭೊ
ಎನ್ನ ಮುನಿಸು ಎನ್ನಲ್ಲಿ ಅಡಗಿತ್ತು ಬಾ ॥ ೮೯

ಆರಾಧಿಸುವಾತನು। ವಿರೋಧಿಸುವನೇನಯ್ಯ।
ಮರೆವರೆ ಪೂಜಿಸಿ ಪೂಜೆಯ-ಬಸವೇಶ
ಅರಿತು ಜಂಗಮಲಿಂಗೆಂದು ತಪ್ಪುವರೆ ॥ ೯೦

ಗಾಳಿಯಲಿ ಗಂಧವದು। ಸುಳಿದು ಕೂಡಿರುವಂತೆ।
ಇಳೆಯೊಳು ಕೀರ್ತಿವಾರ್ತೆ ಪಡೆಯಲು-ಪ್ರಮಥರು
ಕೇಳು ಶಿಶುವನೊಡತಣ ಮೆಚ್ಚುವರೆ ॥ ೯೧

ಅರಿದು ನೋಡಿಹರೆ। ಶರಣ ಗುಹೇಶ್ವರನ।
ವರ ಅಲ್ಲಮ ಪ್ರಭುವಿಗೆ ನೀನೆ-ಕಾಣಾ
ಪರಮಾರಾಧ್ಯ ಸಂಗನ ಬಸವಣ್ಣ ॥ ೯೨

ಎನ್ನ ಗತಿಯು ನೀನೆ। ಎನ್ನ ಮತಿಯು ನೀನೆ।
ಎನ್ನ ಗುರು ಪರಮ ಗುರು ನೀನೆ-ಪ್ರಭೊ
ಎನ್ನಂತರಂಗದ ಜ್ಯೋತಿ ನೀನೆ ॥ ೯೩

ನೀನೆ ಎನಗೆ ಶ್ರೀ ಗುರು। ನಾನೆ ನಿನಗೆ ಶಿಷ್ಯನು।
ನಿನ್ನ ಶರಣ ಶ್ರೀ ಸಿದ್ಧರಾಮರು-ಬಲ್ಲರು
ಎನ್ನ ಕೃಪೆ ಮಾಡಾ ಹೇ ಪ್ರಭುವ ॥ ೯೪

ಕೇಳಯ್ಯ ಪ್ರಭುದೇವ। ಪೇಳುವೆನೆಂದ ಸಿದ್ಧರಾಮ।
ಸಲೆ ಆದಿ ಅನಾದಿ ಇಲ್ಲದಂದು-ನಿನಗಿನ್ನು
ಕೇಳಾ ಸಂಗನ ಬಸವನೆ ಭಕ್ತ॥ ೯೫

ನಾದ ಬಿಂದು ಕಳೆಗಳ। ಅದು ಇಲ್ಲದಂದು ನೀನೆ।
ಸದಮಲ ಪ್ರಭುವೆ ಜಂಗಮನಾಗಿ-ಇರುವೆ
ಇದು ನಾನು ನಿನಗಿನ್ನು ಅರುಹಬೇಕೆ॥ ೯೬

ಶಿವಶಕ್ತಿಗಳಿಬ್ಬರು। ಅವತರಿಸುವ ಮುನ್ನ ಬಸವ।
ಶಿವಭಕ್ತನು ಸುರಾಳನಿರಾಳ ಶಬ್ದ–ಹುಟ್ಟದಂದು
ದೇವಾ ಪ್ರಭುವೆ ನೀನೆ ಜಂಗಮನು॥ ೯೭

ಬಸವಣ್ಣನಾರೆಂಬುದು। ವಸುಧಿಯರರಿಯರು।
ಅಸಮ ಪ್ರಭುವೆ ನೀವೆ ಬಲ್ಲಿರಿ-ದಯೆದೋರೊ
ಈಶ ಕಪಿಲಸಿದ್ಧಮಲ್ಲಿನಾಥಾ॥ ೯೮

ಚೆನ್ನಬಸವ ದೇವರು। ಸನ್ನುತ ಪ್ರಭುವಿನ।
ವಿನಯದಿ ಅಡಿಯ ಹಿಡಿದರು–ದೇವ
ಮುನಿವರೆ ಉಭಯ ಭಾವವಿಟ್ಟು॥ ೯೯

ಸಂಧಿ ೩೧

ಶರಣು ಶರಣಾರ್ಥಿ ದೇವ । ಪರಬ್ರಹ್ಮ ಸ್ವರೂಪನೆ ।
ಶರಣು ಶರಣಾರ್ಥಿ ದೇವರದೇವ-ನಿಮ್ಮ
ಚರಣಕ್ಕೆ ಶರಣು ಶರಣಯ್ಯಾ ॥ ೧

ಸತಿಪತಿಯ ಒಲುಮೆಯು । ಅತಿ ಮುನಿಸದೇತರದು ।
ಗತಿಮತಿ ನೀನೆ ಇರುತಿರಲು–ಆ ಮುನಿಸು
ಅತಿ ಬೇಟ ಎಂಬುದು ತಪ್ಪದು ॥ ೨

ಸಂತೆಯು ನೆರೆದಲ್ಲಿ । ಮಾತು ಅನುಭಾವದ ।
ಯಾತಕ್ಕೆ ಆಡುವದು ಪ್ರಭುವೆ-ಬೀದಿಯಲಿ
ನಿಂತು ನುಡಿದವರಷ್ಟೆ ನಗೆಗೇಡು ॥ ೩

ಸಂಗನಬಸವನೊಳಗೆ । ಜಂಗಮ ಪ್ರಭು ನಿಮ್ಮೊಳು ।
ಸಂಗ ಸಮರಸವಾಗಿರಲು-ಮತ್ತೆ
ಹೇಗೆ ಮುನಿಸುವಿರಿ ಹೇ ಪ್ರಭೊ ॥ ೪

ಭಕ್ತನ ಹಿರಿಮೆಯು । ಭಕ್ತನ ಕುಂದು ಕೊರತೆ ।
ಯುಕ್ತ ಜಂಗಮರ ಹೀನ ಘನವ-ಅರಿಯೆನು
ಮುಕ್ತಾಂಗನೆ ವರ ಪ್ರೀತನೆ ॥ ೫

ನಿನ್ನ ಪ್ರಾಣವೆ ಬಸವ । ನಿನ್ನ ಕಾಯ ಬಸವನದು ।
ಭಿನ್ನಳಿದ ಪ್ರಭು ನಿನ್ನ ಪ್ರಾಣಕಾಯ–ಬಸವನದು
ಅನ್ಯ ಭಾವಿಸುವದೆ ಬಲ್ಲವರು ॥ ೬

ನಡೆಯುವ ಕುದುರೆಯು । ನಡು ನಡುವೆ ಮುಗ್ಗಿದರೆ ।
ನಡಿಸಿಕೊಂಬುವದಲ್ಲದೆ ನೀನು–ಹೇ ಪ್ರಭೊ
ಮಿಡಿ ಹಿರಿಯಹೊಯ್ದರುಂಟೆ ಲೋಕದಿ ॥ ೭

ಮರುವಿನಿಂ ಬಂದದ್ದು । ಪರಿಹರಿಸಿ ಗುಣದೋಷ ।
ಬರಬೇಕು ನಿಮ್ಮ ಮನೆಯೊಳಗೆ–ನಿಮ್ಮ ಬಸವ
ಯಾರೆಂಬುದು ನೀವೆ ತಿಳಿಬೇಕು ॥ ೮

ಬಿನ್ನವಿಸಿದರಾಗ । ಚೆನ್ನಬಸವ ದೇವರು ।
ಭಿನ್ನವಳಿದ ಪ್ರಭುದೇವಗೆ-ಮಡಿವಾಳ
ಅನ್ಯೋನ್ಯದಿ ಮತ್ತೆ ಬೇಡುವರು ॥ ೯

ಶರಣು ಶರಣಾರ್ಥಿ । ಪರಮಜಂಗಮ ಪ್ರಭು ।
ಬರಬೇಕು ಬಸವನ ಮಾಮನೆಗೆ-ಮನಸೀಗೆ
ತಾರದೆ ಭಿನ್ನ ಭಾವವನು ॥ ೧೦

ಬಸವಣ್ಣನೆ ಗುರುವಾಗಿ । ವಸುಧೀಗೆ ಬಂದ ಚೆನ್ನ-
ಬಸವಣ್ಣ ಲಿಂಗರೂಪಾಗಿ ಬಂದೀರಿ-ಮರ್ತ್ಯಕ್ಕೆ
ಅಸಮ ಪ್ರಭು ಜಂಗಮರೂಪಾಗಿ ॥ ೧೧

ಬೆರೆಸಲು ಭಕ್ತಿಯು । ಇಳೆಗೆ ಬಂದರು ಬಸವ ।
ಮೊಳೆಸಲು ಜ್ಞಾನ ಚೆನ್ನಬಸವ–ಈರ್ವರ
ಒಳಕೊಂಬ ಘನಕ್ಕೆ ಕಾರಣಿಕ ನೀನು ॥ ೧೨

ಗುರು ಲಿಂಗ ಜಂಗಮರ । ಇರವು ಒಂದಲ್ಲದೆ ।
ಬೇರೆ ಭಾವವುಂಟೆ ಪ್ರಭುವೆ-ದಯವಾಗು
ಮೀರದೆ ಅವರೀರ್ವರ ಬಿನ್ನಪವ ॥ ೧೩

ಮಡಿವಾಳ ತಂದೆಗಳ । ನುಡಿದ ಮಾತುಗಳಿಂದ ।
ಒಡೆಯ ಪ್ರಭುದೇವ ಪ್ರಸನ್ನರಾಗಿ-ಬಸವನ
ಕಡು ಮಹಿಮೆಯ ನುತಿಸಿದರು ॥ ೧೪

ನಿರಂಜನ ಬಸವಣ್ಣ । ಆರೂಢ ದಾಸೋಹಿ ।
ಪೊರೆವನು ಚರಾಚರಕ್ಕೆ-ಬಸವೇಶ
ಪರಮ ಸದ್‌ಧರ್ಮ ರೂಪಾಗಿ ॥ ೧೫

ಸಂಗ ರಹಿತ ಬಸವ । ಜಂಗಮ ಪ್ರಾಣಿ ಬಸವ ।
ತುಂಗ ಸ್ವಾನುಭಾವ ಸಾರೋದ್ಧಾರ-ಬಸವ
ಲಿಂಗೈಕ್ಯ ನಿಜರೂಪ ಶಿವಶರಣ ॥ ೧೬

ಸರ್ವಾಂಗಲಿಂಗಿಯು । ಸರ್ವಾಚಾರ ಸಂಪನ್ನನು ।
ಸರ್ವೇಶ ಅಖಂಡ ಪಿಂಡನು-ಬಸವದೇವ
ಸರ್ವ ಕಾರಣಕರ್ತ ಲೋಕಕ್ಕೆ ॥ ೧೭

ಶಿವಾಚಾರ ಚಕ್ರವರ್ತಿ । ಶಿವತತ್ವ ಸಂಪನ್ನ ।
ಶಿವಸಮಯ ಪ್ರತಿಷ್ಠಾಚಾರ್ಯ-ಬಸವೇಶ
ಶಿವಶರಣರಿಗೆ ತಾ ಮೂಲಿಗನು ॥ ೧೮

ನಿತ್ಯರೂಪ ಬಸವಣ್ಣ । ನಿತ್ಯ ಪರಿಪೂರ್ಣನು ।
ನಿತ್ಯನಿರಂಜನ ಬಸವಣ್ಣ-ಲೋಕದಿ
ಸತ್ಯ ಸದ್‌ಧರ್ಮ ಅರಹುವನು ॥ ೧೯

ಜಂಗಮ ರೂಪ ಬಸವ । ಲಿಂಗೋಪಭೋಗಿಯು ।
ಸಂಗರಹಿತ ನಿಜರೂಪನು-ಗುರು ಲಿಂಗ
ಜಂಗಮ ದಾಸೋಹಿ ಬಸವಣ್ಣ ॥ ೨೦

ಷಡಸ್ಥಲ ಬ್ರಹ್ಮರೂಪ । ಕಂಡೆ ಸಚ್ಚಿದಾನಂದನ ।
ಒಡೆಯನು ಅನಂತ ಕೋಟಿಗೆ-ಬಸವನ
ಅಡಿಗಳಿಗೆ ನಮೊ ನಮೊ ಎಂಬೆನು ॥ ೨೧

ಆಯತದಲಿ ಪೂರ್ವಾಚಾರಿ । ಸ್ವಾಯತದಿ ಪೂರ್ವಾಚಾರಿ ।
ಅಯ್ಯ ಸನ್ನಿಹಿತದಲಿ ಪೂರ್ವಾಚಾರಿ-ಕಂಡೆ
ಜೀಯ ಲಿಂಗದಿ ಪೂರ್ವಾಚಾರಿಯನು ॥ ೨೨

ಗುರು ಲಿಂಗ ಜಂಗಮು । ವರ ಪ್ರಸಾದಿಸ್ಥಲವಡಗಿದ ।
ಕರಸ್ಥಲ ಇನ್ಯಾರಿಗೆ ಸಾರಿತ್ತು-ಕೇಳಿರೆಂದು
ವರ ಪ್ರಭುದೇವ ಸಾರಿದರು ॥ ೨೩

ಸ್ತುತ್ಯ ನಿರವಂಚಕತ್ವದ । ನಿತ್ಯ ನಿಜಸ್ಥಲವಾದ ।
ಸತ್ಯ ಭಕ್ತಿ ಬಸವಣ್ಣನಿಗೆ–ಸಾರಿತ್ತೆಂದು
ಚಿತ್ತದ ವಲ್ಲಭನೆಂದರು ಪ್ರಭುಗಳು ॥ ೨೪

ಮೊರೆ ಹೊಕ್ಕು ಬಾಳುವೆ । ಶರಣಗಣ ಕೇಳಿರಿ ।
ಪರಮನ ಪಾದಕ್ಕೆ ನಮೊ ನಮೊ–ಬಸವ
ಗುರು ಎನ್ನ ಪರಮಾರಾಧ್ಯನು ॥ ೨೫

ಕುಲದೊಳಗೆ ತಾ ಹುಟ್ಟಿ । ಕುಲವ ಬೆರಸದೆ ತನ್ನ ।
ನಿಲವ ಬಲಿದಿಪ್ಪರಾರು ಹೇಳಾ–ಬಸವನು
ಕುಲ ನಿಲವದಾಚೆ ಅದಪನು ॥ ೨೬

ಹಬ್ಬಿದ ಮೂರು ಬೆಟ್ಟಕ್ಕೆ । ಹಬ್ಬಲೀಯದೆ ಮನವ ।
ನಂಬಿತ್ತು ಲಿಂಗಜಂಗಮಕ್ಕೆ-ಸವಿಸಿ
ಸಾಂಬ ಲಿಂಗವಪ್ಪವರಿನ್ನಾರು ॥ ೨೭

ಸ್ವಯವೆ ಲಿಂಗವಾಗಿ । ಸ್ವಯವೆ ಶರಣನಾಗಿ ।
ಸ್ವಯವೆ ಭೋಗವೆಂದುದಾಗಿ-ಶರಣಂಗೆ
ಜಯ ಜಯ ನಮೊ ನಮೋ ಎಂಬೆನು ॥ ೨೮

ತನುವಗೆಲಲರಿಯದೆ । ಮನವ ಗೆಲಲರಿಯದೆ ।
ಧನಗೆಲಲರಿಯದೆ ಲೋಕೆಲ್ಲ–ಭ್ರಮೆಗೊಂಡು
ತಾನರಿಯದೆ ನಾಶಗೊಂಡಿತ್ತು ॥ ೨೯

ತನು ದಾಸೋಹಕೆ ಸವಿಸಿ । ಮನ ಲಿಂಗ ಧ್ಯಾನದಲಿ ।
ಧನವ ಜಂಗಮಕ್ಕೆ ಸವಿಸಿ ಗೆದ್ದ-ಬಸವಂಗೆ
ಅನುದಿನ ನಮೊ ನಮೋ ಎಂಬೆನು ॥ ೩೦

ಆ ಬಯಲಿಗೆ ಮೂರ್ತಿಯು । ಒಬ್ಬ ಶರಣ ಮಾಡಿದನು ।
ಒಬ್ಬ ಶರಣ ಮೂರ್ತಿಯಲಿ ಭಕ್ತಿ ಸ್ವಾಯತ-ಮಾಡಿದ-
ನೊಬ್ಬ ಭಕ್ತಿಯನೆ ಸುಜ್ಞಾನ ಮುಖವ ॥ ೩೧

ಸರ್ವಾಂಗವೆಲ್ಲವನು। ನಿರ್ವಾಣ ಸಮಾಧಿಯಲಿ।
ತವೆ ನಿಲ್ಲಿಸಿದನೊಬ್ಬ ಶರಣನು-ನಾನು
ನಿರ್ವಾಣದಿ ನಿಂದು ಅಗಮ್ಯನೆನಲು॥ ೩೨

ತಾನು ಭಕ್ತಿಕಂಪಿತನೆನಿಸಿ। ಎನ್ನ ತನ್ನಲ್ಲಿ ಬರಸಿದನು।
ನಿನ್ನ ಶರಣ ಸಂಗನ ಬಸವನ-ಪಾದವ
ನಾನು ಕಂಡು ಶರಣೆಂದು ಬದುಕಿದೆ॥ ೩೩

ಪ್ರಸನ್ನರಾಗಿ ಪ್ರಭು। ಬಸವನಿಗೆ ನುತಿಸಲು।
ಅಸಮ ಭಕ್ತಿಯ ಬಸವಣ್ಣ-ಮುರಳಿ ತಾ
ಶಿಶುವಾಗಿ ನೆನೆದರು ಪ್ರಭುವಿಗೆ॥ ೩೪

ನಡೆವನು ಕಾಲಿಲ್ಲದೆ। ಹಿಡಿವನು ಕೈಯಿಲ್ಲದೆ।
ನೋಡುವ ಕಣ್ಣಿಲ್ಲದೆ ಸಹಜ-ನೈಯಿಲ್ಲ ಬಣ್ಣ
ಕೂಡುವ ಕೂಟ ಮಥನವಿಲ್ಲದೆ॥ ೩೫

ಅಲ್ಲಿ ಸೈವೆರಗಾಗಿ। ಶಿಲೆಯ ಮೇಲೆ ಒಡಲು।
ಎಲೆ ಅಯ್ಯಾ ತನ್ನನರಿಯದು-ಒಡಲ
ಅಲ್ಲಿಹುದೆಂದು ತಾನರಿಯನು॥ ೩೬

ಬಿಡದೆ ಬೆಂಬತ್ತಿ ಬಂದು। ಜಡವಿಡಿದ ಕಾಯದ।
ಕಡು ಕಳವಳವ ತಿಳುಹಲು-ನನ್ನಯ್ಯ
ಅಡಿಗಡಿಗೆ ಅನುಭಾವ ತೋರುವನು॥ ೩೭

ಕುಳ್ಳಿತ್ತೆಡೆಯಲಿ ಕುಂಟ। ಹೆಳವ ನಿಂದಿದ್ದೆಡೆಯಲಿ।
ಸ್ಥಳ ನೋಡಿದಡಲ್ಲಿ ಪರಿಪೂರ್ಣನು-ಮೆಲ್ಲನೆ
ಒಳಗನೊರೆದು ತೋರುತ್ತಿರುವನು॥ ೩೮

ಬಲ್ಲವರು ಬದುಕಲೆಂದು। ಝುಲ್ಲರಿಯ ಮೇಲೊಂದು।
ನಿಲ್ಲದಲೆ ಬೆಳ್ಗೊಡೆ ಹಿಡಿದು-ನಾನೆ
ಬಲ್ಲಿದ ತಡೆಯ ನಿಲ್ಲಿಸಬಲ್ಲೆನು॥ ೩೯

ದೇವನ ಮಾಮನೆಯಲ್ಲಿ। ಭಾವ ಬಕುತಿಯಿಂದ।
ದೇವ ಪ್ರಭುವಿಗೆ ಶರಣೆಂದು-ಮೊರೆಹೊಕ್ಕು
ದೇವ ಕೂಡಲಸಂಗಮ ಬದುಕಿದೆನು॥ ೪೦

ಆದಿಯನು ಅರುಹಿದ ಅ- । ನಾದಿಯ ತೋರಿಸಿದನು ।
ಭೇದಿಸಿ ಇಹವ ಕೆಡಿಸಿದನು-ಪರವ
ಮೋದದಿ ನಿಲಿಸಿದ ಪ್ರಭುದೇವ ॥ ೪೧

ಘನವನೆ ತೋರಿದನು । ಮನವ ಸರಿಸವಿಟ್ಟ ।
ಅನುವ ತೋರಿ ಆಯತಮಾಡಿ–ಎನ್ನಯ್ಯ
ತನುವ ಮರೆಸಿ ಮಹವನರುಹಿದ ॥ ೪೨

ಹಿಂದಣ ಪೂರ್ವಾಶ್ರಯವ । ಹಿಂಪೆ ಮಾಡಿ ತೋರಿದ ।
ಮುಂದಣ ಗತಿಯ ಸಂದೇಹವ-ಬಿಡಿಸಿದ
ತಂದೆ ಪ್ರಭುವಿನ ಪಾದಕ್ಕೆ ನಮೊ ನಮೋ ॥ ೪೩

ಗುರುಚರಣವೆ ಗತಿ । ಗುರುಚರಣವೆ ಮತಿ ।
ಗುರು ಶಬ್ದ ಪರುಷಪಾವನ–ಅಧಿಕರು
ಗುರುವಿನ ಹೊರತು ಇನ್ನಾರು ॥ ೪೪

ಜಾತನಲ್ಲ ಪ್ರಭು ಅ- । ಜಾತ ಜನಿತನಲ್ಲ ।
ಸೂತಕ ಬಿಡಿಸುವಾತನು-ಪಾಮರರ
ಪಾತಕ ಪರಿಹರಿಸುವವನು ॥ ೪೫

ಖೇಚರನಲ್ಲ ಪ್ರಭು । ಭೂಚರನಲ್ಲ ದೇವನು ।
ಆಚರಿಸುವನಲ್ಲ ಅನ್ಯಸುಖ-ಭ್ರಾಂತಿ ಪಿ-
ಶಾಚಿ ಕೊಲ್ಲಿದ ಮಾಂತ್ರಿಕ ಲಿಂಗೈಕ್ಯ ॥ ೪೬

ಅಷ್ಟತನು ಮೂರ್ತಿಯಲ್ಲಿ । ಅಷ್ಟಮದ ಮೆಟ್ಟಿ ನಿಲ್ಲಿಸಿ ।
ಅಷ್ಟದಳ ಕಮಲ ಪೂಜಿತ-ಗುರುದೇವ
ಸೃಷ್ಟಿಯಲ್ಲಿಯ ಸಾಧಕನಲ್ಲ ॥ ೪೭

ಆಕಾರ ನಿರಾಕಾರವ । ಸಾಕಾರ ಸನುಮತನು ।
ಏಕಾಂತದೊಳಿಪ್ಪ ನಿಜಸ್ವರೂಪ–ನೀನು
ಏಕಾಂತ ಲೋಕಾಂತ ಮೀರಿದಾತ ॥ ೪೮

ಜೀವ ಜೀವ ಜೀವರ । ಜೀವಾದಿಗಳೊಳಗಣ ।
ಭಾವಕನಲ್ಲ ಅನ್ಯ ಭಿನ್ನದ-ಎನ್ನಯ್ಯ
ಜೀವ ಶಿವೈಕ್ಯನು ಪ್ರಭುದೇವ ॥ ೪೯

ಸಮಸ್ತವಾದಂತಹ । ಸಮ ಸುಖ ಭೋಗಿಯು ।
ಸೀಮೆ ಅಣುರೇಣು ಸ್ಥೂಲ ಸೂಕ್ಷ್ಮ–ಭರಿತ
ಅಮಮ್ಮಮ ನಿಸ್ಸೀಮ ಪರಿಪೂರ್ಣ ॥ ೫೦

ಭೃಂಗ ಕುಸುಮ ಪರಿಮಳ । ಸಾಗಿ ಎರಗುವಂತೆ ।
ಲಿಂಗ ಸಂಗ ಸುಖ ನಿರ್ಲೇಪ–ಪ್ರಭೊ
ಅಂಗ ಲಿಂಗ ಸಂಗ ಶಿವಯೋಗಿ ॥ ೫೧

ಬಸವನ ಸ್ತೋತ್ರವ । ಬೆಸಗೊಂಡ ಪ್ರಭುದೇವ ।
ಅಸಮ ಪ್ರಮಥರ ಸಮವೇತ–ಹರುಷದಿ
ಲೇಸಾದ ಅರಮನೆಯ ಪೊಕ್ಕರು ॥ ೫೨

ಉಘೇ ಚಾಂಗುಭಲ ಎಂಬ । ಆಗೆಲ್ಲರು ಘರ್ಜಿಸುತ ।
ಮಿಗೆ ಸಂಭ್ರಮದಿಂದ ಹೊರಟಾಗ–ಮುಂದೀನ
ಅಂಗಳಕ್ಕೆ ಬಂದು ತಲುಪಿದರು ॥ ೫೩

ಮನ ಮನ ಒಂದಾಗಿ । ಘನ ಅರಿವು ಸಮವಾಗಿ ।
ಎನ್ನ ಕೊಂಡಾಡಲು ಇಂಬುಂಟೆ–ಬಸವಣ್ಣ
ನೀನು ಲಿಂಗದಿ ಬೆರಸಿ ಬೇರಿಲ್ಲ ॥ ೫೪

ನೀರು ಹಾಲಿನಂತೆ ಕೂಡಿ । ಬೆರಸಿದ ಪರಿಯಂತೆ ।
ಉರಿಯುಂಡ ಕರ್ಪೂರ ಪರಿಯಂತೆ–ಬಸವೇಶ
ಬೆರಸಿ ಕೊಂಡಾಡಿ ಹೇಳಲುಂಟೆ ॥ ೫೫

ಅಣ್ಣನೆ ಸ್ತೋತ್ರವು ಸಾಕು । ಎನ್ನ ಕಣ್ಣಮುಂದೆ ನಿಮ್ಮ ।
ಕಾಣುವದು ಧರ್ಮದಿಂದೊಂದಾಶ್ಚರ್ಯ–ಬಸವ
ತಣಿದು ಬದುಕಿದೆನು ಅದು ಕಂಡು ॥ ೫೬

ದೇವನೆ ಮಹಾಪ್ರಸಾದ । ತವೆ ನಿಮ್ಮ ಚರಣದಲ್ಲಿ– ।
ರುವೆನು ಭೇದವಿಲ್ಲದೆ ನಾನು–ಇದಕ್ಕೆಲ್ಲ
ನೀವೆ ಸಾಕ್ಷಿ ಪ್ರಭುದೇವನೆ ॥ ೫೭

ದಿವ್ಯ ಪಾದವ ಕಂಡು । ಭವನಾಶವಾಯಿತ್ತು ।
ದೇವಾ ನಿಮ್ಮಿಂದೊಂದು ಆಶ್ಚರ್ಯ–ಇಲ್ಲ
ಯಾವುದು ಕಂಡಿದುದು ಹೇಳಾ ಪ್ರಭೊ ॥ ೫೮

ಓಹೋ ನಮಃ ಶಿವಾಯ। ಮಹದಾಕಾಶದ ಆ।
ಮಹಾ ಮರೆಯಲ್ಲಿದ್ದ ಶಾಂತಕ್ಕೈನ-ನಿಲವು
ಗುಹೇಶ್ವರ ಕಂಡು ಆಶ್ಚರ್ಯಗೊಂಡು ॥ ೫೯

ದಶಮಾರುತನ ಹೊಯಿಲು। ತುಸು ಉಳಿಯದೆ ತಾನೆ।
ಅಸಮ ಲಿಂಗಜ್ಞಾನ ಜ್ಯೋತಿಯು-ನಿಲವು
ಬಸವಣ್ಣನೆ ಬಣ್ಣಿಸಲಸದಳ ॥ ೬೦

ತನ್ನಿಂದ ತಾನಾಗಿ। ಭಿನ್ನ ಮುಕ್ತಿ ಕರಿಗೊಂಡ।
ಚೆನ್ನ ಮುಕ್ತಿ ಮುತ್ತಿನ ಧವಳದ-ಕಾಂತಿ
ಅನ್ಯೋನ್ಯದಿ ತೋರುವ ನಿಲವು ನೋಡಾ ॥ ೬೧

ರುದ್ರಾಕ್ಷಿಯ ಹಂಗು ಬಿಟ್ಟು। ಹೊದ್ದ ಚರ್ಮದ ಹೊದಿಕೆ ತೆ-।
ಗೆದು ಗಿಟಗಿಟ ಜಂತ್ರದ ನಿಲವೊ-ಅಲ್ಲಲ್ಲ
ವಾದಿಸುತ್ತಿರಲು ನಿಲವನರಿಯದೆ ॥ ೬೨

ಉರಿಯ ಲಿಂಗದೊಳಗೆ। ಪರಮ ಉದ್ಭವವಾದ।
ಉರಲಿಂಗದ ನಿಲವ ನೋಡಯ್ಯ-ಆವ
ಅರಿಯಬಾರದು ನಿಲವೆಂದು ॥ ೬೩

ಭವಹರ ಗುಹೇಶ್ವರ। ದೇವರ ಕಂಗಳಿಗೆ।
ಅವಲೋಕಿಸಿತು ಒಂದಾಶ್ಚರ್ಯ-ಬಸವ
ಭುವಿಜೀವಿಗಳು ಅರಿಯರು ॥ ೬೪

ಪರುಷದಿಂದ ಮತ್ತೆ। ಪರುಷವಾಗುವದುಂಟೆ।
ವರ ಸುಧೆ ಸೇವಿಸಿದ ಮೇಲೆ-ಇನ್ನಾವ ಆ-
ಹಾರ ಭೋಜನಗಳುಂಟೆ ॥ ೬೫

ದೇವರ ದೇವನೆ ಇಂದು। ಯಾವದಾಶ್ಚರ್ಯವ।
ನೀವು ಕಂಡಿದಿರಿ ನಿಮಗಿಂತ-ಅಧಿಕಾವುದು
ದೇವ ಪ್ರಭುವೆ ಅರುಹಿರಿ ॥ ೬೬

ಎನ್ನ ಬರುವಿನಗಿಂತ। ಮುನ್ನವೆ ಬಂದಿಹಿರೆಂದು।
ಎನಗೆ ಶುಭಸೂಚನೆ ತೋರಿದೆ-ಬಸವೇಶ
ಮನೆಯ ಮೀರಿ ಮುಂದದ ದೈವವುಂಟೆ ॥ ೬೭

ನೆಲದ ಮರೆಯಲ್ಲಿದ್ದ । ಹಲವು ಧನದ್ರವ್ಯವು ।
ಬೆಲೆಯುಳ್ಳ ಮಾಣಿಕ್ಯ ಬೀದಿಯಲಿ-ಬಿದ್ದಂತೆ
ನಿಲವು ಅರಿಯರು ಬಸವಣ್ಣ ॥ ೬೮

ಮರಣವುಳ್ಳವರಿಗೆ । ಮರುಜೀವಣಿ ಸಿಗುವುದೆ ।
ದುರಾಚಾರಿಗಳ ಕಣ್ಣಿಗೆ-ಪರುಷ
ಕಲ್ಲಾಗಿ ಇರುವಂತೆ ಶರಣರಿರವು ॥ ೬೯

ಅಂಗಳ ದ್ವಾರದಿ ನಿಂದ । ಲಿಂಗವನರಿದುದಿಲ್ಲವೆ ।
ಸಂಗಿ ನಿರಂಗ ನಿಃಕಲ ಬ್ರಹ್ಮ-ಶಂಕರದೇವ
ಲಿಂಗಪ್ರಸಾದ ಕುಳಿಯಲ್ಲಿ ನಿವಾಸ ॥ ೭೦

ಆದಿಯನಂಗ ಮುಖಕೆ ಅ- । ನಾದಿ ಪ್ರಾಣದ ಮುಖಕೆ ।
ಹೊಂದಿಸಿ ಮನವೆಂಬ ಅರುವಿನ ಮುಖಕೆ-ಆರ್ಪಿಸಿದಾ-
ನಂದ ನಿಲವ ನೋಡಾ ಬಸವಣ್ಣ ॥ ೭೧

ನಿರಾಕಾರದಿ ನಿಲ್ಲಿಸಿ । ಪರಿಣಾಮ ಪ್ರಸಾದದಲ್ಲಿ ।
ಇರುತಿರೆ ತದ್ಗತನಾಗಿ ಶರಣ-ಪ್ರಸಾದವೆ
ವರ ಪ್ರಾಣವಾಗಿ ಒಪ್ಪಿತು ಬಸವ ॥ ೭೨

ಪ್ರಸಾದವೆ ಕಾಯವಾಗಿ । ಪ್ರಸಾದವೆ ಜ್ಞಾನವಾಗಿ ।
ಪ್ರಸಾದವೆ ಧ್ಯಾನವಾಗಿಪ್ಪುದು-ಶಂಕರನು
ಪ್ರಸಾದಲಿಂಗ ಭೋಗೋಪಭೋಗಿ ॥ ೭೩

ವಸಂತ ಮಾರುತವ । ಬೀಸಿದರೆ ಅಂಕುರ ।
ಹೊಸತನದಿ ಹೊರಮಡುವಂತೆ-ಶಂಕರ
ಪ್ರಸಾದ ಕುಂಡದಿಂದೆ ಹೊರಬಂದ ॥ ೭೪

ಸ್ವಾತಿಯ ಮಳೆಗಳಿಗೆ । ಮುತ್ತಿನ ಚಿಪ್ಪುಗಳು ।
ಅತ್ತಿತ್ತ ಸಾಗರದಿ ಕಂಡಂತೆ-ಮೂಡಿದನು
ನಿತ್ಯ ಶರಣ ಮರುಳಶಂಕರನು ॥ ೭೫

ನಲಿದು ಸೂಜಿಯು ಕಲ್ಲು । ಒಲಿದು ಸೂಜಿಯು ಕಂಡು ।
ಮೆಲ್ಲನೆ ತಾಣದಿಂದೆದ್ದಂತೆ-ಶಂಕರದೇವ
ಅಲ್ಲಮನ ಕಂಡು ಹೊರ ಬಂದು ॥ ೭೬

ನರ ಶಿವಯೋಗಾನಂದದಿ । ಪರವಶನಾಗಲು ।
ಪರಶಿವ ಪ್ರಸನ್ನನಾಗಿ ಬರಲು–ಶಿವನ
ಚರಣ ಕಂಗಳಿಗೆ ಒತ್ತಿಕೊಂಬಂತೆ ॥ ೭೭

ಹುಣ್ಣಿಮೆಯ ದಿನ ಚಂದ್ರ । ಪೂರ್ಣ ಉದಯಿಸಲು ।
ಕುಣಿಯುತ ಸಿಂಧು ಮುಂದೆ ಮುಂದೆ-ಬಪ್ಪಂತೆ
ಕಾಣಿಸಿಕೊಂಡ ಮರುಳಶಂಕರನು ॥ ೭೮

ಜ್ಞಾನಚಕ್ಷುಗಳಿಗೆ । ತನ್ನ ನಿಲವು ತೋರಿದಂತೆ ।
ಘನ ಶರಣ ಮರುಳಶಂಕರನ–ನಿಲವ
ಸನ್ನೂತ ಅಲ್ಲಮನು ಅರಿತನು ॥ ೭೯

ಬಸವದೇವನಿಗಾಗ । ಅಸಮನು ಹೇಳುವಾಗ ।
ಪ್ರಸಾದ ಕುಂಡದಿಂದ ನಲಿದಾಡಿ-ಬಂದ ನ-
ಮಸ್ಕರಿಸುತ್ತ ಶಂಕರ ಪ್ರಭುವಿಗೆ ॥ ೮೦

ಜಯ ಜಯ ತ್ರಾಹಿ ತ್ರಾಹಿ । ಅಯ್ಯಾ ಆನು ಗರ್ಭದೊಳಗಿನ ।
ಪ್ರಿಯ ಶಿಶು ನವಮಾಸ ಹಾರಿಕೊಂಡಂತೆ-ಇದ್ದೆ
ದಯಾಳುವೆ ಜನ್ಮ ಸಫಲವಾಯಿತು ॥ ೮೧

ಬಸವರಾಜ ದೇವರೆ । ಒಸೆದ ದಯೆಯಿಂದ ನಾನು ।
ಅಸಮ ಪ್ರಭುದೇವ ಸಿದ್ಧರಾಮ ನಿಮ್ಮ–ಕಂಡು
ವಸುಧೀಶ ಬದುಕಿದೆ ನಿಮ್ಮ ಧರ್ಮ ॥ ೮೨

ಶರಣು ಶರಣಾರ್ಥಿ ನಿಮ್ಮ । ಶರಣ ಸಮೂಹಕ್ಕೆ ।
ಶರಣರನು ಕಂಡೆ ಹೇ ಪ್ರಭೊ–ನಿಮ್ಮ ಧರ್ಮ
ಶರಣು ಸಕಲ ಪುರಾತನರಿಗೆ ॥ ೮೩

ಹರಿಯಿತು ತಮವೆಂಬ । ಘೋರ ಸಂಸಾರದ ಬಂಧ ।
ಹರನೆ ಅಡಗಿ ಉಡುಗಿ ಕಂಡೆನೆಂಬ–ಭ್ರಮೆಭಾವ
ಪರಮನೆ ಬಯಲಾಯಿತು ನೋಡಾ ॥ ೮೪

ನಿತ್ಯ ನಿರಂಜನದ । ಉತ್ತಮ ಪರಂಜ್ಯೋತಿಯು ।
ಸುತ್ತಲು ಪ್ರಕಾಶ ಬೀರಿತು-ಪ್ರಭು ನೀವು
ಇತ್ತ ಕಾರುಣ್ಯದಿ ಬದುಕಿದೆನು ॥ ೮೫

ಕಣ್ಣಿನೊಳಗಣ ಗೊಂಬೆಯು। ಸಣ್ಣ ಸೂತ್ರದ ತೆರದಿ ಕುಂ-।
ದಣದೊಳಿಹ ಮೃದು ಛಾಯೆ ಪರಿ-ಕಂಡೆಯಾ
ಅಣ್ಣ ಬಸವ ಬೆಳಗನರಿಯದ ಜ್ಯೋತಿ ॥ ೮೬

ನವನೀತದೊಳಡಗಿದ। ಸವಿಯಂತೆ ಸಾರದ।
ಭಾವವಿಲ್ಲದ ಬಯಲು ಅಂಗವಿಲ್ಲದ-ಕುರುಹು
ಶಿವನಲ್ಲಿ ನೋಡು ಬಸವ ಶಂಕರನ ॥ ೮೭

ಹೀಗೆಂದು ಪ್ರಭುದೇವ। ಆಗ ಹೇಳುವಾಗ ಶಿವ-।
ಯೋಗಿ ಮರುಳಶಂಕರ ದೇವ-ನುಡಿದನು
ಬಾಗಿ ತ್ರಿಕರ್ಣವಾಗಿ ಪ್ರಭುವಿಗೆ ॥ ೮೮

ಸಿಂಬಿಗೆ ಇರುವದೆ। ರಂಭೆತನದ ಗುಣವು।
ಸಂಭ್ರಮ ನಳಿಯಲು ನವರಸ-ಅಂಗದ
ತುಂಬಿದ ಕಳೆಯುಂಟೆ ಹೇ ಪ್ರಭು ॥ ೮೯

ಪರುಷದ ದೆಸೆಯಿಂದ। ಪರಮನೆ ಪಾಷಾಣ ಕುಲವ।
ಹರಿವಂತೆ ನೀ ಬಂದೆಯಲ್ಲ ಪ್ರಭುವೆ-ನಾ ನಿಮ್ಮ
ಕಾರುಣ್ಯದಿಂದ ಬದುಕಿದೆನು ॥ ೯೦

ಕರುಳಿಲ್ಲದ ಕಲಿಯ। ಹರೆಯತನವಿಲ್ಲದ ನೇಹವ।
ಕರವಿಲ್ಲದ ಕಲಿತನವ ಕಂಡೆ-ಪ್ರಭುವೆಂದ
ಪರಿಮಳ ಕಂಡೆ ಕುಸುಮವಿಲ್ಲದ ॥ ೯೧

ಮರುಳ ಶಂಕರನೆಂಬ। ಹಿರಿನಾಮುವನು ಕಂಡೆ।
ವರ ಗುಹೇಶ್ವರ ಲಿಂಗದಲಿ ಕಂಡೆ-ಬಸವ
ಶರಣನ ಇರುವಿನ ಪರಿ ಇಂತು ॥ ೯೨

ಬೆಟ್ಟವನು ಏರಿದಾಗ। ಕಟ್ಟಿಗೆಯು ತಳ್ಳುವದು।
ನೆಟ್ಟನೆ ಪ್ರಾಣಕ್ಕೆ ಹೊಣೆಯಾದಲ್ಲಿ-ಕಾದುವುದು
ದಿಟವಿರಲು ಯಾವ ಅಚ್ಚರಿ ಪ್ರಭುವೆ ॥ ೯೩

ಎಲ್ಲ ಪುರಾತನರು। ಬಲ್ಲ ಶಂಕರನ ಕಂಡು।
ಬಲು ಆಶ್ಚರ್ಯದಿ ನೋಡಲು-ಬಸವಣ್ಣ
ನಿಲವನರಿದು ಭಯಭೀತನಾದ ॥ ೯೪

ನಿನ್ನ ಶರಣರು ಬಂದು। ಎನ್ನ ಅಂಗಳದೊಳಗೆ।
ಎನ್ನ ರಕ್ಷಿಸಲಿರುವಾಗ ಕೆಟ್ಟೆನೆಂದ-ಬಸವ
ಎನ್ನ ತೆರಹು ಮರುವಿನಲ್ಲಿ॥ ೯೫

ಎನ್ನ ಭಕ್ತಿ ಸಾವಿರ। ಪುಣ್ಯ ಸಾಧನೆ ಮಾಡಿ।
ಏನೂ ಇಲ್ಲದಂತಾಯಿತಲ್ಲಾ-ವ್ರತ-
ಹೀನ ಹಾದರದಲ್ಲಿ ಅಳಿದಂತೆ॥ ೯೬

ಕಾಯದ ಕಪಟವ। ಮಾಯಾ ಪ್ರಪಂಚಿ ನಾ।
ಹೇಯ ಬಲೆಯೊಳಗೆ ಸಿಲುಕಿದೆ-ಎನ್ನನು
ವಾಯದ ಸಂಭ್ರಮ ಹಿಡಿದಿಹುದು॥ ೯೭

ಅಷ್ಟಮದಂಗಳನು। ಸೃಷ್ಟಿಸಿ ಇದ್ದಿರಾಗಿ।
ಕಟ್ಟುಗ್ರದಿಂದ ನಿಮ್ಮ ಕಾಣದೆ-ಭವ ಬಿ-
ಕ್ಕಟ್ಟಿನಲ್ಲಿ ಸಿಲುಕಿದೆನು॥ ೯೮

ತನುವಿನ ಅವಗುಣ। ಮನದ ಮರ್ಕಟವಿಡಿದು।
ನೀನೆ ಗತಿ ಕೂಡಲ ಸಂಗಮ–ಶರಣರ
ಘನ ಅರಿಯದೆ ಭವದುಃಖಿಯಾದೆ॥ ೯೯

ಸಂಧಿ ೩೨

ಮರುಳ ಶಂಕರನ। ಕರುಣೆ ಎಂದಾಗುವದೆಂದು।
ವರ ಬಸವ ಕಳವಳದಿ ಎಂದನು-ಎನ ಭಕ್ತಿ
ಮರನೇರಿ ಕೈಯ ಬಿಟ್ಟಂತೆ ॥ ೧

ಕಡಿದು ಹೂವಿಡಿಯನು। ಒಡನೆ ಹಣ್ಣಾಗಲೆಂದು।
ಹಿಡಿದು ಹಿಚುಕಿದರೆ ಹಣ್ಣಾದೀತೆ-ಬಸವೇಶ
ಕಡುತಾಪಗೊಂಡರೆ ಫಲವೇನು ॥ ೨

ಪರಿಮಳವಿಲ್ಲದ। ಕಿರಿ ಮೊಗ್ಗವನರಳಿಸಿ।
ನಾರಿ ಮುಡಿದೆನೆಂದರೆ ಸೌರಭ-ಬೀರಿತೆ
ಅರಳಿದ ಕುಸುಮಗಳಲ್ಲದೆ॥ ೩

ಮಾನ್ಯ ಶರಣರ ನಿಲವನು। ತನ್ನ ಕಾಲಕ್ಕೆ ತಾನೆ।
ತಾನಾಗಿಯೆ ಕಾಣಬಹುದಲ್ಲದೆ-ಬಸವ
ಕಾಣಬಹುದೆ ಎಲ್ಲ ವೇಳೆಯಲಿ ॥ ೪

ಶರಣರ ನಿಲವನು । ಅಗಿದ ಬಳಿಕ ನಮ್ಮ ।
ಮರುವು ಬೆಳಗ ಕತ್ತಲೆಯಂತೆ-ಹರಿವುದು
ವರ ಸಂಗನಬಸವ ನೋಡಯ್ಯ ॥ ೫

ಆಗ ಬಸವಣ್ಣ ನುಡಿದ । ಮುಗಿಲ ಮರೆಯಲಿದ್ದ ।
ವೇಗದ ಮಿಂಚಿನಂತೆ ಒಡಲಿನ-ಮರೆಯ
ಮಿಗಿಲಾದ ಆತ್ಮನಂತೆ ನಿಲವು ॥ ೬

ಕಂಡು ಕಡೆಗಣಿಸಿದ । ದಂಡನಾಯಕನನ್ನು ।
ದಂಡಿಸಿ ಬುದ್ಧಿ ಕಲಿಸಯ್ಯ–ಪ್ರಭೊ ಅ-
ಖಂಡ ಕಾಯೊ ಕೂಡಲಸಂಗಮ ॥ ೭

ಶರಣ ಬಸವಣ್ಣನಿಗೆ । ಮರ್ತ್ಯದವನೆಂದರೆ ।
ಘೋರ ನರಕ ತಪ್ಪದು ನೋಡಾ-ಪ್ರಭುವೆ
ಶರಣರು ಮಹಿಮರೆಂದನು ಶಂಕರ ॥ ೮

ಶರಣ ಬಸವಣ್ಣನ । ಹಿರಿದಾದ ನಿಲವಿನ ।
ಪರಿಯೆ ನೀವೆ ಬಲ್ಲಿರಿ ಪ್ರಭೊ-ನಾನೆತ್ತ
ಅರಿಯುವೆನೆಂದ ಶಂಕರದೇವ ॥ ೯

ಮರುಳ ಶಂಕರದೇವ । ಪರಿ ಪರಿಯಿಂದ ಬಸವಗೆ ।
ಹರಸೂತ ಹಾಡಿದನು ಆಗ-ಬಸವಣ್ಣ
ವರ ಚೆನ್ನಬಸವಂಗೆ ಇಂತೆಂದನು ॥ ೧೦

ನೋಡಾ ಚೆನ್ನಬಸವ । ಒಡೆಯ ಶಂಕರದೇವ ।
ರೂಢಿಯ ಕಣ್ಣಿಂಗೆ ಮಂಜು ಕವಿಸಿ–ನಿಜದಿ
ಒಡನೆ ತದಗತನಾದ ನಿಲವ ನೋಡಾ ॥ ೧೧

ಕಂಗಳೊಳಗೆ ಕರುಳಿಲ್ಲ । ಅಂಗದೊಳಗೆ ಮಾಯೆಯಿಲ್ಲ ।
ಲಿಂಗ ಜಂಗಮದ ಒಕ್ಕಮಿಕ್ಕ-ಪ್ರಸಾದವ
ಪಿಂಗದಲೆ ಕೊಂಡ ಮಹಾಪ್ರಸಾದಿಯು ॥ ೧೨

ದೇಹವೆಂದರಿಯನು ನೀ- । ರ್ದೇಹವೆಂದರಿಯನು ।
ಅಹಂಕಾರವಿಲ್ಲ ಮನದೊಳಗೆ–ನಿಬ್ಬೆರಗಿನ
ಮಹಿಮನ ನೋಡಾ ಚೆನ್ನಬಸವ ॥ ೧೩

ಮರುಳಶಂಕರದೇವನ| ಪರತರ ನಿಲವನ್ನು|
ಅರಿತು ಬಸವಂಗೆ ಚೆನ್ನಣ್ಣ-ಆರುಹಿದ
ವರ ಬಸವ ನಿಮ್ಮಿಂದ ಕಂಡೆನು|| ೧೪

ಅಂಗವು ಆಚಾರಕ್ಕೆ| ತುಂಗ ಆಚಾರ ಲಿಂಗಕ್ಕೆ|
ಪಿಂಗದಲೆ ಅರ್ಪಿಸಿ ಶಂಕರದೇವ-ಆಚಾರ-
ಲಿಂಗ ಪ್ರಸಾದಿಯಾದ ಬಸವಣ್ಣ|| ೧೫

ಪ್ರಾಣವ ಲಿಂಗದಲ್ಲಿ| ಅನುವರಿತು ಅರ್ಪಿಸಿ|
ಘನ ಲಿಂಗವ ಪ್ರಾಣಕ್ಕರ್ಪಿಸಿ-ಶಂಕರ
ಪ್ರಾಣಲಿಂಗ ಪ್ರಸಾದಿಯಾದನು|| ೧೬

ದೇಹಭಾವದಿ ಬಂದ| ಅಹಂಕಾರ ಭಾವವು ದಾ-|
ಸೋಹ ಭಾವದಿ ಲಿಂಗಜಂಗಮಕೆ-ಕೊಟ್ಟು
ಮಹಾಲಿಂಗ ಜಂಗಮ ಪ್ರಸಾದಿಯಾದ|| ೧೭

ಸದ್ದಿಲ್ಲದೆ ಶಂಕರನು| ಬಿದ್ದ ಅಗುಳನೆತ್ತಿಕೊಂಡು|
ಮೋದದಿ ನಿಮ್ಮ ಅಂಗಳದ-ಕುಳಿಯೊಳು
ಇದ್ದನು ಹನ್ನೆರಡು ವರುಷ ಪ್ರಸಾದಿ|| ೧೮

ಅಂಗಳದೊಳಗಿನ ಮಹಾ-| ಲಿಂಗ ಪ್ರಸಾದವನು|
ಪಿಂಗದೆ ಸಲ್ಲಿಸುವ ಶರಣನ-ಶ್ರೀಪಾದ
ಸಂಗನಬಸವನೆ ಕಂಡೆ ನಿಮ್ಮಿಂದ|| ೧೯

ಚೆನ್ನಬಸವದೇವರು| ಬಿನ್ನವಿಸಿದ ನುಡಿ ಕೇಳಿ|
ಘನ ಮರುಳಶಂಕರದೇವರು-ಸ್ತುತಿಪರು
ಚೆನ್ನಬಸವನ ಮಹಾ ನಿಲವನು|| ೨೦

ಒಡೆಯ ಚೆನ್ನಬಸವ| ಷಡ್‌ಸ್ಥಲ ಚಕ್ರವರ್ತಿ|
ದೃಢ ಸರ್ವಾಚಾರ ಸಂಪನ್ನನ-ನಿಲವು
ನೋಡಯ್ಯ ಸಂಗನಬಸವಣ್ಣ|| ೨೧

ಆಚಾರವೆ ಕಾಯವಾಗಿ| ಆಚಾರವೆ ಪ್ರಾಣವಾಗಿ|
ಆಚಾರವೆ ಲಿಂಗ ಆಚಾರ ಸಂಗ-ಹೀಗೆ ನಮ್ಮ
ಆಚಾರ ಸನ್ನಿಹಿತ ಚೆನ್ನಬಸವ|| ೨೨

ನಾನೆತ್ತ ಬಲ್ಲೆನಯ್ಯಾ| ಚೆನ್ನಬಸವನ ನಿಲವ|
ನಿನ್ನಿಂದ ಕಂಡೆ ಬಸವಣ್ಣ–ಆಚಾರ ಸಂ-
ಪನ್ನನ ಕಂಡೆ ನಿಮ್ಮ ಧರ್ಮ|| ೨೩

ಚೆನ್ನಬಸವರಾಜರು| ಘನ ಪ್ರಭುದೇವರಿಗೆ|
ಬಿನ್ನವಿಸಿದರು ಈ ಪರಿಯಿಂದ-ಪ್ರಭುವೆ
ಘನ ಪ್ರಸಾದಿ ಮರುಳಶಂಕರ|| ೨೪

ತುದಿಯಿಲ್ಲದಾ ಘನವ| ಮೊದಲಿಲ್ಲದಾ ಅನುವ|
ಇದಿರಿಲ್ಲ ಒಳಹೊರಗಿಲ್ಲದೆ–ತಾನಾದ
ಸದಮಲ ಗುರು ಲಿಂಗ ಜಂಗಮ|| ೨೫

ತಾನು ಎಂಬುವದೆಲ್ಲ| ತಾನೆ ಹರಿದು ಹೋಗಿ|
ತಾನೆ ನಿರ್ದೇಶಮಾಡಿಕೊಂಡು–ನಿಜಪದ-
ವನ್ನೈದಿಪ್ಪ ಪರಿ ನೋಡ ಹೇ ಪ್ರಭೊ|| ೨೬

ಪ್ರಸಾದ ಕುಳಿಯೊಳಗೆ| ಏಸೊಂದು ವರುಷಗಳ|
ವಾಸಿಪ ಪ್ರಸಾದಿಯ ಕಂಡೆನೆಂದು–ಪ್ರಭು ಎಂದ
ಬಸವಣ್ಣನಿಂದ ನೋಡಾ ಸಿದ್ಧರಾಮ|| ೨೭

ಅಂಗವಿಡಿದನೆಂದು| ಲಿಂಗಿ ಎಂದೆನ್ನುವದೆ ನಿ-|
ಸಂಗಿ ಆರನೊಳಕೊಂಡನುಪಮ–ನಿಲವಿನ
ಇಂಗಿತವ ನೋಡಾ ಸಿದ್ಧರಾಮ|| ೨೮

ಮೂರರ ಹೊಲಿಗೆ ಬಿಚ್ಚಿ| ಹರಿಗಳ ಎಂಟಾತ್ಮರ|
ಚರಿಸದೆ ತನ್ನ ಇಚ್ಛೆಯೊಳು–ನಿಲಿಸಿದ
ಪರಮ ನಿಜಸುಖಿಯ ನೋಡಯ್ಯ|| ೨೯

ತತ್ವ ಮೂವತ್ತಾರರ| ಗೊತ್ತು ಮೀರಿದತ್ತ|
ಅತ್ತತ್ತವೆ ತೋರುವ ಅಗವ್ಯ–ಶರಣನು
ನಿತ್ಯ ಅಲ್ಲಯ್ಯನಿರವನೊಳಕೊಂಡ|| ೩೦

ಸತ್ಯ ಮುಕ್ತಿಯ ಕಳೆಯ| ನಿತ್ಯ ತತ್ವದ ಇರವ|
ನಿತ್ಯ ಮೂರೊಂದಾದ ಆರೂಢನ–ಕಂಡೆನೆಂದು
ಮತ್ತೆ ಸಂಗನಬಸವ ನುಡಿದನು|| ೩೧

ಮರುಳಶಂಕರದೇವರ | ವರ ನಿಲವ ಕಂಡುಂಡೆ |
ಪರಮ ಪ್ರಭು ಸಿದ್ಧರಾಮರಿಂದ–ಎಂದು
ಅರುಹಿದನು ಸಂಗನಬಸವಣ್ಣ || ೩೨

ಪರಮ ಪ್ರಭುವಿನಿಂದ | ವರ ಬಸವನ ಕೃಪೆಯಿಂದ |
ಮರುಳಶಂಕರ ದೇವರನು–ಕಂಡೆನಯ್ಯ
ಗುರು ಕಪಿಲಸಿದ್ಧಮಲ್ಲಿನಾಥಾ || ೩೩

ಆದಿಯ ಮೂರ್ತಿಯಲ್ಲ ಅ- | ನಾದಿಯ ಬಚ್ಚಬರೆಯ |
ಅದೊ ಶೂನ್ಯನಲ್ಲ ಅಂಗವಿಲ್ಲದ–ಸಂಗ ಘನ–
ಪದದಿ ವೇದ್ಯವಾದ ನಿಲವ ಕಂಡೆ || ೩೪

ಹಡಪದಪ್ಪಣ್ಣನಿಂದ | ಕಂಡೆ ಪ್ರಭು ಸಿದ್ಧರಾಮರ |
ಜಡರಹಿತನ ಕಂಡೆ ಈರ್ವರಿಂದ–ಎಂದನು
ಕಡು ವಿನಯದಿ ಬಸವರಾಜನು || ೩೫

ಏನೆಂದು ಉಪಮಿಸಲಿ | ತನ್ನಿಂದ ತಾ ತೋರಿದೆ |
ಎನ್ನ ಗುರು ಮುಖದಿಂದ ತೋರಿದ–ಶರಣನ
ಘನ ನಿಲವು ಕಂಡೆನೆಂದ ಬಸವಣ್ಣ || ೩೬

ತನ್ನ ಶಬ್ದ ಮುಗ್ಧವಾದ | ತಾಣದೆದರು ತೋರಿದೆ |
ತನ್ನ ಇರವೆ ಪರವಾಗಿರುವ–ಜಡರಹಿತ
ಘನ ನಿರುಪಮ ಮರುಳಶಂಕರ || ೩೭

ಬೆಳಗಾಗುವ ಮುಂಚೆ | ಕೋಳಿ ಕೂಗುವಂತೆ |
ಕೇಳಾ ಮಹಿಮರ ದರುಶನದಿ–ಸತ್‌ಪ್ರಣವ
ಕೇಳುವಂತೆ ನುಡಿದ ಮೂಲಿಗ || ೩೮

ಬೆರಸಿ ಸಂಗಮನಲ್ಲಿ | ಬೇರಿಲ್ಲದಿರುವ ನಮ್ಮ |
ಮರುಳಶಂಕರದೇವರ ನಿಲವ–ಕಂಡೆ
ಪರಮರೆ ನಿಮ್ಮ ಮೂವರಿಂದ || ೩೯

ಹಡಪದ ಅಪ್ಪಣ್ಣನು | ಒಡನೆ ಮುಂದೆ ಬಂದು ತಾ |
ಒಡೆಯರೆ ನಿಮ್ಮಿಂದ ಮಾಪ್ರಸಾದಿ–ಕಂಡೆನೆಂದು
ಕೊಂಡಾಡಿದನು ಭಯ ಭಕ್ತಿಯಿಂದ || ೪೦

ಯುಗ ಜುಗಂಗಳ| ಆಗುಹೋಗವನರಿಯದೆ|
ಹಗಲಿರುಳರಿಯದ ಪರವು-ಪರಿಣಾಮಿ
ಲಿಂಗದಲ್ಲಿ ಪರವಶನಾಗಿಹನು|| ೪೧

ಎನ್ನ ಮುಕ್ತಿಯ ಮುಕುರದ| ಉನ್ನತಿರವ ನೋಡಾ|
ಎನ್ನ ಸತ್ಯ ಸ್ವಾನುಭಾವದ ಕಳೆಯ-ನೋಡಾ
ಭಿನ್ನವಳಿದ ಚಿತ್‌ಸುಖಿ ಶಂಕರನ|| ೪೨

ಅಷ್ಟಮದಂಗಳ| ನಿಟ್ಟುರಿಸಿ ನೆಲಕೊತ್ತಿ|
ನಿಷ್ಠೆ ನಿಬ್ಬೆರಗಾಗಿ ನಿಂದವನ-ಕಂಡೆನು
ಶ್ರೇಷ್ಠ ಪ್ರಭು ಬಸವರ ದಯೆಯಿಂದ|| ೪೩

ಮಡಿವಾಳ ಮಾಚಯ್ಯ| ಹಿಡಿಸದ ಹಿಗ್ಗಿನಿಂದ|
ಅಡಿಗಳ ಶಂಕರದೇವನ-ಕಂಡೆನೆಂದ
ಒಡೆಯ ಬಸವನ ಕೃಪೆಯಿಂದ|| ೪೪

ಮೂರರನೊಳಕೊಂಡ| ಆರನು ಮೀರಿನಿಂದ|
ಅರುವಿನ ಘನತೆ ಏನೆಂಬೆ-ನುಡಿಯಲು
ಬಾರದು ನೋಡಲು ಕಂಗಳೆರಡು|| ೪೫

ಮಹದ ಬೆಳಗವೆ| ಅಹಾ ತಾನಾಗಿ ನಿಂದನು|
ಮಹಿಮ ಶಂಕರದೇವನ-ನಿಲವನು
ಇಹದಿ ಕಂಡೆ ಬಸವನಿಂದ|| ೪೬

ನೋಡಾ ಕಿನ್ನರಬ್ರಹ್ಮಯ್ಯ| ಮಡಿವಾಳಯ್ಯರಿಂದ|
ಕೂಡಲಸಂಗನಲ್ಲಿ ಶಂಕರ-ದೇವನ
ಅಡಿಗಳ ಕಂಡು ಬದುಕಿದೆನು|| ೪೭

ಅಡಿಗಡಿಗೆನ್ನ ಮನದ| ಕಡು ಮೈಲಿಗೆ ತೊಳೆದು|
ಹಿಡಿದು ತಂದ ಹೋದ ಪ್ರಾಣವ-ತಂದೆ
ಮಡಿವಾಳನಿಂದ ಕಂಡೆ ಶಂಕರನ|| ೪೮

ಅಕಾರವೆಂಬೆನೆ ನಿ-| ರಾಕಾರವಾಗಿದೆ ನಿ-|
ರಾಕಾರವೆಂಬೆನೆ ಅತ್ತತ್ತ-ತೋರಿತ್ತೆಂದ
ಲೋಕೇಶ ಬಸವಂಗೆ ಕಿನ್ನರಿಬ್ರಹ್ಮ|| ೪೯

ತನ್ನನಳಿದ ನಿಜ-| ಘನವನುಳಿದ ಮಹಾ|
ಸನ್ನುತ ನಿಲವ ಕಂಡೆನಯ್ಯ-ಶಂಕರನ
ನಿನ್ನಿಂದ ಕಂಡೆ ಸಂಗನಬಸವ|| ೫೦

ನಾನಾಯುಗದೊಳು ಬಂದು| ಕಾಣಲಿಲ್ಲ ಈ ನಿಲವ|
ತನ್ನಂಗ ಮನ ಭಾವ ಕರಣಂಗಳ-ಬಿಟ್ಟಾತಗೆ
ಕಿನ್ನರಬ್ರಹ್ಮನೆ ನಿಮ್ಮಿಂದ ಕಂಡೆ|| ೫೧

ಸ್ತುತಿಸಿದ ಶರಣರಿಗೆ| ಅತಿ ಬಕುತಿಯಿಂದಲಿ|
ನುತಿಸಿದನು ಮರುಳಶಂಕರ-ಶರಣರೆ
ಜತನ ಮಾಡಿರೆನ್ನ ನಿಮ್ಮ ಧರ್ಮ|| ೫೨

ಎನ್ನಲ್ಲಿಹ ಜ್ಞಾನಾತ್ಮನ| ಘನ ಚೇತನ ಪ್ರಭುದೇವ|
ಎನ್ನ ಪರಮಾತ್ಮನ ಚೇತನ-ಸಿದ್ಧರಾಮರ
ಅನುವರಿತು ಆನು ಬದುಕಿದೆನು|| ೫೩

ಎನ್ನ ಚಿನ್ಮಯಾತ್ಮನ ಚೇ-| ತನ ಸಂಗನಬಸವ|
ಎನ್ನ ನಿರ್ಮಳಾತ್ಮನ ಚೇತನ-ಚೆನ್ನಬಸವನ
ನೆನೆನೆನೆದು ನಾನು ಬದುಕಿದೆನು|| ೫೪

ಎನ್ನ ಮಹಾತ್ಮನ ಚೇ-| ತನ ಸಂಗನಬಸವನ|
ಘನ ನಿಜಸುಖಿ ಅಪ್ಪಣ್ಣನು-ಜೀವಾತ್ಮನ ಚೇ-
ತನ ಮಡಿವಾಳ ಮಾಚಯ್ಯನು|| ೫೫

ಎನ್ನ ಅರುವಿನ ಚೇ-| ತನನಾತ್ಮಕ ಶರಣನು|
ಕಿನ್ನರಿಬ್ರಹ್ಮಯ್ಯ ಮುಂತಾಗಿ-ಪ್ರಮಥರ
ಘನ ಕರುಣೆಯಿಂದ ಸುಖಿಸಿದೆನು|| ೫೬

ಸರ್ಪನ ಹೆಡೆಯ ಮೇಲೆ| ಇಪ್ಪತ್ತೇಳು ಲೋಕವು|
ಇಪ್ಪತ್ತೇಳು ಲೋಕದೊಳಗಿರುವ-ಕಂಡೆ
ಇಪ್ಪತ್ತೇಳು ಕರ್ಪೂರದ ಗಿರಿಗಳ|| ೫೭

ಇಪ್ಪತ್ತೇಳು ಗಿರಿ ಮೇಲೆ| ಇಪ್ಪತ್ತೇಳು ಉರಿ ಕಂಭ|
ಇಪ್ಪತ್ತೇಳು ಆ ಕಂಭದ ಮೇಲೆ-ಒಪ್ಪುವ
ಇಪ್ಪತ್ತೇಳು ಅರಗಿನ ಪುಥ್ಥಳಿಯ|| ೫೮

ಇಪ್ಪತ್ತೇಳು ಅರಗಿನ| ಒಪ್ಪುವ ಪುಥ್ಥಳಿ ಕರಗಿ|
ಇಪ್ಪತ್ತೇಳು ಕರ್ಪೂರ ಗಿರಿ ಉರಿದು-ಹೋದವು
ಇಪ್ಪತ್ತೇಳು ಲೋಕಗಳು ಹಾಳಾದವು|| ೫೯

ಸರ್ಪ ಬೆಂದು ಸತ್ತಿತ್ತು| ನಿಷ್ಪತ್ತಿ ನಿರಾಳವೆಂಬ|
ಇರ್ಪ ನಿಜವಳಗೊಂಡೆ ನಾನು-ಎತ್ಹೋದೆ
ಸರ್ಪನ ಪರಿ ನೀವೆ ಬಲ್ಲಿರಿ|| ೬೦

ಸಂಸಾರವೆಂಬ ಸಾಗರ| ಈಸಿ ದಾಟಲುಬಾರದೆ|
ಬೀಸಿ ಅರುಹೆಂಬ ಹರಿಗೋಲದಿ-ಕೂತನು
ಅಸಮ ಜ್ಞಾನವೆಂಬ ಅಂಬಿಗನು|| ೬೧

ಸುಜ್ಞಾನವೆಂಬ ಹುಟ್ಟು| ಮಾಜ್ಞಾನವೆ ಘಾತಗಳೆ|
ಸುಜ್ಞಾದಿ ಅಂಬಿಗ ಹಿಡಿದದ್ದು-ಕಂಡು ಆನು
ಅಜ್ಞಾನಿಗೆ ಹೊಳೆ ದಾಟಿಸೆಂದೆ|| ೬೨

ಅಂಬಿಗರಣ್ಣನನು| ನಂಬಿ ಹರಿಗೋಲೇರಿದೆ|
ಅಂಬುಧಿ ದಾಟಿಸುವನೆಂದು-ಕುಳಿತಾಗ
ಕಾಂಬುವ ಪರಿ ಎಂತು ಬಣ್ಣಿಸಿಲಿ|| ೬೩

ನಡು ಹೊಳೆಯಲ್ಲಿ ಕೊರಡು| ಅಡ್ಡ ಬಿದ್ದಿತ್ತು ಕಾಮ|
ಕಡು ಕ್ರೋಧವೆಂಬ ಸುಳುಹಿನಲಿ-ಸಿಕ್ಕಿತು
ದೊಡ್ಡ ಮೀನ ಬಂದಿತ್ತು ಹಂಕಾರ|| ೬೪

ಮಾಯೆಂಬ ಮೊಸಳೆಯು| ಬಾಯ ಬಿಡುತಿತ್ತು|
ಅಯ್ಯೋ ಮೋಹವೆಂಬ ನೊರೆತೊರೆ-ಹೆಚ್ಚಿ
ಅಯ್ಯ ಲೋಭ ಕಡಲು ಎಳೆಯುತಿತ್ತು|| ೬೫

ಮದವೆಂಬ ಮರಹು| ದಯೆ ತೋರದೆ ನೂಕುತ್ತಿತ್ತು|
ಅದೋ ಮತ್ಸರ ಗಾಳಿ ತಲೆಕೆಳಗೆ-ಮಾಡುವಾಗ
ಅದೆಲ್ಲ ಹರಿದು ಹೊಳೆ ದಾಟಿಸಿದ|| ೬೬

ಹೊಳೆಯ ದಾಟಿಸಿದಾತ| ಕೇಳಿದನು ಕೈಕೂಲಿ|
ಅಳವಲ್ಲ ಕೂಲಿ ಕೊಡಲೆನ್ನಲು-ಎನ್ನನು
ಎಳೆದೊಯ್ದು ಕೈಸೆರೆ ಮಾಡಿ ಅಂಬಿಗ|| ೬೭

ಅರಿವು ಕೊಟ್ಟ ಕೂಲಿಗೆ| ಕರುವ ಕಾಯಿಸಿಕೊಂಡನು|
ಅರಿಯದೆ ಹರಿಗೋಲನೇರಿ ತೊರೆ-ದಾಟಿದ
ವರ ಕೂಲಿಗೆ ಕರುವ ಕಾದೆ ನೋಡಾ|| ೬೮

ನೆಟ್ಟನೆ ನಿನ್ನ ನಂಬಿ| ಕೆಟ್ಟು ಹೋದೆನು ದೇವ|
ಬಟ್ಟಬಯಲಾಗಿ ನಿಂದೆನಲ್ಲಾ-ಶಂಕರನೆಂದ
ದಿಟವಿದು ನಿಮ್ಮ ಧರ್ಮ ನಿಮ ಧರ್ಮ|| ೬೯

ನಿಸ್ಸಂಗಿ ನಿರಾಭಾರಿ| ನಿಸ್ಸೀಮನು ನಿರ್ದೇಹಿ|
ಪ್ರಸನ್ನ ಪ್ರಭು ನಿರುಪಾಧಿಕ-ನಿರ್ಮಲ
ಅಸಮನ ಘನ ನೀವೆ ಬಲ್ಲಿರಿ|| ೭೦

ಪರಮ ಬಸವ ಒಂದು| ಮೂರು ಮಾಡಿಕೊಂಡನಯ್ಯ|
ಮೂರಾರು ಮಾಡಿಕೊಂಡ ಬಸವ-ಆರು ಮೂರು
ಮೂರಾರು ಒಂದು ಮಾಡಿಕೊಂಡನು|| ೭೧

ಸರ್ವಾವಧಾನಿ ಬಸವ| ಸರ್ವಸಂಗ ಪರಿತ್ಯಾಗಿ|
ಸರ್ವ ಕರಣಂಗಳ ವಿಮುಕ್ತನು-ನಮ್ಮ
ಸರ್ವ ಕಾರುಣ್ಯ ಪ್ರಸಾದಿ ಬಸವ|| ೭೨

ಸರ್ವಾಂಗಲಿಂಗಿ ಬಸವ| ಸರ್ವ ನಿರ್ವಾಣಿ ಬಸವ|
ಸರ್ವೇಶ ಬಸವನ ಮಹಿಮೆಯು-ಬಲ್ಲಂಥ
ಸರ್ವ ಪುರಾತನರಿಗೆ ಶರಣಾರ್ಥಿ|| ೭೩

ವರ ಪ್ರಭು ಮುಖ್ಯರಾದ| ಶರಣರಿಗೆ ಶರಣಾರ್ಥಿ|
ವರ ಶಬ್ದ ಮುಗ್ಧವಾದೆ ನಿಮ್ಮಯ-ಚರಣದಿ
ಉರಿಯುಂಡ ಕರ್ಪೂರದಂತೆಂದನು|| ೭೪

ಶರಣ ಬಸವಣ್ಣನ| ಪರಮ ಪ್ರಸಾದಕೊಂಡು|
ಹರ ಬಸವನ ಮುಂದೆ ಬಯಲಾಗಿ-ಹೋಗುವೆ
ವರ ಪ್ರಮಥರೆ ನಿಮ್ಮ ಧರ್ಮವಯ್ಯ|| ೭೫

ನಿರುವಯಲಾಗಲು| ಗುರು ಚೆನ್ನಬಸವನು|
ಮರುಳಶಂಕರ ದೇವರ-ಮಹಿಮೆಗೆ
ಶಿರಬಾಗಿ ನಮೋ ನಮೋ ಎಂದನು|| ೭೬

ಮಾಡದ ಭಕ್ತಿ ಮಾಡಿ| ನೋಡದ ನೋಟವ ನೋಡಿ|
ಕೂಡದ ಕೂಟವನೆ ಕೂಡಿ–ಸ್ತುತಿಪರ
ಪಾಡಿಗೆ ಸಿಲುಕದೆ ಬಯಲಾದನು|| ೭೭

ಮುಟ್ಟುವರಿಗೆ ಆತ| ಮುಟ್ಟ ಬಾರದೆ ಹೋದನು|
ಬಟ್ಟ ಬಯಲಾಗಿ ಹೋದ ಮಹಾತ್ಮಗೆ–ಮನ
ಮುಟ್ಟಿ ನಮೋ ಎಂದ ಚೆನ್ನಬಸವ|| ೭೮

ಮರುಳಶಂಕರದೇವ| ನಿರವಯಲಾದಾಗ|
ವರ ಚೆನ್ನಬಸವ ನುತಿಸಲು–ಆಗ
ಗುರು ಪ್ರಭು ಬಸವನಿಗಿಂತೆಂದ|| ೭೯

ಕಾಮನ ಕಣ್ಣಮುಳ್ಳ ಕಿತ್ತಿ| ಭೂಮಿ ತೈಲದ ಸೀಮೆ ಕೆಡಸಿ|
ಹೋಮ ನುರುಹಿದ ದಕ್ಷನ–ತಲೆನರಿದ ನಿ–
ಸ್ಸೀಮ ಶರಣನ ನಿಲವ ನೋಡಾ|| ೮೦

ಅರುವಿಂಗೆ ಅಸಾಧ್ಯರು| ವರ ಉಪಮೆಗೆ ಮುಟ್ಟರು|
ಶರಣರ ಇರಹು ಎಂತಹದು–ನೋಡಾ
ವರ ಭಕ್ತಿ ಸಂಪನ್ನ ಬಸವಣ್ಣ|| ೮೧

ನೋಡಾ ಪ್ರಭುದೇವನೆ| ಒಡೆಯ ಮರುಳಶಂಕರ|
ಕೂಡದ ಕೂಟವ ಕೂಡಿದ್ದು–ಶರಣನು
ಜಡಕಾಯ ನಿರವಯ ಮಾಡಿದ್ದೆಂತು|| ೮೨

ಲಿಂಗಾರ್ಪಿತವಾದ ಸುಖವು| ಲಿಂಗದಿ ಲೀಯವೆಂತು|
ಅಂಗವ ಲಿಂಗದಿ ನಿಕ್ಷೇಪಿಸಿದೆ–ಎಂಬುದರ
ಇಂಗಿತ ಹೇಳಾ ಪ್ರಭುದೇವಾ|| ೮೩

ಶರಣರ ಪ್ರಾಣವ| ವರ ಲಿಂಗದಲ್ಲಿ ಸವಿಸಿ|
ನಿರವಯವಾಗ ಬಹುದಲ್ಲದೆ–ಕರ್ಮಕಾಯ
ಧರಿಸಿ ಸವಿಸಿ ಸಯವಪ್ಪುದೆಂತು|| ೮೪

ಅಯ್ಯಾ ನಿಮ್ಮ ಶರಣರು| ಕಾಯ ಹಿಡಿದು ಮತ್ತೆ|
ಮಾಯ ರಹಿತರಾದ ಪರಿಯ ಹೇಳಾ–ಪ್ರಭೊ
ದಯಾಮಯನೆ ನಿಮ್ಮ ಧರ್ಮವಯ್ಯ|| ೮೫

ಕರ್ಮಕಾಯನು ಅಲ್ಲ। ಬ್ರಹ್ಮ ಮೂರುತಿಯಲ್ಲ।
ಬೊಮ್ಮನ ನುಡಿವಲ್ಲಿ ತಾನಿಲ್ಲ-ಶರಣನು
ನಿರ್ವೋಢಿ ಮರುಳಶಂಕರ॥ ೮೬

ಮಾತಾಪಿತರುದರದ। ಜಾತ ಜನಿತನು ಅಲ್ಲ।
ಶ್ವೇತ ಪೀತ ಕಪೋತಷಡ್ವರ್ಣ-ರಹಿತ
ಹೊತ್ತ ನವಮಾಸದ ಕೂಸಲ್ಲ॥ ೮೭

ಅವಿರಳ ಲಿಂಗದ। ತವೆ ಕಳೆಯ ಬೆಳಗು ತಾ।
ಭವದ ಕುಳವನ್ನು ಗೆಲಿದಾತ-ನಿರ್ಭ್ರಾಂತ
ಸವೆಯದ ಕೈವಲ್ಯ ಪಡೆದಾತ॥ ೮೮

ನಡೆಯ ಕಲಿವಲ್ಲಿ। ನೋಡಿಳೆಯ ಹಂಗಿಗನಲ್ಲ।
ನುಡಿಯ ಸಡಗರದ ಬಿಂದು ಅಲ್ಲ-ಪದುಮ
ಎಡೆ ಪರಿಮಳಕ್ಕೆರಗುವ ಭ್ರಮರನಲ್ಲ॥ ೮೯

ಜಾಗ್ರ ಸ್ವಪ್ನ ಸುಷುಪ್ತಿ-। ಯಾಗು ಅನುಮಿಷನು।
ಆಗಮ ಕುಳದ ಭೋಗಿಯಲ್ಲ-ಶರಣ
ಮಿಗೆ ಮೀರಿದ ಸಹಜ ಶಿವಯೋಗಿ॥ ೯೦

ತೇಜ ಸರಂಜನೆಯ। ಅಜಗಣಿತ ಗುಣಿತನಲ್ಲ।
ಸಜ ನಿತ್ಯನು ಅಭೇದ್ಯನು-ಶಿವಶರಣ
ನಿಜತತ್ವನೊಳಗೊಂಡ ಮಹಂತನು॥ ೯೧

ಬಿಂದು ಕಳೆಯ ಸುಖದ। ಅಂದ ಶಯನ ಸಂಪರ್ಕಿಯಲ್ಲ।
ಒಂದು ಚೆಂದದಲಿ ಕಂದಮೂಲವ-ಗೆಲಿದು ತಾ
ಸಂದಳಿದ ಸ್ವಯುಸುಖನೊಂದು ಮಾಡಿದ॥ ೯೨

ಮೂರರ ಬಂಧ ಭೇದವ। ಪರಿಹರಿಪ ನಿಷ್ಕಾಮಿ।
ಶರಣ ಮರುಳಶಂಕರದೇವನ-ನಿಲವ
ಅರಿಯಿರಿ ಅಸಂಖ್ಯಾತರೆ ನೀವು॥ ೯೩

ಚಂದ್ರಧರನು ಅಲ್ಲ। ಚಂದ್ರಪೂರಿತನಲ್ಲ।
ಇಂದ್ರಚಾಪದ ಪ್ರಭಾವಿಯಲ್ಲ-ಶರಣ
ಕೇಂದ್ರಿತ ಕಾರುಣ್ಯ ಸಿಂಧುವಾತ॥ ೯೪

ಭೃಂಗ ನುಂಗಿದ ರುಚಿಯು । ಪಿಂಗದೆ ಒಂದು ಮಾಡಿ ।
ಲಿಂಗದ ಹಂಗು ಅಳಿದಾತ-ಮಹಾಶರಣ
ಲಿಂಗ ಪ್ರಸಾದಿ ಶಂಕರದೇವನು ॥ ೯೫

ನಿಮ್ಮ ಶರಣರು ಅನು- । ಪಮ ಸುಖಿಗಳಯ್ಯಾ ।
ನಿಮ್ಮ ಶರಣರು ಕಾಯವೆಂಬ-ಕರ್ಮಕ್ಕೆ
ನಿರ್ಮಲಗೊಳಿಸಿದ ನಿಷ್ಕಾಮಿಯು ॥ ೯೬

ಮನದಲ್ಲಿ ನಿರ್ಲೇಪ । ಜ್ಞಾನಿಗಳು ನಿಮ್ಮವರು ।
ಘನವೆನಗೆ ಹೇಳಲು ಬಾರದು-ಪ್ರಭುವೆ
ಮನವಾರೆ ನಮೋ ನಮೋ ಎನ್ನುವೆ ॥ ೯೭

ಶರಣರ ನಿಲವನು । ಮೂರು ಲೋಕಂಗಳಲ್ಲಿ ।
ಅರಿತವರಾರು ಇಲ್ಲವಯ್ಯ-ಮಹಿಮರು
ಪರಮ ಅಘಟಿತ ಘಟಿತರು ॥ ೯೮

ನಿಜದಲ್ಲಿ ನಿರ್ಲೇಪ । ರಾಜಿಪರು ಭಾವಿಕರು ।
ಅಜಾತ ಅಖಂಡಿತ ಮಹಂತರ-ನಿಲವ
ಸಜ ಅರಿಯಲು ಶಕ್ತನಲ್ಲ ॥ ೯೯

ಸಂಧಿ ೩೩

ಪಿಂ ಪರಿಯಿಂದ ಪ್ರಭು। ವರ ಬಸವರಾಜನು।
ಮರುಳಶಂಕರನ ನುತಿಸಿದರು–ಆಗ
ಪರಮುನಿಗೆ ಸ್ತುತಿಸಿದ ಚೆನ್ನಣ್ಣ॥ ೧

ಕಾಯವಳಿದರೇನು। ಕಾಯವುಳಿದರೇನು।
ಕಾಯ ಬಯಲಾದರೇನಯ್ಯ–ಮನಮನ
ಲಯವಾಗಿ ಮುಗ್ಧವಾಗಬೇಕು॥ ೨

ಘನಕ್ಕೆ ಘನವಾದ। ಸನ್ನುತ ಶರಣರ ಕಂಡರೆ।
ಏನು ನುಡಿಯದೆ ಮುಗ್ಧಾಗಿ–ಚೋದ್ಯಕ್ಕೆ
ಇನ್ನೇನು ಕಾರಣ ಸಂಗನಬಸವ॥ ೩

ಆದಿಯಲ್ಲಿ ಹುಟ್ಟಿ ಅ-। ನಾದಿಯಲ್ಲಿ ಬೆಳೆದು।
ಅದು ನಿಂದ ಮೂರ್ತಿ ಅಲ್ಲವಯ್ಯ–ಅಮೂರ್ತಿ
ಆದವನಲ್ಲ ಭಾವಿಕನು ಅಲ್ಲ॥ ೪

ಅರುವಿನೊಳಗೆ ಅದು । ಅರಿದುದಲ್ಲ ಬಸವ।
ಮರವಿನೊಳಗೆ ಮರೆದುದಲ್ಲ-ಎಂಬಂತೆ
ಪರಮ ಬ್ರಹ್ಮದ ನಿಲವ ನೋಡಯ್ಯ॥ ೫

ಮನ ಮನಲೀಯವಾಗಿ। ಘನ ಘನ ಒಂದಾಗಲು।
ಮನಕ್ಕೆ ವಿಸ್ಮಯ ಮಾಡಲುಂಟೆ-ಬಸವ
ಮೌನ ತಾಳುವದೆ ಲೇಸವಯ್ಯ॥ ೬

ಕಾಯವೆಂಬ ಕಂಥೆಯ । ಅಯ್ಯ ಶರಣನು ಕಳೆಯದೆ।
ಬಯಲಾದರೆ ತಾನು ನಿಜವೆಂದು-ಪರಿಣಮಿಸಿ
ಬಾಯಿಂದ ಅಂತಿಂತೆನಲುಂಟೆ॥ ೭

ಮರುಳಶಂಕರದೇವ। ನಿರವಯಲಾಗಲು।
ವರ ಅಲ್ಲಮ ಚೆನ್ನಬಸವಣ್ಣ-ಬಸವ
ಶರಣೆಂದರು ಸಿದ್ಧರಾಮಯ್ಯ॥ ೮

ಮಡಿವಾಳ ಮಾಚಯ್ಯ। ಹಡಪದ ಅಪ್ಪಣ್ಣ।
ಸೊಡ್ಡಳ ಬಾಚರಸ ಕಿನ್ನರಯ್ಯ-ಪ್ರಮಥರು
ಅಡಿಗಳಿಗೆ ಶರಣೆಂದರು ಶಂಕರನ॥ ೯

ಪುರಾತನರನು ಕಂಡು। ವರ ಬಸವದೇವನ।
ಅರಳಿತ್ತು ಹೃದಯಕಮಲ-ಶರಣರ
ಇರುವಿಂಗೆ ಶರಣೆಂದು ನುಡಿದನು॥ ೧೦

ಶರಣರ ಬರುವೆನಗೆ। ಪರಮ ಹರುಷವಯ್ಯ।
ಕಿರಿ ಸಸಿಯ ಮೇಲೆ ಸಾಗರವ-ಹಾಯ್ದಂತೆ
ಚರಮೂರ್ತಿ ದರ್ಶನದಿ ಎನಗಾಯ್ತು॥ ೧೧

ಒಲಿದು ಬಂದರೆ ಶರಣರು। ನಲಿದಾಡಿ ಕುಣಿಯುವೆ।
ಬಲು ಉಬ್ಬಿ ಕೊಬ್ಬಿ ನಲಿಯುವೆ-ಶರಣರ
ಒಲುಮೆ ಕಡೆತನ ಇರಲಯ್ಯ॥ ೧೨

ಶರಣರ ಸಂಗಸುಖ। ಶರಣರ ಸಮಗೋಷ್ಠಿ।
ಯಾರು ಉಪಮಿಸಲಾಗದು-ಪ್ರಮಥರು
ನೆರೆದಿಹರು ಅಗಲದಂತಿರಿಸಯ್ಯ॥ ೧೩

ತನು ಶುದ್ಧವಾಯಿತು। ಮನ ಶುದ್ಧವಾಯಿತು।
ಧನ ಶುದ್ಧವಾಯಿತು ಶರಣರ-ಸಂಗದಿ
ಎನ್ನ ಸರ್ವಾಂಗ ಶುದ್ಧವಯ್ಯ॥ ೧೪

ನಿನ್ನ ಶರಣ ಪ್ರಭುವಿನ। ಘನ ಕೃಪೆಯಿಂದಲೆ।
ಎನಗೊದಗಿದ ಭಾಗ್ಯ ಉಪಮಿಸೆ-ದೇವ
ತಾನಾಗಿ ಬಂದಿಹರು ಇವರೀರ್ವರು॥ ೧೫

ಗುರು ಅಲ್ಲಮಪ್ರಭುವಿಗೆ। ವರ ಸಿದ್ಧರಾಮಯ್ಯ।
ಪರಮ ಹರುಷದಿಂದ ನುಡಿದನು-ಪ್ರಭೊ
ಪುರಾತರ ಕಂಡು ಪುನೀತವಯ್ಯ॥ ೧೬

ಕರದಿಷ್ಟಲಿಂಗದ। ವರ ನಿಜವನು ಎನಗೆ।
ಅರುಹಿಸುವೆ ಬಸವನಿಂದೆಂದು-ಹೇಳಿನಗೆ
ಕರೆದು ತಂದಿರುವೆ ಕಲ್ಯಾಣಕೆ॥ ೧೭

ಕಾಯ ಲಿಂಗವೊ ಪ್ರಭು। ಕಾಯದಲ್ಲಿ ಸಾರಿಪ್ಪ।
ಅಯ್ಯ ಲಿಂಗವದು ಲಿಂಗವೊ-ಹೇಳಾ
ಮಾಯಾ ಕೋಲಾಹಲ ಪ್ರಭುವೆ॥ ೧೮

ಪ್ರಾಣಲಿಂಗವೊ ದೇವ। ಪ್ರಾಣದಲ್ಲಿ ಸಾರಿಪ್ಪ-।
ಘನಲಿಂಗ ಲಿಂಗವೊ ಹೇಳಯ್ಯ-ಜ್ಞಾನಲಿಂಗ
ಜ್ಞಾನದ ಮೊನೆಯಲ್ಲಿ ಬೆಳಗುವ ಲಿಂಗವೊ॥ ೧೯

ಲಿಂಗ ಪ್ರಾಣ, ಪ್ರಾಣ ಲಿಂಗ। ಹೆಂಗೆಂತೆಂದರಿಯೆನು।
ಜಂಗಮನೆ ಕಾಯದ ಕರಸ್ಥಲವ-ಸಾರಿದ
ಲಿಂಗಪ್ರಾಣದೊಳು ವೇದ್ಯವೆಂತು॥ ೨೦

ಸಿದ್ಧರಾಮ ನುಡಿಯಲು ಪ್ರ-। ಸಿದ್ಧ ಪ್ರಭು ಎಂದನು।
ಶುದ್ಧಾತ್ಮ ಬಸವಣ್ಣ ಹೇಳಯ್ಯ-ಸಿದ್ಧೇಶಂಗೆ
ಇದ್ದು ಭವ ಗೆದ್ದವರ ಪರಿ ಏನು॥ ೨೧

ಒಂದು ಇಲ್ಲದ ಬಿಂದುವ। ತಂದೆ ಇಲ್ಲದ ಕಂದನ।
ಬಂದದ್ದು ಜನಿಸಿ ಇಲ್ಲದ ನಿರ್ಗಮನ-ಗಮ್ಯನ
ಅಂದು ಮೂವರರಿಯದ ಠಾವ ತೋರಾ॥ ೨೨

ಅಂಗದ ಮೇಲೆ ಇಷ್ಟ- | ಲಿಂಗವಿಲ್ಲದ ಕಂಡು |
ಜಂಗಮ ಪ್ರೇಮಿ ಬಸವಣ್ಣ-ಇಂತೆಂದ
ಸಂಗಮನೆ ಏನೆನ್ನದೆ ನಮೋ ಎಂಬೆ || ೨೩

ಕಾಯದ ಕರಸ್ಥಲದಿ | ಜೀಯ ಅಲ್ಲಮನ ಕಂಡೆ |
ಅಯ್ಯ ಎನ್ನ ಮನದ ಕರಸ್ಥಲದಿ-ಕಂಡೆನು
ರಾಯ ಚೆನ್ನಬಸವ ದೇವನ || ೨೪

ಅರುವಿನ ಕರಸ್ಥಲದಿ | ವರ ಮಡಿವಾಳನ ಕಂಡೆ |
ತೋರದು ಒಳಹೊರಗು ಹೊರಒಳಗೆ-ಯಾವುದು
ಅರಿಯದೆ ಇರುವೆ ಭೇದವನು || ೨೫

ನಿಮ್ಮ ಶರಣರು ಬಂದು | ಒಮ್ಮನದಿ ಪಾವನಗೈಯ್ಯಲು- |
ಪಮಿಸಬಾರದೆ ಅವರಡಿಗೆ-ಶರಣರೆ ನಾ
ನಮೊ ನಮೋ ಎನುತಿರ್ದೆ ಸಕಲಕ್ಕೆ || ೨೬

ನಾನು ವಿರುದ್ಧಕ್ಕಂಜಿ | ವಿನಯದಿ ನುಡಿಯುವೆ |
ನೀನು ಕೊಂದರೆ ಕೊಲ್ಲು ಕಾಯ್ದರೆ-ಕಾಯೊ
ಎನ್ನವರೆಂದು ಮನ ಹಿಡಿಯದು || ೨೭

ಬಸವನ ನುಡಿ ಕೇಳಿ | ನಸು ನಗುತ ಸಿದ್ಧರಾಮ |
ವಸುಧೀಶ ಅಲ್ಲಮಗೆ ಇಂತೆಂದ-ಮಡಿವಾಳ
ಅಸಮ ಶರಣನ ಕಂಡು ಮುಗ್ಧಾದೆ || ೨೮

ಬೆಳಗು ಬೆಳಗು ತಾ | ಹಳಚುವಲ್ಲಿ ಕತ್ತಲೆ |
ಉಳಿಯ ಬಹುದೆ ಹೇ ಪ್ರಭೊ-ಶರಣರು
ಮೇಳೈಸಿದ ಮನೆಯಲ್ಲಿ ಅಜ್ಞಾನವೆ || ೨೯

ಶರಣರ ಅನುಭಾವ | ವರ ಗೋಷ್ಠಿ ನಡೆವಲ್ಲಿ |
ಪರಮ ಸಂಗದಲ್ಲಿ ಇದ್ದವರ-ಅಜ್ಞಾನ
ಕರಿಗೊಂಡು ನಿಜವ ಪಡೆವರು || ೩೦

ಅನುಭಾವದ ಸೋಂಕಿನ | ಘನ ಸೆರಗಿನೊಳಗಿದ್ದು |
ಆನು ಸುಖಿಯಾಗಿ ಮಡಿವಾಳನ-ಪಾದದಿ
ಮನಮಗ್ನನಾದೆನು ಪ್ರಭುದೇವ || ೩೧

ಅಂಗದ ಮೇಲೆ ಇಷ್ಟ-। ಲಿಂಗವಿಲ್ಲದೆ ಸಿದ್ಧರಾಮ ।
ಹೇಗಾದಿತು ಪ್ರಾಣದಿ ಲಿಂಗದ-ಪರಿಣಾಮ
ಇಂಗಿತ ಹೇಳೆಂದ ಚೆನ್ನಬಸವ ॥ ೩೨

ಲಿಂಗತ್ರಯವುಳ್ಳವರು। ಲಿಂಗತ್ರಯದಿ ತಾನು।
ಹಿಂಗದೆ ಸಂಪನ್ನರಾಗುವದು-ಸಿದ್ಧರಾಮ ಒಂ-
ದಂಗ ವಿರಹಿತನಿರುವರೇನು॥ ೩೩

ಕಂಗಳ ನೋಟಕ್ಕದು। ಪಿಂಗದೆ ಇಂಬಾವುದು।
ಅಂಗ ಒಂದು ಬಿಟ್ಟು ಒಂದಂಗವ-ತೋರದು
ಲಿಂಗಾಂಗಿ ಮಡಿವಾಳಗೆಂತು ಬಲ್ಲೆ ॥ ೩೪

ತನುವುಂಟೆಂಬ ಭಾವ। ಮದದಲ್ಲಿ ಇಲ್ಲವಯ।
ಮನವಿದೆಂಬುದಿಲ್ಲ ಅರುವಿನಲಿ-ಚೆನ್ನಣ್ಣ
ನಾನರಿತೆಂಬುದಿಲ್ಲ ನುಡಿಯೊಳಗೆ॥ ೩೫

ತನು ಮನ ಜ್ಞಾನಗಳು। ಮುನ್ನೊಂದೆ ತಾನಾಗಲು।
ತಾನು ಆವ ತನುವಿನ ಮೇಲೆ-ಸ್ವಾಯತ
ಚೆನ್ನಬಸವಣ್ಣನೆ ಮಾಡವನು॥ ೩೬

ಎನ್ನ ಕಾಯ ಬಸವಣ್ಣ। ಎನ್ನ ಪ್ರಾಣ ಪ್ರಭುದೇವ ।
ಚೆನ್ನಿಗನಲ್ಲಿ ಒಳಹೊರಗೆ-ಎಂಬುದಿಲ್ಲ
ಎನ್ನ ಕಪಿಲಸಿದ್ಧಮಲ್ಲಿನಾಥಾ॥ ೩೭

ಅಂಗವಿಲ್ಲೆಂಬಲ್ಲಿಯೆ। ಅಂಗ ಸಂಶಯ ಬಿಡದು।
ಲಿಂಗವುಂಟೆಂಬಲ್ಲಿ ಲಿಂಗ ಶಂಕೆಯು-ಬಿಡದು
ಅಂಗ ಲಿಂಗ ಸಂಬಂಧ ಅರಿಯಯ್ಯ॥ ೩೮

ಇಲ್ಲವೆಂಬುವದಕ್ಕೆ। ಸಲೆ ಉಂಟೆಂಬುದೆ ಮರವು।
ಎಲ್ಲ ಉಂಟೆಂಬುದಕ್ಕೆ ಇಲ್ಲೆಂಬುದೆ-ಮರವು
ಇಲ ಉಂಟೆಂಬುದು ಅಳಿದುಳಿಯಲಿ ೩೯

ಪ್ರಾಣಲಿಂಗ ಸಂಬಂಧ। ಘನ ಸ್ವಯವಾಗಲು।
ಎನ್ನ ದೇವನಲ್ಲಿ ನಿನಗೆ-ಎಲ್ಲಿಯದು
ಪ್ರಾಣಲಿಂಗ ಸಂಬಂಧ ಸಿದ್ಧರಾಮ॥ ೪೦

ತನುವಿದ್ದು ತನುವಿಲ್ಲ। ಮನವಿದ್ದು ಮನವಿಲ್ಲ।
ತನ್ನಲ್ಲಿ ಭಾವವಿದ್ದು ಭಾವವೆಂಬ-ಬುದ್ಧಿಯಿಲ್ಲ
ಚೆನ್ನಬಸವ ಹೇಳಲರಿಯೆನು॥ ೪೧

ನೀನೆಂಬುದುವುಂಟಾಗಿ। ನಾನರಿಯೆ ಭೃತ್ಯಾಚಾರ।
ನಾನೆಂಬುದುಂಟಾಗಿ ನಿರಹಂಕಾರ-ನುಡಿಲಾರೆ ದೇ-
ವನಲ್ಲಿ ಲಿಂಗಸಂಗ ನಿರ್ಲೇಪ॥ ೪೨

ಕರೆ ತಂದ ಸಿದ್ಧರಾಮುಗೆ। ವರ ಚೆನ್ನಬಸವಣ್ಣನು।
ಒರೆದೊರೆದು ನೋಡುತ್ತಿರುವಾಗ-ಪ್ರಭು
ನಿರುಪಿಸಿದನು ಚೆನ್ನಬಸವನಿಗೆ॥ ೪೩

ಹರನರಿವ ಶರಣಂಗೆ। ಹರ ಪೂಜೆಯ ತೊಡಕೇಕೊ।
ಒರಸೀದ ಕೂಟಕ್ಕೆ ಹಾಸಿನ ಹಂಗೇ-ಬೇಟದ
ಮರುಳಿಂಗೆ ಲಜ್ಜೆಯು ಮುನ್ನೇಕೊ॥ ೪೪

ಒರೆಗ್ಹಚ್ಚಿದ ಚಿನ್ನಕ್ಕೆ। ಒರೆಗಲ್ಲಿನ ಹಂಗೇಕೊ।
ಪರನೆ ಪ್ರಾಣವಾಗಿಪ್ಪ ಯೋಗಿ-ಸಿದ್ಧರಾಮುಗೆ
ಕುರುಹು ಮುನ್ನೇಕೋ ಚೆನ್ನಣ್ಣ॥ ೪೫

ಗಗನ ಏರುವಾತಗೆ। ಹಂಗೇಕೊ ಅಟ್ಟಗೋಲಿನ।
ಸಾಗರ ದಾಟುವಗೆ ಹರಿಗೋಲಿನ-ಹಂಗೇಕೊ
ಸಂಗರಹಿತ ನಿಸ್ಸೀಮುಗೆ ಲಿಂಗೇಕೊ॥ ೪೬

ಸೀಮೆಯ ಮೀರಿದ। ನಿಸ್ಸೀಮ ಸಿದ್ಧರಾಮುಗೆ।
ಸೀಮೆ ಎಂಬುದು ಹಂಗೇಕೊ-ಲಿಂಗದಿ ನಿ-
ಸ್ಸೀಮುಗೆ ಲಿಂಗವೆನ್ನುವೆ ಚೆನ್ನಣ್ಣ॥ ೪೭

ಮೇಲಾಡುವ ಪಟಕ್ಕೆ। ಮೂಲಸೂತ್ರವು ಬೇಕು।
ಕಲಿಯಾಡಲು ಕಜ್ಜವೆ ಬೇಕಯ್ಯ-ಪ್ರಭೊ
ನೆಲ ಇಲ್ಲದೆ ಬಂಡಿ ನಡೆವುದೆ॥ ೪೮

ಅಂಗಕ್ಕೆ ಇಷ್ಟಲಿಂಗದ। ಸಂಗವಿಲ್ಲದಿರೆ ನಿಜ ನಿ-।
ಸ್ಸಂಗವಾಗಬಾರದು ನೋಡ ದೇವ
ಸಂಗವಿಲ್ಲದೆ ನಿಸ್ಸಂಗ ಎಂತೊ॥ ೪೯

Cl.No. Q23 33N65
Acc.NO. 199.

ಪಟವು ಆಕಾಶದಿ। ಆಟವನಾಡಿದರೆ।
ಪಟಸೂತ್ರವು ನೆಲದ ಮೇಲೆ-ಇಪ್ಪುದು
ಪಟವನಾಡಿಸುವನ ಕರದೊಳಗೆ॥ ೫೦

ವ್ಯೋಮದಲ್ಲಿ ಚರಿಪ। ಸೋಮ ಸೂರ್ಯರಿಗೆ।
ಹೇಮಗಿರಿ ಸಂಬಂಧ ತಪ್ಪದು-ಈ ಸಿದ್ಧ-
ರಾಮನ ಮಾತಂತಿರಲಯ್ಯ॥ ೫೧

ಭೂಮಿಯನೊಲ್ಲದೆ। ವ್ಯೋಮಕ್ಕೆ ಹಾರಿದರೆ।
ವ್ಯೋಮದಿ ನಿಲ್ಲಲು ಎಡೆಯುಂಟೆ-ಈ ನೆಲದ
ಈ ಮನೆ ಸೀಮೆಗಳ ಮೀರಿದನೆ॥ ೫೨

ಚೆನ್ನಬಸವನೆ ಕೇಳೊ। ತನುವೆ ಸಕಲ।
ಪ್ರಾಣವೆ ಸಕಲ ನಿಃಕಲ-ಭಾವವು
ಭಿನ್ನನಿರಾಲಂಬ ನಿಃಕಲಲಿಂಗ॥ ೫೩

ಆಯತವೆಂದಿಲ್ಲ। ಸ್ವಾಯತವೂ ಇಲ್ಲ।
ಕಾಯಕೆ ಸನ್ನಿಹಿತವೆಂಬುದು-ಬೇರಿಲ್ಲ
ಕಾಯವ ಗೆಲೆಯೊ ಚೆನ್ನಣ್ಣ॥ ೫೪

ಶಿವಶಕ್ತಿ ಸಂಬಂಧ। ಭವದೇಹ ದೇಹಿಗಳು।
ಶಿವಲಿಂಗ ಕುರುಹಿಡಿದು ಏಕೆ-ಅರಿಯವುದು
ಭವಹರನ ನಿರ್ವಯಲ ನಿಜರೂಪ॥ ೫೫

ಆಚಾರಂಗದ ಮೇಲೆ। ಶುಚಿ ಆಯತ ಇಷ್ಟಲಿಂಗ।
ತೋಚಿದನು ವರ ಇಷ್ಟಲಿಂಗ–ಗುರು ಮರೆ-
ಮಾಚದೆ ಪ್ರಾಣಲಿಂಗ ಸ್ವಾಯತ॥ ೫೬

ಪ್ರಾಣಲಿಂಗವುದಿಸದೆ। ಕಾಣದು ಇಷ್ಟಲಿಂಗ।
ತಾಣದ ಭೇದವನು ಭೇದಿಸ-ಬಲ್ಲರೆ
ಮಾಣದೆ ಲಿಂಗೈಕ್ಯವಹುದು॥ ೫೭

ತುಪ್ಪ ತಿಳಿಯಾದರೇನು। ತುಪ್ಪ ಗಟ್ಟಿಗೊಂಡರೆ।
ಅಪ್ಪ ಪ್ರಭುವೆ ಅಲ್ಲಿ ಭೇದುಂಟೆ-ಹೇಳಾ
ದೀಪ್ತಿ ದೀಪವು ಬೇರುಂಟೆ॥ ೫೮

ಸಂದುಂಟೆ ಆತ್ಮಕ್ಕೆ। ಸಂದುಂಟೆ ಕಾಯಕ್ಕೆ।
ಭೇದುಂಟೆ ಹಾಲಿಗೆ ಸ್ವಾದಕ್ಕೆ-ಅಭೇದ್ಯ
ಒಂದೆ ಸಾಕಾರವೆ ನಿರಾಕಾರ॥ ೫೯

ಅಂಗಲಿಂಗ ನೇಹದ। ಹಂಗ ಇಲ್ಲದವರ।
ಸಂಗಭಂಗವೆಂದು ಶರಣರು-ಮೆಚ್ಚರು
ಜಂಗಮ ಪ್ರಭುವೆ ಕೇಳಯ್ಯ॥ ೬೦

ಏಳುನೂರೆಪ್ಪತ್ತು। ಮೇಳಾದ ಶರಣರೊಳು।
ಮೋಳಿಗೆ ಮಾರಯ್ಯಗೆಂದನು-ಬಸವಣ್ಣ-
ನಳಿಯ ಚೆನ್ನಬಸವ ದೇವನು॥ ೬೧

ಮದುವೆಯಾಗದೆ ಹೇಗೆ। ಸುದತಿಯ ಸಂಗಸುಖ।
ಸದಮಲ ಸಂಲಗ್ನ ಸಮನಿಸದು-ಶರಣನ
ಎದೆಮೇಲೆ ಇಷ್ಟಲಿಂಗವೆ ಬೇಕು॥ ೬೨

ಕಣ್ಣು ಕಾಣಿತ್ತೆನಲು। ಕಾಣುವದೆ ಕತ್ತಲೆಯಲಿ।
ಮಿಣಗುವ ದೀಪವಾದರು ಬೇಕು-ಇಲ್ಲದಿರೆ
ಕಣ್ಣಿದ್ದು ಕುರುಡರಂತಾಗುವದು॥ ೬೩

ಬೆಳಗೂವ ಸೂರ್ಯನ। ಹೊಳೆವ ಪ್ರಕಾಶದಿ।
ಇಳೆಯೆಲ್ಲ ತೊಳಗಲು ಕಂಡೆನೆಂಬ-ಮಾತು
ಮಳೆಯೊಡನೆ ಬೆಳೆಯೆಂಬ ನುಡಿಯಂತೆ॥ ೬೪

ಅಂಗವಿಲ್ಲದ ಆತ್ಮ। ಸಂಗಿಸದ ಶಿವಶಕ್ತಿ।
ಹೆಂಗವಿಹುದದು ಹೇಳಯ್ಯ-ಮೂರು
ಅಂಗಲಿಂಗ ಸಂಬಂಧ ಅರಿ ಬೇಕು॥ ೬೫

ನೋಡಲಾಗದು ಮುಖ। ಮಾಡಲಾಗದು ಸಂಗ।
ಕೂಡಲಚೆನ್ನಸಂಗಮನಲ್ಲಿ-ಲಿಂಗದ
ಎಡೆಬಿಡದೆ ಸಂಬಂಧ ಆಗುವನಕ॥ ೬೬

ಅನುಭವಮಂಟಪದಿ। ಚೆನ್ನಬಸವದೇವನು।
ಅನುಮತಿ ಕೋರುತ ಶರಣರ-ನೋಡಲು
ಕನಲಿದನು ಮೋಳಿಗೆ ಮಾರಯ್ಯ॥ ೬೭

ಗರಳಿಲ್ಲ ಹಾವಿಂಗೆ। ನರರು ಅಂಜಲಹುದೆ।
ಬರಿಗೈಯ ಬಂಟಗೆ ಅಂಜುವರೆ-ಬರಿ
ಹಿರಿ ಮಾತಿನವ ಪ್ರಾಣಲಿಂಗಿಯೆ॥ ೬೮

ಎಲ್ಲ ಸ್ಥಾವರಕ್ಕೆ। ಮೂಲವದು ಪೃಥ್ವಿಯು।
ನಿಲ್ಲದೆ ಚಲಿಸುವ ನೀರಿನಿಂದೆ-ದಿಕ್ಕೆಲ್ಲ
ಪಲ್ಲವಿಸಿ ದಿಟ್ಟಿಗೆ ತೋರುವದು॥ ೬೯

ಇಷ್ಟದ ಪೂಜೆಯು। ದೃಷ್ಟ ತನ್ನೊಳಗಾಗಿ।
ದೃಷ್ಟಿ ನಿಶ್ಚಯವಾಗಲು ಶರಣನು-ಪಡೆವನು
ದೃಷ್ಟ ಪ್ರಾಣಲಿಂಗ ಸಂಬಂಧ॥ ೭೦

ತಿಲದ ಮರೆಯ ತೈಲ। ಸಲೆನರೆಯೆ ಕಾಣುವುದು।
ಫಲದ ಮರೆಯ ರಸರುಚಿ ಹಿಂಡೆ-ಮಾಧುರ್ಯ
ಮೆಲೆದು ಸವಿದ ಸವಿಯಂತಿಹುದು॥ ೭೧

ತೆರೆಯ ಮರೆಯ ರೂಪ। ತೆರೆ ತೆಗೆಯೆ ಕಾಂಬಂತೆ।
ಕರದಿಷ್ಟ ಮರೆಯ ದೃಷ್ಟ ಉಭಯ-ದೃಢದಿ
ಅರಿವುದು ಪ್ರಾಣ ಲಿಂಗದ ನೇಹ॥ ೭೨

ಕರಸ್ಥಲದ ಜ್ಯೋತಿಯು। ಕುರುವಿಟ್ಟೆರಕವದು।
ಸ್ಥಿರ ನೆಲೆಯ ತಿಳಿದರೆ ನನ್ನೀಯ-ಆನಂದ
ದೊರಕುವದು ಎಂದನು ದಾಸಿಮಯ್ಯ॥ ೭೩

ಹೊಲಬವ ತೋರದ। ಬಲ್ಲಹ ನಿಸ್ಸೀಮನ।
ಹೊಲಬನರಿದು ಕೂಡೆ ನೃಪನು-ಎನಲು
ಬಲ್ಲ ಮೆರೆಮಿಂಡದೇವ ಇಂತೆಂದನು॥ ೭೪

ಇರಿಯಲು ಮೊನೆಗಳ। ಕರದಲ್ಲಿ ಪಿಡಿಬೇಕು।
ಅರಿಯಲು ಮನ ಕುರುಹಿನಲಿ-ಶುದ್ಧೈಸಿ
ಸ್ಥಿರವಾಗಬೇಕು ಕ್ರಿಯಾನುಭಾವ॥ ೭೫

ಮೆರೆಮಿಂಡದೇವನ। ಹಿರಿಮಾತುಗಳ ಕೇಳಿ।
ಉರಿಲಿಂಗಪೆದ್ದಣ್ಣ ನುಡಿದನು-ಪ್ರಭೊ
ಶರಣರಿಗಿರಬೇಕು ಇಷ್ಟಲಿಂಗ॥ ೭೬

ಸಾಕಾರವ ಹಿಡಿದು। ಹರನ ಪೂಜಿಸಬೇಕು ನಿ-।
ರಾಕಾರ ನಂಬಲಾಗದು-ಶ್ರೀ ಗುರು
ಕರಸ್ಥಲಕೆ ಪ್ರಾಣಲಿಂಗವ ಕೊಡಲು॥ ೭೭

ಮುಂಚಣ್ಣರಾಯಸದ। ಸಂಚಿತ ಪ್ರಾರಬ್ಧ।
ಹಂಚಿಕೆ ಅಳಿದ ಶರಣನು-ಹೇಳಿದ
ಮುಂಚೆ ಅರಿತ ಶಿವಾನುಭಾವ॥ ೭೮

ಉಣ್ಣಲು ಬಂದಾತ। ಅಣ್ಣ!ನಾ ತರಲಿಲ್ಲ।
ಉಣ್ಣುವ ಬಾಯಿ ಮರೆತೆಂಬ-ಮೊರೆಯಿಟ್ಟ
ಸಣ್ಣ ಮಾತಿನಂತೆ ನಗೆಯಾಯಿತು॥ ೭೯

ಅರಿಕೆನರಿಯೆಂದು। ಕುರುಹನು ಕೊಟ್ಟರೆ।
ಕುರುಹು ಮರೆದು ಅರಿದೆನೆಂಬ-ಮಾತು
ತರವಲ್ಲ ಎಂದನು ಮುಂಚಣ್ಣ॥ ೮೦

ಡಕ್ಕೆಯ ಬೊಮ್ಮಣ್ಣ। ಗಕ್ಕನೆ ಅರುಹಿದನು।
ಚೊಕ್ಕಾದ ತನ್ನ ಶಿವಾನುಭಾವ-ಘನ
ಲೆಕ್ಕವಿಲ್ಲದ ಶರಣ ಸಮ್ಮುಖದಿ॥ ೮೧

ಮಾತು ವಿವೇಕದ। ಮತ್ತೆ ಕುರುವಿಡದಲೆ।
ನೀತಿ ಲಕ್ಷಣದ ನೆಲೆಸಿಗದು-ನೆಲಿಸದೆ
ಚಿತ್ತ ಪೂಜಿಸುವ ಗೊತ್ತಿನಲಿ॥ ೮೨

ಘನವಸ್ತು ಲಕ್ಷಿಸದೆ। ಕಾಣದದು ಲಕ್ಷಣ।
ಕಾಣುವನಕ ಉಭಯದಾಚರಣೆ-ಬೇಕು
ತಾನುಳ್ಳನ್ನಕ್ಕರ ಲಿಂಗಪೂಜೆ॥ ೮೩

ಅಮುಗಿದೇವಯ್ಯನ। ಸುಮನಸದನುಭಾವವು।
ಸಮನಾಗಿ ಕ್ರಿಜ್ಞಾನ ಬೆರಿಬೇಕು-ಎಂದು
ಸಮ್ಮತಿ ಇತ್ತನು ಶರಣಗಣಕೆ॥ ೮೪

ಜ್ಞಾನವಂದಿರಲೇನು। ಘನ ಕ್ರಿಯೆಇಲ್ಲದಲೆ।
ನೆನೆದ ಮಾತ್ರಕ್ಕೆ ಕಾರ್ಯವು-ಆಗುವನೆ
ಅನೋನ್ಯ ಕ್ರಿಯೆ ಆಚರಿಸದೆ॥ ೮೫

ಕಾಣಿಸದೆ ನಡೆಯನು। ಕಣ್ಣಿಲ್ಲದ ಕುರುಡನು।
ಕಣ್ಣಿದ್ದು ಹೇಳವನು ನಡೆಯನು-ನಡೆಯಲು
ಕಣ್ಣು ಕಾಲೆರಡು ಇರಬೇಕು॥ ೮೬

ಜ್ಞಾನವಿಲ್ಲದ ಕ್ರಿಯೆ। ಮುನ್ನತಾ ಜಡವದು।
ಏನು ಕ್ರೀಯಿಲ್ಲದ ಜ್ಞಾನವು-ಭ್ರಾಂತು
ಜ್ಞಾನ ಕ್ರೀಗಳೆರಡು ಬೇಕಯ್ಯಾ॥ ೮೭

ಶಿವನಾಗಮುಯ್ಯನು। ಅವಿರಳ ಶಿವತತ್ವ।
ಶಿವಶರಣರ ಮುಂದೆ ಅರುಹಿದನು-ದಿವ್ಯ
ಶಿವಜೀವ ಸಂಯೋಗ ಸಂಚವನು॥ ೮೮

ಅಂಗದ ಮೇಲಿಷ್ಟ। ಲಿಂಗವಿದ್ದ ಬಳಿಕ।
ಲಿಂಗವಿಲ್ಲದವರ ಬೆರೆಸಲು-ಆಗದು
ಲಿಂಗಾಂಗ ಸಕೀಲನರಿಯದೆ॥ ೮೯

ಅಂಗದ ಮೇಲಿಷ್ಟ-। ಲಿಂಗವಿದ್ದ ಬಳಿಕ।
ಲಿಂಗದ ಸಂಚದ ಕ್ರೀಗಳನು-ಆಚರಿಸು
ಅಂಗದಿಚ್ಛೆಗೆ ಮನ ನೀಡದಲೆ॥ ೯೦

ಲಿಂಗ ಸಂಬಂಧಿಯು। ಅಂಗದಿಚ್ಛೆಯಲ್ಲಿ।
ಲಿಂಗವನರಿಯದೆ ನಡೆದರೆ-ಸಲ್ಲದು
ಲಿಂಗಕ್ಕೆ ತಾನು ಬಲು ದೂರ॥ ೯೧

ತೆಲುಗ ಬೊಮ್ಮಣ್ಣನು। ಸುಲಭ ರೀತಿಯಲ್ಲಿ।
ಚಲ್ಲವರಿದನು ಅನುಭಾವವ-ಲಿಂಗದ
ಮೂಲ ಗುರು ಕರುಣೆ ಇಂತೆಂದು॥ ೯೨

ಗುರುವಿನ ಕರುಣೆಯ। ವರ ಚಿಹ್ನ ಆವುದೆನೆ।
ಶರಣನಂಗದ ಮೇಲೆ ಲಿಂಗವು-ಸ್ವಾಯತ
ಸ್ಥಿರವಾಗಿ ಇರಬೇಕು ಮರೆಯದೆ॥ ೯೩

ಅಂಗದ ಮೇಲಿಷ್ಟ-। ಲಿಂಗ ಸ್ವಾಯತವಿರದೆ।
ಲಿಂಗ ಹೀನರಾಗಿ ಗುರುಕರುಣೆ-ಇದೆ ಎನಲು
ಹೇಗೆ ಒಪ್ಪುವರು ಶರಣರು॥ ೯೪

ಧರಿಸೂತ ಲಿಂಗವ। ಹರಿಸೂವೆ ಆಚಾರ।
ಬರಿಮಾತು ಡಂಭ ಅವಿಚಾರ-ಬೇರಿಲ್ಲ
ಹಿರಿ ಶರಣ ಹೇಳಿದ ಅನುಭಾವ॥ ೯೫

ಎಲ್ಲರ ಮಾತು ಕೇಳಿ। ಬಲ್ಲಹ ಚೆನ್ನಬಸವ।
ಮೆಲ್ಲನೆ ನುಡಿದನು ಪ್ರಭುವಿಗೆ-ನಿಮ್ಮೊಡನೆ
ಇಲ್ಲಿ ತರಬೇಕೆ ಸಿದ್ಧರಾಮನ॥ ೯೬

ಹಣೆಯಲ್ಲಿ ತಾನೊಂದು। ಕಣ್ಣುಳ್ಳವನಾದರೆ ಅ-।
ವನಂಗದ ಮೇಲೆ ಲಿಂಗಸ್ವಾಯತ-ಇಲ್ಲದಿರೆ
ಮನೆ ಅಡಿಗೆ ಶಿವನಿಗೆ ಸಲ್ಲದು॥ ೯೭

ಶಿವಭಕ್ತರಲ್ಲದ। ಭವಿಮನೆಯೊಳುಂಡರೆ।
ಭವಭವಕು ಶ್ವಾನನು ತಾನಾಗಿ-ಬರುವನು
ದೇವನೆ ತಪ್ಪದು ತಪ್ಪದು॥ ೯೮

ನೀನಿಲ್ಲದವರ ಆ। ಮನೆಯಲ್ಲಿ ತಿನ್ನುವರ।
ಎನ್ನ ಕಂಗಳಿಂದ ನೋಡಲಾರೆ-ದೇವ
ಮನಸಿಗದು ಸ್ವಲ್ಪ ಸೊಗಸದು॥ ೯೯

ಸಂಧಿ ೩೪

ಲಿಂಗವಿಲ್ಲದೆ ನಡೆವ। ಲಿಂಗವಿಲ್ಲದೆ ನುಡಿವ।
ಲಿಂಗವಿಲ್ಲದೆ ಉಗುಳು ನುಂಗಲು-ಅಂದಿಂಗೆ
ಸಿಂಗಿ ಕಾಳ ಕೂಟ ಕಿಲ್ಮಿಷವು॥ ೧

ಲಿಂಗವಿಲ್ಲದೆ ನುಡಿವ। ಲಿಂಗವಿಲ್ಲದೆ ನಡೆವ।
ಅಂಗ ಲೌಕಿಕ ನರನಲಾಗದು-ಸೊಂಕ
ಲಿಂಗವಿಲ್ಲದ ನುಡಿ ಸೂತಕವು॥ ೨

ಬಸವರಾಜ ದೇವ। ಉಸುರಿದರು ಈ ಪರಿ।
ಅಸಮ ಶಿವಯೋಗದ ಕೀಲವ-ಅರಿಯಿರಿ
ವಸುಧಿಯೊಳಗಿನ ಶರಣರು॥ ೩

ಗುರು ತೋರಿದ ಕನ್ನ। ಪರಮ ಚಿತ್ಕಳೆಕೂಡಲು
ವರಲಿಂಗದನುಭಾವ ಪವನ-ಭೇದದಿ
ಅರಿದೆನೆನಲು ಗುರುದ್ರೋಹವದು॥ ೪

ಈಡ ಪಿಂಗಳ ಎರಡು। ಜೋಡಿಸಿ ಸುಷುಮ್ನೆ।
ನೋಡಿ ಅರಿದೆನೆನಲು ಕೊಯ್ವಸು-ಮೂಗು
ಕೂಡಲಸಂಗಮದೇವಯ್ಯನು॥ ೫

ದೇವ ಚೆನ್ನಬಸವ। ಶಿವಗಣಕೆ ಪೇಳಿದ।
ಜೀವಾನುಭಾವಿ ಜೀವದಲೆ-ಮುಕ್ತ
ಶಿವಯೋಗಿಯ ಸಮನುಂಟೆ॥ ೬

ತನುವಿನ ಅನುಭಾವಿ। ತನುವಿನೊಳಗೆ ಮುಕ್ತ।
ಪ್ರಾಣಾನುಭಾವಿ ಪ್ರಾಣದಲಿ-ಮುಕ್ತ ಪ-
ವನಾನುಭಾವಿ ಪವನದಲಿ॥ ೭

ಶರಣರು ನಿಮ್ಮವರು। ನಿರವಯ ಸ್ವಯಜ್ಯೋತಿ।
ಪರಮ ಪ್ರಕಾಶವಾಗಿಹರು-ಲಿಂಗದಿ
ಬೆರೆತು ಬೇರಾಗದೆ ಸುಖಿಪರು॥ ೮

ವೇದಾಂತ ಸಿದ್ಧಾಂತ। ಸಾಧಿಸಿ ದ್ವೈತ ಕ್ರಿಯೆ।
ಸದಯನ ಕೂಡಿದೆನೆಂಬುದು-ಹುಸಿಎಂದು
ಬೋಧಿಸಿದರು ಶಿವಶರಣರು॥ ೯

ಅಷ್ಟಾಂಗ ಯೋಗದಿ। ಭ್ರಷ್ಟರಾದಿರಿ ಎಂದು।
ಶ್ರೇಷ್ಠ ಶರಣರೆಲ್ಲ ತಿಳಿದವರು-ಪೇಳಿದರು
ಸೃಷ್ಟಿ ಶರಣರದು ಬೇರೊಂದು॥ ೧೦

ಬೆಳಗಿನೊಳಗೆ ಒಂದು। ಬೆಳಗುದೊರಕೊಂಡರೆ।
ಬೆಳಗು ಮತ್ತೆ ಬೇರೆ ಇರುವದೆ-ಸಿದ್ಧರಾಮ
ಹೇಳೆಂದು ಪ್ರಭುದೇವ ನುಡಿದರು॥ ೧೧

ಘನದೊಳಗೆ ಮತ್ತೊಂದು। ಘನ ದೊರಕೊಂಡರೆ।
ಘನವು ಮತ್ತೆ ಬೇರೆ ಎಲ್ಲಿಹುದು-ಸಿದ್ಧರಾಮ
ಚೆನ್ನಬಸವಣ್ಣನು ಬಲ್ಲಹನು॥ ೧೨

ಕೇಳಯ್ಯ ಸಿದ್ಧರಾಮ। ಎಳ್ಳಿಗೆ ಪರಿಮಳ।
ಎಳ್ಳೆಣ್ಣೆಗೆ ಅದು ವೇಧಿಸದು-ಕಾಯಕೆ
ಬೆಳಗುವ ಇಷ್ಟಲಿಂಗವೆ ಬೇಕು॥ ೧೩

ಧರಿಸದೆ ಇಷ್ಟಲಿಂಗ। ನೆರೆದಿಲ್ಲ ಪ್ರಾಣಲಿಂಗ।
ಕರಲಿಂಗವಿಲ್ಲದೆ ಪ್ರಾಣಲಿಂಗ-ಸಂಬಂಧ
ಬಾರದು ಕೇಳಯ್ಯ ಸಿದ್ಧರಾಮ॥ ೧೪

ಕೆಮ್ಮನೆ ಕೆಟ್ಟೆನು। ನಿಮ್ಮವರಸರಿಯದೆ।
ಹಮ್ಮನೆ ಹಾರಿತು ಪ್ರಾಣವು-ಎಂದನು
ಹಮ್ಮಳಿದ ಸಿದ್ಧರಾಮಯ್ಯ॥ ೧೫

ಪುಣ್ಯ ಪಾಪಂಗಳು। ಏನೇನರಿಯದ ಮುನ್ನ।
ಗಣನೆಯಿಲ್ಲದ ಭವದಿ ಬಂದೇನೋ-ನಿಮ್ಮವರ
ಘನ ನಿಲವನರಿಯದೆ ಕೆಟ್ಟೆನು॥ ೧೬

ಶರಣು ಬಂದೆನು ನಿನಗೆ। ವರ ಪ್ರಭುದೇವನೆ।
ಚರಣ ಅಗಲದಂತೆ ಮಾಡಯ್ಯ-ಎನ್ನಯ್ಯ
ಪರಿಹರಿಸು ಕರ್ಮಬಂಧನ॥ ೧೭

ಎಂದಿಗಿರುವೆನು.ದೇವಾ। ಸಂದಿಲ್ದೆ ಶರಣರಲಿ।
ಎಂದಿರುವೆ ನಿಮ್ಮವರ ನಡುವೆ-ಪ್ರಭುವೆ
ಎಂದಿರುವೆ ತೊತ್ತಾಗಿ ಮನೆಕಾಯುತ॥ ೧೮

ಎಂದಿರುವೆ ನಾ ಶುದ್ಧ। ಸಿದ್ಧ ಪ್ರಸಿದ್ಧವನರಿತು।
ಎಂದಿರುವೆ ಭಕ್ತಿ ಜ್ಞಾನ ವೈರಾಗ್ಯ-ನಿಧಿಯಾಗಿ
ಎಂದಿರುವೆ ತತ್ವಾತತ್ವ ನೀನಾಗಿ॥ ೧೯

ಎಂದಿರುವೆ ಪ್ರಭೊ। ತಂದೆ ತೂರ್ಯಾತೂರ್ಯ।
ಎಂದಿರುವೆನಯ್ಯ ದೀಕ್ಷಾತ್ರಯದಿ-ಸಂಪನ್ನ
ಎಂದಿರುವೆ ಭವಬಂಧನ ಹರಿದು॥ ೨೦

ಎಂದಿರುವೆನು ದೇವಾ। ಲಿಂಗತ್ರಯಹೊಂದೂತ।
ತಂದೆ ಪ್ರಸಾದ ಸಂಪನ್ನನಾಗಿ-ಅವಿರತ
ಎಂದಿರುವೆ ನಿಮ್ಮವರ ಮಧ್ಯದಿ॥ ೨೧

ಒಡೆಯರಿಟ್ಟ ತೊತ್ತು। ಹಡೆದವಳ ಶಿಶುವಾನು।
ಬೇಡವಯ್ಯ ಎನಗೆ ಸ್ವತಂತ್ರ-ನಿನ್ನವರ
ನಡುವಿರಿಸು ಅಡಿಗಳ ಅಗಲದಂತೆ॥ ೨೨

ನಿನ್ನವರು ಒಲ್ಲದಿರೆ। ಆನು ಮರೆವೆನೆ ದುಃಖ।
ನಿನ್ನವರ ಆಜ್ಞೆಯು ಮೀರಿದರೆ-ದೇವ
ನಿನ್ನಾಣೆ ಕಪಿಲಸಿದ್ಧಮಲ್ಲಿನಾಥಾ॥

ನಿನ್ನವರೆ ನೀನೆಂಬ। ಧ್ಯಾನ ಮನದಲಿ ತುಂಬಿ।
ಉನ್ನತೋನ್ನತ ಕೊಡು ಎನ್ನಯ್ಯ-ಓ ದೇವ
ನಿಮ್ಮ ಧರ್ಮವಯ್ಯ ನಿಮ್ಮದು॥

ನಿನ್ನ ಲಾಂಛನ ಕಂಡು। ನಿನ್ನಾಣತಿ ನಂಬುವ।
ಮನಸೀಗೆ ಮಂಗಳ ನೀಡಯ್ಯ-ನಿಮ್ಮವರ
ಮನೆ ತೊತ್ತಿನ ತೊತ್ತು ಮಾಡಯ್ಯ॥

ಶೈವಯೋಗಾಭ್ಯಾಸ। ತವೆ ಜರಿದು ಸಿದ್ಧರಾಮ।
ಭಾವ ಭಕ್ತಿಯಿಂದ ಬೇಡಿದರು-ಪ್ರಭೊ
ಶಿವಶರಣರ ದಯೆ ಕರುಣಿಸು॥

ಹಿಂದೆ ಬಯಸಿದ ಮಾಟ। ಮುಂದಮತಿಯಿಂದ।
ಅಂದಾದ ಕೆರೆ ಭಾವಿ ಹೂದೋಟ-ಚೌಕ ಛತ್ರ
ಬೆಂದ ಜೀವಿಗಳಿಗೆ ಕಟ್ಟಿಸಿದೆ॥

ದಾನಿ ಎನ್ನುವರೆನಗೆ। ದಾನಿಯು ನಾನಲ್ಲ।
ನೀನೆ ಹೇಳಿದಂತೆ ಮಾಡಿರುವೆ-ಎನ್ನಯ್ಯ
ನೀನೆ ಬರಹೇಳಲು ಬಂದಿರುವೆ॥

ನೀನು ಇರಿಸಿದಂತೆ। ನಾನಿಲ್ಲಿ ಇರುವೆನು।
ನಿನ್ನ ಇಚ್ಛೆಯ ಮೀರಲಾರೆ-ಫಲ ಪದ
ಜನನ ಬಯಸಿದರೆ ನಿಮ್ಮಾಣೆ॥

ಮಾಡಿಸಯ್ಯ ಎನಗೆ। ಬಿಡದೆ ಶರಣರ ಸಂಗ।
ಮಾಡಿಸಯ್ಯ ನಿಮ್ಮವರಾನಂದ-ಓ ತಂದೆ
ಮಾಡಯ್ಯ ನಿನ್ನವರು ನೆಲಿಸಿದಂತೆ॥

ಮಾಡಿಸಿ ಸಂಗವನು। ನೋಡಿಸು ನಿನ್ನವರ।
ಕೊಡಿಸು ಬಚ್ಚಬರಿಯ ಭಕ್ತಿ-ನನಗಿನ್ನು
ನೀಡು ಪಾದೋದಕ ಪ್ರಸಾದವ॥

ನಿಮ್ಮವರ ಸಂಗವ। ಒಮ್ಮೆ ಅಗಲದಂತೆ।
ನಿಮ್ಮ ಶರಣರ ಪಾದದಲ್ಲಿ–ನಿತ್ಯನಾಗಿ
ಸ್ವಾಮಿ ಬರಿಸಯ್ಯ ಭವಭವದಿ॥ ೩೨

ನೀನು ಪರಿಹರಿಸಯ್ಯ। ಎನ್ನ ಭವಭವದೊಳು।
ಜನಿಸುವ ಘೋರ ಬಾಧೆಯು–ಓ ದೇವ
ಎನ್ನನು ಬಿಡದೆ ರಕ್ಷಿಪುದಯ್ಯ॥ ೩೩

ನುಡಿಯಬಹುದು ಜನ। ಒಡನೆ ಅದ್ವೈತವನು।
ಬಿಡದೆ ಒಂದು ಕೋಟಿ ವೇಳೆಯು–ಒಮ್ಮೆ
ನಡೆವರೆ ಸದ್ಭಕ್ತಿ ಆಚಾರದಿ॥ ೩೪

ನುಡಿದಂತೆ ನಡೆವರ। ನಡೆಯಂತೆ ನುಡಿವರ।
ದೃಢ ಭಕ್ತಿ ಸದಾಚಾರಿಗಳ–ಪಾದವ
ಹಿಡಿಸಿ ಬದುಕಿಸಯ್ಯ ಪ್ರಭುವೆ॥ ೩೫

ಧ್ಯಾನ ಯೋಗದಿ ವಸ್ತು! ಕಾಣದು ಸಿದ್ಧರಾಮ।
ಎನ್ನ ಗುರು ಅನುಮಿಷರಂತೆ–ಇಷ್ಟಲಿಂಗ
ಅನುವರಿತು ನೋಡೆಂದ ಪ್ರಭುದೇವ॥ ೩೬

ಶೃತಿಯ ನಂಬದಿರು। ಶೃತಿಯ ನಂಬಲಿ ಬೇಡ।
ಶೃತಿತತಿ ಶಿವನಡಿಯ ಕಾಣದೆ-ಎಂದವು
ಶೃತಿ ಚಕಿತಮಭಿಧತ್ತೆ ಎಂದು॥ ೩೭

ಶೃತಿ ಹೇಳಿದತ್ತ ನಿನ್ನ। ಮತಿಗೊಟ್ಟು ಬಳಲದೆ।
ಗತಿ ಶೂನ್ಯವೆಂದು ತಲೆವಾರವ-ಇಕ್ಕದಿರು
ವಸ್ತು ಹೃದಯದಿ ಎಂದು ನೆನೆಯದಿರು॥ ೩೮

ವಸ್ತು ಭ್ರೂಮಧ್ಯವೆಂದು। ವ್ಯಸ್ತದಿ ಭ್ರಮಿಸದೆ।
ವಸ್ತು ಬ್ರಹ್ಮರಂಧ್ರದಿ ಉಂಟೆಂದು-ದಾರಿ ಗೆಟ್ಟು
ವಸ್ತು ನಿಶ್ಚಯಿಸದೆ ತೊಳಲದಿರು॥ ೩೯

ಗುರು ಅನುಮಿಷನಂತೆ। ಕರಸ್ಥಲದಿ ನಿಶ್ಚಯಿಸಿ।
ಪರವಸ್ತು ನಿಶ್ಚಯದಿ ಕಂಡು–ಬೆರಗಾಗು
ಕರದಿಷ್ಟ ಲಿಂಗದಿ ಏ ಮರುಳೆ॥ ೪೦

ಅಂಗಲಿಂಗ ಪ್ರಾಣ-| ಲಿಂಗವಾಯಿತು ಮನ |
ಅಂಗಲಿಂಗವಾಗಿ ನಡೆ ನುಡಿಯು-ಗತಿ
ಹೇಗೆ ಅರಿಯುವದು ಸಿದ್ಧರಾಮ || ೪೧

ಪ್ರಾಣಲಿಂಗವಾಗಿ | ಅಣುಮಾತ್ರ ಸವನಾಳದ |
ಏನೇನು ಅರಿಯದು ಸುಳುಹ-ಸಿದ್ಧರಾಮ
ಮನಲಿಂಗವಾಗಲು ನೆನೆವುದೆಂತು || ೪೨

ಅನುಭಾವ ಲಿಂಗವಾಗಲು | ತಾನಳಿದು ವಿಚಾರ |
ಘನ ಭಾವಲಿಂಗವಾಗಲು-ಭಾವನೆ
ಭಿನ್ನವಳಿದು ಸುಮ್ಮನೆ ಆಯಿತು || ೪೩

ಎಲ್ಲ ಕ್ರಿಯೆಗಳೆಲ್ಲ | ಬಲ್ಲಹ ಲಿಂಗವಾಗಲು |
ಹೊಲಬನರಿಯದು ಮಾರ್ಗಕ್ರಿಯೆ-ಅರಿವು
ಸಲೆಲಿಂಗವಾಗಲು ಯಾವುದಿಲ್ಲ || ೪೪

ಅಂತರಂಗ ಲಿಂಗವಾಗಿ | ಎಂತರಿವುದು ಬಹಿರಂಗ |
ಇಂತು ಬಹಿರಂಗ ಲಿಂಗವಾಗಿ-ಅರಿಯದು
ಅಂತರಂಗದ ಸುದ್ದಿಯನು || ೪೫

ಸರ್ವಾಂಗ ಲಿಂಗವು | ಸರ್ವೇಂದ್ರಿಯ ನಿರ್ಗಮನ |
ಸರ್ವೇಶಾ ಸರ್ವರೊಳು ಘನವಾಗಿ-ಇರಲು
ಸರ್ವ ನಿಷ್ಪತ್ತಿ ಕರೆಗೊಂಡಿತ್ತು || ೪೬

ಸಮಯ ಅರಿತ ಜ್ಞಾನಿ | ಅಮುಗಿದೇವಯ್ಯ |
ತಮ್ಮ ಅನುಭಾವ ಹೇಳಿದರು-ಅನು-
ಪಮ ಶರಣರ ನಡೆ ಇಂತೆಂದು || ೪೭

ಹಸಿವು ನೀರಡಿಕೆಗೆ | ತುಸು ಮನಸು ಒಡ್ಡಿದರೆ |
ಹೇಸಿ ಕೆಲಸವ ಮಾಡಿದರೆ-ಆಗುವನೆ
ಲೇಸಾದ ಶಿವಭಕ್ತ ಲೋಕದೊಳು || ೪೮

ತನು ಬಯಲಾದರೇನು | ಘನ ಅಷ್ಟಮಾದಿ ಸಿದ್ಧಿ |
ತನ್ನ ವಶವ ಮಾಡಿದರು-ಚತುರ್ವಿಧ
ಘನ ಪದ ಪಡೆದರು ಭಕ್ತರಲ್ಲ || ೪೯

ತೋರೂತ ಮಹತ್ವ। ಮೆರೆಯುತ ಲೋಕದಿ।
ಹರಭಕ್ತನಾಗ ಬಲ್ಲನೆ–ಪ್ರಭೊ
ಪರಿ ಬೇರೆ ಇಹುದು ಭಕ್ತನದು॥ ೫೦

ಅಂಗತ್ರಯದಿ ಘನ। ಲಿಂಗತ್ರಯ ಸಂಬಂಧಿಸಿ।
ಜಂಗಮ ಗುರು ಲಿಂಗದರ್ಚನೆ–ಸಮರಸ
ಲಿಂಗತ್ರಯದಿ ಕೂಡುವದು॥ ೫೧

ಗುರು ಲಿಂಗ ಜಂಗಮ। ಆರಾಧಿಸುವ ಭಕ್ತ।
ವರ ಲಿಂಗ ಪ್ರಸಾದಸೇವಿಪನು–ಆತ
ಶರಣ ಸದ್‌ಭಕ್ತ ಕೇಳಿರಣ್ಣ॥ ೫೨

ಗುರು ಕರುಣವ ಪಡೆದು। ಧರಿಸಿಕೊಳ್ಳದೆ ಲಿಂಗ।
ಅರಿಯದೆ ಅಂಗಲಿಂಗ ಪ್ರಾಣಲಿಂಗ–ಆತ್ಮಲಿಂಗದ
ಹಿರಿಯ ಸಂಬಂಧವ ಯೋಚಿಸದೆ॥ ೫೩

ಅರಿಯದ ಜ್ಞಾನಯೋಗ। ಬರಿ ಶೂನ್ಯಾನುಭಾವಿಗೆ।
ಗುರು ಭಕ್ತಿ ಇಲ್ಲ ಲಿಂಗಭಕ್ತಿ–ಇಲ್ಲವದು
ಪರಮ ಜಂಗಮ ಭಕ್ತಿ ಇನ್ನೆಲ್ಲಿ॥ ೫೪

ಪ್ರಸಾದ ದೊರೆಯದೆ। ಪ್ರಸಾದ ಪ್ರಸನ್ನರಲ್ಲ।
ಲೇಸಾದ ಮೋಕ್ಷವ ದೊರೆಯದು–ಪ್ರಭೊ
ಈಶ ಗುರುಕರಜಾತನೆ ಲಿಂಗಾಂಗಿ॥ ೫೫

ಬಸವೇಶ ಮೊದಲಾದ। ಅಸಮ ಶಿವಶರಣರ।
ಹಸಗೂಸು ಸಿದ್ಧರಾಮ ಪ್ರಭುವೆ–ಎಂದನು
ಅಸಮ ಅನುಗ್ರಹ ಮಾಡಿಸಿರಿ॥ ೫೬

ಸೂರ್ಯ ಮಂಡಲದೊಳಗೆ। ಕಿರಣವ ಅಡಗಿತ್ತು।
ತೋರುವ ಫಲದ ಬೀಜದಲ್ಲಿ–ವೃಕ್ಷವು
ಮರೆಯಾಗಿ ಇರುವ ಪರಿಯಂತೆ॥ ೫೭

ಇಂದುಕಾಂತದಿ ಜಲ-। ಬಿಂದು ಅಡಗಿದಂತೆ।
ಸಂದಿಲ್ಲದೆ ರವಿಕಾಂತದಲ್ಲಗ್ನಿ–ಇಪ್ಪಂತೆ
ಅಂದಾದ ಹಾಲಲ್ಲಿ ಬೆಣ್ಣೆ ತುಪ್ಪ॥ ೫೮

ಲಿಂಗದ ಮೇಲೆ ಇಷ್ಟ। ಲಿಂಗವು ಸಂಬಂಧಿಸಿ।
ಲಿಂಗವು ತನ್ನೊಳಗೊಂಬುವದು-ತಿಳಿಸು
ಲಿಂಗದೊಳು [illegible]ನು ಕಾ[illegible]ವದು ॥ ೫೯

ತನ್ನೊಳಗೆ ಸಮಸ್ತ। ಭಿನ್ನಳಿದ ವಿಸ್ತಾರವು।
ಸನ್ನೂತ ಜಂಗಮಮುಖವೆ ಲಿಂಗ-ಎಂಬುದು
ಚೆನ್ನಬಸವನಿಂದ ಕರುಣಿಸಯ್ಯ ॥ ೬೦

ಲಿಂಗದ ಪ್ರಾಣವೆ। ಜಂಗಮವಾಗಿಹುದನು।
ಅಂಗದೊಳಗೆ ಲಿಂಗವೆ ಆಚಾರ-ಅಳವಟ್ಟ
ಲಿಂಗಾಂಗ ಸಂಬಂಧ ವಿವರಿಸು ॥ ೬೧

ಸ್ಥಳಕೂಳಗಳ ವಿರಳ। ಹೇಳಿಸು ಕೃಪೆದೋರಿ ಕಂ-।
ಗಳ ನೋಟಕ್ಕೆ ಗುರಿಯಾದ-ಲಿಂಗಅಂಗ-
ನೊಳಗೊಂಬ ಭೇದದ ಪರಿಎಂತು ॥ ೬೨

ಬದುಕಿಸಯ್ಯ ಪ್ರಭುವೆ। ಮುದದಿಂದ ಎನ್ನನು।
ಬೆ[illegible]ಗೆ
ಸದಮಲ ಹೃದಯದಿ ಕಾಪಾಡಲು ॥ ೬೩

ಸಿದ್ಧರಾಮನ ಕಳವಳ। ಎದ್ದು ಕಂಡಿತು ಆಗ।
ಬಾಧಿಗೆ ನಿಲುಕದ ಸ್ವಪ್ರಭೆಯುಳ್ಳ-ಲಿಂಗವು
ಸಿದ್ಧರಾಮಗೆ ಪ್ರಭು ಧರಿಸೆಂದನು ॥ ೬೪

ರನ್ನ ಹೊಳೆದರೆ ಮತ್ತೆ। ತನ್ನ ಬಂಧಿಸಿಕೊಳ್ಳುದು।
ಚಿನ್ನದ ಕುಂದಣದಿ ಇರುವದು-ಸಿದ್ಧೇಶಗೆ
ಚೆನ್ನಬಸವ ಲಿಂಗ ಧರಿಸಯ್ಯ ॥ ೬೫

ಗಿಡವಿರದೆ ಎಲ್ಲಿಂದ। ಬಿಡುವವು ಫಲಗಳು।
ನೀಡುವವೇನು ರಸರುಚಿಯ-ಚೆನ್ನಣ್ಣ
ಕೊಡು ಇಷ್ಟಲಿಂಗ ಸಿದ್ಧರಾಮಗೆ ॥ ೬೬

ಚಿತ್ರದ ಸೌಂದರ್ಯ। ನೇತ್ರಕ್ಕೆ ಸುಖವದು।
ಭಿತ್ತಿಯ ಪಟ ಮುಖ್ಯ ಸ್ಥಾನಕ್ಕೆ-ಚಿತ್ರ
ಎತ್ತ ಕಾಂಬುವದು ನೇತ್ರಕ್ಕೆ ॥ ೬೭

ನಿಧಾನ ಇದ್ದರೇನು। ಸಾಧನ ಕ್ರಿಯೆಯಿಂದ।
ಸಿದ್ಧಿಸಿ ಅಂಜನ ಸಾಧ್ಯವ-ಮಾಡದೆ
ನಿಧಾನ ಕೈಗೆ ನಿಲುಕುವದೇ॥ ೬೮

ಕರಸ್ಥಲಕೆ ನಮ್ಮ। ವರ ಲಿಂಗವಿಲ್ಲದಿರೆ।
ನಿರವಯ ಜ್ಞಾನಯೋಗದ-ಕೂಟ
ಕರಗತವಾಗದು ನೋಡಯ್ಯ॥ ೬೯

ಕ್ರಿಯಾ ಲಿಂಗಸಂಬಂಧ। ದಯವಾಗೊ ಚನ್ನಣ್ಣ।
ಕಾಯ ಶುಚಿಮಾಡಲು ಸಿದ್ಧೇಶಗೆ-ಲಿಂಗವಿತ್ತು
ಆಯಾಸವಳಿದ ದಾರಿ ತೋರೊ॥ ೭೦

ಪ್ರಭುವಿನ ನುಡಿ ಕೇಳಿ। ಅಭಯನಿತ್ತು ಚೆನ್ನಣ್ಣ।
ಉಭಯವಳಿದ ಸಿದ್ಧರಾಮಗೆ-ದೀಕ್ಷೆಗೈವ
ಶುಭೋದಯ ಒದಗಿತ್ತು ಆಗ॥ ೭೧

ಕಳೆದು ಆಣವಮಲ। ತೊಳೆದು ಮಾಯಾಮಲ।
ಉಳಿಯದಂತೆ ಕಾರ್ಮಿಕಮಲ-ಮಾಡಿದ
ಕಳಾತೀತ ಚೆನ್ನಬಸವಣ್ಣನು॥ ೭೨

ಗುರು ಚೆನ್ನಬಸವನು। ಅರುಹಿದನಾಜ್ಞೆದೀಕ್ಷೆ।
ವರ ಉಪಮಾದೀಕ್ಷೆ ಸ್ವಸ್ತಿಕ-ಆರೋಹಣ
ಪರ ಕಳಶಾಭಿಷೇಕ ವಿಭೂತಿಪಟ್ಟ॥ ೭೩

ಲಿಂಗಾಯತ ಮಾಡಿದ। ಲಿಂಗಸ್ವಾಯತ ಮಾಡಿದ।
ಜಂಗಮನು ಕಾಯಕ್ಕೆ ಉಪದೇಶ-ಮಾಡಿದನು
ಮಂಗಳ ಗುರು ಚೆನ್ನಬಸವಣ್ಣ॥ ೭೪

ಕರುಣಿಸಿದ ಹರಣಕ್ಕೆ। ವರಸಮಯ ನಿಸ್ಸಂಸಾರ।
ನಿರ್ವಾಣ ತತ್ವದೀಕ್ಷೆ ಆಧ್ಯಾತ್ಮಿಕ-ಅನುಗ್ರಹ
ಅರಿತು ಆಚರಿಪೂದು ಸತ್ಯಶುದ್ಧ॥ ೭೫

ಮನಕ್ಕೆ ಬೋಧಿಸಿದ। ಮುನ್ನ ಏಕಚಿತ್ತ ಧೃಢವ್ರತ।
ತನ್ನ ಪಂಚೇಂದ್ರಿಯಾರ್ಪಿತ ಅಹಿಂಸೆ-ನೋಡಾ
ಮನೋಲಯ ಲಿಂಗನಿಜ ಸದ್ಯೋನ್ಮುಕ್ತಿ॥ ೭೬

ಕ್ರಮವರಿದು ಮಾಡಯ್ಯ। ರಾಮನೆ ಸಹಜದೀಕ್ಷೆ।
ನಮ್ಮ ಕೂಡಲಚೆನ್ನಸಂಗಮನಲಿ-ನೀನು
ಕಾಮಾರಿ ಕೂಡೆಂದ ಶ್ರೀಗುರು॥ ೭೭

ಗುರು ಕರುಣೆಯಿಂದ। ಪರಮ ದೀಕ್ಷೆಯ ಹೊಂದಿ।
ಹರುಷಗೊಂಡನು ಸಿದ್ಧರಾಮ-ಗುರುವಿನ
ಚರಣಕ್ಕೆ ನಮೋ ನಮೊ ಎಂದು॥ ೭೮

ಆಧ್ಯಾತ್ಮ ಆಧ್ಯಾತ್ಮ। ಆಧ್ಯಾತ್ಮ ಎನ್ನುವರು।
ಆಧ್ಯಾತ್ಮ ಇನ್ನು ಯಾರಿಗೆ-ಶ್ರೀಗುರು
ಬೋಧಿಸಿ ಲಿಂಗವ ಕೊಟ್ಟಾಗ॥ ೭೯

ಬಲ್ಲಹ ಶಿವಲಿಂಗ। ಮೆಲ್ಲನೆ ಸೂಕ್ಷ್ಮಮಾಡಿ।
ನಲ್ಲ ಶ್ರೀಗುರು ಕರಸ್ಥಲದಿ-ಕೊಟ್ಟಾಗ
ಎಲ್ಲಿಹುದು ಬೇರೆ ಯೋಗವು॥ ೮೦

ತನ್ನ ಕರವ ಗುರು। ಎನ್ನ ಶಿರದಮೇಲ್ಲಿಟ್ಟು।
ಮುನ್ನ ವಾಯುಪ್ರಾಣಿಯಾದದ್ದು-ಕೊಂದು
ಎನ್ನನು ಲಿಂಗಪ್ರಾಣಿ ಮಾಡಿದನು॥ ೮೧

ಐದು ಅಕ್ಷರದೊಳು। ಬೋಧಿಸಿ ಮುಕ್ತಮಾಡಿ।
ಹೊಂದಿಸಿದನು: ಶಿವಯೋಗದಿ-ನಾನಿನ್ನು
ಮುಂದೇಕೆ ಮಾಡಲಿ ಯೋಗವ॥ ೮೨

ಲಿಂಗಾರ್ಚನೆ ಮಾಡಿ। ಜಂಗಮಪ್ರಸಾದ ಕೊಂಡು।
ಅಂಗ ಲಿಂಗವನೊಳಕೊಂಡರೆ-ಮತ್ತೆ
ಅಂಗೀಕರಿಸುವದೇಕೆ ಯೋಗವ॥ ೮೩

ಅತಿಗಳೆದು ಈ ಪರಿ। ಹಿತದಿ ಶಿವಯೋಗಿ ಮಾಡಿ।
ಗತಿಯಾದನು ಚೆನ್ನಬಸವಣ್ಣ-ಎನ್ನ ಶುದ್ಧ-
ಮತಿ ನೀಡಿ ಪೊರೆದನು ಗುರುದೇವಾ॥ ೮೪

ಇದ್ದ ಮಹಾಲೋಕದಾ। ದ್ವ್ಯಾಕ್ಷರ ಅದ್ವಯವನು।
ಭೇದಿಸಿ ಕರಸ್ಥಲದಿ ಇರಿಸಿದ-ತೋರಿದ
ಇದು ಉತ್ತರಪಥವೆನ್ನುವ॥ ೮೫

ಎನ್ನ ಮಾಡಿದ ಗುರು। ತನ್ನಂತೆ ಚೆನ್ನಬಸವ।
ನಾನು ಗುರುವಿನ ಕರುಣದಿ-ಯೋಗಳಿದು
ಘನ ಶಿವಯೋಗದಿ ನಿತ್ಯನಾದೆ॥ ೮೬

ಗುರು ಮಾಡಿದನು ಎನ್ನ। ವರ ಭಕ್ತ ಮಹೇಶ।
ಪರಮ ಪ್ರಸಾದಿ ಪ್ರಾಣಲಿಂಗಿ-ಶರಣ
ಮರಣರಹಿತವಾದ ಐಕ್ಯವ॥ ೮೭

ಚೆನ್ನಬಸವ ನಿನ್ನ ಕೃಪೆ। ಎನ್ನನಿಂತು ಮಾಡಿತು।
ನಿನ್ನವರ ಸಲುಗೆಗೆ ಪಾತ್ರನಾದೆ-ಗುರುವೆ
ಎನ್ನ ಕಪಿಲ ಸಿದ್ಧಮಲ್ಲಿನಾಥಾ॥ ೮೮

ಹೆಸರಿಡಲಾಗದ। ಅಸಮ ಶಿವಲಿಂಗಕ್ಕೆ।
ಹೆಸರಿಟ್ಟು ಎನ್ನ ಕರಸ್ಥಲಕೆ-ಕೊಟ್ಟನು
ವಸುಧೀಶ ಶ್ರೀಗುರು ಚೆನ್ನಬಸವ॥ ೮೯

ಕರತಳಾಮಳಕದಂತೆ। ಕರತಲಕ್ಕೆ ಎನ್ನಯ್ಯ।
ಗುರು ಚೆನ್ನಬಸವ ಕ್ರಿಯಾಲಿಂಗವ-ಕೊಟ್ಟು
ಪರಮ ಪಾವನ ಮಾಡಿದನು॥ ೯೦

ಹೆಸರಿಟ್ಟ ಲಿಂಗದ। ಹೆಸರು ಹೇಳುವೆ ನಾನು।
ಹೊಸ ಕಂಜಕರ್ಣಿಕೆಯ ಹಣೆಯಲ್ಲಿ-ವಿಹತ
ವಸವೆಂದು ಬರೆದ ಪಂಚಾಕ್ಷರಿ॥ ೯೧

ಅವ್ವೆಯ ಕರದಲ್ಲಿಯ। ದಿವ್ಯ ಷಡಕ್ಷರವೆ।
ಶಿವನ ದ್ವಿತಿಯ ನಾಮವು-ಆಚಾರ್ಯ
ಅವ್ವೆಯ ಆನಂದ ಮಸ್ತಕದಕ್ಷರ॥ ೯೨

ನಾಮತ್ರಯವನರಿದು। ನೇಮ ಧ್ಯಾನಾರೂಢ।
ಸೋಮಧರನ ಪೂಜಿಪರು-ನೋಡಯ್ಯ
ನಿಮ್ಮ ಕರುಣೆಯಿಂದ ಅತಿವಿರಳ॥ ೯೩

ಬಸವಣ್ಣ ಮೊದಲಾದ। ವಸುಧೀಯ ಪ್ರಮಥರು।
ಲೇಸಾದ ಅವ್ವನ ಅನುಮತದಿ-ಲಿಂಗಾರ್ಚಿಸಿ
ವಾಸಿಗಳಾದರು ನಿತ್ಯನಿಜದ॥ ೯೪

ಶರಣ ಸನ್ಮೃತಿಯ | ಅರುವಿನ ಉಪದೇಶದಿ |
ಕರದಲ್ಲಿ ಪಿಡಿದೆನು ದೇವನ-ಇನ್ನೆನ್ನ
ಕೊರಗುವ ಚಿಂತೆ ಹರಿಯಿತು || ೯೫

ಆದಿ ಆಧಾರವಿಲ್ಲದ | ಸಾದಾಖ್ಯ ದೇಹವಿಲ್ಲದ |
ಅಂದಿಂದ ಸೀಮೆ ಸಂಬಂಧವಿಲ್ಲ-ಅನಾದಿ ಸಂ-
ಸಿದ್ಧನ ಆಗುಮಾಡಿ ಹೆಸರಿಸಿದ || ೯೬

ಕರೆದನು ಹೆಸರಿಟ್ಟು | ಕರಸ್ಥಲಕೆ ತಂದುಕೊಟ್ಟ |
ಗುರು ಚೆನ್ನಬಸವ ದೇವನ-ಚರಣಕ್ಕೆ
ಶರಣು ಶರಣೆಂದು ಬದುಕಿದೆನು || ೯೭

ಇಹ ಪರಲೋಕದ | ಊಹೆ ಅಳಿದು ಹೋಯಿತ್ತು |
ಮಹಂತ ಗುರು ಹಸ್ತದಿ ಸತ್ತು-ಪಂಚಾಕ್ಷರಿ
ಮಹಾಮಂತ್ರದಿಂದ ಹುಟ್ಟಿರುವೆ || ೯೮

ನಿತ್ಯ ಸತ್ಯಲಿಂಗ ಪೂಜೆ | ಮತ್ತೆ ವಿಭೂತಿ ರುದ್ರಾಕ್ಷಿ |
ಉತ್ತುಮ ಕಾಯಕ್ಕೆ ಧರಿಸಿದ-ಕಾರಣ
ಮತ್ತೆಲ್ಲಿದೆ ಇಹ ಪರಲೋಕ || ೯೯

ಸಂಧಿ ೩೫

ಅಂಗಲಿಂಗ ಒಂದಾಗಿ | ಹಂಗು ಹರಿದು ಹೋಗಿ |
ಭಂಗಿಸಿ ಮದಮಲಂಗಳ-ನಾನೀನಾದೆ ಸ-
ರ್ವಾಂಗ ಲಿಂಗತನು ಭಕ್ತನದು || ೧

ಶರಣರ ಇರವು | ಪರ ರುದ್ರಲೋಕವದು |
ಗುರು ಚೆನ್ನಬಸವದೇವನೆ-ನಿನ್ನ ಹಸ್ತ
ಇರಸಿದರಾಯಿತು ಮಸ್ತಕದಿ || ೨

ಶುದ್ಧವ ಅರಿದೆ ದೇವ | ಸಿದ್ಧವನರಿದೆ ನಾನು ಪ್ರ- |
ಸಿದ್ಧನರಿದೆನು ನಿಮ್ಮಿಂದ-ಚೆನ್ನಬಸವ
ಬದುಕಿದೆ ಜನ್ಮಕರ್ಮವಳಿದು || ೩

ತವೆ ಹೃದಯ ಕಮಲದ | ನವ ಎಂಟು ದಳಗಳ |
ಮೂವತ್ತೆರಡು ಕುಸುಮ ಮಧ್ಯದಿ-ಇರುವನು
ರವಿ ತನ್ನ ಬೆಳಗ ಬೀರೂತ || ೪

ರವಿಯ ಮಧ್ಯದಿ ಶಶಿ | ಅವಿರತ ಇರುವನು |
ಅವನ ಮಧ್ಯದಿ ಅಗ್ನಿ ಇರುವನು-ಅಗ್ನಿಯಲಿ |
ತವೆ ಶಾಂತಿ ಒಪ್ಪುವದು ನೋಡಾ || ೫

ಬೀರುವ ಕಾಂತಿಯಲಿ | ತೋರುವದು ಸುಜ್ಞಾನ |
ತೋರುವ ಸುಜ್ಞಾನದ ಮಧ್ಯದಿ-ಚಿದಾತ್ಮ
ಇರುವದು ಎನಗೆ ತೋರಿದನು || ೬

ಚಿತ್ತಾತ್ಮನ ಮಧ್ಯದಿ | ಚಿತ್‌ಪ್ರಕಾಶ ರೂಪುಳ್ಳ |
ಅತಿ ಸುಂದರ ಪರಶಿವನನ್ನು-ಗುರುದೇವ
ಗತಿ ಇವನೆಂದು ಕೈಗಿತ್ತನು || ೭

ಎನ್ನ ಸುಜ್ಞಾನ ಕಾಯದ | ಉನ್ನತ ಶಿರದ ಮೇಲೆ |
ತನ್ನ ಕರುಣೆಯ ಕರವನಿಟ್ಟು-ಸ್ವರೂಪಿಸೆ
ಮನ ಭಾವ ಕರ್ಣೇಂದ್ರಿಯಂಗಳಿಂದೆ || ೮

ದೃಷ್ಟಿಗೆ ತೋರಿದನು | ಇಷ್ಟಲಿಂಗ ಕರದಲಿಟ್ಟು |
ಸೃಷ್ಟಿಸಿದ ಶರಣರ ಲೋಕವನು-ಗುರುವಿನ
ಶ್ರೇಷ್ಠ ಶ್ರೀ ಪಾದಕ್ಕೆ ನಮೋನಮೋ || ೯

ಪಡೆದು ಅನುಭಾವವ | ನುಡಿದನು ಸಿದ್ಧರಾಮ |
ಒಡೆಯ ಶರಣರೆ ನಿಮ್ಮಿಂದ-ಬದುಕಿದೆ
ಅಡಿಗಳ ಕಂಡೆ ಗುರುವಿನ || ೧೦

ಹರುಷದಿ ನುಡಿದನು | ಗುರು ಚೆನ್ನಬಸವಯ್ಯ
ಸ್ಥಿರ ಕಂಗಳ ನೋಟ ಮನಕೂಟದಿ-ಒಂದಾಗಿ
ಬೆರೆತ ಭಾವ ಲಿಂಗೈಕ್ಯದ ನಿಲವು || ೧೧

ತನ್ನಿಂದ ತಾನಾದ | ಭಿನ್ನನರಿಯದ ಶಿವಯೋಗಿ |
ತನ್ನ ಅರಿಲಿಲ್ಲದ ಅರುವಿನ-ಪರಿಯಾಯ್ತು
ಚೆನ್ನಸಂಗಯ್ಯನಲ್ಲಿ ಸಿದ್ಧರಾಮಗೆ | ೧೨

ಸಿದ್ಧರಾಮನ ನಿಲವು | ಬುದ್ಧಿವಂತ ಚೆನ್ನಬಸವ |
ಮೋದದಿ ಹೇಳಿದ್ದು ಕೇಳಿ ತಾ-ಪ್ರಭುದೇವ
ಸದಮಲ ಸಿದ್ಧೇಶಗೆ ಹರಸಿದನು || ೧೩

ಕೇಳಯ್ಯ ಚೆನ್ನಬಸವ| ಅಳಿಯದ ಸ್ವಾನುಭಾವದ|
ಬೆಳಗಿನಲ್ಲಿ ಹುಟ್ಟಿತು ಬೆಕ್ಕೊಂದು–ಬೆಕ್ಕಿನ ತಲೆ–
ಮೇಲೊಂದು ಗಿರಿಯು ಹುಟ್ಟಿತ್ತು|| ೧೪

ಗಿರಿಯು ಮೇಲೆ ಎರಡು| ರತ್ನಗಳು ಹುಟ್ಟಿದವು|
ಬರಲು ರತ್ನಗಳ ಹುಡುಕೂತ–ಅವು ತನ್ನ
ಇರವನ್ನು ಅವಗ್ರಹಿಸಿದವು|| ೧೫

ಅಂಗ ನುಂಗಲು ರತ್ನ| ನುಂಗಿ ಪ್ರಾಣ ಬೇರೊಂದು|
ಪಿಂಗದೆ ರತ್ನಪ್ರಭೆ ತಾನಾದ–ಸಿದ್ಧರಾಮನ
ಮಂಗಳ ನಿಲವಿಂಗೆ ನಮೋ ನಮೋ|| ೧೬

ಜಂಗಮ ಪ್ರಭುದೇವ| ಹೀಗೆಂದು ಬಣ್ಣಿಸಲು|
ಲಿಂಗ ಕೊಟ್ಟ ಚೆನ್ನಬಸವಣ್ಣ–ಸಿದ್ಧೇಶನ
ಪಿಂಗದೆ ನಿಲವ ಬಣ್ಣಿಸುವ|| ೧೭

ಅಂಗಕ್ಕಾಗಿ ಎಲ್ಲರು| ಲಿಂಗವನರಸುವರು|
ಲಿಂಗಕ್ಕಾಗಿ ಲಿಂಗನರಸುವರೆ–ಪ್ರಾಣಕ್ಕೆ
ಭಂಗತಾರದ ಜ್ಞಾನ ಅರಿಸುವರು|| ೧೮

ಹರಣಕ್ಕೆ ಜಾನವು| ಅರಸಬೇಕಲ್ಲದೆ|
ವರ ಜ್ಞಾನಕ್ಕೆ ಜ್ಞಾನ ಅರಸುವರೆ–ಪ್ರಭೊ
ಎರಡು ಮಾಡಲಹುದಿನ್ನು ಒಂದು|| ೧೯

ಒಂದಿರುವದೆರಡು| ಎಂದೂ ಮಾಡಲಾಗದು|
ಸಿದ್ಧರಾಮನ ಶ್ರೀಪಾದಕ್ಕೆ–ನಮಿಸುವೆ
ಎಂದೆನುತ ಬದುಕುವೆ ಹೇ ಪ್ರಭೊ|| ೨೦

ಚೆನ್ನಬಸವದೇವನು| ಬಿನ್ನೈಸಲು ಈ ಪರಿ|
ಸನ್ನೂತ ಪ್ರಭುದೇವ ಇಂತೆಂದ-ಸಿದ್ಧೇಶನ
ಉನ್ನತ್ತೊನ್ನತ ನಿಲವ ನಾ ಕಂಡೆ|| ೨೧

ಆವ ಪಂಚಭೂತವ| ತವೆ ತ್ರಿಗುಣ ಸಂಚರಿಸಿ|
ರವಿ ಶಶಿ ಕೂಡದ ರಜಬೀಜ–ಬದ್ಧ ಬಂ–
ಧವಾಯಿತ್ತೊ ಸಂಗರಹಿತನಲ್ಲ|| ೨೨

ಪವನ ಗತಿಯಿಂದ। ಅವನು ನಡೆಯುವವನಲ್ಲ।
ತವೆ ಲೋಕವೆಲ್ಲ ಭೇದಿಪದು-ಬದ್ಧವಾಯ್ತೆ
ಅವನು ರಜಬೀಜವಿಲ್ಲದ ಬಯಲು॥ ೨೩

ಕಾಮನ ಕೊಲ್ಲುವಲ್ಲಿ। ಹೋಮವ ಸುಡುವಲ್ಲಿ।
ನೇಮದಿ ತ್ರಿಪುರಸಂಹರ ಕೀಲ-ಅರಿವಲ್ಲಿ।
ರಾಮನಿಗೆ ಯೋಗಿ ಎನ್ನದಿರು॥ ೨೪

ಅನಬೇಡ ಯೋಗಿ ಈತ। ಅನಬೇಡ ಭೋಗಿ ಎಂದು।
ಘನ ಅಚ್ಚಲಿಂಗೈಕ್ಯನು ನೋಡಾ-ಸಿದ್ಧರಾಮ ವ್ಯ-
ಸನವರತ ಹಸುವ ಮರೆದ ಲಿಂಗ॥ ೨೫

ಹಿರಿ ಹಿರಿ ಹಿಗ್ಗೂತ। ಗುರು ಚೆನ್ನಬಸವಣ್ಣ।
ಹರುಷದಿ ಕೊಂಡಾಡಿದನಾಗ-ತನಗಿಂತ
ಹಿರಿ ಲಿಂಗೈಕ್ಯನು ಸಿದ್ಧರಾಮ॥ ೨೬

ಕಾಯ ಕಲ್ಪಿತದಿಂದ। ಅಯ್ಯಾ ಭೋಗಾದಿ ಭೋಗ।
ರಾಯ ಸಿದ್ಧರಾಮ ಭೋಗಿಸ ಬಲ್ಲ-ದೇವಲೋಕ
ಮಾಯಾತೀತನಿಗೆ ಸರ್ವಗತವು॥ ೨೭

ಸಾಲೋಕ್ಯ ಸಾಮೀಪ್ಯ। ಸಲೆ ಸಾರೂಪ್ಯ ಸಾಯುಜ್ಯ।
ನಾಲ್ಕು ವಿಧವ ಮೀರಿ ಈಶನ-ಪಾದದಿ
ಸಲ್ಲುವರೆ ಕೈಲಾಸ ಕಲ್ಯಾಣ॥ ೨೮

ಲಿಂಗವೆ ತಾನು ತಾನೆ। ಲಿಂಗವಾಗಿರ ಬಲ್ಲ।
ಜಂಗಮ ಸಮಯೋಗಿ ಸಿದ್ಧೇಶನ-ಪಾದದಿ
ಪಿಂಗದೆ ಎಂದಿರುವೆ ಹೇ ಪ್ರಭುವೆ॥ ೨೯

ಹಸು ಹಯನಾಯಿತು। ಹಸು ಬಂದಿತ್ತು ಮನೆಗೆ।
ಹಸು ಕಟ್ಟಬಂದವರ ನಾಶಮಾಡಿ-ತುಳಿಯಿತು
ಹಸು ಕಟ್ಟಿದನು ಸಿದ್ಧರಾಮಯ್ಯ॥ ೩೦

ಹರ ತನ್ನ ರೂಪವ। ತೋರಲು ಗುರುವಾದ।
ಕರಸ್ಥಲಕೆ ಲಿಂಗವಾದನು-ಮನಸ್ಥಲಕೆ
ಹಿರಿದಾದ ಮಂತ್ರವಾದನು॥ ೩೧

ತನು ಸ್ಥಲಕೆ ಪ್ರಸಾದ । ಪ್ರಾಣಸ್ಥಲಕೆ ಜಂಗಮ ।
ಎನ್ನ ಕೂಡಲ ಚೆನ್ನಸಂಗನಲಿ-ಸಿದ್ಧರಾಮ
ತಾನೊಬ್ಬರೆ ಸಮಯೋಗಿಯಾದರು ॥ ೩೨

ಕಬ್ಬಿನ ಗಾಣಕ್ಕೆ ಗೊತ್ತೆ । ಕಬ್ಬಿನ ಹಾಲಿನ ಸವಿ ।
ನಭದೊಳಗಾಡುವ ಪಕ್ಷಿಗಳು-ಬಲ್ಲವೆ
ನಭದ ಸೂರ್ಯನ ನಿಲವನು ॥ ೩೩

ನಟನೆಗೆ ಪೂಜಿಪರು । ದಿಟ ಶರಣರನರಿಯದೆ ।
ಸಟೆ ದಿನ ಕಳೆವ ಮುದುಕರು-ಬಲ್ಲರೆ
ದಿಟ ಲಿಂಗಯ್ಯನ ನಿಜದರಿವು ॥ ೩೪

ಜಪವ ಮಾಡಿದರೇನು । ಮುಪ್ಪಾವರಿಸುವನಕ ।
ಒಪ್ಪುಳ್ಳ ಲಿಂಗೈಯ್ಯನ ಪ್ರಾಣವ-ತನ್ನಪ್ರಾಣ
ಅಪ್ಪಿಕೊಂಡು ಒಂದಾಗುವತನಕ ॥ ೩೫

ಪ್ರಭುವೆ ಇಂತಿವರೆಲ್ಲ । ಅಭ್ಯಾಸ ಶಕ್ತಿಗರುಹಿಗರು ।
ಅಭವ ಮಾಯಾಕೋಲಾಹಲ ಸಿದ್ಧ-ರಾಮನ
ಅಭವ ಶ್ರೀ ಪಾದಕ್ಕೆ ನಮೋ ನಮೋ ॥ ೩೬

ಗುರು ಸ್ತುತಿಸಿದು ಕೇಳಿ । ವರ ಭಯ ಬಕತೀಲಿ ।
ಗುರುವೆ ನಿಮ್ಮುಪಕಾರ ಮರಿಯೆನೆಂದು-ಸಿದ್ಧೇಶ
ಮರು ಉತ್ತರಿಸಿದರು ಈ ಪರಿ ॥ ೩೭

ಮಲ ಮೂರರೊಳಗೆನ್ನ । ಸಲೆ ಕುದಿಯಗೊಡದಲೆ ।
ಸಲುಹಿದಿ ಕಾಮನ ಬಾಣಕ್ಕೆ-ಗುರಿಮಾಡದೆ
ಎಲೆ ಸ್ವಾಮಿ ನಿನ್ನಂತೆ ಮಾಡಿರುವೆ ॥ ೩೮

ಪದ ನಾಲ್ಕು ಮೀರಿಸಿ । ಬಂಧನಕ್ಕೆ ಬಾರದಂತೆ ।
ಸದ್ಯೋನ್ಮುಕ್ತನ ಮಾಡಿದೆ ದೇವ-ಶ್ರೀ ಗುರು
ಪಾದದಿಂದ ನಾನು ಬದುಕಿದೆನು ॥ ೩೯

ಗುರುವೆ ಶ್ರೀ ಗುರುವೆ । ಪರಮ ಪಾವನ ಗುರುವೆ ।
ಪರಿಭವಕ್ಕೆ ಬಾರದಂತೆನ್ನನು-ಮಾಡಿದೆ
ಬೆರಸಿ ಬೇರಾಗದಂತಿರಿಸಿದೆ ॥ ೪೦

ಕಾಲನ ಕಮ್ಮಟಿಕೆ| ಬಲಿ ಬೀಳದಿರಲೆಂದು|
ಸಲುಹಿದಿ ಎನ್ನನು ಮೇಲೆತ್ತಿ-ತ್ರಿಲಿಂಗಕೆ
ಒಲುವಿನ ಕಾರಣಿಕ ಮಾಡಿದೆ|| ೪೧

ಇನ್ನು ಬಾರೆನು ಭವಕೆ| ನಿನ್ನ ವರಂತಿರುವೆನು|
ಎನ್ನ ಮೀರಿದ ಪದವಿಲ್ಲ-ಶ್ರೀ ಗುರು
ಚೆನ್ನಬಸವ ನಿಮ್ಮ ಪಾದ ಸಾಕ್ಷಿ|| ೪೨

ವರ ರೂಪಿಂಗೆ ರೂಪು| ಅರಿವಿಂಗೆ ಅರಿವು|
ಹರಣಕ್ಕೆ ಪ್ರಸಾದ ಲಿಂಗತ್ರಯ-ತಂದವರ
ಕರದಲ್ಲಿ ಕೊಟ್ಟು ದೀಕ್ಷೆಗೈದು|| ೪೩

ಎಂದೆನಗೆ ಶಿವ ಪದ| ಎಂದೆನುತ ಚಿಂತಿಪಗೆ|
ಮುಂದೆ ತೋರುವದು ಪ್ರಸಾದ ಬೀಡ-ಕಂಡು
ಹೊಂದಿದೆ ಶಿವಗಣರ ನೆರವನು|| ೪೪

ಪರಮ ಶ್ರೀಗುರುರಾಯ| ವರ ಚೆನ್ನಬಸವಣ್ಣ|
ಧೀರನ ಪಾದವನರಿದು-ಅವರಿಂದ
ಹರ ನಿಮ್ಮ ಪಾದವ ಕಂಡೆನಯ್ಯ|| ೪೫

ಇನ್ನು ಜನನವು ಇಲ್ಲ| ಮುನ್ನವೆ ಸಂದಳಿದೆ|
ಮನ್ನಣೆಯಿಂದ ಕಳಿಸಿಧಂತೆ-ಉನ್ನತ
ಉನ್ನತನಾದೆ ಗುರುವಿನಿಂದ|| ೪೬

ಎನ್ನ ತನ್ನವನೆನಿಸಿ| ಮನ್ನಿಸಿದ ಭಕ್ತಿಯೊಳು|
ಸನ್ನೂತನಾದೆ ಸಕಲದೊಳು-ಚೆನ್ನಬಸವ
ಬಿನ್ನಾಣ ದೇಹ ತನ್ನಂತೆ ಮಾಡಿ|| ೪೭

ಗುರುವಿಗೆ ನುತಿಸುತ| ಪರಮ ಪ್ರಭುದೇವರಿಗೆ|
ಅರುಹಿದರು ಸಿದ್ಧರಾಮಯ್ಯ-ಲಿಂಗಾಂಗ
ಬೆರೆತು ಬೇರಾಗದಿರುವ ಪರಿಯ|| ೪೮

ನೆರೆದನು ಎಂದರೆ| ಎರವೆನೊ ನಾ ನಿನಗೆ|
ಗುರುಸ್ವಾಮಿ ಎನ್ನ ನಿನ್ನಯ-ನಿನ್ನ ಎನ್ನ
ಕರಸ್ಥಲದಿ ಸ್ಥಾಪಿಸಿದ ಬಳಿಕ|| ೪೯

ಹಿರಿದಾದ ಜ್ಯೋತಿಯಲಿ। ಇರುವದೆ ಕತ್ತಲೆ।
ಹರ ನೀನೆಂಬ ಸಾಗರದಿ–ಬೆರೆತಾಗ
ಅರಸುವೆನೆ ನಾನೆಂಬ ನದಿಯ॥ ೫೦

ಕರಣಂಗಳ ಕಳೆದು। ಇರವಿನ ಬ್ರಹ್ಮ ನಿಜದಿ।
ಧೀರವಾಗಿಪ್ಪುದು ಆತ್ಮಸಂಗ-ಸಂಯೋಗ
ಇರವು ನಿಮ್ಮಲ್ಲಿ ನಿಜವಾಯ್ತು॥ ೫೧

ನಿನ್ನಿಂದ ದೊರಕಿತ್ತು। ಚೆನ್ನಬಸವನ ಕರುಣೆ।
ಧನ್ಯನಾದೆನು ಪ್ರಭುದೇವ–ಬಸವಾದಿ
ಮಾನ್ಯ ಶರಣರ ಸಾನಿಧ್ಯದಿ॥ ೫೨

ಬಲ್ಲಹ ಪ್ರಭು ಎಂದ। ಫಲವೆ ಲಿಂಗವರಿಯದೆ।
ಫಲವಿಲ್ಲ ಬೇರೆ ಮತ್ತರಿವುದು–ಕೇಳಾ
ಮೂಲ ಸರ್ವಕ್ಕು ಲಿಂಗವಾಗೆ॥ ೫೩

ಲಿಂಗವ ಅರಿದರಿದು। ಲಿಂಗಸಂಗ ಮಾಡುವೆ।
ಸಂಗ ಸುಖದೊಳು ಓಲಾಡುವೆ–ಸಿದ್ಧರಾಮ
ಲಿಂಗಾಂಗ ಸಂಯೋಗ ಫಲದಿಂದ॥ ೫೪

ಮರಳಿ ಸಿದ್ಧರಾಮನೆಂದ। ಹರಿಯಲು ಭವ ಬೇರ
ವರ ಪ್ರಭುವಾಗಿ ಬಂದನು-ಅಲ್ಲಮನು
ಮೂರುಮಲ ತೊಳೆಯಲು ಮರುಳರ॥ ೫೫

ಸಿದ್ಧರಾಮದೇವ ಪ್ರ-। ಸಿದ್ಧ ಪ್ರಭುವಿನ ಬರವ।
ತಿದ್ದಲು ಅಜ್ಞಾನಿಗಳಿಗೆಂದು–ಚೆನ್ನಣ್ಣ
ಸಿದ್ಧರಾಮನಿಗಿಂತು ಹರಸಿದನು॥ ೫೬

ಬೀಜಿಲ್ಲದ ಸಸಿಗೆ। ರಾಜಿಪ ಸುಗಂಧ ಒಡಲು।
ತ್ರಿಜಗಗಳು ಇಂಬುಗೊಂಡು–ಲಿಂಗದೇಹಿ
ಅಜಾತನಾಗಿಹನು ಶಿವಶರಣ॥ ೫೭

ಆದಿಯಿಂದತ್ತತ್ತ ಅ-। ನಾದಿ ಸಂಸಿದ್ಧವನು।
ವೇದರಸೆ ಕಾಣದಾಗಮಕ್ಕೆ-ಅತ್ಯಧಿಕ
ಸಾಧಕಾಂಗದೊಳು ಗೈದಿಹುದು॥ ೫೮

ಭೇದಿಸಿ ಪರತತ್ವ। ಇರವದಾದಡೆ ಮತ್ತೆ।
ಅದುವೆ ಲಿಂಗದಂಗ ಅಂಗಲಿಂಗ-ಶರಣ
ಭೇದವಿಲ್ಲದೆ ಕೂಡಿಹನು ॥ ೫೯

ಪರುಷ ಸೋಂಕಿನಿಂದ। ಕಿರಿಕಬ್ಬುಣ ಪರುಷಾಗೆ।
ಸ್ಪರುಷ ರೂಪು ರಸ ಗಂಧವು-ಮನವಾರೆ
ಪರಶಿವನಿಗೆ ಅರಪಿತವಾಗೆ ॥ ೬೦

ಪರಶಿವನೊಳು ಬೆರಸಿ। ಪರತತ್ವದೊಳು ಶರಣ।
ತುರಿಯವಾದ ಮೇಲೆ ಶರಣಭರಿತ-ಲಿಂಗವೊ
ಪರಮಲಿಂಗ ಭರಿತ ಶರಣನೊ ॥ ೬೧

ಅಂಗಲಿಂಗದ ಸಂಚು। ಹಿಂಗೆ ಕಂಗಳಂಗದಲಿ।
ಹಿಂಗದಾನೋಟ ತುಷ್ಟಿನಲಿ-ಬಿಂಬ
ಲಿಂಗವೆಶರಣ ಶರಣನೆ ಲಿಂಗ ॥ ೬೨

ಭಂಗವಿಲ್ಲದವನು ನಿ-। ಸ್ಸಂಗ ನಿಮ್ಮ ಶರಣ।
ಲಿಂಗ ಕೂಡಲಚನ್ನಸಂಗನ-ಸಿದ್ಧರಾಮ
ಅಂಗಲಿಂಗಭೇದ್ಯ ಶರಣನು ॥ ೬೩

ಗುರುವಿನ ನುಡಿ ಕೇಳಿ। ವರ ಸಿದ್ಧರಾಮನೆಂದ।
ಗುರು ಚನ್ನಬಸವನಲ್ಲದೆ-ಅರ್ಪಿಸಲು
ನರಮಾನವರೆಂತು ಬಲ್ಲರು ॥ ೬೪

ಕರಂಗಳೆ ಮನೆಯಾಗಿ। ಕರಂಗಳೆ ಕರವಾಗಿ।
ಅರಪಿಸುವ ಪರಿ ಇನ್ನಾರು-ಬಲ್ಲರು
ಗುರು ಚನ್ನಬಸವಣ್ಣನಲ್ಲದೆ ॥ ೬೫

ಶರಿರ ಪ್ರಾಣವ ಇಷ್ಟ-। ಲಿಂಗ ಸಂಬಂಧಿಯಾಗಿ
ಚರಿಸುವ ಇಂದ್ರಿಯಗಳೈದು-ಮುಖವಾಗಿ
ಅರಪಿಸುವ ಪರಿ ಗುರುವೆ ಬಲ್ಲ ॥ ೬೬

ಆನಂದ ಸ್ಥಾನದಲಿ। ಅನುಮಿಷಾಕ್ಷರದ।
ಅನುಪಮ ಸಂಯೋಗ ಅರ್ಪಣದ-ಭೇದ
ಚನ್ನಬಸವ ಬಲ್ಲ ದೇವನಲ್ಲಿ ॥ ೬೭

ಭಕ್ತಿವಿಡಿದು ತಾನು। ಭಕ್ತನಾದ ಪ್ರಸಾದಿ।
ಮುಕ್ತಿವಿಡಿದು ಧೈರ್‍ಯ ಸಾಧಿಸೆ-ಭಕ್ತಂಗೆ
ಯುಕ್ತ ಮಹೇಶ್ವರ ಪ್ರಸಾದಿ ‖ ೬೮

ಹಿಡಿದ ಕಾರಣ ತಾನು। ಬಿಡದೆ ಅವಧಾನ।
ಧೃಡ ಭಕ್ತನಿಗೆ ಪ್ರಸಾದಿ-ಆದನು
ಒಡೆಯ ಚನ್ನಬಸವದೇವನು ‖ ೬೯

ಕಳೆದು ಕರ್ಮವನೆಲ್ಲ। ಅಳಿದು ಕಾಲಕಲ್ಪಿತವ।
ಬಳಿ ಬಂದ ಭಕ್ತಗೆ ಪ್ರಾಣಲಿಂಗಿ-ಆದನು
ಬೆಳಗು ತೋರಲು ಪ್ರಸಾದಿಯು ‖ ೭೦

ಪತಿ ಭಕ್ತಿಯ ಹಿಡಿದು। ಅತಿಗಳೆದು ಧರ್ಮಾರ್ಥ।
ಮತ್ತೆ ಕಾಮ ಮೋಕ್ಷದಾಸೆ ಬಿಟ್ಟು-ಬಂದವಗೆ
ಅತಿಶಯದ ಶರಣನು ಪ್ರಸಾದಿ ‖ ೭೧

ಉಭಯ ಸಮರಸವ। ಅಭೇದ್ಯವೆಂದರಿದು।
ಉಭಯಭಾವ ಊರಿ ಕರ್ಪೂರ-ಸಂಯೋಗ
ಅಭವ ಭಕ್ತಗೆ ಐಕ್ಯ ಪ್ರಸಾದಿ ‖ ೭೨

ಸರ್ವೇಶನಲ್ಲಿ ಗುರು। ಸರ್ವಕ್ಕೆ ಚೈತನವು।
ಸರ್ವಜ್ಞ ನಮ್ಮ ಚನ್ನಬಸವ-ಎಂಬಾತ
ಸರ್ವಧಿಕ್ಯ ಅಚ್ಚಪ್ರಸಾದಿ ‖ ೭೩

ಮಡಿವಾಳನ ಕಂಡು। ನುಡಿದನು ಪ್ರಭು ದೇವ।
ಒಡವೆರಸಿ ನಿರವಯಲನಾದೆನು-ಸಿದ್ಧರಾಮ
ಕಂಡೆನೊ ನಿನ್ನಿಂದ ಮಡಿವಾಳನ ‖ ೭೪

ಹಲವಾರು ಮಕ್ಕಳ। ಮಲತೊಳೆವ ತಾಯಂತೆ।
ಮಲ ಮೂರು ತೊಳೆವ ತನುವ-ನಿಮ್ಮದು
ಬಲ್ಲಹ ಮಡಿವಾಳಮಾಚಿ ತಂದೆ ‖ ೭೫

ಮುನ್ನಾರಿಗೆ ಸಾಧ್ಯವು। ಎನ್ನಳವೆ ಅರಿಯಲು।
ಮುನ್ನಿನ ಸುಕೃತವು ಉಂಟಾಗಿ-ಪಾದ ಕಂಡೆ
ಸನ್ನುತ ಮಡಿವಾಳಮಾಚಿದೇವನ ‖ ೭೬

ನಮ್ಮನಿಳಿಯ ಬಿಡದೆ। ನಿಮ್ಮವನೆಂದು ವಿವರಿಸಿ।
ನಿಮ್ಮತ್ತ ಕರುಣಿಸಿ ಕೊಳ್ಳುವುದು-ದೇವನೆ
ನಿಮ್ಮ ಮಡಿವಾಳನಿಂದ ಬಯಲಾದೆ॥ ೭೭

ಮಡಿವಾಳ ತಂದೆಗಳು। ನುಡಿದರು ಸಂತಸದಿ।
ಒಡೆಯರೆ ನಿಮ್ಮ ಮುವರಿಂದ-ಬದುಕಿದೆ
ಮೃಡನವತಾರಿ ಮಾಶರಣರೆ॥ ೭೮

ಬಸವಣ್ಣ ಚೆನ್ನಬಸವ। ಈಶ ಪ್ರಭುದೇವನೆಂದು।
ವಸುಧೀಶ ಮಹಾದೇವನೆಂದು-ಮಾಸ್ಥಾನದಿ
ಒಸೆದು ಕರೆದರೆ ಓ ಎನ್ನುವಿರಿ॥ ೭೯

ಲಿಕಾರವೆ ಶೂನ್ಯವು। ಅಕೊ ಈ ಬಿಂದುವೆ ಲೀಲೆ।
ಗಕಾರವೆ ಚಿತ್ತವಾಗಿಹುದು-ಮೂರರೊಳು
ಸಕೀಲ ಅದುವೆ ಲಿಂಗವೆಂದು॥ ೮೦

ಸಕೀಲ ಸಂಬಂಧವ। ಆಕಲನ ಮಾಡಿದಾತ।
ಲೋಕದಿ ಲಿಂಗಸಂಗಿಯು-ಶರಣಗೆ
ಏಕೊಭಾವದಿ ನಮೋ ನಮೋ॥ ೮೧

ಗುರುವಿನ ನುಡಿಕೇಳಿ। ಅರುಹಿದನು ಸಿದ್ಧರಾಮ।
ಮೂರು ಲಿಂಗಕೆ ಮೂಲ ಮಂತ್ರ-ನೀ-ಗುರುವೆ
ಮೂರು ವಿದ್ಯೆಗೆ ವಿದ್ಯಾರೂಪಾದೆ॥ ೮೨

ಹೊದ್ದಿದ ಪ್ರಪಂಚ। ಸದೆಬಡೆದು ಗುರುದೇವ।
ಮೊದದಿ ರೂಪೆ ಆ ರೂಪವಾದ-ಗುರು
ಆದನು ಲೋಕತ್ರಯಕ್ಕೆ ದೇವ॥ ೮೩

ಐದು ಬ್ರಹ್ಮದಿ ನೀನು। ಸದಮಲ ಜ್ಯೋತಿರ್ಮಯ।
ನಂದ ಸ್ಥಾನದಿ ನಿತ್ಯಮಯ-ಗುರು ನೀನು
ಹೊದ್ದಿರುವೆ ಒಳಹೊರಗು ಪರಿಪೂರ್ಣ॥ ೮೪

ನಿನ್ನಾಧಿಕ್ಯನರಿಯಲು। ಮುನ್ನಾಗದು ನಿಗಮಕ್ಕೆ।
ಎನ್ನ ಗುರುವಿನ ಕರುಣದಿ-ಒಳಗಾದೆ
ಚೆನ್ನಮಹಾಲಿಂಗ ಕರಸ್ಥಲದಿ॥ ೮೫

ಭೇದಿಸ ಬಾರದ ಅ-। ಭೇದ್ಯ ಶಿವನೆ ನಿನ್ನ।
ಭೇದಿಸಿ ಕೊಟ್ಟನು ಗುರುದೇವ-ನಾನಿನ್ನು
ಎಂದೆಂದು ಬಿಡಲಾರೆ ಬಿಡಲಾರೆ॥ ೮೬

ಮೆಚ್ಚಿದೆ ಪಾದೋದಕ। ನಚ್ಚಿದೆ ಪ್ರಸಾದ।
ಸಚ್ಚಿದಾನಂದ ಗುರುವಿನ-ಕರುಣದಿ
ನಚ್ಚು ಮೆಚ್ಚಿನ ಕೂಸಾದೆ॥ ೮೭

ಬಸವರಾಜದೇವ। ಉಸುರಿದರು ಸಿದ್ಧೇಶನ।
ವಾಸಿಪ ತಾಣ ವಾರಣಾಸಿ-ದೇವನ
ಅಸಮ ಶರಣರು ಸ್ವತಂತ್ರರು॥ ೮೮

ಅಡಿಗಡಿಗೆ ಸ್ಥಾನನಿಧಿ। ಅಡಿಗಡಿಗೆ ದಿವ್ಯಕ್ಷೇತ್ರ।
ಅಡಿಗಡಿಗೆ ನಿಧಿಯು ನಿಧಾನ-ಸಿದ್ಧರಾಮ
ಅಡಿ ಇಟ್ಟುದೆ ಅವಿಮುಕ್ತಿಕ್ಷೇತ್ರ॥ ೮೯

ನೊಸಲಗಣ್ಣಿನ ಸಿದ್ಧ। ಉಸುರಿದರು ಈ ರೀತಿ।
ಈ ಸೀಮೆ ಸಂಬಂಧ ಮೀರಿದ-ಮಂತ್ರಕ್ಕೆ
ಅಸಮ ರಾಜಮಂತ್ರ ಪಂಚಾಕ್ಷರಿ॥ ೯೦

ಪಂಚಾಕ್ಷರಿ ಗುಣದ। ಮುಂಚೆ ಬಸವಾಕ್ಷರದ।
ಸಂಚರಿತ ಧ್ಯಾನ ಮೌನದ-ಸತ್ವದಲಿ
ನಚ್ಚಿನಾನಂದ ತ್ರೈಲಿಂಗವ॥ ೯೧

ಮೂರು ಲಿಂಗಗಳ। ವರಮೂಲ ಮಂತ್ರಕ್ಕೆ।
ಪರಮ ಬಸವಾಕ್ಷರತ್ರಯವು-ತಾಯಾಗಿ
ಮೆರೆಯುವದು ಸಕಲ ಲೋಕದಿ॥ ೯೨

ದೆಸೆದಿಕ್ಕುಗಳಿಗೆಲ್ಲ। ಪಸರಿಸಿತು ಶುಭ ನಾಮ।
ವಸುಧೆಯೆಲ್ಲ ಹೆಣ್ಣು ನೀನೆ ಗಂಡು-ನಿನ್ನಿಂದ
ಬಸವ ಹುಟ್ಟಿತು ಸಕಲ ಬ್ರಹ್ಮಾಂಡ॥ ೯೩

ಮುನ್ನ ಶಶಿ ರವಿಲ್ಲದ। ಮುನ್ನ ಬ್ರಹ್ಮವಿಷ್ಣು ಆದಿ।
ಮುನ್ನ ಮೂರ್ತಿಗಳೆಂಟು ಹುಟ್ಟದ-ಮುನ್ನವೆ
ಮುನ್ನ ನಿಶ್ಚಿಂತನು ಒಂದಿರದ॥ ೯೪

ತನುಮಧ್ಯವಳಯದಲ್ಲಿ। ತಾನೆ ಸಕಲ ಬ್ರಹ್ಮಾಂಡ।
ಇನ್ನು ಜಲಮಯವಾಗಿರುತಿರಲು-ಶಿವಭಕ್ತಿ
ನಿನ್ನವಗ್ರಹಿಸಲು ಎಲ್ಲಿದ್ದೆ॥ ೯೫

ನೀನೆ ಅದು ಬಲ್ಲೆಯ। ಘನ ಬಸವದೇವನೆ।
ತನ್ನ ತಾನೆ ಕುರುಗೆಟ್ಟ ನಿಶ್ಚಿಂತ-ನಿನ್ನನು
ನಾನೆಂತು ಬಣ್ಣಿಸಲು ಸಾಧ್ಯವದು॥ ೯೬

ಇಂದ್ರಾದಿ ದೇವತೆಗೆ। ಸಾಂದ್ರ ಪದವಿಯ ನೀಡಿ।
ಅಂದು ಬ್ರಹ್ಮ ವಿಷ್ಣು ದೇವತಾ-ವೊತ್ತಕ್ಕೆ
ಪದವನಿತ್ತಿರುವಿ ಬಸವಣ್ಣ॥ ೯೭

ವರಲಿಂಗ ಭಕ್ತರಿಗೆ। ಚರಲಿಂಗ ಧಾರಣೆಯ।
ಪರಿಯಾಯದಿಂದ ಒರೆದಾತ-ಗುರುವೆ
ಪರಮ ಬಸವಯ್ಯ ಪಾಹಿಮಾಂ॥ ೯೮

ಮರ್ತ್ಯಾ ಪರಗಳ ಸುದ್ದಿ। ಅರುಹಿದನುಮಿಷ।
ಗುರು ಬಸವೇಶನೆ ನೀನೆ ದೇವಾ-ಎನ್ನ
ವರಕಪಿಲ ಸಿದ್ಧ ಮಲ್ಲೇಶನೆ॥ ೯೯

ಸಂಧಿ ೩೬

ಐದಾರು ಪ್ರಸಾದವ । ಪಾದೋದಕವೆರಡೈದು ।
ಆದಿ ಅಕ್ಷರದಿ ದೀಕ್ಷಾತ್ರಯ-ನಾದಗೂಡಿ
ಬಿಂದು ಸಮನಿಸದೀಗ ಬಸವಣ್ಣ ॥ ೧

ಆಧಾರ ಸ್ಥಾನಕ್ಕೆ ಅ- । ನಾದಿ ಅತ್ಯತಿಷ್ಠ ।
ಆದಿ ಮೂಲಸ್ಥಾನ ಮುನ್ನೂರು-ಕಮಲಕ್ಕೆ
ಆದಿ ಭ್ರಮರನು ಬಸವದೇವ ॥ ೨

ಅಣ್ಣ ನೋಡಿರೇ ಜಗದ । ಕಣ್ಣಮುದ ಕಳೆವನು ಮು- ।
ಕಣ್ಣನಿರುವಿನ ತಾಣವದು-ತೋರಿದ
ಅಣ್ಣ ಮಾತು ಮನ ಮೀರಿಹನು । ೩

ಶಿವನವತಾರಗಳು । ನವನಾಟಕವೆಂದರಿದು ।
ಭುವಿಯೊಳು ಮೆರೆದ ಸತ್ಯರೂಪ-ನಿರ್ಮಳ
ಕೈವಲ್ಯ ಮೀರಿದ ಬಸವಣ್ಣ ॥ ೪

ಶುದ್ಧ ಸತ್ಯ ಬಸವ। ಶುದ್ಧವನು ಕಂಡೆನು।
ಸಿದ್ಧ ಕಂಡೆನಯ್ಯ ನಿಮ್ಮಿಂದ-ಎನ್ನಯ್ಯ ಪ್ರ-
ಸಿದ್ಧ ಕಂಡೆನೊ ನಿಮ್ಮಿಂದಲೆ॥ ೫

ಆರರಲಿ ಬೆರತಿದೆ। ಆರು ವ್ರತಗಳ ಅರಿತು।
ಗುರುವೆ ನೀನೊಂದು ಮುಂತಾಗಿ-ಒಂದಾಗಿ
ತೋರಿದೆ ಗುಣವಿಂತು ಬಸವಣ್ಣ॥ ೬

ಉರವಣಿಸಿ ನಾ ನಿನ್ನ। ಹರಿದು ಭರದಿಗೆಲುವೆ।
ವರ ತತ್ವ ಮುವತ್ತಾರರ ಮೇಲೆ-ಒಪ್ಪುವದು
ಹರನೆ ನೀನೆಂದು ಅರಿಯುವೆ॥ ೭

ಎನಗರಿಯದಂಥ। ಇನ್ನಧಿಕ ಒಂದೂ ಇಲ್ಲ।
ಸನ್ನುತನ ಪ್ರಸಾದದಿಂದ ನಾ-ಪಡೆದೇನೊ
ಉನ್ನತೋನ್ನತ ನಿರ್ಬಯಲು॥ ೮

ಲೋಕ ಲೌಕಿಕರೆಲ್ಲ। ಏಕ ಚಿತ್ತದಿ ಕೇಳಿ।
ಐಕ್ಯೈಕ ರುದ್ರನ ಅವತಾರ-ಗೊತ್ತೆಂದು
ಯಾಕೆ ನುಡಿವಿರಿ ಕೇಳಿರೊ॥ ೯

ಶಿವನ ನೋಡಿ ನಂಬಿರೆ। ಶಿವನೆ ಬಸವನಾದ।
ಭುವಿಗೆ ಗುರುವಾದ ಬಸವಣ್ಣ-ಲಿಂಗವಾದ
ತವನಿಧಿ ಆದನು ಬಸವೇಶ॥ ೧೦

ಬಸವಂಣ ಚರನಾದ। ಬಸವನೆ ಪರಿಣಾಮು।
ಪ್ರಸನ್ನ ಪರವಾದ ಬಸವೇಶ-ಮೂರಾಗಿ
ಬಸವಯ್ಯ ಆರಾದ ಬಕುತಿಯುಲಿ॥ ೧೧

ಆರರ ಮೇಲೆ ಮತ್ತೆ। ತೋರಿದ ಬಸವಂಣ।
ಮೀರಿದ ಪ್ರಸಾದ ಕೊಂಡುಂಡು-ಎನ್ನಯ
ಹರಿಯಿತು ಭವ ಬಾಧೆಯನು॥ ೧೨

ಸೀಮೆಯ ಮೀರಿದ ನಿ-। ಸ್ಸೀಮ ಸಂಬಂಧ।
ಸ್ವಾಮಿ ಸಂಬಂಧದಿ ಸಮನಿಸದ-ಸಂಯೋಗಿ
ನಿಮ್ಮಿಂದ ಪಾದೋದಕ ಪ್ರಸಾದ॥ ೧೩

ಗುರು ಲಿಂಗ ಜಂಗಮರ | ಪರಮ ಪಾದೋದಕ |
ಗುರು ಪ್ರಸಾದಕ್ಕೆ ಅರ್ಹನ ಮಾಡಿ-ಸಲುಹಿದಿ
ಹರ ಬಸವನಾಗಿ ಬಂದೆನ್ನನು || ೧೪

ಗುರುವಾಗಿ ಬಂದೆನಗೆ | ವರ ದೀಕ್ಷೆಯನು ಮಾಡಿ |
ಕರಲಿಂಗವಾಗಿ ಬಂದು ಮನದ-ವ್ಯೆಲಿಗೆ
ಪರಹರಿಸಿ ಸಲುಹಿದ ಬಸವಂಣ || ೧೫

ಬಂದು ಜಂಗಮನಾಗಿ | ಹಿಂದಿನ ಭವಗಳಿಗೆ |
ಹೊಂದಿದ ತನು ಕಳೆದು ಪರಮ-ಸೀಮೆಯಾ-
ನಂದದಿ ಮಾಡಿದಿರಿ ಬಸವೇಶ || ೧೬

ಅರ್ಪಿತವಧಾನ ಮುಖ | ತೋರ್ಪಡಿಸೆ ಸುಲಭವೆ |
ಅರ್ಪಣ ಅನಾದಿ ಸಂಸಿದ್ಧವೆ-ನಿಸಿದನು
ಪರಿಪೂರ್ಣ ಬಸವಂಣ್ಣನಲ್ಲವೆ || ೧೭

ಮೂರು ಲಿಂಗಕು ಮೂಲ | ವರಮಂತ್ರ ಬಸವಣ್ಣ |
ಮೂರುಲಿಂಗದ ಪ್ರಸಾದರೂಪ-ಬಸವಣ್ಣ
ಮೂರುಲಿಂಗವ ನೋಡವೆರಸಿದಾತ || ೧೮

ಸಾರುವೆನು ಸಾರುವೆ | ಹರ ನೀನೆ ಸಾಕ್ಷಿಯು |
ಪರನೆ ನಿನ್ನನು ನೆನೆದವರು-ತಾವಾದರು
ವರ ಕಪಿಲಸಿದ್ಧಮಲ್ಲಿನಾಥ || ೧೯

ಮೊದಲಕ್ಷರ ಹೆಸರಿಗೆ | ಅದೊ ಬಸವ ಬೀಜವು |
ಸದ್‌ಗುರು ನಾಮ ಮೂಲವ-ಅದೆ ಕೊನೆಯು
ಮುದ್‌ಗುರು ಸಂಗನಬಸವಣ್ಣ || ೨೦

ಬಸವಣ್ಣ ಬಸವೇಶ | ಬಸವ ನಾಮಾಕ್ಷರದಿ |
ದೆಸೆಗೆಟ್ಟಿನಯ್ಯ ಶ್ರೀಗುರುವೆ-ಹೇ ದೇವ
ಬಸವ ಕಪಿಲಸಿದ್ಧಮಲ್ಲೇಶ || ೨೧

ತಂದೆ ಬಸವದೇವ | ಆದಿಯಾಧಾರನು |
ಹೋದನು ಭಕ್ತಿಯಲಿ ಹೊಲಬು-ತಪ್ಪಿತಾ
ಮೋದದಿ ಸಂಗನಬಸವಯ್ಯ || ೨೨

ಊರನರಿಯದ ಗ್ರಾಮ। ದಾರಿ ತಪ್ಪಿದ ಸೀಮೆ।
ಹರವಶದಿಂದಲಿ ನೀನಾದೆ-ಬಸವನ
ವರ ನಾಮದಿಂದಲೆ ದೆಸೆಗೆಟ್ಟೆ॥ ೨೩

ನುತಿಸಲು ಸಿದ್ಧರಾಮ। ಅತಿ ಹರುಷ ಚನ್ನಣ್ಣ।
ಹಿತವಿಹುದು ಶಿವಾನುಭಾವದಲಿ-ಎಂದೆನುತ
ಮತಿವಂತ ಶರಣರಿಗರುಹಿದರು॥ ೨೪

ಅನಂತಕಾಲದಿಂದ। ಕಾನನದಿ ನೆಲಸೂತ।
ಮೌನ ತಪ ಆಚರಣೆ ಏತಕೆ-ಒಂದೇ
ದಿನ ಗುರುಕರುಣ ಸೇವೆ ಸಾಲದೆ॥ ೨೫

ಗುರುಪಾದ ಸೇವೆಯು। ನಿರತ ಮಾಡಿದರೇನು।
ಕರಲಿಂಗ ಪೂಜೆ ಒಂದೇ ದಿನ-ಮಾಡುವದು
ಕರಲೇಸು ಕಾಣಿರೊ ಅಯ್ಯಗಳಿರ॥ ೨೬

ಹಿಂಗದೆ ಅನುಗಾಲ। ಲಿಂಗಪೂಜಿಸಲೇನು।
ಜಂಗಮ ತೃಪ್ತಿ ಒಂದೇ ದಿನ-ಮಾಡಲು
ಲಿಂಗಯ್ಯ ತೃಪ್ತನಾಗುವನು॥ ೨೭

ಜಂಗಮರ ತೃಪ್ತಿಯು। ಹಿಂಗದೆ ಬಹುಕಾಲ।
ಇಂಗಿತವರಿಯದೆ ಮಾಡಲೇನು-ಶರಣರ
ಸಂಗಾನುಭಾವ ನಿಮಿಷ ಸಾಕು॥ ೨೮

ಚನ್ನಬಸವನಿಗಾಗ। ಬಿನ್ನೈಸಿದ ಸಿದ್ಧರಾಮ।
ನಿನ್ನ ಅಸಂಖ್ಯಾತರ ಕೃಪೆಯಿಂದ-ಸರ್ವವು
ಎನಗಿನ್ನು ಸಾಧ್ಯವಾಯಿತು॥ ೨೯

ಶುದ್ಧ ಪ್ರಸಾದ ಸಿದ್ಧ ಪ್ರ-। ಸಿದ್ಧದ ನೆಲೆಯನು।
ಅರಿಯಲೆಂದು ತೊಳಲುತ-ಬಂದೆನು
ತಂದೆ ಗಿರಿಗಂವ್ಹರದಿ ಹುಡುಕೂತ॥ ೩೦

ನಿನ್ನ ಕಂಡಿಹೆನೆಂಬ। ಇನ್ನು ಕಂಡಿಲ್ಲೆಂಬ।
ಭಿನ್ನ ಸಂಶಯಕೆ ಕಾರಣವು-ನಿನ್ನವರ
ಗಣ ಸಮುದಾಯಕ್ಕೆ ಗೂಢವದು॥ ೩೧

ಸದ್‌ಭಕ್ತ ದೇಹಿಯು | ಸದ್‌ಭಕ್ತರಲಿ ನೀನು |
ಹೊಂದಿಕೊಂಡಿರುವ ತಾಣದು-ತಂದೆನು
ತಂದೆ ನಿನ್ನ ನೆಲೆಯು ಗಿರಿಗಂವ್ಹರದಿ || ೩೨

ಶುದ್ಧವು ಗುರುವಿನಲಿ | ಸಿದ್ಧವದು ಲಿಂಗದಿ ಪ್ರ- |
ಸಿದ್ಧವ ಜಂಗಮದಲಿ-ಕಂಡುಂಡು
ಸದ್ಗುರುವೆ ನಚ್ಚಿದೆ ಮೆಚ್ಚಿದೆ || ೩೩

ಎನ್ನ ಸರ್ವಸ್ವಯವ | ನಿನ್ನೊಳಚ್ಚತಗೊಟ್ಟೆ |
ನಿನ್ನವರ ಸಮೂಹಕ್ಕೆ ಪ್ರಾಪ್ತನಾದೆ-ತಂದೆ
ನಿನ್ನವರ ಸಲುಗೆಗೆ ಸಂದೇನಯ್ಯ || ೩೪

ಸೋಹಂ ನೀನೆ ದೇವ | ಕೋಹಂ ತೂರ್ಯಾರ್ಥವು |
ನಾಹಂ ನಾಹಂ ನೀನೆ ಓ ದೇವ-ಮಲ್ಲೇಶ
ಅಹಂ ಎಂಬುದು ಬರಿ ಭ್ರಮೆಯು || ೩೫

ಗುರುವಿನ ಹಸ್ತದಲಿ | ಮರಳಿ ನಾ ಜನಿಸಿದೆ |
ಅರಿಯೆನು ಏನು ನಾನೀನೆಂಬ-ಭೇದವ
ಹರ ಕಪಿಲಸಿದ್ಧಮಲ್ಲಿನಾಥ || ೩೬

ವರ ಪ್ರಭುದೇವರು | ಪರಮ ಹರುಷಗೈದು |
ಅರುಹಿದರಾಗ ಸಮುದಾಯಕೆ-ಭವ
ಪರಿಹರಿಸುವ ಪರಿಯನು || ೩೭

ಪರಿಣಾಮದಿಂ ಮನದ | ಪರಿಣಾಮವೆ ಚಲುವು |
ಶರಣಸಂಗವೆ ಬಲು ಚಲುವು-ಕಾಯಗೊಂಡು
ಅರಿವುದು ಚಂದ ಸಾವಿನ ಸಂಚ || ೩೮

ಗುರು ಚನ್ನಬಸವಂಗೆ | ಹರುಷದಿ ಅನುಭಾವ |
ವರ ಸಿದ್ಧರಾಮಯ್ಯ ಹೇಳೂತ-ನುಡಿದರು
ಪರಮ ಪ್ರಭುವಿಗೆ ನಮೋನಮೊ || ೩೯

ಅಂಗೈಯ ನೋಟದೊಳು | ಕಂಗಳು ನಟ್ಟಾಗ |
ಕಂಗಳ ತೇಜವು ಹಿಂಗದು-ಲೀಯವಾಯ್ತು
ಲಿಂಗಪ್ರಭೆಯೊಳಂಗ ಲಿಂಗವಾಗಿ || ೪೦

ಸಂಗ ನಿಸ್ಸಂಗದ| ಹಂಗುಹರಿದು ಮನದಿ|
ಇಂಗಿ ಹಿಂದುಮುಂದು ಭಾವಳಿದು-ಪ್ರಾಣ
ಸಂಗಮವು ನಿರಾಳದಿ ನಿಲಲು|| ೪೧

ಕೇಳಯ್ಯ ಸಿದ್ಧರಾಮ| ಪೇಳುವೆನನುಭಾವ|
ಬೆಳಗೂವ ಪ್ರಭುವಿನ ಪಾದಕ್ಕೆ-ನಮೋ ಎಂದು
ಅಳಿಯನು ನಾನು ಉಳಿದೆನಯ್ಯ|| ೪೨

ತನುವೆಂಬ ತೆರೆಯಿಲ್ಲ| ಪ್ರಾಣವು ಇಲ್ಲದಾಗಿ|
ಮನುವೆಂಬ ನೆನಹಿಲ್ಲ ಅನುಭಾವ-ಪ್ರತಿಇಲ್ಲ
ಘನ ಅರಿವೆಂಬ ಕುರುಹು ಇಲ್ಲ|| ೪೩

ಚನ್ನಬಸವನ ನಿಲವ| ಮನ್ನಿಸಿ ನುಡಿದನು|
ಘನ ಪ್ರಭುದೇವ ಶರಣರ-ಸಮ್ಮುಖದಿ
ಚನ್ನಬಸವನಿಗೆ ನಮೋ ಎಂದು|| ೪೪

ಗಗನ ಪವನದ ಮೇಲೆ| ತಾಗಿ ಉದಿಸಿದಭಾವ|
ಸಾಗಿ ಮದಗಜವ ನಿಲಿಸುವ-ಮಾವತಿಗ-
ನಾಗಿ ಬಂದಿಹನು ಚನ್ನಬಸವ|| ೪೫

ಅಷ್ಟದಳ ಕಮಲದಿ| ಸೃಷ್ಟಿಯಂಕುರ ಭಜನೆ|
ಮೆಟ್ಟಿ ನಿಂದಿಹ ಪರಮ ಯೋಗಿ-ಮಾಡಿದ
ಬಟ್ಟಬಯಲಿಗೆ ನೆಳಲು ಶೃಂಗಾರ|| ೪೬

ಗುರುವಿನ ಮಹತಿಯ| ಅರಿದ ಸಿದ್ಧರಾಮ|
ಹಿರಿಹಿರಿ ಹಿಗ್ಗೂತ ನುಡಿದನು-ನಿರ್ವಾಣ
ವರ ಚನ್ನಬಸವನೆ ಬಲ್ಲನು|| ೪೭

ವಾಣಿ ನಾಲ್ಕರ ಮೇಲೆ| ಮಾಣದೆ ನುಡಿವ ನಿ-|
ರ್ವಾಣಿಯ ನುಡಿಸ ಬಲ್ಲಾತ-ನನ್ನಯ್ಯ ನಿ-
ರ್ವಾಣ ಗುರು ಚನ್ನಬಸವಣ್ಣ|| ೪೮

ವರ್ಣ ವಿಳರೊಳು ಪರಿ-| ಪೂರ್ಣವಾಗಿಹ ಮಹಾ-|
ವರ್ಣವ ತನ್ಮಯ ಮಾಡುವಾತ-ಎನ್ನ ನಿ-
ರ್ವಾಣ ಕಾಣಿರಯ್ಯ ಚನ್ನಬಸವ|| ೪೯

ಸ್ಥಾನ ಹತ್ತರೊಳು| ಆನಂದ ಸಿಂಹಾಸನದ|
ನಾನಾ ಬೆಳಗಿನ ಬೀಜದ-ತಿರುಳನು
ಅನುಭವಿಸುವನು ಲಿಂಗದೊಳು || ೫೦

ಪ್ರಣವ ಹಸ್ತದಲಿ| ಜ್ಞಾನ ಚತುಷ್ಟಯದ|
ತಾಣ ಕೂಡಿದ ಕೀಲ ಬಲ್ಲಹ-ಲಿಂಗೈಕ್ಯ
ಪ್ರಾಣ ಗುರು ಚನ್ನಬಸವ ನಮೋ || ೫೧

ಬಸವ ನೀನೇ ಭಕ್ತಿ| ಎಸೆವ ಕ್ಷಮೆಯು ನೀನೆ|
ಬಸವಣ್ಣ ಗುರುರೂಪ ಚೆನ್ನಬಸವ-ನೀನು
ಪ್ರಸಾದ ರೂಪಾಗಿ ಬಂದಿರುವೆ || ೫೨

ಮುಕ್ಕಂಣ ಮಲ್ಲಿನಾಥಾ | ಲೋಕಕ್ಕೆ ಪ್ರಭುವಾಗಿ|
ಚಿಕದಂಡನಾಯಕ ದಂಡೇಶನ-ಪ್ರಸಾದ
ಒಕ್ಕೂದಕೊಂಡು ಜಂಗಮವಾದ || ೫೩

ಅರಿದರಿದು ವರ್ಮವ| ಗುರು ನಿಮ್ಮ ಕಾಣುವದು|
ಪರಮ ಭಕ್ತನುಳಿದು ಸುಲಭವೆ-ಲೋಕದಿ
ವರಲಿಂಗ ಜಂಗಮ ಗುರುಭಕ್ತಿ || ೫೪

ಲಿಂಗಭಕ್ತನು ಪ್ರಭುವು| ಜಂಗಮಕೆ ಬಸವಣ್ಣ|
ಸಂಗಾನುಭಾವಿ ಪ್ರಸಾದಕ್ಕೆ-ಚನ್ನಬಸವ
ಪುಂಗ ಶ್ರೀಮೂರ್ತಿಗೆ ನಮೋನಮೊ || ೫೫

ಗುರುವಿನ ಕರುಣದಿ| ಮರೆದೆ ಜಡತನುವನು|
ಗುರು ಕೃಪೆಯಿಂದ ಮಲಮೂರು-ಕೊಳೆಯ
ಗುರುವೆ ನಿಮ್ಮಿಂದ ತೊಳೆದೆನು || ೫೬

ಗುರುವಿನ ಕರುಣೆಯ| ವರದೀಕ್ಷಾತ್ರಯದಿಂದ|
ಪರಮಾನುಭಾವಿ ಆದೇನೊ-ಅಂತೆನು
ವರ ಸಿದ್ಧ ಪ್ರಸಿದ್ಧ ಪ್ರಮಾಣವ || ೫೭

ಸನ್ನುತ ಗುರುದೇವ| ತನ್ನಂತೆ ಮಾಡಿದನು|
ತನುವಿಗೆ ಲಿಂಗದೀಕ್ಷೆಯ-ಮಾಡೆನ್ನ
ಜ್ಞಾನಕ್ಕೆ ಸ್ವಾನುಭಾವದ ದೀಕ್ಷೆ|| ೫೮

ಎನ್ನ ತನು ಮನ ಧನವ| ಭಿನ್ನವಿಲ್ಲದೆ ಮಾಡಿ|
ಎನಗೆ ಜಂಗಮ ದೀಕ್ಷೆಯ-ಮಾಡಿದನು
ಎನ್ನ ಸರ್ವಾಂಗ ವಿಶ್ರಾಮವ|| ೫೯

ಶುದ್ಧಾದ ಮಂಟಪ| ತಿದ್ದಿ ಮಾಡಿದಿಯಾಗ|
ಇದ್ದು ಕೊಳ್ಳಲು ಸ್ಥಳವಾಗಿ-ದೇವನೆ
ಹೊದ್ದಿದ ಲೋಕಕ್ಕೆ ಹೊರಗಾದೆ|| ೬೦

ಕೇಳಾ ಜನನ ಮರಣ| ಪ್ರಳಯಕ್ಕೆ ಹೊರಗಾದೆ|
ಬಲ್ಲಹ ಸದ್ಗುರು ಎನ್ನ ಭಾವದ-ಬೇರು
ಇಲ್ಲದಂತೆ ಮಾಡಿದ ಚನ್ನಬಸವ|| ೬೧

ಭವಪಾಶ ಬಿಡಿಸೂತ| ಅನ್ವಯ ಸರ್ವಾಂಗದಿ|
ಶವೆ ಭಕ್ತಿ ಮುಕ್ತಿ ಫಲದಾಯಕ-ಶ್ರೀ ಗುರು
ದೇವ ನಮ್ಮ ಸಂಗನಬಸವಂಣ|| ೬೨

ಕಪಿಲಸಿದ್ಧಮಲ್ಲಯ್ಯ| ಉಪಮಾತೀತನು ನೀನು|
ಕೃಪೆಗೈದು ಪ್ರಭುವಾದಿ ಶರಣರನು-ತೋರಿದಿ
ರೂಪತಾಳಿ ಚನ್ನಬಸವಂಣನ|| ೬೩

ಬಾರೆಂದನು ಪ್ರಭುದೇವ| ಅರುಹಲು ಮಂತ್ರಗೌಪ್ಯ|
ಪರಮ ಶಿವಯೋಗಿ ಅರಿಯಯ್ಯ-ಸಿದ್ಧರಾಮ
ಅರಿತ ಅಷ್ಟಾಂಗಯೋಗದಾಚೆಯ|| ೬೪

ರಾಮ ಕೇಳಯ್ಯ ಧ್ಯಾನ| ಸೋಮ ಕೇಳನುಭಾವ|
ಪ್ರೇಮದಿ ಕೇಳಾನಂದ ನಿಂದ-ನಿಜದ
ಸಮಾಧಿಯೋಗದ ಸಿದ್ಧರಾಮ|| ೬೫

ಲಿಂಗದ ಚಿತ್ಕಳೆಯ| ಅಂಗದೊಳಗೆ ಧರಿಸೆ|
ಸಂಗ ಸಮರಸದ ಸಕೀಲ-ತಿಳಿಸುವೆ
ಭಂಗ ಬಾರದಂತೆ ಸಾಧಿಪುದು|| ೬೬

ಕಮಲ ಎಂಟೆಸಳದ| ಹೊಸ ಬ್ರಹ್ಮಪುರದೊಳಗೆ|
ರಾಮನೆ ಅಲ್ಲೆಂಟು ಬೀದಿಯಲಿ-ಎಂಟಾನೆ
ನೇಮದಿ ಜಯಸಿ ದಾಟುವದು|| ೬೭

ಅಷ್ಟಾಂಗಯೋಗದಲಿ| ನಷ್ಟಾಗವು ಮದಗಳು|
ಕಷ್ಟ ಸಂಸಾರ ಸಾಗರವ-ದಾಟಲು
ಶ್ರೇಷ್ಠ ಶಿವಯೋಗ ಅರಿಯುವದು || ೬೮

ಹತ್ತು ವಾಹನದಿಂದ| ಸತ್ತು ಹುಟ್ಟುವ ಲೋಕ|
ಘುತ್ತೆಂದು ಅರವತ್ತಾರು ಕೋಟಿ-ಅಸುರರು
ಮುತ್ತಿಹರು ಈರೇಳು ಭವನವ|| ೬೯

ಅಸುರರ ಪಡೆಗಳ| ವಸುವಳಿದು ಸಂತೈಸಿ|
ಹಸಮಾಡಿಹನು ಚನ್ನಬಸವ-ಸಿದ್ಧರಾಮ
ಸಸಿಯ ಸಲುವಯ್ಯ ಅನುದಿನ|| ೭೦

ಐದುಮುಖ ಐದುಕಳೆ| ಐದು ಸಮರಸದಲ್ಲಿ|
ನಾದಬಿಂದುವಿನಲ್ಲಿ ಕಳೆ ಶಿವ-ಕಳೆಯೊಳು
ಒಂದಾದನು ಪರಶಿವ ತಾನೆತಾನು || ೭೧

ಐದು ಅರಕ್ಷರದ| ಅದೃಷ್ಟ ಮಣಿಫಳದ|
ಭೇದ್ಯಭೇದಕನಪ್ಪ ನಿಜವಹುದು–ನೋಡಾ
ಒಂದರೊಳು ಶಿವತತ್ವವೆರಾಡಾದುದು || ೭೨

ಆಧಾರವನು ಬಲಸಿ| ಊರ್ಧ್ವಮುಖದಲಿ ನಿಂದು|
ಮೇದಿನಿ ಕಳೆ ಮೊಳೆ ಒಂದೇ-ಮಾಡೂತ
ಹೊಂದಬೇಕು ಅಂಗಲಿಂಗದೊಳು || ೭೩

ಭೇದಾದಿ ಭೇದದ| ಆದಿ ಪ್ರಣಮವ ತಿಳಿದು|
ನಾದ ಬೆಳಗಿನ ಕಳೆಗಳ-ನೋಡೂತ
ಸಾಧಿಸಿದೆ ಪರಮ ಶಿವಯೋಗವ || ೭೪

ಸರ್ಪನ ಹೆಡೆ ಮೇಲೆ| ಇರ್ಪ ಲೋಕದ ಹುಟ್ಟು|
ಇಪ್ಪತ್ತೈದು ಗ್ರಾಮ ಬೆಳಗುವದು-ಈ ಮಾತು
ತಪ್ಪದಲನುಭಾವಿ ಅರಿಯುವುದು || ೭೫

ಉಪ್ಪರಿಗೆ ಉರಿಮೇಲೆ| ಚಪ್ಪರವ ಮೆಟ್ಟಿ ನಿಲೆ|
ತಪ್ಪದುದು ಫಣಿ ಪರವಾದ-ಘನವು
ಅಪ್ಪ ಸಿದ್ಧರಾಮ ನಿಜದ ನಿಲವು || ೭೬

ಉರಿಯ ಬೊಂಬೆಯ ಮಾಡಿ | ಸಿರಿಯ ಸೀರೆಯನುಡಿಸಿ |
ಪರಿಪರಿಯ ಕೇರಿ ಕೇರಿಯಲ್ಲ-ಸುಳಿದಾಡಿ
ಆರರಲ್ಲಿ ಆರು ಲಿಂಗವಾಗಿ || ೭೭

ಉರಿಯ ಬೊಂಬೆಯ ನೆರೆದು | ಸಿರಿಯ ಸೀರೆಯ ಸೆಳೆದು |
ಪರಮ ಪರಿಣಾಮಿ ನೀನಾಗು-ಸಿದ್ಧರಾಮ
ಬರಿ ಕಾಯವಾಗಿ ಬಳಲದಿರು || ೭೮

ಎಂಟು ಕೊಳಗಳ ಪೆಟ್ಟಿ | ಮೆಟ್ಟಿ ಸಿದ್ಧಿಸಬೇಕು |
ಬಟ್ಟಬಯಲಿನ ಆ ಘಟ್ಟ-ಕಂಡುಂಡು
ನೆಟ್ಟನೆ ಶಿವಯೋಗ ಸಾಧಿಪುದು || ೭೯

ದೃಷ್ಟಿಸುತ ನೆಟ್ಟನೆ | ಅಷ್ಟತನು ದೃಷ್ಟಿಗೆಟ್ಟ |
ಶ್ರೇಷ್ಠ ಶಿವತತ್ವ ಸ್ವರೂಪದ-ಶರಣನು
ಷಷ್ಟದಳ ಪೀಠವ ಮೆಟ್ಟಿ ನಿಂದ || ೮೦

ನಿಟಲ ಭ್ರೂಮಧ್ಯದ | ಸ್ಪಟಿಕವರ್ಣದ ಜ್ಯೋತಿ |
ಘಟದೊಳು ತಾನೆ ತೊಳಗೂತ-ಬೆಳಗುವದು
ದಿಟಯೋಗಿಯ ಸರ್ವಾಂಗದೊಳು || ೮೧

ವಟವೃಕ್ಷದ ಕೆಳಗೆ | ದಟ್ಟಾದ ಲೋಕಂಗಳು |
ಘಟಕೆಯ ನುಂಗಿದ ಸಿದ್ಧನಂತೆ-ಬೊಮ್ಮದಲಿ
ಮಾಟಳಿದು ಕೂಟದಿ ವಿರಮಿಸು || ೮೨

ಆಕಾಶದ ಮೇಲೊಂದು | ಲೋಕಿಸಿದೆ ಅರಿದ ತಲೆ |
ಬೇಕು ಬೇಡೆನ್ನದೆ ಸಾಕೆನ್ನದೆ-ಮಾಯೆಯು
ಮೂಕಾಗಿ ಅಡಗಿತ್ತು ಶಿವತತ್ವದಿ || ೮೩

ಲೋಕಾದಿ ಲೋಕದೊಳು | ಏಕೊಭರಿತನಾಗಿ |
ಸಾಕಾರವಡಗಿದ ಶಿವಯೋಗಿಯ-ನಿಲವ
ಲೋಕದ ಮನುಜರು ಅರಿಯರು || ೮೪

ನೂರು ದಳಗಳಲ್ಲಿ | ನೂರು ಅಕ್ಷರದಿರವು |
ನೂರಾರು ಸಾಸಿರದಳಗಳಲಿ-ಹೊಳೆವುದು
ನೂರ್ಕೋಟಿ ಸೋಮ ಸೂರ್ಯ ಬೆಳಗು || ೮೫

ನೂರು ದಳಗಳ ಮೆಟ್ಟಿ| ಹರಿದು ಪ್ರಾಣದಿ ಕರಣ|
ಮೀರಿದ ಮಣಿಮಂಟಪದೊಳು-ನಿಂದೆನು
ಬೆರೆದಿಹ ನಿಃಕಲ ಲಿಂಗದೊಳು || ೮೬

ಸತ್ವ ರಜ ತಮಗುಣ| ಹತಮಾಡಿ ಸುಟ್ಟುರುಹಿ|
ಕಿತ್ತೆಸೆದು ಹದಿನಾಲ್ಕು ಸಾವಿರವ-ಸಿದ್ಧರಾಮ
ಸತ್‌ಕ್ರಿಯೆ ಜ್ಞಾನದಲಿ ನಲಿಯುವುದು || ೮೭

ಈರೇಳು ಸಾಗರದಿ| ಮೆರೆವ ಮಾಮರಗಳ|
ಮೆರೆಯಿಲ್ಲದಪ್ಪ ಸೋಜಿಗವ-ನೋಡುವದು
ಹೇ ರಾಮ ನಿಶ್ಶಬ್ದ ಆ ಬೊಮ್ಮವು || ೮೮

ಹೃತ್ಕಮಲ ಕರ್ಣಿಕದಿ| ಉದಿಸಿ ಹನ್ನೆರಡೆಸಳು|
ಅಧೋಮುಖವೆಂಟು ಊರ್ಧ್ವದ-ನಾಲ್ಕರಲಿ
ಚಿದ್‌ಘನ ಶಿವ ಜೀವರಿರುವರು || ೮೯

ಜೀವ ಪರಮರ ಭೇದ| ಭಾವವ ಅಳಿಯಯ್ಯ|
ಜೀವನ ಸಂಚಲ ಕಿತ್ತೊಗೆದು-ಸಿದ್ಧರಾಮ
ಶಿವಯೋಗದ ಕೀಲ ತಿಳಿಯುವುದು || ೯೦

ಅಂಗಕಳೆ ಲಿಂಗದಲಿ| ಲಿಂಗಕಳೆ ಅಂಗದಲಿ|
ಅಂಗ ಲಿಂಗವೆಂಬ ಉಭಯವ-ಹರಿದೊಗೆದು
ಲಿಂಗಚಿದ್ಬೆಳಗೆಂದು ಅರಿಯುವುದು || ೯೧

ಮಂಗಳ ಮಹಾಘನ| ಲಿಂಗಬೆಳಗಿನ ಬೆಳಗು|
ಕಂಗಳೆ ಪ್ರಾಣವು ಸಿದ್ಧರಾಮ-ನೀ ಪ್ರಾಣ-
ಲಿಂಗಿಯಾಗಿ ನಲಿಯಬೇಕಯ್ಯ || ೯೨

ನಿತ್ಯ ನಿಜವಪ್ಪುದು| ನಿತ್ಯ ಬೆಳಗಿನ ಬೆಳಗು|
ಮುತ್ತು ಮಾಣಿಕ ನವರತ್ನವ-ಕಂಡು
ನಿತ್ಯ ನಿಜಸುಖದೊಳು ರಮಿಸುವೆನು || ೯೩

ಐದು ಮುಖಗಳಿಂದ| ಐದು ತತ್ವ ಇಪ್ಪ-|
ತ್ತೈದು ತತ್ವ ಅರಿಯಬೇಕು-ಅಂಗವೆ
ಐದಕ್ಷರದ ಮಂತ್ರವಾಗೆ || ೯೪

ಪಂಚವಿಂಶತಿ ತತ್ವ| ವಂಚನೆ ಹರಿಸುತ|
ಸಂಚಲವ ನಿಲಿಸುವನು-ಸಿದ್ಧರಾಮ
ಶರಣನ ಭೌತಿಕದೇಹ ಲಿಂಗವಾಗಿ|| ೯೫

ತನು ಇಷ್ಟಲಿಂಗಕ್ಕೆ| ಮನ ಪ್ರಾಣಲಿಂಗಕ್ಕೆ|
ತನ್ನಾತ್ಮ ಭಾವಲಿಂಗಕ್ಕೆ-ಮುಖವಾಗಿ
ಸನ್ನುತ ಪ್ರಸಾದ ಸೇವಿಪುದು|| ೯೬

ಮೂರು ವಿಧದ ಮುಖ| ಮೂರು ವಿಧದ ತಾಣ|
ಮೂರು ಕೋಣೆಯ ಕೋಣೆಯಲಿ-ಮಾಡುವದು
ಮೂರು ವಿಧದ ಲಿಂಗ ಪೂಜೆಯ|| ೯೭

ಮೂರು ಲಿಂಗ ಪೂಜೆ| ಮೂರು ವರ ಪ್ರಸಾದ|
ಮೂರುವಿಧದ ಪರಿಣಾಮಿ-ತಾನಾದ
ಶರಣನು ನೋಡಾ ಸಿದ್ಧರಾಮ|| ೯೮

ಆರು ಸ್ಥಲದ ಮಹಾ| ವರ ಲಿಂಗ ಸಂಬಂಧ|
ಮೀರಿದ ಶಿವಸುಖದನುಭಾವ-ನಿಜಭಾವ
ಧಾರಣಯೋಗದಿ ಅರಿಯುವುದು|| ೯೯

ಸಂಧಿ ೩೭

ಏಕರಸಮಯವಾಗಿ| ಏಕೋರಸ ಸಜ್ಜೀವ|
ಆಕಾರ ನಿರಾಕಾರ ಒಂದಾಗಿ-ನಿಶ್ಚಲ
ಸಾಕು ಬೇಕಾಚೆಯ ಬಯಲಾಗಿ|| ೧

ಭೇದವ ಮರೆಯುತ| ನದಿಗಳು ಬೆರೆವಂತೆ|
ಚಿದ್‌ವಿವೇಕ ಮುಖದಿ ಪರನಲ್ಲಿ-ಬೆರೆವರು
ಸದಮಲ ಪರಮಯೋಗೀಶ|| ೨

ಆರು ಬಣ್ಣದ ಭೂಮಿ| ಆರು ಬಣ್ಣದ ಬಿತ್ತು|
ಆರು ಬಣ್ಣದ ಮರವು ಅಂಕುರಿಸಿ-ತೋರಿತು
ಪರಶಿವ ತತ್ತ್ವದ ಲೀಲೆಯಲಿ|| ೩

ಆರಾರು ಹನ್ನೆರಡು| ಮರಗಳು ಪಲ್ಲವಿಸಿ|
ಸುರಿವವು ಅಮೃತ ಫಲರಸವು-ಅಖಂಡ
ಶರಣರ ಒಳಹೊರಗು ತೊಟ್ಟಿಕ್ಕಿ|| ೪

ಲಂಬಿಕಾ ಯೋಗದ | ದಂಭದಿ ನುಡಿ ಬೇಡ |
ತುಂಬಿತುಳುಕಬೇಕು ಸರ್ವಾಂಗ-ಮಾಲಿಂಗ
ಅಂಬುಧಿಯೊಳು ಮುಳುಗಿದಂತೆ || ೫

ಉದಯಾಸ್ತಮಾನಗಳ | ಬದುಕು ಸಾವಿನಾಚೆ |
ಸದಮಲ ಶಿವಯೋಗಿ ಅರಿಬೇಕು-ಸಿದ್ಧೇಶ
ಬೆಳಗಿನ ಬೆಳಗಿನಲಿ ನಲಿಬೇಕು || ೬

ಫಲಪದವ ನೆಲಕೊತ್ತಿ | ಮಲಮೂರು ನಿಟ್ಟುರುಹಿ |
ಮೂಲರಿತ ನಿಜದ ನಿರ್ವಯಲ-ಚಿದ್ರೂಪ
ಸಲೆ ಚಿನುಮಯ ಚಿತ್ಪ್ರಕಾಶ || ೭

ಶಿವನೇ ತಾನೆಂಬುವ | ಅವಿನಯ ತಾನಡಗಿ |
ಭವದಾಟಿ ಆನಂದಸಾಗರದಿ-ಮುಳುಗುವನು
ಅವಿರಳ ಸಮಾಧಿಯೋಗದಲಿ || ೮

ಹಟಯೋಗ ಲಯಯೋಗ | ನಿಟಿಲ ಮಧ್ಯದಿ ಹುಡುಕಿ |
ಮಟಮಟನೆ ಲಕ್ಷಿಸುವ ಯೋಗಿಯು-ಮಾಯೆಯ
ಅಟಮಟದಿ ಭಿನ್ನ ಜ್ಞಾನಿಯು || ೯

ಚಲನ ನಿಶ್ಚಲನಕ್ಕೆ | ಚಲನ ನಿಶ್ಚಲವಾಗಿ |
ಸಲೆ ಘನ ಕರಘನ ನಿರ್ಗಮನ-ಶಿವಯೋಗಿ
ನಿಲವಿನಾಚೆ ತಾನು ಬಯಲಾಗಿ || ೧೦

ಘನ ಸ್ನೇಹವನು ದಾಟಿ | ತಾನಾದ ಶರಣನು |
ತಾನು ನೀನೆಂಬ ಭೇದವ-ಬೀಸಾಡಿ
ಘನಮನವನು ದಾಟಿ ಪರನಾದ || ೧೧

ಕಾಲು ಇಲ್ಲದ ಚಿಗರಿ | ಹಲವು ದ್ವೀಪವ ತಿರುಗಿ |
ಸಲೆ ವೆಜ್ಜವಿಲ್ಲದ ಮಣಿಕಂಡು-ಅವಿರಳ
ನಿಲುಕದ ಬೆಳಗಿನೊಳು ಬೆಳಗೀತು || ೧೨

ಹೆಜ್ಜೆ ಇಲ್ಲದ ಹುಗುವು | ಸಜ್ಜಾಗಿ ಮೂಜಗದಿ |
ಗೆಜ್ಜೆ ಗಿಲುಗಿಲು ನಲಿದಾಡಿ-ನಿಸ್ಸೀಮ
ಪ್ರಜ್ವಲ ಬೆಳಗಿನಲಿ ಬೆಳಗೀತು || ೧೩

ತುಟ್ಟತುದಿಯ ಕೊನೆಯ | ಬಟ್ಟಬಯಲಿನ ಮೊನೆಯು |
ಮುಟ್ಟಲು ಬಾರದ ಸಿರಿ ಘನ-ಚಿನುಮಯ
ದಿಟ್ಟಯಿಟ್ಟು ನೋಡಿ ತಣಿಬೇಕು ‖ ೧೪

ಸೋಽಹಂ ಸೋಽಹಂ ಎಂಬ | ಅಹಮಿಕೆಯು ಕಳೆಬೇಕು |
ಬ್ರಹ್ಮವು ತಾನೆಂಬುದು ಅಳಿಬೇಕು-ಸೊಮ್ಮು
ಸಹಜಯೋಗದಿ ಬೆರೆದು ಮರಿಬೇಕು ‖ ೧೫

ಬೊಮ್ಮವು ನಾನೆಂಬ | ಹಮ್ಮು ಬಿಮ್ಮುಗಳಿಂದ |
ಕೆಮ್ಮನೆ ಬೊಮ್ಮ ತಾನೆನ್ನುವರು-ಲೋಕರು
ಹಮ್ಮ ಬಿಮ್ಮಿನ ಭ್ರಮಿತರು ‖ ೧೬

ತನುವಿನೊಳಗಿರುವ | ತಾಣವ ಗುರುತಿಸಿ |
ಮನದ ಘನಸೊಲ್ಲವನರಿಯುತ-ಮನವಳಿದು
ಘನತರ ಬಯಲೊಳು ಬೆರೆಯುವುದು ‖ ೧೭

ನೋಟ ಸಮರಸವಾಗಿ | ಕೂಟ ನಿಬ್ಬೆರಗಾಗಿ |
ನೋಟ ಕೂಟಗಳೆಂಬ ಭೇದಗಳ-ಅಳಿಯುತ
ದಾಟ ದಿಟದ ಬಯಲ ನಡೆಯುತ ‖ ೧೮

ದಾಟೂತ ಸಾಕಾರ | ದಿಟ ಶಿವಯೋಗಿಯು |
ಮಾಟ-ಕೂಟಗಳಾಚೆ ಬೆರಿಬೇಕು-ಸಿದ್ಧೇಶ
ಕೂಟದ ಕಡಲೊಳು ಕರಗೂತ ‖ ೧೯

ಹಾಳ ಮೇಲಣ ಮಣಿ | ಆಳವಲ್ಲ ಕಾಣುವುದು |
ಪೌಳಿ ಪೌಳಿಗಳಲ್ಲಿ ಹುಡುಕೂತ-ಶ್ರೀ ಚಂದ್ರ-
ಮೌಳಿಯ ಕಳೆ ಕಂಡೆನೆನ್ನುವರು ‖ ೨೦

ಮೇಲುಗಿರಿ ಶಿಖರವ | ಲೀಲೆಯಲಿ ಹೊಗುವುದು |
ನಿಲುಕದ ಕದಳಿಬನ ಕಾಣುವುದು-ಸಿದ್ಧೇಶ
ಒಲವಿನ ಶಿವರೂಪ ತೊಳಗುವುದು ‖ ೨೧

ಸ್ವಾನುಭಾವದಿಂದ | ತಾನರಿದು ತನ್ನೊಳಗೆ |
ಜ್ಞಾನಭಿನ್ನರಹಿತ ಪಡೆಯುವುದು-ಲಿಂಗೈಕ್ಯ
ನೀನೆಂದರಿಯುತ ಸಾಧಿಪುದು ‖ ೨೨

ಖೇಚರತ್ವದ ನಿಲವ | ಭೂಚರರರಿವರೆ |
ವಾಚಾಳಿಗಳ ಮಾತು ಹೊಲ್ಲದು-ಮನದೊಳು
ರೇಚಕವಳಿಯದೆ ಹೊಳೆಯದು || ೨೩

ಆಚಾರದನುಭಾವ | ಗೋಚರಿಸಿ ಭಕ್ತಿನೆಲೆ |
ಸೂಚಿತವಹುದು ಪರಮಪದ-ರಾಮಯ್ಯ
ತೋಚಿತು ನಿಜಸುಖ ನಿಬ್ಬೆರಗು || ೨೪

ಬ್ರಹ್ಮರಂಧ್ರದ ಕೊನೆಯ | ಸಮ್ಯಕ್‌ಜ್ಞಾನದರಿವು |
ನಿರ್ಮಲ ಶಿವಯೋಗಿಯೆ ಬಲ್ಲ-ನಿರ್ದೇಹಿ
ಮರ್ಮ ಶಿವತತ್ತ್ವವನರಿವರು || ೨೫

ಮರ್ಮವ ನೀ ತಿಳಿಯೊ | ನಿರ್ಮಳ ನಿಶ್ಯಾಂಗನೆ |
ಕರ್ಮಭೂಭಾರಿಗಳ ಅಳವಲ್ಲ-ಸಿದ್ಧೇಶ
ಕರ್ಮ ಸೀಮೆಯದಾಟು ಶಿವಯೋಗಿ || ೨೬

ಭಾವಯೋಗದಿಂದ | ಶಿವತೇಜ ತಾನಾಗಿ |
ಭವಬಂಧಗಳ ಸುಟ್ಟುರುಹಿ ಅಖಂಡ
ನವಲಿಂಗ ಪರಿಪೂರ್ಣನಾಗುವುದು || ೨೭

ಮುಖಕಮಲ ಶಿಖರದ | ಸುಖಪೀಠದಗ್ರದಲಿ |
ಮಕರ ತೋರಣವೆಡಬಲದಲ್ಲಿ-ಅಣಿಯಾಗಿ
ಸಕಲ ನಿಃಕಲನಾಗಿ ರಾರಾಜಿಸು || ೨೮

ಸಕಲ ಗಣತಿಂಥಿಣಿಯು | ಬಕುತೀಲಿ ಜಯವೆಂದು |
ಅಕಲಂಕ ಗುರುಕರುಣದಲಿ ಮಿಂದ-ಸಿದ್ಧೇಶ
ನಿಖಿಲಾಂಕ ಶಿವಯೋಗಿ ಜಯಜಯ || ೨೯

ಅಳಿದು ಸೋಹಂಭಾವ- | ವಳಿದು ಶಿವತತ್ತ್ವದಿ |
ತಿಳಿದು ದಾಸೋಹಂಭಾವವದು-ಸಿದ್ಧೇಶ
ಬೆಳಗಿಹನು ಶಿವಯೋಗದೊಳು || ೩೦

ಶರಣ ಸರ್ವಾಂಗದಿ | ಅರುಣೋದಯವಾಯಿತು |
ಕಿರಣ ಶಿವಸಂಪದ ಬೆಳಗೀತು-ಸಿದ್ಧೇಶನ
ಕರಣಗಳು ತೊಳಗಿದವು ಮಾಬೆಳಗು || ೩೧

ಇಲ್ಲೀಗೆ ಶಿವಶಿವ| ಇಲ್ಲೀಗೆ ಹರಹರ|
ಬಲ್ಲಶಿವಯೋಗಿಯ ಪಾದಕ್ಕೆ-ಶರಣೆಂದು
ಅಲ್ಲಮನ ಬೋಧೆಯ ಮುಗಿಸೂವೆ || ೩೨

ಬಾ ಸಿದ್ಧರಾಮಯ್ಯ| ಸೋಸಿದ ಬಗೆಯಿಂದ |
ಲೇಸಿನ ಹಾದೀಯ ತೋರಿಸುವ-ಶ್ರೀ ಚನ್ನ-
ಬಸವೇಶ ಷಟಸ್ಥಲ ಸುಜ್ಞಾನಿ || ೩೩

ಆರುಸ್ಥಲದಿ ಲಿಂಗ| ಆರನು ಕಂಡರಿದು |
ಸಾಳುವ ಹಿರಿಮೆಯ ಬದುಕಿನೊಳು-ಚೆನ್ನಣ್ಣ
ತೋರೂವ ನಿಲವಿನ ಮರ್ಮವನು || ೩೪

ಚೆನ್ನಬಸವನು ಬಂದು| ಸನ್ನುತ ಪ್ರಭುವಿಗೆ|
ಮನ್ನಣೆಯನು ನೀಡಿ ಬಾಗುತ-ವಿನಯ ಸಂ-
ಪನ್ನಶೀಲ ಬೋಧೆಗನುವಾಗೆ || ೩೫

ವರ ಸಿದ್ಧರಾಮನ| ಕರಪಿಡಿದು ಕರೆತಂದು |
ಉರಿ ಕರ್ಪೂರಗಳ ಬೆರಸಿದಂತೆ-ಪ್ರಭುದೇವ
ಉಳುತರ ಹರುಷದಿ ನಿಂದಿರಲು || ೩೬

ಹೊರಗಿನ ಕಂಗಳ| ಸರಸದಿ ಮುಚ್ಚುತ |
ತೆರೆದಂತರಂಗದ ಕಂಗಳು-ಚೆನ್ನಣ್ಣ
ಗುರುವಿನ ಸ್ಮರಣೆಯ ಮಾಡಿದನು || ೩೭

ಶ್ರೀಗುರುವೆ ಶಿವಸುಖದ| ಆಗರವೆ ಪರತರದ |
ಸಾಗರವೇ ನಿಜಾನಂದದ-ಅವಿನತ
ರಾಗದಿಂದಾನು ಭಜಿಸುವೆ || ೩೮

ಅಜ್ಞಾನ ಕತ್ತಲೆಗೆ| ಸುಜ್ಞಾನವೆ ದೀವಿಗೆ|
ಪ್ರಜ್ಞೆಯಾಚೆನರಿದ ಗುರುವಿಗೆ-ಸಹಜ ಶಿವ-
ಪ್ರಜ್ಞನಿಗೆ ಶಿರವಾಗಿ ನಮಿಸುವೆ || ೩೯

ಆಕಾರವೆ ಇರಲಿ ನಿ-| ರಾಕಾರವೆಲ್ಲವ|
ಏಕೋಭಾವದೊಳರಿದು ಅರ್ಚನೆ-ಆಕಾರ
ಮುಖ ಒಂದೆಸಕಲ ನಿಃಕಲವು || ೪೦

ಏಕೋಭಾವದ ನಿಷ್ಠೆ। ಲೋಕೇಶನಲಿ ನಿಂದು।
ಆಕಾರ ನಿರಾಕಾರ ತಾನೆ ತಾನು-ಸಿದ್ಧೇಶ
ಮುಕುರ ಬಿಂಬವು ಬೇರೆ ನೀ ಬೇರೆಯೆ॥ ೪೧

ತನು ಇಷ್ಟಲಿಂಗದಿ। ಮನ ಪ್ರಾಣಲಿಂಗದಿ।
ತನುಮಯನಾಗಿ ಬೆಂಬೇಕು-ಸಿದ್ಧೇಶ
ಘನದಲ್ಲಿ ತಾನೆಯುಂಬೇಕು॥ ೪೨

ಷಡುವಿಧ ಪೂಜೆಯ। ಮಾಡೂತ ಶರಣರು।
ನೋಡುನೋಡುತ ಲಿಂಗದಾಕಾರ-ತಾನಾಗಿ
ಕೂಡಿದರು ಒಲವೀನ ಲಿಂಗದಲಿ॥ ೪೩

ನಾದ ಬಿಂದು ಕಳೆ। ನಿಂದು ಶಿವಕಳೆಯೊಳು।
ಬಂದ ಕಾಯದ ಕಳವಳ ಕಳೆದು-ಶರಣರು
ನಾದ ಬಿಂದು ಕಳೆ ದಾಟಿದರು॥ ೪೪

ಯೋಗಯೋಗವೆಂದು। ಯೋಗಿ ಬಳಲುವುದೇಕೆ।
ಯುಗ ತಂತ್ರವನು ತಿಳಿಯುವುದು-ಇನ್ನು-ಹಟ-
ಯೋಗವ ಮರೆವುದು ದಿಟಯೋಗಿ॥ ೪೫

ಏಕಾಗ್ರದಲಿ ನೋಡಿ। ವಾಕ್ಯದ ಕಲೆವಿಡಿದು।
ಸಾಕು ಕರ್ಮಯೋಗ ಪಂಚಕವು-ಸಿದ್ಧೇಶ
ಏಕಾಗಿ ಲಿಂಗಾಂಗ ಬೆರಸುವುದು॥ ೪೬

ಮೂಲಸ್ಥಾನದ ಮಹಾ ದೇ-। ಗುಲದೊಳು ಲಿಂಗ।
ಸಲೆ ನಾಭಿಮಂಡಲಕಮಲದಿ-ಉದಯಿಸಿ
ಲೀಲೆಯಲಿ ನವಲಿಂಗ ತೊಳಗುವವು॥ ೪೭

ಮೇಲುಗಿರಿ ಶಿಖರದ। ಸಲೆ ಪಶ್ಚಿಮದ್ವಾರದಿ।
ನಿಲಲು ಪ್ರಾಣಲಿಂಗ ಪರಿಪೂರ್ಣ-ಓಂಕಾರ
ನೆಲಸಿದ ಘನಕೆ ಘನ ಕಾಣುವುವು॥ ೪೮

ಸೋಽಹಂಭಾವದ ಆಚೆ। ಅಹಂ ಮೇಲಣ ಮಂಡಲ।
ಕೋಽಹಂಭಾವವ ದಾಟಿ ನೋಡಲು-ಅಲ್ಲಿಯೆ
ಮಹಲಿಂಗ ತಾನೇ ಬೆಳಗುವನು॥ ೪೯

ಘನಕ್ಕೆ ಘನನಾದ। ಚಿನುಮಯ ಲಿಂಗನು।
ತಾನೇ ತನ್ನಿಂದಲೆ ಬೆಳಗುವನು-ಸಿದ್ಧೇಶ
ಚೆನ್ನಸಂಗಯ್ಯನಲ್ಲಿ ಬೆರೆಯುವನು॥ ೫೦

ಪ್ರಾಣ ಚೈತನ್ಯವು। ತಾನೇ ಸಮರಸವಾಗಿ।
ಪ್ರಾಣ ಲಿಂಗಮಯವಾಗುತ-ಶರಣ ಸಂ-
ಪೂರ್ಣಾನಂದದೊಳು ಬೆರೆಯುವನು॥ ೫೧

ಹೃದಯಪೀಠವು ಬಲಿದು। ಸದಮಲ ಬೆಳಗಿನಲಿ।
ಪದ ಫಲಗಳನು ಅತಿಗಳೆದು-ನಿಜದೊಳು
ಮುದದಲಿ ನಿಶ್ಚಲನಾಗಿಹನು॥ ೫೨

ಆಕಾರ ಓಂಕಾರ। ಸಾಕಾರವೆ ಸಮ್ಮತವು।
ಏಕಾಕ್ಷರ ಪೂಜೆ ಗೌಪ್ಯದಲಿ-ಅಖಂಡ
ಪ್ರಕಾಶದೊಳು ತೊಳಗುವನು॥ ೫೩

ಏಕವರ್ಣದ ಜಪವು। ಏಕಾಕ್ಷರ ಮಂತ್ರದೊಳು।
ಏಕರುದ್ರನಿಗೆ ನೆನೆಯುತ-ಶಿವಯೋಗಿ
ಮೂಕನಾಗಿ ಮುಗ್ಧ ಬೆರೆಯುವನು॥ ೫೪

ಲಿಂಗವೆ ತಾನಾಗಿ। ಲಿಂಗವ ನೆನೆಯುತ।
ಲಿಂಗದಿ ಮನವನು ಬೆರೆಸುತ-ಸಿದ್ಧೇಶ
ಲಿಂಗಾಂಗ ಕುರುಹುಗಳ ಮೀರುತ॥ ೫೫

ಪದ್ಮಪೀಠವು ಬಲಿದು। ಪದ್ಮ ನವ ಸೂತ್ರದಿ।
ಪದ್ಮಪುಷ್ಪವರಳಿ ನಲಿದೀತು-ಹೃತ್ಕಮಲ
ಸದಮಳ ಪರಿಮಳ ಬೀರುವುದು॥ ೫೬

ಸದಮಲ ಪರಿಮಳ। ಪದುಮ ಪುಷ್ಪವ ಕೊಯ್ದು।
ಪದುಮ ಲಿಂಗಪೂಜೆ ಉನ್ಮನಿಯ-ನಿಲವಿನಲಿ
ಚಿದ್‌ರೂಪ ಕರದೊಳು ನೆಲೆಸುವುದು॥ ೫೭

ಧ್ಯಾನ ಮೌನ ನಿಯಮ। ಸ್ವಾನುಭಾವದಿ ನಿತ್ಯ।
ಸನ್ನಿಹಿತನಾಗುತ ನಾಲ್ಕು ವಿಧ-ಪೂಜೆಯ
ಜ್ಞಾನಲಿಂಗಕ್ಕೆ ಮಾಡುವುದು॥ ೫೮

ಅಂಗ ಕ್ರೀ ಲಿಂಗದೊಳು। ಲಿಂಗ ಕ್ರೀ ಅಂಗದೊಳು।
ಲಿಂಗಾಂಗ ಭಿನ್ನತೆ ಅಳಿಯುತ-ಸರ್ವಾಂಗ
ಲಿಂಗರೂಪ ಶರಣ ತಾನಿಹನು॥ ೫೯

ಆರುವಿಧದ ಲಿಂಗ। ಆರು ಲಿಂಗದೊಳಡಗಿ।
ಮರೆದು ಕಾಯದ ಸರ್ವಭಾವ-ಶರಣನು
ಪರಮಲಿಂಗ ಸಂಗಿಯಾಗುವನು॥ ೬೦

ಜಾತಿ ನೀತಿಯ ತಿಳಿದು। ಪ್ರೇತ ಸೂತಕ ತೊಳೆದು।
ಜಾತಿ ನೀತಿಯ ಮೀರಿದಜಾತನು-ಪರಂ-
ಜ್ಯೋತಿಯಲಿ ತಾನು ಬಯಲಾಗಿ॥ ೬೧

ತೊಳತೊಳಗಿ ಬೆಳಗುವ। ಹೊಳೆವ ಚಿಜ್ಯೋತಿಯ।
ಒಳ ಹೊರಗೆ ತೋರುವುದು ಪ್ರಕಾಶ-ಅಜಾತ
ಕುಲವಳಿದ ಕೂಡಲಚೆನ್ನಸಂಗ॥ ೬೨

ಇಷ್ಟಲಿಂಗದ ಸೂತ್ರ। ನಿಷ್ಠೆಯಿಂದಲಿ ಬಲಿಸಿ।
ಷಟ್‌ಕರ್ಮಂಗಳ ಅಳಿಯುತ-ಸಿದ್ಧೇಶ
ಷಟ್‌ಸ್ಥಲ ಮರ್ಮವನರಿಯುವುದು॥ ೬೩

ಎಂಟೆಸಳ ಮಂಟಪದ। ಎಂಟು ಕೋಣೆಗಳೊಳಗೆ।
ಎಂಟು ಲಿಂಗದ ಪೂಜೆಯ-ನಡೆಯುವುದು
ಎಂಟು ವಿಧದ ಭಕ್ತಿ ಅರ್ಪಿಸುತ॥ ೬೪

ಅಷ್ಟಲಿಂಗಾರ್ಪಿತ। ದೃಷ್ಟ ಪ್ರಸಾದದಿ।
ನಿಷ್ಠೆಯಲಿ ನಿಲವನರಿಯಬೇಕು-ರಾಮಯ್ಯ
ಶ್ರೇಷ್ಠ ನಿರಂಜನ ಕಂಡರಿದು॥ ೬೫

ನವಸೂತ್ರ ನಗರಿಯ। ನವದ್ವಾರ ಬೀದಿಯಲ್ಲಿ।
ನವಶಾಳ ಜಾಗಿಲಿಗೆ ನವಕಳಸ-ಹೊಳೆವವು
ನವವಿಧ ಭಕ್ತಿಗಳ ಅರಿವಿನಲಿ॥ ೬೬

ನವಲಿಂಗ ಸ್ಥಾವರಕೆ। ನವಪೂಜೆ ನವಧೂಪ।
ನವದೀಪ ನವಮಂತ್ರ ನವಜಪವು-ಅರ್ಪಿತ
ನವಲಿಂಗಕ್ಕೆ ನಮೋ ನಮೋ ಎಂದು॥ ೬೭

ಆರು ನೆಲೆಮಂಟಪದ। ಮೂರು ಕೋಣೆಗಳೊಳು।
ಬೇರೊಂದು ತಾಣದೊಳು ಲಿಂಗವು-ನೆಲೆಸಿಹುದು
ಮೀರಿದ ನಿಃಕಲ ಪರತತ್ತ್ವವು॥ ೬೮

ಆರು ತಾಣಗಳಾಚೆ। ಮೂರು ಬಾಗಿಲ ಮುಚ್ಚಿ।
ಮೀರಿ ನೆಲಸೀದ ಮಹಾಘನ-ಲಿಂಗವು
ನಿರುಕಿಸಿ ನಿಷ್ಕಲದಿ ಕಂಡಿಹುದು॥ ೬೯

ಆಕಾಶ ಮೇಲಣದ। ಅಕಲಂಕ ತಾಣದಲಿ।
ಮೋಕ್ಷದಾಟಂಗಳ ದಾಟೇದ-ಮಹಮನೆ
ನಿಃಕಲ ಲಿಂಗಕ್ಕೆ ನೆಲೆಯಾಗುವದು॥ ೭೦

ಏಕಾಂತ ವಾಸದೊಳು। ಏಕೀಕರನ ಪೂಜೆ।
ಓಂಕಾರ ಮಂತ್ರದ ಗೌಪ್ಯದಲಿ-ಶರಣನು
ನಿಃಕಲ ಲಿಂಗದೊಳು ಬೆರೆಯುವನು॥ ೭೧

ಜಂತ್ರ ಸೂತ್ರದ ತೆರ ನಿ-। ರಂತರ ನಿಜವಿಡಿದು।
ಮಂತ್ರಬೋಧೆಯನು ಅರಿಯುತ-ಶಿವಯೋಗಿ
ಸಂತಸದಿ ನಿಶ್ಚಿಂತ ನಲಿಯುವನು॥ ೭೨

ಚಿಂತೆ ಕಂತೆಗಳಳಿದು। ಕಂತುಹರನರಿದನು ಮ-।
ಹಂತ ಕೂಡಲಚೆನ್ನಸಂಗನಂತೆ-ಶರಣ
ಅಂತರವಿಲ್ಲದೆ ಬೆರೆಯುವನು॥ ೭೩

ಪುಷ್ಪ ಪರಿಮಳ ನುಂಗಿ। ನಿಷ್ಪತ್ತಿ ಕರಿಗೊಂಡು।
ಕರ್ಪೂರನಪ್ಪಿದ ಉರಿಯಂತೆ-ನಾನಿಂದು
ಒಪ್ಪುಳ್ಳ ಲಿಂಗದೊಳು ಬಯಲಾದೆ॥ ೭೪

ಬಯಲು ಸೂರ್ಯನ ನುಂಗಿ। ಕಾಯನೆರಳನು ನುಂಗಿ।
ವಾಯುವನು ಬಿಸಿಲು ನುಂಗೀದಂತೆ-ಶರಣ
ಕಾಯವ ಬಯಲ ಮಾಡುವನು॥ ೭೫

ಮಳೆ ಮೋಡಗಳನೆಲ್ಲ। ಹೊಳೆವ ಮಿಂಚು ನುಂಗಿ।
ಥಳಥಳಿಪ ವಜ್ರ ತೇಜವನು-ನುಂಗುವ್ರೊಲು
ಬೆಳಗುವ ಲಿಂಗದೊಳು ಅಂಗವು॥ ೭೬

ಶಶಿ ಸಾಗರವ ನುಂಗಿ। ಶಿಶುವು ಗರ್ಭವ ನುಂಗಿ।
ಪಶು ಬಸವೇಶನ ನುಂಗಿದಂತೆ-ಶರಣನ
ಅಸು ಲಿಂಗದೊಳಗೆ ಬಯಲಾಗೆ॥ ೭೭

ಮಸೆದ ಸುರಗಿಯ ಮೊನೆಗೆ। ಆಸರವೆನಿತಿಲ್ಲ।
ಪಸರಿಸಿ ಲಿಂಗವ ಹೃದಯದಲಿ-ಬೆಳಗೂತ
ಹೆಸರು ಬೇರಿಟ್ಟು ಕರೆದಿಲ್ಲ॥ ೭೮

ಅಪ್ಪು ಅಗ್ನಿಯ ನುಂಗಿ। ಉಪ್ಪು ಉದಕವನುಂಗಿ।
ಹೆಪ್ಪು ತುಪ್ಪವನು ನುಂಗಿದಂತೆ-ಸಿದ್ಧೇಶ
ಒಪ್ಪುಳ್ಳ ಘನದಲ್ಲಿ ಬೆರೆಯಯ್ಯ॥ ೭೯

ಕಪ್ಪುಕಣ್ಣನೆ ನುಂಗಿ। ಒಪ್ಪು ಚಿತ್ರವ ನುಂಗಿ।
ಅಪ್ಪಿ ನಿಜಯೋಗಿ ಲಿಂಗವ-ಅಗಲದೆ
ಮುಪ್ಪುರಿ ಸುಟ್ಟು ಕಡೆಗಾದನು॥ ೮೦

ಕರಿ ಮೋಡಗಳು ಮುಸುಕಿ। ಅರುಣ ಕಿರಣವ ನುಂಗಿ।
ತೋರುವ ತೋರಿಕೆ ಮುಸುಕಿತ್ತು-ಈ ಜಗಕೆ
ಮರವೆ ಛಾಯೆಯಾಗಿ ನುಂಗಿತ್ತು॥ ೮೧

ಧ್ಯಾನ ಮೌನವ ನುಂಗಿ। ಮೌನ ಮುಗ್ಧವ ನುಂಗಿ।
ಅನ್ಯ ನಿಯಮಕ್ಕೆ ನಿತ್ಯವನೆ-ನುಂಗಿದೊಲು
ಅನ್ಯೋನ್ಯ ಲಿಂಗದಲ್ಲಿ ಬೆರೆಯುವುದು॥ ೮೨

ಕಾಮ ಕರಣವ ನುಂಗಿ। ನಾಮ ಸೀಮೆಯ ನುಂಗಿ।
ಸೋಮಧರ ಶರಣರ ಮನಸೀನ-ಕೊನೆಯೊಳು
ಆಸಮ ಸಂತಸದಲ್ಲಿ ನೆಲಸಿಹನು॥ ೮೩

ಬೆಳಗು ಒಳಗನೆ ನುಂಗಿ। ಒಳಗು ಬೆಳಗನೆ ನುಂಗಿ।
ಚಳಿ ಮೋಹರಮಂಜು ನುಂಗಿದೊಲು-ಶರಣನು
ಕಳೆಮೊಳೆಯೊಂದಾಗಿ ಬೆಳಗುವುದು॥ ೮೪

ಹೊಳೆವ ದೀಪವು ಬಯಲು। ಗಾಳಿ ನುಂಗಿದ ಹಾಂಗೆ।
ಕೇಳುವ ನುಡಿಗಳು ಗಗನದಲಿ-ಬೆರೆದಂತೆ
ಕಳೆಯಳಿದ ಕೂಡಲಚೆನ್ನಸಂಗ॥ ೮೫

ಗಗನದೊಳಗಿನ ಚಂದ್ರ। ಮುಗಿಲಿನೊಳಗಣ ಮಿಂಚು।
ಭುಗಭುಗಿಲೆನ್ನುವ ಸೂರ್ಯಪ್ರಭೆ-ಹೊಳೆವಂತೆ
ಅಗೋಚರ ಲಿಂಗಯ್ಯ ಬೆಳಗುವನು॥ ೮೬

ಸಂಚದೋವರಿಯೊಳಗೆ। ಪಂಚಸೂತ್ರದ ಮಿಂಚು।
ಕಂಚು ಮಿಂಚಿನ ಸಂಚಲವು-ಅಡಗಿತ್ತು
ಪಂಚಾಕ್ಷರಿ ಮಂತ್ರದಲಿ ತೊಳಗಿತ್ತು॥ ೮೭

ಪಂಚಸೂತ್ರವು ಮಿಂಚಿ। ಸಂಚದೋವರಿಗೊಂಡು।
ಪಂಚಮುಖ ಗುರುವಾದ ಶರಣನು-ತಾನು
ಪಂಚಪ್ರಾಣದ ಸಂಚ ಕಳೆಯುವನು॥ ೮೮

ಅಪ್ಪು ಅಂಬುಧಿ ನುಂಗಿ। ಚಿಪ್ಪುಮುತ್ತನು ನುಂಗಿ।
ಒಪ್ಪ ಮುಪ್ಪನ್ನು ನುಂಗುವಂತೆ-ಚಿಲ್ಲಿಂಗ
ಒಪ್ಪುವನು ಚಿತ್ರಭೆಯಂಗದೊಳು॥ ೮೯

ಸಿಪ್ಪಿ ಹಣ್ಣನು ನುಂಗಿ। ಇಪ್ಪಂತೆ ಶಿವಯೋಗಿ।
ಕಪ್ಪು ಕುರುಹಿನೊಳು ಬೆರೆದಂತೆ-ಸಿರಿಘನವು
ತಪ್ಪದದು ಪರತರಕೆ ಪರವಾಗಿ॥ ೯೦

ಅಗ್ನಿವಾಯುವ ನುಂಗಿ। ನುಂಗಿ ಸಹಜ ಸಂಜ್ಞೆ।
ನುಗ್ನೋಪ ತಾ ಮನವ ನುಂಗಿದಂತೆ-ಶರಣ ಸಂ-
ಲಗ್ನವಾಗಿಹನು ಲಿಂಗನಲಿ॥ ೯೧

ಅಗ್ನಿಯು ನುಂಗಿತ್ತು। ಯಾಗದ ದ್ರವ್ಯವ।
ಅಗ್ನಾನ ತಿಮಿರವ ನುಂಗಿತು-ಸೊನ್ನೆಯು
ಮಗ್ನನು ಶರಣನು ಪರತರದಿ॥ ೯೨

ಪರಿಮಳ ಪುಷ್ಪವ ನುಂಗಿ। ಪರಮ ಪರಿಣಾಮವ।
ಉರಿಯು ಕಪ್ಪುರವನು ನುಂಗಿದಂತೆ-ಶಿವಯೋಗಿ
ಕರಗಿ ನಿರಾಳನು ಬಯಲಿನೋಳು॥ ೯೩

ಕೊರಲಹಾರದ ಮಣಿಯು। ದಾರ ನುಂಗಿದ ಹಾಗೆ।
ಗುರು ಗೌಪ್ಯ ನುಂಗಿದ ಪರಿಯಂತೆ-ಶಿವಯೋಗಿ
ಬೇರಾಗದೆ ನವಲಿಂಗದಿ ಒಂದಾಗಿ॥ ೯೪

ಮಣಿಗಳ ಪವಣಿಸಿ। ಅಣಿ ಮಾಡಿದ ಹಾರವು।
ಗುಣ ಗಂಭೀರನು ಅರಿವನು-ಸೂತ್ರದಿ
ಪ್ರಾಣಲಿಂಗವ ಬೆರಸಿ ಬಯಲಾಗುವ॥ ೯೫

ನಿಲವು ನೆಳಲನು ನುಂಗಿ। ನೂಲು ಬಣ್ಣವ ನುಂಗಿ।
ಫಲವು ಪಕ್ವವ ತಾನೆ ನುಂಗಿದಂತೆ-ಶರಣನು
ಮಲನುರುಹಿ ಪ್ರಸಾದ ಬೆರೆಯುವನು॥ ೯೬

ಅಲೆಯುವ ದೀಪವ। ಸುಳಿವ ಗಾಳಿಯು ನುಂಗಿ।
ಚಲಿಸುವ ಶರಣನು ಪ್ರಣವದೊಳು-ಒಂದಾದ
ಕಳೆಗಳನರಿವನು ಚೆನ್ನಸಂಗ॥ ೯೭

ಚಂದ್ರ ಸೂರ್ಯರ ಕಾಂತಿ। ಸಾಂದ್ರಭವ ಭೇದದ।
ಬಂಧನಗಳ ಗೆಲಿದ ನಿಃಕಾಮಿ-ಶರಣನು
ಮಿಂದು ಲಿಂಗಾನಂದರಸದೊಳು॥ ೯೮

ಅಂಧಕಾರದ ಊರ। ಅಂದೊಂದು ನಟ್ಟನಡುವೆ।
ಅಂದಾದ ಚಂದಿರನ ಉದಯವು-ಕಂಡೆನು
ಒಂದಾದ ಅಮೃತಕರ ಹೊಳೆವೂದು॥ ೯೯

ಸಂಧಿ ೩೮

ಮಂದಮತಿಯ ಕಳಿ-। ಗುಂದಿದ ಕಂಗಳಲಿ।
ಚಂದಿರನ ಚಲುವಿಕಿ ಕಾಣದು-ಅದು ತನ್ನ
ಸುಂದರ ಪ್ರಭೆಯಲಿ ಬೆಳಗುವುದು ॥ ೧

ಮೇರುವಿನ ಊರಿನಲಿ। ಆರೈದು ನೋಡಲಿಕೆ।
ಭೇರಿನಾದದ ಕಾಂತಿ ಸುರಿಯೂತ-ಸುತ್ತೆಲ್ಲ
ಸಾರುವುದು ಪ್ರಣವದ ಘೋಷವನು ॥ ೨

ಊರಳಿದು ಉಲುವಡಗಿ। ಭೇರಿ ನಾದವು ನಿಲಲು।
ಯಾರು ಭೇದಿಸಿ ಕಾಣಲರಿಯರು-ಶಿವಯೋಗಿ
ತೋರ ಬಲ್ಲವ ಪರಮ ಪರಿಣಾಮು ॥ ೩

ಗಗನ ಮಂಡಲದೊಳು। ಸೊಗದ ಮಂಟಪದಲ್ಲಿ।
ಮುಗಿಲ ತುಂಬುತ ಮಿಕ್ಕಿಮೀರಿದ-ಮಿಂಚ ಶಿವ-
ಯೋಗಿ ಕಾಣುತ ನಲಿಯುವನು ॥ ೪

ಜಗದ ಜೀವರಿಗದು। ಸಿಗದು ನೋಡುವುದಕ್ಕೆ।
ಅಗೋಚರವಾದ ಚಿದ್‌ಬೆಳಗು-ಸಹಜದಲಿ
ಸೊಗಸ ಶಿವಯೋಗಿ ಕಾಣುವನು॥ ೫

ನಾಲ್ಕು ವೇದಗಳಿಂದ। ನಾಲ್ಕು ಯೋಗಗಳಿಂದ।
ನಾಲ್ಕು ತೆರದ ಮಂತ್ರಗಳಿಂದ-ನೋಡಲು
ಸಿಲುಕದೆ ಪರಶಿವ ಮೆರೆಯುವನು॥ ೬

ಅತಿಮೂಢ ಜನರೆಲ್ಲ। ಗತಿಗಾಣರು ಶಿವತತ್ತ್ವ।
ಸತಿಶರಣ ಲಿಂಗಪತಿ ಸಮರತಿಯ-ಬಲ್ಲಿದರು
ಪತಿ ಸಂಧಾನವ ಸಾಧಿಪರು॥ ೭

ಪರಮಶಿವೈಕ್ಯದ। ಶರಸಂಧಾನವನು।
ಕರದಿಷ್ಟಲಿಂಗದಿ ಸಾಧಿಸಿ-ಸುಖಿಯಾಗು
ಕ್ಷೀರದೊಳು ಕ್ಷೀರವು ಬೆರೆದಂತೆ॥ ೮

ಮಾತು ಮಥನವ ನುಂಗಿ। ನೀತಿ ನಿಜದಲಿ ನಿಂದು ।
ಭ್ರಾಂತಿ ಭ್ರಮೆಯೆಲ್ಲವು ಬರಿದಾಗಿ-ಮನವೆಲ್ಲ
ಸೋತು ಶಿವನಲ್ಲಿ ಲಯವಾಗಿ॥ ೯

ಹುರಿದ ಬೀಜದ ಹಾಗೆ। ಉರಿವ ಕಪ್ಪುರದಂತೆ।
ನೀರೊಳಗೆ ಬೆಂಕಿಯಿರುವಂತೆ-ಪರನನ್ನು
ಅರಿತು ಮರೆಯುವಲ್ಲಿ ಬೆರೆಯಯ್ಯ॥ ೧೦

ಓತು ನಿಬ್ಬೆರಗು ನಿ-। ರ್ಜಾತ ನಿರ್ವಯಲನು।
ಪ್ರೀತ ಕೂಡಲಸಂಗನ ಶರಣನು-ಅತಿಶಯದ
ಮಾತಳಿದ ಲಿಂಗೈಕ್ಯನು ನೋಡಾ॥ ೧೧

ಎಲೆಯು ಇಲ್ಲದ ಮರವು। ಫಲವಿಲ್ಲದಾ ಹಣ್ಣು ।
ಮೆಲಿಯದೆ ರುಚಿಯನ್ನು ಸವಿಸವಿದು-ಸುಖಿಸರು
ಮೇಲಗಿರಿಯ ನಮ್ಮ ಶರಣರು॥ ೧೨

ಸುಲಲಿತ ಸೂಕ್ಷ್ಮದ। ನಿಲವು ನಿಜದೊಳಡಗಿ।
ಉಲುಹಡಗಿ ಉನ್ಮನಿಸ್ಥಾನದಲಿ-ಚಿಲ್ಲಿಂಗ
ತೊಳಗುತ ಸಮರಸದಿ ಬೆಳಗುವನು॥ ೧೩

ನೆಸಹಳಿದು ಮನವಳಿದು। ತಾನೇ ತಾನಾದಲ್ಲಿ।
ಮನಮಾತಿನ ಕೈಯೊಳು ಸಿಗದಂತೆ-ತಾನಾದ
ಘನಲಿಂಗದೊಳು ನಿರ್ವಯಲ॥ ೧೪

ವಿಜ್ಞಾನ ಪ್ರಭೆಯಲ್ಲಿ। ಸುಜ್ಞಾನ ಘನವೆಳಗು।
ಪ್ರಜ್ಞೆಯ ಪ್ರಕಾಶ ಬೆಳಗುವುದು-ಯೋಗಿಯ
ಜಿಜ್ಞಾಸೆಗಳು ತಾವೆ ಅರಳುವುವು॥ ೧೫

ಅಜ್ಞಾನ ಮಂಜೀಗೆ। ಸುಜ್ಞಾನದಂಜನವು ಸ-।
ಮ್ಯಜ್ಞಾನಾಚರಣೆ ಕಂಡುಂಡು-ಸೌಮ್ಯದ
ಸಂಜ್ಞೆಯಲಿ ಕೂಡಿ ನಲಿದಾಡಿ॥ ೧೬

ಮರುಜೀವಣಿಯ ಹಣ್ಣು। ಕುರುಹಳಿದ ಬೀಜೊಂದು।
ಇರುಹು ನುಂಗಿದ್ದು ಕಂಡೇನು-ಸಿದ್ಧೇಶ
ವರ ಸ್ವಾನುಭಾವವನಳವಡಿಸಿ॥ ೧೭

ಸೆರಗ ಸೀಳಿದ ಅರುವೆ। ಬರಿಯ ಕುರುಹನೆ ಕಟ್ಟಿ।
ಬರಿದಾದ ಬರಿಮನ ಮರಗುವುದು-ಲಿಂಗದಿ
ಬೆರೆಯಲು ಕಾತರಗೊಳ್ಳುವುದು॥ ೧೮

ಆಗುಹೋಗನು ಹುರಿದು। ಮೂಗನಾಗುತ ತಾನು।
ಸಾಗರದ ಕೋಗಿಲೆಯ ನೀಗೂತ-ಲಿಂಗೋಪ-
ಭೋಗಿ ಶಿವಯೋಗಿ! ನಾನಾದೆ॥ ೧೯

ಮೋಘದೊಳಗೆ ಬಲಿದ। ಬಾಗಿಲ ಬೀಗವ ತೆರೆದು।
ಹೋಗಿ ಹೊಕ್ಕೆನು ಮಹಘನವ-ಲಿಂಗೆಂಬ
ಸಾಗರದಿ ಮುಳುಗಿ ಸುಖಿಸಿದೆನು॥ ೨೦

ಸೊಡರಿಲ್ಲದೆ ಬೆಳಗೂವ। ಕುಡಿವರೆದ ಪ್ರಭೆಯೊಳು।
ಹಿಡಿದ ಕರ್ಪೂರದ ಉರಿಯೊಳು-ಮರೆದೊರಗಿ
ಕೂಡುತ ಲಿಂಗಾಂಗ ಸಮನಿಸಿತು॥ ೨೧

ಗಡಣವಿಲ್ಲದ ಪ್ರಭೆಯು। ಕುಡಿಯ ಬೆಳಗಿನ ನಡುವೆ।
ನೋಡ ನೋಡುತ ನೋಟ ನಟ್ಟಿತು-ಬಯಲಾದ
ಹಿಡಿಹಿಡಿಯೆ ಕೂಡಲಚೆನ್ನಸಂಗ॥ ೨೨

ಅರುಹಲು ಚೆನಬಸವ। ಎರಗಿದನು ಪಾದಕ್ಕೆ।
ಗುರುವೆ ನಿನ್ನ ದಿವ್ಯ ಕರುಣದಿ-ಮಂತ್ರಗಳ-
ನರಿದೆನೆನ್ನುತ ಸಿದ್ಧರಾಮು॥ ೨೩

ನನ್ನ ಸಾವನು ನನ್ನ। ಕಣ್ಣಿಂದ ಕಂಡೇನು।
ಚೆನ್ನಬಸವಣ್ಣನ ಕೈಯೊಳಗೆ-ಹುಟ್ಟೊತ
ಚಿನ್ಮಯ ಲಿಂಗವನರಿತೇನು॥ ೨೪

ಸೋಽಹಂ ನೀನೆ ಗುರುವೆ। ಕೋಽಹಂ ನೀನೆ ಅಯ್ಯ।
ನಾಹಂ ನೀನೆ ಎನ್ನಗುರುದೇವಾ-ಕರುಣಾಳು
ಪಾಹಿಮಾಂ ಪತಿತ ಪಾವನನೆ॥ ೨೫

ಗುರುವೆ ಚೆನ್ನಬಸವ। ಹರ ಚೆನ್ನಬಸವಣ್ಣ।
ಪರಮ ಲಿಂಗ ಚೆನ್ನಬಸವೇಶ–ಇಹಪರ
ವರಬ್ರಹ್ಮ ಗುರುವೆ ಶರಣೆಂಬೆ॥ ೨೬

ಗುರುವೆ ಗುರುವೇ ನಿಜ-। ಗುರುವೇ ಸುಜ್ಞಾನವೆ।
ಗುರುವೆ ತವ ಚರಣಕೆ ಶರಣೆಂಬೆ-ಎನ್ನಯ್ಯ
ಗುರುವೆ ಸತ್ಪಥವಿತ್ತ ಚೆನ್ನಯ್ಯ॥ ೨೭

ಅನ್ಯವೆಂಬುದ ತನ್ನ। ಬಿನ್ನಾಣವಾಗಿರಿಸಿ।
ಅನ್ಯಕ್ಕೆ ಹೊದ್ದನ್ನೈ ಭಕ್ತಿಯಲಿ-ಶ್ರೀಗುರು
ಮನ್ನಣೆ ಪ್ರಸಾದ ಕರುಣಿಸಿದ॥ ೨೮

ಅನ್ಯಾಯ ಗುಣಗಳಲ್ಲಿ। ಮುನ್ನ ಬಿದ್ದರು ಕೆಲರು।
ಇನ್ನವರ ಗುಣಗಳ ಹೊದ್ದಲೀಯ–ಗುರುವೆ
ಚೆನ್ನಬಸವೇಶನೆ ಶರಣೆಂಬೆ॥ ೨೯

ನಡೆಯ ನುಡಿವ ಗುಣ। ಬಿಡದೆ ವಶಪಡಿಸೂತ।
ಬಿಡಬೇಡ ನನ್ನಯ ಕರವಿನ್ನು–ಹೇ ತಂದೆ
ಮೃಡರೂಪ ಚೆನ್ನಬಸವೇಶ॥ ೩೦

ಗುರುವೆ ಪರಮಾನಂದ। ಗುರುವೆ ಪರಸುಜ್ಞಾನ।
ಗುರುವೆ ನಿರ್ಮಲ ತತ್ತ್ವ ಬೀಜನೆ-ಪೊರೆಯಯ್ಯ
ಪರಮ ಸತ್ಪಥದೋರಿ ಚೆನ್ನಬಸವ॥ ೩೧

DECCAN HERALD
TO BE RETURNED
WITH REVIEW

ಕಳೆಯು ಕಂಗಳ ಮುತ್ತಿ। ಬೆಳಗು ಹೂವನೆ ಸುತ್ತಿ।
ಚಳಿಗಾಳಿ ಬಿಸಿಲ ಬಯಲಿನಲಿ-ಬಿತ್ತಿದನು
ಮೊಳೆಯುವಂತೆ ಪ್ರಣವ ಬೀಜಗಳ॥ ೩೨

ಅಳಿವ ಮಾಯದ ಕಾಯ। ಕಳೆದು ಕಂಗೊಳಿಸಿ।
ಇಳೆಯೊಳು ಕೈಲಾಸವಿಳಿಸಿದ-ಅಪ್ರತಿಮ
ನಿಳಯ ಗುರು ಚೆನ್ನಬಸವಣ್ಣ॥ ೩೩

ಆವಾವ ಕಾಲದಲಿ। ದೇವ ನಿಮ್ಮಯ ಪೂಜೆ।
ಭಾವಬಲಿದಿರುವಂತೆ ಪಾಲಿಸುತ-ಶ್ರೀಗುರುವೆ
ಶಿವಿದ ಸುಜ್ಞಾನ ಕರುಣಿಸು॥ ೩೪

ಎನ್ನದೆಂದೆನ ಬೇಡಾ। ನನ್ನ ಶಿವ ಸೊಮ್ಮೆಲ್ಲ।
ನಿನ್ನದಾದ ಮೇಲೆ ಇನ್ನೇಕೆ-ನೋಡುವಿ
ಎನ್ನಂತರಂಗವ ಅರಿದಮೇಲೆ॥ ೩೫

ಆವ ಕಾಲದ ಭಕ್ತಿ। ತೀವೀತೆನ್ನಂಗದಲಿ।
ಓವಿ ಸಲುಹಯ್ಯ ಚೆನ್ನಬಸವ-ಶ್ರೀಗುರುವೆ
ದಿವ್ಯ ಪ್ರಸಾದವ ಕರುಣೀಸಿಹೆ॥ ೩೬

ಅಂಗ ಕರಜಾತ ನಿಜ-। ದಂಗ ಭೇದಗಳಲ್ಲಿ।
ಅಂಗ ಪರಜ್ಞಾನವನೊಂದು ಮಾಡಿ-ಶ್ರೀಗುರು
ಲಿಂಗ ಸಂಬಂಧವ ಪಾಲಿಸಿದೆ॥ ೩೭

ಲಿಂಗ ನಿಜಭಾವದ। ಹಂಗೆನಗೆ ಉಂಟಯ್ಯ।
ಮಂಗಲಾರ್ಪಿತ ಸುಖವ ನೀಡಿದಿ-ಹೇ ತಂದೆ
ಅಂಗದೊಳು ಶಿವಲಿಂಗ ಬಿತ್ತಿದಿ॥ ೩೮

ಅಲ್ಲಲ್ಲಿ ಲಿಂಗಗಳ। ಸೊಲ್ಲುಗೊಳಿಸಿದೆ ಅಯ್ಯ।
ಎಲ್ಲಾ ಕಳಜ್ಞನು ಬೆಳಗೀದಿ-ಚೆನ್ನಯ್ಯ
ಸೊಲ್ಲೀನ ಸೃಷ್ಟಿಯಲಿ ತುಂಬಿದೆ॥ ೩೯

ನಿತ್ಯ ಸತ್ಯದಿ ಶಿವನ। ಭಕ್ತಿಯ ನೆಲೆಗೊಳಿಸಿ।
ಚಿತ್ತಶುದ್ಧಿ ಮಾಡಿ ಶ್ರೀಗುರುವೆ-ಚೆನ್ನಯ್ಯ
ಇತ್ತೆ ಶಿವಲಿಂಗವ ವೇದಿಯಲಿ॥ ೪೦

ಘನರೂಪದಿ ರೂಪನು। ಘನಜ್ಞಾನಕ್ಕೆ ಜ್ಞಾನಿಯು।
ಪ್ರಾಣಕ್ಕೆ ಪ್ರಸಾದ ಲಿಂಗತ್ರಯುವ-ಮಾಡಿ
ಮಾಣದೆ ಕರದೊಳು ತುಂಬಿದನು॥ ೪೧

ನಿರ್ಮಲನ ಸಲುಹಲು। ನಿರ್ಮಾಯ ಬಂದಿಹನು।
ಕರ್ಮಹರಿದು ಚೆನ್ನಬಸವಣ್ಣ-ದೇವನೆ
ನಿರ್ಮಾಯನಾದೆನು ನಿನ್ನಿಂದ॥ ೪೨

ನಿನ್ನೊಲುಮೆಯೆಂಬುದು। ನಿನ್ನವರು ಬಲ್ಲರು।
ಚೆನ್ನಬಸವಣ್ಣ ಗುರುವೆನ್ನ-ಪಾಲಿಸಲು
ನಿನ್ನವರ ತೊತ್ತಾದೆ ಗುರುದೇವಾ॥ ೪೩

ಬಿನ್ನಣದ ದೇಹವನು। ನಿನ್ನಂತೆ ಮಾಡಿದೆ।
ಚೆನ್ನಬಸವಯ್ಯನೆ ಕರುಣಿಸುತ-ಪ್ರೀತಿಯಲಿ
ಎನ್ನಸ್ವರೂಪವ ಬೋಧಿಸಿದೆ॥ ೪೪

ಇನ್ನು ಜನನವಿಲ್ಲ। ಮುನ್ನವೆ ಸಂದಳಿದೆ।
ಮನ್ನಣೆಯಿಂದ ಕಳುಹವುದು-ಚೆನ್ನಯ್ಯ
ನಿನ್ನರೂಪವ ಹೊಂದಿ ಸುಖಿಸುವೆ॥ ೪೫

ಎನ್ನಯ್ಯ ಗುರುಲಿಂಗ! ಚೆನ್ನಿಗ ಗುರುಲಿಂಗ।
ಎನ್ನೊಡೆಯ ಪರತತ್ತ್ವದಾನಂದವೆ-ಸನ್ನುತ
ಚೆನ್ನಗುರು ಬೀಜಾಕ್ಷರ ತುಂಬಿರುವೆ॥ ೪೬

ಆದಿಯಾಧಾರದಲಿ। ಆದುದೈ ಅನಿಮಿಷಗೆ।
ಸಾಧೀಸಿ ತೋರಿದಿರಿ ಗುರು ಚರ-ಲಿಂಗವ
ವೇದದದಿ ಶಿವತತ್ತ್ವ ಸಾರೆಂದು॥ ೪೭

ಮೂರು ದೀಕ್ಷೆಗೆ ನೀನೆ। ಗುರುವೆ ಮೂಲಸ್ಥಾನ।
ಆರು ಭಕ್ತಿ ನಿನ್ನನೊಡಗೂಡಿ-ತೋರಿದಿ
ಕರುಣೆಯಲಿ ಚೆನ್ನಬಸವೇಶ॥ ೪೮

ಇಂತು ಕಪಿಲಸಿದ್ಧ। ಕಂತುಹರ ಮಲ್ಲಯ್ಯ।
ಸಂತಸದಿಂದಲಿ ಪಾಡೂತ-ಮನ್ಮನದಿ
ಮುಂತೆ ಅಂತರಂಗ ಮಗ್ನನಾಗಿ॥ ೪೯

ಗುರುವೆ ಚೆನ್ನಬಸವ। ವರ ಪ್ರಸಾದವು ನೀನೆ।
ಪರಮಾನಂದನಾದಿ ನೀನೆ ತಂದೆ-ಎನ್ನ
ಗುರುವಾಗಿ ಕರ್ಮಬಾಧೆಯಳಿದೆ॥ ೫೦

ಪರ ತತ್ತ್ವಪ್ರಸಾದ-। ವಿರದೆನ್ನ ಕರದಲ್ಲಿ।
ವರಲಿಂಗರೂಪಾಗಿ ಚೆನ್ನಬಸವ-ಪ್ರಸಾದ
ಉರುತರ ಕಾಯಕೆ ಕರುಣಿಸಿ॥ ೫೧

ನಿಯತ ಮಾರ್ಗಜ್ಞಾನ। ಸ್ವಯದ ಪ್ರಸಾದವು।
ನಿಯತದೊಳ್ಳಿದು ವಿಧದಿ-ತಲ್ಲೀನ
ಸ್ವಾಯತ ಸಮರಸ ಗುರುಹಾದೆ॥ ೫೨

ಬಿಂದು ತಾನೇ ಆಗಿ। ಸಂದಳಿದ ಶಿವಯೋಗಿ।
ತಂದೆ ತೋರಿದ ಚೆನ್ನಬಸವನ-ನೆನೆಯೂತ
ಇಂದು ನಿನ್ನಯ ದಿವ್ಯ ರೂಪಾದೆ॥ ೫೩

ಇನ್ನು ಕೋಣೆಯ ಕಂಡು॥ ನಿನ್ನ ಮನೆಯೊಂದೆನಿಸಿ।
ಬಿನ್ನಣದ ಪದವ ಬಗೆ ಬೀರಿ-ಚೆನ್ನೆಯರ
ಕುನ್ನಿಗಳು ಸತ್ತು ನೀ ಸಾನಾದೆ॥ ೫೪

ಇನ್ನೇಕೆ ಭಕ್ತಿಯು। ಇನ್ನೇಕೆ ಫಲ ಪದವು।
ಇನ್ನೇಕೆ ಇಹ ಪರದ ಸುದ್ದಿಗಳು-ಚೆನ್ನಯ್ಯ
ಇನ್ನೇಕೆ ಚರ ಗುರು ಮಾಟಕೂಟ॥ ೫೫

ಇನ್ನೇಕೆ ಸಾಲೋಕ್ಯ। ಇನ್ನೇಕೆ ಸಾಯುಜ್ಯ।
ಇನ್ನೇಕೆ ನಿಮ್ಮ ಪಾದ ಧ್ಯಾನ-ಮೂರ್ತಿಯು
ಚೆನ್ನಬಸವನಾದೆ ಯೋಗಿನಾಥ॥ ೫೬

ಚೆನ್ನಗುರುವನು ತಂದ। ಚಿನ್ಮಯ ಪ್ರಭುದೇವ।
ನಿನ್ನ ಪಾವಕೆ ಅಯ್ಯ ಎರಗುವೆನೊ-ನಿಜಯೋಗಿ
ಮನ್ನಿಸಿ ಸಲುಹದೆ ಕಂದನನು॥ ೫೭

ಲಿಂಗರೂಪನು ಗುರುವು। ಜಂಗಮ ಚರರೂಪ।
ಲಿಂಗವೆ ರೂಪಾದ ಪ್ರಭುದೇವ-ಸಲಹುವುದು
ಲಿಂಗಾಂಗ ಸಮರಸವ ಬೆಳಗುತಿಹೆ॥ ೫೮

ಕರ್ಮಯೋಗಿಗಳನು | ನಿರ್ಮಲ ಮಾಡಿತ್ತು |
ಕರ್ಮವ ಮುರಿಯುತ್ತ ಮಾಯೆಯು-ಅಂಜುವಳು
ಮರ್ಮವರಿದ ಚೆನ್ನ ಪ್ರಭುದೇವಗೆ || ೫೯

ಕಾಯಗುಣದಲಿ ಬಿದ್ದು | ಕಾಯಜ್ಞರೆಂಬುವರು |
ಕಾಯಗುಣ ದಾಟಿದ ಭವಹರ-ಪ್ರಭುದೇವ
ಕಾಯ ಮನ ಕರಣಗಳ ಪರಿಹರಿಸಿ || ೬೦

ನಿಮ್ಮ ಮೊರೆ ಹೊಕ್ಕರೆ | ನಮಗೆ ಏತರ ಫಲವು |
ನಿಮ್ಮ ಪ್ರಭುಗುರುವೀನ ಕಾರುಣ್ಯದಿ-ಕಂಡೇನು
ನಿಮ್ಮ ಭಕ್ತಿಯನುಂಡು ನಿಮ್ಮವನು || ೬೧

ಹರಿವ ಮಸಳಿಯು ಹಿಡಿದು | ಹಾರಿ ಮತ್ಸ್ಯವ ನುಂಗಿ |
ಕರಿ ಸಿಂಹ ಶಾರ್ದೂಲವಳಿದಿಹವು-ಪ್ರಭುದೇವ
ಉರಿವ ಜ್ಯೋತಿಯಲಡಗಿ ತೊಳಗುವಿರಿ || ೬೨

ಸಿದ್ಧಯೋಗದ ಪದವಿ | ಸಿದ್ಧರೆಂಬರು ತಾವು |
ಸಿದ್ಧಗೋರಖ ಬಂದು ನಿನ್ನಿಂದೆ-ಸಿದ್ಧನು |
ಸಿದ್ಧಸುಖಿ ನಾನಾದೆ ಯೋಗಿನಾಥ || ೬೩

ತಲೆ ಹೊಟ್ಟೆ ಕಾಲುಗಳು | ಹುಲಿ ತೊಳವಾಯಿತ್ತು |
ಮಲಿಸಿಕೊಂಡಳಿವರಿಗೆ ಅರಿವಿತ್ತು-ಪ್ರಭುದೇವ
ಸುಲಲಿತ ತ್ರೈಲಿಂಗದೊಲವಿತ್ತು || ೬೪

ಆಡು ತೋಳನು ಮುರಿದು | ಕೂಡೆ ಮೊಲ ನಾಯಿಕಚ್ಚಿ |
ನೋಡಿ ಹದ್ದೆದ್ದಿತ್ತು ಆಗಸಕೆ-ಹೇ ಪ್ರಭುವೆ
ಆಡು ಹಾವನು ಹದ್ದು ನುಂಗಿತ್ತು || ೬೫

ಆರು ಕೋಣೆಯೊಳಗೆ | ಅರಿವತುಂಬಿದ ಎನ್ನ |
ನೀರ ನಿಷ್ಪತಿಯಾದ ಲಿಂಗದೊಳು-ತೋರಿದೆ
ಇರ್ಛೈದು, ಹನ್ನೊಂದು ಮರ್ಮಗಳ || ೬೬

ಆನೆ ನೀರೊಳಗಿಳಿದು | ತಾನಾಡುತಿರಲೊಂದು |
ಮೌನ ಚಿಕ್ಕಾಡು ನುಂಗಿತ್ತು-ಪ್ರಭುದೇವ
ಮೌನೀನಿ ಅನೂಸಮತಿಯಾಗಿ || ೬೭

ಲಿಂಗ ಶರಣರ ನಿಜ-। ಸಂಗ ಪ್ರಭುರಾಯನು।
ಕಂಗಳ ಕರಪೀತ ಪ್ರಭುದೇವ-ನಿರ್ವಯಲ
ಹಿಂಗಿದನು ಮಾಯೆಯ ಸಂಗವನು ॥ ೬೮

ಕಟ್ಟಿರುವೆ ಸುಂಗಿತ್ತು। ಒಂಟೆಯು ಮರಿಯನ್ನು।
ಕೆಟ್ಟು ಪಟ್ಟಣ ಅರಸು ಅಲ್ಲಮನ-ಮೊರೆಹೊಗಲು
ಪಟ್ಟಣ ಹಾಳಾಯಿತ್ತೈ ಯೋಗಿನಾಥ ॥ ೬೯

ಚಪ್ಪರದ ಮುಗಿಲನ್ನು। ಕಪ್ಪೆ ನುಂಗಿತ್ತಾಗಿ।
ಮುಪ್ಪುರದ ಲೋಕಗಳು ವಿಷವೇರಿ-ಪ್ರಭುಕಂಡೆ
ಇಪ್ಪುದು ಲೋಕವು ನಿನ್ನೊಡಲೊಳು ॥ ೭೦

ಅಂದು ಆದಿಯಲಾದ। ನಂದ ಭಸಿತವೆನ್ನ।
ತಂದು ನೊಸಲೊಳು ಪಟ್ಟಗಟ್ಟಿದಿ-ಕೃಪೆಯಿಂದ
ಇಂದು ನಿಮ್ಮೊಳು ಬೆರೆದೆ ಬಸವಣ್ಣ ॥ ೭೧

ಅಚ್ಚೊತ್ತಿ ಭಸಿತವನು। ನಿಚ್ಚ ನಿಚ್ಚದಿ ತಾನು।
ಹೆಚ್ಚಿ ಮನ ಘನವಾಗಿ ಧರಿಸಿ ನಿಮ್ಮ-ಪಾದಕ್ಕೆ
ಅಚ್ಚಿಗ ನಾನಾದೆ ಬಸವೇಶನೆ ॥ ೭೨

ಕರಿಕಂಠ ಬಸವನ। ಸ್ಮರಣೆಯಿಂದಲಿ ನಾನು।
ವರ ಭಸಿತವ ಧರಿಸಿ ಭವಬೇರನು-ಕಿತ್ತೆಸೆಹೆ
ಶರಣರ ಚರಣದಲಿ ಬೆರೆದೆ ತಾನು ॥ ೭೩

ಆಧಾರ ಭಸಿತವನು। ಓದಿ ಕರದೊಳು ಪಿಡಿದು।
ನಾದರೂಪನು ಬಸವ ಗತಿಯೆಂದು–ಧರಿಸಿ ಅ-
ನಾದಿ ಜಂಗಮನಾದೆ ಯೋಗಿನಾಥ ॥ ೭೪

ಭಸಿತದ ಮಹತಿಯ। ಒಸೆದು ಕೇಳುವರಿಲ್ಲ।
ಬಸವನೊಳೈಕ್ಯವು ಸತ್ಯವಿದು-ಧರಿಸಿದೊಡೆ
ಹುಸಿಯದೆ ಪಾಪವು ಪಲ್ಲಟವು ॥ ೭೫

ಬಸವನೆಂದರೆ ಭಕ್ತಿ। ಎಸೆವ ಶಿವಯೋಗಿಯು।
ಬಸವನೆಂದರೆ ಭವವು ಹಿಂಗುವುದು-ನೆನೆಯಲು
ಹಸನಾಗಿ ಸೊಗಸುವರು ಶರಣರು ॥ ೭೬

ಬಸವ ಮೂರಕ್ಷರದಿ। ಒಸೆದು ಮಂತ್ರವನರಿಯೆ।
ಮುಸುಕಿತ್ತು ಶಿವಜ್ಞಾನ ಭಕ್ತಿಗಳು-ಸ್ಮರಿಸಲು
ಎಸೆಯಿತ್ತು ಹೃದಯದಲಿ ನಿಜಮುಕುತಿ ॥ ೭೭

ಅರಿದು ಬಸವಣ್ಣನ। ಮರೆಯದೆ ಸ್ಮರಿಸಲು।
ದೊರಕುವುದು ಘನಜ್ಞಾನ ದಿಟವಿದು-ಕೇಳಿರಿ
ಪರಮ ಗುರು ಬಸವನ ನೆನೆಯುವುದು ॥ ೭೮

ಬಸವನಲ್ಲದ ಪೂಜೆ। ಹುಸಿದೈವಗಳ ಪೂಜೆ।
ಹಸನಲ್ಲ ನೋಡಿರೊ ಗುರುವಿನ-ಗುರುದೇವ
ಬಸವನ ಪೂಜೆಯು ಘನವಹುದು ॥ ೭೯

ಇಂದ್ರ ಕರ್ತನು ಬಸವ। ಚಂದ್ರನಿಗು ಬಸವನೆ।
ಇಂದ್ರಿಯಂಗಳ ನಿಷ್ಠೆ ಬಸವನಲಿ-ಇಲ್ಲದಿರೆ
ತಂದ್ರಿಯಲಿ ಭವಮಾಲೆ ಹೊಂದುವುದು ॥ ೮೦

ಲಿಂಗದಾಪ್ಯಾಯನವು। ಲಿಂಗ ಬಸವನಾಗಿ।
ಅಂಗವೆಂಬುವುದೆಲ್ಲ ಲಿಂಗವಾಗಿ-ಬಸವಣ್ಣ
ಅಂಗ ಮನ ಭಾವಗಳು ಪ್ರಸಾದಿಯು ॥ ೮೧

ಮೂರು ಲಿಂಗದ ಬೆಳಗು। ಆರು ರೂಪದಿ ತೋರಿ।
ಆರೂಢಪದ ಸಿದ್ಧಿ ದಾಟುತಲಿ-ತೋರಿದ
ವರ ವಿನಯಪ್ರಸಾದಿ ಬಸವನು ॥ ೮೨

ಆದಿಯೊಳು ಬಸವನ। ಭೇದಮೂವತ್ತಾರು।
ನಾದ ಬ್ರಹ್ಮಾಂಡಗಳನೊಂದುಗೂಡಿ-ಬಸವ
ವೇದಮೂರರ ಮೂರ್ತಿ ನೀನಯ್ಯ ॥ ೮೩

ಅರಿವು ಹೆಣ್ಣಿನ ಕೂಟ। ನರಕುರಿಗೆ ಯೋಗ್ಯವೆ।
ಗುರು ಬಸವನೊಲವಿಂದ ಒಡಗೂಡೆ-ಎಂದನು
ಇರವೆ ಸ್ಥಲವಾಗಿ ನೆರೆ ಬೆರೆಯಿತು ॥ ೮೪

ಬಸವನ ನೋಟವ। ಬಸವನ ಬೇಟವ।
ಬಸವನ ಕೂಟವ ಬೆರೆಸಲು-ಕೂಡಿದೆ
ಬಸವನ ರೂಪವ ಅಸುವಿನೊಳು ॥ ೮೫

ಬಸವ ಮುಖ್ಯಾನಂದ| ಒಸೆದು ಸಮರಸಕೂಟ|
ಬಸವನ ಮಾಟ ಸಮಸುಖದಿ-ಅಡಗಿದೆ-
ಬಸವಲಿಂಗದ ಘನ ಹರುಷವು || ೮೬

ಬಸವನಿಂದಲೆ ಹುಟ್ಟಿ। ಬಸವನಿಂದಲೆ ಬೆಳೆದು|
ಬಸವನಿಂದ ನಾಮರೂಪ ಹಿಡಿದೆ-ಗುರುವೆ
ಬಸವನ ಶಿಶುವಾದೆ ಯೋಗಿನಾಥ || ೮೭

ಶರಣಾಗು ಬಸವೇಶ| ಶರಣಾಗು ಬಸವಯ್ಯ।
ಶರಣಾಗು ಶ್ರೀ ಬಸವದಂಡೇಶ-ನಿಮ್ಮಡಿಗೆ
ಶರಣು ಪರತರಶರಣು ಕರುಣಾಳು || ೮೮

ಶರಣಯ್ಯ ಬಸವಯ್ಯ| ಶರಣು ಹೇ ಬಸವರಸ|
ಶರಣಾರ್ಥಿ ಹೇ ಬಸವರಾಜೇಶ್ವರ-ನಿಮಗೆ
ಶರಣು ಬಸವ ಚೆನ್ನಬಸವ ಪ್ರಭುವೆ || ೮೯

ಮಾತಾಪಿತರಹಿತನು| ಸ್ತುತಿಗೊಂಡ ಶಿವಯೋಗಿ।
ತಾತಂಗೆ ತಾತನು ಬಸವಣ್ಣ-ಪರಬ್ರಹ್ಮ
ಮಾತು ಮಥನವ ನುಂಗೆ ಚೆನಬಸವ || ೯೦

ಗುರುರೂಪು ಬಸವಣ್ಣ| ಚರರೂಪು ಬಸವಣ್ಣ|
ಪರತರಕೆ ಪರತರವು ಬಸವಣ್ಣ-ಪ್ರಸಾದ
ಪರತರ ಪಾದೋದಕವೆನಿಸಿದನು || ೯೧

ಸದ್‌ಗುರು ಬಸವೇಶ। ಸದಮಲ ಬಸವಯ್ಯ|
ಮದ್‌ಗುರು ಚೆನ್ನಬಸವನಿಗೆ-ಶರಣೆಂಬೆ
ಮದಮುರಿದ ಪ್ರಭುದೇವ ಯೋಗಿನಾಥ|| ೯೨

ಬಸವ ನವಖಂಡದೊಳು। ವಾಸಿಸಿ ತಪಸಿದ್ದೆ|
ಹಸನಾದ ಪ್ರಸಾದ ಪರುಷದೊರಕಿ-ಎನ್ನಮನ
ಹಸನಾಯಿತು ಶರಣರ ದಯೆಯಿಂದ|| ೯೩

ಬಸವಣ್ಣ ಬಸವಯ್ಯ। ಬಸವ ಚೆನ್ನಬಸವ|
ಬಸವಲಿಂಗ ಚೆನ್ನಬಸವ ಪ್ರಭು-ತ್ರಿಮೂರ್ತಿ
ಅಸಮ ಶಿವಶರಣರಿಗೆ ಶರಣೆಂಬೆ || ೯೪

ಶುದ್ಧಗುರು ಬಸವಣ್ಣ | ಸಿದ್ಧ ಚೆನ್ನಬಸವ |
ಶ್ರದ್ಧೆ ತುಂಬಿದ ಪ್ರಸಿದ್ಧ ಪ್ರಭು-ರಾಯನೆ
ಶುದ್ಧನಾದೆನು ಗುರುವೆ ಶರಣೆಂದು || ೯೫

ಗತಿ ನೀನೆ ಬಸವಣ್ಣ | ಮತಿ ನೀನೆ ಬಸವಣ್ಣ |
ಗತಿಮತಿಯು ಶ್ರೀ ಚೆನ್ನಬಸವ ಪ್ರಭು-ನಿಮ್ಮನು
ಅತಿಶಯದಿ ನೆನೆಯುತ ಹಸನಾದೆ || ೯೬

ಮೂರು ಲಿಂಗವ ನಿಮ್ಮ | ಮೂರು ರೂಪದಿ ಕಂಡೆ |
ಮೂರರಲಿ ಆರಾದ ಸೋಜಿಗವ–ಅಂತೇನು
ದಾರಿ ದೋರಿದಿರಾಗಿ ದಯೆಯಿಂದ || ೯೭

ಆರಳಿದು ಮೂರಾದ | ಮೂರು ತಾನೊಂದಾದ |
ಪರಿಯನರುಹಿದಿರಯ್ಯ ಕರೆದೊಯ್ದು-ಕರಗಿಸಿ
ಕುರುಹುವಿಡಿದು ಕರುಣ ವೆಳಗಿನಲಿ || ೯೮

ಜಯತು ಸಂಗನಬಸವ | ಜಯತು ಚೆನ್ನಬಸವ |
ಜಯತು ಪ್ರಭುದೇವಯ್ಯ ಶರಣರಿಗೆ-ಶರಣೆಂಬೆ
ಸ್ವಯಶಿಖಿಯ ಹಿಮವಾದೆ ಯೋಗಿನಾಥ || ೯೯

ಸಂಧಿ ೩೯

ನಮ್ಮಪ್ಪ ಬಸವಣ್ಣ। ನಮ್ಮವ್ವ ನೀಲಮ್ಮ ತಾಯಿ।
ನಮ್ಮಯ್ಯ ಪ್ರಭುರಾಯ ಚೆನ್ನಬಸವ-ಪಾಡಿದನು
ಒಮ್ಮನದಿ ಸಿದ್ಧೇಶ ಶರಣರಿಗೆ॥ ೧

ಮಡಿವಾಳಯ್ಯನ ಮನೆಯ। ಕಡೆಬಾಗಿಲವ ಕಾಯ್ವ।
ಹುಡುಗನಿವನೆಂದು ಕರೆಯಯ್ಯ-ಶ್ರೀ ಗುರು
ಮೃಡಮೂರ್ತಿ ನಿನಗೆ ಶರಣೆಂಬೆ॥ ೨

ಮಡಿವಾಳ ಮಾಚಯ್ಯ। ಹಡಪದ ಅಪ್ಪಂಣ।
ಧೃಡಭಕ್ತಿ ಘಟ್ಟಿವಾಳಯ್ಯನ-ಅಕ್ಕರೆಯ
ಕಡೆ ಮಗನಾಗಿ ಬದುಕಿದೆನು॥ ೩

ಕಕ್ಕಯ್ಯನ ಮನೆಯ। ಮಿಕ್ಕೀದ ಪರಸಾದ।
ಅಕ್ಕರೆಯಲಿ ಪಡೆದ ಬಸವಣ್ಣ-ನಿಕ್ಷೇಪ
ಒಕ್ಕೀದನು ಭಿಕ್ಷೆಯ ಶಿವಶರಣ॥ ೪

ನಿತ್ಯ ಲಿಂಗದ ಮೇಲೆ| ಅತ್ಯಂತ ಭಕ್ತಿಯು|
ಮರ್ತ್ಯಗೆದ್ದ ಸೊಡ್ಡಳಬಾಚರಸ-ಶರಣೆಂಬೆ
ನಿತ್ಯ ನಿಜಸುಖ ಪಡೆದ ನಿಜಯೋಗಿ|| ೫

ಮರುಳ ಶಂಕರದೇವ| ತೋರದೆ ಲೋಕಕ್ಕೆ|
ಹರ ಬಸವನ ಅಂಗಳದಿ-ವಾಸಿಪ
ಪರಮ ಪ್ರಸಾದಿಗೆ ನಮೋ ನಮೊ|| ೬

ಮುಗುಧ ಸಂಗಯ್ಯನ| ಅಗಾಧ ಲಿಂಗ ನಿಷ್ಠೆ|
ಮಗನಾಗಿ ನಾನು ಬದುಕುವೆ-ಸಂಗನ
ಮಿಗೆ ಬಕುತಿಗೆ ಮಾರುಗೊಂಡು|| ೭

ಘಟವಾಳ ಮುದ್ದಣ್ಣ| ಸಟೆಯರಿತು ಲೋಕದ|
ನಾಟಕ ನೋಡಿ ಎಚ್ಚರಿಪ-ಗಟ್ಟಿಗನ
ದಿಟ್ಟತನಕೆ ನಾನು ಶರಣೆಂಬೆ|| ೮

ಸತ್ಯಣ್ಣ ಶರಣನ| ಭೃತ್ಯನು ನಾನಯ್ಯ|
ನಿತ್ಯ ನಿಜಾನಂದ ಮೂರೂತಿ-ಶರಣ
ಕರ್ತೃ ಶಿವತತ್ವ ಸಂಧಾನ|| ೯

ಅಜಗಣ ದೇವನ| ಸಜ ಮಂತ್ರೈಕ್ಯದ|
ನಿಜದ ನಿಲವಿನ ಪರಿಣಾಮ-ಕಂಡುಂಡು
ಭಜಿಸುವೆ ಶರಣು ಶರಣೆಂದು|| ೧೦

ಹಡಪದ ಅಪ್ಪಣ್ಣ| ಧೃಡ ಶಿವತತ್ವಾರ್ಥಿ|
ಅಡಿಗಳ ಸ್ಮರಿಸಿ ಬದುಕುವೆ-ಶರಣನ
ಒಡೆಯತನಕೆ ನಾನು ಶಿರವಾಗಿ|| ೧೧

ಜಗವ ಸುತ್ತುವ ಮಾಯೆ| ಮುಗಿಲ ಸುತ್ತುವಳೆಂದು|
ಬಗೆಯ ಬಲೆ ಬೀಸುವ ನಿರ್ಲಜ್ಜ-ಶಾಂತಯ್ಯನ
ಮಿಗಿಲಾದ ವಿರತಿಯ ನೆನೆಯುವೆ|| ೧೨

ಬಗೆ ಬಗೆಯ ಪಂಜೆಯ| ಮಿಗುವ ಸಂಸಾರದ|
ಅಗಣಿತ ಜಲಧಿಯಲಿ ಕಾಯದ-ಹೊಲೆಕಳೆದ
ಸಗರದ ಬ್ರಹ್ಮಯ್ಯ ಶಿವಶರಣ|| ೧೩

ನಗರಿ ನಗರಿಯ ಸುತ್ತಿ | ನಗರಗಳ ನೆಲೆ ಮಾಡಿ |
ಸಿಗದ ಬೊಮ್ಮದ ನೆಲೆ ವಿವರಿಸೆ-ತತ್ವವ
ಬಗೆದು ತೋರಿದ ನಿಗಮ ಬೊಮ್ಮಯ್ಯ || ೧೪

ಗುಹೆಯ ಗೇಹವ ಮಾಡಿ | ಇಹದಿ ಆಡಿದನು |
ನಿಹಿತಾಚಾರದ ಬೆಳಗವ-ನೊಳಕೊಂಡ
ಆಹುದರಿದ ಬಹುರೂಪಿ ಚೌಡಯ್ಯ || ೫೧

ಧಗಿ ಭುಗಿಲ ಹೊಗುವ | ಧಗಿಲ ಭುಗಿಲೆಂಬ |
ಮಿಗೆಶಬ್ದ ಮರ್ಮದ ನೆಲೆಯರಿದ-ಶರಣನು
ಅಗಲದನಂತ ಕಲಿಕೇತ ಬೊಮ್ಮ|| ೧೬

ತಿದಿ ಬ್ರಹ್ಮಾಂಡವನು | ಬೋಧಿಸಿದ ಗುರುಮೂರ್ತಿ |
ನಾದದಿಂದತ್ತತ್ತನಾದಿ ಮೂರ್ತಿ-ಪರತರ
ಬೋಧರ ಬೋಧನು ಮಾಯಣ್ಣ || ೧೭

ಕಣಿಯ ಕೇಳುವ ಭಾವ | ಆಣಿಯಾಗಿ ಹಸ್ತದಿ |
ತ್ರಿಣಯನ ರೂಪು ಪ್ರಜ್ವಲಿಸೆ-ಹರನಲ್ಲಿ
ತ್ರಿಣಯನ ದಾಸಯ್ಯ ನಲಿಯುವನು || ೧೮

ಆರಾರು ದಿಕ್ಕಿನಲಿ | ಅರಿವು ತುಂಬಿದನೆನ್ನ |
ಆರೂಢ ದಶವಾಯುಗಳ ಭೇದವ-ಅರಿದ
ನೀರವೊರನ ವೇಮುಗೆ ನುತಿಸುವೆ || ೧೯

ಆರೈದು ನೋಡೆ ನಿಜ | ಆರೈಕೆ ನೆಲೆಯೂರಿ |
ತೋರಿತ್ತು ನಿಜನೆಲೆಯ ತತ್ವದಲಿ-ಮಹಾದೇವ
ಮಾರುಧಿ ಬೊಮ್ಮಯ್ಯ ನಿಜಶರಣ || ೨೦

ಚಿಕ್ಕಯ್ಯ ಬೊಕ್ಕಸದ | ಡಕ್ಕೆಯ ಬೊಮ್ಮಯ್ಯ |
ಅಕ್ಕರೆ ನಿಜಲಿಂಗ ದೇವನಿಗೆ-ಶರಣೆಂಬೆ
ಮಿಕ್ಕಿ ಮೀರಿದ ಮಹಿಮರಿಗೆ || ೨೧

ಒಕ್ಕಲ ಮುದ್ದಯ್ಯ | ರಕ್ಕಸದ ಬ್ರಹ್ಮಯ್ಯ |
ಚಿಕ್ಕ ಮಾಚಣ್ಣರಿಗೆ ಶಿವಶರಣು-ಶರಣರೆ
ಅಕ್ಕರದೊಳೆನ್ನ ಸಲುಹಿರಿ || ೨೨

ಚೆಂದಯ್ಯ ಅಜಗಣ್ಣ। ಆದಯ್ಯ ಸತ್ಯಣ್ಣ।
ಅಂದದ ನಿಲವಿನ ಮರುಳ-ಶಂಕರ
ಬಂಧಭವ ಗೆಲಿದರು ಶರಣೆಂಬೆ॥ ೨೩

ರಾಯಸದ ಮಂಚಣ್ಣ। ಕಾಯ ಮನ ಪರಿಶುದ್ಧ।
ಮಾಯೆಯ ಗೆಲಿದ ಮಹಾಂತ-ನೀನೆನ್ನ
ದಯೆದೋರಿ ಪೊರೆಯಬೇಕಯ್ಯ॥ ೨೪

ತೆಲುಗ ಜೊಮ್ಮಿದೇವ। ನೂಲಿಯ ಚಂದಯ್ಯ।
ಒಲುವಿಲಿ ಎನ್ನ ಸಲುಹಿದ-ಶರಣರ
ಸಲುಗೆಯವನಾದೆ ನಾನಿಂದು॥ ೨೫

ಅಮೂಗಿ ದೇವಯ್ಯ। ವ್ಯಾಮೋಹ ಅಳಿದಾತ।
ಸೀಮೆಯ ದಾಟಿದ ನಿಸ್ಸೀಮ-ಶರಣಂಗೆ
ಪ್ರೇಮದಿ ನಾನು ನುತಿಸುವೆ॥ ೨೬

ಶಿವದಾಸಿಮಯ್ಯ। ಶಿವತತ್ವನರಿತವ।
ಭಾವ ಬಯಲೊಳು ಬೆರೆಯುವ-ಶರಣನ
ಸೇವಕ ನಾನಾಗಿ ಬದಕುವೆ॥ ೨೭

ಪಟ್ಟದೈಸಿರಿ ಬಿಟ್ಟು। ಕಟ್ಟಿಗೆ ಕಾಯಕ ಮೇಲ್-।
ಮಟ್ಟದೆಂದರಿದ ಮೋಳಿಗೆಯ-ಮಾರಯ್ಯನ
ನಿಷ್ಠೆಗೆ ನಾನು ಶರಣೆಂಬೆ॥ ೨೮

ಮೆರೆಮಿಂಡದೇವಯ್ಯ। ಉರಿಲಿಂಗ ಪೆದ್ದಣ್ಣ।
ಪರಮ ಷಟಸ್ಥಲವನರಿತ-ನುರಿತ
ಶರಣರ ನಿಲವಿಗೆ ಶರಣೆಂಬೆ॥ ೨೯

ಸತ್ಯಣ್ಣ ಶರಣನ। ಭೃತ್ಯನು ನಾನಯ್ಯ।
ನಿತ್ಯ ನಿಜೈಕ್ಯ ಅಜಗಣ್ಣನ-ಮಂತ್ರದ
ಉತ್ತುಮ ಶಿಶುವಾದೆ ನಿಮ್ಮಿಂದ॥ ೩೦

ಬಿಲ್ಲೇಶ ಬೊಮ್ಮಯ್ಯ। ಬಾವುರ ಬೊಮ್ಮಯ್ಯ।
ಗೊಲ್ಲಾಳ ಹಾವಿನಹಾಳ ಕಲ್ಲಯ್ಯ-ನಿಮ್ಮನು
ಸೊಲ್ಲ ಸೊಲ್ಲಿಗೆ ನೆನೆಯುವೆ॥ ೩೧

ಅಕ್ಷರ ಐದಕ್ಕೆ। ಅಕ್ಷರ ಆರಕ್ಕೆ।
ಅಕ್ಷರ ಮೂರಕ್ಕೆ ಶಿವಭಕ್ತಿ-ಗುರುವೆ
ಸಾಕ್ಷಾತ ಪರಶಿವ ಶರಣೆಂಬೆ। ೩೨

ನಮ್ಮಮ್ಮ ಮಹಾದೇವಿ। ನಮಯ್ಯ ಅಜಗಣ್ಣಾ।
ನಮ್ಮೊಡೆಯ ಅಲ್ಲಮಪ್ರಭುದೇವ-ನಿಮ್ಮನು
ಒಮ್ಮನದಿಂದ ನೆನೆಯುವೆ॥ ೩೩

ಪರಮ ದಾಸೋಹದ। ನೆರೆ ಮಾಡಿ ಜಂಗಮಕೆ।
ಪರಮ ಪ್ರಸಾದವ ಸವಿಯೂತ-ನಿಲಮ್ಮ
ಕರದಿಷ್ಟಲಿಂಗದ ಸಂಗವರಿದು॥ ೩೪

ಕರದಿಷ್ಟಲಿಂಗದಿ। ಉರಕಾಯ ಇಂಬಿಟ್ಟ।
ಕರುಣೆ ನೀಲಾಂಬೆಯ ಅಡಿಗಳಿಗೆ-ಶಿರಬಾಗಿ
ಶರಣು ಶರಣೆಂದು ಬದಕುವೆ॥ ೩೫

ಹೆತ್ತವ್ವೆ ಗಂಗಾಂಬೆ। ಮುತ್ತವ್ವೆ ಮಹಾದೇವಿ।
ಎತ್ತಿ ಸಲುಹಿದಳಕ್ಕ ನಾಗಲೆ-ತಾಯಿಗೆ
ಹೊತ್ತು ಮೂರಕ್ಕು ಶರಣೆಂಬೆ॥ ೩೬

ಇತ್ತ ಬಾರೆಂದು ಕರೆ-। ದಿತ್ತು ತಾಂಬುಲವ।
ಎತ್ತಿ ಮಾಯೆಯ ಬೀಸಿ ನಲಿದ-ಶರಣೆ
ಮುಕ್ತಾಯಿಯ ನಿಲವಿಂಗೆ ಶರಣೆಂಬೆ॥ ೩೭

ಅಕ್ಕ ಮಹಾದೇವಿಯು। ಲಕ್ಕಮ್ಮ ಸತ್ಯಕ್ಕ।
ಮಿಕ್ಕೀದ ಚೋಳಕ್ಕ ನಂಬಿಯಕ್ಕ-ಚೆಂಗಳವ್ವೆ
ಚಿಕ್ಕ ಮಗನೆಂದು ಸಲುಹಿರಿ॥ ೩೮

ಉಟ್ಟ ಸೀರೆಯನು। ಕೊಟ್ಟೆ ನೀ ಗಂಗಮ್ಮ।
ವಿಟ ಜಂಗಮನು ಕೇಳಲು-ನಿನ್ನಯ
ದಿಟ ಬಕುತಿಗೆ ಶರಣೆಂಬೆ॥ ೩೯

ದೇವರ ದಾಸಿಮಯ್ಯ। ಶಿವಸತಿ ದುಗ್ಗವ್ವೆ।
ಅವಿರತ ದಾಸೋಹ ಮಾಡಿದ-ದಂಪತಿಗೆ
ಭಾವ ತುಂಬಿ ನೆನೆವೆ ಪ್ರಮಥರ॥ ೪೦

ಗುರು ಚನ್ನಬಸವನಿಗೆ | ಗುರುವಾಗಿ ತಾಯಾಗಿ |
ಪರತರ ಶಿವತತ್ವ ಅರುಹಿದ-ನಾಗಲಾಯಿ
ಹಿರಿಯಕ್ಕನಾದಿ ಬಸವಗೆ || ೪೧

ಶರಣೆ ನಾಗಲತಾಯಿ | ಗುರುವಿನ ತಾಯಮ್ಮ |
ಕರುಣಿಸು ಮಗನ ಮಗನೀಗೆ-ನೀಡೆನ್ನ
ಹರಣಕ್ಕೆ ಕರುಳೀನ ಆಸರ || ೪೨

ಹರನೆ ಗಂಡನೆಂದು | ವರಸಿದೆ ನನ್ನಕ್ಕ |
ಶರಣಸತಿ ಲಿಂಗವೆ ಪತಿ ಎಂಬ-ಶಿವತತ್ವ
ವೆರಸಿ ತೋರಿದ ತಾಯಿ ವರವಾಗು || ೪೩

ಒಂದೊಂದು ನುಡಿಯಲ್ಲಿ | ಅಂದಾದ ನಡೆತುಂಬಿ |
ನಿಂದ ನಿಜಾನಂದದನುಭಾವ-ಪೊಂದಿದ
ವಂದಿಸುವೆ ಅಕ್ಕಗೆ ಮನದುಂಬಿ || ೪೪

ಅಷ್ಟಾವರಣವೆ ಅಂಗ | ಇಷ್ಟಲಿಂಗವೆ ಪ್ರಾಣ |
ನಿಷ್ಠೆನಿಯಿಮಾಚಾರದ ದಾನಮ್ಮ-ತಾಯಿಯ
ಶ್ರೇಷ್ಠ ನಿಲವಿಗೆ ನೆನೆಯುವೆ || ೪೫

ಅಂಗದ ಸುಖವೆಲ್ಲ | ಲಿಂಗಕ್ಕೆ ಅರಪಿಸಿ |
ಲಿಂಗಪ್ರಾಣಿಯಾದ ಕಮಲವ್ವೆಯ-ನಿಲವು
ಮಂಗಳಮಯವಾಗಿ ಪರಿಣಮಿಸೆ || ೪೬

ಶರಣರ ತಿಂಥಿಣಿಯು | ಹರಣಕ್ಕೆ ಹೊಸಬೆಳಕು |
ಕರುಣಿಸಿ ಸಲುಹಿತ್ತು ಎಂದರು-ಸಿದ್ಧೇಶ
ಸ್ಮರಣೆಯಿಂದ ನಾನು ಬದುಕುವೆ || ೪೭

ಶರಣರು ಕೋರಿದರು | ವರ ಸಿದ್ಧರಾಮಗೆ |
ಪರಮನೆ ಏರಯ್ಯ ಪೀಠವನು-ಸಿದ್ಧೇಶ
ಕರುಣಿ ಪಾದೋದಕ ಕರುಣಿಸು || ೪೮

ವರ ಪ್ರಭು ಬಸವ | ಇರುತಿರಲೆದುರಿಗೆ |
ಏರುವದೆ ನಾನು ಪೀಠವನು-ಚನಬಸವ
ಗುರು ಇರುತಿಲರು ನನಗೇಕೆ|| ೪೯

ಗುರು ಶಿಷ್ಯರೆಂಬುದು | ಬರಿ ಚೋದ್ಯವಹುದಯ್ಯ |
ಶರಣರಾಣತಿಯಿದು ಮನ್ನಿಪುದು-ಸಿದ್ಧೇಶ
ಗುರು ಪೀಠ ನಿನಗಾಗಿ ಕಾದಿಹುದು || ೫೦

ಪ್ರಭುವಿನಾಣತಿಯಿದು | ಅಭವ ಸಿದ್ಧರಾಮಗೆ |
ಉಭಯ ಭಿನ್ನವಳಿದು ಗದ್ದುಗೆಯ-ಏರಿದನು
ಶುಭನಾಂದಿಯು ಪಾದಪೂಜೆಗೆ || ೫೧

ನೆಲದ ಮೇಲ್ ನಿಲ್ಲದ | ನಿಲವಿನ ಗೋಡೆಯ |
ನೀಲಾಕಾಶಕ್ಕೆ ನಿಲುಕದ-ಪೀಠದ
ಮೇಲೇರಿದನು ಶಿವಸಿದ್ಧರಾಮು || ೫೨

ಸಾವಿರ ದಳಗಳ | ನವ ಕಮಲಗಳುಳ್ಳ |
ದಿವ್ಯ ಪೀಠಕ್ಕೆ ಕಳಶವು-ಶೋಭಿಪುದು
ತವೆ ನಿರಹಂಕಾರ ನೋಡಿರಣ್ಣ || ೫೩

ಮನ್ನಣೆಯ ಸಿದ್ಧೇಶ | ಸನ್ನುತ ಪೀಠವನೇರೆ |
ಗಣ್ಯ ಶಿವಶರಣನು ಜಯಜಯ-ಎನ್ನುತ
ಪುಣ್ಯ ಪಾದಕ್ಕೆರಗಿ ನಮಿಸಿದರು || ೫೪

ಜಾಗಟೆ ಘಂಟೆಗಳು | ನಗಾರಿ ನವಬತ್ತು |
ಮಿಗೆ ಪಂಚವಾದ್ಯಗಳು ನುಡಿದವು-ಭೋರ್ಗರೆದು
ಗಗನವ ತುಂಬುತ ಮೊಳಗಿದವು || ೫೫

ಶಿವಶರಣ ಶರಣೆಯರು | ತವಕದಿ ಬಂದಿಹರು |
ಶಿವಯೋಗಿ ಸಿದ್ಧರಾಮನ-ಪೂಜೆಗೆ
ನವವಿಧ ಭಕ್ತಿಯನರಪಿಸಲು || ೫೬

ವಿನಯದಿ ತಂದಿಹರು | ಅನುಪಮ ಕುಂಭದಿ |
ಚಿನುಮಯನ ಪಾದ ಪೂಜೆಗೆ-ಉದಕವ
ಘನವಾದ ಮಜ್ಜನಕೆ ಎರೆಯಲು || ೫೭

ಸಟೆಯೆಲ್ಲವನು ಸುಟ್ಟು | ಕುಟ್ಟಿ ಭಸ್ಮವ ಮಾಡಿ |
ದಿಟ ಜಲದೊಳಗೆ ನೆನೆಯಿಟ್ಟು-ಭಸಿತದ
ಗಟ್ಟಿಯ ತಂದಿಹರು ಪೂಜೆಗೆ || ೫೮

ಜಡತತ್ವವನೆ ಬಿಟ್ಟು | ತೀಡಿ ಗಂಧವ ತೆಯ್ದು |
ಒಡೆಯನ ಶ್ರೀ ಪಾದ ಪೂಜೆಗೆ-ಅಣಿಮಾಡಿ
ದೃಢ ಭಕ್ತಿಯಿಂದಲಿ ಇಟ್ಟಿಹರು || ೫೯

ಅಕ್ಷಯ-ವೆಂಬುವ | ಅಕ್ಷತೆಗಳ ತಂದು |
ದಕ್ಷತೆಯಿಂದಲಿ ಶರಣರು–ವರ ಶಿವ-
ದೀಕ್ಷೆ ಮೂರರ ಸಿದ್ಧೇಶಗೆ || ೬೦

ಎಳೆಯ ಪತ್ರಿ ರಾಶಿ | ಬಿಳಿಯ ಮಲ್ಲಿಗೆ ಜಾಜಿ |
ಸುಳಿವ ಗಾಳಿಯಲ್ಲಿ ಪರಿಮಳ–ಬಿರೂವ
ಸೆಳೆವವು ಹೂಗಳು ಪರಿಪರಿಯ || ೬೧

ಬೀಸಲು ಧೂಪವ | ಅಸಮ ಶಿವಯೋಗಿಯ |
ಲೇಸಾದ ಪಾದ ಪೂಜೆಗೆ–ತಂದಿಹರು
ಈಶನವತಾರಿಗೆ ಮನ್ನಿಸಲು || ೬೨

ಚಿನ್ನದ ತಟ್ಟೆಯಲಿ | ರನ್ನದಾರತಿ ತುಂಬಿ |
ಮನ್ನೆಯರು ಶರಣೆಯರು ಬೆಳಗಲು-ಆರತಿ
ಉನ್ನತೋನ್ನತಕೆ ಅಣಿಮಾಡಿ || ೬೩

ಕೂಡಿದ ಶರಣರು | ನುಡಿದರು ಹರುಷದಿ |
ಸಡಗರದಿ ಪಾದಪೂಜೆಯು–ನಡೆಸಯ್ಯ
ಒಡೆಯ ಬಸವದೇವ ಸಿದ್ಧೇಶಗೆ || ೬೪

ಭಕ್ತೀಗೆ ತವರಾದ | ಯುಕ್ತೀಗೆ ಹೊರಗಾದ |
ಮುಕ್ತೀಯ ಮೀರಿದ ಬಸವನ–ನಮಿಸಿ ವಿ-
ರಕ್ತಿಯ ಸಿದ್ಧೇಶಗೆ ಎರಗಿದನು || ೬೫

ನವಣಿಯ ತೆನೆಗಾಗಿ | ಭವಹರನ ಬರಿಸಿದೆ |
ತವನಿಧಿಯು ನೀನೆಂದು ಗುರುತಿಸಿ-ಪಡೆದೆ
ಶಿವರೂಪ ನಿವಾದ ಸಿದ್ಧೇಶ || ೬೬

ರುದ್ರ ಗಮ್ಮರಿಯಲ್ಲಿ | ರುದ್ರನ ಕರೆತಂದು |
ಚಿದ್ರೂಪ ನಿನ್ನೊಳು ಹೊಮ್ಮಿಸಿದೆ-ಶಿವಯೋಗಿ
ಭದ್ರ ಮಂಗಲ ನೆಲೆಯ ಹೊಂದಿದೆ || ೬೭

ಮಾಟಗಾರನೆ ಬಾರೊ| ಜೂಟಧರನೆ ಬಾರೊ|
ಸಾಟಿ ನಿನಗಾರು ಶಿವಯೋಗಿ-ಸಿದ್ಧರಾಮ
ನಿಟಲಾಕ್ಷ ಬಾರೊ ದಿಟಯೋಗಿ|| ೬೮

ಪ್ರಾಣಲಿಂಗನೆ ಬಾರೊ| ಪ್ರಣವರೂಪನೆ ಬಾರೊ|
ತ್ರಿಣಯನೆ ಬಾರೊ ತ್ರಿಪುರಾರಿ-ಸಿದ್ಧರಾಮ
ಪ್ರಾಣವೆ ಬಾರೊ ಪರಶಿವನೆ|| ೬೯

ಯುಕ್ತಿಗೆ ನಿಲುಕದ| ಮುಕ್ತಿಗೆ ಸಿಲುಕದ|
ಭಕ್ತಿಗೆ ಬಗೆಯನು ತೆರದಿರುವೆ-ಸಿದ್ಧೇಶ
ಶಕ್ತಿಸಹಿತನೆ ದೇವ ಶರಣಾರ್ಥಿ|| ೭೦

ಪ್ರಾಣಲಿಂಗವಾಗಿ| ಕಾಣ ಬಂದಿದೆ ದೇವ|
ಹಣೆ ಹಚ್ಚಿ ಪಾದಕ್ಕೆ ನಮಿಸುವೆ-ಎನ್ನಯ್ಯ
ಪ್ರಾಣಲಿಂಗಿ ಸಿದ್ಧರಾಮಯ್ಯ|| ೭೧

ಪಾದಪೂಜೆಯ ಮಾಡುವೆ| ಸದಮಲ ಗುರುವಿನ|
ಹೃದಯದ ಗದ್ದುಗೆ ಹಾಸಿದೆ-ಹದುಳದಿ
ಸದ್‌ಗುರು ಸಿದ್ಧರಾಮರಿಗೆ|| ೭೨

ಪರಮಾನಂದದ ಜಲ| ಚಿರಶಾಂತಿ ಕುಂಭದಲಿ|
ವರ ಬಕುತಿಯಿಂದ ಮಜ್ಜನ-ಗೈಯುವೆ
ಹರಸಿದ್ಧರಾಮರ ಪಾದಕ್ಕೆ|| ೭೩

ಪರಕ್ಕೆ ಪರವಾದ| ವರ ಭಸಿತ ಧರಿಸುವೆ|
ಗುರುವಿನ ಪಾದ ಪೂಜೆಗೆ-ಚಿದ್ಭಸಿತ
ಶರಣರು ಹಾಡಿ ಹರಸಿದ್ದು|| ೭೪

ಶಾಂತಿಯೆಂಬ ಗಂಧ| ಸಂತಸದಿ ತೀಡುವೆ|
ಹಂತ ಮೀರಿದ ಮಹಂತ-ಸಿದ್ಧೇಶನ
ಕಾಂತಿಮಯ ಚರಣಕಮಲಕ್ಕೆ|| ೭೫

ಮೋಕ್ಷದ ಅಚೆಯ| ಅಕ್ಷತೆಯ ಎಚ್ಚರದಿ|
ಸಾಕ್ಷಾತ ಗುರು ಸಿದ್ಧರಾಯನ-ಪಾದಕ್ಕೆ
ದಕ್ಷತೆಯಿಂದ ನಾ ಧರಿಸುವೆ|| ೭೬

ಪತ್ತರಿ ಧರಿಸುವೆ| ಉತ್ತಮಾಂಗ ಶಿವಗೆ|
ತೊತ್ತಿನ ತೊತ್ತಾನು ಎಂದರು-ಬಸವಣ್ಣ
ಹೊತ್ತು ಹೋಗದ ಮುನ್ನ ಪೂಜಿಪೆಸು|| ೭೭

ಶರಣ ಗಣವೆಲ್ಲ| ಎರಗೂತ ಪಾದಕ್ಕೆ|
ಧರಿಸಲು ಬಂದರು ಪತ್ತರಿ-ಬಕುತೀಲಿ
ಹರಸುತ ಸಿದ್ಧರಾಮರಿಗೆ|| ೭೮

ಅಷ್ಟಾಂಗ ಯೋಗದ| ಕಷ್ಟಕರ್ಮವಳಿದು|
ನಿಷ್ಟಾಚಾರಿ ಷಟಸ್ಥಲಮೂರ್ತಿ-ಎನ್ನುತ
ಶ್ರೇಷ್ಟ ಪ್ರಭುದೇವರು ಬಾಗಿದರು|| ೭೯

ಅಂಗ ಲಿಂಗ ಸಂಗ| ಕಂಗಳದಂಗಳದಿ|
ಲಿಂಗಭರಿತ ಸಿದ್ಧರಾಮರಿಗೆ-ಚನಬಸವ
ಭಂಗವಳಿದು ಆಗ ವಂದಿಪರು|| ೮೦

ಯೋಗಿ ಚಕ್ರವರ್ತಿ| ಶ್ರೀಗುರು ಸಿದ್ಧೇಶ|
ಬಾಗಿ ನಮಿಸುವೆ ಪಾದಕ್ಕೆ-ಎಂದರು
ಆಗ ಮಡಿವಾಳಮಾಚಿ ತಂದೆ|| ೮೧

ಭೂತದಯೆಯ ಸಂ-| ಭೂತ ಪ್ರೀತನಾಥ|
ಖ್ಯಾತವಂತ ಸಿದ್ಧರಾಮನ-ನಿಲವಿಗೆ
ನಿತ್ಯ ಭೃತ್ಯನಾಗಿ ನೆನೆಯುವೆ|| ೮೨

ಒಡೆಯ ಸಿದ್ಧರಾಮರ| ಅಡಿಗಡಿಗೆ ನುತಿಸಿ|
ಕಡೆಗಾದೆನಯ್ಯ ಭವಗೆದ್ದು-ಎಂದರು
ಸೊಡ್ಡಳಬಾಚರಸ ನಯದಿಂದ|| ೮೩

ದಶವಾಹನಂಗಳ| ವಾಸವಳಿದ ನಿಜದ|
ಶಿಶುವಾದೆ ಸಿದ್ಧರಾಮಯ್ಯ-ಹೇಳಿದರು
ಅಸಮ ನೀರವೊರನ ಬೊಮ್ಮಯ್ಯ|| ೮೪

ಪ್ರಾಣವೆ ಲಿಂಗವಾದ| ಪ್ರಣವ ಸ್ವರೂಪಿಗೆ|
ಅಣಿಮಾದಿ ಸಿದ್ಧಿಯಲ್ಲಗಳೆದ-ರಾಮಗೆ
ಮಣಿದು ಮೂರ್ಹೊತ್ತು ನಮಿಸುವೆ|| ೮೫

ಹರ ಸಿದ್ಧರಾಮನೆ| ಪರಮ ಗುರುದೇವನೆ|
ಹರಸುತ ಮರುಳ ಶಂಕರ-ದೇವರು
ಎರಗಿದರು ಸಿದ್ಧನ ಅಡಿಗಳಿಗೆ|| ೮೬

ಯೋಗಿ ಶಿವಯೋಗಿಯೆ| ಭೋಗಿ ಲಿಂಗೋಪಭೋಗಿ|
ಆಗು ಹೋಗುಗಳ ದಾಟಿರುವೆ-ಎನ್ನುತ
ಮುಗುಧ ಸಂಗಯ್ಯ ನಮಿಸುವ|| ೮೭

ಮಂಗಳಮಯ ಶಿವ| ಜಂಗಮ ಪುಂಗವನೆ|
ಲಿಂಗಪ್ರಾಣಿ ಸಿದ್ಧರಾಮನ-ಪಾದಕ್ಕೆ
ಹಿಂಗದೆ ಶರಣೆಂದ ಸತ್ಯಣ್ಣನು|| ೮೮

ಸಟೆಯನು ಮೆಟ್ಟಿದ| ದಿಟ ಶಿವಯೋಗಿಯ|
ಮಾಟ ಕೂಟದ ನಿಲವಿಗೆ-ಶರಣೆಂದು
ಘಟವಾಳಯ್ಯ ನಮಿಸಿದರು|| ೮೯

ಪ್ರಣವ ಪ್ರಾಣವಾಗೆ| ಪ್ರಾಣ ಪ್ರಣವವಾಗಿ|
ಪ್ರಾಣಲಿಂಗಿ ಸಿದ್ಧರಾಮರ-ಪಾದಕ್ಕೆ
ಹಣಿ ಹಚ್ಚಿದರು ಅಜಗಣ್ಣ|| ೯೦

ಸಮತೆಯ ನುಡಿಯಂದ| ಮಮತೆಯ ನಡೆತಂದ|
ಸಮಯೋಗಿ ಸಿದ್ಧರಾಮರ-ಅಡಿಗಳಿಗೆ
ನಮಿಸಿದರಾಗ ಅಪ್ಪಣ್ಣ|| ೯೧

ಬಂಧನ ಹರಿಸಿದಾ-| ನಂದ ನಿಜಯೋಗಿಯು|
ನಿಂದಿಹನು ಮಾಯೆಯನೆ ಮೆಟ್ಟಿ-ಶರಣು
ಎಂದರು ನಿರ್ಲಜ್ಜ ಶಾಂತಯ್ಯ|| ೯೨

ಗುಣರಹಿತ ಶಿವ-| ಗಣವರೇಣ್ಯ ದೇವ|
ಮಣಿಯುವೆ ಶಿವಯೋಗಕ್ಕೆ–ಎಂದರು
ಪ್ರಣವರೂಪಿ ಸಗರದ ಬ್ರಹ್ಮಯ್ಯ|| ೯೩

ಇಹಪರವ ಗೆಲಿದ| ಮಹಾಯೋಗಿಯ ಪಾದ|
ಮಹಿಮರೆ ನಿಮ್ಮಿಂದ ಕಂಡೆನು-ಎಂದರು
ಬಹುರೂಪಿ ಚೌಡಯ್ಯ ಬಕುತಿಲಿ|| ೯೪

ಯೋಗಿ ಶಿವಯೋಗಿಗೆ| ಬಾಗೀತು ಮಸ್ತಕ |
ಆಗಣಿತರಿಗೆಲ್ಲ ಒಡೆಯನು-ಹಾಡಿದರು
ನಿಗಮದ ಬೊಮ್ಮಿದೇವಯ್ಯ || ೯೫

ಸಲ್ಲಲಿತ ಸುಜ್ಞಾನ| ಸಲ್ಲಗೊಳಿಸಿದರು |
ಸಲ್ಲಿದರು ಶಿವಶರಣರಲಿ-ನುಡಿದರು
ಒಲಿದು ಕಲಿಕೇತ ಬ್ರಹ್ಮಯ್ಯ || ೯೬

ನೋಟ ಸಮರಸವಾಗೆ| ಕೂಟ ದಾಟುವ ಭವ-|
ಮೆಟ್ಟಿ ನಿಂದಿಹ ಶಿವಯೋಗಿಗೆ-ನಮಿಪರು
ತಟ್ಟನೆ ಜೋಧರ ಮಾಯಣ್ಣ || ೯೭

ಅಣಿಮಾದಿ ಸಿದ್ಧಿಗಳ| ತೃಣಕರಿಸಿ ಬಿಟ್ಟಾತ |
ಅಣಿಯಾಂಕಧರನಿಗೆ ನೆನೆಯುವೆ-ಎಂದರು
ತ್ರಿಣಯನ ದಾಸಿಮಯ್ಯರು || ೯೮

ಶುದ್ಧ ಸಾಹಿತ್ಯದ| ಸಿದ್ಧಪ್ರಸಾದಿಯೆ ಪ್ರ-|
ಸಿದ್ಧ ಪ್ರಸಾದಿ ಸಿದ್ಧಪತಿಗೆ-ಭವವ
ಗೆದ್ದ ಕಕ್ಕಯ್ಯನ ಶರಣಾರ್ಥಿ || ೯೯

ಸಂಧಿ ೪೦

ತುಂಬಿ ತುಳುಕಿತ್ತು | ಅಂಬುಧಿ ತೆರದಂತೆ |
ಕಂಬನಿ ಸುರಿಸೂತ ನೀಲಮ್ಮ-ನುಡಿದರು
ಶಂಭುವಿನವತಾರಿ ಸಿದ್ಧರಾಮ || ೧

ಏನೆಂದು ಪಾಡಲಿ | ಏನೆಂದು ಹರಸಲಿ |
ಎನ್ನ ಕಂದ ಬಾರೆಂದು ಕರೆಯಲೆ-ಎಂಡ-
ಳಾನಂದದ ಭರದಲ್ಲಿ ನೀಲಮ್ಮ || ೨

ಕಂದನ ಕಂದನಾಗಿ | ಬಂದೆನ್ನ ಕರುಳಿನ |
ಹಂದರದಿ ವಾಸ ಮಾಡೀದ-ಸಿದ್ಧೇಶಗೆ
ವಂದಿಸಿದರಾಗ ನಾಗಲಾಂಬೆ || ೩

ಅಂಗಮನಪ್ರಾಣ | ವಿಂಗಡಿಸದೆ ಒಂದಾಗಿ |
ಲಿಂಗದಿ ಮುಡುಪಿಟ್ಟ ಲಿಂಗಪ್ರಾಣಿ-ಸಿದ್ಧಗೆ
ಗಂಗಾಂಬಿಕೆಯ ಶರಣಾರ್ಥಿ || ೪

ಅಕ್ಕಮಹಾದೇವಿಯು। ಗಕ್ಕನೆ ಮಣಿದಳು।
ಮಿಕ್ಕಿ ಮೀರಿದ ಬೆಳಗಿನ-ಮಾಬೆಳಗೆ
ಅಕ್ಕರದ ಬೆಳೆಯಾಗಿ ನಿಂತಿರುವಿ॥ ೫

ಮುಕ್ತಿಯ ಮೂಗುತಿ। ಶಕ್ತಿಗೆ ಮಗುವಾಗಿ ವಿ-।
ರಕ್ತಿಯ ಪುತ್ಥಳಿ ನೀವಾಗಿ-ಸಿದ್ಧರಾಮ
ಮುಕ್ತಾಯಿಯ ನೆನವಿಗೆ ಘನವಾಗಿ॥

ಸುಗ್ಗಲವ್ವೆ ತಾಯಿ। ನಾಗಲೆ ಮಾತೆಯರು।
ಹಿಗ್ಗಿನಂದದಿ ಶಿರವಪ್ಪಿ-ಪಾಡಿದರು
ಕಗ್ಗತ್ತಲೆಯ ಕಳೆದ ಕುವರನೆ॥ ೭

ಹುಟ್ಟು ಮೌನಿಯಾಗಿ। ಹುಟ್ಟೇದೆ ಲೋಕದಿ।
ಮೆಟ್ಟಿ ನಿಂದಿಹೆ ಮಹದಾಸೆ-ಸಿದ್ದಂಣ
ತುಟ್ಟ ತುದಿಯ ಮಹಾಬೆಳಗೆ॥ ೮

ವರದಾನಿ ಗುಡ್ಡವ್ವೆ। ಉರ ತುಂಬಿ ಹಾಡಿದರು।
ಕರದಿಷ್ಟಲಿಂಗದಿ ಪ್ರಾಣವ-ಬೆರಸಿದ
ವರಸಿದ್ಧರಾಮರಿಗೆ ಜಯಜಯ॥ ೯

ಬಟ್ಟ ಬಯಲಿನ। ತೊಟ್ಟಿಲ ಕೂಸಾಗಿ।
ಹುಟ್ಟಿ ಬಂದಿಹೆ ಸಿದ್ಧರಾಮ-ಮಹಾದೇವಿ
ನೆಟ್ಟನೆ ನುತಿಸುತ ಬದುಕೂವೆ॥ ೧೦

ಪ್ರಾಣವಾಯುವಳಿದ। ಪ್ರಾಣಲಿಂಗದೊಳು।
ತಾಣವರಿತು ಅಚಲ! ನಿಂದಿಹ-ಸಿದ್ಧೇಶಗೆ
ಮಣಿವೆವು ಮೋಳಿಗೆ ದಂಪತಿಯು॥ ೧೧

ಅಂಗ ಗುಣವಳಿದು। ಲಿಂಗನೆ ತಾವಾದರು।
ಸಂಗ ಸಮರಸ ನಿಜಯೋಗಿ-ಸಿದ್ಧರಾಮ
ಲಿಂಗವೆಂದರು ಶಿವದಾಸಿಮಯ್ಯ॥ ೧೨

ಇಷ್ಟ ಪ್ರಾಣ ಭಾವ। ದೃಷ್ಟಿಯೊಳು ಬೆರಸಿ।
ಇಷ್ಟೈಕ್ಯ ಶಿವ ಸಿದ್ಧರಾಮ-ಸಲುವೆಂದು
ನಿಷ್ಠೆಯಲಿ ನುಡಿದರು ಅಮುಗಿದೇವ॥ ೧೩

ಘನಕ್ಕೆ ಘನವಾದ। ಚಿನುಮಯ ಲಿಂಗದಲಿ।
ತಾನೆ ತಾನಾಗಿ ಬೆಳಗಿಹರು-ಎಂದರು
ಮನಪಾರೆ ರಾಯಸದ ಮಂಚಣ್ಣ। ೧೪

ಶರಣು ಸಿದ್ಧರಾಮ। ಪರಮ ಶಿವಯೋಗಿಯೆ।
ಕರದಿಷ್ಟಲಿಂಗದೊಳು ಹೊಂದಿದಾ-ನಂದನೆ
ವರವಾಗು ಡಕ್ಕೆಯ ಬಮ್ಮನಿಗೆ॥ ೧೫

ಮಂಗಳಾಂಗನ ಪ್ರಭೆ। ಕಂಗಳಲಿ ತುಂಬಿತ್ತು।
ಜಂಗಮ ಮೂರುತಿ ಸಿದ್ಧೇಶ-ನಿನ್ನನು ನಿಜ-
ಲಿಂಗ ದೇವನು ವಂದಿಪನು॥ ೧೬

ನೆಲೆಗೊಂಡಿದೆ ಭಕ್ತಿ। ತಲೆ ತುಂಬಿದೆ ಗ್ಯಾನ।
ಬಲ್ಲಹ ವಿರಕ್ತ ಸಿದ್ಧೇಶನ-ನಿಲವಿಗೆ
ತೆಲುಗು ಬೊಮ್ಮನ ಶರಣಾರ್ಥಿ॥ ೧೭

ಅಂಗವಾರಕ್ಕಾರು। ಲಿಂಗವ ಬೆರಸಿದ।
ಸಂಗಸಮರಸ ಸಿದ್ಧರಾಮ-ಎಂದನು
ಹಂಗ್ಹರಿದ ವಾರೀಧಿ ಬೊಮ್ಮಯ್ಯ॥ ೧೮

ಒಕ್ಕಲ ಮುದ್ದಯ್ಯ। ಚಿಕ್ಕಯ್ಯ ಬೊಕ್ಕಸದ।
ಅಕ್ಕರದಿ ಶಿವ ಸಿದ್ಧೇಶಗೆ-ನಮಿಸುತ
ಚೊಕ್ಕಾದ ಮನದಿಂದ ಬಾಗಿದರು॥ ೧೯

ಚಿಕ್ಕಯ್ಯ ಮಾದಂಣ। ರಕ್ಕಸದ ಬ್ರಹ್ಮಯ್ಯ।
ಮಿಕ್ಕಿಮೀರಿದ ಶಿವಯೋಗಿ-ಎಂದರು
ಅಕ್ಕರದ ಶರಣು ಶರಣಾರ್ಥಿ॥ ೨೦

ಲಿಂಗಭರಿತ ನಿನ್ನ। ಅಂಗಾಂಗ ಲಿಂಗಮಯ।
ಜಂಗಮ ಲಿಂಗವೆ ಸಿದ್ಧರಾಮ-ನಿನ್ನನು
ಲಿಂಗಪ್ರಾಣಿ ಕಮಲವ್ವೆ ನಮಿಸುವೆ॥ ೨೧

ಗುರುವಿನ ಗುರುವೆ। ಪರಮಾವತಾರಿಯೆ।
ವರವಾಗು ಸಿದ್ಧರಾಮಯ್ಯ-ಸೋಮವ್ವೆಯ
ಕರಪಿಡಿದು ನೀನು ನಡಿಸಯ್ಯ॥ ೨೨

ಉದಾರ ಚಂಗಳವ್ವೆ। ಸದಾನಂದಿ ಚೋಳಕ್ಕ।
ಸದಮಲ ಸಿದ್ಧೇಶಗೆ ನಮಿಸುತ-ಪಾಡಿದರು
ಹೃದಯಾನಂದದ ಲಿಂಗವೆ॥ ೨೩

ಶಂಭೋ ಸಿದ್ಧರಾಮ। ನಂಬಿದ ಮಕ್ಕಳಿಗೆ
ಇಂಬುಗೊಡು ನಿನ್ನಡಿಗಳಲಿ-ಎಂದಳು
ನಂಬಿಯಕ್ಕ ವಿನಮ್ರದಿ॥ ೨೪

ಲಿಂಗ ಸಿದ್ಧರಾಮ। ಹಿಂಗದ ಕರುಣೆಯು।
ಮಂಗಳಮಯ ನಿನ್ನ ಅನವರತ-ನಮಗಿರಲಿ
ಸಂಗನ ಶರಣೆಯರು ನುತಿಸಿದರು॥ ೨೫

ಶಿವ ಸಿದ್ಧರಾಮೇಶ। ಭವದಲ್ಲಿ ಬರಿಸಿದಿರಿ।
ಭವಹರನ ತೊತ್ತಿಗೆ ಕರುಣಿಸು-ನೀವಿನ್ನು
ಶಿವಶರಣೆಯರು ಬಾಗಿ ನಮಿಸಿದರು॥ ೨೬

ಹೃದಯ ಕಮಲವು। ಉದಿಸಿದೆ ಎಂದೆನುತ।
ಸದಯ ಸಿದ್ಧೇಶನ ಪಾದಕ್ಕೆ-ಬಸವೇಶ
ಮುದದಿಂದ ಪೂಜೆಗೈದರು॥ ೨೭

ಧೂಪದ ಸುಗಂಧ। ವ್ಯಾಪಿಸಿತು ಮಹಮನೆ।
ದೀಪದ ಚಿಜ್ಜ್ಯೋತಿ ಬೆಳಗಿತು-ಹೊಳದಿತ್ತು
ಲೋಪಾಗಿ ಕರಣತ್ರಯಗಳು॥ ೨೮

ಬೆಳಗಿನ ಬೆಳಗೆ। ಬೆಳಗೂವೆ ಆರತಿಯ।
ಹೊಳೆಯುವ ಪ್ರಾಣಲಿಂಗಿಗೆ-ಎನ್ನಮನ
ಸೆಳೆದಂಥ ಪ್ರಣವ ರೂಪಗೆ॥ ೨೯

ಕೂಡಿದ ಶರಣರು। ಪಾಡಿದರು ಮಂಗಲ।
ಕಿಡಿಗಣ್ಣಿನ ಸಿದ್ಧೇಶಗೆ-ಜಯ ಜಯ
ಹಿಡಿದೆತ್ತಿಹರು ಆರತಿಯ॥ ೩೦

ಆರತಿ

ಮಂಗಲಂ ಜಯ ಮಂಗಲಂ ಶಿವಯೋಗಿ ಸಿದ್ಧರಾಮಗೆ |
ಸಂಗನಬಸವಲ್ಲಮಪ್ರಭು ಚನ್ನಬಸವ ದೇವಗೆ || ||ಪಲ್ಲ||

ಅಂಗದ ಕಳೆ ಮೊಳೆಯು ಲಿಂಗದಿ | ಭಂಗವಾಗದೆ ನಿಶ್ಚಲ |
ಮಂಗಳಾತ್ಮಕ ಮನವು ಸಂಗದಿ | ಲಿಂಗರೂಪವ ತಾಳಿದ || ೧

ಅಂಗಮಾಟವನಳಿದು ಲಿಂಗದ | ಕೂಟಸುಖದೊಳು ಸಮರಸ |
ಸಂಗಸಂಯೋಗದಿ ಆರಂಗವು | ಲಿಂಗವೆ ತಾನಾದವು || ೨

ಲಿಂಗಮುಖ ಜಂಗಮವು ತನ್ನ | ಪ್ರಾಣವೆಂದು ಬೆರೆಯುತ |
ಜಂಗಮಕೆ ಸರ್ವಾಧಾರನಾಗಿಹ | ಸಂಗನ ಬಸವಣ್ಣಗೆ 1 ೩

ಸಿದ್ಧಯೋಗದ ಬುದ್ಧಿ ಭ್ರಮೆಯನು | ತಿದ್ದಿ ನಿಜಶಿವಯೋಗದ |
ಶುದ್ಧಮಾರ್ಗವ ಸಹಜ ತೋರಿದ | ಅಲ್ಲಮಪ್ರಭುದೇವಗೆ || ೪

ನಿಯುತಜ್ಞಾನಾಚರಣೆಯಿಂದ | ಸ್ವಾಯುತ ಸಮರಸವಾಗಿಹ |
ಮಾಯೆಗೆಲಿದ ಸುಜ್ಞಾನಿ ಷಟಸ್ಥಲ | ಗುರು ಚೆನ್ನಬಸವಗೆ || ೫

ಘನವ ನೆನೆದು ಮನವು ಚೆನ್ನ | ಬಸವನೆ ತಾನಾಯಿತು |
ಪ್ರಾಣವು ಬಸವಣ್ಣನಾಗಿ | ಬೆಳಗಿಸುವ ಶಿವಯೋಗಿಗೆ || ೬

ಭಾವಭಯಲೊಳು ದೇವ ಅಲ್ಲಮ | ಪ್ರಭುವೆ ತುಂಬಿತುಳಕೂತ |
ಶಿವಮಂತ್ರವೆ ಕಾಯವಾಗಿ | ನವಲಿಂಗದೊಳವಿರತ || ೭

ವಿಶ್ವಧರ್ಮದ ಗುಡಿಯನೆತ್ತಿ | ದಿಗದಿಗಂತದಿ ಮೆರಯಿಸೆ |
ಶಾಶ್ವತ ಪರಂಜ್ಯೋತಿ ಬೆಳಗಿದೆ | ಜಯ | ಸಿದ್ಧರಾಮಗೆ || ೮

ಮಂಗಳ ಪಾಡಿದರು | ಸಂಗನ ಶರಣರು
ಜಂಗಮ ಮೂರುತಿ ಸಿದ್ಧರಾಮ-ಜಯವೆಂದು
ಲಿಂಗ ನಿಜಯೋಗಿಗೆ ಹರಸಿದರು || ೩೧

ಸಾಕಾರವಳಿದಿಹ | ಏಕಮುಖದ ಜ್ಯೋತಿ |
ಜೋಕೆಯಲಿ ಕರ್ಪೂರದಾರತಿ-ಬಸವೇಶ
ನಿಃಕಲ ನೀವೆಂದು ಬೆಳಗಿದರು || ೩೨

ಭೇರಿಯ ನಾದವು | ಪರಿಪೂರ್ಣ ಘಂಟೆಯು |
ಸಾರಿತ್ತು ಚಿದಾಕಾಶ ಮಂಡಲದಿ-ಸಿದ್ಧೇಶ
ಪರಿಣಮಿಸಿತ್ತು ನಿಶ್ಶಬ್ದವಾಗಿ || ೩೩

ಎನ್ನಲ್ಲಿ ಏನಿಲ್ಲ | ಮಾನ್ಯ ನಿನಗರ್ಪಿಸಲು |
ಎನ್ನನೆ ಕೊಳ್ಳಯ್ಯ ಸಿದ್ಧರಾಮ-ನೈವೇದ್ಯ
ಮನ್ನಿಸು ನೀನು ಸ್ವೀಕರಿಸು || ೩೪

ಹಂಬಲಿಸಿದ ಮನ | ಬಿಂಬಿಸಿದೆ ನಿನ್ನಲ್ಲಿ |
ನಂಬುಗೆಯ ತಾಂಬೂಲ ತಂದಿಹೆ-ಯೋಗೀಶ
ಇಂಬುಗೊಡು ನಿನ್ನ ಪಾದದಿ || ೩೫

ನಿವಾಳಿ ಬೆಳಗೂತ | ಶಿವಶರಣೆಯರೆಂದರು |
ಶಿವತೇಜ ಭರಿತ ನಿಜಯೋಗಿ-ಸಿದ್ಧೇಶ
ಭವಮಾಲೆಯನು ಗೆಲಿಸಯ್ಯ || ೩೬

ಶಿವಯೋಗದ ತೇಜ | ಅವಿರತ ಬೆಳಗೂತ |
ಕವಿದ ಕತ್ತಲೆ ಹರಿಸಿತ್ತು-ಈ ಭವ-
ಭವದ ಮಾಲೆಯ ಹರಿಸಿತ್ತು || ೩೭

ಶರಣಾಗು ಸಿದ್ಧೇಶ | ವರವಾಗು ಸಿದ್ಧರಾಮ |
ಕರುಣಾಕರ ಸಿದ್ಧರಾಮೇಶನೆ-ಹರಹರ
ಗುರು ಪರಮ ಗುರವೆ ಜಯಜಯ || ೩೮

ಶರಣ ವರೇಣ್ಯನ | ಚರಣ ಕಮಲಕ್ಕೆ |
ಎರಗುತ ನಾವು ನುತಿಪೆವು-ಸಿದ್ಧರಾಮ
ವರವಾಗು ಶರಣಗಣಕ್ಕೆ || ೩೯

ಷಡ್ವಿಧ ಪಕ್ವಾನ್ನ | ದೃಢಭಕ್ತಿ ರಸದೊಳು |
ಮೃಡರೂಪ ಯೋಗಿಗೆ ಅರ್ಪಿಸುತ-ಶರಣೆಯರು
ಒಡೆಯ ಸಿದ್ಧೇಶಗೆ ನಮಿಸಿದರು || ೪೦

ಗಂಗಾಂಬಿಕೆ ಮೊದಲಾದ | ಸಂಗನ ಶರಣೆಯರು |
ಜಂಗಮ ಸಿದ್ಧೇಶಗೆ ಎಡೆಮಾಡಿ-ವಂದಿಸಿ
ಲಿಂಗಕರ್ಪಿತವಾಗಲೆಂದರು || ೪೧

ತಾಯಿ ಶರಣೆಯರೆ । ಛಾಯೆ ಕರುಣೆಯದಿರಲಿ ।
ಕಾಯುವದು ಕಡೆತನ ಶ್ರೀಹಸ್ತ-ಸವೆಯದ
ತಾಯೆ ಪ್ರಸಾದ ಕರುಣಿಸಿರಿ ॥ ೪೨

ಸತ್ಯ ಶರಣೆಯರೆಲ್ಲ । ನಿತ್ಯ ತತ್ವದ ಭಿಕ್ಷೆ ।
ಮತ್ತೆ ನೀಡೂತ ಸಲಹುವಂತೆ-ಮಾಡೆಂದು
ಕರ್ತೃವಿಗೆ ಶಿವಯೋಗಿ ಕೋರಿದರು ॥ ೪೩

ಸೀಮೆಯ ದಾಟೀದ । ಸೋಮಧರ ಸಿದ್ಧೇಶ ।
ಸ್ವಾಮಿ ಹೇ ದೇವ ಶರಣೆಂದು-ನಮಿಪೆವು
ವ್ಯೋಮಕಾಯನೆ ತಂದೆ ಕರುಣಿಸು ॥ ೪೪

ಶರಣರ ಶಿವತತ್ವ । ಶರಣರ ಘನತೇಜ ।
ಕರುಣಿಸು ಪರತರ ಶಿವಯೋಗಿ-ಯತೀಶ
ಹರರೂಪ ಜಯವೆಂದು ಬಾಗಿದೆವು ॥ ೪೫

ಕಾಯಕ್ಕೆ ಕೊರಗಿಲ್ಲ । ಮಾಯಕ್ಕೆ ಮರುಗಿಲ್ಲ ।
ಮಾಯೆಯ ಗೆಲೆದ ಸಹಜನೆ-ನಿಜಯೋಗಿ
ಕಾಯಬೇಕು ನಮ್ಮ ಕಡೆತನಕ ॥ ೪೬

ಅನುವರಿತು ನಿಜ । ಘನವನೆ ಸಾರಲು ।
ಅನುಭವ ಮಂಟಪ ಕಟ್ಟಿದರು-ಶರಣರು
ಮಾನವ ಕಲ್ಯಾಣ ಬಯಸಿದರು ॥ ೪೭

ಮಾನವ ಜೀವನದ । ಹೀನಗುಣಗಳ ಕಳೆದು ।
ಘನವ ಬೆರೆಯಲು ತವಕಿಸಿ-ಶರಣರು
ಅನುಭಾವ ಬಿಚ್ಚಿ ಬೀರಿದರು ॥ ೪೮

ಮುಚ್ಚು ಮರೆಯಿಲ್ಲದೆ । ಬಿಚ್ಚಿಟ್ಟು ಅನುಭಾವ ।
ಮೆಚ್ಚಿಸುವರು ಲೋಕಕ್ಕೆ-ಶರಣರು
ಹುಚ್ಚು ಸೆಳೆಯನು ತಡೆವರು ॥ ೪೯

ಕೀಳು ಮೇಲುಗಳೆಂಬ । ಕುಲಾಚಾರ ಎಣಿಸದೆ ।
ಕೊಳೆ ತೊಳೆಯಲು ಕೂಡಿದರು-ಸಾರಲು
ಇಳೆಯೊಳು ಮಾನವ ಕುಲವೊಂದೇ ॥ ೫೦

ಮಲಮೂರು ತೊಳೆದರು। ಕುಲಸೂತಕವ ಕಳೆದು।
ಶೀಲ ಕ್ರಿಯಾಜ್ಞಾನ ಆಚರಿಸಿ-ಶರಣರು
ಮೂಲೋಕಕ್ಕೆಲ್ಲ ಒಡೆಯರು॥ ೫೧

ಕುಲವಳಿದು ಹುಟ್ಟೇನ। ಛಲವಿಡಿದು ತತ್ವದ।
ಬಲಶಾಲಿಗಳಾಗಿ ಸಾರಿದರು-ಕುಲವೊಂದೆ
ಜಲನೆಲ ಗಗನವು ಒಂದಿಹುದು॥ ೫೨

ಶಿವಾನುಭಾವದ। ಸವಿಯುದ ಅಮರುತ।
ಸೇವಿಸಿ ತಾವು ಸುಖಿಪರು-ಲೋಕದ
ಸಾವಿನ ಭಯುವ ಮೆಟ್ಟಿಹರು॥ ೫೩

ಇಚ್ಛಿಸಿ ಆದರು। ನಿಚ್ಚಣಿಕೆ ಶಿವಲೋಕದ।
ಮೆಚ್ಚಿ ಶಿವತತ್ವ ಬಂದವರನು-ಒಯ್ವರು
ಸಚ್ಚಿದಾನಂದನ ತಾಣಕ್ಕೆ॥ ೫೪

ದಾಸೋಹ ಮಾಡುವರು। ಸೋಸಿ ತನು ಮನ ಧನವ।
ಲೇಸ ಬಯುಸುವರು ಜೀವಿಗಳ-ಶರಣರ
ಹೊಸ ದಾರಿ ತೋರಿ ಕರೆಯುವರು॥ ೫೫

ಆಸೆ ಆಮಿಷಗಳಿಗೆ। ಹೇಸಿ ದೂರೀಕರಿಸಿ।
ಈಶನ ಫಲಪದಕೆ ಕೈಚಾಚದೆ-ಶರಣರು
ಪಾಶ ವಿಮೋಚನೆ ಮಾಡಿದರು॥ ೫೬

ಕಿಂಕರ ಮಾಡಲು। ಬಿಂಕವ ಬಿಡಿಸಿದರು।
ಲೆಂಕಿಯಾಗೆಂದರು ಶರಣರ-ಹಂಕಾರಕೆ
ಬೆಂಕಿ ಹಚ್ಚಿ ಬೂದಿ ಮಾಡಿದರು॥ ೫೭

ಸಕಲ ಜೀವಿಗಳಿಗೆ। ಏಕೋಭಾವದಿ ನೋಡಿ।
ಮೂಕಪ್ರಾಣಿಗಳ ವಧೆಯ-ನಿಲ್ಲಿಸಿ
ಲೋಕೋಪಕಾರವ ಮಾಡಿದರು॥ ೫೮

ದಯವೆ ಧರ್ಮವೆಂದು। ನಯವೆ ಬದುಕವೆಂದು।
ನಿಯಾಚಾರವೆ ಬಾಳು ಎಂದು-ಸಾರೂತ
ನ್ಯಾಯುತಲಿಂಗದೊಳು ಸುಖಿಪರು॥ ೫೯

ಪರಿಶುದ್ಧ ಕಾಯಕ| ಅರಿತು ಮಾಡಲುಬೇಕು|
ಬರಿಕಾಯುವಾಗಿ ಬದುಕುವುದು-ಹೊಲ್ಲೆಂದು
ಶರಣ್ರು ಅನುಭಾವ ಪೇಳಿದರು|| ೬೦

ಅಲ್ಲಲ್ಲಿ ಹುಡುಕಲು| ಎಲ್ಲಿದೆ ಕೈಲಾಸ|
ಇಲ್ಲಿಯೆ ಕಾಯಕ ಮಾಡಲು-ಕೈಲಾಸ
ನೆಲಸಿದ್ದು ಲೋಕಕ್ಕೆ ತೋರಿದರು|| ೬೧

ಕಣ್ಣು ಕಾಣದವರು| ಹೆಣ್ಣು ಕೀಳವೆಂದು|
ಅಣ್ಣಗಳುಸಿರ ಬೇಡಿರೆಂದು-ಉನ್ನತ
ತಾಣಗೊಟ್ಟು ಮನ್ನಣೆಯಿತ್ತರು|| ೬೨

ನರೆ ಗೂಹಲಾಗಲು| ಹಿರಿಯರೆಂದೆನ್ನದೆ|
ಕಿರಿಯರ ಜ್ಞಾನಕ್ಕೆ ಹಿರಿತನ-ಕೊಟ್ಟರು
ಶರಣರು ಗೌರವಿಸಿದರು|| ೬೩

ಸದುವಿನಯಕ್ಕೆ| ಸದಾ ಶಿವನೊಲಿವನು|
ಮದಹಂಕಾರ ಹರಿಸುತ-ಲೋಕದ
ಬದುಕಿಗೆ ಬಲವ ತಂದರು|| ೬೪

ದೇವನೊಬ್ಬನಿಹನು| ಅವನಿಗೆ ಹಲವು ನಾಮ|
ಅವನಿಯೊಳು ರೂಪವ ಕಲ್ಪಿಸಿ-ಪೂಜಿಪುದೇ
ದೇವನೊಬ್ಬನೆಂದು ಸಾರಿದರು|| ೬೫

ಸಂಚಯ ಮಾಡುವುದು| ಲಂಚವ ತಿನ್ನುವುದು|
ಮುಂಚಿನ ಗುಣವ ಬಿಡಿಸುತ-ಮಾನವನ
ಸಂಚಿತ ಪ್ರಾರಬ್ಧ ಕಳೆವರು|| ೬೬

ನುಡಿಯ ಕಲಿಸಲು| ನಡೆಯ ನಡೆಸಲು|
ಉಡಗಲಿಸಲು ಶರಣರು-ಶುಭದಲ್ಲಿ
ಕೂಡಲು ಕಲಿಸಲು ನೆರೆದರು|| ೬೭

ಸಮತೆಯ ನೆಲಗಟ್ಟು| ಮಮತೆಯ ಮೆಲ್ಕಟ್ಟು|
ಸುಮನವೆಂಬ ಕಂಬ ನೆಟ್ಟಿಹರು-ಭಕ್ತಿಯ
ಮಾಮನೆಯ ಸಂಭ್ರಮ ಸಂಪತ್ತು|| ೬೮

ಬಸವನ ಯೋಗವ। ವಸುಧೆಯೊಳಾಚರಿಸಿ।
ದೆಸೆದೆಸೆಯೊಳು ಬೀರೂತ-ಒಸಗೆಯು
ಹಸನಾಗಲೆಂದು ಬಾಳವು॥ ೬೯

ಫಲ ಪದ ಬಯಸದೆ। ಸುಲಲಿತ ಜ್ಞಾನದೊಳು
ಲೀಲೆಯಲಿ ಬಾಳುವ ಶರಣರು-ವಿಶ್ವದ
ಕುಲಕೋಟಿ ಉದ್ಧರಿಸ ಬಂದವರು॥ ೭೦

ಅಂಗದ ಮೇಲಿಷ್ಟ। ಲಿಂಗವ ಧರಿಸಲು।
ಸಂಗಮನಾಥನಿವನೆಂದು-ಶರಣರ
ಸಂಗವೆ ಜೀವಾಳವೆಂದರು॥ ೭೧

ಮಹಾ ಶರಣರ ಸಂಗ। ಸಹಜದ ಶಿವಯೋಗ।
ಮಹಾನುಭವದ ಪರಿಣಾಮ-ಲಿಂಗದ
ಸಾಹಿತ್ಯ ಶರಣರೆ ಆದರು॥ ೭೨

ಷಡುಸ್ಥಲಗಳ ತಮ್ಮ। ಪದಾಂಗದೊಳಗೆಲ್ಲ।
ಬಿಡದೆ ಸಮರಸಗೈಯ್ಯುತ-ಶರಣರು
ಜಡರಿಗೆ ಅನುಭವ ಪೇಳಿದರು॥ ೭೩

ಅಷ್ಟ ವರ್ಣದಿ ನಿಜ। ನಿಷ್ಠೆಯಿಡಲು ನಮ್ಮ।
ಕಷ್ಟಕಾರ್ಪಣ್ಯ ಹರಿವುದು-ಶರಣರ
ಸೃಷ್ಟಿ ಬೇರೆಂದು ಸಾರಿದರು॥ ೭೪

ಪಂಚಾಚಾರವೆ ತಮ್ಮ। ಪಂಚಪ್ರಾಣವೆಂದು।
ಸಂಚಯುವಳಿದ ಶರಣರು-ಆಚರಿಸಿ
ಮುಂಚಿನ ಜನುಮುವನಳಿದರು॥ ೭೫

ನೂರೊಂದು ಸ್ಥಲಗಳ। ಸಾರ ನಿಜವನರಿತು।
ಏರಿದರು ಎತ್ತರದೆತ್ತರ-ಶರಣರು
ಕರಚಾಚಿ ಎಲ್ಲರನು ಕರೆದರು॥ ೭೬

ಸಹ್ಯಜ್ಞಾನಿಗಳ। ಸಮ್ಮೇಳನ ಕೂಡಿತ್ತು।
ಪಾಮರರ ಪಾವನ ಮಾಡಲು-ಕಲ್ಯಾಣ
ಧಾಮುವ ಮಾಡಿದರು ಶರಣರು॥ ೭೭

ಉಭಯುವಳಿದು ನಿಜ| ಶಬುದ ಗಂಭೀರರು |
ಶುಭ ಕೋರುವರು ಜಗಕೆಲ್ಲ-ಶರಣರು
ತ್ರಿಭುವನ ಗಿರಿಯೇರಿ ನಿಂದವರು || ೭೮

ಕಳೆದು ಕರ್ಣತ್ರಯುವ| ಬೆಳಿಯಿಸಿ ನಯ ಭಕ್ತಿ |
ಹೊಳೆವ ಲಿಂಗಪ್ರಾಣಿ ಮಾಡುತ-ಶರಣರು
ಅಳಿಯದ ನಿಜಸುಖವ ತೋರುವರು || ೭೯

ಈರೈದು ಪಾದೋದಕ| ಅರಿಯಲು ಶಿವತತ್ವ |
ಶರಣರನುಭಾವ ಮಂಟಪದಿ-ಕೊಡುತ
ಇರುವಿನ ನೆಲೆಯುನರಿಯುವರು || ೮೦

ಹನ್ನೊಂದು ಪ್ರಸಾದದ| ಉನ್ನತದನುಭಾವವ|
ಸನ್ನುತ ಶರಣರು ಅರಿಯುತ-ಸಾರಿದರು
ಮುನ್ನವಿದು ಬಿಡದೆ ನಡೆಯುಲು || ೮೧

ಲಿಂಗದ ಪ್ರಭೆಯೊಳು| ಅಂಗಾಂಗ ಬೆಳಗಿಸಿ|
ಸಂಗನ ಶರಣರು ಮರಣಕ್ಕೆ-ಅಂಜದೆ
ಮಂಗಳ ಮಹನವಮಿ ಎಂದರು || ೮೨

ಹಣೆಬರಹ ಸುಟ್ಟು| ಅಣಿಯಂಕಧರನಿಗೆ|
ಗಣ್ಯಭಸಿತ ಮಾಡಿ ಧರಿಸಲು-ನೋವಿನ
ದಣಿವು ಅದರಿಂದ ಪರಿಹಾರ || ೮೩

ಇಲ್ಲಿಯು ಗೆಲುವವರು| ಅಲ್ಲಿಯು ಸಲ್ಲುವರು|
ಬಲ್ಲಹ ಶರಣರ ಅನುಭವ-ಸಾರುತ
ಚೆಲ್ಲಿದರು ಲೊಕಕ್ಕೆ ಹೊಸ ಬೆಳಗ || ೮೪

ಶರಣರ ಸಂಗದೊಳು| ಇರುತಿರಲು ಸಿದ್ಧೇಶ |
ವರ ಪ್ರಭುದೇವ ಅಪ್ಪಣೆ-ಮಾಡಿದರು
ಮರಳುವುದು ಇನ್ನು ಸೊನ್ನಲಿಗಿಗೆ|| ೮೫

ಶಿವಾನುಭಾವದೊಳು| ಶಿವಶರಣರ ಮಧ್ಯದಿ|
ಅವಿರತ ನಾನು ಇರುವೆನು-ಹೇ ಪ್ರಭೊ
ಶಿವಸುಖದೋಳು ರಮಿಸುತ|| ೮೬

ಅಲ್ಲಿ ಇಲ್ಲಿ ಎಂಬ। ಇಲ್ಲದ ಭ್ರಮೆಯದು।
ಬಲ್ಲ ಶರಣರಿಗೆ ಸಲ್ಲದು–ಸಿದ್ಧರಾಮ
ನಿಲ್ಲದೆ ನೀವಿನ್ನು ದಯಮಾಡಿ॥ ೮೭

ಶರಣರ ಸಂಗಸುಖ। ದೊರಕಿದೆ ಇಲ್ಲಿಯೇ।
ಮರಳಿ ಹೋಗುವುದೇತು ಸಾಧ್ಯವು-ನನಗೆ
ಮರಣವೆ ಲೇಸೆಂದು ತೋರುವುದು॥ ೮೮

ಶಿವನ ಅಣತಿಯಂತೆ-। ಶಿವತತ್ವ ಬೀರಲು।
ಭುವಿಗೆ ಬಂದಿರುವೆ ಸಿದ್ಧರಾಮ–ನೀವಿನ್ನು
ತವಕದಿ ಮರಳಬೇಕಯ್ಯಾ॥ ೮೯

ತಾಯಿ ಇಲ್ಲದ ತಸರು। ಕಾಯವಿಡಿದ ಶರಣ।
ದಯವಿಲ್ಲದ ಧರ್ಮವಿದ್ದಂತೆ-ನಾನೊಲ್ಲೆ
ನಯದಿಂದ ನಾನು ಬೇಡುವೆ॥ ೯೦

ಅಭಿನವ ಶ್ರೀಗಿರಿ! ಶುಭಕರ ಸೊನ್ನಲಿಗೆ।
ಶುಭ ಮಂಗಲವದು ನಿಮ್ಮಿಂದ–ಸಿದ್ಧೇ
ಉಭಯ ಸಂದೇಹವಳಿಯ ಬೇಕು॥ ೯೧

ಗುರುತತ್ವದಲಿ ಹುಟ್ಟಿ। ಪರತತ್ವದಲಿ ಬೆಳೆದೆ।
ಶರಣರ ಸಂಗದಿ ಕರಣವ–ಶುಚಿಯಾಗಿ
ಹರಣ ಹೊಸಬೆಳಗ ಕಂಡಿದೆ॥ ೯೨

ಲಿಂಗ ಸಂಗಿಗಳು। ಮಂಗಳ ಮಹಿಮರು।
ಹೆಂಗ ಬದುಕುವೆ ನಾನಗಲಿ-ಓ ದೇವ
ಕಂಗಳಶ್ರುಗಳಿಂದ ಕಾಣದು॥ ೯೩

ಅಗಲಿ ಒಂದು ಗಳಿಗೆ। ಹೋಗುವುದೆ ಸಾಧ್ಯವೆ।
ಆಗದದು ನನ್ನಿಂದ ಆಗದು–ಶರಣರ
ಅಗಲುವಿಕೆ ಪ್ರಾಣ ಸಂಕಟ॥ ೯೪

ಅಗಲಿಕೆಯಿಲ್ಲ ನೀವು। ಅಗಲುವುದು ಇನ್ನೆಲ್ಲಿ।
ಸುಗಮ ಷಟುಸ್ಥಲ ಶಿವಯೋಗಿ-ಹೋಗಿರಿ
ಅಗಲದನಂತದ ತಾಣಕ್ಕೆ॥ ೯೫

ಅನುಪಮ ಸುಖವ। ಅನುಭವಿಸಿ ನಿಮ್ಮಲ್ಲಿ।
ಚೆನ್ನಬಸವನ ಶಿಶುವಾದೆ-ಬಸವ ಪ್ರಭು
ಇನ್ನುಳಿದ ಶರಣರ ಮಗನಾದೆ॥ ೯೬

ಅನುಭಾವಿ ಶರಣರ। ಅನುಮತಿಯಿಂದಾನು।
ಸೊನ್ನಲಿಗಿಗೆ ಮರಳುವೆ-ಮಹಂತರು
ಎನ್ನವ ಇವನೆಂದು ಸಲುಹಿರಿ॥ ೯೭

ಕಾಯ ಕಂಥೆಯ ಕಳೆದು। ಕಾಯವಳಿದು ನಿರ್ವಯ।
ಕಾಯು ಕರಣ ಭಾವ ಸಮಾಧಿ-ಹೊಂದಲು
ಸ್ವಯಲಿಂಗದೊಳು ತಾ ಬಯಲು॥ ೯೮

ಬಯಲ ಭ್ರಮೆಯದು। ಲಯವಾಗಿ ಸಿದ್ಧೇಶ।
ಸ್ವಯಲಿಂಗ ಸುಜ್ಞಾನ ಸಮಾಧಿಯ-ಐದಲು
ಅಯ್ಯ ಅದುವೆ ನಿಜ ಸಮಾಧಿಯು॥ ೯೯

ಸಂಧಿ ೪೧

ಕಿಂಕರರ ಕಿಂಕರ| ಶಂಕರ ಸ್ವರೂಪ|
ಓಂಕಾರ ನೆಲೆ ಶಿವಸಿದ್ಧನ-ಪುರಹರನ
ಲೆಂಕರು ಸಂತಸದಿ ನೆನೆದರು || ೧

ಅಪ್ಪ ಬಸವ ಬರುವೆ| ಬಪ್ಪ ಪ್ರಭುದೇವ ಹೆ-|
ತಪ್ಪ ಚನಬಸವ ಒಪ್ಪಿಸಿ-ಕಳುಹಿರಿ
ಅಪ್ಪಣೆ ಕೊಡಿರಿನ್ನು ಸೊನ್ನಲಿಗಿಗೆ || ೨

ಕಲ್ಯಾಣ ಬಿಡುವಾಗ| ಎಲ್ಲ ಶರಣರು ನೆರೆದು |
ಬಲ್ಲಹ ಬಕುತಿ ಕೇಳಿಯನೆ-ಆಡಿದರು
ಉಲ್ಲಸದಿ ಶರಣು ಶರಣೆಂದು || ೩

ಹಾಡೂತ ಶಿವಭಜನೆ| ಪಾಡುತ ಮಹಿಮೆಯ |
ನಾಡು ಮಂಗಲವೆಂದು ನುತಿಸುತ-ಸೊನ್ನಲಿಗೆ
ಬೀಡು ಪಾವನವೆಂದು ಕರೆತಂದರು || ೪

ಸಿದ್ಧರಾಮರ ಬರವ। ಬದ್ಧ ಶುದ್ಧರೆಲ್ಲ।
ಶುದ್ಧಮನದಿ ಕೂಡಿ ಸಂತಸದಿ-ಪಾಡೂತ
ಬಿದ್ದರು ಶಿವಯೋಗಿಯ ಪಾದಕೆ॥ ೫

ಹಾವೀನ ಹಾಳೀನ। ಶಿವಶರಣ ಕಲ್ಲಯ್ಯ।
ಸೇವೆ ಮಾಡುವ ಬಕುತರು-ಸ್ವಾಗತಿಸಿ
ಕಾವುದು ನಮಗೆಂದು ಬೇಡಿದರು॥ ೬

ಕೇದಾರ ಗುರುವಿಗೆ। ಸೋದರ ಬೊಮ್ಮಗೆ।
ಶೇದ ಶರಣರ ಕತೆಗಳ-ಸಿದ್ಧಯೋಗಿ
ಆದರದಿ ವಂದಿಸಿ ಪೇಳಿದರು॥ ೭

ಮೀರಿದ ಮಹಿಮರು। ಬೀರುತ ಶಿವತತ್ವ।
ಸಾರೂತ ಶರಣರ ಹಿರಿಮೆಯನು-ಜನಕೆಲ್ಲ
ಚಾರುತರ ಬೋಧೆಯ ನೀಡುವರು॥ ೮

ಅಳಿಯದ ಕಾಯವ। ಉಳಿವ ಶಿವಯೋಗವ।
ತಿಳಿದ ಶಿವಸಿದ್ಧನು ಬೋಧಿಸುತ-ಅಲ್ಲಮನು
ಬೆಳಸಿದ ಸಹಜ ಯೋಗವನು॥ ೯

ನಿತ್ಯ ನಿಜದ ನೆಲೆ। ಕರ್ತೃ ಶರಣರ ಲೀಲೆ।
ಎತ್ತಿ ಸಾರಲು ಬಂದಿಹರು-ತೆರೆಯಲು
ಸತ್ಯಲೋಕದ ಬಾಗಿಲವ॥ ೧೦

ಹರನವನು ವಂಚಕ। ಶರಣ ನಿರ್ವಂಚಕ।
ವರವ ನೀಡಲು ಬಂದರೆ-ಹರನನ್ನು
ತಿರುಗಿ ಕಳುಹುವರು ನಮ್ಮವರು॥ ೧೧

ಒಲಿದು ಬಂದು ದೇವ। ಫಲಪದ ನೀಡಲು।
ಒಲ್ಲರು ನಮ್ಮ ಶರಣರು-ದೇವನಿಗೆ
ಎಲ್ಲವನರ್ಪಿಸಿ ಸುಖಿಪರು॥ ೧೨

ಒಲಿದು ಬಂದು ದೇವ। ಮೂಲೋಕದೈಸಿರಿ।
ಒಲುವಿನಿಂ ನೀಡ ಬಂದರು-ಲಿಂಗದ
ಚಲುವಿಕೆಯಲ್ಲಿ ನಲಿವರು॥ ೧೩

ಲಿಂಗವಂತರಾಗಲು। ಅಂಗನೆಯರ ಕಂಡು।
ಲಿಂಗದ ರಾಣಿಯರೆನ್ನುತ-ನೋಡಲು
ಸಂಗ ದೊರೆವುದು ಮಾಲಿಂಗದ॥ ೧೪

ಯಾರೇನಂದರು ಆದಕೆ। ಓರಂತೆ ಇರುವುದು।
ಜರೆದರು ಅವರೆನ್ನ ಮನದ-ಕಾಳಿಕೆಯ
ಹರಿದರು ಎನ್ನುವದೆ ಸಮತೆ॥ ೧೫

ಸದಾಚಾರಿಯಾಗಿ। ಸದ್‌ಭಕ್ತ ತಾನಾಗಿ।
ಸದಮಲನಾಗಿ ಇರಬೇಕು-ಲಿಂಗದ
ಪಾದಪದ್ಮದೊಳು ಬಯಲಾಗಿ॥ ೧೬

ಸಮರಸವನರಿತು। ನಮ ಲಿಂಗದಡಿಯಲಿ।
ಒಮ್ಮನದಿಂದ ಬಯಲಾಗಲು-ಕೈಲಾಸದ
ವ್ಯಾಮೋಹ ತಾನೆ ಅಳಿವುದು॥ ೧೭

ನುಡಿವರು ಅದ್ವೈತ। ಬಿಡದೆ ಒಂದು ಕೋಟಿ।
ನಡೆವರೆ ದೃಢ ಭಕ್ತಿಯಿಂದ-ಆಚಾರ
ನಡೆಯಲ್ಲಿ ಕಾಣಲಿ ಒಂದು ಸಾರೆ॥ ೧೮

ಸದಮಲ ಭಕ್ತರ। ಸದಾಚಾರಯುಕ್ತರ।
ಪಾದವ ಹಿಡಿದು ಬದುಕಿಸು-ಲೋಕದಿ
ವಾದ ಹೆಚ್ಚಿತು ನಡೆಗಿಂತ॥ ೧೯

ಹರಭಕ್ತರಾದವರು। ವಿರಕ್ತರಾಗುವರು।
ವಿರಕ್ತ ಭಕ್ತರಾಗುವರು-ಇದನು
ಗುರು ಚನ್ನಬಸವ ತೋರಿದರು॥ ೨೦

ಅಂಗದಲಿ ಸಂಬಂಧ। ಲಿಂಗಯ್ಯನದಾಗಲು।
ಅಂಗನೆ ಮೊದಲಾದ ವಿಷಯಗಳ-ದಾಟೂತ
ಸಂಗ ಸಮರಸ ಶಿವನಲ್ಲಿ॥ ೨೧

ಲಿಂಗ ಕೈಯೊಳಗಿದ್ದು। ಅಂಗೈಸುವದೇತಕೆ।
ಸಂಗಕ್ಕೆ ಒಳಗಾಗಲು ಅಂಗವಿಲ್ಲ-ಸಂಗ
ಲಿಂಗಸಂಗವಾಗಲು ಲಿಂಗ ನೀನೆ॥ ೨೨

ಲಿಂಗ ಕುರುಹನರಿದು। ಲಿಂಗ ಗುಣವನಳಿದು।
ಲಿಂಗವಾದುದೇ ಸ್ವರ್ಗವದು-ಎನ್ನ
ಸಂಗ ಕಪಿಲಸಿದ್ಧ ಮಲ್ಲಿನಾಥ ॥ ೨೩

ತನ್ನರಸಿ ಬರುವರ। ತಾನರಿಸಿ ಬರುವನು।
ಎನ್ನಯ್ಯನಿರುವಲ್ಲಿ ಹೋಗಿ ಬಾ-ಎಂದು
ಮನದೊಳು ಅಚ್ಚೊತ್ತಿಕೊಂಬೆನು ॥ ೨೪

ಕೂಟದ ತುರ್ಯದಲಿ। ಬೇಟ ಮತ್ತೆರಡಾಗಿ।
ಆಟವನಾಡಿದೆ ವಿಚಿತ್ರ-ಕೂಟವು
ಬೇಟವು ಆಟವು ಒಂದಾಗಿ ॥ ೨೫

ಲೋಕದೊಳಗೆ ಇದ್ದು। ಲೌಕಿಕ ತಾನಾಗದೆ।
ಏಕೈಕನಾಗಿ ಇರಬೇಕು-ಲಿಂಗದೊಳು
ಮೂಕ ಮುಗ್ಧನಾಗಿ ಬೆರಿಬೇಕು ॥ ೨೬

ತ್ರಿವಿಧ ದಾಸೋಹ। ಅವಿರತ ನಡೆಯಿತು।
ಆವಾವ ದೇಶದ ಸಾಧಕರು-ಬರುತಿಹರು
ಶಿವಸಿದ್ಧರಾಮರ ಛತ್ರಕ್ಕೆ ॥ ೨೭

ಜ್ಞಾನ ಕ್ರೀಗಳೆರಡು। ಸ್ವಾನುಭಾವದಿ ಅರಿತ।
ಅನವರತ ನಿಜಯೋಗಿಯು-ನೀಡುವನು
ಘನವಾದ ಜ್ಞಾನಸುಧೆಯನು ॥ ೨೮

ಕಾಯದ ಮದಕಳೆದು। ಮಾಯವಿಕಾರವಳಿದು।
ಆಯತ ಸ್ವಾಯತ ಸನ್ನಿಹಿತ-ಎನ್ನೂತ
ಸ್ವಯಲಿಂಗದೋಳು ಬೆರೆದಿಹರು ॥ ೨೯

ನೆನವಿನ ನಿಧಿಯಾಗಿ। ಅನುವಿನ ಘನವಾಗಿ।
ಅನುಪಮ ಶಿವಯೋಗಿಯು-ವಾಸಿಪರು
ಸೊನ್ನಲಗೆ ಅವಿಮುಕ್ತ ಕ್ಷೇತ್ರವು ॥ ೩೦

ಸೊನ್ನಲಿಗೆ ಎಂಬೂದು। ನನ್ನಿಯ ತವರಾಗಿ।
ಉನ್ನತೋನ್ನತದ ನೆಲೆಯಾಗಿ-ಕಲ್ಯಾಣದ
ಬೆನ್ನಿಗೆ ಬಲವಾಗಿ ನಿಂದಿಹುದು ॥ ೩೧

ಮಹಯೋಗಿ ತಾಣವು | ಇಹದ ಕೈಲಾಸವು |
ಮಹಮನೆಯೆನಿಸಿತು ಕಳೆದು-ಪೂರ್ವಾಶ್ರಮ
ಸಹಜದಿ ಶಿವಯೋಗಿ ನೆಲೆಸಿತ್ತು || ೩೨

ವೈಭವ ಏರಿತ್ತು | ಶುಭವನು ಸಾರಿತ್ತು |
ಅಭವ ಬಸವನ ದಯೆಯಿಂದ-ಕಲ್ಯಾಣ
ಆ ಭೂಪಾಲನ ಕೀರುತಿಮೆರದಿತ್ತು || ೩೩

ದುಡಿಮೆಯ ಕಲಿಸದ | ಬಡತನ ಓಡಿಸಿದ |
ಒಡೆಯ ಬಿಜ್ಜಳನ ಭಾಂಡಾರ-ತುಂಬೀತು
ಬೇಡುವದು ಬಿಡಿಸಿದ ಬಸವನು || ೩೪

ಭಕ್ತಿಸಾಮ್ರಾಜ್ಯಕೆ | ಶಕ್ತಿಯಾದನು ಬಸವ |
ಮುಕ್ತಿಯ ಮೀರಿದ ಶರಣನು-ಶಿವಶಕ್ತಿ
ಯುಕ್ತ ಸಾಮ್ರಾಜ್ಯವಾಳಿವರು || ೩೫

ಕಡೆಯಿಲ್ಲದ ದೇಶಕ್ಕೆ | ಎಡಬಿಡದೆ ಚರಿಸಲು |
ಒಡೆಯ ಪ್ರಭುದೇವ ಹೊರಟರು-ಶರಣರು
ಅಡಿಗಳಿಗೆ ಶರಣು ಶರಣೆಂದು || ೩೬

ಶಿವಾಚಾರದ ದಿವ್ಯ | ಅವಿರಳ ಜ್ಯೋತಿಯು |
ಶಿವಶರಣರೆ ನೀವು ಬೆಳಸಿರಿ-ನಾನಿನ್ನು
ಶಿವನ ಅಣತಿಯಂತೆ ಮರಳುವೆ || ೩೭

ಬಸವ ಚನ್ನಬಸವಗೆ | ಅಸಂಖ್ಯಾತರಿಗೆಲ್ಲ |
ನಸುನಗುತ ಶರಣೆಂದು ಪ್ರಭುದೇವ ಹೊರಟರು
ನಿಸ್ಸೀಮ ದಾಚೆಯ ಆಚೆಗೆ || ೩೮

ಅಗಣಿತ ಮಹಿಮರು | ಉಘೆ ಚಾಂಗು ಭಲವೆಂದು |
ಗಗನ ಭೇದಿಸುವಂತೆ ಘರ್ಜಿಪರು-ಪ್ರಭುದೇವ
ಅಗೋಚರವಾಗಿ ಬಯಲಾಗಿ || ೩೯

ಅಕ್ಕ ಮಹದೇವಿಯು | ಮಿಕ್ಕೀದ ಯೋಗಿಣಿಯು |
ಮುಕ್ಕಣ್ಣ ವಾಸಿಪ ಕದಳಿಗೆ-ಹೊರಟಳು
ಪೊಕ್ಕು ಬೆರೆಯಲು ಲಿಂಗದೊಳು || ೪೦

ಅಲ್ಪ ಕಾಲದಿ ಅಲ್ಲಿ| ಕಲ್ಪಿಸ ಬಾರದ|
ಕಿಲ್ಮಿಷ ಹರಡಿತ್ತು ಕಲ್ಯಾಣದಿ-ಶರಣರು
ಅಲ್ಪತೆಗಳ ಮೆಟ್ಟಿ ಬೆಳಗಿದರು|| ೪೧

ಮೇಲು ಕೀಳೆಂಬುದು| ಕಾಲ ಚಕ್ರದ ಲೀಲೆ|
ಹಾಲಿನೊಳಗುಪ್ಪನ್ನು ಚಲ್ಲಿತ್ತು-ಮಾನವಗೆ
ಕಾಳಕೂಟವಾಗಿ ಕಾಡಿತ್ತು|| ೪೨

ಮಧುವರಸ ವಿಪ್ರನು| ಮದವಳಿದು ಜಾತಿಯ|
ಸದಮಲ ಶರಣರ ಹಿರಿಮೆಯ-ಅರಿಯುತ
ಸದುವಿನಯದಿ ತಾನು ಬಾಳಿಹನು|| ೪೩

ಶರಣರನುಮತಿಯಂತೆ| ಹರುಷದ ಮದುವೆಯು|
ಹರಳಯ್ಯನ ಮಗ ಮಧುವರಸನ-ಮಗಳು
ಜರುಗಿತು ಲಗ್ನವು ಸಂಭ್ರಮದಿ|| ೪೪

ಕಿಚ್ಚೆದ್ದು ಎದ್ದರು| ಹೆಚ್ಚಿನ ಮತವೆಂದು|
ಇಚ್ಛೆ ಬಂದಂತೆ ನಡದೀದೆ-ಕಂಗಳ
ಮುಚ್ಚಿರುವ ಬಿಜ್ಜಳರಾಯನು|| ೪೫

ಕುಲಗೋತ್ರ ಉಳಿದಿಲ್ಲ| ಕುಲವಳಿದ ಶರಣರು|
ಕುಲಕೆ ಕೊಡಲಿಯ ಪೆಟ್ಟು ಹಾಕಿದರು-ಅವರಿಗೆ
ಬಲವುಂಟು ಸಂಗನಬಸವನ|| ೪೬

ಸುಮ್ಮನೆ ಕುಳಿತರೆ| ಕೆಮ್ಮನೆ ಕೆಡುವೆವು|
ನಮ್ಮ ನಮ್ಮ ಧರ್ಮ ಉಳಿಯವು-ನಾವೆಲ್ಲ
ಒಮ್ಮತದಿ ಅರಸನ ಕಾಣೋಣ|| ೪೭

ಅರಮನೆಗೆ ಬಂದರು| ಅರಸನ ಕಂಡರು|
ಬರಿದೆ ಅನ್ಯಾಯಗಳ ತಡೆಯೆವು-ರಾಯನೆ
ಶರಣರಿಂದಲೆ ರಾಜ್ಯ ಹಾಳಹುದು|| ೪೮

ಗದ್ದುಗೆಯ ಕಿತ್ತಾರು| ಸದ್ದಿಲ್ಲದಂತೆಯೆ|
ಎದ್ದೆಲ್ಲ ಶರಣರು ಒಳಸಂಚು-ಮಾಡಿಹರು
ಇದ್ದು ನಾವೆಲ್ಲರು ಅಳಿಯುವುದೇ|| ೪೯

ಶಾಂತರಾಗಿರಿ ನೀವು | ಭ್ರಾಂತಿಯಗೊಳ್ಳದಿರಿ |
ಶಾಂತರಾಗುತ ನಿಮ್ಮ ನೆಲೆಗೆ-ತೆರಳುವುದು
ಇಂತು ಬಸವನ ಕರೆದು ಕೇಳುವೆನು || ೫೦

ಬಂದ ಜನಗಳೆಲ್ಲ | ಹಿಂದಿರುಗಿ ಹೋದರು |
ಇಂದು ನಮ್ಮ ಕೆಲಸ ಸಫಲವು-ಆಯಿತು
ಎಂದು ಹಾಸ್ಯಗೈದು ಉಬ್ಬಿದರು || ೫೧

ಅರಮನೆಗೆ ಬಸವಣ್ಣ | ಶರವೇಗದಲಿ ಬಂದ |
ಕರೆಸಿದ ಕಾರಣವೇನೆಂದು-ಕೇಳಲು
ಅರಸನೇಕಾಂತದಲಿ ಕೂತಿರಲು || ೫೨

ಕೋಪದಿ ಬಿಜ್ಜಳನ | ರೂಪ ಬದಲಾಗಿತ್ತು |
ಕೋಪವು ಮೇಲಾಗಿ ಮಾತು-ತಿಳಿಯದೆ
ವಿಫಲವಾಯಿತು ಬಸವ ಬೋಧೆಯು || ೫೩

ಲೋಕ ಸೇವೆಯ ಕಾರ್ಯ | ಬೇಕಾಗಿ ಮಾಡಿರುವೆ |
ಸಾಕಾಯ್ತು ರಾಯನಿಗೆ ಈ ಸೇವೆ-ನನಗಿಂದು
ಬೇಕಾಯ್ತು ಹಂಗಿಲ್ಲದ ಶಿವಪಥವು || ೫೪

ಎಂದು ಬಸವನು ಮರಳಿ | ಅಂದನು ರಾಜನಿಗೆ |
ಇಂದುಧರ ಶರಣರು ಹೊರಡುವೆವು-ಕಲ್ಯಾಣದಿ
ಇಂದೀಗೆ ಮಂತ್ರಿಪದ ಮುಗಿದುದು || ೫೫

ಅರಸ ಬಿಜ್ಜಳನಾಗ | ಹೊರಡಿಸಿದ ಆಜ್ಞೆಯ |
ಹರಳಯ್ಯ ಮಧುವರಸರಿಬ್ಬರಿಗು-ಎಳಹೂಟೆ
ದರದರನೆ ಚೆಲ್ಲಿ ಗಜದಡಿಯಲಿ || ೫೬

ಕಲ್ಯಾಣ ಪುರವೆಲ್ಲ | ಅಲ್ಲೋಲ ಕಲ್ಲೋಲ |
ಬಲ್ಲಂತೆ ಕುಣಿದರು ಜಂಗುಳಿ-ಹೇಳವರು
ಇಲ್ಲ ನೀತಿ ನಿಯಮು ಯಾರೀಗು || ೫೭

ಅಣ್ಣ ಬಸವಣ್ಣನು | ಸುಣ್ಣದಂತೆ ಸುಟ್ಟು |
ಪುಣ್ಯ ನಗರಿಯ ಕಲ್ಯಾಣ ಕಟ್ಟೇದ-ಇಂದು
ಪುಣ್ಯವೀ ರಾಜ್ಯದ ಮುಗಿಯೀತು || ೫೮

ಖಡ ಖಡನೆ ಗದ್ದರಿಸಿ। ನುಡಿದರು ಮಧುವರಸ।
ಕಡುಮರುಳನಾಜ್ಞೆಯು ನಡೆಯಲಿ-ನಾವೇನು
ಹೇಡಿ ಕುಲದವರಲ್ಲ ಭಯವೇಕೆ॥ ೫೯

ಶರಣರ ತತ್ವಕ್ಕೆ। ಹರಣ ಅರ್ಪಿತವಿಂದು।
ಶರಣ ಶ್ರೇಷ್ಠನಾದ ಹರಳಯ್ಯ-ನುಡಿದನು
ಮರಣ ಶರಣರಿಗುಂಟೆ ಕೇಳೆಂದ॥ ೬೦

ಶರಣರನುಭಾವದ। ಪರಿಣಾಮ ಮೂರುತಿ।
ಹರಳಯ್ಯ ಮಧುವಯ್ಯ ನಿಂದಿಹರು-ಅಚಲದಿ
ಹರಣವ ತತ್ವಕೆ ಅರ್ಪಿಸಲು॥ ೬೧

ಶಿವಶರಣರೆಂದಿಗೂ। ಸಾವವನರಿಯರು।
ಸಾವೆಂಬುದು ಸಯುವಲ್ಲವೆಂದು-ಸಾರೂತ
ಸವಿನಯದಿ ಬಂದು ನುಡಿದರು॥ ೬೨

ಹುಟ್ಟಿಗೆ ಕುಲವಿಲ್ಲ। ಕೆಟ್ಟವಗೆ ಜಯವಿಲ್ಲ।
ಅಟ್ಟಿದ್ದು ಕೆಲಕಾಲ ಉಳಿಯದು-ಶರಣರ
ದಿಟ್ಟತನವೆಂದು ಅಳಿಯದು॥ ೬೩

ಲಿಂಗದೊಳು ಹುಟ್ಟಲು। ಹಂಗೇಕೆ ಲೋಕದ।
ಸಂಗನ ಬಸವನ ಶರಣರು–ಸಾವಿಲ್ಲದ
ಲಿಂಗ ಶೃಂಗಾರದಿ ನಲಿವರು॥ ೬೪

ಅಷ್ಟತನುಗಳಿಗೆ। ನಿಷ್ಠೆಯಿಂದಲಿ ನಾವು।
ಶ್ರೇಷ್ಠ ಶಿವತತ್ವಕೆ ಅರ್ಪಿತ-ಎಂದಾಗ
ಕಷ್ಟಕಾರ್ಪಣ್ಯ ನಮಗಿಹುದೇ॥ ೬೫

ನಿಜತತ್ವದ ನಿಲವು। ಮೂಜಗದೊಳು ನಾವು॥
ಬೀಜ ಬಿತ್ತಿ ಬೆಳೆ ಬೆಳೆಸುವೆವು-ನಮಗೆ
ಈ ಜನುಮದ ಹಂಗು ಇನ್ನೇಕೆ॥ ೬೬

ಲಿಂಗ ಗಂಭೀರರ। ಸಂಗಾನುಭಾವವನು।
ಪಿಂಗದಲೆ ನಾವು ಸವಿದೆವು-ನಮ್ಮಯ್ಯ
ಸಂಗನ ಬಸವನ ದಯೆಯಿಂದ॥ ೬೭

ಕಾಯ ಕಂಥೆ ಇದು। ಕಾಯುವುದು ಕವಚಾಗಿ।
ಧ್ಯೇಯ ಸಾಧಿಪಗೆ ಸಾವಿಲ್ಲ-ಮಾನವಗೆ
ನ್ಯಾಯ ಕೊಡಿರೆಂದು ಕೇಳುವೆವು॥ ೬೮

ಮರಣದ ದಂಡನೆಗೆ। ಶಿರ ಬಾಗಿಸಲಾರೆವು।
ಹರ ಹರ ಮಹದೇವ ಎನ್ನುತ-ತತ್ವಕ್ಕೆ
ಹರಣವು ಅರ್ಪಿತ ಎನ್ನುವೆವು॥ ೬೯

ಕೋಪಿಸಿಗೊಳ್ಳದಿರಿ। ಪಾಪವು ಅದರಿಂದ।
ವಿಪರೀತ ಆಗುವುದು ಬೇಡಿನ್ನು-ದೇವನ
ಅಪ್ಪಣೆಯೆಂದು ತಿಳಿಯಿರಿ॥ ೭೦

ಶೋಕಿಸುವಿರಿ ಏಕೆ। ಮೂಕವಾಗಿರಿ ನೀವು।
ಲೋಕಕಲ್ಯಾಣಕೆ ಪ್ರಾಣವು-ಅರ್ಪಿತ
ಏಕಮುಖವಾಗಿ ಜಯವೆನ್ನಿ॥ ೭೧

ಚಿಂತಿಸುವಿರಿ ಏಕೆ। ಸಂತಸದಿ ನಾವೀರ್ವರು।
ಕಂತುಹರನ ಮಣಿಹ ಪೂರೈಸಿ-ಲೋಕದಿ
ಶಾಂತಿಯ ಗುಡಿಯನೆತ್ತುವೆವು॥ ೭೨

ತಾಣವ ಗುರ್ತಿಸಿ। ಪ್ರಾಣ ಅರ್ಪಿತವೆಂದು।
ಮಣಿಹ ಮುಂದೊರೆಸಿರೆಂದು-ಸಾರಿದರು
ರಣದೊಳು ಘರ್ಜಿಪ ವೀರರಂತೆ॥ ೭೩

ಪುರಾತನರ ನೆನೆದು। ಹರಣ ಬಯಲಾಯ್ತು।
ಮರಣದ ಭಯವು ನಮಗಿಲ್ಲ-ತತ್ವವು
ಮರಗೂತ ನಮ್ಮನು ಕರೆದಿದೆ॥ ೭೪

ಶಾಂತಿಯ ತವರೂರು। ಕ್ರಾಂತಿಯ ಕಣವಾಯ್ತು।
ಮಹಂತರ ಕೊಲೆಯು ಘಟಿಸಿತು-ಕಲ್ಯಾಣ
ಕಾಂತಿಯಿಂದೀಗೆ ಕಡೆಯಾಯ್ತು॥ ೭೫

ಶರಣರ ಕೊಲೆಯಾದ। ಪುರದೊಳಿನ್ನಿರಲಾರೆ।
ಹರ ಹರ ಕೂಡಲ ಸಂಗಮನೆ-ಶಿವ ಶಿವ
ಬರುವೆನು ಕಪ್ಪಡಿ ತಡೆಗಳಿಗೆ॥ ೭೬

ನಾ ಬಂದ ಕಾರ್ಯಕೆ | ನೀವು ಬಂದಿರಿ ಅಯ್ಯ |
ಶುಭ ಪಣತಿ ಕಲ್ಯಾಣ ಒಡೆಯಿತು-ಸುತ್ತಲು
ಶಿವತೇಜ ದಶದಿಕ್ಕು ಬೆಳಗಿತ್ತು || ೭೭

ಕಲ್ಯಾಣ ಬಿಡುವಾಗ | ಎಲ್ಲ ಶರಣರ ಪಾದ |
ಬಲ್ಲಹ ಬಕುತಿಲಿ ಹಿಡಿದರು-ಬಸವಣ್ಣ
ಎಲ್ಲರಿಗು ಶರಣು ಶರಣೆಂದು || ೭೮

ಕಲ್ಯಾಣ ಮಾನವನ | ಕಲ್ಯಾಣ ಮಾಡಲು |
ಕಲ್ಯಾಣ ಇಲ್ಲಿ ಕಟ್ಟಿದೆವು-ನಾವಿಂದು
ಕಲ್ಯಾಣದಾಚೆ ಸಾಗುವೆವು || ೭೯

ನಮಗಾಗಿ ಬಸವಣ್ಣ | ಹೋಮ ಮಾಡಿದ ತನ್ನ |
ವ್ಯಾಮೋಹ ತೊರೆದು ಬರಿದಾದ-ಬಸವೇಶ
ಸೀಮೆಗಳ ದಾಟಿ ಬಯಲಾದ || ೮೦

ವರ ಸಂಗಬಸವಣ್ಣ | ಕರದಿಷ್ಟ ಲಿಂಗದಿ |
ಪರತರರೂಪವು ಬೆರೆಯಿತು-ಸಂಗನಲಿ
ಧರಣಿಯ ದೀಪವು ಒಂದಾಯ್ತು || ೮೧

ಮನ ಮನಕೆ ಕಲ್ಯಾಣ | ಮನೆ ಮನೆಗೆ ಕಲ್ಯಾಣ |
ತನು ಮನು ಧನಗಳ ಬೆಳಗೀದ-ಕಲ್ಯಾಣ
ಘನ ವರದೀಪವು ನಂದಿತ್ತು || ೮೨

ಶರಣರ ತಿಂಥಿಣಿಯು | ಹರಿದು ಹತ್ತು ದಿಸೆಗೆ |
ಬರಿದಾಯ್ತು ಕಲ್ಯಾಣ ಮಹಮನೆ–ಭಣ ಭಣ
ಸುರಿದಿತ್ತು ಪಟ್ಟಣ ಹಾಳಾಯಿತು || ೮೩

ಶರಣರು ಅಲ್ಲಲ್ಲಿ | ತೆರಳಿ ಚೆಲ್ಲಾಪಿಲ್ಲಿ |
ಕರುಣಿಸಿರೆಂದು ಕಲ್ಯಾಣ–ಕೂಗಿತ್ತು
ಮರಣದ ಬಾಧೆಯ ಸಹಿಸದೆ || ೮೪

ಹೊಳೆಹೊಳೆವ ಕಲ್ಯಾಣ | ಹಾಳಾಯ್ತಿಂದಿಗೆ |
ಹೋಳಾಯ್ತು ಅನುಭವ ಮಂಟಪ-ಶರಣರ–
ನುಳಿದ ಕಲ್ಯಾಣವು ಚೀರಿತ್ತು || ೮೫

ತೊಳ ತೊಳಗಿ ಬೆಳಗೂವ| ಹೊಳೆವ ಶಿವತೇಜವು|
ಕಳೆದು ಹೊಯಿತ್ತೆಲ್ಲಿ ಆ ಬೆಳಗು-ಕಲ್ಯಾಣ
ಹಾಳು ಕತ್ತಲೆಯು ಕವಿದಿತ್ತು|| ೮೬

ವೀರ ಗಣಾಚಾರ| ಬೀರಿದರು ಮಡಿವಾಳ|
ಹರಹರ ಮಹಾದೇವ ಜಗದೇವ-ಬೊಮ್ಮರು
ವೀರಶೈವದ ಗುಡಿಯನೆತ್ತಿದರು|| ೮೭

ನಮ್ಮವರ ವಧೆ ಕೇಳಿ| ಸುಮ್ಮನೆ ಇರುವಿರಾ|
ಸೋಮವ್ವೆ ಶರಣೆ ನುಡಿದಳು–ಮಕ್ಕಳಿರಾ
ನೇಮವನರಿಯಿರಿ ಗಣಾಚಾರದ|| ೮೮

ವೀರಗಣಾಚಾರ| ಧೀರ ನನ ಕುವರರೆ|
ವೀರಭದ್ರನ ಅವತಾರ–ವಿಶ್ವದಿ
ಮೆರೆಸರಿ ವೀರರ ವೀರರೆ|| ೮೯

ಜಗದೇವ ಮಲ್ಲರೆ| ಬೇಗ ಅರಸನಲ್ಲಿಗೆ|
ಹೋಗಿ ಕೇಳಿರಿ ನ್ಯಾಯವ-ಹೇಳಿರಿ
ಭೋಗ ಸರಿಯಿತೆಂದು ಇಂದೀಗೆ|| ೯೦

ಅಣ್ಣ ತಮ್ಮರು ಸಾಕು| ಗಣಾಚಾರ ತೋರಲು|
ಪ್ರಾಣವಧೆಗೆ ಪ್ರತಿ ಪ್ರಾಣವ-ತಗೆಯಲು
ಅಣಿಯಾಗಿರಿ ನನ್ನ ಆಣತಿಗೆ|| ೯೧

ಪಣತೊಟ್ಟು ತಾಯಿಯ| ರಿಣಮುಕ್ತರಾಗಲು|
ಹಣೆಹಚ್ಚಿ ಮಾತೆಯ ಪಾದಕ್ಕೆ-ಎರಗಿದರು
ರಣಕಹಳೆ ಶಿವಕಾಳೆಯ ಊದಿದರು|| ೯೨

ವೀರ ಗಣಾಚಾರ| ಭೂರಿ ಕರೆ ನೀಡಿದೆ|
ತೂರಿ ತೂರಿ ಜನ ಸೇರಿದರು-ಕಲ್ಯಾಣ
ಪುರವೆಲ್ಲ ಸುತ್ತಿ ನಿಂದಿಹರು|| ೯೩

ಶರಣರೀರ್ವರಿಗೆ| ಮರಣದ ದಂಡನೆಯ|
ಧರಣಿಪತಿ ವಿಧಿಸಿದ ಸಂಗತಿ-ತಿಳಿಯಿತು
ಮರುಗಿದನು ಶಿವ ಸಿದ್ಧರಾಮಯ್ಯ|| ೯೪

ಎಲೆ ಬಸವದೇವನೆ| ಹೊಲೆ ತೊಳೆಯಲು ಹೋದೆ|
ಕುಲಮದ ತಲೆಗೇರಿದ ಮರುಳರು-ಇಂದು
ಕೊಲೆ ಮಾಡಬಹುದೆ ಶರಣರ|| ೯೫

ಶಿವನ ಆಣತಿಯಂತೆ| ಅವನೀಗೆ ಬಂದಿಹ|
ಶಿವಶರಣರು ತಮ್ಮ ಮಣಿಹ-ಪೂರೈಸಿ
ಸಾವಿಗೆ ಶಿವಪುರವೆಂದಿಹರು|| ೯೬

ಉರಿಸಬಲ್ಲರವರು| ಈರೇಳು ಲೋಕಂಗಳ|
ಅರಿತವರು ಶಿವತತ್ವವನು-ಕೊಲ್ಲುವದು
ಸರಿಯಲ್ಲವೆನುವರು ಶರಣರು|| ೯೭

ಬಸವನ ಮಹಾಮುನೆಯ| ಅಸಂಖ್ಯಾತರಿಗೆಲ್ಲ|
ಅಸಮಾಧಾನವಾಯಿತು ಕೇಳುತ-ಶರಣರಿಗೆ
ಹಿಂಸೆ ಮಾಡುವದು ತರವಲ್ಲ|| ೯೮

ಶಿವಶರಣರ ಕೊಲೆ| ಶಿವಾಚಾರದ ಬೆಲೆ|
ಅವನಿಯ ಚರಿತೆಯು ನೆನೆಯಲಿ-ಸತ್ಯವು
ಸಾವಿನಂಜಿಕೆಯ ಮೀರಿಹುದು|| ೯೯

---

೪೧ ಪದಗಳು

ಏನಾಯ್ತು ಕಲ್ಯಾಣ । ಏನಾಯ್ತು ಶರಣಗಣ ।
ಏನಿದ್ದು ಏನಾಯ್ತು ಎಂದು ಮನದಿ-ನೊಂದು
ಘನಯೋಗಿ ಸಿದ್ಧೇಶ ನುಡಿದರು ॥ ೧

ಯೋಗದ ನನ ಜ್ವಾಲೆ । ಮೊಗದಿರಿವಿ ನಿಂದಿದೆ ।
ಸುಗಮ ಶರಣರ ಮಾರ್ಗದಿ-ನಡೆದಿದೆ
ಯೋಗ ನಿಜಯೋಗವಾಗಿದೆ ॥ ೨

ಹಣೆಗಂಣಿನ ಜ್ವಾಲೆ । ಮಣಿಸಿದಿರಿ ಅಂದು ।
ಅಣಿಮಾದಿ ಸಿದ್ಧಿಗಳ ಅಲ್ಲಗಳೆದು-ಎನ್ನನು
ಪ್ರಾಣಲಿಂಗಿ ಮಾಡಿ ತಣಿಸಿದಿರಿ ॥ ೩

ಉರಿಯಗಂಣಿನಿಂದ । ಉರುಹ ಬಲ್ಲೆನು ನಾನು ।
ವರಪ್ರಭು ತನ್ನ ಅಂಗಾಲಗಂಣು-ಬಿಚ್ಚುತ
ಅರುಹಿದರು ಶಿವಯೋಗ ಮಾರ್ಗವ ॥ ೪

ಅಘಟಿತ ಘಟಿತರು। ಅಗಣಿತ ಮಹಿಮರು।
ಆಗು ಹೋಗುದಕೆ ಅಂಜರು-ನಿಜಾಚಾರ
ಸಾಗಿಸಲು ಆಹುತಿ ಕೊಡುವರು॥ ೫

ಭವದ ಬೇರವ ಹರಿದು। ಶಿವಗರ್ಪಿತವೆಂದು।
ಸಾವಿನ ಪಾಶವ ಹರಿದೊಗೆದ-ಶರಣರಿಗೆ
ಯಾವ ಕಾಲಕ್ಕೂ ಭಯವಿಲ್ಲ॥ ೬

ಶಿವಶರಣರ ದೇಹ। ಸವಿಯದ ದಾಸೋಹ।
ಅವಯವಗಳೆ ಸದಾಚಾರ-ಮನಪ್ರಾಣ
ಪವನಗಳು ಅರುವಿನ ಮೂರುತಿ॥ ೭

ಶಿವಾಚಾರಧ್ವಜವ। ಶಿವಶರಣರೆತ್ತಿಹರು।
ತ್ರಿವಿಧ ದಾಸೋಹಕ್ಕೆ ತನ್ನನು-ಅರ್ಪಿಸಿ
ಅವಿನಾಭಾವದಿ ನಿಂದಿಹರು॥ ೮

ನಮ್ಮವರು ಮಹಿಮರು। ಸುಮ್ಮನೆ ಇರುವರು।
ತಮ್ಮನೆ ಅರ್ಪಿತವೆನ್ನುವರು-ಲೋಕದ
ಹಮ್ಮಿಗೆ ಆಹುತಿ ಆಗಿಹರು॥ ೯

ಅಂಗಲಿಂಗದ ಮನೆ। ಲಿಂಗಅಂಗದ ಮನೆ।
ಅಂಗ ಲಿಂಗವು ಸಂಗವಾಗಲು-ಲೋಕದ
ಹಂಗು ನಮ್ಮ ಶರಣರಿಗುಂಟೆ॥ ೧೦

ಚನ್ನಬಸವಣ್ಣನು। ಮನ್ನಣೆಯ ಶರಣರು।
ಉನ್ನತ ಉಳವಿಯ ಕಾನನಕೆ-ಹೊರಟರು
ಚಿನ್ಮಯ ಶಿವಯೋಗದಾನಂದಕೆ॥ ೧೧

ಉಳವಿಗೆ ಹೋಗುವಾಗ। ಇಳಿದರು ಸೊನ್ನಲಿಗಿಗೆ।
ಪೇಳಲು ಎಲ್ಲ ವೃತ್ತಾಂತ-ಶರಣರ
ಅಳಿದುಳಿದ ಕಲ್ಯಾಣದ ಕತೆಯನು॥ ೧೨

ವಂದಿಸಿ ಶರಣರಿಗೆ। ಅಂದ ಗದ್ದುಗೆ ಹಾಸಿ।
ಬಂದಿರಿ ಬರಬೇಕು ಶರಣರೆ-ನೀವು ಐ-
ತಂದಿರಿ ಪ್ರಮಥರ ಒಸಗೆಯ॥ ೧೩

ಚನ್ನಬಸವನನುಮತಿ| ಸನುಮತದಲಿ ಕೇಳಿ|
ಘನಯೋಗಿ ಸಿದ್ಧೇಶಗೆ ಎಂದರು–ಶರಣರು
ಮನವೊಲಿಸಿ ಪೀಠವ ಕಟ್ಟಿದರು || ೧೪

ಉನ್ನತ ಪಥದೋರಿ| ತನ್ನಂತೆ ಮಾಡಿದರು||
ಚನ್ನಬಸವಣ್ಣ ಗುರುದೇವ-ಎನ್ನನು
ಶೂನ್ಯ ಸಿಂಹಾಸನಕೆ ಆರೋಹಿಸಿ|| ೧೫

ಹೋಗುವೆವು ಉಳವಿಗೆ| ಭೋಗ ಸರಿಯಿತು ಇಳೆಯೆ|
ಬಾಗುವೆವು ಒಲವಿರಲಿ ಸಿದ್ಧೇಶ–ನಡಿಸಿರಿ
ಚಾಗಿ ಶಿವತತ್ವ ಶಿವನಾಣತಿ|| ೧೬

ಎಲ್ಲರು ಲಿಂಗಾರ್ಚಿಸಿ| ಸಲ್ಲಿಸಿ ಪ್ರಸಾದವ|
ಅಲ್ಲಿಂದ ಹೊರಟರು ಉಳವಿಗೆ-ಪ್ರಮಥರು
ಎಲ್ಲ ಮಣಿಹ ಒಪ್ಪಿಸಿ ಸಿದ್ಧೇಶಗೆ|| ೧೭

ಅಸಂಖ್ಯಾತರಿಗೆಲ್ಲ| ಹಸನಾದ ಮನಸೀಲಿ|
ಭಸಿತ ವೀಳೆಯ ಮುಂದಿರಿಸಿ-ಸಿದ್ಧೇಶ
ಅಸಮ ಶರಣರಿಗೆ ಶರಣೆನುತ|| ೧೮

ನೂರೊಂದು ಕಡೆಗೆಲ್ಲ| ಸಾರಿದರು ಶರಣರು|
ಮರಳಿ ಅಲ್ಲಲ್ಲಿಗೆ ನಡೆತಂದು-ಕಲ್ಯಾಣದ
ಶರಣಗಣ ಸೇರಿತು ಎಲ್ಲೆಲ್ಲಿಯೊ|| ೧೯

ಮಲ್ಲಿಕಾರ್ಜುನದೇವ| ನಿಲ್ಲುತ ಹಿಪ್ಪರಿಗಿಗೆ|
ಅಲ್ಲಿ ನಮ್ಮಯ ತಾಣವೆನ್ನುತ-ಶಿವಯೋಗ
ಬಲ್ಲಿದ ಕಾಯದಿ ಕುಳಿತಿಹರು|| ೨೦

ರೇವಣಸಿದ್ಧನ ಪುತ್ರ| ದೇವ ರುದ್ರಮುನಿಯು|
ಭವ್ಯ ಚಂಗಣಗಿಲ ಮಂಟಪ-ಕಲ್ಯಾಣದಿ
ದಿವ್ಯ ಸಮಾಧಿಯಲಿರುತಿಹರು || ೨೧

ಅಕ್ಕನಾಗಲ ತಾಯಿ| ಮಿಕ್ಕ ಶಿವ ಶರಣೆಯರು|
ರಕ್ಕಸದ ಗುಡ್ಡ ಏರುತ-ಮುನ್ನಡೆದು
ಹೊಕ್ಕರು ಉಳವಿಯ ಕೊಳ್ಳವನು|| ೨೨

ಕುಲವನು ಕೇಳದಲೆ| ಛಲವನು ಬಿಡದಲೆ|
ಬಲವಾದ ಭಕ್ತಿಯ ಸಾಮ್ರಾಜ್ಯ-ಕಟ್ಟಿದರು
ನಿಲವಿನ್ನ ನೆಲೆ ಒಂದು ಮಾಡೂತ|| ೨೩

ನಿಜ ಶಿವಯೋಗದ। ತೇಜವ ದಶದಿಕ್ಕು।
ಅಜರಾಮರವಾಗಿ ಬೆಳಗೂತ-ಭಕ್ತಿಯ
ಬೀಜಕ್ಕೆ ಚೈತನ್ಯ ನೀಡುವರು|| ೨೪

ವಿಶ್ವದ ಕಲ್ಯಾಣ| ಶಾಶ್ವತಗೊಳಿಸಲು|
ಈಶ್ವರನವತಾರ ಸಿದ್ಧರಾಮ-ಬಾಳಿದರು
ವಿಶ್ವಮಾನವರಾಗಿ ಭುವಿಯಲ್ಲಿ|| ೨೫

ಇಹಲೋಕದಿ ಕೆಲಕಾಲ। ಮಹಾಕಾರಣಿಕ ಇರುತಿರೆ|
ಸಹಜದಿ ಒಂದು ದಿನ ಪೇಳಿದರು-ನಾವಿನ್ನು
ಮಹಾ ಬೆಳಗಿನಲಿ ಬೆಳಗುವೆವು|| ೨೬

ಅಳಿಯದು ಈ ಕಾಯ। ಉಳಿಯುವದು ಲಿಂಗದ|
ಬೆಳಗಿನ ಮಾಬೆಳಗು ಬೀರುತ-ಶರಣರ
ಕೇಳಿ ಲೋಕಕ್ಕೆ ತೋರುತ್ತ|| ೨೭

ಕೇದಾರ ಗುರುಗಳು| ಸದಮಲ ಭಕ್ತರು|
ಉದಾಸೀನರಾಗಿ ಬೇಡಿದರು-ಶಿವಯೋಗಿ
ಬೋಧಿಸುತ ಇಹದೊಳು ಇರಬೇಕು|| ೨೮

ಚಿನ್ನದ ಗಿರಿಯಾಗಿ। ಸೊನ್ನಲಿಗೆ ಬೆಳಗುವದು|
ಅನ್ನವಸ್ತ್ರಕ್ಕೆ ಕಡಿಮಿಲ್ಲ-ಗ್ಯಾನವು
ಉನ್ನತೋನ್ನತ ಕೊನರುವದು|| ೨೯

ಶರಣರಿಗೆ ಬೀಡಾಗಿ| ಪುರವಿದು ಬೆಳಗುವದು।
ಗುರುಲಿಂಗಜಂಗಮ ದಾಸೋಹ-ನಡೆವುದು
ಶರಣರು ಅವಿರತ ವಾಸಿಪರು|| ೩೦

ಹೆಂಣು ಗಂಡುಗಳೆಂಬ| ಸಂಣತನವಳಿಯುತ|
ಹೆಂಣಿನ ಮನ್ನಣೆ ಸಾರುವದು-ಈ ನಾಡು
ಪುಣ್ಯದ ನೆಲವೆಂದರು ಸಿದ್ಧೇಶ|| ೩೧

ಅಟ್ಟ ಅಡವಿಯಲ್ಲಿ। ಅಟ್ಟದಂತಾಗುವದು।
ಬಿಟ್ಟು ಅಗಲದಿರಿ ಶಿವಯೋಗಿ–ಪಾದವ
ನೆಟ್ಟನೆ ಹಿಡಿದು ಬದುಕುವೆವು॥ ೩೨

ಒಮ್ಮನದಿ ನೆನೆದರೆ। ನಿಮ್ಮಲ್ಲಿಯೆ ಇರುವೆನು।
ನಮ್ಮಾತು ನಂಬಿಕೊಳ್ಳಿರಿ–ಶರಣರೆ
ನಮ್ಮವರ ಆಣತಿ ಹೊತ್ತಿರುವೆ॥ ೩೩

ಶಿವಪ್ರಕಾಶದೊಳು। ಅವಿರತ ಬೆಳಗೂತ।
ಆವಕಾಲಕ್ಕೂ ಇರುವೆನು–ಭಕ್ತರ
ಸವೆಯದ ಕರಳುಬಳ್ಳಿಯಲಿ॥ ೩೪

ಕುಲಮದವ ಅಳಿಯಲು। ಶೀಲವ ಬೆಳೆಸಲು।
ಕಾಲಕಾಲಕ್ಕೆ ಶರಣರು ಉದಯಿಸಿ–ನಿಮ್ಮ
ಮೇಲಿರುವ ಮಮತೆಯ ತೋರುವರು॥ ೩೫

ಕರ್ತನು ಕಳುಹಲು। ಮರ್ತ್ಯಕೆ ಬರುವರು।
ಕರ್ತವ್ಯ ಪಾಲನೆ ಮಾಡಲು-ಎಲ್ಲರ
ಭೃತ್ಯರಾಗಿ ಸೇವೆಗೈಯುವರು॥ ೩೬

ಬಯಲು ತುಂಬುವದು। ಸ್ವಯಲಿಂಗದ ಬೆಳಗು।
ಕಾಯ ಕಂಥೆಯು ಅಳಿಯದೆ-ಬೆಳಗುತ
ಲಯವಿಲ್ಲದನು ತೋರುವೆವು॥ ೩೭

ಗಂಗೆಯ ಮಧ್ಯದಲಿ। ಲಿಂಗಸಮಾಧಿಯೊಳು।
ಲಿಂಗೈಯ್ಯನ ಬೆಳಗಿನಲಿ ಜೀವಂತ–ರಾಜಿಪರು
ಲಿಂಗಜಂಗಮ ಸಿದ್ಧರಾಮೇಶ್ವರರು॥ ೩೮

ಉಘೆ ಚಾಂಗುಭಲವೆಂದು। ಮಿಗೆ ಘರ್ಜಿಸಿದರೆಲ್ಲ।
ಗಗನದ ಪೂಮಳೆ ಸುರಿಯಿತು–ಸಿದ್ಧರಾಮ
ಮಿಗಿಲಾದ ಮುಕ್ಕಂಣ ಜಯಜಯ॥ ೩೯

ಅಂದಿಂದಿನಿಂದಿಗು। ಎಂದೆಂದಿಗು ಇರುವಿರಿ।
ಅಂದಾದ ಅರುವಿನ ಕುರುಹು-ಈ ಪುರಾಣ
ಕಂದಳೆಂದೆನಗೆ ಅರುಹಿದಿರಿ॥ ೪೦

ಕರೆದೆನಗೆ ಕರುಣಿಸಿ। ಒರೆದೆನಗೆ ಬರೆಸಿದಿರಿ।
ವರವಾಗಿ ಬಂದದ್ದು ಕೊಳ್ಳಿರಿ-ಎನ್ನ
ಹರಸಿದ್ಧರಾಮ 'ಜಯಸಿದ್ಧರಾಮ'॥ ೪೧

ಶ್ರೀ ಸಿದ್ಧರಾಮೇಶ್ವರ ಮಹಾಪುರಾಣದ ೪೧ ಸಂಧಿಗಳು ೪೧ ಪದಗಳು ಇಂತು ನಾಲ್ಕು ಸಾವಿರದ ಒಂದು ನೂರು (೪೧೦೦) ಪದಗಳು ಇಲ್ಲಿಗೆ ಶುಭ ಸಮಾಪ್ತಿಃ

ಜಯ ಮಂಗಳ

ಭಾವದ ಬಳ್ಳಿಗೆ। ದೇವನ ಹೂವುಗಳು।
ಶಿವಸಿದ್ಧರಾಮನ ಪುರಾಣ-ಕಾಯಾಗಿ
ಭಾವಬಯಲೊಳು ಫಲಸಿದೆ॥ ೧

ನೆಲದ ಮೇಲಿನ ಮರ। ಫಲಗಳ ಕೊಡುವದು।
ನೆಲದ ಸತ್ವವೆ ಮೂಲವದು-ಸಿದ್ಧೇಶನ
ಒಲುಮೆಯ ಫಲವಿದು ಪುರಾಣ॥ ೨

ಸಿದ್ಧರಾಮನ ಕರುಣೆ। ಹೊದ್ದಿರುವ ಶಿಶುವಿಗೆ।
ಬುದ್ಧಿಮನ ಚಿತ್ತಗಳ ಸುದ್ಧೈಸಿ-ಶರಣರು
ಶಿದ್ಧಿ ಬರೆಸಿದರು॥ ಪುರಾಣವ॥ ೩

ತನ್ನ ತಾನರಿಯಲು। ಕನ್ನಡ ಕರುಣಿಸಿ।
ಕನ್ನಡಿಯಾಗಿ ನಿಜರೂಪ-ತೋರುತ
ಕನ್ನಡದಿ ಮಹಾಕಾವ್ಯ ಬರೆಸಿದಿರಿ॥ ೪

ಕಾವ್ಯಗಳ ಬರೆಯಲು| ದಿವ್ಯಕಾರುಣ್ಯ ಕಿರಣ|
ಶಿವಶರಣರ ಚರಿತೆಯ ಸಾರಲು-ಬೀರಲು
ಕಾವ್ಯಾಂಗನೆಯನು ಕಳಿಸಿದಿರಿ || ೫

ನನ್ನಿಯಿದು ಕಂಡದ್ದು| ತಾನಾಗಿ ಬಂದದ್ದು|
ದನಿಗೂಡಿ ಹಾಡಿ ಹರಸಿದ್ದು-ದೇವನ
ಧ್ಯಾನದಲಿ ಮೂಡಿ ಬಂದದ್ದು|| ೬

ಹಾಡೂತ ಹೊರಟೀದ| ಮೂಡಿದ ಪದಗಳು|
ನೋಡಲು ನಾಲ್ಕು ಸಾವಿರದ-ಒನ್ನೂರು
ಒಡೆಯ ಸಿದ್ಧೇಶನ ಪುರಾಣ|| ೭

ಪಂಡಿತರ ಮೆಚ್ಚಿಸಲು| ಖಂಡಿತ ಬರೆದಿಲ್ಲ|
ಮಂಡಿಸಲು ವಾದಗಳ ಬಂದಿಲ್ಲ-ಮೂಡಿಹವು
ಚಂಡ ಸಿದ್ಧೇಶನ ಒಲವಿದು|| ೮

ಅನುಭಾವದ ಮಾತು| ಮನದಲ್ಲಿ ಉಳಿಸದೆ|
ಮಾನವ ಕುಲವ ಪಾವನ-ಮಾಡಲು
ಕನ್ನಡದಲಿ ಪದಗೊಳಿಸಿದೆನು|| ೯

ಮೌನದೊಳು ನಿನ್ನನು| ಧ್ಯಾನಿಸುತ ಮನವು|
ಏನೇನು ಬರೆದಿಹೆ ಅರಿಯೆನು–ತಪ್ಪಿರಲು
ನಾನಾಗಿ ಹೊಣೆಯಾಗುವೆನು|| ೧೦

ಇಂದಿನ ಈ ನೆನಹು| ಮುಂದಿನ ಬುತ್ತಿಯಾಗಿ|
ಎಂದೆಂದು ಅಳಿಯದ ಪ್ರಸಾದ-ಕರುಣಿಸಿ
ತಂದೆ ಸೇವೆಯ ಬಯಸಿದಿರಿ|| ೧೧

ಕರಗಳಿಗೆ ರುದ್ರಾಕ್ಷಿ| ವರಕಂಕಣವ ಕಟ್ಟಿ|
ಕೊರಳೊಳು ಕಂಠಮಾಲೆಯನಿರಿಸಿ-ಸಿದ್ಧೇಶ
ಪುರಾಣ ಪೂರ್ತಿಗೊಳಿಸಿದಿರಿ|| ೧೨

ಕಾವ್ಯ ಯೋಗವಕಲಿಸಿ| ಸಾವಧಾನದೊಳಿರಿಸಿ|
ಶಿವಯೋಗಿ ತನ್ನನಿಜರೂಪ-ತೋರೂತ
ಅವಿರತ ಎನ್ನೊಳು ಬೆರೆತನು|| ೧೩

ಬೆಳಗಿನ ಜಾವದ| ಗಳಿಗೆ ಸುರಿಸಿಡೆ ಸುಧೆ |
ಏಳೆಂದು ಹೇಳಿ ಎಬ್ಬಿಸುತ-ಮಗಳಿಗೆ
ಬೆಳಕಿನ ನಿಜಯೋಗ ತೋರಿದಿರಿ || ೧೪

ಕೊಟ್ಟನು ಗುರು ಎನಗೆ| ಕಟ್ಟಲು ಕಂಕಣವ|
ಹುಟ್ಟೇದೆ ಸಿದ್ಧನ ಮಗಳಾಗಿ-ಮಾಯೆಯ
ಮೆಟ್ಟಿ ನಿಂದಿಹೆ ಗುರುಸಾಕ್ಷಿ|| ೧೫

ಆನಂದದತಿರೇಕ| ತಾನೊಂದೆ ಆಯಿತು|
ಆನಂದಾಶ್ರುಗಳು ಸುರಿವಾಗ-ಸಿದ್ಧರಾಮ
ತನ್ನಂತರಂಗದಿ ಬಚ್ಚಿಟ್ಟನು || ೧೬

ಎತ್ತ ನೋಡಿದರು| ಸುತ್ತಲು ನಿನರೂಪ|
ಚಿತ್ತದ ಪಟಲ ವ್ಯಾಪಿಸಿದೆ-ಸಿದ್ಧರಾಮ
ಎತ್ತರದೆತ್ತರ ಬೆಳಗಲು || ೧೭

ಮಗಳೆ ನೀ ಬಾಯೆಂದು| ಕೂಗಿಕರೆದ ತಂದೆ|
ಯೋಗಿ ಶಿವಯೋಗಿ ಸಿದ್ಧರಾಮ-ಮಸ್ತಕದಿ
ಚಾಗಿ ಹಸ್ತವನಿಟ್ಟೇರಿ || ೧೮

ಬಾಳಿನ ಬಳ್ಳಿಯು| ಪಲ್ಲವಿಸಿ ನಿನಗಾಗಿ|
ಎಲೆ ಹೂವು ಕಾಯಿ ಆತುರದಿ-ಕಾದಿರಲು
ಸಲ್ಲಿಸಿ ಕೊಂಡಿರಿ ಸಿದ್ಧೇಶ || ೧೯

ಭಿನ್ನವಾಗಿರದಂತೆ| ಎನ್ನನವಗ್ರಹಿಸಿದಿರಿ|
ಕನ್ಯೆಯ ಮೇಲಿನ ಕರುಣೆಯ-ಬಂಣಿಸಲು
ಎನ್ನಿಂದ ಸಾಧ್ಯವಾಯಿತೆ || ೨೦

ಸ್ವಾನಂದದನುಭಾವ| ಏನೊಂದು ಬಂಣಿಸಲಿ|
ತಾನೊಂದೆಯಾಗಿ ಕಾಣುವನು-ನನ್ನಪ್ಪ
ಆನಂದ ಶಿವಾನಂದದಲಿ || ೨೧

ಶರಣರ ಸಂತರ| ಅರಿದವರ ಒರೆದವರ|
ಅರೆದರೆದು ಎನ್ನ ಹರಣವ-ತಿದ್ದೀದ
ಹಿರಿಯರೆಲ್ಲರ ನೆನೆಯುವೆ || ೨೨

ಜಯ ಜಯ ಸಿದ್ಧೇಶ| ಜಯ ಚನ್ನಬಸವೇಶ|
ಜಯ ರೇವಣಸಿದ್ಧ ಪ್ರಭುದೇವ-ಬಸವೇಶ
ಜಯ ಜಯ ಚನ್ನಮಲ್ಲೇಶ|| ೨೩

ಜಯ ನಾಗಲತಾಯಿಯೆ| ಜಯ ಸುಗ್ಗಲದೇವಿಯೆ|
ಜಯ ನೀಲಾಂಬಿಕೆ ಗಂಗಮ್ಮ-ದಾನಮ್ಮ
ಜಯ ಶಿವ ಶರಣೆಯರೆ|| ೨೪

ಜಯ ಮಹಾದೇವಿಯೆ| ಜಯ ರುದ್ರಾಂಬಿಕೆ|
ಜಯ ಅತ್ತಿಪ್ರಯಾಗ ತಾಯಿಯೆ-ಸಂಗಮ್ಮ
ದಯಮಾಡಿ ಎನ್ನ ಸಲುಹಿದಿರಿ|| ೨೫

ಈಶನ ನೆನೆಯುವೆ| ಲೇಸನು ಬಯಸುವೆ|
ಒಸಗೆಯ ಸಾರುವೆ ಸಿದ್ಧನ-ಆಲಿಸಲು
ಹಸನಹುದು ಬಾಳು ಲೋಕದ ೨೬

ಸಿದ್ಧೇಶನ ಪುರಾಣ| ಶುದ್ಧ ಮನದಿ ಓದಿ|
ಬುದ್ಧಿ ಚಿತ್ತವ ಸ್ಥಿರಗೊಳಿಸಿ-ಕೇಳಲು
ಅದ್ದುವನು ಕರುಣಾಮೃತದೊಳು || ೨೭

ಸರಿಯಿಲ್ಲದಪ್ರತಿಮ| ಗುರು ಮಹಿಮ ಸಿದ್ಧೇಶ|
ದುರಿತಕಂಟಕ ದೂರಿಕರಿಸಿ-ಇಷ್ಟಾರ್ಥ
ವರ ಸಿದ್ಧಿ ಫಲಗಳ ನೀಡುವನು|| ೨೮

ಭೋಗ ಭಾಗ್ಯದ ರಾಶಿ| ಯೋಗ ಧ್ಯಾನದ ಕೋಶ|
ಅಗಮ್ಯನ ಸಂಗ ಲಿಂಗದಲಿ-ಸಮರಸ
ಚಾಗಿ ದಿಟದಲ್ಲಿ ರಕ್ಷಿಪನು|| ೨೯

ಓಂ

ಸಿದ್ಧರಾಮಾಯ ನಮಃ

Cl. NO. Q23 33N65
Acc. NO. 199

ಪರಿಶಿಷ್ಟ

ಗ್ರಂಥದ ಅವಲೋಕನ ಮತ್ತು ಅಭ್ಯಾಸದ ದೃಷ್ಟಿಯಿಂದ ಕೆಲವು ಟಿಪ್ಪಣಿ, ಅರ್ಥಕೋಶ ಮತ್ತು ಪಾರಿಭಾಷಿಕ ಶಬ್ದಗಳನ್ನು ಇಲ್ಲಿ ಕೊಡಲಾಗಿದೆ.

ಶ್ರೀ ಪರಮೇಶ್ವರನ ಪುಣ್ಯನಾಮಗಳು

ನಾಮಗಳು		ಪುಟ	ಪದ
ಅಘೋರ	...	೧೭೫	೩
ಅಜಹರಿವಂದಿತ	...	೫೯	೭೫
ಅಣೆಯಾಂಕಧರ	...	೮೮	೮೫
ಅಂಬಾಪತಿ	...	೨೪೦	೧೭
ಅಭವ	...	೨೧೩	೧೮
ಅಸಮಾಕ್ಷ	...	೭೮	೯೫
ಇಂದುಧರ	...	೧೦	೨೭
ಇಂದುಶೇಖರ	...	೫೨	೮೧
ಇಳೆಯಾಣ್ಮ	...	೩೯	೭೬
ಈಶ	...	೯೫	೩೨
ಈಶ್ವರ	...	೨೨೭	೩೩
ಉಗ್ರಃ ಕಪರ್ದಿ	...	೨೨೧	೮೬
ಉತ್ತುಮಾಂಗ	...	೭೪	೬೪
ಉಮಾಪತಿ	...	೧೩೭	೯೦
ಉಮಾವರ	...	೧೨೨	೬೧
ಉರಗಕಂಕಣ	...	೨೨೫	೨೨
ಕಂದಗೊರಳ	...	೧೨೨	೫೯
ಕಪಿಲಸಿದ್ಧ	...	೯೭	೫೪
ಕಪ್ಪಗೊರಳ	...	೮೨	೩೦
ಕಪಾಲಿ	...	೨೪೧	೨೩
ಕಾಮಹರ	...	೯೬	೪೧
ಕಾಲರುದ್ರ	...	೧೬೪	೬
ಕಾಲಸಂಹಾರ	...	೨೪೧	೨೩
ಕಾಳಹರ	...	೧೪೩	೩೩
ಕುಂಭಿನಿ ಒಡೆಯ	...	೨೧೮	೬೧
ಕೆಂಜೆಡೆಯವ	...	೩೦	೧೦
ಕೆಂಡಗಣ್ಣನವ	...	೧೬೯	೫೫
ಗಂಗಾಧರ	...	೧೦೦	೭೮
ಗರಳಕಂಠ	...	೧೨	೪೧
ಗಿರಿಜಾವಲ್ಲಭ	...	೨೩೪	ನೈ.ಎ.ಪ.
ಗಿರಿಮಲ್ಲ	...	೪೩	೩
ಗಿರಿರಾಜ	...	೨೩೫	ನೈ.ಎ.ಪ.
ಗಿರೀಶ	...	೭೮	೯೮
ಗೌರೀವಲ್ಲಭ	...	೭೫	೭೦
ಚಂಡೇಶ	...	೧೫೭	೫೧
ಚಂದ್ರಮೌಳಿ	...	೧೦೩	೩
ಚಂದ್ರಶೇಖರ	...	೨೨೩	೧
ಚಿದ್ರೂಪ	...	೮	೧೧
ಚಿನ್ಮಯ	...	೨೧೪	೨೯
ಜಗದೀಶ	...	೧೯೩	೫೮
ಡಮರುಧರ	...	೨೪೧	೨೩
ತ್ರಿಣಯನ	...	೪೪	೧೧
ತ್ರಿನೇತ್ರ	...	೨೧೪	೨೩
ತ್ರಿಪುರಸಂಹಾರ	...	೨೩೫	ನೈ.ಎ.ಪ.

ನಾಮಗಳು		ಪುಟ	ಪದ
ತ್ರಿಲೋಚನ	...	೨೨೫	೧೯
ದೇವೇಶ	...	೨೯೧	೭೦
ದುರ್ಜಟಿ	...	೨೧೪	೨೬
ನಗಚಾಪ	...	೨೪೦	೧೬
ನಂಜುಂಡ	...	೭೨	೪೨
ನಂದಿಕೇಶ	...	೯೬	೪೯
ನಂದೀಶ	...	೯೭	೫೫
ನಂದಿವಾಹನ	...	೧೯೪	೬೦
ನಾಗಭೂಷಿತ	...	೧೭೩	೯೩
ನಿಖಿಲ	...	೨೩೫	ನೈ.ಎ.ಪ.
ನಿಟಿಲಾಕ್ಷ	...	೨೧೯	೭೬
ನಿರ್ಮಲ	...	೨೪೦	೧೬
ನಿರವಯ	...	೨೨೪	೬
ನಿರಂಜನ	...	೨೩೫	ನೈ.ಎ.ಪ.
ನೀಲಕಂಠ	...	೧೯೬	೭೯
ನೀಲಲೋಹಿತ	...	೨೨೭	೩೪
ನಿರ್ಲೇಪ	...	೨೪೧	೨೩
ಪಂಚಮುಖ	...	೮	೫
ಪಂಚವದನ	...	೧೫೪	೨೩
ಪನ್ನಗಧರ	...	೧೯೧	೩೭
ಪರಮೇಶ	...	೧೯೧	೩೭
ಪರಶಿವ	...	೨೮೦	೪೪
ಪಶುಪತಿ	...	೮	೯
ಪಾಪವಿದೂರ	...	೨೪೨	೩೦
ಪಾರ್ವತಿ ವಲ್ಲಭ	...	೨೪೧	೨೧
ಪಿನಾಕಿ	...	೨೨೦	೮೫
ಬಾಲಚಂದ್ರಮಂಡಿತ	...	೨೪೧	೨೩
ಬಿಂಬಾಧರ	...	೧೪೬	೬೦
ಭರ್ಗ	...	೨೨೫	೧೫
ಭದ್ರಾಕಾರ	...	೧೩೭	೮೯
ಭಯರಹಿತ	...	೧೬೯	೫೦
ಭವಹರ	...	೧೭೨	೭೮
ಭಾಳಚಂದ್ರ	...	೬೫	೯೧
ಭಾಳಲೋಚನ	...	೬೫	೮೬
ಭೂತನಾಥ	...	೨೪೨	೩೬
ಭೂತೇಶ	...	೧೬೫	೧೯
ಭೂತೋದ್ಧಾರಕ	...	೧೦೬	೩೧
ಭೋಳಾಸಾಂಬ	...	೧೯೬	೭೯
ಮಂದಾಕಿನಿಧರ	...	೨೪೧	೨೪
ಮಂದರನಿವಾಸ	...	೨೪೧	೨೪
ಮೃಡ	...	೧೧	೩೨
ಮೃತ್ಯುಹರ	...	೧೬೭	೩೪
ಮನೋನ್ಮನ	...	೨೧೪	೨೯
ಮಹಾದೇವ	...	೧೨೧	೫೩
ಮಹಾಲಿಂಗ	...	೯೨	೫
ಮಹಿಮೋಗ್ರ	...	೨೪೧	೨೨

ನಾಮಗಳು		ಪುಟ	ಪದ
ಮಾಯಾಕೋಲಾಹಲ	...	೧೬೦	೭೮
ಮಾಯಾಮರ್ದನ	...	೩೦೧	೨೦
ಮಾರಹರ	...	೬	೨
ಮಾರಾರಿ	...	೧೬೬	೩೧
ಮಾರುದ್ರ	...	೧೫೮	೬೧
ಮುಕ್ಕಣ್ಣ	...	೯	೨೧
ಮುಕ್ತಿವಲ್ಲಭ	...	೯೦	೯೫
ಮುಪ್ಪುರಹರ	...	೨೨೪	೧೨
ಮೂಜಗದೊಡೆಯ	...	೭೦	೨೪
ರಾಜರಾಜಾತ್ಮ	...	೨೪೧	೨೦
ರಾಜಶೇಖರ	...	೨೨೧	೮೯
ರುದ್ರ	...	೧೩೭	೮೯
ಲೋಕಾಧಿನಾಯಕ	...	೨೧೮	೬೪
ಲೋಕನಾಥ	...	೧೪೬	೬೨
ಲೋಕನಾಯಕ	...	೭೪	೬೨
ಲೋಕೇಶ	...	೧೩೭	೮೮
ವಸುಧೀಶ	...	೩೦೦	೬
ವಾಗೀಶ	...	೨೪೧	೨೪
ವಾಮದೇವ	...	೧೨೩	೭೪
ವಿಶ್ವನಾಥ	...	೧೩೬	೮೩
ವಿಷಕಂಠ	...	೨೧೬	೪೮
ವ್ಯೋಮಕೇಶ	...	೧೪೧	೧೯
ಶಂಕರ	...	೧೫೯	೭೬
ಶಕ್ತಿವಲ್ಲಭ	...	೩೮	೬೪
ಶಂಭು	...	೭	೪
ಶಶಿಧರ	...	೨೭೬	೯
ಶಾಂಭವಿಪ್ರಿಯಕರ	...	೨೪೧	೨೨
ಶಾರದೇವರ	...	೨೩೫	ನೈ.ಎ.ಪ
ಶಿತಿಕಂಠ	...	೧೭೬	೧೩
ಶಿವ	...	೮	೮
ಶ್ರೀಕಂಠ	...	೨೪೧	೨೨
ಶೂಲಿ	...	೧೯೭	೯೧
ಸಕಲಸಂರಕ್ಷಕ	...	೨೩೫	ನೈ.ಎ.ಪ.
ಸಚ್ಚಿದಾನಂದ	...	೧೫೧	೨
ಸದಾಶಿವ	...	೨೭೫	೪
ಸರ್ಪಭೂಷಣ	...	೨೬	೬೩
ಸರ್ವಜ್ಞ	...	೧೯೬	೮೨
ಸರ್ವೇಶ	...	೧೫೮	೬೬
ಸಾಂಬ	...	೨೮	೮೨
ಸುರವರವಂದಿತ	...	೧೧	೩೮
ಸೋಮಧರ	...	೧೦೭	೩೨
ಸೌಮ್ಯಾಕಾರ	...	೧೩೭	೯೦
ಹರ	...	೮	೧೦
ಹರಿಹರ	...	೬೯	೨೨

ಶ್ರೀ ಪಾರ್ವತಿದೇವಿಯ ಪುಣ್ಯನಾಮಗಳು

ನಾಮಗಳು		ಪುಟ	ಪದ
ಅಜಹರಿವಂದಿತೆ	...	೨೩೫	ನೈ.ಎ.ಪ.
ಅನ್ನಪೂರ್ಣೆ	...	೧೬	೮೫
ಆದಿಶಕ್ತಿ	...	೧೦೦	೮೦
ಉಮಾ	...	೨೩೫	ನೈ.ಎ.ಪ.
ಓಂಕಾರ ರೂಪಿಣಿ	...	೨೩೪	ನೈ.ಎ.ಪ.
ಕಲ್ಯಾಣಿ	...	೨೩೫	ನೈ.ಎ.ಪ.
ಕಾಂತೆ	...	೨೩೫	ನೈ.ಎ.ಪ.
ಕಾತ್ಯಾಯಿನಿ	...	೧೮೬	೯
ಶ್ರೀ ಗಂಗಾ	...	೮	೭
ಗಾಯಿತ್ರಿ	...	೧೩೪	ನೈ.ಎ.ಪ.
ಗಿರಿಜಾ	...	೬೨	೭
ಗಿರ್ವಾಣಪೂಜಿತೆ	...	೨೩೫	ನೈ.ಎ.ಪ.
ಶ್ರೀ ಗೌರಿ	...	೮	೭
ಪಾರ್ವತಿದೇವಿ	...	೨೩೫	ನೈ.ಎ.ಪ.
ಭವರಮ್ಮ	...	೬೪	೮೩
ಭ್ರಮರಾಂಭೆ	...	೬೪	೮೨
ಭವಾನಿ	...	೨೩೫	ನೈ.ಎ.ಪ.
ಭೈರವಿ	...	೨೩೫	,,
ರಮಾ	...	೨೩೫	,,
ರಾಜರಾಜೇಶ್ವರಿ	...	೨೩೫	,,
ರುದ್ರಾಂಬಿಕೆ	...	೨೩೫	,,
ವಾಣಿ	...	೨೩೪	,,
ಶಾಂಕರಿ	...	೨೩೪	,,
ಶಾಂತೆ	...	೨೩೪	,,
ಶಾಂಭವಿ	...	೬೮	೧೦
ಶಾರದೆ	...	೨೩೪	ನೈ.ಎ.ಪ.
ಶಿವೆ	...	೨೩೪	,,
ಸರ್ವಮಂಗಲೆ	...	೨೩೪	,,
ಸಾವಿತ್ರಿ	...	೨೩೪	,,
ಸಿರಿದೇವಿ	...	೧೦	೨೪
ಸುಜಾತೆ	...	೧೦೭	೩೬
ಸುಮತಿ	...	೨೩೫	ನೈ.ಎ.ಪ.
ಸುಲಲಿತೆ	...	೨೩೪	ನೈ.ಎ.ಪ.
ಸೌಂಕಾರಸದನೆ	...	೨೩೪	,,
ಹ್ರೀಂಕಾರಿ	...	೨೩೪	,,
ಹೈಮವತಿ	...	೨೩೫	,,

ದೇವತೆಗಳು, ಗಂಧರ್ವರು, ಭೈರವರು, ಮುನಿಗಳು ಜೋಗಿಗಳು ಇತ್ಯಾದಿ

ಅಜ	...	೫೯	೩೫
ಆಂಜನೇಯ	...	೩೧೭	೫೪

ನಾಮಗಳು		ಪುಟ	ಪದ
ಅತಿಹಂಸ	...	೧೧೩	೯೦
ಆದಿರದೈತ್ಯ	...	೧೦೧	೮೬
ಅದ್ರಿಶಿರ	...	೧೦	೨೬
ಅಮುಂಡ ಭೈರವ	...	೭೨	೪೭
ಅರುಣ	...	೧೭೧	೬೮
ಆದಿತ್ಯ	...	೯	೧೭
ಇಂದ್ರ	...	೯	೧೭
ಇಂದ್ರಜಿತ	...	೩೧೭	೫೫
ಉಗ್ರಮುಖ	...	೧೭೩	೯೩
		೧೭೪	೯೫
ಉಗ್ರನಾಥ	...	೧೭೫	೩
ಉಘೆಕಾಳ (ಶಾಪದಿಂದ ಬಂದ ಗಂಧರ್ವ)	...	೧೭೩	೮೪,೮೫
ಉತ್ತುಂಗಭದ್ರ	...	೧೧೩	೯೩
ಉರ್ಧ್ವಶಿರ	...	೧೦	೨೬
ಉನ್ಮತ್ತ ಭೈರವ	...	೧೦೨	೯೬
ಎಳೆಯ ಚಂದಿರ	...	೬೫	೮೬
ಕಪಿಲವೃತಿಪ	...	೧೧೯	೩೯
ಕವಿದುಂಚ ಭೈರವ	...	೧೦೧	೯೯
ಕಾಮ	...	೧೨೧	೫೮
ಕಾಮ	...	೧೨೨	೬೧, ೬೫, ೬೭
ಕಾಲ	...	೨೭೪	೯೮
ಕಾಲಭೈರವ	...	೭೪	೬೩
ಕುಟಿಲ ವಿದ್ಯಾಸಾಗರ	...	೧೯೧	೮೬, ೮೯
ಕುಬೇರ	...	೧೧೮	೩೧
ಕುಮಧಶೇಖರ	...	೧೧೮	೩೦
ಕುಸುಮಧರ	...	೧೨೩	೭೦
ಕ್ರೋಧಉನ್ಮತ್ತ ಚಂಡ	...	೧೦೧	೮೬
ಖರ್ಪರಜೋಗಿ	...	೨೬	೬೩
ಖರ್ಪರಜೋಗಿ	...	೧೬೫	೧೮, ೨೧
ಗಜಾನನ	...	೧೨೯	೨೨
ಗಜಾನನ	...	೧೩೦	೨೫
ಗಣನಾಥ	...	೧೭೫	೨
ಗಣೇಶ	...	೧೨೯	೨೦
ಗಣೇಶ	...	೧೩೦	೨೪, ೨೫, ೨೬, ೨೭, ೩೦
ಗಂಧರ್ವ	...	೧೨೦	೪೭
ಗೋರಖ	...	೨೦	೧೦, ೧೧
ಘನಚಂಡಿಭೈರವ	...	೧೦೨	೯೫
ಚತುರ್ಭುಜ	...	೨೭೫	೪
ಚತುರಾನನ	...	೧೨೨	೭೭
ಚಂದ್ರ	...	೯	೧೭
ಜೋಗಿಯರು	...	೭೨	೩೯
ಜೋಶಿಯರು	...	೫೧	೬೮
ದಿಗಂಬರ ಭೈರವ	...	೭೪	೭೬
ದಿನಮಣಿ	...	೩೧೦	೯೯
ದುಧಾರಸ್ವಚ್ಛಂದ	...	೧೦೧	೮೬

ನಾಮಗಳು		ಪುಟ	ಪದ
ದುರಾತ್ಮ ಭೈರವ	...	೧೦೩	೩
ನಾಗಾರ್ಜುನ (ಸಿದ್ಧ)	...	೭೧	೪೦
ನಾಗಾರ್ಜುನ (ಸಿದ್ಧ)	...	೧೧೩	೯೩
ನಾರದ	...	೧೨೧	೫೧, ೫೧
ನಾರದ	...	೧೨೨	೬೪, ೬೫
ನೀಲಪಟಲಮುನಿ	...	೧೨೨	೬೦, ೬೩
ಪರಬ್ರಹ್ಮ	...	೧೨೬	೯೮
ಪುಣ್ಯಧನ	...	೧೧೦	೬೫
ಬ್ರಹ್ಮ	...	೯	೧೬
ಬಾಣ	...	೨೮೨	೫೯
ಬಾಲಗಣಪತಿ	...	೯, ೧೩೦	೨೦, ೩೦
ಬಾಲರವಿ	...	೧೭೦	೬೬
ಬಾಲಸೂರ್ಯ	...	೭೮	೯೯
ಬೆನಕ	...	೧೦೨	೯೬
ಬೆನಕ	...	೧೨೯	೧೮, ೨೧
ಬೆನಕ	...	೧೩೯	೨೩, ೨೯
ಭೃಂಗಿ	...	೧೦	೨೩
ಭೋಗವಾಸ	...	೧೭೩	೯೩
ಭೋಗವಾಸ		೭೭೪	೯೭
ಭೈರವ	...	೬೯	೧೫, ೧೬, ೨೧
ಮದನ	...	೧೦	೨೬
ಮನ್ಮಥ	...	೧೧೪	೯೯
ಮಯೂರಕ	...	೧೧೭	೧೪
ಮಯೂರ	...	೨೮೨	೫೯
ಮೀನಜ	...	೩೧೬	೪೬
ಮೂಕಭೈರವ	...	೧೦೦	೮೪
ಮೂಕ ಭೈರವ	...	೧೦೩	೧
ಮುನಿಉತ್ತಾರಕ	...	೧೨೧	೫೨
ಮೂಲಸ್ವಾಮಿ	...	೧೧೩	೯೨
ಮೇಘಚೂಡ.	...	೧೧೦	೬೪
ಮೈಳಾಕ	...	೧೦೩	೬೦
ಯಮ	...	೧೮೯	೧೭
ಯಮರಾಜ	...	೧೯೨	೪೨, ೪೫, ೪೭
ಯಮ	...	೧೯೪	೬೪
ಯಮದೂತ	...	೧೯	೨೯, ೬೦
ರವಿ	...	೩೫೩	೫೭
ರೋಮಜ	...	೩೧೬	೪೬
ವಕ್ರತುಂಡ	...	೧೨೯	೧೪
ವಿಕ್ರಮ	...	೧೨೯	೧೪
ವಿಘ್ನೇಶ	...	೧೩೦	೨೫
ವಿದ್ಯಾಸಾಗರ	...	೧೬೫	೧೮
ವಿನುತಲೋಹಿತಕೇತ	...	೧೭೭	೧೪
ವಿಶ್ವದರ್ಶನ	...	೧೧೭	೧೯
ವಿಷ್ಣು	...	೨೭೨	೭೯
ವೀರಕರಭೈರವ	...	೧೦೨	೯೫
ವೀರಕೋಲಾಹಲ ಭೈರವ	...	೧೦೨	೯೯

ನಾಮಗಳು		ಪುಟ	ಪದ
ವೀರಭಟ್ಟ	...	೧೯	೩
ವೀರಭದ್ರ	...	೯	೧೯
ವೀರೇಶ	...	೧೦೧	೯೪
ಶಶಿ	...	೧೬೬	೧೮
ಶಿವಗಣ	...	೧೨೦	೪೯
ಶ್ರೀಹರಿ	...	೧೨೨	೬೬
ಷಣ್ಮುಖ	...	೯	೨೧
ಸ್ವಚ್ಛಂದ	...	೧೦೨	೯೯
ಸುರಗಣ	...	೧೨೦	೪೯
ಸೂರ್ಯ	...	೬೯	೧೭
ಹರಿ	...	೯	೧೫
ಹರಿನಾರಾಯಣ	...	೧೨೦	೪೯
ಹಲಾಯುಧ	...	೨೮೨	೫೮

ಲಿಂಗಗಳು

ಅಮೃತ ಲಿಂಗ	...	೧೪೭	೬೮
ಆದಿಲಿಂಗ	...	೧೪೪	೪೮
"	...	೨೨೫	೨೦
ಜ್ಯೋತಿರ್ಲಿಂಗ	...	೨೭೬	೭
ತ್ರಿಪುರಾಂತಕಲಿಂಗ	...	೩೩೪	೯೯
ಬೇಳೆಯ ಬಸವಣ್ಣ	...	೬೪	೮೧
ಯೋಗಲಿಂಗ	...	೯೭	೪೯
ಶಿವಲಿಂಗ	...	೩೮	೬೦

ದೇವತೆಗಳು

ಕಾಮಿನಿ	...	೧೨೪	೯೨
ದೇವಾಂಗನೆಯರು	...	೧೦೪	೭
ದ್ಯಾಮವ್ವ	...	೫೦	೬೭
ನವಕುಸುಮಗಂಧಿ	...	೧೧೦	೬೫
ನಾಗಕನ್ನಿಕೆ	...	೨೧೫	೪೦
ಮಂಡೋದರಿ	...	೩೧೭	೫೫
ಮೋಹಿನಿ	...	೧೨೫	೮೬
ರಂಭೆ	...	೧೨೫	೮೭
ರತಿ	...	೧೨೨	೬೩
ರಾಧಾ	...	೧೨೨	೬೬
ರುಕ್ಮಿಣಿ	...	೧೨೨	೬೬
ರುದ್ರ ಕನ್ನೆಯರು	...	೨೨೦	೮೫
ವಿದ್ಯುತ್ತೆ	...	೧೬೬	೩೧
ಲಕ್ಷ್ಮೀ	...	೧೦೪	೫
ಸತ್ಯಭಾಮಾ	...	೧೨೨	೬೬

ಅಸುರರು

ನಾಮಗಳು		ಪುಟ	ಪದ
ಅಂಧಕಾಸುರ	...	೧೯	೧
ಅಧೋದೈತ್ರಿ	...	೧೩೫	೭೧
ಗಂಡಬೇತಾಳ	...	೨೧೫	೪೩
ದೈತ್ಯರು	...	೧೧೧	೯೨
ಪಾಪಿಕೂಸು	...	೭೦	೩೦
ಪಿಶಾಚಿ	...	೨೧೫	೯
"	...	೨೧೯	೬೮
ಭೂತಬೇತಾಳ	...	೨೧೫	೩೮
ರಕ್ಕಸರು	...	೨೧೫	೪೩
"	...	೨೧೮,೨೧೯	೬೭,೭೩

ಅಷ್ಟ ಆದಿ ಶಕ್ತಿಯರು

ಅಜಿತೆ	...	೧೧೧	೯೦
ಕಾಳರಕ್ಕಸಿ	...	೧೧೧	೯೦
ಜಯೆ	...	೧೧೧	೯೦
ಪರಾಜಿತೆ	...	೧೧೧	೯೦
ಮಕರಿ	...	೧೧೧	೯೦
ಯಮದೂತಿ	...	೧೧೧	೯೦
ವಿಜಯೆ	...	೧೧೧	೯೦
ಷಷ್ಠಿ	...	೧೧೧	೯೦
ಷಷ್ಠಿ	...	೧೧೨	೯೯

ಅರವತ್ತೆಂಟು ನದಿಗಳು

ಅರ್ಕಾವತಿ	...	೧೦೮	೪೭
ಇಂದ್ರಾಣಿ	...	೧೦೮	೪೮
ಈರಾವತಿ	...	೧೦೮	೪೨
ಕಪಿಲೆ	...	೧೦೮	೪೨
ಕರಿಹೊಳೆ	...	೧೦೮	೪೨
ಕೃಷ್ಣೆ	...	೧೦೭	೪೦
ಕಾಪಿನಿ	...	೧೦೮	೪೧
ಕಾಳಿಂದಿ	...	೧೦೮	೪೬
ಕಾವೇರಿ	...	೧೦೮	೪೩
ಕುಮುದಿನಿ	...	೧೦೮	೪೩
ಕುಮುದ್ವತಿ	...	೧೦೮	೪೭
ಕೊಯನಾ	...	೧೦೮	೪೧
ಗಂಗೆ	...	೧೦೭	೩೯
ಗಾಯಿತ್ರಿ	...	೧೦೮	೪೧
ಗೋದಾವರಿ	...	೧೦೭	೩೯
ಗೋಮತಿ	...	೧೦೮	೪೩
ಗೌತಮಿ	...	೧೦೮	೪೬

ನಾಮಗಳು		ಪುಟ	ಪದ
ಘಟಪ್ರಭೆ	...	೧೦೮	೪೭
ಚಕ್ರ	...	೧೦೮	೪೫
ಚಂಬಲ	...	೧೦೮	೪೨
ಚಂದ್ರಭಾಗೆ	...	೧೦೮	೪೮
ಚಿತ್ರಾ	...	೧೦೮	೪೬
ಚೂಡಾಮಣಿ	...	೧೦೮	೪೨
ಜಯಮಂಗಲಿ	...	೧೦೮	೪೧
ಝೀಲಮ	...	೧೦೮	೪೩
ತಾಪಿ	...	೧೦೮	೪೧
ತುಂಗೆ	...	೧೦೭	೩೯
ದಾಮೋದರೆ	...	೧೦೭	೪೦
ದೋದವತಿ	...	೧೦೮	೪೧
ನರ್ಮದಾ	...	೧೦೮	೪೩
ನೈನಗಂಗಾ	...	೧೦೭	೪೦
ನೇತ್ರಾವತಿ	...	೧೦೮	೪೬
ಪಯುಷ್ಣಿ	...	೧೦೮	೪೩
ಪ್ರಯಾಗ	...	೧೦೮	೪೧
ಪಾಲಾರ	...	೧೦೭	೪೦
ಪೆನ್ನಾರ	...	೧೦೭	೪೦
ಬ್ರಹ್ಮಣಿ	...	೧೦೮	೪೮
ಬ್ರಹ್ಮಪುತ್ರ	...	೧೦೮	೪೮
ಬೈತರಾಣಿ	...	೧೦೮	೪೪
ಭದ್ರೆ	...	೧೦೭	೩೯
ಭವಾನಿ	...	೧೦೮	೪೪
ಭಾಗೀರಥಿ	...	೧೦೭	೩೯
ಭೀಮಾ	...	೧೦೭	೪೦
ಮಂಜಿರೆ	...	೧೦೮	೪೨
ಮಂದಾಕಿನಿ	...	೧೦೮	೪೭
ಮಹಾನದಿ	...	೧೦೮	೪೬
ಮಾನಸ	...	೧೦೭	೪೦
ಯಮುನೆ	...	೧೦೭	೩೯
ರೇವಾ	...	೧೦೮	೪೧
ಲಿಂಗದ ಹೊಳೆ	...	೧೦೮	೪೫
ಲೋಕಪಾವನೆ	...	೧೦೮	೪೧
ವರದಾ	...	೧೦೮	೪೩
ವೇಣಾ	...	೧೦೮	೪೫
ವೇದಾವತಿ	...	೧೦೮	೪೩
ಶರಯು	...	೧೦೮	೪೨
ಶರಾವತಿ	...	೧೦೮	೪೨
ಸಂಗಮ	...	೧೦೮	೪೫
ಸತಲಜ	...	೧೦೮	೪೩
ಸರಸ್ವತಿ	...	೧೦೮	೪೨
ಸಾಬರಮತಿ	...	೧೦೮	೪೬
ಸಾವಿತ್ರಿ	...	೧೦೮	೪೬
ಸಿಂಧು	...	೧೦೮	೪೭
ಸೀತೆ	...	೧೦೮	೪೬

ನಾಮಗಳು		ಪುಟ	ಪದ
ಸೀನಾ	...	೧೦೭	೪೦
ಸುವರ್ಣ	...	೧೦೮	೪೪
ಸೋನ	...	೧೦೮	೪೪
ಹಾರಂಗಿ	...	೧೦೮	೪೨
ಹೇಮವತಿ	...	೧೦೮	೪೩

ಶರಣೆಯರು

ಅಕ್ಕ ನಾಗಲತಾಯಿ	...	೫	೨೬
"	...	೪೭೨	೪೧,೪೨
"	...	೪೭೯,೪೮೦	೩೭
"	...	೫೧೨	೨೪
ಅಕ್ಕಮಹಾದೇವಿ	...	೫	೧೭
ಅಕ್ಕಮಹಾದೇವಿ	...	೫೧೨	೨೫
ಉದಾರ ಚಂಗಳವ್ವೆ	...	೪೮೨	೨೩
ಉದಾರ ಚಂಗಳವ್ವೆ	...	೪೭೧	೩೮
ಕಮಲವ್ವೆ	...	೪೭೨	೪೬
ಕಮಲವ್ವೆ	...	೪೮೧	೨೧
ಕಾಳವ್ವೆ	...	೨೪೪	೪೮,೫೦
ಕಾಳವ್ವೆ	...	೨೪೬	೬೬,೬೭,೬೮
ಕಾಳವ್ವೆ	...	೨೬೦	೭೭
ಗಂಗಮ್ಮ	...	೬	೨೬
ಗಂಗಮ್ಮ	...	೪೭೧,೫೧೨	೩೬,೨೪
ಚಾಮಲದೇವಿ	...	೨೯	೮೯
ಚಾಮಲದೇವಿ	...	೮೭	೭೪,೭೬
ಚಾಮಲದೇವಿ	...	೮೮	೭೭
ಚೋಳಕ್ಕ	...	೪೭೧	೩೮
ಚೋಳಕ್ಕ	...	೪೭೨	೨೩
ಜಾಕಲೆ	...	೨೧	೧೪
ದಾನಮ್ಮ	...	೫	೨೧,೨೫
ದಾನಮ್ಮ	...	೪೭೨,೫೧೨	೪೫,೨೪
ದಾನಮ್ಮ	...	೪೭೨	೪೫
ನಂಬಿಯಕ್ಕ	...	೪೭೧	೩೮
ನಂಬಿಯಕ್ಕ	...	೪೮೨	೨೪
ನೀಲಮ್ಮ	...	೬	೨೬
ನೀಲಮ್ಮ	...	೪೬೭	೧
ನೀಲಮ್ಮ	...	೪೭೯,೫೧೨	೧,೨೪
ಮಹಾದೇವಿ	...	೪೮೦	೧೦—೧೧
(ಮೋಳಿಗೆಯ ಮಾರಯ್ಯನವರ ಸತಿ)	...	೪೭೧	೩೬
ಮುಕ್ತಾಯಿ	...	೪೭೧	೩೭
ಮುಕ್ತಾಯಿ	...	೪೮೦	೬
ರುದ್ರವ್ವೆ	...	೬	೨೫
(ರುದ್ರಾಂಬಿಕೆ)	...	೫೧೨	೨೫
ರೇವಾಯಿ	...	೨೧	೧೪
ಲಕ್ಕಮ್ಮ	...	೪೭೧	೩೮

ನಾಮಗಳು		ಪುಟ	ಪದ
ವರದಾನಿ ಗುಡ್ಡವ್ವೆ	...	೪೮೦	೯
ಶಾಂತದೇವಿ	...	೨೫೦	೨
(ಅಮುಗಿ ದೇವಯ್ಯನವರ ಸತಿ)	...	...	...
ಶಿವಸತಿ ದುಗ್ಗವ್ವೆ	...	೪೭೧	೪೦
ಸತ್ಯಕ್ಕ	...	೪೭೧	೩೮
ಸುಗಲವ್ವೆ	...	೬	೨೫
ಸೋಮವ್ವೆ	...	೪೮೧	೨೩

ಶಿವಶರಣರು ಮತ್ತು ಪ್ರಮಥರು

(ಶ್ರೀ ಸಿದ್ಧರಾಮೇಶ್ವರ ಶ್ರೀ ಬಸವಣ್ಣನವರ ಶ್ರೀ ಅಲ್ಲಮಪ್ರಭುದೇವರ ಮತ್ತು ಶ್ರೀ ಚನ್ನಬಸವಣ್ಣನವರ ಹೆಸರುಗಳ ಉಲ್ಲೇಖವು ಪುರಾಣದಲ್ಲಿ ಅನೇಕ ಸಾರೆ ಬರುವದರಿಂದ ಅವರ ನಾಮಪದ ಸೂಚಿಯನ್ನು ಕೊಡಲಾಗಿಲ್ಲ.)

ಹೆಸರು		ಪುಟ	ಪದ
ಅಜಗಂಣ	...	೪೬೮—೪೭೭	೧೦—೯೦
ಅಜಗಂಣ	...	೪೭೦—೪೭೧	೩೦—೩೩
ಅಂಣ ಬೊಮ್ಮಣ್ಣ	...	೮೩	೩೪, ೩೮, ೩೯
ಅನುಮಿಷ ಗಣನಾಥ	...	೩೧೨	೯
ಅನುಮಿಷ	...	೪೧೧	೩೬—೪೦
ಅಪ್ಪಂಣ	...	೩೪೫	೯೨
ಅಮುಗಿದೇವಯ್ಯ	...	೪೦೪—೪೧೨	೮೪—೪೭
		೪೭೦	೨೬
ಅಲ್ಲಮಪ್ರಭು ಗಣನಾಥ	...	೩೧೨	೯
ಆತ್ಮಗಣನಾಥ	...	೩೧೨	೮
ಆದಯ್ಯ	...	೪೭೦	೨೩
ಆದಿಗಣನಾಥ	...	೩೧೨	೭
ಆಧ್ಯಾತ್ಮ ಗಣನಾಥ	...	೩೧೨	೭
ಉರಿಲಿಂಗ ಪೆದ್ದಂಣ	...	೪೦೩	೭೬
ಒಕ್ಕಲ ಮುದ್ದಯ್ಯ		೪೬೯	೨೨
ಕಕ್ಕಯ್ಯ	...	೪೬೭—೪೭೮	೪—೯೯
ಕಲಿಕೇತಬೊಮ್ಮ	...	೪೬೯—೪೭೮	೧೬—೯೬
ಕಿನ್ನರಬೊಮ್ಮ	...	೩೬೩	೩೩, ೩೪, ೩೮
ಕೇದಾರಗುರು	...	೧೪೭	೭೬
ಗಂಗೆವಾಳಕರು	...	೩೪೪	೭೯
ಗಾಂಧೀಜಿ	...	೫	೨೨
ಗೊಲ್ಲಾಳ	...	೪೭೦	೩೧
ಘಟಿವಾಳಯ್ಯ	...	೪೬೭	೩
"		೪೬೮—೪೭೭	೮—೮೯
ಚಿಕ್ಕಮಾದಂಣ	...	೪೬೯	೨೧
ಚಿಕ್ಕಯ್ಯ ಬೊಕ್ಕಸದ		೪೬೯	೨೧
ಚೋಳರಾಜ	...	೨೧೫	೩೩
ಜಗದೇವ	...	೫೦೨	೮೭
ಜೋಧರ ಮಾಯಂಣ	...	೪೬೯—೪೭೮	೧೭—೯೭

ಹೆಸರು		ಪುಟ	ಪದ
ದಕ್ಕೆಯ ಬೊಮ್ಮಣ	...	೪೦೪೪—೬೯	೮೩—೨೧
ತ್ರಿಣಯನ ದಾಸಯ್ಯ	...	೪೬೯—೪೭೮	೧೮—೯೫
ತೆಲಗು ಬೊಮ್ಮಣ	...	೪೦೫—೪೭೦	೯೨—೨೫
		೪೭೮	೯೫
ದಾಸಮಯ್ಯ	...	೪೦೩	೭೩
ದೇವರ ದಾಸಿಮಯ್ಯ	...	೪೭೧	೪೦
ಧೂಳಿಮಾಂಕಾಳ	...	೩೪	೨೯
ನನ್ನಪ್ಪ	...	೨೮—೨೯	೮೫—೮೬
ನಿಗಮದ ಬೊಮ್ಮಯ್ಯ	...	೪೬೯	೧೪
ನಿಜಲಿಂಗದೇವ	...	೪೬೯	೨೧
ನಿರ್ಲಜ್ಜ ಶಾಂತಯ್ಯ	...	೪೬೮—೪೭೭	೧೨—೯೨
ನೀರವೋರನ ಬೊಮ್ಮಯ್ಯ	...	೪೬೯—೪೭೬	೧೯—೮೪
ನೀರವೋರನ ವೇಮ	...	೪೬೯	೧೯
ನೂಲಿಯ ಚಂದಯ್ಯ	...	೪೭೦—೪೭೮	೨೫—೯೫
ಬಸವಗಣನಾಥ	...	೩೧೨	೮
ಬಹುರೂಪಿ ಚೌಡಯ್ಯ	...	೪೬೯—೪೭೭	೧೫—೯೪
ಬಾವೂರ ಬೊಮ್ಮಯ್ಯ	...	೪೭೦	೩೧
ಬೆಲ್ಲೇಶ ಬೊಮ್ಮಯ್ಯ	...	೧೭೭—೧೭೮	೧೮, ೨೧, ೨೩, ೨೪, ೨೫, ೨೬
ಬಿಲ್ಲೇಶ ಬೊಮ್ಮಯ್ಯ	...	೪೭೦	೩೧
ಬೊಮ್ಮಶೆಟ್ಟಿ	...	೨೪೪	೪೭ ರಿಂದ ೬೫ರ ಪದಗಳಲ್ಲಿ
ಮಡಿವಾಳ ಮಾಚಿದೇವ	...	೩೭೨—೩೭೩	೯—೧೪
ಮಧುವರಸ	...	೪೯೭—೪೯೮	೪೩, ೪೪, ೫೬,
		೪೯೯	೫೯, ೬೦, ೬೧
ಮರುಳ ಶಂಕರ	...	೩೮೩ರಿಂದ೪೦೨	೩೧,೩೨ ಸಂಧಿಗಳು
ಮಲ್ಲಿಕಾರ್ಜುನದೇವ	...	೫೦೬	೨೦
ಮುದ್ದುಗೌಡ	...	೧೭	೯೪ ರಿಂದ ೨-೩ ಸಂಧಿಗಳಲ್ಲಿ
ಮುದ್ದಣ (ಘಟಿವಾಳ)	...	೪೬೮—೪೭೭	೮—೮೯
ಮುಗ್ಧ ಸಂಗಯ್ಯ	...	೪೬೮—೪೭೭	೭—೮೭
ಮೆರೆಮಿಂಡದೇವ	...	೪೦೩	೭೬
ಮೋಳಿಗೆಯ ಮಾರಯ್ಯ	...	೪೭೦	೨೮
ರಕ್ಕಸದ ಬೊಮ್ಮಯ	...	೪೬೯	೨೨
ರಾಘವಾಂಕ	...	೪	೯
ರಾಯಸದ ಮಂಚಣ	...	೪೦೪—೪೭೦	೭೭—೨೪
ರುದ್ರಮುನಿ	...	೨೬—೫೦೬	೬೧—೨೧
ರೇವಣಸಿದ್ಧ	...	೬—೫೦೬	೨೪—೨೧
ರೇವಣಸಿದ್ಧ	...	೫೧೨	೨೩
ವಾರುಧಿ ಬೊಮ್ಮಯ್ಯ	...	೪೬೯	೨೦
ಶಿವನಾಗಮಯ್ಯ	...	೪೦೫	೮೮
ಶಿವದಾಸಿಮಯ್ಯ	...	೪೭೦	೨೭
ಸಗರದ ಬ್ರಹ್ಮಯ್ಯ	...	೪೬೮—೪೭೭	೧೩—೯೩
ಸತ್ಯಣ್ಣ	...	೪೬೮—೪೭೭	೯—೮೮
		೪೭೦	೨೩

ಹೆಸರು		ಪುಟ	ಪದ
ಸಿದ್ಧಗೋರಖ	...	೪೬೨	೬೩
ಸಿದ್ಧವೀರಂಣೊಡೆಯರು	...	೪	೧೦
ಸಿಂಧುಬಲ್ಲಾಳ	...	೩೪೪	೭೭
ಸಿರಿಯಾಳ	...	೩೪೪	೭೭
ಸೊಡ್ಡಳ ಬಾಚರಸ	...	೩೫೪—೪೬೮	೬೪, ೬೭—೫
ಸೊಡ್ಡಳಬಾಚರಸ	...	೪೭೬	೮೬
ಹಡಪದ ಅಪ್ಪಂಣ	...	೩೪೪—೩೮೭	೮೪—೩೪, ೪೦
ಹರಳಯ್ಯ	...	೪೯೭	೪೪
ಹಾವಿನ ಹಾಳಕಲ್ಲಯ್ಯ	...	೧೪೭—೧೪೮	೭೫—೭೮
		೪೭೦	೩೧
ಹಿರಿದಾಸಮಯ್ಯ	...	೩೪೪	೭೭

ಪುರಾಣದಲ್ಲಿ ಬಳಸಿದ ಕೆಲವು ಹೆಸರುಗಳು

ಅಕ್ಕಸಾಲಿಗ ಶ್ಯಾಮ	...	೫೧	೭೩
ಒಕ್ಕಲ ಸೋಮ	...	೫೧	೭೩
ಕಬ್ಬಿಲರು	...	೧೩೧	೩೩—೩೪
ಕಂಬಿ ಅಯ್ಯನವರು	...	೫೯	೩೩
ಕಮ್ಮಾರರು	...	೧೫೩—೧೫೬	೧೬, ೨೦ ೪೭ರಿಂದ೪೯
ಕಲ್ಲಪ್ಪ	...	೪೮	೪೫
ಕುರುಬರು	...	೨೦೯	೯೨
ಕೊಡ್ಲೆಪ್ಪ	...	೫೦	೬೩
ಗಾಣಿಗರು	...	೨೦೪	೪೧
ಗುಡ್ಡರು	...	೧೦೬	೨೫ರಿಂದ೩೦ ಪದಗಳಲ್ಲಿ
ಗೌಡರು	...	೨೦೮	೮೨
ಚೊಂಚರು	...	೫೮	೨೩
ದೇಸಾಯರು	...	೨೦೮	೮೨
ಯೋಗಂಣ	...	೫೧	೭೦
ರಾಮಂಣ	...	೫೧	೬೯
ವಾಲಿಕಾರ	...	೫೧	೭೨
ಸರದಾರ	...	೨೦೮	೮೨
ಸುಭೆದಾರ	...	೨೦೮	೮೨
ಹೊನ್ನಪ್ಪ	...	೫೦	೬೨

ನಾರಿಯರು

ಅಕ್ಕವ್ವ	...	೪೫	೧೮
ಅಮೃತೆ	...	೨೩೦	೫೯
ಉಮಾ	...	೨೩೨	೮೨
ಕಸ್ತೂರಿ	...	೨೩೧	೭೬
ಗಂಗಮ್ಮ	...	೨೩೪	೯೮
ಗುರದೇವಿ	...	೨೩೨	೭೮
ಗೌರಮ್ಮ	...	೨೩೦	೬೧

ಹೆಸರು		ಪುಟ	ಪದ
ಚತುರ	...	೨೩೧	೭೦
ಚಂದ್ರಮ್ಮ	...	೨೩೧	೬೯
ಚಿನ್ಮಯಿ	...	೨೩೩	೮೬
ತಂಗೆವ್ವ	...	೪೫	೧೬
ನೀಲಾ (ನೀಲಮ್ಮ)	...	೪೭—೨೩೨	೩೯—೭೯
ಪ್ರಮಿಲಾ	...	೨೩೧	೭೪
ಪಾರಕ್ಕ	...	೫೭	೧೪
ಪಾರ್ವತಿ	...	೨೩೦	೬೪
ಬಸಮ್ಮ	...	೨೩೦	೬೭
ಭಾರತಿ	...	೨೩೩	೮೭
ಮಧುಬಾಲೆ	...	೨೩೨	೮೩
ಮಹಾದೇವಿ	...	೨೩೧	೭೧
ಯಮುನಾ	...	೨೩೦	೬೨
ಲಿಂಗವ್ವ	...	೪೮	೪೮
ವಿಜೆಯ	...	೨೩೧	೭೨
ವೀರಮ್ಮ	...	೨೩೨	೭೭
ಶಕುಂತಲೆ	...	೨೩೨	೮೧
ಶಶಿಕಲಾ	...	೨೩೧	೬೮
ಶಾಂತಾ	...	೨೩೬	೭೫
ಶಾರದಮ್ಮ	...	೨೩೨	೮೫
ಶಿವಗಂಗಾ	...	೨೩೦	೬೩
ಶ್ರೀದೇವಿ	...	೨೩೦	೬೬
ಸಂಗಮ್ಮ	...	೨೩೪	೯೭
ಸರಸ್ವತಿ	...	೨೩೦	೬೦
ಸ್ವರೂಪ	...	೨೩೨	೮೪
ಸುನೀತಾ	...	೨೩೧	೭೩
ಸುಮತಿ	...	೨೩೦	೬೫

ಬಾಲಕರು

ಗಿರೀಶ ...	...	೨೩೩	೯೪
ಜಯದೇವ	...	೨೩೩	೯೩
ಬಸವೇಶ	...	೨೩೩	೮೯
ಮಹೇಶ	...	೨೩೩	೯೧
ರವಿಶಂಕರ	...	೨೩೪	೯೫
ವಿಭವ	...	೨೩೩	೮೮
ಶಿವಯೋಗಿ	...	೨೩೪	೯೬
ಸಕಲೇಶ	...	೨೩೩	೯೦
ಸಾನಂದ	...	೨೩೩	೯೨

ಪಾರಿಭಾಷಿಕ ಮತ್ತು ಬೆಡಗಿನ ಶಬ್ದಗಳು

(ಪುಟ, ಮತ್ತು ಪದ್ಯಾನುಕ್ರಮವಾಗಿ)

ಶಬ್ದ	ಪುಟ	ಪದ
ಮಂಗಳ	೩	೧
ಲಿಂಗ	೩	೧
ಶುಭ	೩	೨
ನಭದ ನೀಲಿ	೩	೨
ಸಿಂಗಾರ ಶಿವಸಿರಿ	೩	೩
ತುಂಬಿತ್ತು ತುಳುಕಿತ್ತು	೪	೬
ಒಳಹೊರಗು	೪	೬
ಅನುಭಾವ	೫	೧೫
ದಾಸೋಹ	೫	೧೫
ನಮ್ಮವರು	೫	೧೫
ಆದ್ಯರು	೫	೧೮
ಸ್ವಾಯತ	೫	೧೯
ಸನ್ನಿಹಿತ	೫	೧೯
ಶರಣ	೫	೨೨
ಸಾವಿಲ್ಲದ ಸಡಗರ	೬	೨೩
ಸಾವಿರದ ಪದ	೬	೨೫
ಸೋಮ ಬೆಳಗಿನ ಗೋಡೆ	೭	೩
ಒಂಬತ್ತು ಬಣ್ಣಗಳು	೭	೪
ಮಿಂಚಿನ ಮಾಲೆ	೭	೪
ಯತ್ನದ ಆಚೆ	೮	೬
ಪ್ರಮಥರು	೧೨	೪೬
ಲಯ	೧೬	೭೭
ಕಾಯಕ	೧೬	೭೮
ಲೇಸು	೧೬	೮೪
ಸಿದ್ಧಪ್ರಸಾದಿ	೨೮	೭೭
ಇಷ್ಟ, ಪ್ರಾಣ, ಭಾವಲಿಂಗ	೨೯	೮೮
ಅರವು, ಮರವು, ಕುರುಹು	೩೩	೧೮
ಸ್ವಾನಂದ ಸಾನಂದ	೩೩	೨೨
ರೂಢಿ, ಆರೂಢ	೩೫	೩೨
ಬಿಂದು ಸಂದಳಿದ	೩೫	೩೯
ಉಸರೆಂಬ ಬಸುರಿನ	೩೫	೪೦
ಬಟ್ಟಬಯಲು	೩೬	೪೧
ಬೆಚ್ಚಬೆರಗು	೩೮	೬೬
ಮುಗಿಲ ಬಗೆದು	೫೪	೯೬
ಚಿತ್ತಶುದ್ಧಿ	೫೮	೩೦
ನಾದಬಿಂದು ಕಳಾತೀತ	೫೯	೩೨
ಚಿದ್ರೂಪ	೬೩	೭೪
ಅರುವಿನ ಆಗರ	೬೯	೨೨
ಲಿಂಗೋಪಭೋಗಿ	೭೬	೮೨
ನೆನವಿನ ಮನೆಯ ಕೊನೆ	೭೬	೮೫
ಅಜಾತ	೭೭	೯೨

ಶಬ್ದ		ಪುಟ	ಪದ
ಸಿಡಿಲು ಮಿಂಚಿನ ಗೊಂಚಲು	...	೯೧	೧
ಬಿಂಬಾದ ಬ್ರಹ್ಮಾಂಡ	...	೯೨	೫, ೧೩
ಸತ್ ಚಿತ್ತಾನಂದ	...	೯೩	೧೫
ಯುಗಲಿಂಗ	...	೯೬	೪೯
ಮಾಮಂತ್ರ	...	೯೮	೫೯
ಬೆರಗು	...	೯೮	೬೨
ಸ್ವಯಲೀಲಾ	...	೯೮	೬೩
ಅಮಳ	...	೯೮	೬೫
ಸೂರೆಗೊಂಡು	...	೯೮	೬೭
ಘನಲಿಂಗ	...	೯೮	೬೭
ಭಾಷೆ	...	೧೦೪	೫
ಕಾಯಕ	...	೧೦೪,೧೦೬	೯,೩೩
ಒಡಲ ಬಯಲು	...	೧೦೪	೯
ಮೀನಗಣ್ಣಿನ ಯೋಗಿ	...	೧೦೪	೧೨
ಘನಕ್ಕೆ ಘನ	...	೧೦೪	೧೨
ಸ್ವಯಾಚಾರ	...	೧೦೬	೩೩
ಅಂಗ ನಿರ್ಮಲ ನಿಗಂಧ	...	೧೦೭	೩೫
ನೆತ್ತಿಯ ಜ್ಯೋತಿ	...	೧೦೯	೫೬
ತ್ರಿಕರಣ	...	೧೧೦	೫೯
ನೆತ್ತಿ ಬಾಗಿಲ	...	೧೧೩	೮೭
ಕೃತಕ ಕಮ್ಮಟ	...	೧೧೯	೩೭
ತೂಗಿ ನಿಬ್ಬೆರಗು	...	೧೨೪	೮೦
ಸ್ವಯ ತೇಜ ಜ್ಯೋತಿ	...	೧೨೮	೧೦
ಸಜ್ಜಿಗೆ	...	೧೪೧	೧೬
ಮಜ್ಜನ	...	೧೪೧	೧೬
ಮಾಬೆಳಗು	...	೧೪೧	೧೭
ಆರದ ಆರತಿ	...	೧೪೨	೨೪
ಅಂಗ ಗುಣ	...	೧೪೨	೨೫
ಸಮರಸ	...	೧೪೨	೨೫
ಉಘೇ	...	೧೪೪	೪೭
ಇರವು	...	೧೪೬	೬೪
ಪ್ರಸಾದ	...	೧೪೭	೭೧
ಸುಚಿತ್ತ ಹಸ್ತ	...	೧೫೭	೫೦
ನಿರುಪಾಧಿಕ	...	೧೮೭	೧
ನಂದಿಧ್ಯಜ	...	೨೧೦	೯೮
ಚಿನ್ಮಯ	...	೨೧೪	೨೯
ಪರಿಯಾಣ	...	೨೨೭	೩೨
ಉಘೇ ಚಾಂಗು ಭಲೆ	...	೨೨೮,೨೨೯	೪೪,೫೭
ಮಾಮನೆ	...	೨೨೮	೫೪
ಶಿವಶಕ್ತಿ ಸಂಯೋಗ	...	೨೩೭	೮
ಬಚ್ಚಿಟ್ಟ ಬಯಕೆ	...	೨೩೮	ಭೂಮದ ಪದ
ಉರುತರದ ಪ್ರಸಾದ	...	೨೪೧	೨೬
ಗುಹೇಶ್ವರ	...	೨೬೬	೨೭
ಘನ ಆಚಾರ	...	೨೬೭	೩೭
ಘಟವಿಲ್ಲದ	...	೨೬೮	೪೮
ಬಟಬಯಲು	...	೨೬೮	೪೮

ಶಬ್ದ		ಪುಟ	ಪದ
ನೀರ ನಿಃಪತಿ	...	೨೬೯	೫೦
ಅಂಗಾಲ ಕಿಚ್ಚು	...	೨೭೨	೭೮
ಕಾಯಗುಣ	...	೨೭೩	೮೯
ಅಂಗಲೀಯ	...	೨೭೩	೮೯
ಅಂಗವಿಲ್ಲದ ಅಗ್ನಿ	...	೨೭೪	೯೯
ಅಸಮಾಕ್ಷ ಲಿಂಗ	...	೨೭೬	೯
ಅರಿಯಬಾರದ ಘನ	...	೨೭೭	೧೯
ನೊಸಲಮೃತ	...	೨೭೯	೩೯
ಮನಕೆ-ಮನ ವೇದ್ಯ	...	೨೮೦	೪೨
ಕರಸ್ಥಲ	...	೨೮೦	೪೫
ಅಂಗದಲಪ್ಪು	...	೨೮೪	೭೮
ಭಾವದಲಪ್ಪು	...	೨೮೪	೭೯
ನಿರಾಕಾರದ ಘನ	...	೨೮೪	೮೦
ಸಂದಿಲ್ಲದ ಕೂಡ ಬಲ್ಲರೆ	...	೨೮೫	೯೧
ತೆರಹಿಲ್ಲದ ಘನ	...	೨೮೫	೯೪
ಕರ್ತೃ, ಭೃತ್ಯ	...	೨೮೬	೯೬
ನಿಷ್ಕಲ ತತ್ತ್ವ ಮಣಿಮುಕುಟ	...	೨೮೯	೨೦
ಬಯಲೊಳಿಪ್ಪರು	...	೨೯೧	೩೪
ಪ್ರಾಣಸೂತಕವಿಡಿದು	...	೨೯೧	೩೯
ಕಾಯ ಜೀವದ ಹೊಲಿಗೆ	...	೨೯೧	೪೦
ಸುಖ ಸಮಾಧಿ	...	೨೯೨	೪೫
ಘನಲಿಂಗದಲಿ ಸಂದ	...	೨೯೨	೪೯
ಉಸಿರು ನುಂಗಿದ	...	೨೯೩	೫೫
ನೆತ್ತಿ ಪರಿಯಾಣ	...	೨೯೩	೫೬
ಪಾದೋದಕ	...	೨೯೩	೫೮
ಪರಸಾದ	...	೨೯೪	೫೯
ಲಿಂಗದ ನಿಲವು	...	೨೯೪	೬೫
ಕೂಟ	...	೨೯೫	೭೪
ಎಳ್ಳಿನ ಮೊನೆ, ಮುಳ್ಳಿನ ಕೊನೆ	...	೨೯೬	೮೪
ಸಕಲ ಲಿಂಗ	...	೨೯೭	೮೮
ಪುರುಷರತಿಕೂಟಸ್ಥ	...	೩೦೧	೧೭
ನವನಾಳದ ಸುಳುಹು	...	೩೦೫	೫೬
ಸುನಾಳ	...	೩೦೫	೫೭
ನಿರಾಳ	...	೩೦೭	೭೦
ಉಭಯ ಸೂತಕ	...	೩೦೭	೭೨
ಬಯಲು	...	೩೦೯	೯೨
ಸರ್ವಶೂನ್ಯ ಸಮಾಧಿ	...	೩೦೯	೯೩
ಸಮರಸದ ಅನುಭಾವ	...	೩೧೧	೧
ಸರವುಂಡ ಶಬ್ದ	...	೩೧೨	೫
ಕರುಣ ಪ್ರಸಾದ	...	೩೧೨	೫
ಕರಸ್ಥಲದ ಕಾರಣ	...	೩೧೨	೬
ಪರಸ್ಥಲದ ಘನ	...	೩೧೪	೨೮
ನಿತ್ಯನಿರವಯನಿಶೂನ್ಯನಿಷ್ಕಲ	...	೩೧೫	೩೭
ಷಡ್‌ದರ್ಶನ	...	೩೧೫	೩೮
ನಿಜಲಿಂಗೈಕ್ಯ	...	೩೧೭	೫೧
ವಿಭೂತಿ ಪಟ್ಟವ ಗಟ್ಟು	...	೩೧೭	೫೬

ಶಬ್ದ		ಪುಟ	ಪದ
ಸಕೀಲ ಸಂಬಂಧ	...	೩೧೭	೫೮
ಮಹಾಪ್ರಸಾದ	...	೩೧೯	೬೮, ೬೯, ೭೧ ೭೪, ೭೫
ಅಂಗೈಲಿಂಗ	...	೩೧೯	೭೦
ಲಿಂಗಾನುಗ್ರಹ	...	೩೧೯	೭೨
ಸರ್ವಾಂಗ ಲಿಂಗಿ	...	೩೨೦	೮೨
ಸುಖಸಾರಾಯ	...	೩೨೧	೯೨
ಕರಮಸ್ತಕ ಸಂಯೋಗ	...	೩೨೫	೨೦
ಒಕ್ಕಮಿಕ್ಕ ಪ್ರಸಾದ	...	೩೨೮	೪೧
ಅವಿಮುಕ್ತ ಕ್ಷೇತ್ರ	...	೩೩೨	೮೨
ಅಚ್ಚಪ್ರಸಾದ	...	೩೩೬	೧೧
ಭೃತ್ಯಾಚಾರ	...	೩೩೮	೨೩
ಅಕಾಯಚಾರಿತ್ರ	...	೩೩೮	೨೭
ಬೆಡಗಿನ ತಾವರೆ	...	೩೩೯	೩೭
ಆದಿಲಿಂಗವ ಮೇದಿನಿಗೆ ತಂದ	...	೩೪೨	೬೪
ಬಾಗಿಲು ಉರಿಉಗುಳು	...	೩೪೨	೬೭
ಮುತ್ತಿನ ಕಂಭ	...	೩೪೩	೬೮
ಭಕ್ತಿರತಿ	...	೩೫೬	೮೨
ನಿಷ್ಪತಿ	...	೩೬೨	೨೯
ಸುರಾಳ ನಿರಾಳ ಶಬ್ದ	...	೩೭೦	೯೭
ಶರಣು ಶರಣಾರ್ಥಿ	...	೩೭೧—೨	೧—೯
ಶಿವಸಮಯಿ	...	೩೭೩	೧೮
ಆಯತ	...	೩೭೩	೨೨
ಸ್ವಾಯತ	...	೩೭೩	೨೨
ಸನ್ನಿಹಿತ	...	೩೭೩	೨೨
ಗಿಟಿಗಿಟಿ ಜಂತ್ರದ ನಿಲವು	...	೩೭೮	೬೨
ಷಟ್‌ಸ್ಥಲ ಚಕ್ರವರ್ತಿ	...	೩೮೫	೨೧
ಸತ್‌ಪ್ರಣವ	...	೩೮೭	೩೮
ಚಿತ್‌ಸುಖ	...	೩೮೮	೪೨
ಅರಗಿನ ಪುತ್ಥಳಿ	...	೩೮೯	೫೮
ಉರಿಕಂಭ	...	೩೮೯	೫೮
ಉರಿಯುಂಡ ಕರ್ಪೂರ	...	೩೯೧	೭೪
ಅನುಭವ ಮಂಟಪ	...	೪೦೨	೬೭
ಲಿಂಗ ಸಂಬಂಧಿ	...	೪೦೫	೯೧
ಲಿಂಗಾಯತ	...	೪೧೫	೭೪
ಮಂತ್ರ	...	೪೧೮	೯೮
ವಿಭೂತಿ ರುದ್ರಾಕ್ಷಿ ಕಾಯ	...	೪೧೮	೯೯
ಗಿರಿಯ ಮೇಲೆ ಎರಡು ರತ್ನ	...	೪೨೧	೧೫
ಸಹಜ ಯೋಗ	...	೪೪೫	೧೫
ಭಾವ ಯೋಗ	...	೪೪೬	೨೭
ನಿಬ್ಬೆರಗು	...	೪೪೬	೨೪
ಸೋಹಂ ಭಾವ	...	೪೪೬	೩೦
ದಾಸೋಹಂ ಭಾವ	...	೪೪೬	೩೦
ಶಿವಸಂಪದ	...	೪೪೬	೩೧
ಸುಜ್ಞಾನ ಸಮಾಧಿ	...	೪೯೧	೯೯
ವೀರಗಣಾಚಾರ	...	೫೦೨	೮೯

ಶಬ್ದ		ಪುಟ	ಪದ
ನಿಜಾಚಾರ	...	೫೦೫	೫
ಶೂನ್ಯ ಸಿಂಹಾಸನ	...	೫೦೬	೧೫
ನಿಲವಿನ ನೆಲೆ	...	೫೦೭	೨೩
ಕಾಯಕಂಥೆ	...	೫೦೮	೩೭
ಲಿಂಗ ಸಮಾಧಿ	...	೫೦೮	೩೮
ಪುರಾಣ ಕಾಯಾಗಿ	...	೫೦೯	೧
ಕಾವ್ಯ ಯೋಗ	...	೫೧೦	೧೩

ಅಂಕಿ ಸಂಖ್ಯೆಗಳಲ್ಲಿ ಬರುವ ಶಬ್ದಗಳು

(ಪುಟ ಮತ್ತು ಪದ್ಯಾನುಕ್ರಮವಾಗಿ)

ತ್ರಿವಿಧಿ	...	೪	೧೧
ತ್ರಿಪದಿ	...	೫	೧೪
ಸಾವಿರ ಸಾವಿರಾರು	...	೫	೧೪
ಸಾಸಿರ	...	೫	೨೦
ಸಾವಿರದ	...	೬	೨೫
ಒಂಬತ್ತು ಬಣ್ಣಗಳು	...	೭	೪
ಪಂಚಸೂತ್ರ	...	೮	೫
ಮೂರು ಪಾದ	...	೧೧	೩೩
ಅಷ್ಟ ಐಶ್ವರ್ಯ	...	೨೦	೮
ಹನ್ನೆರಡು ಸಾಸಿರ ಕನ್ಯಯರು	...	೨೦	೧೨
ಹನ್ನೆರಡು ಸಾವಿರಕೆ ಇನ್ನೊಂದು ಕಡಿಮೆ		೨೧	೧೪
ಸಾವಿರ ಜೋಗಿಗಳು	...	೨೫	೫೩
ಮೂರು ತನು	...	೨೬	೬೪
ಮೂರುಲಿಂಗದ ಪೂಜೆ	...	೨೬	೬೪
ಮೂರು ಹೊತ್ತು	...	೨೬	೬೪
ಮೂರುಕಾಲ	...	೨೬	೬೪
ನೂರಾರು	...	೨೬	೬೭
ಒಂಬತ್ತು ತಿಂಗಳು	...	೩೩	೧೫
ಅರವತ್ತು ವರುಷ	...	೩೩	೧೮
ಎಂಟು ವರುಷ	...	೪೧	೯೩
ಒಂಟಿಗ, ಎಂಟು ವರುಷ	...	೫೧	೧
ಹತ್ತೆಂಟು	...	೫೮	೨೭
ಹನ್ನೆರಡು ಜ್ಯೋತಿರ್ಲಿಂಗ	...	೬೨	೬೬
ಅರುವತ್ತಾರು ಕಂಬ	...	೬೪	೭೭
ಪಂಚಧಾರೆ	...	೬೫	೭೯
ಪಂಚಭೂತ	...	೬೪	೭೯
ಪಂಚಮುಖ	...	೬೪	೭೯
ಎರಡು ಮುಖದ ಆಕಳು	...	೭೩	೫೭
ನಾಕುಬಾಗಿಲ	...	೭೩	೬೭
ಅರುವತ್ತೆಂಟು ತೀರ್ಥ	...	೭೭	೯೪
ಎಂಟು ವರ್ಷದ ಬಂಟ	...	೮೯	೮೮
ಒಂದೆರಡು ತಿಂಗಳ	...	೯೪	೨೮
ಎಂಟು ದಿಕ್ಕುಗಳು	...	೯೬	೪೭

ಶಬ್ದ		ಪುಟ	ಪದ
ಎಂಟು ಲಿಂಗಗಳು	...	೯೬	೪೭
ಹದಿನೇಳು ಯೋಗಲಿಂಗ	...	೯೬	೪೯
ನಾಲ್ಕುಪಾದಂಗಳು	...	೯೭	೫೮
ನಾಲ್ಕುಯುಗಂಗಳು	...	೯೭	೫೮
ಹದಿನಾರುಲಿಂಗ	...	೯೯	೬೯
ನಾಲ್ಕುನಿಟ್ಟು	...	೬೯	೭೦
ನವಗ್ರಹಗಳು	...	೯೯	೭೬
ಎಂಟು ಆದಿಶಕ್ತಿಯರು	...	೧೮೦	೮೦
ಎಂಟು ಜನ ಭೈರವರು	...	೧೦೧	೮೭
ಏಳು ಶಿವಗಣರು	...	೧೦೧	೯೧
ಮುಕ್ಕಾಲು ಜನ	...	೧೦೫	೧೮
ನಾಲ್ಕು ಸಾವಿರ ಗುಡ್ಡರು	...	೧೦೬	೨೮
ಅರುವತ್ತೆಂಟು ನದಿಗಳು	...	೧೦೭	೩೬
ಅಷ್ಟಾಷಷ್ಠಿ ತೀರ್ಥ	...	೧೦೮	೪೯
ಏಕಮುಖ	...	೧೧೦	೬೬
ಮೂರು ಮಲಗಳು	...	೧೧೧	೭೦
ಒಂದು ಚಣ	...	೧೨೧	೫೧
ತ್ರಿಲೋಕ	...	೧೨೧	೫೩
ಹದಿನಾರು ಸಾವಿರ	...	೧೨೨	೫೫
ಚತುರಾನನ	...	೧೨೨	೬೭
ಏಳು ದಿಕ್ಕು	...	೧೨೯	೧೮
ತ್ರಿಪುಂಡ	...	೧೩೭	೯೩
ಮೂಜಗ	...	೧೪೧	೧೬
ಶತಕೋಟಿ	...	೧೪೫	೫೦
ಚತುರ್ದಶ	...	೧೪೫	೫೨
ಪಂಚಲೋಹ	...	೧೫೩	೧೬
ಪಂಚಕ್ರೋಶ	...	೧೫೪	೨೬
ಪಂಚಭೂತಾತ್ಮಕ	...	೧೫೪	೨೬
ಸಾವಿರ ಶಿವಲಿಂಗ	...	೧೫೪	೨೫
ಅರುವತ್ತೆಂಟು ಜನ	...	೧೫೪	೨೭
ಆರು ಸಾವಿರದ ಎಂಟು ನೂರು ಜನ		೧೫೪	೨೭
ಹತ್ತು ಸುಜನರು	...	೧೫೪	೩೧
ಅರುವತ್ತೆಂಟು ಲಿಂಗಗಳು	...	೧೫೫	೪೦
ಸಪ್ತಧಾತು	...	೧೫೬	೪೬
ಪಂಚಮಹಾಪಾಪ	...	೧೫೭	೫೮
ಏಳು ಜನುಮ	...	೧೫೭	೫೮
ಹದಿನೆಂಟು ಪೀಠ	...	೧೬೧	೮೮
ಹದಿನೆಂಟು ಪಟ್ಟ	...	೧೬೧	೮೯
ಮೂರು ಹೊತ್ತು	...	೧೮೭	೩
ಮೂಲೋಕ	...	೧೯೦	೨೮
ತಾಪತ್ರಯ	...	೧೯೧	೩೪
ಪಂಚಾಕ್ಷರಿ	...	೧೯೩	೫೧
ಮೂರು ಪುರ	...	೧೯೫	೭೫
ಸಾಸಿರ ಮದುವೆ	...	೧೯೬	೮೪
ಈರೇಳು ಲೋಕಂಗಳು	...	೨೦೫	೫೮
ದಶಾಮೃತ ರಸ ಕಲಶಗಳು	...	೨೨೧	೮೭

ಶಬ್ದ		ಪುಟ	ಪದ
ನಾಲ್ಕು ಆಕಾಶ ಗಂಗಾಜಲ	...	೨೨೧	೮೭
ಹದಿಮೂರು ತುಷಾರೋದಕ ಕುಂಭ		೨೨೧	೮೭
ಹದಿಮೂರು ಅಗ್ರೋದಕದ ಕಂಬ	...	೨೨೧	೮೬
ಪದಿನೆಂಟು ಕಲಶ	...	೨೨೧	೮೮
ಹದಿನೆಂಟು ಕಮಲ	...	೨೨೧	೮೮
ಏಳು ಸುತ್ತಿನ ಮಲ್ಲಿಗೆ ಹೂ	...	೨೨೧	೯೩
ಏಳು ಸುತ್ತಿನ ಕಣಗಲ	...	೨೨೨	೯೫
ದಶಾಂಗ	...	೨೨೩	೩೩
ನೂರೊಂದು ಬತ್ತಿಗಳು	...	೨೨೩	೪
ದಶವಿಧ ಮಜ್ಜನ	...	೨೨೫	೧೬
ಹತ್ತು ದಿಕ್ಕುಗಳೆಂಬ ಅಷ್ಟಗಂಧ	...	೨೨೫	೨೧
ದಶಾಂಗ, ದಶವಿಧ, ದಶದಿಕ್ಕುಗಳು	...	೨೨೬	೨೬
ಪಂಚಾರತಿ	...	೨೨೬	೨೮
ಪಂಚವದನ	...	೨೨೬	೨೮
ಜೋಡುಗಂಟೆಗಳು	...	೨೨೬	೩೧
ನವವಾದ್ಯಗಳು	...	೨೨೯	೫೮
ನವರಂಗಿ	...	೨೩೦	೬೩
ಜೋಡ ದುಂಡ ಕಡಗ	...	೨೩೨	೮೫
ಸಾಸಿರ ಬಳಗ	...	೨೩೮	೧೪
ಒಂಬತ್ತುತಿಂಗಳು	...	೨೩೮	(ಕೂಸು ಒಪ್ಪಿಸುವ ಪದ)
ಸಾಸಿರ ಕನ್ಯಾದಾನ	...	೨೪೦	೧೮
ಹತ್ತೆಂಟು ಮಕ್ಕಳು	...	೨೪೪	೫೦
ತ್ರಿನೇತ್ರ	...	೨೫೧	೧೨
ಮೂರು ಗಂಟುಗಳು	...	೨೫೨	೧೫
ಮೂರುಪುರ	...	೨೫೪	(ಭಜನೆಯ ಪದ)
ತ್ರಿಪುರ	...	೨೭೪	೯೬
ಎರಡು ಕಣ್ಣು	...	೨೭೫	೪
ಚತುರ್ಭುಜ	...	೨೭೫	೪
ಮೂರು ಕಣ್ಣು	...	೨೭೫	೪
ಶತಕೋಟಿ ಸೂರ್ಯರು	...	೨೭೬	೬
ಏಳು ಸಮುದ್ರಗಳು	...	೨೭೬	೧೩
ಕೋಟಿಸೂರ್ಯ	...	೨೮೦	೪೯
ತ್ರಿಲೋಕ	...	೨೮೨	೬೧
ಐವತ್ತೆರಡಕ್ಷರ	...	೨೯೦	೨೭
ಆರುನೆಲೆ	...	೨೯೦	೨೭
ಎರಡು ವಿವರ	...	೨೯೧	೩೮
ತ್ರಿಕರಣ	...	೨೯೩	೫೭
ಎಂಬತ್ತು ನಾಲ್ಕುಲಕ್ಷ ದೇಗುಲ	...	೨೯೬	೮೩
ಲಕ್ಷದ ಮೇಲೆ ತೊಂಬತ್ತಾರು ಸಾವಿರ ಲಿಂಗ	...	೨೯೭	೮೭
ತ್ರಿವಿಧ ಭಾವ	...	೩೦೧	೨೧
ಅಷ್ಟದಳ ಕಮಳ	...	೩೦೫	೫೭
ಏಕಾಕ್ಷರ	...	೩೦೫	೫೮
ಐವತ್ತೆರಡಕ್ಷರ	...	೩೦೫	೫೮
ನವಶಾಸನ	...	೩೦೬	೬೦

ಶಬ್ದ		ಪುಟ	ಪದ
ಷಡ್‌ಚಕ್ರ	…	೩೦೬	೬೧
ಸಾವಿರದಳ	…	೩೦೬	೬೩
ದಶಾಂಗುಲ	…	೩೦೬	೬೫
ಷಡ್‌ಸ್ಥಲ	…	೩೧೪	೨೬
ಷಡ್‌ದರ್ಶನ	…	೩೧೫	೩೮
ಷಡ್‌ಸಮಯ	…	೩೧೫	೩೮
ಅಂತಃಕರಣ ಚತುಷ್ಟಯ	…	೩೨೦	೮೪
ಚತುರ್ಮುಖ ಲಿಂಗ	…	೩೨೦	೮೪
ದಶೇಂದ್ರಿಯ	…	೩೨೦	೮೫
ದಶಮುಖ ಲಿಂಗ	…	೩೨೦	೮೫
ಪ್ರಥಮ ಕಾಲದಿ ನಿರಾಲಂಬಿ	…	೩೨೬	೨೫
ದ್ವಿತೀಯ ಕಾಲದಿ ತೇಜೋ ಮೂರ್ತಿ		೩೨೬	೨೫
ತೃತೀಯ ಕಾಲದಿ ನಾದಮೂರ್ತಿ	…	೩೨೬	೨೬
ಚತುರ್ಥ ಕಾಲದಿ ಚೈತನ್ಯರೂಪ	…	೩೨೬	೨೬
ಪಂಚಮದಿ ಮೂರ್ತಿ	…	೩೨೬	೨೬
ಷಷ್ಠಮದಿ ಪರಪುರುಷಾರ್ಥ ಸಾಧಕ		೩೨೬	೨೭
ತ್ರಿವಿಧ ಭಕ್ತಿ	…	೩೨೬	೨೭
ಹದಿನಾಲ್ಕು ಲೋಕ	…	೩೩೩	೮೬
ಹನ್ನೆರಡು ಯೋಜನೆ (ಕಲ್ಯಾಣ ವಿಸ್ತೀರ್ಣ)		೩೩೩	೯೧
ಮುನ್ನೂರ ಅರವತ್ತು ಮಹಾದ್ವಾರಗಳು		೩೩೩	೯೨
ನೂರಾ ಅರವತ್ತೈದು ಕದಗಳು	…	೩೩೩	೯೨
ನೂರೈವತ್ತು ವಜ್ರದಲುಗಗಳು	…	೩೩೩	೯೨
ಎರಡನೂರಾ ಇಪ್ಪತ್ತೈದು ಕಲ್ಲಿನ ದ್ವಾರಗಳು		೩೩೩	೯೩
ದ್ವಾರವಟಿಗೆಗಳು ನಾನೂರಾ ಐವತ್ತು		೩೩೩	೯೩
ನೂರಾ ಹದಿನೈದು ಚೋರಗಂಡಿಗಳು…		೩೩೩	೯೪
ನೂರಾ ಹದಿನೈದು ಮೊಳೆಯ ಕದಗಳು		೩೩೩	೯೪
ಆವಾರಿ ಇಪ್ಪತ್ತು	…	೩೩೩	೯೪
ಕೋಟೆ ನಲವತ್ತೆಂಟು ಯೋಜನೆ	…	೩೩೪	೯೫
ಬಾಹತ್ತರ ಪಟ್ಟಣ ಪ್ರಮಾಣ	…	೩೩೪	೯೫
ಲಕ್ಷ ಮಾಂಡಲಿಕರ ಮನೆ	…	೩೩೪	೯೫
ಲಕ್ಷ ಸಾಮಂತರ ಮನೆ	…	೩೩೪	೯೬
ಹನ್ನೆರಡು ಯೋಜನೆ ವಿಸ್ತೀರ್ಣ	…	೩೩೪	೯೭
ನೂರಿಪ್ಪತ್ತು ದ್ವಾದಶ ಯೋಜನೆ	…	೩೩೪	೯೭
ನೂರಾ ಇಪ್ಪತ್ತೈದು	…	೩೩೪	೯೭
ಲಕ್ಷದ ಮೇಲೆ ತೊಂಬತ್ತಾರು ಸಾವಿರ ದೇಗುಲ.		೩೩೪	೯೮
ತಾವರೆಯ ಸರೋವರ ಮುನ್ನೂರ ಐವತ್ತು.		೩೩೪	೯೯
ದಾಸೋಹ ಮಠ ಎರಡು ಲಕ್ಷ ತೊಂಬತ್ತೈದು.		೩೩೫	೧
ಸಾವಿರದ ಏಳನೂರ ಇಪ್ಪತ್ತು	…	೩೩೫	೧
ಐದು ಶಾಸನ	…	೩೩೫	೩

ಹೆಸರು	ಪುಟ	ಪದ
ಸಾವಿರ ಕಂಬಗಳ ಸಾವಿರ ಹೊನ್ನ ಕಳಸ. ...	೩೩೬	೫
ತ್ರಿವಿಧ ಮೂರ್ತಿಯ ಪೂಜೆ ...	೩೩೬	೫
ರಾಜಶಾಲೆಯ ಗದ್ದೆ ಹನ್ನೆರಡುಸಾವಿರ ಕಂಡುಗ.	೩೩೬	೬
ಲಿಂಗಾರ್ಚನೆ ಮಠಗಳು ಲಕ್ಷದ ಮೇಲೆ ತೊಂಬತ್ತಾರು ಸಾವಿರ.	೩೩೬	೭
ಕಟ್ಟಳೆ ನೇಮದ ಮಠಗಳು ಹನ್ನೆರಡು ಸಾವಿರ.	೩೩೬	೯
ಇಪ್ಪತ್ತೆಂಟು ಸಾವಿರ ಮಹಾಮನೆ ...	೩೩೬	೯
ಹತ್ತುಸಾವಿರ ನಿತ್ಯನೇಮಗಳ ಮಠ	೩೩೬	೧೦
ಚಿಲುಮೆಯ ಅಗ್ಗವಣಿ ಹದಿನೈದು ಸಾವಿರ	೩೩೬	೧೦
ಐದು ಸಾವಿರ ವೀರವ್ರತಿಕರ ಮಠ	೩೩೬	೧೧
ಹನ್ನೆರಡು ಸಾವಿರ ಅಚ್ಚಪ್ರಸಾದಿಕರ ಮಠ	೩೩೬	೧೧
ಸಾವಿರದ ಅರುವತ್ತುನಾಲ್ಕು ಶೀಲವಂತರ ಮಠ.	೩೬	೧೨
ಸಾವಿರ ಸಾವಿರ ಜಂಗಮಕೆ ಆರೋಗಣೆ ಮಾಡುವ ಮೂವತ್ತೆರಡು ಸಾವಿರ ದಾಸೋಹ ಮಠ.	೩೩೬	೧೨
ಐದು ನೂರು ಜಂಗಮಕ್ಕೆ ದಾಸೋಹ ಮಾಡುವ ಐವತ್ತೆಂಟು ಸಾವಿರ ಸದಾಚಾರಿಗಳ ಮಠ.	೩೩೬	೧೩
ಸಾವಿರದ ನೂರು ಜಂಗಮಕ್ಕೆ ದಾಸೋಹ ಮಾಡುವ ಹನ್ನೊಂದು ಸಾವಿರ ಮಠ.	೩೩೭	೧೪
ಭಕ್ತರ ಮಠಗಳು ಒಂದು ಲಕ್ಷ ...	೩೩೭	೧೫
ಸಮಯಾಚಾರ ಭಕ್ತರ ಮಠ ಎರಡು ಸಾವಿರದ ಏಳುನೂರಾ ಇಪ್ಪತ್ತು.	೩೩೭	೧೬
ಪ್ರಮಥರ ಮಠಗಳು ಏಳುನೂರಾ ಇಪ್ಪತ್ತು.	೩೩೭	೧೭
ಏಕಮುಖಿ, ದಶಮುಖಿ, ಸಹಸ್ರಮುಖಿ, ಕೋಟಿ ಮುಖಿ ಸಹಸ್ರಲಕ್ಷ ಮುಖಿ.	೩೩೭	೧೯
ಅನಂತ ಮುಖಿ ...	೩೩೭	೨೦
ಏಕದೇವ ...	೩೩೭	೨೦
ಏಕಮುಖಿ ...	೩೩೭	೨೦
ಆರುಸ್ಥಲ ...	೩೩೭	೨೬
ದಶಮುಖಿ ಮಾಣಿಕ ...	೩೩೯	೩೫
ಅರುವತ್ತೆಂಟು ತೀರ್ಥ ...	೩೪೧	೫೪
ಒಂದು ಕಂಬ ...	೩೪೨	೬೬
ತೊಲೆಗಳು ಆರು ...	೩೪೨	೬೬
ಮುವತ್ತಾರು ಜಂತೆ ...	೩೪೨	೬೬
ಒಲೆ ಮುವತ್ತಾರು ...	೩೪೨	೬೬
ಬಾಗಿಲು ಒಂಬತ್ತು ...	೩೪೨	೬೭
ಇಬ್ಬರು ದಡಿಕಾರರು ...	೩೪೩	೭೦
ಒಬ್ಬಾಕೆ ಎಡೆಯಾಡುವವಳು ...	೩೪೩	೭೦
ಒಬ್ಬಾಕೆ ಲಿಂಗಾರ್ಚನೆ ...	೩೪೩	೭೦
ಒಬ್ಬಾಕೆ ಸುಯಿಧಾನ ಶೋಧಿಸಿಕೊಡುವಳು	೩೪೩	೭೧

ಹೆಸರು		ಪುಟ	ಪದ
ಒಬ್ಬಾಕೆ ಉರಿಯಿಲ್ಲದೆ ಅಡಿಗೆ ಮಾಡುವಳು		೩೪೩	೭೨
ಒಂದದ್ವಣಿಗೆ	...	೩೪೩	೭೩
ಐದು ಅಗತೊಳಗೆ	...	೩೪೩	೭೩
ಷೋಡಶೋಪಚಾರ	...	೩೪೫	೮೯
ಹನ್ನೆರಡು ಸಾವಿರ ರುದ್ರಾಕ್ಷಿ	...	೩೫೫	೬೯
ನೂರೊಂದು ಸ್ಥಲ	...	೩೫೫	೭೧
ಮುನ್ನೂರಾ ಅರುವತ್ತು ದಿನ	...	೩೬೨	೨೪
ಅಷ್ಟವಿಧಾರ್ಚನೆ	...	೩೬೨	೨೭
ಷೋಡಶೋಪಚಾರ	...	೩೬೨	೨೭
ಅನಂತಕೋಟಿ	...	೩೬೩	೩೩
ಅಷ್ಟತನುಮೂರ್ತಿ	...	೩೭೬	೪೭
ಅಷ್ಟಮದ	...	೩೭೬	೪೭
ಅಷ್ಟದಳ ಕಮಲ	...	೩೭೬	೪೭
ದಶಮಾರುತ	...	೩೭೮	೬೦
ಹನ್ನೆರಡು ವರುಷ	...	೩೮೫	೧೮
ಆರನೊಳಕೊಂಡ	...	೩೮೬	೨೮
ಮೂರರ ಹೊಲಿಗೆ	...	೩೮೬	೨೯
ಎಂಟಾತ್ಮರು	...	೩೮೬	೨೯
ಮೂರೊಂದಾದ ಆರೂಢ	...	೩೮೬	೩೧
ಇಪ್ಪತ್ತೇಳು ಲೋಕವು	...	೩೮೯	೫೭
ಇಪ್ಪತ್ತೇಳು ಕರ್ಪೂರದ ಗಿರಿಗಳು	...	೩೮೯	೫೭
ಇಪ್ಪತ್ತೇಳು ಅರಗಿನ ಪುತ್ತಳಿ	...	೩೮೯	೫೮
ಇಪ್ಪತ್ತೇಳು ಗಿರಿಗಳು	...	೩೮೯	೫೮
ಇಪ್ಪತ್ತೇಳು ಉರಿಕಂಬ	...	೩೮೯	೫೮
ಷಡ್ವರ್ಣ	...	೩೯೩	೮೭
ನವಮಾಸ	...	೩೯೩	೮೭
ಮೂರರ ಬಂಧ	...	೩೯೩	೯೩
ಏಳುನೂರಾ ಎಪ್ಪತ್ತು	...	೪೦೨	೬೧
ಒಂದು ಕೋಟಿ	...	೪೧೧	೩೪
ನವನಾಳ	...	೪೧೨	೪೨
ಅಷ್ಟಮಾದಿ ಸಿದ್ಧಿ	...	೪೧೨	೪೯
ಐದು ಅಕ್ಷರ	...	೪೧೬	೮೨
ನಾಮತ್ರಯ	...	೪೧೭	೯೩
ಮೂವತ್ತೆರಡು ಕುಸುಮ	...	೪೧೯	೪
ತ್ರಿಗುಣ	...	೪೨೧	೨೨
ತ್ರಿಪುರ	...	೪೨೨	೨೪
ನಾಲ್ಕುವಿಧ	...	೪೨೨	೨೮
ಮಲಮೂರು	...	೪೨೩	೩೮
ಪದ ನಾಲ್ಕು	...	೪೨೩	೩೯
ತ್ರಿಲಿಂಗ	...	೪೨೪	೪೧
ತ್ರಿಜಗಗಳು	...	೪೨೫	೫೭
ಐದು ಬ್ರಹ್ಮ	...	೪೨೮	೮೪
ಪಂಚಾಕ್ಷರಿ	...	೪೨೯	೯೦
ಬಸವಾಕ್ಷರತ್ರಯ	...	೪೨೯	೯೨
ಐದಾರು ಪ್ರಸಾದ	...	೪೩೧	೧
ಪಾದೋದಕವೆರಡು	...	೪೩೧	೧

ಹೆಸರು		ಪುಟ	ಪದ
ದೀಕ್ಷಾತ್ರಯ	...	೪೩೧	೧
ಮುನ್ನೂರು ಕಮ	...	೪೩೧	೨
ಆರರಲಿ ಆರು ವ್ರತಗಳು	...	೪೩೨	೬–೧೨
ತತ್ತ್ವ ಮೂವತ್ತಾರು	...	೪೩೨	೭
ಮೂರಾಗಿ ಆರಾಗು	...	೪೩೨	೧೧
ಆರರ ಮೇಲೆ	...	೪೩೨	೧೨
ಮೊದಲಕ್ಕರ	...	೪೩೩	೨೦
ವಾಣಿ ನಾಲ್ಕರ ಮೇಲೆ	...	೪೩೬	೪೮
ವರ್ಣ ಏಳು	...	೪೩೬	೪೯
ಸ್ಥಾನ ಹತ್ತು	...	೪೩೭	೫೦
ಜ್ಞಾನ ಚತುಷ್ಟಯ	...	೪೩೭	೫೧
ಅಷ್ಟಾಂಗ ಯೋಗ	...	೪೩೮	೬೪
ಕಮಲ ಎಂಟೆಸಳ	...	೪೩೮	೬೭
ಎಂಟು ಬೀದಿ	...	೪೩೮	೬೭
ಎಂಟಾನೆ	...	೪೩೮	೬೭
ಅರುವತ್ತಾರು ಕೋಟಿ ಅಸುರರು	...	೪೩೯	೬೯
ಐದು ಮುಖ	...	೪೩೯	೭೧
ಐದು ಕಳೆ	...	೪೩೯	೭೧
ಐದು ಸಮರಸ	...	೪೩೯	೭೧
ಐದು ಅಕ್ಷರ	...	೪೩೯	೭೨
ಶಿವತತ್ತ್ವವೆರಡಾದುದು	...	೪೩೯	೭೩
ಇಪ್ಪತ್ತೈದು ಗ್ರಾಮ	...	೪೩೯	೭೫
ಎಂಟು ಕೊಳಗಳು	...	೪೪೦	೭೯
ನೂರು ದಳಗಳು	...	೪೪೦	೮೫
ನೂರು ಅಕ್ಷರ	...	೪೪೦	೮೫
ನೂರಾರು ಸಾಸಿರ ದಳಗಳು	...	೪೪೦	೮೫
ನೂರು ಕೋಟಿ ಸೋಮ-ಸೂರ್ಯರ ಬೆಳಗು.		೪೪೦	೮೫
ಹದಿನಾಲ್ಕು ಸಾವಿರ	...	೪೪೧	೮೭
ಈರೇಳು ಸಾಗರ	...	೪೪೧	೮೮
ಹನ್ನೆರಡೆಸಳು	...	೪೪೧	೮೯
ಅಧೋಮುಖವೆಂಟು	...	೪೪೧	೮೯
ಊರ್ಧ್ವದ ನಾಲ್ಕು	...	೪೪೧	೮೯
ಐದು ಮುಖ	...	೪೪೧	೯೪
ಐದು ತತ್ತ್ವ	...	೪೪೧	೯೪
ಇಪ್ಪತ್ತೈದು ತತ್ತ್ವ	...	೪೪೧	೯೪
ಐದಕ್ಷರದ ಮಂತ್ರ	...	೪೪೧	೯೪
ಪಂಚವಿಂಶತಿ ತತ್ತ್ವ	...	೪೪೨	೯೫
ಮೂರುವಿಧ ಮುಖ	...	೪೪೨	೯೭
ಮೂರುವಿಧ ಲಿಂಗ	...	೪೪೨	೯೭
ಮೂರುವಿಧ ತಾಣ	...	೪೪೨	೯೭
ಮೂರು ಕೋಣೆ	...	೪೪೨	೯೭
ಮೂರು ಲಿಂಗ	...	೪೪೨	೯೮
ಮೂರು ಪ್ರಸಾದ	...	೪೪೨	೯೮
ಮೂರು ವಿಧ ಪರಿಣಾಮ	...	೪೪೨	೯೮
ಆರುಸ್ಥಲ	...	೪೪೨	೯೯

ಹೆಸರು		ಪುಟ	ಪದ
ಆರು ಬಣ್ಣದ ಭೂಮಿ	...	೪೪೩	೩
ಆರು ಬಣ್ಣದ ಬಿತ್ತು	...	೪೪೩	೩
ಆರು ಬಣ್ಣದ ಮರ	...	೪೪೩	೩
ಆರಾರು ಹನ್ನೆರಡು	...	೪೪೩	೪
ಏಕಾಕ್ಷರ ಪೂಜೆ	...	೪೪೯	೫೦
ಏಕವರ್ಣದ ಜಪ	...	೪೪೯	೫೪
ಏಕಾಕ್ಷರ ಮಂತ್ರ	...	೪೪೯	೫೪
ಏಕ ರುದ್ರ	...	೪೪೯	೫೪
ನವಸೂತ್ರ	...	೪೪೯	೫೬
ಎಂಟೆಸಳ ಮಂಟಪ	...	೪೫೦	೬೪
ಎಂಟು ಕೋಣೆ	...	೪೫೦	೬೪
ಎಂಟು ಲಿಂಗದ ಪೂಜೆ	...	೪೫೦	೬೪
ಎಂಟುವಿಧ ಭಕ್ತಿ	...	೪೫೦	೬೪
ಅಷ್ಟಲಿಂಗಾರ್ಪಿತ	...	೪೫೦	೬೫
ನವಸೂತ್ರ ನಗರಿ	...	೪೫೦	೬೬
ನವರುದ್ರ ಬೀದಿ	...	೪೫೦	೬೬
ನವನಾಳ ಬಾಗಿಲ	...	೪೫೦	೬೬
ನವದ್ವಾರ ಬೀದಿ	...	೪೫೦	೬೬
ನವಕಳಸ	...	೪೫೦	೬೬
ನವವಿಧ ಭಕ್ತಿ	...	೪೫೦	೫೬
ನವಲಿಂಗ ಸ್ಥಾವರಕೆ	...	೪೫೦	೬೭
ನವಲಿಂಗ ಪೂಜೆ	...	೪೫೦	೬೭
ನವಧೂಪ	...	೪೫೦	೬೭
ನವದೀಪ	...	೪೫೦	೬೭
ನವಮಂತ್ರ	...	೪೫೦	೬೭
ನವಜಪ	...	೪೫೦	೬೭
ಆರು ನೆಲೆ	...	೪೫೧	೬೮
ಮೂರು ಕೋಣೆ	...	೪೫೧	೬೮
ಆರು ತಾಣಗಳು	...	೪೫೧	೬೯
ಪಂಚಪ್ರಾಣ	...	೪೫೩	೮೮
ನಾಲ್ಕು ವೇದ	...	೪೫೬	೬
ನಾಲ್ಕು ಯೋಗ	...	೪೫೬	೬
ನಾಲ್ಕುತರ ಮಂತ್ರ	...	೪೫೬	೬
ಮೂರು ದೀಕ್ಷೆ	...	೪೬೦	೪೮
ಆರು ಭಕ್ತಿ	...	೪೬೦	೪೮
ನಿಯತದೊಳೈದು ವಿಧ	...	೪೬೧	೫೨
ಹನ್ನೊಂದು ಮರ್ಮಗಳು	...	೪೬೨	೭೬
ಈರೈದು	...	೪೬೨	೭೬
ಬಸವ ಮೂರಕ್ಷರ	...	೪೬೪	೭೭
ಆರು ರೂಪ	...	೪೬೪	೮೨
ಭೇದ ಮುವತ್ತಾರು	...	೪೬೪	೮೩
ನವ ಖಂಡದೊಳು	...	೪೬೫	೯೩
ಮೂರು ಲಿಂಗ	...	೪೬೬	೯೭
ಮೂರು ರೂಪ	...	೪೬೬	೯೭
ಮೂರರಲಿ ಆರಾದ	...	೪೬೬	೯೭
ಆರಳಿದು ಮೂರಾದ	...	೪೬೬	೯೮

ಹೆಸರು	ಪುಟ	ಪದ
ಮೂರು ತಾನೊಂದಾದ	೪೬೬	೯೮
ಆರಾರು ದಿಕ್ಕು	೪೬೯	೧೯
ದಶ ವಾಯುಗಳು	೪೬೯	೧೯
ಅಕ್ಷರ ಐದಕ್ಕೆ	೪೭೧	೩೨
ಅಕ್ಷರ ಆರಕ್ಕೆ	೪೭೧	೩೨
ಅಕ್ಷರ ಮೂರಕ್ಕೆ	೪೭೧	೩೨
ಸಾವಿರ ದಳಗಳ ನವ ಕಮಲ	೪೭೩	೫೩
ಶಿವದೀಕ್ಷೆ ಮೂರು	೪೭೪	೬೦
ಅಂಗವಾರಕ್ಕಾರು	೪೮೧	೧೮
ಆರಂಗ	೪೮೩	(ಆರತಿ ಪದ)
ಏಕಮುಖ ಜ್ಯೋತಿ	೪೮೩	೩೨
ಪಂಚಾಚಾರ	೪೮೮	೭೫
ಪಂಚಪ್ರಾಣ	೪೮೮	೭೫
ತ್ರಿಭುವನ	೪೮೯	೭೮
ಕರಣತ್ರಯ	೪೮೯	೭೯
ಈರೈದು ಪಾದೋದಕ	೪೮೯	೮೦
ಹನ್ನೊಂದು ಪ್ರಸಾದ	೪೮೯	೮೧
ಮೂಲೋಕದೈಸಿರಿ	೪೯೩	೧೩
ಅದ್ವೈತವೊಂದು ಕೋಟಿ	೪೯೪	೧೮
ಬೇಟ ಮತ್ತೆರಡಾಗಿ	೪೯೫	೨೫
ತ್ರಿವಿಧ ದಾಸೋಹ	೪೯೫	೨೭
ಜ್ಞಾನ ಕ್ರೀಗಳೆರಡು	೪೯೫	೨೮
ನೂರೊಂದು ಕಡೆ	೫೦೬	೧೯
ದಶ ದಿಕ್ಕು	೫೦೭	೨೪
ನಾಲೊತ್ತೊಂದು ಸಂಧಿ (೪೧)	೫೦೯	ಗದ್ಯ
ನಾಲೊತ್ತೊಂದು ಪದಗಳು (೪೧)	೫೦೯	ಗದ್ಯ
ನಾಲ್ಕು ಸಾವಿರದಾ ಒಂದು ನೂರು (೪೧೦೦).	೫೦೯	ಗದ್ಯ
ನಾಲ್ಕು ಸಾವಿರದಾ ಒನ್ನೂರು	೫೧೦	೭
ಪದನಾಲ್ಕು ಸಾವಿರ	೫೧೨	೨೫

ಸ್ಥಲನಾಮ

(ಅಕಾರಾದಿಯಾಗಿ)

ಹೆಸರು		ಪುಟ	ಪದ
ಅಕ್ಕಲಕೋಟೆ	...	೫೧	೭೩
ಅಗ್ನಿಸಾಗರ	...	೭೧	೩೩
ಅಟಕೇಶನಗುಡಿ	...	೬೩	೭೨
ಅಂಬಲಿಹಳ್ಳ	...	೬೨	೬೦
ಅಭಿನವ ಶ್ರೀಶೈಲ	...	೧೦೯	೫೧
ಅಮೃತದಕೂಪ	...	೭೪	೬೧
ಅವಿಮುಕ್ತ ಕ್ಷೇತ್ರ	...	೭೮	೯೭
ಅಳಕಾಪೂರ	...	೧೧೮	೩೧
ಇಂಗಳೇಶ್ವರ	...	೫೧	೭೦
ಉತ್ತಾರಕನ ಸಭೆ	...	೧೨೧	೫೨
ಉಳವಿ	...	೫೦೫—೫೦೬	೧೧—೧೬ ೧೭—೨೨
ಕರ್ತರಿಜಲ	...	೭೦	೨೮
ಕದಳಿಬನ	...	೭೩	೫೧
ಕಪ್ಪಡಿತಡೆ	...	೫೦೦	೭೬
ಕಮರಿಕೊಳ್ಳ	...	೬೩,೬೫	೭೧—೮೭ ೮೯—೯೦
ಕಮ್ಮರಿಬಿಲ	...	೭೨	೪೭
ಕುದಿವ ನೀರಿನ ಭಾವಿ	...	೭೧	೩೪
ಕುಮಾರಧಾರೆ	...	೭೦	೨೫
ಕೆಂಡಿನ ಮಡವು	...	೭೧	೩೨
ಕೇದಾರ ಕ್ಷೇತ್ರ	...	೧೧೭—೧೪೯	೨೦—೯೧
ಕೊವೂರು	...	೧೬೪	೭
ಗಂಗೆಯುದಡಿ	...	೧೧೪	೯೭
ಗಂಗೆಯ ಮಧ್ಯ	...	೫೦೮	೩೮
ಗಡಿಭಾಗ	...	೪	೮
ಗಯಾಪುರ	...	೧೩೬	೮೨
ಘಂಟಿಮಠ	...	೬೩	೭೬
ಜಲಜಾತಖೇಟ	...	೧೧೦	೬೫
ಜೋತಿರ್ಲಿಂಗ	...	೬೨	೬೬
ನಂಜಿನ ನೆರಳು	...	೭೨	೪೨
ನಂದನವನ	...	೨೧೨	೧೩
ನವಣೆಯ ಹೊಲ	...	೩೭	೫೭
ಪಂಚಕೋಶ	...	೧೫೪	೨೩
ಪಂಚಧಾರೆ	...	೬೪	೭೯
ಪತ್ತುರಿಯುಬನ	...	೭೪	೬೪
ಪರವುತಮಠ	...	೬೪	೭೭
ಪಲ್ಲಧಾರೆ	...	೬೪	೮೦
ಪರುಷದಗಣಿ	...	೭೩	೫೮
ಪಾತಾಳಗಂಗೆ	...	೬೪	೮೫
ಪಾಷಾಣಪಕ್ಷಿ	...	೭೩	೫೦
ಪುಣ್ಯಕಾಶಿ	...	೧೪೯	೯೧

ಹೆಸರು		ಪುಟ	ಪದ
ಬತ್ತುಪ ಝರಿ	...	೭೨	೪೪
ಬಾಗೇವಾಡಿ	...	೫೧	೭೦
ಬಿದಿರುಬನ	...	೬೧	೫೮
ಬಿಲ್ವಬನ	...	೭೩	೫೩
ಭೀಮನಕೊಳ	...	೬೨	೬೧
ಮಂಗಳವಾಡ	...	೫೧—೨೦೭	೬೯—೭೪
ಮರಬಗ್ರಾಮ	...	೧೨೭—೧೨೮	೧—೧೧
ಮಲ್ಲಿಗೆ ಮಂಟಪ	...	೩೮	೫೯
ಮಾಸನೂರು	...	೧೯—೨೦	೨—೫
		೨೧	೧೮
ಮುಕ್ತಿಯ ಬಾಗಿಲ	...	೭೫	೬೮
ಮೊರಡಿ	...	೧೩	೫೦
ರಕ್ಕಸದಗುಡ್ಡ	...	೫೦೬	೨೨
ರುದ್ರಗಮ್ಮರಿ	...	೪೭೪	೬೭
ರುದ್ರಾಕ್ಷಿಮಠ	...	೬೩	೭೪
ಲಿಂಗದಹೊಳೆ	...	೬೪	೭೮
ವಾರಣಾಸಿ	...	೪೨೯	೮೮
ವಿಭೂತಿಮಠ	...	೬೩	೭೫
ಶಿವಪುರ	...	೫೦೩	೯೬
ಶಿವಮಂದಿರ	...	೨೧೭	೫೭
ಸಿರಿಗಿರಿ	...	೭೪	೬೩
ಸುವರ್ಣಪುರ	...	೨೧೯	೯೫
ಸೇಳಿಗೆ	...	೧೨೮ರಿಂದ೨೩೦	೧೩ರಿಂದ೩೧
ಸೌರಾಷ್ಟ್ರ	...	೨೦೮	೮೫
ಹಾಳುಬೆಟ್ಟ	...	೧೨೧—೧೫೮	೫೬—೭೫
ಹಿಪ್ಪರಿಗೆ	...	೫೦೬	೨೦
ಹೇಮಕೂಟ	...	೧೧೦	೬೬
ಹೊಗೆಯ ತಾಣ	...	೭೨	೪೩

ಲೋಕಗಳು

ಈರೇಳು ಲೋಕ	...	೨೫೪	೫೫
ಈರೇಳು ಭುವನಂಗಳು	...	೨೮೧	೪೫
ಕೈಲಾಸ	...	೬೮	೬, ೭, ೮
ಕೈಲಾಸ (ಬಾಗಿಲ)	...	೬೨	೬೧
ಗಂಧರ್ವಲೋಕ	...	೧೨೦—೧೮೭	೯೬—೧೨
ಚತುರ್ದಶ ವಸುಧೆ	...	೨೭೬	೧೦
ತಪಲೋಕ	...	೧೩೬	೭೭
ದೇವಲೋಕ	...	೧೭೬	೭—೮
ನಾಗಲೋಕ	...	೭೪—೧೩೬	೬೬—೭೭
ಪಾತಾಳಲೋಕ	...	೧೯೭—೨೧೫	೮೮—೩೮
		೬—೯	೩೯—೪೫
			೪೮—೭೪
ಬ್ರಹ್ಮಾಂಡ	...	೬೯	೧೭—೧೮
ಭೂಮಂಡಲ	...	೨೧೯	೭೫

ಹೆಸರು		ಪುಟ	ಪದ
ಭೂಲೋಕ	...	೧೩೬	೭೭
ಮೃತ್ಯುಲೋಕ	...	೭೫—೧೮೮	೯೪—೧೧
ಮೂಲೋಕ	...	೧೯೫,೧೯೮	೭೫—೯೭ ೯೯
ಮೂರುಪುರ	...	೧೯೦	೨೮
ಯಮಪುರಿ	...	೧೯೨	೪೮
ಯಮಸದನ	...	೧೯೧	೩೩
ಯಮ ಪಟ್ಟಣ	...	೧೯೪೧೯೭	೬೧—೯೦
ರವರವನರಕ	...	೧೮೯	೧೬
ರುದ್ರಲೋಕ	...	೭೪—೩೩೩	೬೬—೮೬
ವಿಷ್ಣುಲೋಕ	...	೧೩೬	೭೭
ಶಿವಲೋಕ	...	೧೩೬—೩೪೦ ೪೨	೮೨—೪೨ ೬೨
ಸಂಯಮಿನಿ	...	೧೯೧	೩೯
ಸುರಲೋಕ	...	೧೧೬	೧೩

ಹೂವುಗಳು

ಇರುವಂತಿಗೆ	...	೨೨೧	೯೧
ಎಕ್ಕೆ ಹೂವು	...	೨೨೧	೯೧
ಎಳೆಯ ಪತ್ತುರಿ	...	೪೭೪	೬೧
ಏಳುಸುತ್ತಿನ ಕಣಗಿಲ	...	೨೨೨	೯೫
ಏಳುಸುತ್ತಿನ ಮಲ್ಲಿಗೆ	...	೨೨೨	೯೩
ಕಡ್ಡಿ ದಾಶವಾಳ	...	೨೨೧	೬೪
ಕತ್ತುರಿ	...	೨೨೧	೯೨
ಕನಕಾಂಬರಿ	...	೨೨೧	೯೦
ಕಮಳ (ಬಿಳಿ, ಹಳದಿ, ನೀಲಿ)	...	೨೨೨	೯೮
ಕಮಳ (ಎರಡೆಸಳು)	...	೨೯೩	೫೪
ಕರಣಕುಂಡಲ	...	೨೨೧	೯೧
ಕಾಶಿತುಂಬಿ	...	೨೨೧	೯೨
ಕೆಂಪು ಗುಲಾಬಿ	...	೨೨೨	೯೬
ಕೆಂಪು ದಾಸವಾಳ	...	೧೧೧	೭೬
ಕೋರಂಟಿ	...	೨೨೧	೯೧
ಗಗನ ಮಲ್ಲಿಗೆ	...	೨೨೧	೯೦
ಗಣೇಶ ಹೂವು	...	೨೨೧	೯೪
ಗುಲಾಬಿ ಹೂ (ಬಿಳಿ, ಹಳದಿ, ಹಸಿರು)		೨೨೨	೯೬
ಗೋಕರ್ಣ	...	೨೨೧	೯೨
ಚಂಡು ಹೂವು	...	೨೨೧	೯೪
ಚಂದನ	...	೨೨೨	೯೭
ಚಂಪಕ	...	೧೧೧—೨೨೧	೭೫—೯೨
ಜಾಜಿ	...	೧೧೧—೨೨೧	೭೪—೯೪
ತುಂಬಿ	...	೨೨೨	೯೬
ದವನ	...	೨೨೧—೨೨೨	೮೯—೯೯
ದುಂಡು ಮಲ್ಲಿಗೆ	...	೨೨೧	೯೪
ದೇವ ಕಣಗಲ	...	೨೨೧	೯೨

ಹೆಸರು		ಪುಟ	ಪದ
ನಂದಿಬಟ್ಟಲ ಹೂವು	...	೨೨೨	೯೭
ನಾಗಮಲ್ಲಿಗೆ	...	೨೨೧	೯೦
ನಾಗಲಿಂಗ ಪುಷ್ಪ	...	೨೨೧	೯೦
ನಿತ್ಯ ಮಲ್ಲಿಗೆ	...	೨೨೧	೮೯
ನೀಲಾಂಬರಿ	...	೨೨೧	೯೦
ಪಚ್ಚೆ ತೆನೆ	...	೨೨೨	೯೫
ಪನ್ನೀರೆಲೆ	...	೨೨೧	೮೯
ಪಾರಿಜಾತ	...	೧೧೧—೨೨೧	೭೪—೯೧
ಬಕುಳ	...	೧೧೧—೨೨೨	೭೫—೯೨
ಬನ್ನಿಪತ್ರಿ	...	೧೪೨—೨೨೨	೨೩—೯೫
ಬಿಂದಿಗೆ	...	೨೨೧	೯೦
ಬಿಲ್ವ ಪತ್ರಿ	...	೨೨೧—೨೨೨	೯೨—೯೮
ಬಿಳಿದ್ವಾವಶಾಳ	...	೧೧೧—೨೨೨	೭೬—೯೫
ಬಿಳಿಯ ಕಣಗಿಲ	...	೨೨೨	೯೫
ಬಿಳಿಯ ಸೇವಂತಿಗೆ	...	೨೨೧	೯೩
ಬಿಳಿಯ ಸ್ಪಟಿಕ ಸಂಪಿಗೆ	...	೨೨೧	೯೪
ಮಂದಾರ ಹೂವು	...	೮೫—೨೨೨	೫೬—೯೭
ಮನೋರಂಜನ	...	೨೨೨	೯೭
ಮರುಗ	...	೨೨೧—೨೨೨	೮೯—೯೯
ಮಲ್ಲಿಗೆ	...	೧೦೯	೫೫
ರುದ್ರಾಕ್ಷಿ ಹೂವು (ಬಿಳಿ, ಕೆಂಪು, ಕೆಂದ)		೨೨೨	೯೮
ರೋಜಾಂಬರಿ	...	೨೨೧	೮೯
ಲಕಲಿ ಪತ್ರಿ	...	೨೨೧	೯೨
ಶ್ರೀಗಂಧದ ಪತ್ತುರಿ	...	೨೨೨	೯೫
ಶೇವಂತಿ	...	೧೧೧	೭೪
ಸಂಧ್ಯಾ ರಾಣಿ	...	೨೨೨	೯೭
ಸಂಪಿಗೆ	...	೧೧೧	೭೫
ಸ್ಪಟಿಕದ ಹೂವು	...	೨೨೨	೯೭
ಸಿಂಹಾಚಲ ಸಂಪಿಗೆ	...	೨೨೧	೯೧
ಸುಗಂಧ ರಾಜ	...	೨೨೧	೯೦
ಸುರಗಿ	...	೧೧೧	೭೪
ಸೂಜಿ ಮಲ್ಲಿಗೆ	...	೨೨೧	೮೯
ಸೂರ್ಯಕಾಂತಿ	...	೨೨೧	೯೨
ಸೇವಂತಿ (ನೀಲಿ, ಬಿಳಿ, ಹಳದಿ, ಕೆಂದ)		೨೨೧	೯೩

ಆಭರಣಗಳು

ಅಡ್ಡ ಕೇದಗಿಯ ಹೂವು	...	೨೩೨	೮೫
ಉಂಗುರ (ತರತರದ) (ಮಾಣಿಕ್ಯ, ರನ್ನ, ನೀಲ, ಹರಳ, ಮುತ್ತು, ವಜ್ರ)	...	೨೦೬,೨೩೪	೬೬೯೫
ಉಡುದಾರ (ಮಾವಿನ ಚಿನ್ನದ)		೨೩೪	೯೫
ಉಲಿವ ಬಾಹುಲಿ	...	೨೩೨	೮೪
ಒಂಕಿ	...	೧೨೫—೨೦೬—೨೩೦	೮೭—೬೪—೬೧
ಓಲೆ (ರನ್ನದ)	...	೨೩೧	೬೮
ಕಂಕಣ (ಕೀಲದ)	...	೨೩೩	೮೭

ಹೆಸರು	ಪುಟ	ಪದ
ಕಂಠಿ (ಮುತ್ತಿನ, ರನ್ನದ ಚಿನ್ನದ)	೨೩೦ರಿಂದ೨೩೩	೮೫ರಿಂದ೯೩
ಕಂಠ ಮಾಲೆ ...	೫೧೦	೧೨
ಕಟ್ಟಾಣಿ ಸರ ...	೨೦೬	೬೬
ಕಡಗ ...	೨೦೭	೭೦
ಕರ್ಣ ಕುಂಡಲ ...	೨೦೯	೯೧
ಕಮಳದ ಸರ ...	೨೩೦	೬೫
ಕರಗಳಿಗೆ ರುದ್ರಾಕ್ಷಿ ...	೫೧೦	೧೨
ಕಾಲಗೆಜ್ಜೆ ...	೨೦೭	೬೯
ಕಾಲುಂಗುರ ...	೨೦೫-೨೦೭-೨೩೨	೫೩-೭೦-೫
ಕಿರಿಗೆಜ್ಜೆ ...	೧೨೫—೨೩೪	೯೦—೯೬
ಕಿರಿಪಿಲ್ಲೆ ...	೨೦೫-೨೦೭-೨೩೭	೫೩-೭೦-೫
ಕೈಕಟ್ಟು (ಮುತ್ತು ಹವಳದ) ...	೨೦೬—೨೩೩	೬೪—೯೪
ಗೀರಬಳಿ ...	೨೩೨	೮೨
ಗುಂಡು ಹಚ್ಚಿದ ಬಂಗಾರ ಪಟ್ಟಿ ...	೨೩೨	೭೭
ಗುಬ್ಬಿ ಬಾವುಲಿ ...	೨೩೧	೬೯
ಗೆಜ್ಜೆಯ ಉಂಗುರ ...	೨೩೨	೮೩
ಗೆಜ್ಜೆಯ ಟೀಕೆ ...	೨೩೧	೮೩
ಗೆಜ್ಜೆಯ ಡಾಬು ...	೨೩೧	೮೩
ಗೊಂಡೆ ಮುತ್ತಿನ ಸರ ...	೨೦೮	೮೦
ಗೊಂಡೆ ಹೆರಳ ಪಿಂಪಣಿ ...	೨೩೨	೭೭
ಗೋಟ ...	೨೩೦	೬೨
ಗೋದಿ ಸರ ...	೨೦೬—೨೩೦	೬೫—೬೬
ಗೋಪು ...	೨೩೪	೯೫
ಚಂದ್ರ ಬಾವುಲಿ ...	೨೩೧	೬೯
ಚಂದ್ರಹಾರ ...	೨೩೧	೬೯
ಚಿಂಚಪಟ್ಟಿ ...	೨೩೪	೯೮
ಚಿಂತಾಕು ...	೨೩೧	೭೨
ಚಿನ್ನದ ಪಟ್ಟಿ ...	೨೩೮	ಕೂಸು ಒ. ಪ.
ಚಿನ್ನದ ಸರಪಳಿ ...	೧೧೫	೩
ಚಿನ್ನ ರನ್ನದ ಪಟ್ಟಿ ...	೧೨೫	೮೯
ಚಿನ್ನರನ್ನದ ಮಂಗಳ ಸೂತ್ರ ...	೨೩೧	೭೦
ಜೈನ ...	೨೩೩	೮೬
ಚೌಕಡಿ ...	೨೩೩	೯೨
ಜಡೆಯ ಹೂವು ...	೨೩೨	೮೫
ಜಮುಕಿ (ಹೊನ್ನ ರನ್ನದ) ...	೨೩೩	೮೬
ಜಮುಕಿ (ನೀಲ ಮುತ್ತಿನ) ...	೨೩೨	೮೪
ಜಾತಮುತ್ತಿನ ವಾಲಿ ...	೨೩೧	೭೫
ಜೋಡ ದುಂಡು ಕಡಗ ...	೨೩೨	೮೫
ಟೀಕೆ (ಮುತ್ತು, ವಜ್ರದ) ...	೨೩೦—೨೩೧	೬೬—೭೪
ಟೀಕೆ (ಹೊನ್ನದ) ...	೨೩೨	೮೩
ಡಾಬು (ವಜ್ರದ) ...	೨೦೭	೬೮
ತನಮುನಿ ...	೨೩೧	೭೩
ತಾಲುಕ ...	೨೩೧	೭೪
ತಾಳಿ ...	೨೩೨	೮
ತ್ರಿಶೂಲಹಾರ ...	೨೩೧	೬೮

ಹೆಸರು	ಘಟ	ಪದ
ತುರಾಯಿ (ಮುತ್ತಿನ) ...	೨೦೨—೨೦೮	೨೫—೯೦
...	೨೩೩	೯೦
ತೋಡೆ (ವಜ್ರದ) ...	೨೩೧	೭೪
ತೋರಹಾರ ...	೨೩೦—೨೩೩	೫೯—೯೧
	೨೩೩	೯೦
ತೋರಚಂದಿರಹಾರ ...	೨೦೬	೬೫
ದ್ರಾಕ್ಷೆಗೊಂಚಲ (ಮುತ್ತಿನ) ...	೨೩೧	೭೪
ನತ್ತು (ಮುತ್ತು ರತ್ನ, ವಜ್ರದ) ...	೨೦೬—೨೩೧	೬೮—೬೯ ೭೬
ನತ್ತು (ಹರಳಿನ) ...	೨೩೦	೫೯—೬೦
ನತ್ತು (ಮುತ್ತಿನ) ...	೨೩೮	ಭೂ. ಪ.
ನವರತ್ನದ ಹಾರ ...	೨೦೯	೯೦
ನವರತ್ನಖಚಿತ (ಗುಡಿತೋರಣ) ...	೩೫೬	೭೭—೭೮
ನಕ್ಷತ್ರ ಮಾಲೆ ...	೨೩೪	೯೮
ನಾಗಮುರಗೆ ...	೨೩೦	೬೭
ನಿರಗಿ ಬಳಿ ...	೨೩೨	೭೯
ನೀಲಕುಂತಳದೆಲೆ (ಕೊರಳಿಗೆ) ...	೨೩೨	೮೪
ನೀಲದುಂಗರ (ಮುತ್ತಿನ) ...	೨೩೨	೭೯
ನೆಲ್ಲಿಕಾಯಿಸರ ...	೨೩೨	೭೯
ನೇವಳಸರ ...	೨೩೦	೬೩
ಪಚ್ಚೆ ...	೨೦೯	೯೦
ಪಚ್ಚೆಯಸರ ...	೨೩೧	೬೮
ಪಚ್ಚೆಯಮಾಲೆ (ಮುಡಿಗೆ) ...	೨೩೧	೬೮
ಪಟ್ಟಿ (ಹೊನ್ನರನ್ನದ) ...	೨೦೭	೬೯
ಪದಕಗಳು (ಮಾಣಿಕದ) ...	೧೧೫	೩
ಪದಕ (ಚಿನ್ನದ) ...	೨೩೨	೭೮
ಪದಕ (ರನ್ನದ) ...	೨೩೩	೮೬
ಪದಕ (ಪಚ್ಚದ ನೊಸಲಿಗೆ) ...	೨೩೩	೯೩
ಪದಕ (ನೀಲಮುತ್ತಿನ) ...	೨೩೪	೯೬
ಪವಳಸರ ...	೨೩೦	೬೩
ಪವನಸರ ...	೨೩೨—೨೩೪	೭೮—೯೫
ಪವಳದ ಜಲ್ಲರಿ ...	೩೫೬	೭೮
ಪಾಟ್ಲೆ (ಬಂಗಾರ) ...	೨೦೬—೨೩೦	೬೬—೬೨
ಪಾಟಲಿ (ಮುತ್ತಿನ ಹೂವಿನ) ...	೨೩೦	೬೩
ಪುತ್ಥಳಿಸರ ...	೨೦೬	೬೫
ಪುಷ್ಪ ...	೨೦೯	೯೦
ಪೈಂಜಣ ...	೨೦೭—೨೩೨, ೨೩೩	೭೦—೮೩, ೮೬
ಪೋಚೆ (ಮುತ್ತಿನ) ...	೨೩೩	೯೨
ಬಳಿ ...	೨೦೫	೬೬
ಬಂಗಾರ ಮುತ್ತಿನ ರುದ್ರಾಕ್ಷಿಸರ ...	೨೩೪	೫೯
ಬಂಗಾರ ಸರಿಗೆ ...	೨೩೦	೭೯
ಬದಾಮಿ ಉಂಗುರ ...	೨೩೨	೭೮
ಬಾಜುಬಂದ ...	೨೩೦	೬೭
ಬಾಪುರಿ ...	೧೨೫—೨೦೬, ೨೩೦	೮೭—೬೪, ೬೧

ಹೆಸರು		ಪುಟ	ಪದ
ಬಾವುಲಿ	...	೨೩೦	೬೪
ಬಾಸಿಂಗ ಹಾರ-ತುರಾಯಿ	...	೨೦೫	೫೨
ಬಿಂದಿಬಿಜವರ (ಬೈತಲೆಗೆ)	...	೨೩೨	೮೦
ಬಿಲವರ	...	೨೦೫	೬೬
ಬಿಳಿಯ ಮುತ್ತಿನ ಸರ (ಬೈತಲೆಗೆ)	...	೨೩೨	೮೧
ಬುಗುಡಿ	...	೨೦೫—೨೩೦	೫೨—೬೪
ಬುಗುಡಿ ಜೋಡ	...	೨೦೮	೭೭
ಬೆಂಡೋಲೆ (ಮುತ್ತಿನ)	...	೨೩೧	೭೪
ಬೆಂಡೋಲೆ (ನೀಲದ)	...	೨೩೦	೬೪
ಬೆಂಡೋಲೆ (ವಜ್ರದ)	...	೨೦೩	೬೭
ಬೆರಳುಂಗರ ಸರಪಳಿ	...	೧೨೫	೯೦
ಮಂಗಳಸೂತ್ರ (ರನ್ನ ಚಿನ್ನದ)	...	೨೩೧	೭೦
ಮಣಿಸರಗಳು	...	೧೨೫	೮೯
ಮಾಂಗಲ್ಯ	...	೨೩೭	೫
ಮಾಂಗಲ್ಯ ಸೂತ್ರ	...	೨೦೫	೫೩
ಮಾಣಿಕದಹಾರ	...	೨೦೮	೭೭
ಮುಕುಟ	...	೨೮೦	೪೭—೪೮
ಮುತ್ತಿನ ಕಂಠಿ	...	೨೩೧—೨೩೨	೭೬—೮೫
ಮುತ್ತಿನ ಜಾಳಿ (ಮುಡಿಗೆ)	...	೨೩೦	೬೫
ಮುತ್ತಿನ ಝಲ್ಲರಿ	...	೨೦೫	೫೬
ಮುತ್ತಿನ ತುರಾಯಿ	...	೨೦೨	೨೫
ಮುತ್ತಿನ ದಂಡಿ	...	೨೦೭	೬೯
ಮುತ್ತಿನ ಬಳಿ	...	೨೦೬	೬೬
ಮುತ್ತಿನ ಮಾಲೆ	...	೨೨೨	೩೨
ಮುತ್ತಿನ ಮೂಗುತಿ	...	೨೩೧	೭೧
ಮುತ್ತಿನ ರನ್ನದ	...	೨೩೧	೭೩
ಮುತ್ತಿನ ಸರ	...	೨೩೮	ಭೂ. ಪ.
ಮುತ್ತಿನ ಸೊಂಡಿಲ	...	೨೩೨	೮೦
ಮುತ್ತು ರನ್ನದ ವಸ್ತು	...	೨೨೫	೧೮
ಮುರಗಿ ಬಳೆ	...	೨೩೦	೫೯
ಮೂಗಬಟ್ಟು	...	೨೩೪	೯೮
ಮೂಗುತಿ	...	೨೦೫	೫೩
ಮೇಖಲೆ	...	೨೩೨	೮೧
ಮೋಹನ ಮಾಲೆ	...	೨೩೧	೭೧
ರಟ್ಟೆಯ ಬಳೆ	...	೨೩೧	೭೧
ರನ್ನದ ಪದಕ	...	೨೩೩	೮೬
ರನ್ನದಮಾಲೆ (ಬೈತಲೆಗೆ)	...	೨೩೨	೮೪
ರನ್ನದ ಹಾರ	...	೨೩೧—೨೩೨	೭೦—೭೮
ರಾಗುಟಿಚವರಿ	...	೨೩೨	೮೨
ರುದ್ರಾಕ್ಷಿ ಕಂಠಮಾಲೆ	...	೫೧೦	೧೨
ರುಳಿಗಳು	...	೧೧೫—೨೦೭	೪—೭೦
ಲೋಲಕ (ಕುಂದಣ)	...	೨೩೩	೮೭
ವಜ್ರಪಚ್ಚದ ಬಳಿ	...	೨೦೬—೨೦೮	೬೭—೭೭
ವಾಲಿವಜ್ರದ	...	೨೩೧	೭೩
ಶಂಖಿನ ಮಾಲೆಗಳು	...	೨೬೨	೯೫
ಸರಗೊಂಡೆ	...	೧೧೫	೪

ಹೆಸರು		ಪುಟ	ಪದ
ಸರಿಗಿ	...	೨೦೬	೬೪
ಸಿಂಗಾರಸರ	...	೨೩೦	೬೨
ಸಿಂಹಮುಖದ ಕಂಕಣ	...	೨೩೧	೭೧
ಸೂರ್ಯಹಾರ	...	೨೦೬	೬೫
ಹವಳದ ಕೈಕಟ್ಟು	...	೨೩೩	೯೪
ಹವಳಸರ	...	೨೩೦	೬೪
ಹರಡಿ ಕಂಕಣ	...	೨೩೨	೮೨
ಹರಳು ಚಿನ್ನದಸರ	...	೨೩೦	೬೦
ಹರಳೆಲೆ (ನೊಸಲಿಗೆ)	...	೨೩೨	೮೨
ಹೂಮಾಲೆ (ಚಿನ್ನದ)	...	೨೦೭—೨೩೨	೬೯—೮೩
ಹೊನ್ನದ ಸರಗಳು	...	೨೦೬	೬೫
ಹೊನ್ನಹರಳಿನ ಹೂಮಾಲೆ (ಮುಡಿಗೆ)		೨೩೦	೬೫
ಹೊನ್ನಹಾರ	...	೨೩೦	೬೦

ಉಡಿಗೆ ತೊಡಿಗೆ

ಅಂಗಿ (ಜರಿ)	...	೨೩೩	೯೩
ಅಂಗಿ (ರೇಷ್ಮೆ)	...	೨೩೩	೯೪
ಅಂಗಿ (ಹೊಸ ನಮೂನೆ)	...	೨೩೩	೮೯
ಅಂಗಿ (ಹೂವಿನ ಜರಿ)	...	೨೩೪	೯೫
ಅಂಜೇರಿ ರೇಖೆಯ ಸೀರೆ	...	೨೩೧	೭೨
ಕರವತದಡಿ ಧೋತ್ರ	...	೨೦೯	೮೮
ಕರಿಯ ಜರಿಯ ಸೀರೆ	...	೨೩೨	೮೨
ಕರಿಯ ಕಂಬಳಿ	...	೨೦೯	೯೨
ಕಸೂತಿ ಜರಿಅಂಗಿ	...	೨೩೩	೯೩
ಕಸೂತಿ ಕುಪ್ಪಸ	...	೨೦೭, ೨೩೧	೭೩, ೭೬
ಕುತನಿ ಅಂಗಿ	...	೨೦೯	೮೯
ಕುತನಿಯ ಕುಬಸ	...	೨೦೮	೭೮
ಕುತನಿ ಜರಿ ಅಂಗಿ	...	೨೩೩	೯೩
ಕುಸುಮಾವಳಿ ಸೀರೆ	...	೨೩೧	೭೬
ಕುಂಚಿಗಿ	...	೨೩೩	೯೪
ಕೆಂದ ಪೀತಾಂಬರ	...	೨೩೨	೮೦
ಕೇಸರಿಯಜರ ಸೀರೆ	...	೨೩೧	೬೮
ಕೊಂಡಿಚಿಕ್ಕೆಯ ಸೀರೆ	...	೨೦೮, ೨೩೧	೮೦, ೭೪
ಖಾದಿ ಕುಪ್ಪಸ	...	೨೩೨	೭೮
ಗಜಾವಳಿ ಸೀರೆ	...	೨೩೦	೬೬
ಗುರ್ಜರಿ ಕುಪ್ಪಸ	...	೨೩೦	೬೬
ಗುಬ್ಬಿ ಕಣ್ಣಿನ ಸೀರೆ	...	೨೦೭	೭೧
ಗೊಂಡೆ ಮುತ್ತಿನ ಸೆರಗು	...	೨೩೧	೭೪
ಚದುರಂಗ ಚಿಕ್ಕೆಯ ಸೀರೆ	...	೨೩೦	೬೬
ಚಂದಿರಕಳೆ ಸೀರೆ	...	೨೦೭	೭೫
ಚಂದ್ರಾವಳಿಯ ಸೀರೆ	...	೨೩೧	೬೯
ಚಿತ್ರಾವಳಿಯ ಕುಪ್ಪಸ	...	೨೩೧	೭೦
ಜರತಾರಿ ಸೀರೆ	...	೨೦೭	೬೯
ಜರದ ಪೀತಾಂಬರ	...	೨೦೨	೨೫

ಹೆಸರು		ಪುಟ	ಪದ
ಜರದಂಚಿನ ಸೀರೆ	...	೨೩೦	೬೦
ಜರದ ಹೂವಿನ ಸೀರೆ	...	೨೩೦	೫೯
ಜರಿಬುಟ್ಟಿಯ ಅಂಗಿ	...	೨೩೩	೯೧
ಝೂಲು	...	೨೦೨	೨೫
ಟಿಬ್ಬಿಯ ಕುಬ್ಬಸ	...	೨೦೨	೭೨
ತೆಳ್ಳನ ಪಟ್ಟಾವಳಿ	...	೨೨೫	೧೯
ದಟ್ಟಿ ಪೀತಾಂಬರ	...	೨೩೮	ಕೂಸು ಒಪ್ಪಿಸುವ ಪದ.
ದಿವ್ಯಾಂಬರ	...	೨೨೫	೧೯
ದುಂಡ ಮುತ್ತಿನ ಗೊಂಡೆಸೀರೆ	...	೨೩೨	೭೭
ದೇವಾಂಗ ಮುತ್ತಿನಸೆರಗಿನ ಸೀರೆ	...	೩೫೬	೭೭
ದೇವತಾವಳಿ ಸೀರೆ	...	೨೩೦	೬೪
ನವರಂಗಿಯ ಸೀರೆ	...	೨೩೦	೬೩
ನೀಲಿ ಬಣ್ಣದ ಸೀರೆ	...	೨೦೮	೭೭
ನೀಲಿ ಪೀತಾಂಬರ	...	೨೩೨	೭೯
ನಿಲುವಂಗಿ ಜರತಾರಿ	...	೨೦೯, ೨೩೪	೮೮, ೯೬
ನೇತ್ರಾವಳಿಯ ಸೀರೆ	...	೨೩೪	೯೮
ಪೀತಾಂಬರ	...	೨೦೭	೬೯
ಬಣ್ಣದ ಪೀತಾಂಬರ	...	೧೨೫	೮೯
ಬದಾಮಿ ಸೀರೆ	...	೨೩೨	೭೮
ಬಿಳಿ ಪಟ್ಟಾವಳಿ	...	೨೨೫	೧೯
ಬಿಳಿ ರೇಷ್ಮಿ ಸೀರೆ	...	೨೦೮	೭೯
ಭರಜರಿ ಟೊಪ್ಪಿಗೆ	...	೨೩೩	೯೦
ಭರಜರಿ ಶಾಲು	...	೨೦೯	೮೮
ಭರಜರಿ ಸೀರೆ	...	೨೩೦	೬೦
ಮಂಗಳವಾಡದ ಸೀರೆ	...	೨೦೭	೭೪
ಮಂದಿಲ	...	೨೦೯	೯೦
ಮುಗಿಲ ಬಣ್ಣದ ಕುಪ್ಪಸ	...	೨೦೭	೭೬
ಮುಂಡಾಸ	...	೨೦೯	೯೦
ಮೇಲಂಗಿ	...	೨೦೯	೮೯
ಮೋತಿಚೂರಿಯ ಸೀರೆ	...	೨೩೧	೭೫
ರಂಗವಲ್ಲಿಯ ಸೀರೆ	...	೨೩೦	೬೨
ರತನದ ಕಮಳದ ಹೂವಿನ ಸೀರೆ	...	೨೦೮	೭೮
ರೇಷ್ಮಿ ಜರಿ ಕುಬ್ಬಸ	...	೨೩೧	೬೮
ಲಿಂಗದಹೂ ಕುಬ್ಬಸ	...	೨೩೦	೬೨
ಲಿಂಗಮುದ್ರೆಯ ಸೀರೆ	...	೨೩೪	೯೭
ಸದರಂಗಿ	...	೨೩೭	೧೦
ಸಿಂಹಾವಳಿ ಪೈತಣಿ	...	೨೩೧	೭೧
ಸುಖಾವಳಿ ಸೀರೆ	...	೨೩೨	೮೧
ಸೂತ್ರಾವಳಿ ಸೀರೆ	...	೨೩೧	೭೦
ಸೋಮಕಾಂತಿಯ ಸೀರೆ	...	೨೩೦	೬೫
ಹಗಲ ಚಿಕ್ಕೆಯ ಸೀರೆ	...	೨೦೭	೭೬
ಹಂಡ ಚಿಕ್ಕೆಯ ಸೀರೆ	...	೨೩೨	೭೭
ಹಸಿರು ಪೈತಣಿ	...	೨೦೭	೭೩
ಹಸಿರು ಸೀರಿ	...	೨೧೨	೧೨
ಹೂಜರಿ ಕುಬ್ಬಸ	...	೨೩೦	೬೪
ಹೊನ್ನ ಧಾರೆಯ ಸೀರೆ	...	೨೩೧	೭೩

ಮೃಷ್ಟಾನ್ನ ಮತ್ತು ತಿನ್ನುವ ಪದಾರ್ಥಗಳು

ಹೆಸರು	ಪುಟ	ಪದ
ಅನ್ನ	೬೨	೬೭
ಅಡಿಕೆ	೨೦೫	೫೧
ಅಮೃತಾನ್ನ	೨೨೭	೩೨
ಉಗುರೊತ್ತು	೨೦೨	೩೧
ಉಗೆದ ಹಪ್ಪಳ	೨೦೩	೩೩
ಉಂಡಿ	೨೦೩	೩೪
ಉಪ್ಪಿನ ಕಾಯಿ	೨೦೩	೩೨
ಎಣ್ಣೆಯ ಹೋಳಿಗೆ	೨೦೩, ೨೩೮	ಭೂ. ಪ. ೩೩
ಎಳ್ಳಿನ ಸಂಡಗಿ	೨೦೩	೩೬
ಕರಜಿಕಾಯಿ	೨೦೩	೩೪
ಕರದಂಟ	೨೦೩	೩೫
ಕುರುಡಿಗೆ	೨೦೩	೩೩
ಕೊಡಬೇಳಿ	೨೦೩	೩೫
ಖಾರಪುರಿ	೨೦೩	೩೫
ಗರಿ ಉಂಡೆ	೨೦೩	೩೪
ಗಿಲಿಗಿಂಚಿ	೨೦೩	೩೫
ಗುಳ್ಳುಂಡಿ	೨೦೩	೩೬
ಚಕ್ಕಲಿ	೨೦೩	೩೫
ಚಿನ್ನಿಯ ಸಕ್ಕರೆ	೨೩೮	ಭೂ.ಪ.
ದಿವ್ಯಾನ್ನ	೨೨೭	೩೨
ದೇವಾನ್ನ	೨೨೭	೩೨
ಪಕ್ವಾನ್ನ	೨೨೭	೩೨
ಪರಡಿ	೨೦೨	೩೧
ಫಲಾಹಾರ	೨೧೧	೪
ಬಾನದ್ದಿಟ್ಟು	೨೦೩	೩೫
ಬಿಸಿ ರೊಟ್ಟಿ	......	...
ಬುತ್ತಿ	೪೧	೮೬
ಬುರುಬುರಿ	೨೦೩	೩೫
ಬೇಸನದುಂಡಿ	೨೦೩	೩೪
ಬೇವಿನ ಹೂ (ಪಾಯಸ)	೨೦೨	೩೧
ಬೋನ	೧೫೪, ೨೪೯	೨೬, ೯೩
ಮಜ್ಜಿಗೆ	೨೫೭, ೬೨	೫೦, ೫೨
ಮಂಡಿಗಿ	೨೦೩	೩೬
ಮೃಷ್ಟಾನ್ನ	೨೯	೮೮
ಮಾಲುದಿ	೨೦೩	೩೩
ಮೊಸರು	೨೦೪, ೨೨೪	೪೧, ೧೧
ಮೊಸರನ್ನ	೬೦, ೬೨	೪೭. ೫೪, ೫೬
ಲಡ್ಡುಗಿ	೨೦೩	೩೩
ಶಾವಿಗೆ	೨೦೨	೩೧
ಸಕ್ಕರಿ	...	...
ಸಜ್ಜಕದ ಹೋಳಿಗೆ	೨೦೩	೩೫
ಸಂಡಿಗೆ	೨೦೩	೩೨
ಸಣ್ಣಕ್ಕಿ ಬಾನ	೨೩೫	ಕೂ. ಒ. ಪ

ಹೆಸರು		ಪುಟ	ಪದ
ಸವತಿ ಬೀಜ	...	೨೦೨	೩೧
ಸುರಳಿ ಹೋಳಿಗೆ	...	೨೦೩	೩೪
ಹಪ್ಪಳ	...	೨೦೩	೩೨
ಹಾಲು	...	೧೫೫	೩೬
ಹಾಲು ಹಣ್ಣು	...	೨೧೧	೪
ಹಿಂಡಿಗಳು	...	೨೦೩	೩೬
ಹುಗ್ಗಿ	...	೨೦೩	೩೭
ಹುರಿಟ್ಟು	...	೨೦೩	೩೫
ಹುಳಿ ಮೊಸರನ್ನ	...	೪೦	೮೫
ಕ್ಷೀರ	...	೩೦೦, ೪	೧೨, ೪೧

ಕಾಯಿಪಲ್ಲೆ, ಕಾಳುಕಡಿ ಮತ್ತು ಹಣ್ಣು ಹಂಪಲ ಇತ್ಯಾದಿ

ಅಕ್ಕಿ	...	೨೦೩—೨೯೫	೩೮—೯೯
ಅಂಗುರ	...	೨೨೪	೮
ಅಂಜಿರ	...	೨೨೪	೮
ಅತ್ತಿಯ ಹಣ್ಣು	...	೩೩೬	೬೧
ಅವರೆ ಕಾಯಿ	...	೨೦೪	೪೭
ಉಪ್ಪು	...	೪೯೭	೪೨
ಎಳ್ಳು	...	೨೯೬—೪೦೮	೮೪—೧೩
ಎಳೆ ಎಲೆ	...	೨೨೨	೩೮
ಎಳೆ ಸೌತೆಕಾಯಿ	...	೨೦೪	೪೬
ಎಳ್ಳೆಂಣೆ	...	೨೦೪	೪೧
ಒಳ್ಳೆಂಣೆ	...	೨೦೪	೪೩
ಕಡಲೆ ಬೇಳೆ	...	೫೯	೩೮
ಕಡಲೆ ಪಲ್ಲೆ	...	೨೦೪	೪೮
ಕಂದಮೂಲ	...	೩೯೩	೯೨
ಕಬ್ಬು	...	೩೦೧	೨೨
ಕರಿಬೇವ	...	೨೦೪	೪೯
ಕಸಕಸಿ	...	೨೦೫	೫೦
ಕಿತ್ತಳೆ	...	೨೨೪	೮
ಕುಸುಬಿ ಎಣ್ಣೆ	...	೨೦೪	೪೩
ಕುಂಬಳ ಕಾಯಿ	...	೨೦೪	೪೬, ೪೭, ೪೮
ಕೊಬ್ಬರಿ	...	೨೦೫	೫೦
ಕೋತಂಬರಿ	...	೨೦೪	೪೯
ಗಜ್ಜರಿ	...	೨೦೪	೪೭
ಗೋದಿ	...	೨೦೩	೩೬
ಚಾವಳಿ ಕಾಯಿ	...	೨೦೪	೪೬
ಜೇನುತುಪ್ಪ	...	೧೬೩—೨೨೪	೨—೧೩
ಜೋಳ	...	೨೦೩	೩೯
ಟೆಂಗಿನ ಕಾಯಿ	...	೨೦೫—೨೨೪	೫೦—೮
ಡಾಳಿಂಬ	...	೨೨೪	೮
ಡೊಣ್ಣಮೆಣಸಿನಕಾಯಿ	...	೨೦೪	೪೮
ತಾಂಬೂಲ	...	೨೨೨—೨೯೩	೩೫—೫೭
ತಿಪರಿಕಾಯಿ	...	೨೦೪	೪೭
ತಿಲ	...	೪೭೩	೭೧

ಹೆಸರು	ಪುಟ	ಪದ
ತುಪ್ಪ ...	೧೯೬—೨೦೦	೭೮, ೭೯—೭೨
ನವನೀತ ...	೩೮೧	೮೭
ನವಣೆಯ ತೆನೆ ...	೪೭೪	೬೬
ದ್ರಾಕ್ಷಿ ...	೨೨೪	೮
ನೀರುಳ್ಳಿ ...	೫೯	೩೮
ನೆನಗಡಲಿ ...	೬೦	೪೧
ಪಡುವಳ ...	೨೦೪	೪೭
ಬಟಾಣಿ ...	೨೦೪	೪೬
ಬಾಳೆಯಕಾಯಿ, ಹಣ್ಣು ...	೨೦೪	೪೬, ೪೭, ೪೮–೮
ಬಿಸಿ ಸೀತನಿ ...	೪೪	೫
ಬಿಳಿ ಎಲೆ ...	೨೨೨	೩೮
ಬೆಂಡಿ ...	೨೦೪	೪೭
ಬೆಣ್ಣೆ ...	೧೫೫	೩೬
ಬೆಣ್ಣೆ ಕಾಸಿದ ತುಪ್ಪ ...	೨೩೮—೪೧೩ (ಕೂಸು ಒಪ್ಪಿಸುವ ಪದ)	೫೮
ಬೆಲ್ಲ ...	೨೦೪	೪೪
ಬೆಳಸಿ ...	೩೯	೭೬
ಬೋನ ...	೨೯೩	೫೬
ಭತ್ತ ...	೨೦೩	೩೮
ಮಸಾಲಿ ಜಿನ್ನಸ ...	೨೦೫	೫೦
ಮೂಲಂಗಿ ...	೨೦೪	೪೭
ಮೆಣಸಿನ ಕಾಯಿ ...	೨೦೪	೪೮
ಮೆಂತಿ ಪಲ್ಲೆ ...	೨೦೪	೪೯
ರಾಗಿ ...	೨೦೩	೩೬
ವಿಳ್ಳೆದೆಲೆ ...	೨೦೫	೫೧
ಶಾಂವಿಪಲ್ಲೆ ...	೨೦೪	೪೮
ಶೇಬು ...	೨೨೪	೮
ಸಜ್ಜೆ ...	೨೦೩	೩೭
ಸಂಡಗಿ ಗುಂಬಳ ...	೨೦೪	೪೭
ಸಬ್ಬಸಗಿ ...	೨೦೪	೪೯
ಸೀತೆನೆ ...	೩೯—೬೧	೭೫—೫೪
ಸುಗಂಧ ವೀಳ್ಯೆ ...	೨೨೨	೩೮
ಹಳಕ ಪಚ್ಚಕರ್ಪೂರ ...	೨೨೨	೩೮
ಹಾಲು ತುಂಬಿದ ತೆನೆ ...	೬೧	೫೫
ಹುಣಸಿನ ಕಾಯಿ ...	೨೦೪	೪೮
ಹುಳಿ ಪಲ್ಲೆ ...	೨೦೪	೪೮

ಕಠಿಣ ಶಬ್ದಗಳ ಅರ್ಥ.

(ಅಕಾರಾದಿಯಾಗಿ)

ಶಬ್ದ	ಅರ್ಥ	ಪುಟ	ಪದ
ಅಂಗಲಾಚಿ	ಸೆರೆಗೊಡ್ಡಿ ಬೇಡು	೨೫೯	೭೧
ಅಚ್ಚಿಗ	ಪ್ರೀತಿಪಾತ್ರ	೪೬೩	೭೨
ಅಜಾತ	ಹುಟ್ಟಿಲ್ಲದ	೭೧	೩೮
ಅಟಗೋಲು	ಉದ್ದಕೋಲು, ನಿಚ್ಚಣಿಕೆ	೪೦೦	೪೬
ಅಡಿ	ಪಾದ	೧೪೮	೭೯
ಅರ್ತಿ	ಪ್ರೀತಿ	೨೮೧	೫೮
ಅಧಮ	ನೀಚ	೧೭೯	೩೨
ಅನವರತ	ಯಾವಾಗಲೂ	೯೪	೨೭
ಅನ್ನಕ್ಕರ	ವರೆಗೆ	೩೦೫	೫೪
ಅನಾಮಯ	ಶುದ್ಧ, ಶಿವ	೩೫೪	೬೦
ಅಮಳ	ಪವಿತ್ರ	೯೮	೬೫
ಅರಸು	ಹುಡುಕು	೨೭೮	೩೦
ಆಲಿಗಳು	ರೆಪ್ಪೆಗಳು	೧೩೦	೩೦
ಅವಧಾನ	ಎಚ್ಚರ	೩೬೬	೬೭
ಅವಾರ	ಸುತ್ತಿಕೊಂಡುದುದು	೩೩೭	೧೫
ಅವಾರಿ	ತಡೆಯುದ, ತೆಗೆದುಹಾಕಲಾಗದ	೩೩೭	೧೫
ಅಸದಳ	ಅಸಾಧ್ಯ	೧೧೮	೩೧
ಅಸ್ತಮಾನ	ಸಂಜೆ	೧೨೮	೫
ಅಸು	ಜೀವ	೩೨	೫
ಅಶನ	ಆಹಾರ	೯	೨೨
ಅಳವಡು	ಕೂಡಿಕೊಳ್ಳು	೩೦೩	೩೮
ಆಗರ	ಸಮೂಹ	೬೮	೨೨
ಆಣತಿ	ಆಜ್ಞೆ	೫	೧೮
ಆರ್ತ	ದೈನ್ಯ	೧೬೭	೩೯
ಆಪ್ಯಾಯನ	ತೃಪ್ತಿ	೩೪೯	೨೦
ಆರೆ	ಮರಾಠಿ ಭಾಷೆ	೫	೧೮
ಆರೋಗಣೆ	ಪ್ರಸಾದ ಸ್ವೀಕರಿಸುವಿಕೆ	೨೯೪	೫೯
ಇಕ್ಕು	ಇಡು, ಹಾಕು	೨೫೫	೩೮
ಇಂಗಿತ	ರಹಸ್ಯ	೧೩೨	೪೨
ಇಂದ್ರಚಾಪ	ಕಾಮನ ಬಿಲ್ಲು	೩೯೩	೯೪
ಈಡಾಡು	ಚೆಲ್ಲು, ಒಗೆ, ಬೀಸಿ ಒಗೆ	೧೯೩	೫೦
ಈರೇಳು	ಹದಿನಾಲ್ಕು	೧೩೫	೭೫
ಉಘೇಚಾಂಗುಭಲಾ	ಉಗ್ಗಡಣೆ, ಉದ್ಘೋಷ	೩೭೭	೫೩
ಉಜ್ಜುಗಿಸು	ತೊಡಗು	೨೬೬	೨೫
ಉದಕ	ನೀರು	೧೨೭	೪
ಉನ್ಮನಿ	ಯೋಗದ ಸ್ಥಿತಿ	೨೧೪	೨೯
ಉಪಹತಿ	ತೊಂದರೆ, ಉಪದ್ರವ	೨೭೦	೬೨
ಉರುತರ	ಶ್ರೇಷ್ಠ	೭೬	೮೯
ಉರವಣಿಸು	ಅಧಿಕವಾಗು	೪೩೨	೭
ಉಲುವು	ಧ್ವನಿ, ಸದ್ದು	೩೦೦	೯
ಉಃಶ್ಯಾಪ	ಶಾಪ ವಿಮೋಚನೆ	೧೧	೩೪
ಎಕ್ಕೆವಿಂಡು	ಶಿಷ್ಯರು (ಗುಡ್ಡರ ಸಮೂಹ)	೨೭೨	೭೭

ಶಬ್ದ	ಅರ್ಥ		ಪುಟ	ಪದ
ಎವೆ	ರೆಪ್ಪೆ	…	೧೯	೪
ಎಳೆಹೂಟಿ	ಪ್ರಾಣಿಗಳ ಕಾಲಿಗೆ ಕಟ್ಟಿ ಎಳೆಸುವ ಶಿಕ್ಷೆ.		೪೯೮	೫೬
ಏರಿ	ಕೆರೆ	…	೨೬೭	೩೭
ಒಕ್ಕಳ	ಕಾಳಿನ ಅಳತೆಯ ಒಂದು ಪ್ರಮಾಣ		೫೭	೨೨
ಒಡಲಗಿಚ್ಚು	ಹೊಟ್ಟೆಯುರಿ		೨೭೩	೮೭
ಒತ್ತರದಿ	ಲಗು ಬಗೆಯಿಂದ	…	೧೩೩	೫೪
ಒಪ್ಪಟ್ಟೆ	ಸ್ವಲ್ಪ	…	೩೬೬	೫೯
ಒರೆ	ಹೇಳು	…	೧೬೮	೭೭
ಒರೆದು	ಪರೀಕ್ಷಿಸಿ	…	೧೬೦	೭೭
ಒಳಲೊಟ್ಟೆ	ಹುರುಳಿಲ್ಲದ	…	೩೬೫	೫೫
ಓತು	ಪ್ರೀತಿಸಿ	…	೨೪೭	೭೮
ಓಲಾಡು	ಲೀನವಾಗು	…	೪೨೫	೫೪
ಕಕ್ಕುಲಾತಿ	ಪ್ರೀತಿ	…	೧೭	೯೦
ಕಜ್ಜ	ಕಾರ್ಯ	…	೪೦೦	೪೮
ಕಡೆಯಾಣಿ	ಚೊಕ್ಕಚಿನ್ನ	…	೩೬೪	೪೧
ಕನಲು	ಕೋಪಗೊಳ್ಳು	…	೪೦೨	೬೭
ಕಂತುಹರ	ಶಿವ	…	೫೦೦	೭೨
ಕಂದಮ್ಮ	ಮಗು	…	೨೨	೨೯
ಕ್ರಮಿಸು	ಮುನ್ನಡೆ	…	೭೪	೬೫
ಕಮ್ಮಟ	ಟಂಕಸಾಲೆ	…	೩೬೪	೪೯
ಕಮ್ಮಿ	ಕಡಿಮೆ	…	೧೮೫	೯೧
ಕರತರ್ರಿ	ಕರೆದು ತನ್ನಿ	…	೨೧	೧೪
ಕರಿಗೊಳ್ಳು	ನಿಶ್ಚಲವಾಗು	…	೨೯೧	೩೬
ಕವಿಲೆ	ಆಕಳು	…	೯೭	೫೦
ಕಸವಿಸಿ	ಸಂಕಟ	…	೩೯	೭೨
ಕಳನೇರಿ	ಯುದ್ಧಕ್ಕೆ ಹೋಗಿ	…	೩೬೨	೨೪
ಕಾಯಪಲ್ಲಟ	ಮಂತ್ರಶರೀರವಾಗುವುದು		೩೦	೯೫
ಕಾರಣಿಕ	ಮಹತ್ಕಾರ್ಯ ಮಾಡಬಂದವನು		೩೧೫	೩೫
ಕಾವ್ಯಾಂಗನೆ	ಸರಸ್ವತಿ	…	೫೧೦	೫
ಕಾಷಾಯ	ಕಾವಿ	…	೫೨	೧೦
ಕಾಸವಿಸಿ (ಮರಾಠಿ)	ಸಂಕಟ	…	೧೦೫	೧೭
ಕಾಳಿಕೆ	ಕಲುಷ	…	೩೬೩	೪೦
ಕಿಂಕಿಲ	ಮಧುರಭಾವ	…	೩೫೧	೩೩
ಕಿಚ್ಚುಡಿಗಿ	ಬೆಂಕಿ ಅಡಗಿ	…	೨೭೭	೨೦
ಕ್ಷಿಪ್ರ	ಬೇಗ	…	೧೬೮	೪೧
ಕುನ್ನಿ	ಕ್ಷುದ್ರ	…	೧೩೩	೫೧
ಕುಕ್ಷಿ	ಹೊಟ್ಟೆ	…	೧೪೯	೭೮
ಕೂರ್ತು	ಪ್ರೀತಿಯಿಂದ	…	೨೭೮	೨೩
ಕೆಡೆ	ಬೀಳು	…	೨೬೬	೩೧
ಕೆಮ್ಮನೆ	ಸುಮ್ಮನೆ	…	೧೮೦	೪೭
ಕೆಳೆಯ	ಗೆಳೆಯ	…	೨೮೧	೫೬
ಕೈಮರೆ	ಆಯುಧ ಮರೆ	…	೩೬೨	೨೪
ಕ್ಷೋಭಿತ	ಉದ್ವಿಗ್ನಗೊಂಡ	…	೧೯೪	೬೭
ಖೇಚರ	ಆಕಾಶದಲ್ಲಿ ಚರಿಸುವ	…	೩೭೬	೪೬

ಶಬ್ದ	ಅರ್ಥ		ಪುಟ	ಪದ
ಗಣ್ಯ	ಶ್ರೇಷ್ಠ	...	೨೪	೪೫
ಗರಕ	ಮಗ್ನ	...	೧೯೩	೫೨
ಗರುವ	ಗರ್ವ	...	...	...
ಗ್ಯಾನ	ತಿಳಿವು	...	೨೬	೬೨
ಗಿಟಿಗಿಟಿ ಜಂತ್ರ	ಗಡಗಡ, ರಾಟಾಳ	...	೩೭೮	೬೨
ಗುಗ್ಗರಿಗಟ್ಟು	ರೋಮಾಂಚನವಾಗು	...	೪೨	೯೯
ಗುಜ್ಜೆಯರು	ನಾರಿಯರು	...	೩೩	೨೮
ಗುಡ್ಡರು	ಶಿಷ್ಯರು	...	೫೧	೭೧
ಗೋಳ	ಗೋಳು	...	೧೯೬	೭೯
ಘಟ	ದೇಹ	...	೩೧೬	೪೯
ಘಾತಗಳು	ಹಡಗದಲ್ಲಿಯ ಕಂಬಗಳು		೩೯೦	೬೨
ಜಲವರೆತ	ನೀರುಹಿಂಗಿದ	...	೪೯	೫೪
ಜಳಕ	ಸ್ನಾನ	...	೨೧೨	೫
ಜಾಗರಣೆ	ಎಚ್ಚರ	...	೩೩	೨೦
ಜ್ವಾಕೀಲಿ	ಜೋಕೆಯಿಂದ	...	೫೭	೨೦
ಝುಲ್ಲರಿ	ಜಾಲರಿ	...	೩೭೫	೩೯
ಚಾಗಿ	ತ್ಯಾಗಿ	...	೫೧೧	೧೮
ಚಾರುತರ	ಸುಂದರ, ಶ್ರೇಷ್ಠ	...	೪೯೩	೮
ಚಿತ್ರಭಿತ್ತಿ	ಮನದ ಗೋಡೆ	...	೮೬	೬೪
ಚಿತ್ರರಟ್ಟಿ	ಒಂದು ವಿಧಕಾಯಿ	...	೩೬೬	೬೦
ಚಿದರ	ಛಿದ್ರ	...	೭೩	೫೧
ಚಿನ್ನಾಟ	ಸರಸ	...	೨೪೨	೩೩
ಚೇಡಿ	ಮಾಟಮಾಡಿಸುವಿಕೆ	...	೪೯	೫೮
ಚೋದ್ಯ	ಆಶ್ಚರ್ಯ	...	೩೯೫	೩
ಠಾವ	ತಾಣ, ಸ್ಥಳ	...	೪೬	೩೧
ತಟ್ಟಿನಾವುಗೆ	ಗೋಣಿನ ಆವುಗೆ	...	೬೦	೪೬
ತಂದ್ರಿ	ತೂಕಡಿಕೆ, ಮಂಕುತನ	...	೪೬೪	೮೦
ತಪ್ತ	ಕಾಯ್ದ	...	೧೫೬	೪೬
ತರಕಿಸು	ತರ್ಕಿಸು	...	೮೮	೮೪
ತರಳ	ಬಾಲಕ	...	೧೩೮	೯೮
ತವಕ	ಆತುರ	...	೪೬	೨೪
ತಳವೆಳಗಾಗು	ಆಶ್ಚರ್ಯವಾಗು	...	೨೯೩	೫೨
ತಾರಕ	ಪಾರುಮಾಡುವ	...	೩೩೯	೩೭
ತಿಲಮಾತ್ರ	ಎಳ್ಳಷ್ಟೂ	...	೫೨	೮೦
ತ್ರಿಪುಂಡ್ರ	ಮೂರು ಬೆರಳಿನ ಭಸ್ಮ	...	೧೩೨	೯೩
ತೀವು	ತುಂಬು	...	೪೫೯	೩೬
ತುರುಹಟ್ಟಿ	ದನದಕೊಟ್ಟಿಗೆ	...	೧೧೬	೫
ತುಸು	ಸ್ವಲ್ಪ	...	೧೦೫	೧೭
ತೃಷೆ	ದಾಹ	...	೧೦೪	೧೧೦
ತೆರವು	ಎಡೆ	...	೩೦೯	೮೭
ತೊಟ್ಟಿಕ್ಕು	ಹನಿಹನಿ ಸುರಿ	...	೪೪೩	೪
ದಣಿಯ	ಒಡೆಯ	...	೫೦	೬೫
ದಡಿಕಾರ	ಕೋಲು ಹಿಡಿದಿರುವವ	...	೪೪೩	೭೦
ದರ್ಪಣ	ಕನ್ನಡಿ	...	೨೨೮	೪೧
ದಂಭ	ಡಂಬ	...	೨೧೭	೫೩
ದಳ್ಳುರಿ	ಪ್ರಜ್ವಲಿಸುವಉರಿ	...	೧೬೫	೭

ಶಬ್ದ	ಅರ್ಥ		ಪುಟ	ಪದ
ದಾವಾನಲ	ಕಾಳ್ಗಿಚ್ಚು	...	೨೫೫	೭೧
ದಿಟ್ಟಿ	ದೃಷ್ಟಿ	...	೩೧	೪
ದುಸ್ತರ	ಕಠಿಣ	...	೭೫	೬೯
ದೆಸೆ	ದಿಕ್ಕು	...	೧೦೪	೧೩
ಧೃತಿಗೆಡು	ಧೈರ್ಯಗೆಡು	...	೨೮೫	೮೯
ಧಾವತಿ	ಕಷ್ಟ	...	೧೫	೭೫
ಧೀರ (ಮರಾಠಿ)	ಧೈರ್ಯ	...	೧೭	೮೯
ಧೂರ್ತ	ವಂಚಕ	...	೧೮೦	೪೨
ನದುರು	ದೃಷ್ಟಿತಾಕು	...	೪೫	೧೭
ನಭ	ಆಕಾಶ	...	೧೫೨	೯
ನವನೀತ	ಬೆಣ್ಣೆ	...	೩೮೧	೮೭
ನಿಟ್ಟು	ದಿಕ್ಕು	...	೯೯	೭೦
ನಿಧಾನ	ಸಂಪತ್ತು	...	೩೧೦	೯೮
ನಿಬ್ಬೆರಗು	ಆಶ್ಚರ್ಯ, ಆನಂದ	...	೮೦	೮೧
ನಿರ್ವಾಣ	ಮುಕ್ತಿ	...	೩೦೯	೯೪
ನಿಲಯ	ಮನೆ	...	೯೭	೫೫
ನಿಲುಕಡೆ	ಕೊನೆ	...	೩೧೦	೯೭
ನೆಮ್ಮದಿ	ಸಮಾಧಾನ	...	೧೦೭	೩೨
ನೈಯಣ್ಣೆ	ಎಣ್ಣೆ, ಅರಿಷಿಣ ಹಚ್ಚಿ ಎರೆಯುವುದು.		೧೫	೬೯
ಪ್ರಣವ	ಓಂಕಾರ ಮಂತ್ರ	...	೩೦೭	೬೮
ಪತ್ತಾರ	ಅಕ್ಕಸಾಲಿಗ	...	೨೦೫	೫೩
ಪತ್ತೆ	ಗುರುತು	...	೧೭೭	೨೨
ಪಂತಿ	ಸಾಲು	...	೨೪೯	೯೬
ಪರ್ಬಿ	ಹಬ್ಬಿ	...	೩೩೯	೩೫
ಪರಕಿಸು	ಪರೀಕ್ಷಿಸು	...	೮೩	೩೩
ಪರಸಾದ	ಪ್ರಸಾದ	...	೧೩೧	೩೩
ಪರಸಿ	ಜಾತ್ರೆಗೆ ಹೋಗುವ ಜನರ ಗುಂಪು		೫೯	೩೬
ಪರಿಭವ	ಜನ್ಮ ಹುಟ್ಟು	...	೪೨೩	೪೦
ಪರಿಯಾಣ	ತಟ್ಟೆ	...	೨೨೭	೩೩
ಪಲ್ಲಟ	ಪರಿವರ್ತನೆ	...	೧೭೯	೩೩
ಪವಳಿ	ಪ್ರಾಕಾರ, ಸುತ್ತುವರಿದಗೋಡೆ		೩೩೫	೩
ಪಾವಸ	ನೀರಿನ ಮೇಲೆ ಬೆಳೆದ ಪಾಚಿ		೬೮	೫
ಪಾರ್ವರು	ಹಾರುವರು	...	೧೨೭	೧
ಪಿಪೀಲಿಕೆ	ಇರುವೆ	...	೭೩	೫೫
ಪುತ್ಥಳಿ	ಗೊಂಬೆ	...	೧೪	೫೯
ಪುಷ್ಕರಣಿ	ಕೊಳ	...	೩೩೬	೫
ಪೌಳಿ	ಸುತ್ತುಗೋಡೆ	...	೪೪೫	೨೦
ಫಣಿ	ಹಾವು	...	೧೩೭	೯೩
ಬಗೆ	ರೀತಿ	...	೩೧೨	೧೩
ಬಂಟ	ಶೂರ	...	೬೧	೫೨
ಬಡಿವಾರ	ಬಿಂಕ	...	೧೪೯	೯೩
ಬದ್ಧರು	ಭವಿಗಳು	...	೧೪೦	೧೧
ಬಪ್ಪಣ	**ಬೊಪ್ಪಣ** (ನೋಡಿರಿ)			
ಬರೆ	ಬರಿದು	...	೧೧	೩೩
ಬಲ್ಲಿಹ	ಒಡೆಯ	...	೧೧೮	೨೭

ಶಬ್ದ	ಅರ್ಥ		ಪುಟ	ಪದ
ಬಲ್ಲಿಗೆ	ಹತ್ತಿರ, ಬಳಿಗೆ	...	೩೭೨	೭೯
ಬಾಹತ್ತರ	ಎಪ್ಪತ್ತೆರಡು	...	೩೩೪	೯೫
ಬಿಂಕಿಸ	ಸೊಕ್ಕಿನ	...	೭೩	೫೬
ಬಿಬ್ಬನೆ	ಬಲವಾಗಿ	...	೧೩೬	೮೫
ಬಿಸಿಗಣ್ಣು	ಬೆಂಕಿಗಣ್ಣು	...	೨೭೬	೯
ಬೂಟಾಟ	ಆಡಂಬರ	...	೧೮೦	೪೯
ಬೆಂಬಳಿ	ಬೆನ್ನಬಳಿ	...	೨೯೪	೬೨
ಬಳ್ಳವಾಲು	ಸೇರುಹಾಲು	...	೩೫೦	೩೧
ಬೆಳ್ಳಿಗೆ	ಬಿಳಿಯ ಆಕಳು	...	೩೫೦	೩೧
			೫೪	೬೨
ಬೊಪ್ಪಣ	ಕೂಸನ್ನು ತೊಟ್ಟಿಲದ ಮೇಲೆ ಕೆಳಗೆ ಎತ್ತಿ ಆಡಿಸುವುದು.		೩೫	೩೩
ಬೊಮ್ಮ	ಬ್ರಹ್ಮ	...	೩೦೮	೮೧
ಬೋನ	ಎಡೆ, ಅನ್ನ	...	೧೫೪	೨೬
ಭಂಗಿಸು	ಭೇದಿಸಿ	...	೪೧೯	೧
ಭೃತ್ಯ	ಸೇವಕ	...	೩೨೯	೫೧
ಭಪ್ಪರೆ	ಭಲೆ	...	೨೪೬	೭೧
ಭರಭಾರ	ಹೆಚ್ಚಳ	...	೨೮೮	೬
ಭವವಿಪಿನ	ಸಂಸಾರವೆಂಬ ಅಡವಿ	...	೩೫೫	೭೧
ಭವಸಿಂಧು	ಸಂಸಾರವೆಂಬ ಸಾಗರ	...	೩೫೫	೭೧
ಭೂಚರ	ನೆಲದಲ್ಲಿ ನಡೆವ	...	೩೭೬	೪೬
ಮಚ್ಚ	ಕಪ್ಪುಕಲೆ	...	೧೨೦	೪೧
ಮಡು	ಹೊಂಡ	...	೭೧	೩೨
ಮಣಿಹ	ಮಹತ್ವದ ಕಾರ್ಯ	...	೫೦೦	೭೨
ಮದನಾರಿ	ಸೊಕ್ಕಿದ ಹೆಣ್ಣು, ಮತ್ತನಾರಿ	...	೧೨೨	೬೬
ಮಡುಗಿಡು	ತೆಗೆದಿಡು	...	೧೭೭	೧೭
ಮದ್ದಲಿಸಿ				
ಮರ್ಮ	ರಹಸ್ಯ	...	೯೭	೫೭
ಮರು ಜೀವಣಿ				
ಮವ್ವದ	ಪ್ರೀತಿಯ	...	೪೧	೮೯
ಮಹವ	ಮಹತ್ವನ್ನು	...	೨೯೫	೭೧
ಮಾಬನ್ನಕ್ಕ	ಆಗುವವರೆಗೆ	...	೩೧೦	೯೬
ಮಾರುಹೋಗು	ಮನಸೋಲು	...	೩೧೪	೨೮
ಮಿತ್ರ	ಸ್ನೇಹ ಹೃದಯಿ	...	೮೫	೫೨
ಮಿಥ್ಯ	ಸುಳ್ಳು	...	೧೩೭	೮೬
ಮಿಸುನಿ	ಬಂಗಾರ	...	೩೩೫	೩
ಮುಕುರ	ಕನ್ನಡಿ	...	೩೮೮	೪೨
ಮುಕ್ತಹಸ್ತ	ಉದಾರ ಹಸ್ತ	...	೧೧೧	೭೦
ಮುಟ್ಟುರಗೊಳ್ಳು	ಮುದುಡು	...	೨೪೩	೪೧
ಮೂಸಿ	ಮುಸಿ, ಬಂಗಾರಕಾಸುವ ಮಣ್ಣಿನ ಪಾತ್ರೆ.		೧೩೬	೮೧
ಮೆದೆ				
ಮೇಧಾವಿ	ಬುದ್ಧಿವಂತ		೨೩೯ಕೂಸು.ಒ.ಪ.	೧೦
ಮೇರು	ಹಿಮಾಲಯ	...	೭	೧
ಮೇಳೈಸಿ	ಕೂಡಿಸಿ	...	೬೩	೭೧

ಶಬ್ದ	ಅರ್ಥ		ಪುಟ	ಪದ
ಮೊಳೆ	ಬಿಗಿ	...	೧೨	೪೯
ರಭಸ	ಆರ್ಭಟ	...	೨೭೬	೧೩
ಲಾಕುಳ	ಯೋಗದಂಡ	...	೬೬	೯೮
ಲಾಂಛನ	ಗುರುತು, ಕುರುಹು	...	೩೨೪	೫
ಲೆಂಕ	ಭಕ್ತ, ಸೇವಕ	...	೭೩	೫೬
ಲೇಸು	ಒಳಿತು, ಕಲ್ಯಾಣ	...	೨೫೫	೩೯
ವಕ್ರತುಂಡ	ಗಣಪತಿ	...	೧೨೯	೧೪
ವಡವಾಗ್ನಿ	ಸಮುದ್ರದಲ್ಲಿಯ ಬೆಂಕಿ	...	೩೫೫	೭೧
ವಲ್ಲಿ	ಪಂಚೆ	...	೧೨೧	೫೧
ವಹ್ನಿ	ಬೆಂಕಿ	...	೨೭೮	೨೪
ವಾಚಾಳ	ಬಹಳ ಮಾತಾಡುವವ	...	೨೮೧	೫೬
ವ್ಯಾಕುಳ	ಚಿಂತೆ, ಉದ್ವಿಗ್ನ	...	೫೭	೨೦
ವ್ಯಾಸಧ್ವಜ	ವ್ಯಾಸನ ತೋಳಿನ ಗುರುತಿರುವ ಧ್ವಜ.		೩೩೫	೪
ವಿತ್ತ	ಸಂಪತ್ತು	...	೧೮೨	೬೦
ವೆಗ್ಗಳ	ಹೆಚ್ಚು	...	೧೩	೫೫
ವ್ಯೋಮ	ಆಕಾಶ	...	೨೧	೨೦
ವ್ಯೋಮಕಾಯ	ಬಯಲಕಾಯ	...	೪೮೫	೪೪
ಶಪಥ	ಪ್ರತಿಜ್ಞೆ	...	೨೧೮	೫೩
ಶರಸಂಧಾನ	ಬಾಣಪ್ರಯೋಗ	...	೩೦೨	೨೯
ಶಾಂತಾರ್ಕ	ಚಂದ್ರ	...	೩೨೮	೫೯
ಸಗ್ಗ	ಸ್ವರ್ಗ	...	೧೪	೬೪
ಸಂಘಟ್ಟಿಸಿ	ತಿಕ್ಕಿ, ತಾಕಲಾಡಿ	...	೨೮೦	೪೭
ಸಂಚಲ	ಚಲಲಿಸುವಿಕೆ	...	೧೦೩	೪
ಸಂಚಿತ	ಕೂಡಿಟ್ಟ	...	೧೫೪	೨೩
ಸಜ್ಜಿಗೆ	ಲಿಂಗದ ಕಾಯಿ	...	೧೪೧	೧೬
ಸದರ	ಎದುರು ಅಂಕಣ	...	೨೦೫	೫೪
ಸಂದಣಿ	ಸಮೂಹ	...	೯೯	೬೮
ಸಲ್ಲು ಸಲ್ಲಿಗೆ	ಹೆಜ್ಜೆ ಹೆಜ್ಜೆಗೆ	...	೧೧೪	೯೬
ಸ್ವಜ	ಸಹಜ	...	೭೦	೨೩
ಸಂದಣೆ	...	...	... ...	...
ಸಾಟಿ (ಮರಾಠಿ)	ಅರುವತ್ತು	...	೧೮—೩೫	೯೯—೩೫
ಸಾಟಿ	ಸಮ	...	೩೫	೩೫
ಸಾನದು (ಮರಾಠಿ)	ಸಣ್ಣದು	...	೨೨೧	೧
ಸೀತನೆ	ಬೆಳಸೆ	...	೩೯	೭೫
ಸುಂದುಬಡಿ	ಮಂಕಾಗು	...	೪೨	೯೮
ಸುಮನಾಸ್ತ್ರ	ಕಾಮನ ಬಾಣ	...	೧೨೩	೭೦
ಸುಯಿಧಾನ	ಸಂರಕ್ಷಣೆ	...	೧೪೪	೪೫
ಸುರಗಿ	ಕತ್ತಿ		೧೯	೩
ಸುರಭಿ	ಕಾಮಧೇನು	...	೭೩	೫೪
ಸುರಮ್ಯ	ಚೆಲುವಾದ	...	೩೮	೬೩
ಸೃಜಿಸು	ಹುಟ್ಟಿಸು	...	೧೨೪	೮೧
ಸುಷುಮ್ನ	ಒಂದು ನಾಡಿ	...	೩೦೬	೬೩
ಸೂರ್ಯ ವೀಧಿ	ಪೂರ್ವ—ಪಶ್ಚಿಮದ ಮಾರ್ಗ		೩೩೪	೯೭
ಸೇಣಿಸು	ಹೋರಾಡು	...	೨೭೫	೧

ಶಬ್ದ	ಅರ್ಥ		ಪುಟ	ಪದ
ಸೈವೆರಗು	ಆಶ್ಚರ್ಯ	...	೩೭೫	೩೬
ಸೊಮ್ಮು	ಸಂಪದ	...	೪೪೫	೧೫
ಸೊನ್ನದಂದಣ	ಬಂಗಾರದ ಪಲ್ಲಕ್ಕಿ	...	೨೬	೬೫
ಸೋಮ ವೀಧಿ	ದಕ್ಷಿಣೋತ್ತರ ಬೀದಿ	...	೩೩೪	೯೭
ಸೌರಭ	ಪರಿಮಳ	...	೩೮೩	೩
ಹಗೆ	ವೈರ	...	೨೧	೫೧
ಹಂತ	ಮೇರೆ, ಮಟ್ಟ	...	೯೮, ೩೧೩ ೬೦,	೧೫
ಹಂಬಾ	ದನಗಳ ಕೂಗು	...	...	...
ಹರಣ	ಪ್ರಾಣ	...	೧೬೪	೧೩
ಹರದೆ	ಮುತ್ತೈದೆ	...	೧೪	೬೭
ಹವಣ	ಹದ	...	೩೦೫	೫೮
ಹಸುಳೆ	ಮಗು	...	೧೨೩	೭೦
ಹಸೆ	ಮದುಮಕ್ಕಳು ಕುಳ್ಳಿರಲು ಹಾಸಿದ ಹಾಸಿಗೆ.		೨೩೬	೪
ಹಾಯಿಕ್ಕದ	ದುಃಖವಿಲ್ಲದ	...	೨೯೩	೫೮
ಹುಸಿ ಹುಂಡನ ಮಾಡಿ	ಅಲ್ಲಗಳೆದು	...	೩೨೬	೩೧
ಹೆಡಕು	ಮಗ್ಗಲು	...	೧೬೧	೯೨
ಹೆಡಿಗೆ	ಬುಟ್ಟಿ	...	೨೨೮	೪೮
ಹೇಮರಸ	ಬಂಗಾರ	...	೩೧೭	೫೪
ಹೊಲಬು	ರಹಸ್ಯ	...	೨೯೦	೨೬
ಹೊಡೆಗಿಚ್ಚು	ಪ್ರಚಂಡ ಕಿಚ್ಚು	...	೨೭೩	೮೮

ಒಪ್ಪೋಲೆ

ಪುಟ ಮತ್ತು ಪದ್ಯಾನುಕ್ರಮವಾಗಿ

ತಪ್ಪು	ಒಪ್ಪು		ಪುಟ	ಪದ
ಗರಳ	ಕೊರಳ	...	೯	೧೯
ಬಿಜ್ಜುಳ	ಬಿಜ್ಜಳ	...	೨೩	೩೪
ಬಿಚ್ಚಿಟ್ಟ	ಬಚ್ಚಿಟ್ಟ	...	೨೪	೪೨
ಅರಸಿನೀ	ಅರಸಿ ನೀ		೨೯	೯೦
ಒಡಲಗಿಚಿ ನಗೆ	ಒಡಲಗಿಚ್ಚಿನಗೆ	...	೫೩	೯೦
ಪಂಚಿಧಾರ	ಪಂಚಧಾರೆ	...	೬೪	೭೯
ಗದ್ದುಲು	ಗದ್ದಲು	...	೮೭	೬೯
ಅತ್ರ್ಯ	ಅತ್ರಿ	...	೯೩	೧೫
ಅಜಿಯು	ಅಜೇಯು	...	೧೧೧	೭೨
ಮೀನ್	ಮೀನ	...	೧೧೯	೩೭
ಅಲಿ	ಆಲಿ	...	೧೩೦	೩೦
ನನ್ನಪ್ಪ	ನಮ್ಮಪ್ಪ	...	೧೩೪	೬೨
ತಣಿದನ	ತಣಿದನು	...	೧೪೬	೬೩
ಹೊಗಳ್ವೂಪ	ಹೊಗಳ್ವೂವ	...	೧೪೯	೮೮
ಭೋಗವಾಸದ	ಭೋಗವಾಸನ	...	೧೭೬	೬
ನರಕ್ಕೆ	ನರಕಕ್ಕೆ	...	೧೮೮	೧೩
ಕುಲಾತಿ	ಕಕುಲಾತಿ	...	೧೯೭	೮೭
ಬೆಳಕಿಪತಿಲಿ	ಬೆಳಕಿನಲಿ	...	೨೦೦	೫

ತಪ್ಪು	ಒಪ್ಪು		ಪುಟ	ಪದ
ಪುಷ್ಪಾದಿ	ಪುಷ್ಪ್ಯಾದಿ	...	೨೦೯	೯೧
ವಿಸ್ಮೃತ	ವಿಸ್ಮಿತ	...	೨೧೪	೩೦
ತ್ರಿಕರ್ಣ	ತ್ರಿಕರಣ	...	೨೨೭	೩೫
ಶಿವಶಾಂತೆ	ಶಿವೇಶಾಂತ	...	೨೩೫	೪
ಉರುಗ	ಉರಗ	...	೨೪೫	೫೬
ಬಿಳ್ಳಿಯ	ಬಳ್ಳಿಯ	...	೨೪೫	೫೭
ಇರಳು	ಇರುಳು	...	೨೪೯	೯೫
ಬನ್ನಿ	ಬಂದಿ ನೀ	...	೨೫೫	(ಭಜನಿ ಪದ)
ಕಂಬನ್ನಿ	ಕಂಬನಿ	...	೨೭೮	೨೭
ರೂಪಿದಾತನಿಗೆ	ರೂಪಿಲ್ಲದಾತನಿಗೆ	...	೨೭೯	೩೫
ಶರಣಂ	ಶರಣಂಗೆ	...	೨೮೫	೯೧
ಕ್ರುಪೆ	ಕೃಪೆ	...	೨೮೬	೯೯
ಎನ್ನಂತಂಗವ	ಎನ್ನಂತರಂಗ	...	೨೮೭	೧
ಕಯ	ಕಾಯ	...	೨೯೧	೪೦
ನಿನ್ನ ತಪ್ಪಿಸಿ	ಮುನ್ನತಪ್ಪಿಸಿ	...	೨೯೭	೮೭
ಕಯಜೀವದ	ಕಾಯಜೀವದ	...	೩೦೩	೪೦
ತಡಿಸಿ	ತಣಿಸಿ	...	೩೩೦	೫೯
ಕತ್ರು	ಕರ್ತೃ	...	೩೫೦	೨೩
ತಾಕಾರವ	ಸಾಕಾರವ	...	೩೫೧	೩೨
ಇಲ್ಲ	ಇಲ್ಲಿ	...	೩೭೭	೫೮
ಅನುಮಿಷ	ಅನಿಮಿಷ	...	೩೯೩	೯೦
ಅಂಗದಮೇವ	ಅಂಗದ ಮೇಲೆ	...	೩೯೯	೩೨
ಮದದಲ್ಲಿ	ಮನದಲ್ಲಿ	...	೩೯೯	೩೫
ಇಲ್ಲವಯ	ಇಲ್ಲವಯ್ಯಾ	...	೩೯೯	೩೫
ಇಲ	ಇಲ್ಲ	...	೩೯೯	೩೯
ತನುಮೆ	ತನುವೆ	...	೪೦೧	೫೩
ನರನಲಾಗದು	ನರನೆನಲಾಗದು	...	೪೦೭	೨
ಬಕತೀಲಿ	ಬಕುತೀಲಿ	...	೪೨೩	೩೭
ಮುವರಿಂದ	ಮೂವರಿಂದ	...	೪೨೮	೭೮
ಮೊದದಿ	ಮೋದದಿ	...	೪೨೮	೮೯
ಅರುಹಿದನುಮಿಷ	ಅರುಹಿದನನಿಮಿಷ	...	೪೩೦	೯೯
ಅವಿನತ	ಅವಿರತ	...	೪೪೭	೩೮
ಶಿವಯೋಗಿ	ಶಿವಯೋಗ	...	೪೯೬	೨೨

ಓಂ

THE PRINTERS (MYSORE) PRIVATE LTD. LIBRARY Accn. No. 199 Date............... BANGALORE
Q23 33N65

THE PRINTERS (Mysore) PRIVATE LTD.
LIBRARY, BANGALORE

Cl. No. Q23 33N65 Acc. No. 199.

This book ought to be returned on or before the date last marked below, or fines will be incurred.

Due date	Inls.	Due date	Inls.

Cost. Rs . 15.00
Date 19-6-1979
Librarian

DECCAN HERALD
TO BE RETURNED
WITH REVIEW

Q23
33N65

199